ಬೇಡ ಸಮುದಾಯದ ಮಹಿಳೆ

(ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳನ್ನು ಅನುಲಕ್ಷಿಸಿ)

ಸಮಾಜಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಜಗದೀಶ ಕುಮಾರ

ಮಾರ್ಗದರ್ಶಕರು
ಡಾ. ಸಿ. ಟಿ. ಗುರುಪ್ರಸಾದ್
ಹಿರಿಯಶ್ರೇಣಿ ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬
೨೦೦೯

ಬೇಡ ಸಮುದಾಯದ ಮಹಿಳೆ

(ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳನ್ನು ಅನುಲಕ್ಷಿಸಿ)

ಸಮಾಜಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಜಗದೀಶ ಕುಮಾರ

ಮಾರ್ಗದರ್ಶಕರು
ಡಾ.ಸಿ.ಟಿ.ಗುರುಪ್ರಸಾದ್
ಹಿರಿಯಶ್ರೇಣಿ ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೯

ಪ್ರಮಾಣ ಪತ್ರ

"ಬೇಡ ಸಮುದಾಯದ ಮಹಿಳೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಮಾಜಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ಸಿ.ಟಿ.ಗುರುಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

(ಜಗದೀಶ ಕುಮಾರ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 04-05-2009
ಸ್ಥಳ: ವಿದ್ಯಾರಣ್ಯ

ದೃಢೀಕರಣ ಪತ್ರ

"ಬೇಡ ಸಮುದಾಯದ ಮಹಿಳೆ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಜಗದೀಶ ಕುಮಾರ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಸಮಾಜಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಸಿ.ಟಿ.ಗುರುಪ್ರಸಾದ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ:
ಸ್ಥಳ: ವಿದ್ಯಾರಣ್ಯ

೧.೧. ಪ್ರಸ್ತಾವನೆ

ಮನುಷ್ಯನ ಜೀವನದ ಪ್ರಾರಂಭದೊಂದಿಗೆ ಸಾಂಸ್ಕೃತಿಕ ಪರಂಪರೆಯ ಪ್ರಾರಂಭವನ್ನು ನೋಡಬಹುದು. ಮಾನವನು ಎಂದು ಗುಂಪು ಜೀವನವನ್ನು ಕಂಡುಕೊಂಡನೋ ಅಂದಿನಿಂದಲೇ ಹಂತ-ಹಂತವಾಗಿ ನಾಗರೀಕತೆಯನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಿರುವನು. ಇಂತಹ ಸಂದರ್ಭದಲ್ಲಿ ಹಲವಾರು ದೈಹಿಕ ಪರಿವರ್ತನೆಗಳೊಂದಿಗೆ ಸಾಂಸ್ಕೃತಿಕ, ಸಾಮಾಜಿಕ ಬದಲಾವಣೆಗಳು ಆಗುತ್ತಾ ಬಂದವು. ಇಂತಹ ಸಾಂಸ್ಕೃತಿಕ ಬದಲಾವಣೆಗಳನ್ನು ಅಥವಾ ವಿಕಾಸಗಳನ್ನು ವಿದ್ವಾಂಸರು ಬುಡಕಟ್ಟು ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಗಳೆಂದು ಮೂರು ಮುಖ್ಯ ಹಂತಗಳಲ್ಲಿ ಗುರುತಿಸಿದ್ದಾರೆ. ಅಂದಿನ ಎಲ್ಲಾ ಸಮುದಾಯಗಳಲ್ಲಿ ಏಕಕಾಲದಲ್ಲಿ ನೂತನ ಆವಿಷ್ಕಾರ ಮತ್ತು ಚಿಂತನೆಗಳುಂಟಾಗಲಿಲ್ಲ. ಕೆಲವು ಹೊಸ ಶೋಧನೆ ಮತ್ತು ಚಿಂತನೆಗಳಿಂದ ಆಧುನಿಕತೆಯ ಕಡೆ ಚಲಿಸಿದರೆ ಇನ್ನೂ ಕೆಲವು ಸಮುದಾಯಗಳು ಆಧುನಿಕತೆಗೆ ಬೆನ್ನು ಮಾಡಿದ್ದೂ ಉಂಟು.

ಹೀಗಾಗಿ ಒಂದು ಸಮುದಾಯ ನಾಗರೀಕತೆಯ ಮೇಲ್‌ಸ್ತರದಲ್ಲಿ ಗೋಚರಿಸಿದರೆ ಇನ್ನೊಂದು ಸಮುದಾಯ ನಾಗರಿಕತೆಯ ತಳಮಟ್ಟದಲ್ಲೇ ಇರುವ ಸಾಧ್ಯತೆ ಇದೆ. ಆದ್ದರಿಂದಲೇ ಭಾರತದಲ್ಲಿ ಇಂದಿಗೂ ಗ್ರಾಮ ಮತ್ತು ನಗರಗಳಿಂದ ದೂರವಿರುವ ಆಧುನಿಕತೆಯ ಸೋಂಕಿಲ್ಲದ ಅನೇಕ ಸಮುದಾಯಗಳು ಅಸ್ತಿತ್ವದಲ್ಲಿವೆ. ಆದರೆ ಇತ್ತೀಚೀನ ಬೆಳವಣಿಗೆಗಳು ಸಮುದಾಯದ ಸ್ವರೂಪವನ್ನೇ ಬದಲಾಯಿಸುತ್ತಿವೆ. ಒಂದು ಕಡೆ ಅತಿಯಾದ ನೈಸರ್ಗಿಕ ವಿಕೋಪ ಇನ್ನೊಂದು ಕಡೆ ಬರಗಾಲ. ಹಾಗೂ ಅರಣ್ಯನಾಶ ಮತ್ತೆ ಇನ್ನೊಂದು ಕಡೆ ಅರಣ್ಯ ರಕ್ಷಣಾ ನೀತಿಗಳು, ಹೊಸ ಅಣೆಕಟ್ಟುಗಳ ನಿರ್ಮಾಣ, ಬೃಹತ್ ಕೈಗಾರಿಕೆ, ಗಣಿಗಾರಿಕೆಗೆ ಪ್ರೋತ್ಸಾಹ ಇಂಥ ಹಲವು ಕಾರಣಗಳಿಂದ ಸಮುದಾಯದ ಜನರು ಗ್ರಾಮ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಹೀಗೆ ವಲಸೆ ಬಂದ ಜನರು ತಮ್ಮ ಜೀವನದಲ್ಲಿ ಸಂಪೂರ್ಣ ಹೊಸತನ್ನು ಅಳವಡಿಸಿಕೊಳ್ಳದೆ ಸ್ವಂತಿಕೆಯನ್ನು ಉಳಿಸಿಕೊಳ್ಳುವ ವಿಫಲ ಪ್ರಯತ್ನ ನಡೆಸಿದ್ದಾರೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಯಾವುದೇ ಸಮುದಾಯಗಳು ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲದೆ ಹೊಸ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ

ಉಂಟಾಗಿದೆ. ಆದರೂ ಸಹ ಭಾರತೀಯ ಸಮಾಜವು ಹಲವಾರು ಧರ್ಮ, ಜಾತಿ, ಪಂಗಡಗಳ ಸಂಸ್ಕೃತಿಯನ್ನು ಹೊಂದಿದ್ದು, ಅದರಲ್ಲಿ ಕಾಲದಿಂದ ಕಾಲಕ್ಕೆ, ವರ್ಗದಿಂದ ವರ್ಗಕ್ಕೆ, ಧರ್ಮದಿಂದ ಧರ್ಮಕ್ಕೆ ಭಿನ್ನವಾದ ಮಹಿಳೆಯರ ಕುರಿತು ಇರುವಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಬೇಡ ಬುಡಕಟ್ಟು ಮಹಿಳೆಯ ಸ್ಥಿತಿಗತಿಯನ್ನು ವಿಶ್ಲೇಷಿಸಬಹುದಾಗಿದೆ. ಇವರ ಸ್ಥಿತಿ-ಗತಿಯೆಂದರೆ, ಅವರಿಗಿದ್ದ ಗೌರವ ಮತ್ತು ಸ್ವಾತಂತ್ರ್ಯ ಗತಿಸಿ ಹೋದ ಇತಿಹಾಸವೇ ಆಗಿದ್ದು ವೇದಗಳ ಕಾಲದವರೆಗೂ ಭಾರತೀಯ ಆದಿವಾಸಿ ಮಹಿಳೆಯನ್ನು ದೈವಸೃಷ್ಟಿಯಲ್ಲಿ ನೋಡುತ್ತಿದ್ದರು. ಜೊತೆಗೆ ಒಂದು ಅಸಂಗತ ಪವಾಡ ಎಂದು ನಂಬಿ ವಿಶೇಷ ಸ್ಥಾನ ನೀಡಿ ದೈವೀ ಸ್ವರೂಪದಲ್ಲಿ ಪೂಜ್ಯತೆ ಯಿಂದ ಕಾಣಲಾಗುತ್ತಿತ್ತು. ಮಹಿಳೆ ಮನೆಯ ಒಡತಿಯಾಗಿದ್ದು ಆಸ್ತಿಯ ಮಾಲೀಕಳಾಗಿ ಹಿಂದಿನ ಸಮಾಜವು ಮಾತೃ ಪ್ರಧಾನತೆಯ ವ್ಯವಸ್ಥೆಯಿಂದ ಕೂಡಿತ್ತು ಎಂದು ಹಲವಾರು ಕಥನ ಕಾವ್ಯಗಳು ಸ್ಪಷ್ಟಪಡಿಸುತ್ತವೆ.

ಅಂದು ಮಹಿಳೆಯು ಬಲೆ ಬೀಸಿ ಬೇಟೆಯಾಡುವ ಗುಂಪು ಕ್ರಿಯೆಯಲ್ಲಿ ಪುರುಷನ ಜೊತೆ ಸೇರಿ ದುಡಿಯುತ್ತಿದ್ದು, ಕೆಲವೊಮ್ಮೆ ತಾವೇ ಬೇಟೆಯಾಡಿದ ಸಂದರ್ಭಗಳುಂಟು ಅದೇ ರೀತಿಯಾಗಿ ಗುಂಪು-ಗುಂಪುಗಳ ನಡುವಿನ ಸಂಘರ್ಷಗಳಲ್ಲಿ ಭಾಗವಹಿಸಿದ್ದುಂಟು. ಆದರೆ ಇಂದು ಮಾತೃಸ್ವರೂಪದ ಕುಟುಂಬಗಳು ಕಡಿಮೆಯಾಗುತ್ತಿವೆ. ಅಂದಿನ ಸಮಯದಲ್ಲಿ ಕುಟುಂಬದ ಸಂಪೂರ್ಣ ಪೋಷಣೆಯ ಜವಾಬ್ದಾರಿ ಹೊತ್ತ ಮಹಿಳೆಯೂ ತನ್ನ ಬಿಡುವಿನ ವೇಳೆಯಲ್ಲಿ ಮರದಿಂದ ಬಿದ್ದ ಬೀಜವು ಮೊಳಕೆಯೊಡೆಯುವುದನ್ನು ಕಂಡುಹಿಡಿದು ಮುಂದೆ ಕೃಷಿಯನ್ನು ಕಂಡು ಹಿಡಿದ ಮೊದಲಿಗಳಾಗಿ ಆಹಾರೋತ್ಪಾದನೆಯ ಅನ್ವೇಷಕಿ ಎಂಬ ವಾದವೂ ಇದೆ. ಇವೆಲ್ಲವುಗಳ ಜೊತೆಗೆ ತನ್ನ ವಿಶಿಷ್ಟ ಗುಣಗಳಾದ ತಾಳ್ಮೆ, ಜಾಣ್ಮೆ, ಸಹಿಷ್ಣುತೆ, ದೈಹಿಕ ದಣಿವನ್ನು ಗೌಣವಾಗಿಸಿ ಮುನ್ನಡೆಯುವ ದಿಟ್ಟತನವಿದ್ದು, ಜನ್ಮತಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದಾಳೆ. ಕುಟುಂಬವನ್ನು ಪೋಷಿಸುವ ಪಾಲಿಸುವ ಸದಸ್ಯರನ್ನು ಕ್ಷಮಿಸುವ, ಪ್ರೀತಿಸುವ, ತಿದ್ದುವಭಾವ ಸಂಪತ್ತನ್ನು ಸಮೃದ್ಧವಾಗಿ ಹೊರಹೊಮ್ಮಿಸುವ ಮಹಿಳೆಯೇ ಸತ್ಯವಾಗಿ, ತಂದೆಗಿಂತ ಸಾವಿರಪಾಲು ಪೂಜ್ಯನೀಯಳಾಗಿದ್ದಾಳೆ.

ಒಂದು ಕಡೆ ನಮ್ಮ ಸಮಾಜವು ಮಹಿಳೆಯನ್ನು ಐಶ್ವರ್ಯ ಸಂಪತ್ತಿನ ಅಧಿದೇವತೆ ಲಕ್ಷ್ಮಿಗೆ ಹೋಲಿಸಿಕೊಂಡ ಈಕೆ ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಪರಾವಲಂಬಿ ಜೀವಿಯಾಗಬೇಕಾಯಿತು. ಶಕ್ತಿ ಸ್ವರೂಪಿಣಿ ಎಂದು ಹೆಸರು ಪಡೆದ ಈಕೆಯನ್ನು ನಿಶ್ಯಕ್ತಿಗೆ ದೂಡಿ ಶೋಷಣೆ, ದೌರ್ಜನ್ಯ, ತುಳಿತಕ್ಕೆ ಒಳಗಾಗುವ ಪರಿಸ್ಥಿತಿಯನ್ನು ತಂದು ವಿಧವೆಯಾಗಿ, ಮಹಾಸತಿಯಾಗಿ, ದೇವದಾಸಿಯಾಗಿ, ದಾಸಿ, ಗುಲಾಮಳಾಗಿ ಅನುಭವಿಸಿದ ಹಿಂಸೆ, ನೋವು ನರಳಾಟಗಳಿಗೆ ಎಣೆಯೇ ಇಲ್ಲದಂತಾಗಿ, ಗಂಡಿನ ಭೋಗದ ಸಾಧನವಾಗಿ ಅವನಿಗಾಗಿ ಮಕ್ಕಳನ್ನು ಹೇರುವ ಯಂತ್ರವಾಗಿ ಗಂಡು ಸಂತಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ಬಂದು ಸುಪುತ್ರೋಕುಲದೀಪಕ, ಸಂಸಾರದ ಆಶಾಜ್ಯೋತಿ, ತಂದೆ ತಾಯಿಯರನ್ನು

ಪೋಷಿಸುವುದು ಎಂದು ಗಂಡು ಮಕ್ಕಳಿಗೆ ಹಂಬಲಿಸಿ ಹಲವಾರು ದೇವರಿಗೆ ಹರಿಕೆ ಹೊತ್ತ ನಿದರ್ಶನಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಗಾದೆಯೊಂದು ಹೀಗಿದೆ" "ಮಗ ಸತ್ತರೆ ಮನೆಹಾಳು, ಸೊಸೆ ಸತ್ತರೆ ಸೋಬಾನ"[1] ಎನ್ನುವಂತೆ ಮಹಿಳೆ ಮರಣ ಹೊಂದಿದರೆ ಮರುಕಪಡದೇ ಪುನರ್ ವಿವಾಹ ಮಾಡುವವರು, ಮಹಿಳೆಯ ಇಂತಹ ಪರಿಸ್ಥಿತಿಯನ್ನು ಕಂಡು ಕವಯಿತ್ರಿ ಒಬ್ಬರು ತನ್ನ ಅಳಲನ್ನು ಈ ರೀತಿಯಾಗಿ ತೋಡಿಕೊಂಡಿದ್ದಾರೆ. "ನಾವು ಅಪ್ಪಟ ನಾರಿಯರು ತತ್ವಗಳಲ್ಲಿ ದೇವಿಯಾದವರು, ಭ್ರೂಣವಿರುವಾಗಲೇ ಬೇಡವಾದವರು, ಬೆಳೆಯುತ್ತಾ ಹೊರೆಯಾದವರು, ಮದುವೆ ಮಾರುಕಟ್ಟೆಯಲ್ಲಿ ಸರಕಾದವರು. ಬದುಕಿಡೀ ಯಾರದೋ ದಯೆಗೆ ಕೈಯೊಡ್ಡಿ ಬಗ್ಗಿ ಹೋದವರು. ನಾವು ಮಗಳಾದೆವು, ಹೆಂಡತಿಯಾದೆವು, ತಾಯಿಯಾದೆವು, ಬದುಕಿಡೀ ಯಾರದೋ ನೆರಳಾದೆವು. ಕೊನೆಗೂ ನಾವು ನಾವಾಗಲೇ ಇಲ್ಲ ಎಂಬ ಪಾಪ ಜೀವನಕ್ಕಾಗಿಯೇ ಹುಟ್ಟಿದವರು ನಾವೆಂಬ ನೋವನ್ನು ವ್ಯಕ್ತಪಡಿಸಿದ್ದಾರೆ."[2] ಅದೇ ರೀತಿಯಾಗಿ ಚಿಂತಕ ಲಕನ್ ಹೇಳಿರುವಂತೆ "ಮಹಿಳೆ ಎಂದರೆ ಅಸ್ತಿತ್ವದಲ್ಲಿದ್ದು ಅದೊಂದು ಖಾಲಿ ಸ್ಥಳ ಒಂದು ಮಾನ, ಅದೃಶ್ಯ, ಕಣ್ಣೀರಿನ ತೊಟ್ಟಿ, ಮೌಲ್ಯರಹಿತ ವಸ್ತು, ಭೋಗಕ್ಕೆ ಮಾತ್ರ ಸೀಮಿತ, ನೋವಿನ ಕಡಲನ್ನು ಹೊತ್ತ ಅಸಹಾಯಕ"[3] ಎಂದಿದ್ದಾರೆ.

ಇವತ್ತಿನ ದಿನಗಳಲ್ಲಿ ಹೆಣ್ಣು ಮಗು ಜನ್ಮಿಸಿದರೆ ಹೆತ್ತವರ ಪಾಲಿಗೆ ಅದು ದುರಂತವೆ ಹೊರತು ಸಂತೋಷದ ವಿಷಯವಲ್ಲ. ಹೀಗೆ ಸ್ತ್ರೀಯನ್ನು ಅತಂತ್ರ, ಅಭದ್ರತೆ, ಪರಾವಲಂಬಿ, ಅಸಮಾನತೆಯ ಜೀವನಕ್ಕೆ ಸಿಲುಕಿಸಿದ್ದು ವಿಷಾದನೀಯವಾಗಿದೆ. ಇದರ ನೆಲೆಯಲ್ಲಿ ಮಹಿಳೆಯ ದೇಹ ಸಂಪತ್ತಾಯಿತು. ಈ ಸಂಪತ್ತು ಒಡೆಯನನ್ನು ಪಡೆಯಿತು. ಆ ಒಡೆತನ ಪಡೆದ ಪುರುಷ ಆಕೆಯನ್ನು ಆತನ ಸ್ವತ್ತಾಗಿ ಮಾಡಿಕೊಂಡ, ಆದರೂ ಮಹಿಳೆಯು ಯಾವುದೇ ಸ್ಥಳದಲ್ಲಾಗಲೀ ಸುರಕ್ಷಿತಳಲ್ಲ. ಭೀತಿಯ ನೆರಳು ಆಕೆ ಹೋದೆಡೆಯಲ್ಲೆಲ್ಲಾ ಅಟ್ಟಿಸಿಕೊಂಡು ಬರುತ್ತದೆ. ಸಾರ್ವಜನಿಕ ಸ್ಥಳದಲ್ಲಾಗಲಿ ಕಾನೂನು ಮತ್ತು ವ್ಯವಸ್ಥೆಯ ರಕ್ಷಕರೆನಿಸಿಕೊಂಡವರ ಆಶ್ರಯದಲ್ಲಾಗಲೀ ಎಲ್ಲೂ ಸುರಕ್ಷಿತವಲ್ಲ, ಆದರೆ ಮೇಲ್ಜಾತಿಯ ಮಹಿಳೆಯಗಿಂತಲೂ ಅಲ್ಪಸ್ವಲ್ಪ ಬೇಡ ಬುಡಕಟ್ಟು ಮಹಿಳೆ ಸ್ವಾತಂತ್ರ್ಯರಾಗಿದ್ದು ಹಾಗೇ ಸಾರ್ವಜನಿಕ ಜೀವನಕ್ಕೂ ಕೆಲವೆಡೆ ಅವಕಾಶವಿದ್ದು ಕೆಲ ಮಹಿಳೆಯನ್ನು ತಮ್ಮ ಗಂಡಂದಿರೊಂದಿಗೆ ಕೃಷಿ ಹಾಗೂ ಕೃಷಿಯೇತರ ಕಾರ್ಯಗಳಲ್ಲಿ ತೊಡಗಿದ ಚಲನವಲನಗಳ ಸ್ವಾತಂತ್ರ್ಯ ಸ್ವಲ್ಪಮಟ್ಟಿಗೆ ಅನುಭವಿಸುವುದೂ ಇದೆ. ಆದರೂ ಕೆಲವು ಕಡೆ ನಿರ್ಬಂಧವಿರುವುದು ಸಹ ಸತ್ಯದ ಸಂಗತಿ. ಅದರ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯಿಕ ಕ್ಷೇತ್ರಗಳಲ್ಲೂ ಇವರನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ. ಅದಕ್ಕೆ ಕಾರಣ ಆರ್ಥಿಕ ದಮನಕ್ಕೆ ಒಳಗಾದ ಇಂತಹವರನ್ನು ಇಂದು ಸಾಮಾಜಿಕ ದಮನಕ್ಕೂ ಒಳಗಾಗಿರುವುದು ಸಹಜವೆನಿಸಿದೆ. ಈ ಎಲ್ಲಾ ಬಗೆಯ ಶೋಷಣೆಗಳು ಸಾಮಾನ್ಯವಾಗಿ ಬೇಡ ಬುಡಕಟ್ಟು ಸ್ತ್ರೀಯರ ಸಹಿತ ಎಲ್ಲಾ ಮಹಿಳೆಯರು ಅನುಭವಿಸುತ್ತಿರುವುದು ದುರ್ದೈವದ ಸಂಗತಿ.

ಪ್ರಸ್ತುತದಲ್ಲಿ ನಗರೀಕರಣವು ವಿಭಕ್ತ ಕುಟುಂಬಗಳ ಹೆಚ್ಚಳ, ಜೊತೆಗೆ ಶಿಕ್ಷಣ ಉದ್ಯೋಗವಕಾಶಗಳ ಪರಿಣಾಮದಿಂದ ಮಹಿಳೆಯರು, ಮನೆಯಿಂದ ಹೊರಬಂದು ಕಛೇರಿ, ಕಾರ್ಖಾನೆ, ಕೈಗಾರಿಕೆಗಳಲ್ಲಿ, ವ್ಯಾಪಾರ, ಕೃಷಿ, ಪಶುಸಂಗೋಪನೆ, ಕೂಲಿ ಜೊತೆಗೆ ಮೀಸಲಾತಿ ಅನ್ವಯದಿಂದಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅಧಿಕಾರ ಪಡೆಯುವಲ್ಲಿಯೂ ಸಮರ್ಥರಾಗಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ಅದರ ಬೆನ್ನಲ್ಲೆ ತಮ್ಮ ಮನೆಯ ಕೆಲವು ಪುರುಷರು ಅನೇಕ ದುಶ್ಚಟಗಳಿಗೆ ದಾಸರಾಗಿ, ಮನೆಯ ಜವಾಬ್ದಾರಿಯಿಂದ ಜಾರಿಕೊಂಡು ತಮ್ಮ ಸ್ತ್ರೀಯರನ್ನು ಪೀಡಿಸುತ್ತಾ ಕಾಡಿಸುತ್ತಾ ಅಲೆದಾಡುವುದು ಕಂಡುಬರುತ್ತದೆ. ಈ ತೆರನಾದ ಕುಟುಂಬಗಳ ಸ್ತ್ರೀಯರು ಸಾವಿರಾರು ಸಂಖ್ಯೆಯಲ್ಲಿದ್ದು ತಮ್ಮ ಮನೆಯ ಮಕ್ಕಳ ಪಾಲನೆ-ಪೋಷಣೆ ಹಾಗೂ ಇತರೆ ಜವಾಬ್ದಾರಿಯನ್ನು ಹೊತ್ತು ಕುಟುಂಬ ಬೆಳಗುವ ಜ್ಯೋತಿಯಾಗಿ ಆ ಮೂಲಕ ಇಡೀ ಸಮಾಜವನ್ನು ಜಗಮಗಿಸುತ್ತಿದ್ದಾಳೆ. ಮೊದಲೇ ಎದ್ದು ದಿನವಿಡೀ ದುಡಿದು ಕೊನೆಯಲ್ಲಿ ಮಲಗುವಳು ಇವಳೇ ಆಗಿದ್ದಾಳೆ. ಕುಟುಂಬ ಅಭಿವೃದ್ಧಿಯಾಗಲು ಅಥವಾ ಪತನವಾಗಲು ಮಹಿಳೆ ಕಾರಣವಾಗುತ್ತಿದ್ದು, ಕುಟುಂಬದ ಆಧಾರ ಸ್ಥಂಭವಾಗಿ ಉಳಿತಾಯದ ರೂವಾರಿಯಾಗಿ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವ ಮೂಲಕ ಆದರ್ಶ ಸಮಾಜಕ್ಕೂ ಕಾರಣವಾಗಿದ್ದಾಳೆ.

ಪುರುಷ ಪ್ರಧಾನತೆಯ ಈ ಸಮಾಜದಲ್ಲಿ ಜೀವಿಸುವ ಮಹಿಳೆಯು ಬುದ್ಧಿ ಮನಸ್ಸು, ಎಷ್ಟೇ ವೈಚಾರಿಕವಾಗಿದ್ದರೂ ಅನಿವಾರ್ಯವಾಗಿ ಪುರುಷ ಪ್ರಾಧಾನ್ಯತೆಯ ಮೌಲ್ಯ ಕಟ್ಟುಪಾಡುಗಳನ್ನು ಮೈಗೂಡಿಸಿಕೊಂಡು ಅವುಗಳಂತೆ ನಡೆದು ಪುರುಷರ ಪರವಾಗಿಯೇ ಕೆಲಸ ಮಾಡುತ್ತಾ, ಪುರುಷ ಪ್ರಾಧಾನ್ಯತೆ ವಿರುದ್ಧ ನಡೆದರೆ ಅಥವಾ ಕಾಲಿಟ್ಟರೆ ಎದುರಿಸಬಹುದಾದ ಅಘಾತಗಳ ಭಯಾನಕ ಪರಿಸ್ಥಿತಿಯನ್ನು ಅರಿತು ಸದಾ ತನ್ನ ಕೊರಳಿಗೆ ಎಚ್ಚರಿಕೆಯ ಕರೆಗಂಟೆ ತೂಗು ಹಾಕಿಕೊಂಡು ತಮ್ಮನ್ನು ತಾವೇ ಬಂಧಿಸಿಕೊಂಡು ಬಳಲುತ್ತಾ, ಬಿಡುವಿಲ್ಲದೇ ನರಳುವ ಅವಸ್ಥೆಯನ್ನು ತಲುಪಿದ್ದಾರೆ. ಬುಡಕಟ್ಟು ಮಹಿಳೆಯರನ್ನು ಒಳಗೊಂಡಂತೆ ಪ್ರಪಂಚದ ಎಲ್ಲಾ ದೇಶಗಳಲ್ಲೂ ಕುಟುಂಬ ನಿರ್ವಹಣೆ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ದುಡಿಮೆ ಅಪಾರವಾದುದು.

"ವಿಶ್ವದ ಶ್ರಮಶಕ್ತಿಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಹೊರತುಪಡಿಸಿದರೆ ಅಭಿವೃದ್ಧಿ ಅಸಾಧ್ಯ"[5] ಇದನ್ನರಿತ ಸರಕಾರ ಎಂಭತ್ತರ ದಶಕದಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಮಹಿಳಾ ಆಯೋಗ ಮುಂತಾದ ಪ್ರತ್ಯೇಕ ವಿಭಾಗಗಳನ್ನು ಅನುಷ್ಠಾನಗೊಳಿಸಲಾಯಿತು. ಇಂತಹ ಮಹಿಳಾ ಪ್ರತ್ಯೇಕ ಕಾರ್ಯಕ್ರಮಗಳು ಸಹ ಎಲ್ಲಾ ವರ್ಗದ ಮಹಿಳೆಯರಿಗೆ ಸಮಪ್ರಮಾಣದಲ್ಲಿ ತಲುಪಿಸಲಾಗಲಿಲ್ಲ. ನಗರ ಪ್ರದೇಶದ ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಶಿಕ್ಷಿತ ವರ್ಗದ ಮಹಿಳೆಯರು ಯೋಜನೆಯ ಫಲ ಪಡೆದುಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲರಾಗುತ್ತಿದ್ದಾರೆ. ಈ ತೆರನಾದ ಯೋಜನೆಗಳಲ್ಲಿ ಸಾಕಷ್ಟು ವೈಫಲ್ಯತೆಗಳನ್ನು ಗುರುತಿಸಬಹುದಾದರೂ

ಪೋಷಿಸುವುದು ಎಂದು ಗಂಡು ಮಕ್ಕಳಿಗೆ ಹಂಬಲಿಸಿ ಹಲವಾರು ದೇವರಿಗೆ ಹರಿಕೆ ಹೊತ್ತ ನಿದರ್ಶನಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಗಾದೆಯೊಂದು ಹೀಗಿದೆ" "ಮಗ ಸತ್ತರೆ ಮನೆಹಾಳು, ಸೊಸೆ ಸತ್ತರೆ ಸೋಬಾನ"[೧] ಎನ್ನುವಂತೆ ಮಹಿಳೆ ಮರಣ ಹೊಂದಿದರೆ ಮರುಕಪಡದೇ ಪುನರ್ ವಿವಾಹ ಮಾಡುವವರು, ಮಹಿಳೆಯ ಇಂತಹ ಪರಿಸ್ಥಿತಿಯನ್ನು ಕಂಡು ಕವಯಿತ್ರಿ ಒಬ್ಬರು ತನ್ನ ಅಳಲನ್ನು ಈ ರೀತಿಯಾಗಿ ತೋಡಿಕೊಂಡಿದ್ದಾರೆ. "ನಾವು ಅಪ್ಪಟ ನಾರಿಯರು ತತ್ವಗಳಲ್ಲಿ ದೇವಿಯಾದವರು, ಭ್ರೂಣವಿರುವಾಗಲೇ ಬೇಡವಾದವರು, ಬೆಳೆಯುತ್ತಾ ಹೊರೆಯಾದವರು, ಮದುವೆ ಮಾರುಕಟ್ಟೆಯಲ್ಲಿ ಸರಕಾದವರು. ಬದುಕಿಡೀ ಯಾರದೋ ದಯೆಗೆ ಕೈಯೊಡ್ಡಿ ಬಗ್ಗಿ ಹೋದವರು. ನಾವು ಮಗಳಾದೆವು, ಹೆಂಡತಿಯಾದೆವು, ತಾಯಿಯಾದೆವು, ಬದುಕಿಡೀ ಯಾರದೋ ನೆರಳಾದೆವು. ಕೊನೆಗೂ ನಾವು ನಾವಾಗಲೇ ಇಲ್ಲ ಎಂಬ ಪಾಪ ಜೀವನಕ್ಕಾಗಿಯೇ ಹುಟ್ಟಿದವರು ನಾವೆಂಬ ನೋವನ್ನು ವ್ಯಕ್ತಪಡಿಸಿದ್ದಾರೆ."[೨] ಅದೇ ರೀತಿಯಾಗಿ ಚಿಂತಕ ಲಕನ್ ಹೇಳಿರುವಂತೆ "ಮಹಿಳೆ ಎಂದರೆ ಅಸ್ತಿತ್ವದಲ್ಲಿದ್ದು ಅದೊಂದು ಖಾಲಿ ಸ್ಥಳ ಒಂದು ಮಾನ, ಅದೃಶ್ಯ, ಕಣ್ಣೀರಿನ ತೊಟ್ಟಿ, ಮೌಲ್ಯರಹಿತ ವಸ್ತು, ಭೋಗಕ್ಕೆ ಮಾತ್ರ ಸೀಮಿತ, ನೋವಿನ ಕಡಲನ್ನು ಹೊತ್ತ ಅಸಹಾಯಕ"[೩] ಎಂದಿದ್ದಾರೆ.

ಇವತ್ತಿನ ದಿನಗಳಲ್ಲಿ ಹೆಣ್ಣು ಮಗು ಜನ್ಮಿಸಿದರೆ ಹೆತ್ತವರ ಪಾಲಿಗೆ ಅದು ದುರಂತವೆ ಹೊರತು ಸಂತೋಷದ ವಿಷಯವಲ್ಲ. ಹೀಗೆ ಸ್ತ್ರೀಯನ್ನು ಅತಂತ್ರ, ಅಭದ್ರತೆ, ಪರಾವಲಂಬಿ, ಅಸಮಾನತೆಯ ಜೀವನಕ್ಕೆ ಸಿಲುಕಿಸಿದ್ದು ವಿಷಾದನೀಯವಾಗಿದೆ. ಇದರ ನೆಲೆಯಲ್ಲಿ ಮಹಿಳೆಯ ದೇಹ ಸಂಪತ್ತಾಯಿತು. ಈ ಸಂಪತ್ತು ಒಡೆಯನನ್ನು ಪಡೆಯಿತು. ಆ ಒಡೆತನ ಪಡೆದ ಪುರುಷ ಆಕೆಯನ್ನು ಆತನ ಸ್ವತ್ತಾಗಿ ಮಾಡಿಕೊಂಡ, ಆದರೂ ಮಹಿಳೆಯು ಯಾವುದೇ ಸ್ಥಳದಲ್ಲಾಗಲೀ ಸುರಕ್ಷಿತಳಲ್ಲ. ಭೀತಿಯ ನೆರಳು ಆಕೆ ಹೋದೆಡೆಯಲ್ಲೆಲ್ಲಾ ಅಟ್ಟಿಸಿಕೊಂಡು ಬರುತ್ತದೆ. ಸಾರ್ವಜನಿಕ ಸ್ಥಳದಲ್ಲಾಗಲಿ ಕಾನೂನು ಮತ್ತು ವ್ಯವಸ್ಥೆಯ ರಕ್ಷಕರೆನಿಸಿಕೊಂಡವರ ಆಶ್ರಯದಲ್ಲಾಗಲೀ ಎಲ್ಲೂ ಸುರಕ್ಷಿತವಲ್ಲ, ಆದರೆ ಮೇಲ್ಜಾತಿಯ ಮಹಿಳೆಯಗಿಂತಲೂ ಅಲ್ಪಸ್ವಲ್ಪ ಬೇಡ ಬುಡಕಟ್ಟು ಮಹಿಳೆ ಸ್ವಾತಂತ್ರ್ಯರಾಗಿದ್ದು ಹಾಗೇ ಸಾರ್ವಜನಿಕ ಜೀವನಕ್ಕೂ ಕೆಲವೆಡೆ ಅವಕಾಶವಿದ್ದು ಕೆಲ ಮಹಿಳೆಯನ್ನು ತಮ್ಮ ಗಂಡಂದಿರೊಂದಿಗೆ ಕೃಷಿ ಹಾಗೂ ಕೃಷಿಯೇತರ ಕಾರ್ಯಗಳಲ್ಲಿ ತೊಡಗಿದ ಚಲನವಲನಗಳ ಸ್ವಾತಂತ್ರ್ಯ ಸ್ವಲ್ಪಮಟ್ಟಿಗೆ ಅನುಭವಿಸುವುದೂ ಇದೆ. ಆದರೂ ಕೆಲವು ಕಡೆ ನಿರ್ಬಂಧವಿರುವುದು ಸಹ ಸತ್ಯದ ಸಂಗತಿ. ಅದರ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯಿಕ ಕ್ಷೇತ್ರಗಳಲ್ಲೂ ಇವರನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ. ಅದಕ್ಕೆ ಕಾರಣ ಆರ್ಥಿಕ ದಮನಕ್ಕೆ ಒಳಗಾದ ಇಂತಹವರನ್ನು ಇಂದು ಸಾಮಾಜಿಕ ದಮನಕ್ಕೂ ಒಳಗಾಗಿರುವುದು ಸಹಜವೆನಿಸಿದೆ. ಈ ಎಲ್ಲಾ ಬಗೆಯ ಶೋಷಣೆಗಳು ಸಾಮಾನ್ಯವಾಗಿ ಬೇಡ ಬುಡಕಟ್ಟು ಸ್ತ್ರೀಯರ ಸಹಿತ ಎಲ್ಲಾ ಮಹಿಳೆಯರು ಅನುಭವಿಸುತ್ತಿರುವುದು ದುರ್ದೈವದ ಸಂಗತಿ.

ಪ್ರಸ್ತುತದಲ್ಲಿ ನಗರೀಕರಣವು ವಿಭಕ್ತ ಕುಟುಂಬಗಳ ಹೆಚ್ಚಳ, ಜೊತೆಗೆ ಶಿಕ್ಷಣ ಉದ್ಯೋಗವಕಾಶ ಗಳ ಪರಿಣಾಮದಿಂದ ಮಹಿಳೆಯರು, ಮನೆಯಿಂದ ಹೊರಬಂದು ಕಛೇರಿ, ಕಾರ್ಖಾನೆ, ಕೈಗಾರಿಕೆಗಳಲ್ಲಿ, ವ್ಯಾಪಾರ, ಕೃಷಿ, ಪಶುಸಂಗೋಪನೆ, ಕೂಲಿ ಜೊತೆಗೆ ಮೀಸಲಾತಿ ಅನ್ವಯದಿಂದಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವ ಅಧಿಕಾರ ಪಡೆಯುವಲ್ಲಿಯೂ ಸಮರ್ಥರಾಗಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ಅದರ ಬೆನ್ನಲ್ಲೇ ತಮ್ಮ ಮನೆಯ ಕೆಲವು ಪುರುಷರು ಅನೇಕ ದುಶ್ಚಟಗಳಿಗೆ ದಾಸರಾಗಿ, ಮನೆಯ ಜವಾಬ್ದಾರಿಯಿಂದ ಜಾರಿಕೊಂಡು ತಮ್ಮ ಸ್ತ್ರೀಯರನ್ನು ಪೀಡಿಸುತ್ತಾ ಕಾಡಿಸುತ್ತಾ ಅಲೆದಾಡುವುದು ಕಂಡುಬರುತ್ತದೆ. ಈ ತೆರನಾದ ಕುಟುಂಬಗಳ ಸ್ತ್ರೀಯರು ಸಾವಿರಾರು ಸಂಖ್ಯೆಯಲ್ಲಿದ್ದು ತಮ್ಮ ಮನೆಯ ಮಕ್ಕಳ ಪಾಲನೆ-ಪೋಷಣೆ ಹಾಗೂ ಇತರೆ ಜವಾಬ್ದಾರಿಯನ್ನು ಹೊತ್ತು ಕುಟುಂಬ ಬೆಳಗುವ ಜ್ಯೋತಿಯಾಗಿ ಆ ಮೂಲಕ ಇಡೀ ಸಮಾಜವನ್ನು ಜಗಮಗಿಸುತ್ತಿದ್ದಾಳೆ. ಮೊದಲೇ ಎದ್ದು ದಿನವಿಡೀ ದುಡಿದು ಕೊನೆಯಲ್ಲಿ ಮಲಗುವಳು ಇವಳೇ ಆಗಿದ್ದಾಳೆ. ಕುಟುಂಬ ಅಭಿವೃದ್ಧಿಯಾಗಲು ಅಥವಾ ಪತನವಾಗಲು ಮಹಿಳೆ ಕಾರಣವಾಗುತ್ತಿದ್ದು, ಕುಟುಂಬದ ಆಧಾರ ಸ್ಥಂಭವಾಗಿ ಉಳಿತಾಯದ ರೂವಾರಿಯಾಗಿ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವ ಮೂಲಕ ಆದರ್ಶ ಸಮಾಜಕ್ಕೂ ಕಾರಣವಾಗಿದ್ದಾಳೆ.

ಪುರುಷ ಪ್ರಧಾನತೆಯ ಈ ಸಮಾಜದಲ್ಲಿ ಜೀವಿಸುವ ಮಹಿಳೆಯು ಬುದ್ಧಿ ಮನಸ್ಸು, ಎಷ್ಟೇ ವೈಚಾರಿಕವಾಗಿದ್ದರೂ ಅನಿವಾರ್ಯವಾಗಿ ಪುರುಷ ಪ್ರಾಧಾನ್ಯತೆಯ ಮೌಲ್ಯ ಕಟ್ಟುಪಾಡುಗಳನ್ನು ಮೈಗೂಡಿಸಿಕೊಂಡು ಅವುಗಳಂತೆ ನಡೆದು ಪುರುಷರ ಪರವಾಗಿಯೇ ಕೆಲಸ ಮಾಡುತ್ತಾ, ಪುರುಷ ಪ್ರಾಧಾನ್ಯತೆ ವಿರುದ್ಧ ನಡೆದರೆ ಅಥವಾ ಕಾಲಿಟ್ಟರೆ ಎದುರಿಸಬಹುದಾದ ಅಘಾತಗಳ ಭಯಾನಕ ಪರಿಸ್ಥಿತಿಯನ್ನು ಅರಿತು ಸದಾ ತನ್ನ ಕೊರಳಿಗೆ ಎಚ್ಚರಿಕೆಯ ಕರೆಗಂಟೆ ತೂಗು ಹಾಕಿಕೊಂಡು ತಮ್ಮನ್ನು ತಾವೇ ಬಂಧಿಸಿಕೊಂಡು ಬಳಲುತ್ತಾ, ಬಿಡುವಿಲ್ಲದೇ ನರಳುವ ಅವಸ್ಥೆಯನ್ನು ತಲುಪಿದ್ದಾರೆ. ಬುಡಕಟ್ಟು ಮಹಿಳೆಯರನ್ನು ಒಳಗೊಂಡಂತೆ ಪ್ರಪಂಚದ ಎಲ್ಲಾ ದೇಶಗಳಲ್ಲೂ ಕುಟುಂಬ ನಿರ್ವಹಣೆ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ದುಡಿಮೆ ಅಪಾರವಾದುದು.

"ವಿಶ್ವದ ಶ್ರಮಶಕ್ತಿಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಹೊರತುಪಡಿಸಿದರೆ ಅಭಿವೃದ್ಧಿ ಅಸಾಧ್ಯ"[9] ಇದನ್ನರಿತ ಸರಕಾರ ಎಂಭತ್ತರ ದಶಕದಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಮಹಿಳಾ ಆಯೋಗ ಮುಂತಾದ ಪ್ರತ್ಯೇಕ ವಿಭಾಗಗಳನ್ನು ಅನುಷ್ಠಾನಗೊಳಿಸಲಾಯಿತು. ಇಂತಹ ಮಹಿಳಾ ಪ್ರತ್ಯೇಕ ಕಾರ್ಯಕ್ರಮಗಳು ಸಹ ಎಲ್ಲಾ ವರ್ಗದ ಮಹಿಳೆಯರಿಗೆ ಸಮಪ್ರಮಾಣದಲ್ಲಿ ತಲುಪಿಸಲಾಗಲಿಲ್ಲ. ನಗರ ಪ್ರದೇಶದ ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಶಿಕ್ಷಿತ ವರ್ಗದ ಮಹಿಳೆಯರು ಯೋಜನೆಯ ಫಲ ಪಡೆದುಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲರಾಗುತ್ತಿದ್ದಾರೆ. ಈ ತೆರನಾದ ಯೋಜನೆಗಳಲ್ಲಿ ಸಾಕಷ್ಟು ವೈಫಲ್ಯತೆಗಳನ್ನು ಗುರುತಿಸಬಹುದಾದರೂ

ಒಂದಿಷ್ಟು ಮಹಿಳೆಯರಿಗಾದರೂ ಯೋಜನೆ ಫಲ ತಲುಪಿವೆ. ಆದರೆ ಅಭಿವೃದ್ಧಿಯಿಂದ ವಂಚಿತವಾದ ಹೈದರಾಬಾದ್-ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬರುವಂತಹ ಬೇಡ ಬುಡಕಟ್ಟು ಮಹಿಳಾ ಸಮುದಾಯ ಒಂದಾಗಿದೆ. ನಿಮ್ನ ವರ್ಗಗಳ ಹೋರಾಟದಿಂದ ಮೀಸಲಾತಿ ಸೌಲಭ್ಯಗಳು ಸಂಪೂರ್ಣವಾಗಿ ಲಭಿಸಿಲ್ಲ. ಆಧುನಿಕ ಜಗತ್ತಿನ ಸ್ಪರ್ಧೆ ಎದುರಿಸಲು ಅವರಲ್ಲಿ ಬೌದ್ಧಿಕ ಸಾಮರ್ಥ್ಯವಿಲ್ಲ, ಇದರಿಂದಾಗಿ ಅಭಿವೃದ್ಧಿ ವ್ಯಾಪ್ತಿಯಿಂದ ದೂರ ಸರಿಯುತ್ತಿದ್ದಾರೆ. ಈ .ಎಲ್ಲವುಗಳ ಹಿನ್ನೆಲೆಯಲ್ಲಿ ಅನುವಂಶಿಕ ಹಾಗೂ ಕ್ಷೇತ್ರ ಆಧಾರಿತ ಮಾಹಿತಿ ಆಧರಿಸಿ ಬೇಡ ಬುಡಕಟ್ಟು ಮಹಿಳೆಯರ ಸ್ಥಿತಿಗತಿ ನೋಡುವ ಒಂದು ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅದರಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಹೈದರಾಬಾದ ಕರ್ನಾಟಕದ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಹಾಗೂ ಕೊಪ್ಪಳ ಪ್ರದೇಶಗಳು ಇಡೀ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ಬಹುಮುಖ್ಯವಾಗಿ ಮೂಲಭೂತ ಅವಶ್ಯಕತೆಗಳಿಂದ ವಂಚಿತವಾದ ಈ ಪ್ರದೇಶವು "ಡಾ.ಟಿ.ಆರ್.ಚಂದ್ರಶೇಖರ ಅವರು ಹೇಳುವಂತೆ ಗುಲಬರ್ಗಾ ವಿಭಾಗವು ಶಿಕ್ಷಣ, ಮಹಿಳೆಯರ ಲಿಂಗಾನುಪಾತ, ತಲಾ ಆದಾಯ, ಅಸಮಾನತೆ ಇನ್ನಿತರ ಮೂಲಾಂಶಗಳಿಂದ ಬಹುದೂರ ಉಳಿದಿರುವುದನ್ನು ಅಂಕಿ-ಸಂಖ್ಯೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಇದರಲ್ಲಿ ಪುರುಷರಿಗಿಂತ ಮಹಿಳೆಯರೆ ಮೂರು ರೀತಿಯ ದುಡಿಮೆಯಲ್ಲಿ ತೊಡಗಿಕೊಂಡಿರುವುದನ್ನು ಈ ರೀತಿಯಾಗಿ ವಿವರಿಸುತ್ತಾರೆ. ಮೊದಲನೆಯದಾಗಿ ಉತ್ಪಾದನಾ ದುಡಿಮೆ (ಬೆವರು) ಎರಡನೆಯದು ಕೌಟುಂಬಿಕ ದುಡಿಮೆ (ಕಣ್ಣೀರು) ಮತ್ತು ಮೂರನೆಯದು ಸಂತಾನೋತ್ಪತ್ತಿ ಅಥವಾ ಸಂಗೋಪನಾ ದುಡಿಮೆ (ರಕ್ತ) ಈ ಮೂರು ಬಗೆಯ ದುಡಿಮೆ ಪೈಕಿ ಪುರುಷರು ಕೇವಲ ಮೊದಲನೆಯ ಬಗೆಯನ್ನು ಮತ್ತು ಅಲ್ಪಮಟ್ಟಿಗೆ ಎರಡನೆಯ ಬಗೆಯನ್ನು ನಿಭಾಯಿಸುತ್ತಾರೆ."[10] ಇಂತಹ ಸಂಕೀರ್ಣ ಸಮಾಜದಲ್ಲಿ ಸಾಮಾನ್ಯರ ಜೀವನವೇ ಈ ರೀತಿಯಾದರೆ ಇನ್ನೂ ಅತ್ಯಂತ ಕೆಳಸ್ತರದಲ್ಲಿರುವ ದಲಿತ, ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಪಾಡೇನು. ಇವರ ಜೀವನವು ಯಾವ ರೀತಿಯಾಗಿದೆ, ಯಾವುದನ್ನು ಆಶ್ರಯಿಸಿಕೊಂಡಿದ್ದಾರೆ. ಅವರ ಸಾಕ್ಷರತೆ ಮೂಲಭೂತ ಅವಶ್ಯಕತೆಗಳ ಸ್ವರೂಪ ಎಂತಹದ್ದು, ವೃತ್ತಿ ಯಾವುದು ಅದರಲ್ಲಿ ಮಹಿಳೆಯರ ಜೀವನಮಟ್ಟ ಯಾವ ರೀತಿಯಾಗಿದೆ. ಮಹಿಳೆಯ ಸಾಕ್ಷರತೆ, ಆಸ್ತಿ ಪಾಲು, ಅಧಿಕಾರ, ನೀತಿ-ನಿರ್ಧಾರ, ಸಾರ್ವತ್ರಿಕವಾಗಿ ಪಾಲ್ಗೊಳ್ಳುವಿಕೆ ಇತರೆ ಅಂಶಗಳೊಂದಿಗೆ ಬೇಡ ಬುಡಕಟ್ಟಿನ ಮಹಿಳೆಯರ ಸ್ಥಿತಿ-ಗತಿಗಳನ್ನು ಅವಲೋಕನಮಾಡಿ ವರ್ತಮಾನದ ಸಮಸ್ಯೆ ಸವಾಲುಗಳಿಗೆ ಯಾವ ರೀತಿಯಾಗಿ ಎದುರಾಗುತ್ತಿದ್ದಾರೆ ಎನ್ನುವಂತಹ ವಿಷಯವನ್ನು ಮುಂದಿಟ್ಟುಕೊಂಡು ಅಧ್ಯಯನಿಸಲು ಪ್ರಯತ್ನಿಸಿದ್ದೇನೆ.

ಇವತ್ತಿನ ಸಂದರ್ಭದಲ್ಲಿ ಮೌಖಿಕ, ಸಾಹಿತ್ಯಿಕ ಆಕರಗಳ ಮೂಲಕ ಸಮುದಾಯದ ಒಟ್ಟು ಚಿತ್ರಣವನ್ನು ತಿಳಿಯಪಡಿಸುವ ಯತ್ನಗಳು ನಡೆಯುತ್ತಿವೆ. ಈ ರೀತಿಯ ಅಧ್ಯಯನಗಳಿಂದ

ಚರಿತ್ರೆಯಲ್ಲಿ ಮತ್ತು ವಾಸ್ತವದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜನಸಾಮಾನ್ಯರ ಬದುಕನ್ನು ಅನಾವರಣ ಗೊಳಿಸಲಾಗುತ್ತಿದೆ. ಅದೇ ರೀತಿ ಪ್ರಸ್ತುತ ಅಧ್ಯಯನವು ಬುಡಕಟ್ಟು ಮಹಿಳೆಯನ್ನು ತೊಡಗಿಸಿಕೊಂಡು ಬಂದಂತಹ ಸನ್ನಿವೇಶವನ್ನು ಕುರಿತದ್ದಾಗಿದ್ದು, ಪ್ರಸ್ತುತ ಅಧ್ಯಯನವು ಈ ಉದ್ದೇಶಗಳನ್ನು ಒಳಗೊಂಡಿದೆ.

೧.೧.೧. ಅಧ್ಯಯನದ ಉದ್ದೇಶಗಳು

೧. ಬೇಡ ಬುಡಕಟ್ಟು ಮಹಿಳೆಯ ಸಾಮಾಜಿಕ, ಆರ್ಥಿಕ ಜೀವನದ ಚಾರಿತ್ರಿಕತೆಯನ್ನು ವಿವರಿಸುವುದು.

೨. ಬೇಡ ಬುಡಕಟ್ಟು ಸಮುದಾಯದ ಸಂಸ್ಕೃತಿ, ವೃತ್ತಿ, ದೈವ ಆರಾಧನೆ ಮತ್ತು ರಚನಾ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಅಂಶಗಳನ್ನು ಗಮನಿಸುವುದು.

೩. ಸದ್ಯದ ಪರಿಸ್ಥಿತಿಯಲ್ಲಿ ಬೇಡ ಬುಡಕಟ್ಟು ಮಹಿಳೆಯ ಕುಟುಂಬ ನಿರ್ವಹಣೆಯ ಜವಾಬ್ದಾರಿಯ ಸ್ವರೂಪ ಹಾಗೂ ಮಹಿಳೆಯರ ಸಾಮಾಜಿಕ, ಆರ್ಥಿಕ, ಸ್ಥಾನಮಾನಗಳನ್ನು ವಿಶ್ಲೇಷಿಸುವುದು.

೪. ಸರ್ಕಾರದ ಮಹಿಳಾ ಸಬಲೀಕರಣ ಯೋಜನೆಗಳು ಹಾಗೂ ಬೇಡ ಬುಡಕಟ್ಟು ಮಹಿಳೆಯ ಸಾಧಕ-ಬಾಧಕಗಳನ್ನು ವಿವರಿಸುವುದು.

ಒಟ್ಟಾರೆ ಬದಲಾದ ಸಾಮಾಜಿಕ, ಸಾಂಸ್ಕೃತಿಕ ವಲಯದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ವರ್ತಮಾನದವರೆಗಿನ ಮಹಿಳೆಯ ಪಾಲುದಾರಿಕೆಯಲ್ಲಿ ಮತ್ತು ಆಕೆಯ ಸಾಮಾಜಿಕ ಸ್ಥಾನಮಾನಗಳಲ್ಲಿ ಏನಾದರು ವ್ಯತ್ಯಾಸವಾಗಿದೆಯಾ ಆ ಮೂಲಕ ಆಕೆಯ ಅಸ್ಮಿತೆಗಳೇನು ಎನ್ನುವುದನ್ನು ತಿಳಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೧.೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಬೇಡ ಬುಡಕಟ್ಟು ಮಹಿಳೆಯನ್ನು ಪ್ರಮುಖವಾಗಿರಿಸಿಕೊಂಡಿದೆ. ಅಧ್ಯಯನದ ಸ್ಪಷ್ಟತೆಗಾಗಿ ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕ ರಾಜ್ಯದ ಅತೀ ಹಿಂದುಳಿದ ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ರೂಪಿಸಿಕೊಂಡ ಕ್ಷೇತ್ರಾಧ್ಯಯನವು ಮೂರು ಜಿಲ್ಲೆಯ ಹತ್ತೊಂಬತ್ತು ತಾಲ್ಲೂಕುಗಳನ್ನು ಒಳಗೊಂಡಿದ್ದು, ಪ್ರತಿ ಜಿಲ್ಲೆಯಲ್ಲಿ ಎರಡುನೂರು ಕುಟುಂಬಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಳ್ಳಲಾಗಿದೆ. ಹೀಗಿದ್ದಾಗಲೂ ಕೆಲವೊಮ್ಮೆ ಸಾರ್ವತ್ರಿಕ ನೆಲೆಯಲ್ಲಿ ವಿಚಾರಗಳನ್ನು ವಿಸ್ತರಿಸುವ ಉದ್ದೇಶವಿರುವುದರಿಂದ ಇತರ ಜಿಲ್ಲೆಯ ಮಹಿಳೆಯ ಕುರಿತು ನಡೆದ ಅಧ್ಯಯನಗಳ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನವು ಕ್ಷೇತ್ರಾಧಾರಿತ ಮಾಹಿತಿಗಳನ್ನು ಆಧರಿಸಿದೆ. ಅಲ್ಲದೇ ಈಗಾಗಲೆ ಸಂಗ್ರಹಿತವಾದ ಮಹಿಳಾ ಸಾಹಿತ್ಯವನ್ನು ಕೆಲವು ಅಧಿಕಾರ, ಆಸ್ತಿ, ಅಂತಸ್ತು, ಸಾರ್ವತ್ರಿಕವಾಗಿ ಭಾಗವಹಿಸುವಿಕೆಗೆ ಸಂಬಂಧಿಸಿದಂತಹ ಮಾಹಿತಿಗಳನ್ನು ಅಧ್ಯಯನದಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಜೊತೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳನ್ನು, ಲೇಖನಗಳನ್ನು, ಪತ್ರಿಕೆಗಳನ್ನು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಾರ್ಯಾಲಯದಿಂದ ಪಡೆದ ಮತ್ತು ಸರಕಾರದ ವರದಿಗಳಿಂದ ಪಡೆದ ಅಂಕಿ-ಅಂಶಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಹೀಗೆ ಒಟ್ಟು ಅಧ್ಯಯನದಲ್ಲಿ ಲಿಖಿತ-ಅಲಿಖಿತ, ಪ್ರಕಟಿತ, ಅಪ್ರಕಟಿತ, ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಬಳಸಿಕೊಂಡ ವಿವರಣೆಯನ್ನು ನೋಡಬಹುದು.

೧.೧.೩. ಅಧ್ಯಯನಕ್ಕಾಗಿ ಕಂಡುಕೊಂಡ ವಿಧಾನಗಳು

"ಬೇಡ ಸಮುದಾಯದ ಮಹಿಳೆ ಸಮಾಜಶಾಸ್ತ್ರೀಯ ಅಧ್ಯಯನ" ಎಂಬ ಈ ಮಹಾಪ್ರಬಂಧವು ಸಮಾಜಶಾಸ್ತ್ರೀಯ ಅಧ್ಯಯನ ವಿಧಾನದ ರೂಪರೇಷಗಳ ಆಧಾರದ ಅನ್ವಯ ರಚನೆಗೊಂಡಿದೆ. ಒಂದು ಆದಿವಾಸಿ ಮಹಿಳೆಯ ಜೀವನ ಚಿತ್ರಣವನ್ನು ನಿರ್ವಚಿಸುವಲ್ಲಿ ಹಲವು ರೀತಿಯ ಅಧ್ಯಯನ ವಿಧಿ-ವಿಧಾನಗಳಾದ ಪ್ರಾಥಮಿಕ ಮತ್ತು ಅನುಷಾಂಗಿಕ ವಿಧಾನಗಳ ಮೂಲಕ ಸಿದ್ಧಪಡಿಸಲಾಗಿದೆ.

೧. ಪ್ರಶ್ನಾವಳಿ ವಿಧಾನ

ಬೇಡ ಸಮುದಾಯದ ಮಹಿಳೆ ಎಂಬ ಅಧ್ಯಯನದ ವಿಷಯಕ್ಕನುಗುಣವಾಗಿ ಸಮಕಾಲೀನ ಸಂದರ್ಭದಲ್ಲಿ ಮಹಿಳೆಯ ಸ್ಥಿತಿಗತಿಯನ್ನು ಅರಿತುಕೊಳ್ಳಲು ಸೂಕ್ತವಾದ ಪ್ರಶ್ನೆಗಳನ್ನು ರಚಿಸಿಕೊಂಡು, ಸಮೀಕ್ಷಿಸಲಾಗಿದೆ. ಅದರ ಫಲಿತಗಳನ್ನು, ಮಹಾಪ್ರಬಂಧದಲ್ಲಿ ನಮೂದಿಸಲಾಗಿದೆ. ಪ್ರತ್ಯೇಕವಾದ ವಿಷಯ ಹಾಗೂ ವ್ಯಕ್ತಿಗಳ ಅಧ್ಯಯನಕ್ಕೆ ಪ್ರಶ್ನೆಗಳನ್ನು ರಚಿಸಿ ಅವುಗಳಿಂದ ಪಡೆದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೨. ಸಂದರ್ಶನ ವಿಧಾನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹೈದ್ರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳಗಳಲ್ಲಿ ಬರುವಂತಹ ಬೇಡ ಸಮುದಾಯದ ಜನರ ಜೀವನವನ್ನು ಅರಿತುಕೊಳ್ಳಲು ಈ ಮೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಅವರ ವಯೋಮಿತಿಗನುಸಾರವಾಗಿ ಸಂದರ್ಶನ ನಡೆಸಲಾಗಿದೆ. ಸಮುದಾಯದ ಹಿರಿಯರಿಂದ ಮಾಹಿತಿಯನ್ನು ಪಡೆದು ಪ್ರಬಂಧ ರಚನೆಯಲ್ಲಿ ಬಳಸಿಕೊಳ್ಳಲಾಗಿದೆ.

೩. ಅವಲೋಕನ ವಿಧಾನ

ಈ ಅಧ್ಯಯನದಲ್ಲಿ ಅವಲೋಕನ ವಿಧಾನಕ್ಕೂ ಆದ್ಯತೆ ನೀಡಲಾಗಿದೆ. ಬೇಡರಲ್ಲಿ ಇತ್ತೀಚಿನ ದಿನಗಳಲ್ಲಿ ಜೀವನಮಟ್ಟ, ಲಿಂಗತಾರತಮ್ಯ, ವೃತ್ತಿ, ಇತರೆ ಕ್ರಮಗಳಲ್ಲಿ ಬದಲಾವಣೆಯಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ.

೪. ಐತಿಹಾಸಿಕ ವಿಧಾನ

ಈ ಸಮುದಾಯದಲ್ಲಿ ಐತಿಹಾಸಿಕವಾಗಿ, ಚಾರಿತ್ರಿಕವಾಗಿ ವೈಭವಪೂರಿತ ಸಂಗತಿಗಳು

ಇವರನ್ನು ಇಂದಿನವರೆಗೂ ನಿಯಂತ್ರಣದಲ್ಲಿರಿಸಿವೆ. ಅದರ ಮುಖೇನ ಇವರ ಸಾಮಾಜಿಕ ಇತಿಹಾಸವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

೫. ತೌಲನಿಕ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಏಕೆಂದರೆ ಇಲ್ಲಿ ಸಂಶೋಧಿಸುವ ವಿಷಯ ವ್ಯಾಪಕವಾಗಿದೆ. ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಂಶಗಳ ಸ್ಥಿತಿಗತಿಯನ್ನು ತೌಲನಿಕವಾಗಿ ಅಧ್ಯಯನ ಮಾಡುವುದರೊಂದಿಗೆ ಇನ್ನಿತರ ಸಮುದಾಯದೊಂದಿಗೆ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಹೊಂದಿದೆಯೇ ಎಂಬುದನ್ನು ತಿಳಿದುಕೊಳ್ಳಲು ಈ ವಿಧಾನ ಬಳಸಲಾಗಿದೆ.

೬. ಸಂಖ್ಯಾಶಾಸ್ತ್ರೀಯ ವಿಧಾನ

ಇದು ಬಹುಮುಖ್ಯವಾದ ವಿಧಾನವಾಗಿದೆ. ಒಂದು ಸಮುದಾಯದ ರೂಪುರೇಷಗಳನ್ನು ರಚಿಸಲು ಸಹಾಯಕವಾಗುತ್ತದೆ. ಅದರಂತೆ ಬೇಡ ಬುಡಕಟ್ಟು ಜನತೆಯ ಸಾಮಾಜಿಕ, ಆರ್ಥಿಕ ಸ್ಥಾನಮಾನದ ಏರಿಳಿತಗಳನ್ನು ಗುರುತಿಸಲು ಇದರಿಂದ ಸಾಧ್ಯ. ಮಹಿಳೆಯ ಒಟ್ಟು ಸಾಮಾಜಿಕ ಚಿತ್ರಣವನ್ನು ಗುರುತಿಸಲು ಇದನ್ನು ಬಳಸಿಕೊಳ್ಳಲಾಗಿದೆ.

೭. ವಿಷಯ ಅಧ್ಯಯನ ವಿಧಾನ

ಬೇಡ ಬುಡಕಟ್ಟು ಸಮುದಾಯದ ಮಹಿಳೆಯ ಜೀವನದ ಹಲವು ಮುಖಗಳನ್ನು ಅರಿತುಕೊಳ್ಳಲು ಹಲವಾರು ಪುಸ್ತಕಗಳನ್ನು, ಲೇಖನಗಳನ್ನು ಪೌರಾಣಿಕ ವಿಷಯವನ್ನು ಅರಿಯಲು ಈ ವಿಧಾನ ಸಹಾಯಕವಾಗಿದೆ. ಹಾಗೆಯೇ ಅನುಭವವುಳ್ಳ ವ್ಯಕ್ತಿಗಳನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚಿಸಿ ವಿಷಯವನ್ನು ಸಮಗ್ರವಾಗಿ ಸಂಗ್ರಹಿಸಲಾಗಿದೆ. ಮೂಲದ ಬಗ್ಗೆಯಾಗಲಿ, ಬೆಡಗುಗಳ ಬಗ್ಗೆಯಾಗಲಿ, ಹಬ್ಬ ಹರಿದಿನಗಳನ್ನು ಕುರಿತು ಹಾಗೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ವಿಷಯವನ್ನು ಅರಿಯಲು ಈ ವಿಧಾನವನ್ನು ಅನುಸರಿಸಲಾಗಿದೆ. ಮೂರು ಜಿಲ್ಲೆಯಲ್ಲಿ ಹಲವಾರು ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿ ಮಾಡಿ ವಿಷಯವನ್ನು ಸಂಗ್ರಹಿಸಲು ಈ ವಿಧಾನವನ್ನು ಬಳಸಲಾಗಿದೆ.

ಸಹಭಾಗಿತ್ವ

ಈ ವಿಧಾನವನ್ನು ಹೈದ್ರಾಬಾದ್ ಕರ್ನಾಟಕದ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಪರಿಸರದಲ್ಲಿ ಬರುವಂತಹ ಬೇಡ ಸಮುದಾಯದ ಮಹಿಳೆಯ ಹಲವು ಬಗೆಯ ವಿಷಯಗಳನ್ನು ಅರಿಯಲು ಈ ವಿಧಾನ ಸಹಾಯಕವಾಗಿದೆ. ಇದರ ಅನ್ವಯ ಮೊದಮೊದಲು ಜನರಿಗೆ ಭೇಟಿ ಮಾಡಿದಾಗ ತಮ್ಮ ಸಂಸ್ಕೃತಿ-

ಸಂಪ್ರದಾಯ ಮೊದಲಾದ ವಿಷಯಗಳ ಬಗ್ಗೆ ಸಂಪೂರ್ಣ ವಿಷಯವನ್ನು ನೀಡುವಲ್ಲಿ ಸಂಕೋಚ ಪಡುತ್ತಾರೆ. ಪದೇ ಪದೇ ಭೇಟಿ ಮಾಡಿ ಅಧ್ಯಯನ ವಿಷಯದ ಬಗ್ಗೆ ವಿವರಣೆ ನೀಡಿದಾಗ ತಮ್ಮ ಸಮುದಾಯದ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ. ಇದರಿಂದ ನಿಮಗೆ ಯಾವ ಹಾನಿಯಾಗುವುದಿಲ್ಲ ವೆಂದು ಮನವರಿಕೆ ಮಾಡಿಕೊಟ್ಟಾಗ ವಿಷಯಗಳನ್ನು ಕುರಿತು ಅಲ್ಪ ಸ್ವಲ್ಪ ವಿವರಗಳನ್ನು ನೀಡಲು ಸಹಕರಿಸಿದರು. ಹಾಗೆಯೇ ಅವರೊಡನೆ ಕೆಲವು ದಿವಸಗಳು ಉಳಿದುಕೊಂಡು ಕಾರ್ಯನಿರ್ವಹಿಸುತ್ತಿರು ವಾಗ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಕೆಲವು ವಿಶೇಷ ಸಂದರ್ಭದಲ್ಲಿ ಎಂದರೆ ಮನೆಯ ಸಭೆ ಸಮಾರಂಭಗಳಲ್ಲಿ ಮಹಿಳೆಯ ಪಾತ್ರ ನಿರ್ಣಾಯಕ ಎನ್ನುವಂತಹ ವಿಷಯವನ್ನು ಗ್ರಹಿಸಿಕೊಳ್ಳಲಾಯಿತು.

ಕ್ಷೇತ್ರಕಾರ್ಯದ ಅನುಭವ

ಪ್ರಥಮವಾಗಿ ಅಧ್ಯಯನಕ್ಕಾಗಿ ಬೇಡ ಬುಡಕಟ್ಟು ಸಮುದಾಯದ ಮಹಿಳೆಯನ್ನು ಕುರಿತು ಅಧ್ಯಯನ ಮಾಡುತ್ತೇನೆ ಎಂದಾಗ ಹಲವಾರು ಸಂಶೋಧಕರು ಮಹಿಳೆಯ ಅಂತರಾತ್ಮದ ವಿಷಯಗಳು ಹೊರತರಲು ಆಗುವುದಿಲ್ಲವೆಂದು ಪ್ರಶ್ನೆ ಮಾಡಿದರು. ಅದು ನಿಜವು ಕೂಡ. ಆದರೆ ಸಮುದಾಯದ ಒಳಗಿನ ಸದಸ್ಯನಾಗಿ ಮಹಿಳೆಯ ಅವಲೋಕನ ಮಾಡಿ, ಕ್ಷೇತ್ರಕಾರ್ಯಕ್ಕಾಗಿ ಪ್ರಶ್ನಾವಳಿಯನ್ನು ತಯಾರಿಸಿ ಕ್ಷೇತ್ರಕಾರ್ಯ ಮಾಡಲು ಪ್ರಾರಂಭಿಸಿದಾಗ ಹಲವಾರು ವಿಘ್ನಗಳು, ಅಡ್ಡಿ ಆತಂಕಗಳು ಎದುರಾದವು. ಇದಕ್ಕೆ ಪ್ರಮುಖ ಕಾರಣ ಈ ಬುಡಕಟ್ಟಿನ ಹೆಚ್ಚು ಮಹಿಳೆಯರು ಅನಕ್ಷರಸ್ಥರು, ಸಂಪ್ರದಾಯವಾದಿಗಳು, ಸಂಸ್ಕೃತ ನಿಷ್ಠರಾಗಿದ್ದರಿಂದ ಹೊರಗಿನ ಜನರನ್ನು ಬಹಳ ಸರಳವಾಗಿ ನಂಬುವುದಿಲ್ಲ. ಆದ್ದರಿಂದ ಅವರನ್ನು ಮನವಲಿಸಬೇಕಾದರೆ ಅವರಿಗೆ ಪದೇ ಪದೇ ಭೇಟಿಮಾಡಿ ನಾವು ನಿಮ್ಮ ಸಮುದಾಯದವರು, ನಿಮ್ಮನ್ನು ಕುರಿತು ಅಧ್ಯಯನ ಮಾಡುತ್ತಿದ್ದೇನೆ ಎಂದ ಮೇಲೆ ನನ್ನನ್ನು ನಂಬುವಂತಾದರು.

೧.೨. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

ಪರಿಶಿಷ್ಟ ಪಂಗಡವೆಂದು ಕರೆಯಿಸಿಕೊಳ್ಳುವ ಬುಡಕಟ್ಟುಗಳು ಭಾರತದಾದ್ಯಂತ ಹರಡಿಕೊಂಡಿವೆ. ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದ ಇವರು ಬೆಟ್ಟ-ಗುಡ್ಡ, ಕಣಿವೆ-ಕಾನನ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆರ್ಯರು ಭಾರತಕ್ಕೆ ಬಂದೊಡನೆ ಭಾರತದಲ್ಲಿದ್ದ ಮೂಲನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ, ಹೊಡೆದೋಡಿಸಿದ ನಂತರ ಆ ಮೂಲನಿವಾಸಿಗಳು ಚದುರಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದರೆಂದು ಇತಿಹಾಸತಜ್ಞರು ಅಭಿಪ್ರಾಯ ಪಡುವರು. ೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟಿನವರು ಶೇ. ೮.೦೮ರಷ್ಟಿದ್ದರೆ, ಕರ್ನಾಟಕದಲ್ಲಿ ಶೇ. ೪.೨೬ರಷ್ಟು ಬುಡಕಟ್ಟಿ ನವರಿದ್ದಾರೆ. ಅತಿಹೆಚ್ಚು ಬುಡಕಟ್ಟಿನವರು ಇರುವ ಮಧ್ಯಪ್ರದೇಶದಲ್ಲಿ ಒಂದು ಕೋಟಿಗೂ ಅಧಿಕ ಸಂಖ್ಯೆಯ ಆದಿವಾಸಿಗಳಿದ್ದಾರೆ. ಅತ್ಯಂತ ಕಡಿಮೆ ಆದಿವಾಸಿಗಳಿರುವುದು ಪಂಜಾಬ್ ರಾಜ್ಯದಲ್ಲಿ. "ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನದಲ್ಲಿ ಇವರನ್ನು 'ಪರಿಶಿಷ್ಟ ಬುಡಕಟ್ಟು' ಎಂದು ಕರೆದು

ಕಾನೂನಿನ ಬೆಂಬಲವನ್ನು ನೀಡಿರುತ್ತದೆ. ಪ್ರಸ್ತುತ ಭಾರತದಲ್ಲಿ ಸುಮಾರು ೬೩೦ ಅಂಗೀಕೃತ ಆದಿವಾಸಿ ಬುಡಕಟ್ಟುಗಳಿವೆ. ಈ ಬುಡಕಟ್ಟು ಸಮುದಾಯವನ್ನು ಭಾರತದ ಬಹುಪಾಲು ರಾಜ್ಯಗಳಲ್ಲಿ 'ಆದಿವಾಸಿಗಳು' ಎಂದೇ ಕರೆಯುತ್ತಾರೆ."[೬]

೧.೨.೧. ಆದಿವಾಸಿಗಳ ಅರ್ಥ ವಿವರಣೆ

ಸಾಮಾನ್ಯವಾಗಿ ಒಂದು ದೇಶದ ಮೂಲನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಇವರನ್ನು ಸಂಚಾರಿ ಜನಾಂಗ, ಆದಿಪ್ರಜಾ, ಅನಾಗರಿಕರು, ಬುಡಕಟ್ಟು ಜನಾಂಗ, ಅರಣ್ಯ ವಾಸಿಗಳು, ಜನಜಾತಿ ಪಂಗಡ, ಗಿರಿಜನರು, ಸಂಪ್ರದಾಯ ಪ್ರಿಯರು, ಸರ್ವಚೇತನವಾದಿಗಳು, ಹಿಂದುಳಿದ ಹಿಂದುಗಳು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಹಾತ್ಮಗಾಂಧೀಜಿಯವರು ಆದಿವಾಸಿಗಳನ್ನು 'ಗಿರಿಜನರು' ಎಂದು ಕರೆದಿದ್ದಾರೆ. ಡಾ.ಜಿ.ಎಸ್. ಘುರ್ಯೆ ಆದಿವಾಸಿಗಳನ್ನು 'ಹಿಂದುಳಿದ ಹಿಂದುಗಳು' ಎಂದು ಕರೆದಿದ್ದಾರೆ "ಭಾರತದ ಸಂವಿಧಾನದ ೩೪೨ನೇ ಕಲಮಿನಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಬುಡಕಟ್ಟುಗಳು' ಎಂದು ಉಲ್ಲೇಖಿಸಲಾಗಿದೆ. ಸಂವಿಧಾನವು ೪೭೨ ಪರಿಶಿಷ್ಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದ್ದರೂ ಈ ಬುಡಕಟ್ಟುಗಳ ಸಂಖ್ಯೆಯು ಇನ್ನೂ ಅಧಿಕವಾಗಿದೆ. ದೇಶದ ಒಟ್ಟು ೩೨೯ ತಾಲ್ಲೂಕುಗಳಲ್ಲಿ ಬುಡಕಟ್ಟು ಜನಾಂಗಗಳೇ ಬಹು ಸಂಖ್ಯಾತರಾಗಿ ವಾಸಿಸುವರು. ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ, ಮಿಜೋರಾಂ, ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಆದಿವಾಸಿಗಳು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಾರೆ."[೭]

ಆದಿವಾಸಿ ಸಮುದಾಯಗಳ ಬಗೆಗೆ ಆಳವಾದ ಅಧ್ಯಯನವನ್ನು ನಡೆಸಿ, ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಮಾನವಶಾಸ್ತ್ರಜ್ಞರಿಗೆ ಸಲ್ಲುವದು. ಎಡ್ಗರ್ ಥರ್‌ಸ್ಟನ್, ವೆರಿಯರ್ ಎಲ್ವಿನ್, ಆರ್.ಎನ್. ಸಕ್ಸೇನಾ, ಡಾ. ಜಿ.ಎಸ್. ಘುರ್ಯೆ, ಫೇರ್‌ಚೈಲ್ಡ್, ಮಿಲ್ಸ್, ಎ.ಎ.ಡಿ ಲೂಯಿಸ್, ಸ್ಮಿಥ್, ಕೆ.ರಂಗಾಚಾರಿ, ಎಲ್.ಕೆ.ಅಯ್ಯರ್, ಎಚ್.ವಿ. ನಂಜುಂಡಯ್ಯ, ಡಾ. ಡಿ.ಎನ್. ಮಜುಮದಾರ ಮುಂತಾದ ಮಾನವಶಾಸ್ತ್ರಜ್ಞರು ಆದಿವಾಸಿ ಸಮುದಾಯ ಹಾಗೂ ಸಂಸ್ಕೃತಿಗಳ ಬಗ್ಗೆ ಅಧ್ಯಯನ ನಡೆಸಿ ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ "Caste and tribes of southern India" ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳು.

ಆದಿವಾಸಿಗಳೆಂದರೆ ಯಾರು ಎಂಬುದಕ್ಕೆ "ಭಾರತದ ಇಂಪೀರಿಯಲ್ ಗೆಜೆಟಿಯರ್ ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ, ಪೂರ್ವದಲ್ಲಿ, ಒಳ-ಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿದ್ದಿರ ಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಆದಿವಾಸಿ ಸಮಾಜ ಎನ್ನಬಹುದು."[೮] ಅದೇ ರೀತಿ ಮಾನವಶಾಸ್ತ್ರದ ನಿಘಂಟಿನ ಪ್ರಕಾರ "ಒಂದು ಸಾಮಾಜಿಕ ಸಮೂಹವು ನಿರ್ದಿಷ್ಟನೆಲೆ,

ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಂಘಟನಾ ಸ್ವರೂಪವನ್ನು ಹೊಂದಿದ್ದರೆ ಅಂತಹ ಸಮೂಹವು ಬುಡಕಟ್ಟು ಎನಿಸಿಕೊಳುತ್ತದೆ."[7] ಡಬ್ಲ್ಯು.ಜೆ.ಪೆರ್ರಿ ಪ್ರಕಾರ 'ಒಂದು ಸ್ಥಳದಲ್ಲಿ ನೆಲೆಗೊಂಡು ಒಂದೇ ಭಾಷೆಯನ್ನಾಡುವ ಜನಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯಬಹುದು' ಎಂದಿದ್ದಾರೆ. ಬೋಗಾರ್ಡಸ್ ಎಂಬಾತನ ಅಭಿಪ್ರಾಯದಲ್ಲಿ 'ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ,ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಆದಿವಾಸಿ ಸಮೂಹ' ಎಂದಿದ್ದಾರೆ. ಒಟ್ಟಾರೆ ಒಂದು ದೇಶದ ಮೂಲನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವಜರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗಿದೆ.

೧.೨.೨. ಬುಡಕಟ್ಟು ಸಮುದಾಯಗಳ ಗುಣಲಕ್ಷಣಗಳು

ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಹೊರಗಿರುವ, ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ಬೇರ್ಪಟ್ಟ,ಗುಡ್ಡ ಗಾಡುಗಳಲ್ಲಿ ವಾಸಿಸುವ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದ ಅಸಂಖ್ಯಾತ 'ಬುಡಕಟ್ಟು' ಸಮುದಾಯದವರು ಭಾರತದಲ್ಲಿದ್ದಾರೆ. ಒಂದೊಂದು ಬುಡಕಟ್ಟುಗಳು, ಒಂದೊಂದು ಗುಣಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಪರಸ್ಪರ ಹೋಲಿಕೆ ಮತ್ತು ಏಕತೆಗಳು ಕಂಡುಬರುತ್ತವೆ. ಅಂತಹ ಪ್ರಮುಖ ಗುಣಲಕ್ಷಣಗಳೆಂದರೆ.

೧. ನಿರ್ದಿಷ್ಟ ಭೂ ಪ್ರದೇಶ : ಪ್ರತಿಯೊಂದು ಬುಡಕಟ್ಟುಗಳಿಗೆ ತಮ್ಮದೇ ಆದ ನಿಶ್ಚಿತ ನೆಲೆ ಇರುತ್ತದೆ. ಆಹಾರ ಸಂಗ್ರಹಣೆ ಬೇಟೆ, ಪಶುಪಾಲನೆ, ಕೃಷಿ, ವ್ಯಾಪಾರ ಹಾಗೂ ಉಪಜೀವನಕ್ಕಾಗಿ ಅನೇಕ ಕಡೆ ಸಂಚರಿಸುತ್ತಾರೆ. ಆದರೂ ತಾವು ಹುಟ್ಟಿದ ಸ್ಥಳ ಮತ್ತು ಪ್ರದೇಶದ ಬಗೆಗೆ ಸಾಮುದಾಯಿಕ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇವರು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ಪಾಳ್ಯ, ಹಾಡಿ, ರೊಪ್ಪ, ದೊಡ್ಡಿ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ನಾಗಾ, ಖಾಸಿ, ಗಾರೊ ಜನರು ಅಸ್ಸಾಂ ಭಾಗದಲ್ಲಿಯೂ; ತೋಡರು, ಬಡಗರು ನೀಲಗಿರಿ ಬೆಟ್ಟಗಳಲ್ಲಿಯೂ; ಗೊಂಡರು ಗೊಂಡಾರಣ್ಯದಲ್ಲಿಯೂ; ವೆಡ್ಡ ಜನರು ಸಿಲೋನಿನಲ್ಲಿಯೂ; ಬೇಡರು, ಕಾಡುಗೊಲ್ಲ, ಕಾಡುಕುರುಬ ಕರ್ನಾಟಕದಲ್ಲಿಯೂ; ಅಂಗೆ, ಒಂಗೆ ಮತ್ತು ಜಾರವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿಯೂ; ಜಿಪ್ಸಿ, ಜ್ಯೂ ಮತ್ತು ಚೆಂಚರು ಆಂಧ್ರಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಇಂತಹ ನಿರ್ಧಿಷ್ಟ ಭೂ ಪ್ರದೇಶದಲ್ಲಿ ವಾಸಮಾಡುವುದರಿಂದ ಅವರಲ್ಲಿ ಸಹಕಾರ ಒಗ್ಗಟ್ಟು ಮತ್ತು ಸಾಮುದಾಯಿಕ ಭಾವನೆ ಅಧಿಕವಾಗಿರುತ್ತದೆ.

೨. ನಿರ್ಧಿಷ್ಟ ಹೆಸರು : ಭಾರತದಲ್ಲಿ ನೆಲೆಸಿರುವಂತಹ ಪ್ರತಿಯೊಂದು ಬುಡಕಟ್ಟುಗಳಿಗೂ ತಮ್ಮದೇ ಆದ ವಿಶಿಷ್ಟ ಅಥವಾ ನಿರ್ಧಿಷ್ಟ ಹೆಸರುಗಳಿವೆ. ಉದಾ: ನಾಗ, ತೋಡ, ಭಿಲ್ಲ, ಚೆಂಚು, ಬೇಡ, ಬೇಡರ್, ಗೊಂಡ, ಶಬರ, ಕಿರಾತ, ನಾಯಕ, ವಾಲ್ಮೀಕಿ, ನಾಯ್ಕರು, ಪಾಳೇಗಾರ, ತಳವಾರ, ಗುರಿಕಾರ, ಮ್ಯಾಸಬೇಡ, ಕಾಡುಗೊಲ್ಲ, ಕಾಡುಕುರುಬ, ಸಂತಾಲ, ಜಿಪ್ಸಿ, ಲಿಂಬು, ಗಾರೋ, ಬಡಗ, ಮುಂಡಾ ಮುಂತಾದವು ಆದಿವಾಸಿಗಳ ಹೆಸರುಗಳಾಗಿವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.

೩. **ಸಾಮಾನ್ಯ ಭಾಷೆ** : ಆದಿವಾಸಿಗಳು ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುತ್ತಾರೆ. ಆ ಭಾಷೆಯನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು ಕಷ್ಟ. ಆದಿವಾಸಿ ಭಾಷೆಗೆ ಲಿಪಿಯಿಲ್ಲದೇ ಇರುವುದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದಿವಾಸಿ ಭಾಷೆಗಳ ಮೇಲೆ ನೆರೆಹೊರೆಯ ಪ್ರದೇಶಗಳ ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾಹರಣೆಗೆ ಕರ್ನಾಟಕದ ಊರುಬೇಡರು, ಮ್ಯಾಸಬೇಡರು ತೆಲುಗು ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವ ಬಡಗರು ಮತ್ತು ತೋಡರು ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಹಿಂದಿ ಮುಂತಾದ ಭಾಷೆಗಳಲ್ಲಿ ಒಂದೊಂದು ಶಬ್ದಗಳನ್ನು ಮಾತನಾಡುವಾಗ ಬಳಸುತ್ತಾರೆ. ಆದ್ದರಿಂದ ಆದಿವಾಸಿಗಳ ಭಾಷೆಗಳನ್ನು ನಾಡಭಾಷೆಗಳೆಂದು ಕರೆಯುತ್ತಾರೆ.

೪. **ಒಂದೇ ರೀತಿಯ ರಾಜಕೀಯ ವ್ಯವಸ್ಥೆ** : ಪ್ರತಿಯೊಂದು ಆದಿವಾಸಿ ಪಂಗಡವು ತನ್ನದೇ ಆದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿರುತ್ತವೆ. ಪ್ರತಿಯೊಂದು ಸಮುದಾಯಕ್ಕೂ ಒಬ್ಬ ಮುಖ್ಯಸ್ಥನಿದ್ದು; ಈತ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣವನ್ನು ತರುತ್ತಾನೆ. ತಪ್ಪಿತಸ್ಥರಿಗೆ ದಂಡ, ಶಿಕ್ಷೆ, ಬಹಿಷ್ಕಾರ ಮುಂತಾದ ಕಠಿಣ ಶಿಕ್ಷೆವಿಧಿಸುವ ಅಧಿಕಾರವನ್ನು ಆದಿವಾಸಿ ಸಮುದಾಯದ ಮುಖ್ಯಸ್ಥ ಅಥವಾ ನಾಯಕ ಪಡೆದಿರುತ್ತಾನೆ. ನಾಯಕನನ್ನು ಆಯ್ಕೆಮಾಡುವ ಪದ್ಧತಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಆನುವಂಶಿಯವಾಗಿ ಇಲ್ಲವೇ ಬಹುಮತ ವ್ಯಕ್ತಪಡಿಸುವ ಮೂಲಕ ನಡೆಯುತ್ತದೆ. ಕರ್ನಾಟಕದ ಬೇಡರಲ್ಲಿ ಗುಡಿಕಟ್ಟೆ ಮತ್ತು ಕಟ್ಟೆಮನೆಯ ದೊರೆ, ಯಜಮಾನ, ಹಟ್ಟಿಗೌಡ, ಪೂಜಾರಿ, ತಳವಾರ ಮೊದಲಾದ ಅಧಿಕಾರಯುತ ಹುದ್ದೆಗಳನ್ನು ಸಾಮಾನ್ಯವಾಗಿ ಆನುವಂಶಿಯವಾಗಿ ಆಯ್ಕೆ ಮಾಡುತ್ತಾರೆ. "ಅಸ್ಸಾಂದ ನಾಗಾ ಬುಡಕಟ್ಟಿನಲ್ಲಿ ಯಾವ ವ್ಯಕ್ತಿ ತನ್ನ ಮನೆಯಲ್ಲಿ ಹೆಚ್ಚು ಜನರ ತಲೆ ಬುರುಡೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವನೋ ಅವನನ್ನು ನಾಯಕನೆಂದು ಆಯ್ಕೆ ಮಾಡುತ್ತಾರೆ."[೧೦] ಇನ್ನೂ ಕೆಲವೂ ಆದಿವಾಸಿ ಸಮೂಹಗಳಲ್ಲಿ ಪ್ರತಿಯೊಂದು ಪಂಗಡಕ್ಕೂ ಒಂದೊಂದು 'ಪಂಚಾಯ್ತಿ' ವ್ಯವಸ್ಥೆ ಇರುತ್ತದೆ.ಅದು ಒಳಜಗಳಗಳನ್ನು ಬಗೆಹರಿಸುವ ಮತ್ತು ತಪ್ಪಿತಸ್ಥನನ್ನು ಶಿಕ್ಷಿಸುವ ಕಾರ್ಯದಲ್ಲಿ ಮುಖ್ಯಸ್ಥನಿಗೆ ನೆರವು ನೀಡುತ್ತವೆ. ಕಟ್ಟು ನಿಟ್ಟಾದ ರಾಜಕೀಯ ಸಂಘಟನೆ ಮತ್ತು ಅನೌಪಚಾರಿಕ ಸಾಮಾಜಿಕ ನಿಯಂತ್ರಣಗಳು ಬುಡಕಟ್ಟು ಜನರ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ತರುತ್ತವೆ.

೫. **ಸರಳ ಮತ್ತು ಸ್ವತಂತ್ರ ಜೀವನ** : ಆದಿವಾಸಿ ಪಂಗಡಗಳು ಬಹಳಮಟ್ಟಿಗೆ ಸರಳವೂ, ಸ್ವತಂತ್ರವೂ ಮತ್ತು ಸ್ವಯಂ ಪರಿಪೂರ್ಣವೂ ಆಗಿರುತ್ತವೆ. ನಗರದ ಕೃತಕ ಹಾಗೂ ಆಡಂಬರದಿಂದ ಆದಿವಾಸಿಗಳು ಬಹುದೂರವಿರುತ್ತಾರೆ. ಅವರು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಮುಂದೆ ಬಂದಿಲ್ಲ. ಹಿಂದೆ ಮರದ ತೊಗಟೆ, ಪ್ರಾಣಿಗಳ ಚರ್ಮ, ಕಾಡಿನ ಎಲೆ, ಹುಲ್ಲಿನಿಂದ ಮಾಡಿದ ಉಡುಪುಗಳನ್ನೇ ಧರಿಸುತ್ತಿದ್ದರು. ಅಂಡಮಾನ್ ದ್ವೀಪದ ಒಂಗೆಗಳು ಇಂದಿಗೂ ಬೇಟೆಯಾಡಿ, ಮೀನುಹಿಡಿದು, ಗೆಡ್ಡೆಗೆಣಸುಗಳನ್ನು ತಿಂದು ಬದುಕುತ್ತಾರೆ. ಕೆಲವೊಂದು ಆದಿವಾಸಿಗಳು ಚಕಮಕಿ ಕಲ್ಲುನ್ನು ಕುಟ್ಟಿ ಬೆಂಕಿ ಹಚ್ಚಿಸಿಕೊಳ್ಳುವುದು, ಮರದ ಮೇಲೆ ಜೋಲಿ

ಕಟ್ಟಿ ಮಲಗುವುದು, ಸರಳ ಆಹಾರ ಪದ್ಧತಿ, ಸಾಮೂಹಿಕ ನೃತ್ಯ,ಜಾತ್ರೆ, ಉತ್ಸವ, ಹಬ್ಬಗಳಿಂದ ಅವರು ತಮ್ಮ ಕ್ಷೇತ್ರದಲ್ಲಿಯೇ ಮನರಂಜನೆ ಪಡೆಯುತ್ತಾರೆ. ಕಳ್ಳತನ, ಮೋಸ, ಕಪಟ ಇವುಗಳಾವು ತಿಳಿಯುವುದಿಲ್ಲ. "ಇಂದಿಗೂ ಕೆಲವೊಂದು ಆದಿವಾಸಿಗಳಲ್ಲಿ "ಅದಲು ಬದಲು ಪದ್ಧತಿ" ಅಸ್ತಿತ್ವದಲ್ಲಿದೆ."[೧೧] ಇವರ ಪ್ರಮುಖ ವೃತ್ತಿ ಬೇಟೆ, ಮೀನು ಹಿಡಿಯುವುದು,ಅರಣ್ಯಗಳಿಂದ ಜೇನು, ಹಣ್ಣು, ಹಂಪಲು, ಗೆಡ್ಡೆಗೆಣಸು, ಕಾಡುಮೆಣಸು, ಔಷಧಿಯ ಗಿಡಮೂಲಿಕೆಗಳು ಮುಂತಾದವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಇತ್ತೀಚೆಗೆ ಪಶುಪಾಲನೆ, ಕೃಷಿ ಮತ್ತು ಕೃಷಿಯೇತರ ಕೆಲಸಗಳು ಪ್ರಧಾನ ವೃತ್ತಿಯಾಗಿವೆ. ಹೀಗಾಗಿ ಜೀವನದ ಹಲವಾರು ಕ್ಷೇತ್ರಗಳಲ್ಲಿಯೂ ಅವರು ಸಂಪೂರ್ಣವಾಗಿ ಸ್ವತಂತ್ರರೆಂದು ಹೇಳಬಹುದು.

೬. ರಕ್ತ ಸಂಬಂಧದ ಬಾಂಧವ್ಯ : ಬುಡಕಟ್ಟು ಸಮುದಾಯಗಳಲ್ಲಿ 'ಕರುಳುಬಳ್ಳಿಯ' ಸಂಬಂಧ ಅಥಾ 'ರಕ್ತ ಸಂಬಂಧ'ಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಕುಟುಂಬ, ವಂಶ, ಕುಲ, ಬಳಿ, ಬೆಡಗು ಮುಂತಾದ ಚಿಕ್ಕ ಸಮೂಹಗಳು ರಕ್ತ ಸಂಬಂಧದ ಆಧಾರದ ಮೇಲೆಯೇ ರಚಿತವಾಗಿವೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ಮದುವೆ ಮಂಗಳ ಕಾರ್ಯಗಳಲ್ಲಿ ಸೋದರಮಾವ ಮತ್ತು ಸೋದರತ್ತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಯಾವುದೇ ಕೌಟುಂಬಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಐಕ್ಯತೆ, ಒಗ್ಗಟ್ಟು ಮತ್ತು ಸಹಕಾರ ಭಾವನೆ ಪ್ರಧಾನವಾಗಿರುತ್ತದೆ. ಕೆಲವೊಂದು ಸಲ ಕುಲ, ಬಳಿ, ಬೆಡಗುಗಳು ಬೇರೆ ಬೇರೆಯಿದ್ದರೂ ಸಹೋದರ ಭಾವನೆಯಿಂದ ವರ್ತಿಸುತ್ತಾರೆ. ಉದಾ: -ಕರ್ನಾಟಕದಲ್ಲಿ ಊರುಬೇಡ, ಮ್ಯಾಸಬೇಡ ನಾವು ಸಹೋದರ ಸಂಬಂಧಿಗಳೆಂದೇ ಹೇಳಿಕೊಳ್ಳುತ್ತಾರೆ. ತಾವೆಲ್ಲರು ಒಬ್ಬ ಮೂಲ ಪುರುಷ ಅಥವಾ ಒಂದೇ ಬುಡಕಟ್ಟಿಗೆ ಸೇರಿದವರೆಂದು ಭಾವಿಸುತ್ತಾರೆ. ಆದರೆ ವೈವಾಹಿಕ ಸಂದರ್ಭದಲ್ಲಿ ವಿಭಿನ್ನ ನಿಲುವು ತಾಳುವುದು ಕಂಡುಬರುತ್ತದೆ.

೭. ಒಂದೇ ಧರ್ಮ ಮತ್ತು ಸಂಸ್ಕೃತಿ : ಸರ್ವಚೇತನ ಪಂಥವು ಆದಿವಾಸಿಗಳ ಧಾರ್ಮಿಕ ಭಾವನೆಯಾಗಿದೆ. ಧಾರ್ಮಿಕ ನಿಷ್ಠೆ, ಸಂಪ್ರದಾಯ ಶರಣತೆ, ಪ್ರಕೃತಿ ಪೂಜೆ, ಮೂರ್ತಿ ಪೂಜೆ ಮತ್ತು ಕುಲದೇವತಾ ಪೂಜೆಗಳನ್ನು ಆಚರಿಸುತ್ತಾರೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಕಲ್ಲು ಬಂಡೆಗಳನ್ನು ಅವರು ಪೂಜಿಸುತ್ತಾರೆ. ಇಂದಿಗೂ ಭೂತ-ಪ್ರೇತ, ಮಾಟ-ಮಂತ್ರಗಳ ಬಗೆಗೆ ನಂಬಿಕೆಯುಳ್ಳವರು. ಜೀವನದ ಕಷ್ಟ ನಷ್ಟ, ರೋಗ ರುಜಿನಗಳು ಬಂದಾಗ ಅವರು ವಿಶೇಷವಾಗಿ ಮಾಟ-ಮಂತ್ರಗಳಿಂದಲೇ ಪರಿಹಾರ ಕಂಡು ಕೊಳ್ಳುತ್ತಾರೆ. ಪ್ರತಿಯೊಂದು ಚಟುವಟಿಕೆಗಳಲ್ಲಿ ಧಾರ್ಮಿಕ ಮನೋಭಾವನೆಗಳು ಅವರಲ್ಲಿ ಎದ್ದು ಕಾಣುತ್ತವೆ. ಭಾರತದ ಜನಗಣತಿಯ ವರದಿಯಲ್ಲಿ ಆದಿವಾಸಿ ಬುಡಕಟ್ಟುಗಳನ್ನು 'ಸರ್ವಚೇತನವಾದಿಗಳು' ಎಂದು ಕರೆದಿದ್ದಾರೆ "ಆದಿವಾಸಿಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ, ಅವರ ಇಡೀ ಜೀವನವು ಧರ್ಮದಲ್ಲಿ ಅದ್ದಿ ತೆಗೆದಂತಿದೆ" ಎಂದು ಸರ್. ಜೇಮ್ಸ್ ಫ್ರೇಜರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ".[೧೨]

೮. ಒಳಪಂಗಡ ವಿವಾಹ ಪದ್ದತಿ : ಬುಡಕಟ್ಟುಗಳಲ್ಲಿ ಒಳಪಂಗಡ ವಿವಾಹಗಳು ಜರುಗುತ್ತವೆ. ಸಮುದಾಯದ ಪವಿತ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದ ಈ ಪದ್ದತಿಗಳು ಅಸ್ತಿತ್ವಕ್ಕೆ ಬಂದಿವೆ. ವ್ಯಕ್ತಿಯು ತನ್ನ ಬಾಳ ಸಂಗಾತಿಯನ್ನು ತಾನು ಹುಟ್ಟಿದ ಪಂಗಡದಲ್ಲಿಯೇ ಆರಿಸಿಕೊಳ್ಳಬೇಕು. ಅವರವರ ಕುಲಪದ್ಧತಿಗೆ ತಕ್ಕಂತೆ ಗಂಡು ಹೆಣ್ಣುಗಳ ಆಯ್ಕೆ, ವಿವಾಹದ ನಿಯಮಗಳನ್ನು ಪಾಲಿಸುತ್ತಾರೆ. ಬೇಡರಲ್ಲಿ ಸ್ವಾಮೀಜಿ, ಬ್ರಾಹ್ಮಣ ಪೌರೋಹಿತ್ಯಕ್ಕೆ ಇವರಲ್ಲಿ ಅವಕಾಶವಿದೆ. ರಕ್ತ ಸಂಬಂಧಕ್ಕೆ ಬಹಳ ಮಹತ್ವ ಕೊಟ್ಟು ವಿವಾಹ ಸಂಬಂಧ ಬೆಳೆಸುತ್ತಾರೆ. ಉದಾ: ಊರುಬೇಡ ಗಂಡು ಊರುಬೇಡರ ಹೆಣ್ಣನ್ನೇ ವಿವಾಹಕ್ಕೆ ಆಯ್ಕೆ ಮಾಡಿದರೂ; ಅವರಿಬ್ಬರ ಕುಲ ಅಥವಾ ಬೆಡಗುಗಳು ಬೇರೆಯಾಗಿರುತ್ತವೆ. ಅರಿತೋ ಅರಿಯದೆಯೋ ಅಂತು ಒಂದೇ ಬೆಡಗಿನಲ್ಲಿ ಮದುವೆ ಯಾಗಬಾರದು; ಇದರಿಂದ ವಂಶಾಭಿವೃದ್ಧಿಗೆ ಹಾನಿ ಎಂಬ ವೈಜ್ಞಾನಿಕ ಸತ್ಯವನ್ನು ಬುಡಕಟ್ಟು ಜನರು ತಿಳಿದುಕೊಂಡಂತೆ ಕಾಣುತ್ತದೆ. ಆದಿವಾಸಿಗಳು ಒಳಪಂಗಡ ವಿವಾಹ ಪದ್ಧತಿ ಅನುಸರಿಸಿದರೂ, ಅವರ ವಿವಾಹ ನಿಯಮ, ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇಧನ, ಲೈಂಗಿಕ ಕಟ್ಟುಪಾಡುಗಳು ಮೊದಲಾದವುಗಳ ವಿಷಯವಾಗಿ ಆದಿವಾಸಿಗಳು ಇತರರಿಗಿಂತ ಭಿನ್ನವಾದ, ತನ್ನದೇ ಆದ ನಿಯಮಗಳನ್ನು ಪಾಲಿಸುತ್ತಾರೆ.

೯. ಸೌಂದರ್ಯದ ಪ್ರಜ್ಞೆ ಉಳ್ಳವರು : ಸರಳ ಮತ್ತು ಸ್ವತಂತ್ರ ಜೀವಿಗಳಾದ ಆದಿವಾಸಿಗಳು, ತಮ್ಮ ಸೌಂದರ್ಯಕ್ಕೆ ಅಷ್ಟೇ ಮಹತ್ವ ಕೊಡುತ್ತಾರೆ. ಸೌಂದರ್ಯೋಪಾಸಕರು ಮತ್ತು ಕಲಾರಾಧಕರಾದ ಆದಿವಾಸಿಗಳ ಜೀವನದಲ್ಲಿ ಗಾಯನ, ನೃತ್ಯ, ಕೆತ್ತನೆ, ಅಲಂಕಾರ, ವಿಚಿತ್ರ ರೀತಿಯ ಒಡವೆ ವಸ್ತ್ರಗಳನ್ನು ಹೊಂದಿದ ಕಲಾವಂತರು. ಗುಹೆ, ಬಂಡೆ ಮತ್ತು ಮಾನವನ ತಲೆಬುರುಡೆಗಳ ಮೇಲೆ ಚಿತ್ರ ಬರೆಯುವುದು, ಬುಟ್ಟಿ ಹೆಣೆಯುವುದು, ಆಟದ ಸಾಮಾನುಗಳನ್ನು ತಯಾರಿಸುವುದು, ಬಿಲ್ಲು, ಬಾಣ ಮತ್ತು ದೇವರುಗಳನ್ನು ಅನೇಕ ಬಗೆಯಲ್ಲಿ ಅಲಂಕರಿಸಿಕೊಳ್ಳುತ್ತಾರೆ. ಆದಿವಾಸಿ ಸ್ತ್ರೀಯರು ಕೇಶಾಲಂಕಾರ, ಹೂವು ಮುಡಿಯುವುದು, ಆಭರಣ, ಕೈ ಬಳೆಗಳು, ರಟ್ಟೆಕಡಗ, ಬದ್ದು, ಕಂಠಾಭರಣ, ಬಾಚಣಿಕೆ, ಬಿದರಿನ ವಸ್ತುಗಳು, ವಿವಿಧ ಜಾತಿಯ ಮಣಿ ಸರಗಳು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು, ಪ್ರಾಣಿಗಳ ಗರಿ,· ಕೊಂಬು, ಹಲ್ಲು, ಉಗುರುಗಳನ್ನೂ ಕೊಡ ಅಲಂಕಾರಕ್ಕಾಗಿ ಬಳಸುತ್ತಿದ್ದರು. ಇಂದು ಯುವತಿಯರು ಧರಿಸುವುದಿಲ್ಲ.

೧೦. ರಕ್ಷಣೆ ಮತ್ತು ಐಕ್ಯತೆಯ ಭಾವನೆ : ಆದಿವಾಸಿಗಳು ಯಾವಾಗಲೂ ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ತಮ್ಮ ಸಮುದಾಯದ ಗುಟ್ಟನ್ನು ಕಾಪಾಡಿಕೊಂಡು ಬರುತ್ತಾರೆ. ಹೊರಗಿನ ಜನರನ್ನು ಸಂಶಯದಿಂದಲೇ ಕಾಣುತ್ತಾರೆ. ಕೆಲವೊಂದು ಹಟ್ಟಿ, ಹಾಡಿ, ಪಾಳ್ಯ, ದೊಡ್ಡಿಗಳ ಸುತ್ತ ಮುಳ್ಳುಬೇಲಿಯನ್ನು ಹಾಕಿ ಕೊಳ್ಳುತ್ತಾರೆ. ಈ ಬೇಲಿ ರಕ್ಷಣೆ ಮತ್ತು ಪವಿತ್ರತೆ ಎರಡೂ ದೃಷ್ಟಿಯಿಂದ ಅನುಕೂಲವಾಗುತ್ತದೆ. ಉದಾ: ಕರ್ನಾಟಕದ ಬೇಡರ ಹಟ್ಟಿಗಳು. ಅಪಾಯ ಮತ್ತು ಸಮಸ್ಯೆಗಳು ಎದುರಾದಾಗ ಸಾಮುದಾಯಿಕ ಭಾವನೆ ಅವರಲ್ಲಿ ತೀವ್ರವಾಗಿರುತ್ತದೆ. ತಮ್ಮ ಸಮೂಹಕ್ಕೋಸ್ಕರ ಪ್ರಾಣಕೊಡಲು ಸಿದ್ಧರಾಗುತ್ತಾರೆ. ಉದಾ: ಹಲಗಲಿ ಬೇಡರ ದುರಂತ.

ಆದಿವಾಸಿಗಳು ರಕ್ಷಣೆ ಮತ್ತು ಐಕ್ಯತೆಗೆ ಬಹಳ ಮಹತ್ವ ಕೊಡುವುದರಿಂದ ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ವಾಸಿಸುವ ಮ್ಯಾಸಬೇಡ, ಊರುಬೇಡ, ಚೆಂಚು ಮೊಂಡಬೇಡರು ಮೊದಲಾದ ಬುಡಕಟ್ಟುಗಳು ತಾವು ವಾಸಿಸುವ ಪ್ರದೇಶದ ಸುತ್ತ ಮುಳ್ಳು ಬೇಲಿ ಹಾಕಿಕೊಳ್ಳುತ್ತಾರೆ.

೧.೨.೩. ಭಾರತದಲ್ಲಿ ಬುಡಕಟ್ಟುಗಳ ವಿಂಗಡಣೆ

ಆದಿವಾಸಿಗಳು ದೇಶಾದ್ಯಂತ ಚದುರಿ ಹೋಗಿ ವಿವಿಧ ಭಾಷೆ, ಸಂಸ್ಕೃತಿ ಮತ್ತು ಜನಾಂಗಿಯ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಬಹುಸಂಖ್ಯಾತ ಆದಿವಾಸಿಗಳನ್ನು ಹೊಂದಿರುವ ರಾಜ್ಯಗಳು ಪ್ರಮುಖವಾಗಿ ಮಧ್ಯಪ್ರದೇಶ, ಒರಿಸ್ಸಾ ಮತ್ತು ಬಿಹಾರ; ಈ ಮೂರು ರಾಜ್ಯಗಳಲ್ಲಿ ಅರ್ಧದಷ್ಟು ಆದಿವಾಸಿಗಳು ಕಂಡು ಬರುತ್ತಾರೆ. ಇದರಲ್ಲಿ ಮಧ್ಯಪ್ರದೇಶದಲ್ಲಿ ಹೆಚ್ಚು ಆದಿವಾಸಿಗಳು ಕಂಡು ಬರುತ್ತಾರೆ. ಬಂಗಾಲ ಉಪಸಾಗರದಲ್ಲಿರುವ ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ಅಂಗೆ, ಒಂಗೆ ಮತ್ತು ಜಾರವ ಆದಿವಾಸಿ ಪಂಗಡಗಳಿವೆ. ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಅವರು ವಾಸಿಸುವ ಭೂಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ.

೧. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು

ಭಾರತದ ಈಶಾನ್ಯ ಗಿರಿಕಣಿವೆ, ಹಾಗೂ ಜಮುನಾ, ಪದ್ಮಾ ಮತ್ತು ಬ್ರಹ್ಮಪುತ್ರಾ ನದಿ ದಂಡೆಗಳಲ್ಲಿ ವಾಸಿಸುವ ಆದಿವಾಸಿಗಳನ್ನು ಈಶಾನ್ಯ ವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಈ ವಲಯದ ಆದಿವಾಸಿಗಳು ದೇಶದ ಒಟ್ಟು ಆದಿವಾಸಿಗಳಲ್ಲಿ ಶೇ. ೧೨.೩೩% ರಷ್ಟಿದ್ದಾರೆ. ಅಸ್ಸಾಂ, ನಾಗಾಲ್ಯಾಂಡ್, ಪಂಜಾಬ್, ಹಿಮಾಚಲಪ್ರದೇಶ, ಉತ್ತರಪ್ರದೇಶ, ಅರುಣಾಚಲ ಪ್ರದೇಶ, ನೇಪಾಳ, ಭೂತಾನ, ಮೇಘಾಲಯ ಮತ್ತು ಸಿಕ್ಕಿಂ ಕೂಡ ಈ ವಲಯಕ್ಕೆ ಸೇರಿಕೊಂಡಿವೆ. ಬಂಗಾಳ ಮತ್ತು ಬಿಹಾರ ರಾಜ್ಯಗಳು ಈ ವಲಯದಲ್ಲಿಯೇ ಇವೆ. ಈ ಭಾಗದ ಮುಖ್ಯ ಆದಿವಾಸಿಗಳೆಂದರೆ ನಾಗಾ, ಅಂಗಾಮಿ, ಖಾಸಿ, ಆಕಾ, ಗಾರೋ, ಲಿಂಬೂ, ಲೆಪ್ಚಾ, ಗುರುಂಗ, ಮಿಖಿರ್,ಕಚಾಲಿ, ರಾಭಾ, ದುಶ್ಮೀ, ಚಕ್ಮೀ, ದಾಪ್ಲಾ ಇತ್ಯಾದಿ.

ಈಶಾನ್ಯ ವಲಯದ ಆದಿವಾಸಿಗಳು ಸಾಮಾನ್ಯವಾಗಿ ಮಂಗೋಲಿಯಾ ಬುಡಕಟ್ಟಿಗೆ ಸೇರಿದವರಾಗಿದ್ದಾರೆ. ಇವರು "ಟಿಬೆಟೊ-ಚೀನ" ಸೇರಿದ ಭಾಷೆಗಳನ್ನಾಡುತ್ತಾರೆ. ಇವರ ಪ್ರಮುಖ ಗುಣಲಕ್ಷಣಗಳೆಂದರೆ ಹಳದಿ ಬಣ್ಣ, ಅರ್ಧತೆರೆದಂತೆ ಕಾಣುವ ಕಣ್ಣುಗಳು, ಚಪ್ಪಟೆ ಮೂಗು, ಒರಟಾದ ಕೂದಲು, ಉದ್ದತಲೆ, ಸರಸಾರಿ ಎತ್ತರ. ಈ ಪ್ರದೇಶದ ಆದಿವಾಸಿಗಳು ನಾಗರೀಕತೆ ಮತ್ತು ಕೃಷಿಯಲ್ಲಿ ಮುಂದುವರೆದ ಆಧುನಿಕ ಗುಣಲಕ್ಷಣಗಳು ಹಾಗೂ ರಾಜಕೀಯ ಪ್ರಜ್ಞೆ ಉಳ್ಳವರು ಆಗಿದ್ದಾರೆ. ಗೃಹ ಕೈಗಾರಿಕೆಗಳಲ್ಲಿ ನೂಲುವುದು, ನೇಕಾರಿಕೆ ಮೊದಲಾದ ವೃತ್ತಿಗಳನ್ನು ಮಾಡುತ್ತಾರೆ. ಆದರೆ ಕಷ್ಟ ಸಹಿಷ್ಣುಗಳು, ಸದೃಢಕಾಯದವರೂ, ಸ್ವತಂತ್ರ ಪ್ರಿಯರೂ ಆಗಿರುವುದರ ಜೊತೆಗೆ ಯುದ್ಧ, ಕಲಹ ಹಾಗೂ ಬೇಟೆಯಲ್ಲಿ ಆಸಕ್ತಿಯುಳ್ಳ ಜನಾಂಗ. ಸೌಂದರ್ಯೋಪಾಸಕರು ಹಾಗೂ ಕಲಾಭಿರುಚಿಯುಳ್ಳವರು ಆಗಿರುತ್ತಾರೆ. ನಾಗಾ ಜನರ ಸಮೂಹ ನೃತ್ಯ ಮತ್ತು ಗಾಯನ

ವಿಶ್ವವಿಖ್ಯಾತಿಯನ್ನು ಪಡೆದಿದೆ. ಇವರು ಮಾನವನ ಬೇಟೆಯಾಡಿ ಮನೆಯಲ್ಲಿ ತಲೆಬುರುಡೆಗಳನ್ನು ಶೇಖರಿಸಿಡುತ್ತಾರೆ. ದೇವರು ಧರ್ಮ ಮತ್ತು ದೈವಿಕ ನಂಬಿಕೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಇತ್ತೀಚೆಗೆ ವ್ಯವಸಾಯ ವೃತ್ತಿ ಕೈಗೊಂಡು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುತ್ತಿದ್ದಾರೆ.

೨. ಮಧ್ಯವಲಯದ ಆದಿವಾಸಿಗಳು

ಈ ವಲಯವು ಕೃಷ್ಣ, ನರ್ಮದ ಮತ್ತು ಗೋದಾವರಿ ನದಿಗಳ ಎಡ ಬಲ ದಂಡೆಗಳಲ್ಲಿ ವಾಸಿಸುವ ಆದಿವಾಸಿಗಳನ್ನು ಮಧ್ಯವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಮಧ್ಯ ಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಬಿಹಾರ ರಾಜ್ಯಗಳು ಮಧ್ಯವಲಯದಲ್ಲಿ ಸಮಾವೇಶ ಗೊಂಡಿವೆ. ದಕ್ಷಿಣ ಪ್ರಸ್ಥಭೂಮಿಯೆಂದು ಕರೆಯಲ್ಪಡುವ ಈ ಪ್ರದೇಶಗಳಲ್ಲಿ ಸಂತಾಲ, ಮುಂಡಾ, ಗೊಂಡಾ, ಸವರಾ, ಭಿಲ್ಲ, ಬೈಗಾ, ಗಡಬ, ಕೋಳಿ, ಖರಿಯಾ, ಮುಂಡಾ, ಬಿರ್‌ಹಾರ್, ಜುವಾಂಗ, ಕಂಧ ಮುಂತಾದ ಆದಿವಾಸಿಗಳು ಈ ವಲಯದಲ್ಲಿ ನೆಲೆಸಿದ್ದಾರೆ. "ಆರ್ಯ ಮತ್ತು ಆಸ್ಟ್ರಿಕ್" ಭಾಷೆಗಳನ್ನು ಬಳಸುತ್ತಾರೆ. ಈ ವಲಯದ ಆದಿವಾಸಿಗಳಲ್ಲಿ 'ಗೊಂಡಾ' ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಅವರು ವಾಸಿಸುವ ಪ್ರದೇಶವನ್ನು 'ಗೊಂಡಾರಣ್ಯ' ಎಂದು ಕರೆಯಲಾಗುತ್ತದೆ. ಗೊಂಡರ ನಂತರ ಹೆಚ್ಚು ಪ್ರಮಾಣದಲ್ಲಿ ಕಂಡು ಬರುವರೆಂದರೆ 'ಸಂತಾಲರು'. ಈ ವಲಯ ಜನಸಂಖ್ಯೆ ಮತ್ತು ಪ್ರದೇಶಗಳ ವಿಸ್ತಾರ ದೃಷ್ಟಿಯಿಂದ ಅತ್ಯಂತ ದೊಡ್ಡದಾಗಿದೆ.

ಮಧ್ಯವರ್ತಿ ನಿಲವು, ಕಪ್ಪು ಬಣ್ಣ, ಉದ್ದ ತಲೆ, ಗುಂಗುರು ಕೂದಲು, ಚಿಕ್ಕದಾದ ಚಪ್ಪಟೆಯಾದ ಮೂಗು, ಸಧೃಡವಾದ ಶರೀರ, ಚಿಕ್ಕದಾದ ಹಣೆ ಇವು ಮಧ್ಯ ವಲಯದ ಅದಿ ವಾಸಿಗಳ ದೈಹಿಕ ಲಕ್ಷಣಗಳು. ಇವರು ಅತೀ ಹಿಂದುಳಿದ ಅನಾಗರಿಕರಾಗಿದ್ದಾರೆ. ಬೇಟೆ, ಆಹಾರ ಸಂಗ್ರಹಣೆ, ಸಂಚಾರಿ ಬೇಸಾಯ,ಬೆತ್ತಲೆಯಾಗಿ ತಿರುಗುವುದು, ತೊಗಲಿನ ಅಥವಾ ಹುಲ್ಲಿನ ಉಡುಪು ಧರಿಸುವುದು, ಸಮೂಹಗಾನ ಮತ್ತು ನೃತ್ಯ ಕಾರ್ಯಕ್ರಮಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಪಿತೃಪ್ರಧಾನ ಕುಟುಂಬ, ಅಪಹರಣ ವಿವಾಹ, ತಮ್ಮದೇ ಆದ ಪಂಚಾಯಿತಿ ವ್ಯವಸ್ಥೆ, ಕುಲ ಪದ್ಧತಿಗಳು ಮೊದಲಾದ ರೂಢಿ ಸಂಪ್ರದಾಯಗಳು ಇವರಲ್ಲಿ ಕಂಡು ಬರುತ್ತವೆ. ಈ ಪ್ರದೇಶದ ಭಿಲ್ಲ ಮತ್ತು ಬೇಡ ಜನಾಂಗದಲ್ಲಿ 'ಪರೀಕ್ಷೆ ಮದುವೆ' ಮತ್ತು 'ಅಪಹರಣ' ವಿವಾಹ ಪದ್ಧತಿಗಳಿವೆ. ಗೊಂಡಾ ಆದಿವಾಸಿಗಳಲ್ಲಿ ಬಹುಪತ್ನಿತ್ವ ಹಾಗೂ ಸಂತಾಲರಲ್ಲಿ ಬಹುಪತಿತ್ವ ವಿವಾಹ ಪದ್ಧತಿಗಳು ಬಳಕೆಯಲ್ಲಿವೆ. ಬುಟ್ಟಿ ಹೆಣೆಯುವುದು, ಮರದ ಕೆತ್ತನೆಯ ಕೆಲಸದಲ್ಲಿ ಇವರು ನಿಪುಣರಾಗಿದ್ದಾರೆ. ವ್ಯವಸಾಯ ಪ್ರಧಾನ ವೃತ್ತಿಯಾಗಿದೆ. ಆದರೂ ಆರ್ಥಿಕವಾಗಿ ಇವರು ಸ್ವಾವಲಂಬಿಗಳಾಗಿಲ್ಲ ಆದರೆ ಶಾಂತ ಸ್ವಾಭಾವದವರು.

೩. ದಕ್ಷಿಣ ವಲಯದ ಆದಿವಾಸಿಗಳು

ದಕ್ಷಿಣ ಪ್ರಸ್ಥ ಭೂಮಿಯಿಂದ, ಕೃಷ್ಣಾ ನದಿಯ ದಕ್ಷಿಣ ಪ್ರದೇಶಗಳಲ್ಲಿ ಹಾಗೂ ಅಂಡ

ಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ವಾಸಿಸುವ ಆದಿವಾಸಿಗಳನ್ನು ದಕ್ಷಿಣ ವಲಯದ ಆದಿವಾಸಿಗಳೆಂದು ಕರೆಯಲಾಗುವುದು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ನೀಲಗಿರಿಬೆಟ್ಟ ಮತ್ತು ಪಶ್ಚಿಮ ಘಟ್ಟ ಪ್ರದೇಶಗಳನ್ನು ಒಳಗೊಂಡಿದೆ. ಈ ವಲಯದ ಪ್ರಮುಖ ಆದಿವಾಸಿಗಳೆಂದರೆ ತೋಡಾ, ಬಡಗಾ, ಸೋಲಿಗ, ಇರುಳಾ, ಚೆಂಚು, ಊರುಬೇಡರ, ಮೇದಾ, ಕಾಡುಗೊಲ್ಲ, ಕಾಡುಕುರುಬ, ಜಿಪ್ಸಿ, ಜ್ಯೂ ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ಬರುತ್ತಾರೆ.

ಉಳಿದ ವಲಯಗಳ ಆದಿವಾಸಿಗಳಿಗೆ ಹೋಲಿಸಿದರೆ ಈ ಪ್ರದೇಶದ ಆದಿವಾಸಿಗಳು ನಾಗರೀಕತೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಕಲ್ಲನ್ನು ತಿಕ್ಕಿ ಬೆಂಕಿ ಹಚ್ಚುವುದು, ಚರ್ಮ, ತೊಗಟೆ, ಎಲೆ ಹಾಗೂ ಹುಲ್ಲುಗಳ ಉಡುಪು ಧರಿಸುವುದು. ಬಿದಿರು ಬೊಂಬುಗಳಲ್ಲಿ ನೀರು ಕುಡಿಯುವುದು, ಮರದ ಮೇಲೆ ಜೋಲಿ ಕಟ್ಟಿ ಮಲಗುವುದು, ಕಂದ ಮೂಲಗಳನ್ನು ಸಂಗ್ರಹಿಸುವುದು ಮತ್ತು ಬೇಟೆ, ಪಶುಪಾಲನೆ ಹಾಗೂ ಕೃಷಿಯನ್ನು ಅವಲಂಭಿಸಿದ್ದಾರೆ. ಭಾರತದ ಮೂಲನಿವಾಸಿಗಳೆಂದು ಕರೆಯುವ ಈ ವಲಯದ ಆದಿವಾಸಿಗಳು, ದ್ರಾವಿಡ ಭಾಷೆ ಮತ್ತು ಸಂಸ್ಕೃತಿಯನ್ನು ಹೋಲುತ್ತಾರೆ. ಕನ್ನಡ, ತೆಲಗು, ಮಲೆಯಾಳಿ ಮುಂತಾದ ಭಾಷೆಗಳನ್ನು ಅಪಭ್ರಂಶವಾಗಿ ಬಳಸುತ್ತಾರೆ. ಬಹುಸಂಖ್ಯಾತ ಆದಿವಾಸಿಗಳಲ್ಲಿ ಮಾತೃಪ್ರಧಾನ ಕುಟುಂಬಗಳು ಮರೆಯಾಗಿ ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳು ಅಸ್ತಿತ್ವದಲ್ಲಿವೆ.

ನಿಗ್ರೋಯಿಡ್ ಜನಾಂಗದವರಂತೆ ಕಪ್ಪುಬಣ್ಣ, ಚಪ್ಪಟೆ ಅಗಲ ಮೂಗು, ದಪ್ಪ ತುಟಿ, ಒರಟಾದ ಕೂದಲು, ಮಧ್ಯಮ ನಿಲುವು, ಉದ್ದತಲೆ, ಸದೃಢ ಶರೀರ, ಧೈರ್ಯಶಾಲಿಗಳು ಮುಂತಾದ ಗುಣಲಕ್ಷಣಗಳನ್ನು ಈ ಪ್ರದೇಶದ ಆದಿವಾಸಿಗಳು ಹೊಂದಿದ್ದಾರೆ. ಸೌಂದರ್ಯದ ಸಂಕೇತವಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ತೋಡರು ಎಮ್ಮೆಗಳನ್ನು ಪೂಜಿಸುತ್ತಾರೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 'ಬೇಡ ಬುಡಕಟ್ಟು ಮಹಿಳೆ' ದಕ್ಷಿಣ ವಲಯದ ಆದಿವಾಸಿಗಳ ಗುಂಪಿನಲ್ಲಿಯೇ ಬರುತ್ತಾಳೆ ಈ ವಲಯದಲ್ಲಿ ಬರುವ ಆದಿವಾಸಿಗಳ ಎಲ್ಲಾ ಗುಣಲಕ್ಷಣಗಳನ್ನು ಬೇಡ ಬುಡಕಟ್ಟು ಸಮುದಾಯ ಹೊಂದಿದೆ.

೧.೨.೪. ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಸ್ಥಿತಿಗತಿಗಳು

ಭಾರತದಲ್ಲಿ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿವೆ. ಅತಿವೃಷ್ಟಿ, ಅನಾವೃಷ್ಟಿ, ಸೂರ್ಯನ ಬೆಳಕು ಕೂಡ ಅಪರೂಪವಾಗಿರುವ, ಗಾಳಿ ಬೆಳಕಿನ ಕೊರತೆ, ಕಾಡು ಪ್ರಾಣಿ ಮತ್ತು ಪ್ರವಾಹಕ್ಕೆ ಬಲಿಯಾಗುವುದು ಮುಂತಾದ ನೈಸರ್ಗಿಕ ದುರಂತಕ್ಕೆ ಆದಿವಾಸಿಗಳು ಒಳಗಾಗುತ್ತಿದ್ದಾರೆ. ಮೂಢನಂಬಿಕೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಪ್ರಾಣಿಬಲಿ ಮುಂತಾದ ಸಾಮಾಜಿಕ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ಕಡಿಮೆ ಉತ್ಪಾದನೆ, ದುಂದುವೆಚ್ಚ, ಶ್ರೀಮಂತರಿಂದ ಶೋಷಣೆಯಿಂದ ಬದುಕನ್ನು ಸಾಗಿಸುವುದರಿಂದ ಅವರ ಆರ್ಥಿಕ ಜೀವನ ಕಷ್ಟಕರವಾಗಿದೆ. ಬೆಟ್ಟ,

ಗುಡ್ಡ, ಕೊರಕಲು, ಅರಣ್ಯ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿಗಳಿಗೆ ಸಾರಿಗೆ ಸಂಪರ್ಕಗಳ ಕೊರತೆಯಿಂದ ನಾಗರೀಕ ಜನರ ಸಂಪರ್ಕವೇ ಇರಲಾರದು.ಅವರ ರೀತಿ ನೀತಿ, ಆಹಾರ, ಉಡಿಗೆ, ತೊಡಿಗೆ, ರಾಜಕೀಯ, ಆರ್ಥಿಕ ಚಟುವಟಿಕೆಗಳ ಮೇಲೆ ಆಧುನಿಕತೆಯ ಪರಿಣಾಮಬೀರಲಾರದು.

ಚಾತುರ್ವರ್ಣ ಮತ್ತು ಜಾತಿ ಪದ್ಧತಿಯಿಂದ ಬೇರ್ಪಟ್ಟಿರುವ ಆದಿವಾಸಿ ಸಮುದಾಯಗಳ ಮೇಲೆ ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಪ್ರಭಾವದಿಂದಲೂ ಅವರ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಹಲವು ಸಂಸ್ಕೃತಿಗಳ ಪ್ರಭಾವ ಮತ್ತು ಒತ್ತಡದಿಂದ ಆದಿವಾಸಿಗಳ ಸಾಮಾಜಿಕ ಒಗ್ಗಟ್ಟು ಮತ್ತು ಐಕ್ಯತೆಗಳು ನಾಶವಾದವು. ೧೯ನೇ ಶತಮಾನದಲ್ಲಿ ಇಂಗ್ಲೆಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಪಾದ್ರಿ ವೆರಿಯರ್ ಎಲ್ವಿನ್ ಬುಡಕಟ್ಟುಗಳ ಅಧ್ಯಯನದಲ್ಲಿ ತೊಡಗಿ ನಂತರ ತನ್ನ ಧರ್ಮದ ಪ್ರಚಾರ ಕಾರ್ಯವನ್ನೇ ಕೈ ಬಿಟ್ಟಂಥ ವ್ಯಕ್ತಿ; ಮುಂದೆ ಆದಿವಾಸಿಗಳ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಕೊನೆಗೆ ಗೊಂಡರ ಗಿರಿಜನ ಕನ್ಯೆ 'ಲೀಲಾ'ಳನ್ನೇ ವಿವಾಹ ಮಾಡಿಕೊಂಡ. ಆದಿವಾಸಿಗಳಿಗೆ ನಾಗರೀಕತೆಯ ಪ್ರಭಾವ ಉಂಟುಮಾಡುವ ಅಥವಾ ಹಿಂದೂ ಸಂಸ್ಕೃತಿಯೊಡನೆ ಗಿರಿಜನರ ಸಂಸ್ಕೃತಿಯನ್ನು ವಿಲೀನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವೆರಿಯರ್ ಎಲ್ವಿನ್ ಒಪ್ಪಲಿಲ್ಲ.

ಭಾರತದ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ನಿರಂತರವಾಗಿ ಪರಿವರ್ತನೆ ಹೊಂದುತ್ತಲೇ ಬಂದಿವೆ. ದೇಶದ ಸಂಪತ್ತನ್ನು ದೋಚಿಕೊಳ್ಳಲು ಪ್ರಯತ್ನಿಸುತ್ತಿದ್ದ ಬ್ರಿಟಿಷರಿಗೆ, ಆದಿವಾಸಿಗಳೊಂದಿಗೆ ನಿರಂತರ ಘರ್ಷಣೆ ಮಾಡಬೇಕಾದ ಪ್ರಸಂಗಗಳು ಉಂಟಾದವು. ಕೆಲವೊಂದು ಆದಿವಾಸಿಗಳ ನೆಲೆಗಳಿಗೆ ಕ್ರೈಸ್ತ ಪಾದ್ರಿಗಳನ್ನು ಕಳುಹಿಸಿ, ಧರ್ಮ ಪ್ರಚಾರ ಮಾಡುವ ನೆಪದಲ್ಲಿ ಬುಡಕಟ್ಟು ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಳಿಸಲು ಪ್ರಯತ್ನಿಸಿದರು. ತಮ್ಮ ಸಂಸ್ಕೃತಿ ಮತ್ತು ಸಮುದಾಯಗಳಿಗೆ ಧಕ್ಕೆ ಉಂಟುಮಾಡುವ, ಸ್ಥಳಾಂತರಿಸುವ, ಕಿರುಕುಳ ಕೊಡುವ, ಬ್ರಿಟಿಷರ ನೀತಿ ಮತ್ತು ಧೋರಣೆಗಳಿಗೆ ಪ್ರತಿಭಟಿಸಿದ ಆದಿವಾಸಿಗಳಿಗೆ ವಿನಾಕಾರಣವಾಗಿ ಅಪರಾಧಿಗಳೆಂಬ ಅಪವಾದವನ್ನು ಕೊಟ್ಟರು. ಬ್ರಿಟಿಷರ ಹೊಸ ಹೊಸ ಯೋಜನೆಗಳು ಮತ್ತು ಆಡಳಿತ ನಡೆಸುವ ನೆಪದಲ್ಲಿ 'ಬುಡಕಟ್ಟು ಜನರಿಗೆ' ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಅನೇಕ ಸಮಸ್ಯೆಗಳನ್ನು ಹುಟ್ಟಿ ಹಾಕುತ್ತಿದ್ದರು. ಕೆಲವೊಂದು ಆದಿವಾಸಿಗಳು ಹಣದ ಆಸೆಯಿಂದ ದೇಶ ದ್ರೋಹಿ ಕಾರ್ಯಗಳಲ್ಲಿತೊಡಗಿದರು. ಮತ್ತೆ ಕೆಲವರು ಬ್ರಿಟಿಷ ಸೈನ್ಯ ಪಡೆಯಲ್ಲಿ ಸೇರಿಕೊಂಡು ನಮ್ಮ ದೇಶದ ವಿರುದ್ಧವೇ ಕದನರಂಗಕ್ಕಿಳಿದು ದೇಶ ದ್ರೋಹಿಗಳಾದರು. ಸ್ವಾತಂತ್ರ್ಯ ನಂತರ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಭಾರತ ಹಲವು ಉಪಯುಕ್ತ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಆದಿವಾಸಿಗಳು ವಾಸಿಸುವ ಪ್ರದೇಶಗಳಲ್ಲೇ ಶಾಲೆಗಳನ್ನು ತೆರೆಯುವುದರ ಜೊತೆಗೆ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಯಿತು. ಆದಿವಾಸಿಗಳ

ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ "ಆದಿವಾಸಿಗಳ ಸಮಗ್ರ ಅಭಿವೃದ್ಧಿ ಯೋಜನೆ"ಯನ್ನು ಪ್ರಾರಂಭಿಸಲಾಗಿದೆ. ವ್ಯಾಪಾರಿಗಳಿಂದಾಗುವ ಆರ್ಥಿಕ ಶೋಷಣೆ ತಪ್ಪಿಸಲು "ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರಿ ಸಂಘ"ಗಳನ್ನು ಸ್ಥಾಪಿಸಲಾಗಿದೆ. ಆರೋಗ್ಯ ಮತ್ತು ನೈರ್ಮಲ್ಯಗಳ ದೃಷ್ಟಿಯಿಂದ ಆದಿವಾಸಿ ಪ್ರದೇಶಗಳಲ್ಲಿಯೇ ಪ್ರಾಥಮಿಕ ಚಿಕಿತ್ಸಾಲಯ ಹಾಗೂ ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಆದಿವಾಸಿಗಳು ಮುಂದೆ ಬರಲು ಸಾರಿಗೆ ಸಂಪರ್ಕಗಳ ವ್ಯವಸ್ಥೆ ಕಲ್ಪಿಸಿ ಕೊಡಲಾಗಿದೆ. ಆದರೆ ಇನ್ನೂ ಅಭಿವೃದ್ಧಿ ಹೊಂದಿಲ್ಲ.

೧.೩. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

ಬುಡಕಟ್ಟುಗಳ ಅಧ್ಯಯನ ಕುರಿತು ಹೇಳಿಕೊಳ್ಳುವಂಥ ಕೆಲಸ-ಕಾರ್ಯಗಳು ಕರ್ನಾಟಕದಲ್ಲಿ ನಡೆದಿಲ್ಲ. "ಭಾರತ ಸರಕಾರ ಕರ್ನಾಟಕದಲ್ಲಿ ಗುರುತಿಸಿರುವ ಅರವತ್ಮೂರು ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟಜಾತಿಗೆ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಿದ್ದಾರೆ. ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಗಣನೆಗೆ ತೆಗೆದುಕೊಂಡರೆ ಕರ್ನಾಟದಲ್ಲಿ ಬುಡಕಟ್ಟುಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ."[೧೩] ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕುರಿತಂತೆ ಇಂಗ್ಲೀಷಿನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಕಾರಣ. "ಎ.ಎ.ಡಿ. ಲೂಯಿಜ್ ಅವರು Tribes of Mysore ಎಂಬ ತಮ್ಮ ಕೃತಿಯಲ್ಲಿ ಮೈಸೂರು ದೇಶದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರ ಮೈಸೂರು ರಾಜ್ಯದಲ್ಲಿ ೬೩ ಪರಿಶಿಷ್ಟ ಬುಡಕಟ್ಟುಗಳನ್ನು ಮಾನ್ಯ ಮಾಡಿದೆ."[೧೪] ಆದರೆ ಭಾರತದ ಯಾವುದೇ ಒಂದು ಜಾತಿ ಅಥವಾ ಜನಾಂಗ ಪರಿಶಿಷ್ಟ ಬುಡಕಟ್ಟಿನ ಮಾನ್ಯತೆ ಪಡೆಯಬೇಕಾದರೆ ಭಾರತದ ಸಂವಿಧಾನದ ೩೪೨ನೆಯ ನಿಯಮದ ಪ್ರಕಾರ ಅದು ರಾಷ್ಟ್ರಾಧ್ಯಕ್ಷರಿಂದ ಮೊದಲು ಸೂಚಿತವಾಗಿ ನಂತರ ಸಂಸತ್ತಿನಲ್ಲಿ ಒಪ್ಪಿತವಾಗಬೇಕು. ಭಾರತ ಸರ್ಕಾರ 'ಪರಿಶಿಷ್ಟ ಬುಡಕಟ್ಟು' ಎಂದು ಗುರುತಿಸುವಾಗ ಆ ಸಮುದಾಯದ ಗುಣಲಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆಯೇ 'ಪರಿಶಿಷ್ಟ ವರ್ಗಗಳ' ಪಟ್ಟಿಮಾಡುತ್ತದೆ. ಈ ಕಾರಣದಿಂದಾಗಿ ಭಾರತದ ಕೆಲವು 'ಬುಡಕಟ್ಟುಗಳು' ಪರಿಶಿಷ್ಟ ಬುಡಕಟ್ಟುಗಳ ಮಾನ್ಯತೆ ಪಡೆಯದೆ ಹೋಗಬಹುದು. ಆದ್ದರಿಂದ ಕರ್ನಾಟಕದ ಪ್ರಮುಖ ಬುಡಕಟ್ಟು ಆದ ಬೇಡರು ಪರಿಶಿಷ್ಟ ಬುಡಕಟ್ಟುಗಳಲ್ಲಿ ಬರುತ್ತಾರೆ.

ಕರ್ನಾಟಕದಲ್ಲಿ ಇಲ್ಲಿಯವರೆಗೆ ನಡೆದಿರುವ ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ಅವಲೋಕಿಸಿದರೆ ಪ್ರಾರಂಭದ ದಿನಗಳಲ್ಲಿ ಹೇಳಿಕೊಳ್ಳುವಂತ ಅಧ್ಯಯನಗಳು ನಡೆಯದಿದ್ದರೂ ನಡೆದಿರುವಷ್ಟು ಅಧ್ಯಯನ ಮುಂದಿನ ಸಂಶೋಧಕರಿಗೆ ಮಾರ್ಗಸೂಚಿಗಳಾಗಿವೆ. ಮೊಟ್ಟ ಮೊದಲು

ದೇಶ ಮತ್ತು ವಿದೇಶಗಳ ವಿದ್ವಾಂಸರುಗಳಿಂದ ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ 'Caste and tribes of southern India' ಎಂಬ ಕೃತಿಯು ದಕ್ಷಿಣ ಭಾರತದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ೧೯೨೭-೧೯೩೫ರಲ್ಲಿ ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ 'The Mysore tribes and castes' ಎಂಬ ಕೃತಿಗಳು ಬುಡಕಟ್ಟು ಅಧ್ಯಯನದ ಮಹತ್ವ ಕೊಡುಗೆಗಳಾಗಿವೆ. ೧೯೨೭ರಲ್ಲಿ ಸೈಯದ್ ಸಿರಾಜ್-ಉಲ್-ಹುಸೇನ್ ಅವರ 'The caste and tribes of Nizam's Daminion' ಎಂಬ ಗ್ರಂಥದಲ್ಲಿ ಹೈದರಾಬಾದ್ ಕರ್ನಾಟಕದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಪರಿಚಯವಿದೆ. ಎ.ಎ.ಡಿ.ಲೂಯಿಸ್ ಅವರು ೧೯೬೩ರಲ್ಲಿ 'Tribes of Mysore' ಎಂಬ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ೧೯೭೫ರಲ್ಲಿ ಎಲ್.ಜಿ.ಹಾವನೂರು ಅವರ 'Karnataka Backward class commission report'ದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟುಗಳ ಮಾಹಿತಿಯಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಐ.ಬಿ..ಹೆಚ್. ಪ್ರಕಾಶನ ಮತ್ತು ಮೈಸೂರಿನ ಭಾರತೀಯ ಸರ್ವೇಕ್ಷಣ ಸಂಸ್ಥೆಯ ಮಾನವ ವಿಜ್ಞಾನಿಗಳು ಕರ್ನಾಟಕದ ವಿವಿಧ ಬುಡಕಟ್ಟುಗಳ ಕುರಿತು ಅನೇಕ ಸಣ್ಣ-ಪುಟ್ಟ ಪುಸ್ತಕಗಳನ್ನು ಪ್ರಕಟ್ಟಿಸಿದ್ದಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟುಗಳ ಅಧ್ಯಯನಕ್ಕಾಗಿ ವಿಶೇಷ ವಿಭಾಗಗಳು ಇಲ್ಲದಿದ್ದರೂ, ಇತ್ತೀಚೆಗೆ ೧೯೯೪ರಿಂದ ಕನ್ನಡ ವಿಶ್ವವಿದ್ಯಾಲಯ-ಹಂಪಿಯಲ್ಲಿ "ಬುಡಕಟ್ಟು ಅಧ್ಯಯನ ವಿಭಾಗ" ಅಸ್ತಿತ್ವಕ್ಕೆ ಬಂದಿದೆ. ಪ್ರಸ್ತುತ ಈ ವಿಭಾಗದಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ಅಧ್ಯಯನ ಕೈಗೊಂಡಿದ್ದಾರೆ.

೧.೪. ಬುಡಕಟ್ಟುಗಳ ಅಧ್ಯಯನದ ಕ್ರಮ

ಬುಡಕಟ್ಟುಗಳೆಂದು ಕರೆಯಿಸಿಕೊಳ್ಳುವ ಆದಿವಾಸಿಗಳು ಜಗತ್ತಿನಾದ್ಯಂತ ಹರಡಿ ಕೊಂಡಿದ್ದಾರೆ. ಅದರಂತೆ ಭಾರತದ ಎಲ್ಲ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ-ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದು ತುಂಬ ಕಷ್ಟ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ ಪದ್ಧತಿಗಳಿಂದ ಅವರೊಂದಿಗೆ ಬೆರೆತು ವಿವರಣಾತ್ಮಕವಾಗಿ ಅಧ್ಯಯನ ಕೈಗೊಳ್ಳುವುದು ಸಂಶೋಧಕರಿಗೆ ಒಂದು ದೊಡ್ಡ ತೊಡಕಾಗಿದೆ. "ಸ್ವತಂತ್ರ ಪೂರ್ವ ಭಾರತೀಯ ಸಮಾಜಗಳಲ್ಲಿ ದೇಶ-ವಿದೇಶಗಳ ವಿದ್ವಾಂಸರುಗಳಿಂದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ಆದರೆ, ಯಾವುದೇ ಬುಡಕಟ್ಟನ್ನು ಕುರಿತು ಸಮಗ್ರವಾದ ಅಧ್ಯಯನಗಳು ನಡೆಯಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಮುಖ್ಯ ಕಾರಣವಾಗಿತ್ತು."[೧೫] ಆದರೆ ಇತ್ತೀಚೆಗೆ ರಾಜ್ಯ ಸರಕಾರ, ಕೇಂದ್ರ ಸರಕಾರ ಹಾಗೂ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳು

ಬುಡಕಟ್ಟು ಅಧ್ಯಯನಗಳ ಕುರಿತು ವಿಶೇಷ ಆಸಕ್ತಿವಹಿಸುತ್ತಿವೆ. ಹಲವು ಸಂಘ-ಸಂಸ್ಥೆಗಳು ಕೂಡ ಖಾಸಗಿಯಾಗಿ ಅಧ್ಯಯನ ಕೈಗೊಳ್ಳುತ್ತಿವೆ. ಆದರೆ, ನಾಗರಿಕತೆಯ ಪ್ರಭಾವದಿಂದ ಆದಿವಾಸಿಗಳ ಮೂಲ ಸಂಸ್ಕೃತಿ, ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡು ಬರುವುದರಿಂದ ಅವುಗಳ ಮೂಲ ಸ್ವರೂಪ ಬದಲಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸಿ ದಾಖಲಿಸಿಕೊಳ್ಳುವುದು ತೀರ ಅಗತ್ಯವಾಗಿದೆ.

ದೇಶದ ಉದ್ದಗಲಕ್ಕೂ ಹರಡಿಕೊಂಡಿರುವ ಮತ್ತು ಗುರುತಿಸಲಾಗದಂಥ ಅನೇಕ ಬುಡಕಟ್ಟುಗಳು ಇಂದಿಗೂ ಭಾರತದಲ್ಲಿದ್ದಾರೆ. ಈ ಬುಡಕಟ್ಟುಗಳ ಅಧ್ಯಯನಕ್ಕೆ ವಿದೇಶಿಯ ವಿದ್ವಾಂಸರು ತೋರಿಸಿದ ಆಸಕ್ತಿಯನ್ನು ನಮ್ಮ ಭಾರತೀಯ ವಿದ್ವಾಂಸರು ತೋರಿಸಲಿಲ್ಲ. ಕಾಲಕ್ರಮೇಣ ಪಾಶ್ಚಾತ್ಯ ವಿದ್ವಾಂಸರುಗಳ ಅಧ್ಯಯನ ಪದ್ಧತಿಗಳ ಜಾಡನ್ನೇ ತುಳಿದ ಭಾರತೀಯ ವಿದ್ವಾಂಸರು ಅಲ್ಪ-ಸ್ವಲ್ಪ ಬುಡಕಟ್ಟುಗಳ ಅಧ್ಯಯನ ಕುರಿತು ಆಸಕ್ತಿ ಬೆಳೆಸಿಕೊಂಡರು. ಪ್ರಸ್ತುತ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಘ-ಸಂಸ್ಥೆಗಳು ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರೋತ್ಸಾಹ ಕೊಡುತ್ತಿವೆ.

ಭಾರತದ ಯಾವುದೇ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಬೇಕಾದರೆ ಸಂಶೋಧಕರು ಕೆಲವೊಂದು ಅಧ್ಯಯನದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದ ಪೂರ್ಣ ಪರಿಚಯ ಮತ್ತು ಯೋಜನೆ ಅತ್ಯವಶ್ಯಕವಾಗಿದೆ. ಸಂಶೋಧನ ಸಾಮಗ್ರಿಗಳಾದ ನಕ್ಷೆ, ಪ್ರಶ್ನಾವಳಿ, ಚೆಕ್‌ಲಿಸ್ಟ, ಸಂದರ್ಶನ ಕೈಪಿಡಿ, ಟೇಪರೆಕಾರ್ಡು, ಕ್ಯಾಮರಾ, ಹಣ ಮತ್ತು ಒಂದಿಬ್ಬರು ಸಹಾಯಕರು ಜೊತೆಯಲ್ಲಿರಬೇಕು. ಯಾವುದೇ ಬುಡಕಟ್ಟು ಸಮುದಾಯ ಪ್ರಾರಂಭದಲ್ಲಿ ತಮ್ಮ ಜನರನ್ನು ಬಿಟ್ಟು ಉಳಿದವರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ. ಆದ್ದರಿಂದ ಆರಂಭದಲ್ಲಿ ತಾವು ತಿಳಿದುಕೊಂಡಂತೆ ಬುಡಕಟ್ಟು ಜನರಿಂದ ಸಹಕಾರ ಸಿಗುವುದಿಲ್ಲ. ಆಗ ಸಂಶೋಧಕ ನಿರುತ್ಸಾಹಗೊಳ್ಳದೆ ತಾಳ್ಮೆಯಿಂದ ಆ ಸಮುದಾಯದ ಮುಖಂಡರ ಪರಿಚಯ ಮಾಡಿ ಕೊಳ್ಳುವುದರ ಮುಖಾಂತರ ತನ್ನ ಗುರಿ ಮತ್ತು ಉದ್ದೇಶಗಳನ್ನು ತಲುಪಬಹುದು. ಬುಡಕಟ್ಟು ಅಧ್ಯಯನ ಕೈಗೊಂಡ ಸಂಶೋಧಕನಿಗೆ ತಾಳ್ಮೆ ಮತ್ತು ಕಠಿಣಶ್ರಮೆ ಅತ್ಯವಶ್ಯಕವಾಗಿದೆ. ಏಕೆಂದರೆ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ, ಈ ಪ್ರದೇಶದ ಬೇಡರು ಪ್ರಾರಂಭದಲ್ಲಿ ಸಂಶಯದಿಂದಲೇ ವರ್ತಿಸಿ ಸರಿಯಾದ ಮಾಹಿತಿ ಕೊಡುತ್ತಿರಲಿಲ್ಲ, ನಂತರ ಅವರ ಗುಂಪಿನ ಒಂದಿಬ್ಬರು ಮುಖಂಡರ ಪೂರ್ಣ ವಿಶ್ವಾಸಗಳಿಸಿದ ಮೇಲೆ ಅಲ್ಲಿಯ ಜನ ಸಹಕಾರ ಕೊಟ್ಟ ಘಟನೆಗಳು ಸಾಕಷ್ಟಿವೆ.

ಬುಡಕಟ್ಟು ಅಧ್ಯಯನ ಕೈಗೊಂಡಾಗ ಕೆಲವೊಂದು ಮಹಿಳೆಯರನ್ನು ಸಂದರ್ಶನ ಮಾಡುವಾಗ ಅವರ ಕುಟುಂಬದ ಮುಖ್ಯಸ್ಥರ ಒಪ್ಪಿಗೆ ಪಡೆಯಬೇಕಾಗುತ್ತದೆ. ಅವರ ಧರ್ಮ ಸಂಸ್ಕೃತಿಗೆ ಸಂಬಂಧಿಸಿದ ಕೆಲವೊಂದು ಸಂಪ್ರದಾಯಗಳನ್ನು ಬುಡಕಟ್ಟಿನವರು ಅಷ್ಟು ಸುಲಭವಾಗಿ ಬಿಟ್ಟು ಕೊಡುವುದಿಲ್ಲ. ಋತುಮತಿಯಾದ ಹೆಣ್ಣುಮಕ್ಕಳು, ಹೆರಿಗೆ, ದೇವರು, ಪವಿತ್ರಸ್ಥಳ, ಪೌಳಿ,

ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಛಾಯಾಚಿತ್ರಗಳನ್ನು ತೆಗೆಯುವಾಗ ಅವರ ಒಪ್ಪಿಗೆ, ಇಲ್ಲವೆ ಆ ಗುಂಪಿನ ಮುಖಂಡರನ್ನು ಜೊತೆಗೆ ಕರೆದುಕೊಂಡು ಹೋಗುವುದರಿಂದ ಸಮಸ್ಯೆಗಳು ಉದ್ಭವಿಸುವುದಿಲ್ಲ. ಅಪ್ಪಿ ತಪ್ಪಿಯೂ ಅವರಿಗೆ ಗೊತ್ತಿಲ್ಲದಂತೆ ಛಾಯಾಚಿತ್ರ ತೆಗೆಯುವುದಾಗಲಿ, ಧ್ವನಿಮುದ್ರಣ ಮಾಡಿಕೊಳ್ಳುವುದಾಗಲಿ ಮಾಡಬಾರದು. ಸಂಶೋಧಕ ತನ್ನ ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆಯೇ ಛಾಯಾಚಿತ್ರ ಅಥವಾ ಧ್ವನಿಮುದ್ರಣ ಮಾಡಿಕೊಳ್ಳಬೇಕು.ಸಂದರ್ಶನ ಮಾಡುವಾಗ ಬರೆದುಕೊಳ್ಳುವುದಕ್ಕಿಂತ ಧ್ವನಿಮುದ್ರಣ ಮಾಡಿಕೊಳ್ಳುವುದು ಸಂಶೋಧನೆಗೆ ಹೆಚ್ಚು ಉಪಯುಕ್ತವಾಗುತ್ತದೆ.ಇಲ್ಲವಾದರೆ ಅವರ ಭಾಷೆ, ಶಬ್ದಗಳ ಉಚ್ಛರಣೆ ಬರವಣಿಗೆಗೆ ತೊಡಕಾಗುತ್ತವೆ.

ಗುಲಬರ್ಗಾ ಜಿಲ್ಲೆಯ ಬೇಡರ ಮಾತೃಭಾಷೆ ಕನ್ನಡವಾದರೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆ ಬೇಡರದ್ದು ಕನ್ನಡ ಮತ್ತು ತೆಲುಗು. ಈ ಎರಡೂ ಭಾಷೆಗಳನ್ನು ಸಂಶೋಧಕ ಬಲ್ಲವನಾಗಿಲ್ಲದ ಕಾರಣ ಪ್ರಸ್ತುತ ಅಧ್ಯಯನದಲ್ಲಿ ದ್ವಿಭಾಷಿಕರ ಅವಶ್ಯಕತೆ ಬಿತ್ತು.

೧.೫. ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಪುರಾಣ-ಪುಣ್ಯಕಥೆಗಳು, ವೇದಗಳಷ್ಟೇ ಪ್ರಾಚೀನತೆಯನ್ನು ಹೊಂದಿದ ಬೇಡ ಬುಡಕಟ್ಟು ಸಮುದಾಯ ಕುರಿತಂತೆ ನಡೆದಿರುವ ಅಧ್ಯಯನ ಮತ್ತು ಸಂಶೋಧನೆಗಳು ಅತ್ಯಂತ ಕಡಿಮೆಯೆಂದು ಹೇಳಬಹುದು. ಇಂಡಿಯಾದ ಮಹಾಕಾವ್ಯಗಳಾದ "ರಾಮಾಯಣ-ಮಹಾಭಾರತ"ಗಳಲ್ಲಿ ಬೇಡರಿಗೆ ಸಂಬಂಧಿಸಿದ ಹಲವು ಮಾಹಿತಿಗಳಿವೆ. ನಂತರ ರಾಮಾಯಣ-ಮಹಾಭಾರತಗಳಲ್ಲದೇ ಇನ್ನಿತರ ಪ್ರಾಚೀನ ಗ್ರಂಥಗಳಾದ ಅರ್ಥಶಾಸ್ತ್ರ, ಸ್ಮೃತಿಗಳು, ಭಾಸ-ಕಾಳಿದಾಸರಂತಹ ಕವಿ ಕಾವ್ಯಗಳು ಕೂಡ ಈ ಸಮುದಾಯಕ್ಕೆ ಸಂಬಂಧಪಟ್ಟ ವಿವರಗಳನ್ನು ಒದಗಿಸುತ್ತವೆ. ಸೈಯದ್ ಸಿರಾಜ್ ಉಲ್ ಹಸನ್ ಅವರ "ದಿ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಎಚ್.ಇ.ಎಚ್. ದಿ ನಿಜಾಮ್ಸ್ ಡೋಮಿನಿಯನ್ಸ್" (೧೯೨೦) ಎಂಬ ಪುಸ್ತಕದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಬೇಡರ ಬಗೆಗಿನ ರಾಜಕೀಯ ಚಿತ್ರಣವನ್ನು ಕುರಿತು ವಿವರಿಸಿದ್ದಾರೆ. ಅದೇ ರೀತಿ ಎಡ್ಗರ್ ಥರ್‌ಸ್ಟ್ರನ್ ಮತ್ತು ಕೆ. ರಂಗಾಚಾರಿ ಅವರ "ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌಥೇರಿಯನ್ ಇಂಡಿಯಾ" (೧೯೦೯) ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಹಲವು ಆದಿವಾಸಿಗಳ ಕುರಿತು ಸಂಕ್ಷಿಪ್ತ ಮಾಹಿತಿ ಲಭಿಸುತ್ತದೆ. ಬೇಡ ಸಮುದಾಯದ ವೃತ್ತಿ ಹಾಗೂ ಗುಣಲಕ್ಷಣಗಳನ್ನು ಕುರಿತು ವಿವರಿಸಿದ್ದಾರೆ.

ನಂತರದಲ್ಲಿ ನೋಡಿದಾಗ ೧೯೨೮-೧೯೩೫ರಲ್ಲಿ ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ "ದ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್" ಎಂಬ ಕೃತಿಗಳಲ್ಲಿ ಬೇಡ ಶಬ್ದದ ವಿವರಣೆಗಳಿವೆ. ೧೯೬೭ರಲ್ಲಿ ಪ್ರಕಟವಾದ "ಚಿತ್ರದುರ್ಗ ಗ್ಯಾಜೆಟಿಯರ್"ನಲ್ಲಿ ಈ ಸಮುದಾಯ ಕುರಿತು ಸಂಕ್ಷಿಪ್ತವಾದ ಮಾಹಿತಿಗಳಿವೆ. ೧೯೭೫ರಲ್ಲಿ

ಎಲ್.ಜಿ. ಹಾವನೂರು ಅವರ "ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ರಿಪೋರ್ಟ್"ದಲ್ಲಿ ಬೇಡ ಬುಡಕಟ್ಟುಗೆ ಸಂಬಂಧಿಸಿದಂತೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಹಾಗೂ ಇದರ ಸಂಕ್ಷಿಪ್ತವಾದ ಪರಿಚಯವಿದೆ. ೧೯೮೨ರಲ್ಲಿ ಆರ್. ರಾಜಣ್ಣನವರ "ನಾಯಕ ಜನಾಂಗದ ಇತಿಹಾಸ" ಎಂಬ ಕೃತಿಯಲ್ಲಿ ಬೇಡರನ್ನು ಗುರುತಿಸುವುದು. ಬೇಡರ ಮೂಲ ಮತ್ತು ಪರಂಪರೆ, ಸಮುದಾಯದ ಪ್ರಾತಃಸ್ಮರಣೀಯ ನಾಯಕ ಮಣಿಗಳು, ಧರ್ಮ ಮತ್ತು ಸುವ್ಯವಸ್ಥೆಗೆ ಅರ್ಪಿಸಿಕೊಂಡ ನಾಯಕ ವೀರಾಗ್ರಣಿಗಳ ಕುರಿತ ವಿವರಣೆಗಳಿವೆ ಹೊರತು ಅದರಲ್ಲಿ ಸಂಪೂರ್ಣತೆಯಿಲ್ಲ. ೧೯೮೨ರಲ್ಲಿ ಎಂ.ಜಿ. ಈಶ್ವರಪ್ಪನವರ "ಮ್ಯಾಸಬೇಡರು" ಎಂಬ ಕೃತಿಯಲ್ಲಿ ಮ್ಯಾಸಬೇಡರ ಪರಿಚಯ, ಮ್ಯಾಸಬೇಡರು ಯಾರು. ಇವರ ಹಟ್ಟಿಗಳು ಮತ್ತು ದೇವಸ್ಥಾನಗಳು, ವೇಷಭೂಷಣಗಳು, ಮ್ಯಾಸಬೇಡರ ವೃತ್ತಿ, ಆಹಾರ ಪದ್ಧತಿ, ಧಾರ್ಮಿಕ ವ್ಯವಸ್ಥೆ, ಕುಟುಂಬ ಪದ್ಧತಿ, ಸಂಪ್ರದಾಯಗಳು, ಹಬ್ಬ ಹರಿದಿನಗಳು, ಮುಂಜಿ, ಜಾನಪದ ಸಾಹಿತ್ಯ, ಸಾಮಾಜಿಕ ಸ್ಥಾನ-ಮಾನ ಇನ್ನೂ ಮುಂತಾದ ವಿಷಯಗಳನ್ನು ಬಹಳ ಸಂಕ್ಷಿಪ್ತವಾಗಿ ಮತ್ತು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಆದರೆ ಸಮುದಾಯದ ಮಹಿಳೆಯ ಕುರಿತು ಮಾಹಿತಿ ಅಲಭ್ಯತೆ ಎದ್ದು ಕಾಣುತ್ತದೆ. ೧೯೮೭ರಲ್ಲಿ ಬಿ.ಎಸ್. ಶ್ರೀನಿವಾಸ್ ನಾಯಕ ಅವರ "ಚಿತ್ರದುರ್ಗದ ಕಾಮಗೇತಿ ಅರಸರು" ಎಂಬ ಪುಸ್ತಕದಲ್ಲಿ ಈ ಪರಿಸರದ ಅರಸು ಮನೆತನಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಘಟನೆಗಳು ಇತಿಹಾಸದ ಮೇಲೆ ಬೆಳಕು ಚೆಲ್ಲುವ ಉಪಯುಕ್ತ ಕೃತಿಯಾಗಿದೆ.

ಎಚ್.ವಿ. ವೀರನಾಯಕ ಅವರು ೧೯೮೦ರಲ್ಲಿ ಕ್ಷಾತ್ರಾಂಶ ಪ್ರಭೇದ ಎಂಬ ಪುಸ್ತಕದಲ್ಲಿ ಬೇಡ ನಾಯಕ ಜನಾಂಗದ ಇತಿಹಾಸ ಮತ್ತು ಸಮುದಾಯದ ಸ್ಥಿತಿಗತಿಗಳ ವಿವರಣೆಯಿದೆ. ೧೯೮೦ರಲ್ಲಿ ಪ್ರೊ.ಲಕ್ಷ್ಮಣ್ ತೆಲಗಾವಿ (ಸಂ) ಅವರ "ಹರತಿ ಸಿರಿ" ಎಂಬ ಎಚ್.ವಿ. ವೀರನಾಯಕ ಹರತಿ ನೆನಪಿನ ಸಂಪುಟದ ಒಟ್ಟು ೯೮ ಲೇಖನಗಳಲ್ಲಿ ಕೆಲವೊಂದು ಬೇಡರಿಗೆ ಸಂಬಂಧಿಸಿದ ಉಪಯುಕ್ತವಾದ ಲೇಖನಗಳು ಇವೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಉಪಸಂಸ್ಕೃತಿ ಅಧ್ಯಯನ ಮಾಲೆ ಅಡಿಯಲ್ಲಿ ಡಾ.ಕೃಷ್ಣಮೂರ್ತಿ ಹನೂರು ಅವರು ಬರೆದ "ಮ್ಯಾಸಬೇಡರ ಸಂಸ್ಕೃತಿ" ಎಂಬ ಪುಸ್ತಕವು ಇಡೀ ಕರ್ನಾಟಕದ ಒಂದು ಭಾಗದ ಪ್ರದೇಶದಲ್ಲಿ ಬರುವಂತಹ ಮ್ಯಾಸಬೇಡ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದಂತೆ ಅದರ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಆಚರಣೆ ಮತ್ತು ಕಲೆ, ಭಾಷೆ ಹಾಗೂ ಸಾಹಿತ್ಯ ಮುಂತಾದ ವಿವರಣೆ ನೀಡಿದ್ದಾರೆ. ಅದೇ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩ರಲ್ಲಿ ಪ್ರಕಟಿಸಿದ ಪ್ರಹ್ಲಾದ ಚಟಿಗೇರಿ ಅವರ "ಅಡವಿ ಚೆಂಚರ ಸಂಸ್ಕೃತಿ" ಎಂಬ ಕೃತಿಯಲ್ಲಿ ಮ್ಯಾಸಬೇಡ ಬುಡಕಟ್ಟಿಗೆ ಸಂಬಂಧಿಸಿದಂತೆ ಮೂಲವನ್ನು ಕುರಿತು ಐತಿಹ್ಯಗಳನ್ನು ನೀಡಲಾಗಿದೆ. ೧೯೯೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಡಾ. ಕರಿಶೆಟ್ಟಿ ರುದ್ರಪ್ಪ ಅವರ "ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ" ಎಂಬ ಕೃತಿಯಲ್ಲಿ ಇವರ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಮೊದಲಾದ ಮಾಹಿತಿ

ಯನ್ನು ನೀಡಿದ್ದಾರೆ. ೨೦೦೦ರಲ್ಲಿ ಎಂ.ಪಿ. ವೀಣಾ ಅವರ "ಮನೆ, ಸಮಾಜ ಮತ್ತು ಸಂಸ್ಕೃತಿ" ಎಂಬ ಪುಸ್ತಕ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಮತ್ತು ತಿಮ್ಮಲಾಪುರಕ್ಕೆ ಸಂಬಂಧಿಸಿ ದಂತೆ ಮ್ಯಾಸನಾಯಕರು ಮತ್ತು ಊರನಾಯಕರು ಎಂಬ ಬೇಡರ ಎರಡು ಉಪಪಂಗಡಗಳ ಸಂಕ್ಷಿಪ್ತ ಮಾಹಿತಿ ಒಳಗೊಂಡಿದೆ. ೨೦೦೨ರಲ್ಲಿ ಎ.ಎಸ್. ಪ್ರಭಾಕರ್ (ಸಂ) ಅವರ "ಮ್ಯಾಸಬೇಡರ ಕಥನ ಗಳು" ಎಂಬ ಕೃತಿಯಲ್ಲಿ ಮ್ಯಾಸಬೇಡರಿಗೆ ಸಂಬಂಧಿಸಿದ ಜನಪದ ಹಾಡುಗಳಲ್ಲಿ ಸಮುದಾಯದ ಆರಾಧ್ಯ ದೈವಗಳ ಕುರಿತು ಬೇಟೆ, ವೃತ್ತಿ ಮತ್ತು ಮೂಲದ ಬಗೆಗೆ ಮಾಹಿತಿ ಒದಗಿಸುತ್ತದೆ. ೨೦೦೨ರಲ್ಲಿ ಡಾ. ಕೆ.ಎಂ. ಮೇತ್ರಿ ಅವರ "ಬುಡಕಟ್ಟು ಕುಲಕಸಬುಗಳು" ಎಂಬ ಪುಸ್ತಕದಲ್ಲಿ ಇಡೀ ರಾಜ್ಯದ ೪೯ ಬುಡಕಟ್ಟು ಪಂಗಡಗಳ ವೃತ್ತಿ, ಜನಸಂಖ್ಯೆ ಮತ್ತು ಪರ್ಯಾಯ ಹೆಸರುಗಳು ಹಾಗೂ ಬೇಡ ಬುಡಕಟ್ಟು ಸಮುದಾಯಕ್ಕೆ ಯಾವ ವರ್ಷದಲ್ಲಿ ಮೀಸಲಾತಿ (ಎಸ್.ಟಿ.) ಅನ್ವಯಿಸಿತು ಎಂಬುದನ್ನು ಕುರಿತು ವಿವರಣೆ ನೀಡುತ್ತದೆ. ಡಾ.ಹಿ.ಚಿ.ಬೋರಲಿಂಗಯ್ಯ ಕರ್ನಾಟಕದ ಬುಡಕಟ್ಟುಗಳನ್ನು ಕುರಿತು ತುಂಬಾ ಕೆಲಸ ಮಾಡಿದ ಪ್ರಸಿದ್ಧ ಜಾನಪದ ಮತ್ತು ಬುಡಕಟ್ಟು ಚಿಂತಕರಾಗಿದ್ದಾರೆ. ತಮ್ಮ ಪಿಎಚ್.ಡಿ. ಮಹಾಪ್ರಬಂಧ "ಬುಡಕಟ್ಟು ಲೋಕದೃಷ್ಟಿ"ಯಲ್ಲಿ (೨೦೦೦) ಗಿರಿಜನರ ಲೋಕದೃಷ್ಟಿಯನ್ನು ಪರಿಚಯಿಸುತ್ತಾ, ಅದರಲ್ಲಿ ವಿಶೇಷವಾಗಿ ಹಾಲಕ್ಕಿ ಒಕ್ಕಲಿಗ ಸಮುದಾಯದ ಇಡೀ ಚಿತ್ರಣವನ್ನು ನಮ್ಮುಂದಿಡುತ್ತಾರೆ. ಇದರಲ್ಲಿ ವಿಶೇಷವಾಗಿ ಸಮುದಾಯದ ಅಧ್ಯಯನಗಳು ಹಿಡಿಯಬೇಕಾದ ದಾರಿಯನ್ನು ಹೊಸ ದಿಕ್ಕಿನೆಡೆಗೆ ಚಲಿಸುವಂತೆ ಈ ಗ್ರಂಥ ಮಾಡುತ್ತದೆ. ಇದಲ್ಲದೆ ಕರ್ನಾಟಕ ಜನಪದ ಕಲೆಗಳ ಕೋಶ (೧೯೯೬) ಎಂಬ ಬೃಹತ್ ಗ್ರಂಥದಲ್ಲಿ, ಕರ್ನಾಟಕದ ಸಮುದಾಯಗಳ ಜನಪದ ಕಲೆಗಳನ್ನು ಪರಿಚಯಿಸುತ್ತಾರೆ. ಅದರಲ್ಲಿ ಬೇಡರ ಕುಣಿತದ ಬಗ್ಗೆ ಕೂಡ ಬೆಳಕು ಚೆಲ್ಲಿದ್ದಾರೆ. ಇನ್ನೊಂದು ಗ್ರಂಥವಾದ "ಗಿರಿಜನ ನಾಡಿಗೆ ಪಯಣ" (೧೯೯೧)ದಲ್ಲಿ ಹಿ.ಚಿ.ಬೋರಲಿಂಗಯ್ಯ ಅವರು ಕರ್ನಾಟಕದ ಬುಡಕಟ್ಟುಗಳು ಸರ್ಕಾರದ ಯೋಜನೆ ಫಲವಾಗಿ ಅರಣ್ಯದಿಂದ ನಾಡಿಗೆ ಬಂದರು. ಪರಿಣಾಮವಾಗಿ ಅವರಿಗೆ ಲಭಿಸಿದ್ದು ಏನು ಇಲ್ಲ. ಕಳೆದುಕೊಂಡದ್ದೆ ಅಧಿಕ ಎಂದು ತಿಳಿಸಿದ್ದಾರೆ. ಬುಡಕಟ್ಟು ದೈವರಾಧನೆ (೨೦೦೦) ಎಂಬ ಪುಸ್ತಕದಲ್ಲಿ ಪ್ರಮುಖವಾಗಿ ಬುಡಕಟ್ಟು ದೈವಗಳ ಕುರಿತು ವಿಸ್ತೃತವಾಗಿ ಅವರು ಚರ್ಚಿಸಿದ್ದಾರೆ. ಮತ್ತೇ ೨೦೦೨ರಲ್ಲಿ ಹರ್ತಿಕೋಟೆ ವೀರೇಂದ್ರ ಸಿಂಹ, ತೇಜಸ್ವಿ ಕಟ್ಟೀಮನಿ (ಸಂ.) ಅವರ "ಘಟ್ಟಿ ಹೊಸಹಳ್ಳಿ ಗಟ್ಟಿಗ" ಎಂಬ ಸಿ. ಮಲೆಸಿದ್ಧಪ್ಪ ಅವರ ಸ್ಮರಣ ಸಂಪುಟದ ಕೃತಿಯಲ್ಲಿ ಮ್ಯಾಸ ಬೇಡರಿಗೆ ಸಂಬಂಧಿಸಿದ ಕೆಲವೊಂದು ಉಪಯುಕ್ತ ಲೇಖನಗಳಿವೆ. ಎಂ.ಎಸ್. ಪುಟ್ಟಣ್ಣನವರ "ಚಿತ್ರದುರ್ಗದ ಪಾಳೆಯಗಾರರು" ಮತ್ತು ಕಪಟರಾಳ ಕೃಷ್ಣರಾವ್ ಅವರ "ಸುರಪುರ ಸಂಸ್ಥಾನದ ಇತಿಹಾಸ" ಫ್ಲೀಟರ್ ಸಂಗ್ರಹಿಸಿದ ಹಲಗಲಿ ಬೇಡರ ಲಾವಣಿಗಳು ಇವುಗಳೆಲ್ಲವು ಅಂದಿನ ಸಂದರ್ಭದ ರಾಜಕೀಯ ಇತಿಹಾಸವನ್ನು ಕುರಿತು ವಿವರಣೆ ನೀಡುತ್ತದೆ. ಎ.ಆರ್. ನಾಯಕ ಅವರ ಸಗರನಾಡಿನ ಬೇಡರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ಎಂ.ಫಿಲ್ ಪ್ರಬಂಧವು ಗುಲಬರ್ಗಾ ಪರಿಸರದ ಬೇಡರ ಸಾಮಾಜಿಕ ಜೀವನವನ್ನು ಕುರಿತು ಒಳಗೊಂಡಿದೆ. ಪುರುಷಕಾರಿ

ಲೋಕಯ್ಯನ "ಸುರಪುರ ರಾಜರ ಚರಿತ್ರೆ ಹಸ್ತಪ್ರತಿ, ರಾಜಪುರೋಹಿತ ಜಯತೀರ್ಥರವರ "ಸುರಪುರದ ಶೂರ ನಾಯಕರು" ಪಾರ್ಮುಜಾ ಜಂಗ್ ಬಾಹದೂರ ನಾವಬರವರ "ಸುರಪುರ ಆನ್ ಆ್ಯನ್‌ಸಿಯೆಂಟ್ ಬಹದ್ದೂರ ರಾಜ" (೧೯೦೭), ಫಿಲಿಫ್ ಮೆಡೋಸ್ ಟೇಲರನ್ "ದ ಸ್ಟೋರಿ ಆಫ್ ಮೈ ಲೈಫ್" (೧೯೨೦), ರೇವಣಸಿದ್ದಯ್ಯ ರುದ್ರಸ್ವಾಮಿ ಅವರ "ಸುರಪುರ ತಾಲ್ಲೂಕು ದರ್ಶನ", ಭಾಸ್ಕರರಾವ ಮೂಡಬೂಳರವರ "ಮರೆತು ಹೋದ ಸುರಪುರ ಇತಿಹಾಸ", ಬಿ. ಕೃಷ್ಣಮಾಚಾರ್ಯರ "ಮರೆಯಲಾಗದ ಸುರಪುರ ರಾಜರ ಚರಿತ್ರೆ" ಡಾ.ಮಂಜುನಾಥ ಬೇವಿನಕಟ್ಟಿ, ಡಾ.ತಾರಿಹಳ್ಳಿ ಹನುಮಂತಪ್ಪರವರ ಸಂ. ವಾಲ್ಮೀಕಿ ಸಂಪದ, ೨೦೦೬. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ೨೦೦೭. ಪ್ರೊ..ಮಂಜುನಾಥ ಬೇವಿನಕಟ್ಟಿಯವರ ವ್ಯಾಧ ಚರಿತೆ, ೨೦೦೭ ಹಾಗೂ ಪ್ರೊ.ಮಂಜುನಾಥ ಬೇವಿನಕಟ್ಟಿ ಅವರ ಆದಿವಾಸಿ, ೨೦೦೭. ಡಾ.ವಿರೂಪಾಕ್ಷಿ ಪೂಜಾರಹಳ್ಳಿ ವಿಜಯನಗರ ಕಾಲದ ಸಂಸ್ಕೃತಿ, ೨೦೦೮. ಪ್ರೊ.ಮಂಜುನಾಥ ಬೇವಿನಕಟ್ಟಿ ಅವರ ರಾಮಾಯಣ ಮರುದರ್ಶನ, ೨೦೦೮. ಹರ್ತಿಕೋಟೆ ವೀರೇಂದ್ರಸಿಂಹ, ಡಾ.ಅಮರೇಶ ಯತಗಲ್ ವಾಲ್ಮೀಕಿ ಮಂದಾರ, ೨೦೦೮. ಇನ್ನಿತರೆ ಗ್ರಂಥಗಳು ಬೇಡ ಸಮುದಾಯದ ಬಗ್ಗೆ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರ್ಥಿಕ, ರಾಜಕೀಯ, ಶೈಕ್ಷಣಿಕ ಇನ್ನಿತರೆ ಅಂಶಗಳ ಕುರಿತು ಮೌಲ್ಯಯುಕ್ತ ಮಾಹಿತಿ ಒದಗಿಸಿವೆ. ಅಲ್ಲದೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿದ ಪಿಏಚ್.ಡಿ. ಮಹಾಪ್ರಬಂಧಗಳಾದ ಡಾ. ಎನ್.ಎಚ್. ಕುಲಕರ್ಣಿ ಅವರ "ಬ್ರಿಟೀಶ್ ರಿಲೇಸನ್‌ಸಿಫ್ ವಿತ್ ದ ಪ್ರಿನ್ಸಿಪಾಲಿಟಿ ಆಫ್ ಸುರಪುರ" (೧೯೭೨), ಡಾ. ಆರ್.ಎಸ್. ಚುಳುಕಿ ಅವರ "ಥೈಲರ್" (೧೯೮೫), ಡಾ. ಎಸ್.ಕೆ. ಅರುಣಿ ಅವರು ಪೂನಾ ವಿಶ್ವವಿದ್ಯಾಲಯಕ್ಕೆ ಸಾದರಪಡಿದ ಪಿಏಚ್.ಡಿ. ಮಹಾಪ್ರಬಂಧವಾದ "ಹಿಸ್ಟರಿ ಅಂಡ್ ಕಲ್ಚರ್ ಆಫ್ ಸುರಪುರ ಸಂಸ್ಥಾನ ನಾರ್ಥ್ ಕರ್ನಾಟಕ ಕ್ರಿ.ಶ. ೧೬೫೦" (೧೯೯೮) ಹಾಗೂ ರಂಗರಾಜ ವನದುರ್ಗರವರ "ಸುರಪುರ ಸಂಸ್ಥಾನ ಒಂದು ಅಧ್ಯಯನ" ಇವುಗಳಲ್ಲದೆ ಈ ಸಮುದಾಯದ ಕುರಿತ ಬಿಡಿ ಲೇಖನಗಳನ್ನು ಬರೆದು ಪ್ರಕಟಿಸಿದವರಲ್ಲಿ ಆದ್ಯ ರಾಮಾಚಾರ್ಯ, ಸೀತಾರಾಮ ಜಾಗೀರದಾರ್, ಎ. ಕೃಷ್ಣ, ಚೆ. ಅಗಸ್ಟಿನ್, ಬಿ.ಆರ್. ಸುರಪುರ, ಪೆರುಮಾಳ್ಳ ಗುಂಡಾಚಾರ್ಯ, ಹನುಮಾಕ್ಷಿ ಗೋಗಿ, ಟಿ. ಸುಚರಿತಾ, ಪಾಂಡುರಂಗ ಚಿನ್ನಾಕರ ಮುಂತಾದವರು ಪ್ರಮುಖರಾಗಿದ್ದಾರೆ.

೧.೬. ಅಧ್ಯಯನದ ಮಹತ್ವ ಮತ್ತು ಸ್ವರೂಪ

ಪ್ರಸ್ತುತ ಜಾಗತೀಕರಣದ ಸಮಯದಲ್ಲಿ ಮಾನವ ಸಮಾಜದ ನವನಿರ್ಮಾಣ ಕಾರ್ಯದಲ್ಲಿ ಮಹಿಳೆಯರ ಪಾತ್ರ ಅಮೂಲ್ಯವಾದುದು. ಹೊಸ ಸಮಾಜವು ಶೋಷಣೆ ರಹಿತ ಅಹಿಂಸಾತ್ಮಕ ಸಮಾಜವಾಗಿರಬೇಕು. ಇಂತಹ ಅಹಿಂಸಾತ್ಮಕ ಸಮಾಜದ ವ್ಯವಸ್ಥೆಯಲ್ಲಿ ಸ್ತ್ರೀಯರ ಭವಿಷ್ಯದ ನಿರ್ಮಾಪಕಿಯಾಗಬೇಕು ಎಂದು ಆಶಿಸಿದ ಮಹಾತ್ಮಾಜಿಯವರು ಮಹಿಳೆ ಅಬಲೆಯಲ್ಲ ಸಬಲೆ ಎಂದು ಸಾರಿದರು. ಆದರೆ ಇಂದಿಗೂ ಮಹಿಳೆಯರು ಮುಂಚೂಣೆಗೆ ಬರಲಾಗದೆ ಹಿಂದುಳಿಯಲು

ಅನೇಕ ಕಾರಣಗಳಿವೆ. ಅದರಲ್ಲಿ ಪ್ರಮುಖವಾಗಿ ಪುರುಷರ ನಿರಂತರ ಶೋಷಣೆಗೆ ಗುರಿಯಾಗುತ್ತಿರುವುದು ತಿಳಿದುಬರುತ್ತದೆ.

ಇಂತಹ ಸಂದರ್ಭದಲ್ಲಿ ಮಹಿಳೆಯು ಯಾವ ಸ್ಥಿತಿಯಲ್ಲಿ ಜೀವನ ಮುಂದುವರೆಸುತ್ತಿದ್ದಾಳೆ ಮತ್ತು ಶಿಕ್ಷಣ ಪಡೆದಿರುವಂತಹ ಮಹಿಳೆಯ ಸ್ಥಾನಮಾನ ಹೇಗಿದೆ. ಹಾಗೂ ಅಶಿಕ್ಷಿತ ಮಹಿಳೆಯ ಸ್ಥಾನಮಾನ ಹೇಗಿದೆ ಎಂಬ ವಿಷಯವನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗುವುದು. ಇದರಿಂದ ಭವ್ಯ ಭಾರತದಲ್ಲಿ ಪ್ರಮುಖವಾಗಿ ಗ್ರಾಮೀಣ ಸಮುದಾಯಗಳು ಜೀವಿಸುತ್ತಿವೆ. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ಜೀವಿಸುವಂತಹ ಬೇಡ ಸಮುದಾಯದ ಮಹಿಳೆಯ ಜೀವನ ಯಾವ ರೀತಿಯಾಗಿದೆ ಎಂಬ ವಿಷಯವು ಇಂದು ರಾಷ್ಟ್ರಕ್ಕೆ, ಸಮಾಜಕ್ಕೆ, ಸಮುದಾಯಕ್ಕೆ, ಜ್ಞಾನಶಾಖೆಗೆ ಅವಶ್ಯಕವಾಗಿದೆ. ಇದರಿಂದ ಬುಡಕಟ್ಟು ಸ್ಥಿತಿಯಲ್ಲಿದ್ದ ಬೇಡ ಸಮುದಾಯವು ಜಾಗತೀಕರಣ, ಆಧುನಿಕತೆಯ ಪ್ರಭಾವದಿಂದ ಅರಣ್ಯವನ್ನು ತ್ಯಜಿಸಿ ನಾಡನ್ನು ಆಶ್ರಯಿಸಿರುವ ಇವರು ನೆಲೆಯನ್ನು ಭದ್ರಪಡಿಸಿಕೊಳ್ಳಲು ಹಲವು ರೀತಿಯ ಕೆಲಸ ಕಾರ್ಯವನ್ನು ಮಾಡುತ್ತ ಜೀವಿಸುತ್ತಿದ್ದಾರೆ. ಇದರಲ್ಲಿ ಮಹಿಳೆಯ ಜೀವನ ಹೇಗಿದೆ ಎಂಬ ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ.

ಇದರ ಜೊತೆಗೆ ಬುಡಕಟ್ಟು ಸಮುದಾಯದ ಸ್ತ್ರೀಯರು ಬೇರೆ ಸಮುದಾಯದ ಮಹಿಳೆಯರ ಜೊತೆಗೆ ಇರುವಂತಹ ಸಾಮಾಜಿಕ ಸಂಬಂಧಗಳು ಮತ್ತು ಕುಟುಂಬದಲ್ಲಿ ನಡೆಯುವ ಆಚರಣಾ ವಿಧಾನಗಳು, ಸಭೆ-ಸಮಾರಂಭಗಳಲ್ಲಿ ಯಾವ ರೀತಿ ಪಾಲ್ಗೊಳ್ಳುತ್ತಾಳೆ ಎಂಬುದು ತಿಳಿದುಬರುತ್ತದೆ. ನಂತರ ಇದುವರೆಗೆ ಈ ಸಮುದಾಯದ ಸ್ತ್ರೀಯರು ಯಾವ ರೀತಿಯ ಕೆಲಸ ಕಾರ್ಯವನ್ನು ನಿರ್ವಹಿಸಿ ತಮ್ಮ ಜೀವನ ಮಂದುವರೆಸುತ್ತಿದ್ದಾರೆಂಬುದು ಈ ಅಧ್ಯಯನದಲ್ಲಿ ತಿಳಿದುಬರುತ್ತದೆ. ಈ ಎಲ್ಲಾ ಅಂಶಗಳೊಂದಿಗೆ ಇಂತಹ ಅಧ್ಯಯನವು ವಿಶೇಷತೆಯನ್ನು ಪಡೆದುಕೊಳ್ಳುತ್ತದೆ. ಅದರ ಜೊತೆಗೆ ಒಂದು ಸಮುದಾಯದ ಮಹಿಳೆಯನ್ನು ಕುರಿತು ಅಧ್ಯಯನ ಮಾಡುವುದರಿಂದ ಇಂದಿನ ಜಾಗತಿಕ ಸಮಸ್ಯೆಗಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಹೀಗೆ ಪ್ರಸ್ತುತ ಸಂಶೋಧನಾ ಪ್ರಬಂಧವು ತನ್ನ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ಅಧ್ಯಯನಕ್ಕಾಗಿ ಕಂಡುಕೊಂಡ ವಿಧಾನಗಳು ಪ್ರಸ್ತುತವೆನ್ನಿಸುತ್ತವೆ.

ಪ್ರಬಂಧ ಒಳಗೊಂಡಿರುವ ಅಧ್ಯಾಯಗಳು

ಈ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಹೊಂದಿರುತ್ತದೆ. ಬಹುಮುಖ್ಯವಾದ ಏಳು ಅಧ್ಯಾಯಗಳು ಈ ಕೆಳಗಿನ ವಸ್ತುವಿಷಯಗಳನ್ನು ಒಳಗೊಂಡಿರುತ್ತವೆ. ಒಂದನೇ ಅಧ್ಯಾಯವು ಒಟ್ಟಾರೆ ಮಹಾಪ್ರಬಂಧದ ತಾತ್ವಿಕ ಒಲವನ್ನು ವಿವರಿಸುತ್ತದೆ. ಇದುವರೆಗೆ ನಮ್ಮ ನಾಡಿನಲ್ಲಿ ಮಹಿಳೆಯರನ್ನು ಒಳಗೊಂಡು ನಡೆದಿರುವ ಚರ್ಚೆಗಳನ್ನು ಗಮನದಲ್ಲಿರಿಸಿಕೊಂಡು ಈ ಅಧ್ಯಯನದ ಸೈದ್ಧಾಂತಿಕ ನಿಲುವುಗಳನ್ನು ಮೊದಲ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ

ಮಾಡಿಕೊಂಡ ಪ್ರಾದೇಶಿಕ ವಿವರಗಳನ್ನು ಮತ್ತು ಈ ಮಹಾಪ್ರಬಂಧ ರಚನೆ ಮಾಡಲು ಅನ್ವಯಿಸಿಕೊಂಡ ಅಧ್ಯಯನ ವಿಧಾನಗಳನ್ನು ಇದರಲ್ಲಿ ಹೇಳಲಾಗಿದೆ. ಈ ಅಧ್ಯಾಯದ ಕೊನೆಯ ಭಾಗದಲ್ಲಿ ಬೇಡ ಬುಡಕಟ್ಟು ಕುರಿತು ಇದುವರೆಗೆ ನಡೆದ ಅಧ್ಯಯನ ಸಂಶೋಧನೆಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಎರಡನೆ ಅಧ್ಯಾಯದಲ್ಲಿ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ, ಈ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವೆಂದು ಗುರುತಿಸಿಕೊಂಡಿರುವ ಹೈದ್ರಾಬಾದ್ ಕರ್ನಾಟಕದಲ್ಲಿ ಬರುವಂತಹ ಗುಲಬರ್ಗಾ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳನ್ನು ಕುರಿತು ಭೌಗೋಳಿಕ ವಿವರಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. ಜೊತೆಗೆ ಈ ಮೂರು ಜಿಲ್ಲೆಯಲ್ಲಿ ಬೇಡ ಬುಡಕಟ್ಟು ಸಮುದಾಯದ ಜನಸಂಖ್ಯೆ, ಸಾಕ್ಷರತೆ, ಲಿಂಗಪ್ರಮಾಣ, ಅಂಶಗಳನ್ನು ವಿವರಿಸಲಾಗಿದೆ. ಇದರೊಂದಿಗೆ ಅಧ್ಯಯನದ ಪ್ರತಿಯೊಂದು ಜಿಲ್ಲೆಯ ನೈಸರ್ಗಿಕ ಸಂಪತ್ತು, ಹವಾಗುಣ ಹಾಗೂ ಆಡಳಿತ ಇನ್ನಿತರ ವಿವರಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಮೂರನೇ ಅಧ್ಯಾಯವು ಬೇಡ ಬುಡಕಟ್ಟು ಸಮುದಾಯದ ಸ್ಥೂಲ ಪರಿಚಯ ಹಾಗೂ ಮಹಿಳೆಯ ನಿರ್ವಚನೆ ಕುರಿತು ಆರಂಭದ ಕಾಲದಿಂದ ಇವತ್ತಿನ ಸಂದರ್ಭದವರೆಗೂ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅದರ ಜೊತೆಗೆ ಮಾತೃಪ್ರಧಾನ ಸಮಾಜ ಕುರಿತು ನೋಡುವುದರೊಂದಿಗೆ ಇಂದಿನ ಸಂದರ್ಭದಲ್ಲಿ ಪಿತೃಪ್ರಧಾನ ಸಮಾಜದಲ್ಲಿ ಅದರ ಗುಣ ಲಕ್ಷಣಗಳನ್ನು ಅಥವಾ ಆ ಸ್ವರೂಪದ ಕುಟುಂಬಗಳನ್ನು ನೋಡುವ ಪ್ರಯತ್ನ ಮಾಡಲಾಗಿದೆ. ಇದಾದ ನಂತರದಲ್ಲಿ ಮನುಷ್ಯನ ಆದಿಮ ಸಮಾಜದಲ್ಲಿ ಮಹಿಳೆ ಇರುವಿಕೆಯನ್ನು ಅಂದರೆ ಮುಕ್ತ ಸಮಾಜದಲ್ಲಿ ಮಹಿಳೆ ಹೊಂದಿರುವಂತಹ ಅಂತಸ್ತನ್ನು ವಿವರಿಸಲಾಗಿದೆ. ಜೊತೆಗೆ ಮಾತೃಪ್ರಧಾನ ಸಮಾಜದ ಪ್ರಭಾವವು ಕಡಿಮೆಯಾದಂತೆ ದೇವತೆಗಳ ಸ್ವರೂಪದಲ್ಲಿ ಆಗಿರುವಂತಹ ಪರಿವರ್ತನೆಯನ್ನು ಕುರಿತು ಅದರಲ್ಲಿ ಸ್ತ್ರೀ ದೇವತೆಗಳ ರೂಪಾಂತರಕ್ಕೆ ಇರುವಂತಹ ಕಾರಣಗಳು ಇತರೆ ಅಂಶಗಳನ್ನು ವಿವರಿಸಲಾಗಿದೆ.

ನಾಲ್ಕನೆ ಅಧ್ಯಾಯವು ಬೇಡ ಬುಡಕಟ್ಟು ಸಮುದಾಯದ ಮಹಿಳೆಯ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಕುರಿತು ವಿವರಿಸಲಾಗಿದೆ. ಅದರೊಂದಿಗೆ ಬೇಡ ಸಮುದಾಯದ ಸಂಸ್ಕೃತಿ ಮತ್ತು ಮಹಿಳೆ ಕುರಿತು ವಿವರಿಸಲಾಗಿದೆ. ಈ ಎಲ್ಲಾ ಮೂಲಾಂಶಗಳೊಂದಿಗೆ ಮಹಿಳೆಯನ್ನು ಅಧ್ಯಾಯ ನಾಲ್ಕರಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಐದನೆ ಅಧ್ಯಾಯವು ಪ್ರಮುಖವಾಗಿ ಬೇಡ ಬುಡಕಟ್ಟು ಸಮುದಾಯದ ಆರ್ಥಿಕ ವ್ಯವಸ್ಥೆ ಕುರಿತು ವಿವರಿಸಲು ಪ್ರಯತ್ನಿಸಲಾಗಿದೆ. ಅದರಲ್ಲಿ ಬೇಡ ಬುಡಕಟ್ಟು ಸಮುದಾಯದ ಮಹಿಳೆ ಉತ್ಪಾದನಾ ವ್ಯವಸ್ಥೆಯನ್ನು ವಿಶ್ಲೇಷಣೆಗೆ ಒಳಪಡಿಸಲು ಪ್ರಯತ್ನಿಸಲಾಗಿದೆ. ಮತ್ತು ಈ ಉತ್ಪಾದನಾ ಚಟುವಟಿಕೆಗಳಲ್ಲಿ ಮಹಿಳೆ ಭಾಗವಹಿಸುವಿಕೆ ಹಾಗೂ ಆರ್ಥಿಕ ಕ್ಷೇತ್ರದ ಮೇಲಿನ ಒಡೆತನ ಮತ್ತು ಮಹಿಳೆ ಕುರಿತು ವಿವರಣೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ ಮತ್ತು ರಾಜಕೀಯದಲ್ಲಿ ಮಹಿಳೆ ಮೀಸಲಾತಿ ಕುರಿತು ವಿವರಿಸಲಾಗಿದೆ.

ಆರನೇ ಅಧ್ಯಾಯ ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯು ಎದುರಿಸುತ್ತಿರುವಂತಹ ಸಮಸ್ಯೆ ಸವಾಲುಗಳು, ಪುರುಷನಿಷ್ಠ ಸಮಾಜದಲ್ಲಿ ಯಾವ ರೀತಿ ಎದುರುಗೊಳ್ಳುತ್ತಿದ್ದಾಳೆಂದು ವಿವರಿಸಲಾಗಿದೆ. ಜೊತೆಗೆ ಇದುವರೆಗೆ ಬುಡಕಟ್ಟು ಮಹಿಳಾ ಅಭಿವೃದ್ಧಿಗಾಗಿ ಸರಕಾರ ಕೈಗೊಂಡಿರುವಂತ ಯೋಜನೆಗಳ ಸಫಲತೆ ಹಾಗೂ ವಿಫಲತೆ ಕುರಿತು ವಿವರಿಸಲಾಗಿದೆ.

ಸಮಾರೋಪವು ಈ ಎಲ್ಲ ಅಧ್ಯಾಯಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಮತ್ತು ಒಟ್ಟಾರೆ ಅಧ್ಯಯನದ ಫಲಿತಗಳನ್ನು ಸಮಾರೋಪದಲ್ಲಿ ನೀಡಲಾಗಿದೆ.

ಅಡಿಟಿಪ್ಪಣಿ

೧. ವಿರೂಪಾಕ್ಷಿ ಪೂಜಾರಹಳ್ಳಿ, "ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ", ೨೦೦೮, ಪುಟ.೧೪೬.

೨. ಅದೇ ಪುಟ. ೧೪೭.

೩. ಅದೇ ಪುಟ.೧೪೮.

೪. ಶೈಲಜ ಹಿರೇಮಠ, ಮಹಿಳಾ ಅಧ್ಯಯನ ಪತ್ರಿಕೆ, ಸಂಪುಟ ೯, ಸಂಚಿಕೆ ೧, ಜನವರಿ -ಜೂನ್, ೨೦೦೭, ಪುಟ.

೫. ಟಿ.ಆರ್.ಚಂದ್ರಶೇಖರ, 'ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು" ೨೦೦೩, ಪುಟ.೧೧೩.

೬. ಎಸ್.ಕೆ.ಸಣ್ಣ ಓಬಯ್ಯ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪುಟ.೭

೭. ಅದೇ ಪುಟ.೭

೮. ಅದೇ ಪುಟ.೮

೯. ಅದೇ ಪುಟ.೮

೧೦. ಅದೇ ಪುಟ.೯

೧೧. ಅದೇ ಪುಟ.೧೦


೧೨. ಅದೇ ಪುಟ.೧೦

೧೩. ಅದೇ ಪುಟ.೧೪

೧೪. ಅದೇ ಪುಟ.೧೪

೧೫. ಅದೇ ಪುಟ.೫

ಅಧ್ಯಯನ ಕ್ಷೇತ್ರದ ಜಿಲ್ಲೆಗಳು



ಗುಲ್ಬರ್ಗ ಜಿಲ್ಲೆ

ಸ್ಕೇಲ್ 1 : 1,050,000 (1 ಸೆಂ.ಮೀ = 10.5 ಕಿ.ಮೀ)



ರಾಯಚೂರು ಜಿಲ್ಲೆ

ಸ್ಕೇಲ್ 1 : 700.000 (1 ಸೆಂ.ಮೀ = 7.0 ಕಿ.ಮೀ)



ಕೊಪ್ಪಳ ಜಿಲ್ಲೆ

ಸ್ಕೇಲ್ 1: 750,000 (1ಸೆಂ.ಮೀ = 7.5 ಕಿ.ಮೀ)



ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರದ ಪರಿಚಯ

೨.೧. ಗುಲಬರ್ಗಾ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೨.೨. ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೨.೩. ಕೊಪ್ಪಳ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಪ್ರಸ್ತುತ ಅಧ್ಯಯನವು ಹೈದ್ರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನು ಅಧ್ಯಯನ ಕ್ಷೇತ್ರವನ್ನಾಗಿರಿಸಿ ಕೊಂಡಿದೆ. ಈ ಪ್ರದೇಶದ ಒಂದು ಸ್ಥೂಲ ಪರಿಚಯವನ್ನು ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಧ್ಯಯನ ಕ್ಷೇತ್ರದ ಬಹುಮುಖ್ಯ ಉದ್ದೇಶವೆಂದರೆ ಮಹಿಳೆಯನ್ನು ಮುಖ್ಯ ಕೇಂದ್ರ ವಾಗಿರಿಸಿಕೊಂಡು ಅದರಲ್ಲಿ ಬುಡಕಟ್ಟು ಸಮುದಾಯವಾದ ಬೇಡ ಬುಡಕಟ್ಟು ಸಮುದಾಯದ ಮಹಿಳೆಯರ ಸ್ಥಿತಿಗತಿಗಳ ಸ್ವರೂಪವನ್ನು ಅನಾವರಣಗೊಳಿಸುವ ಸಲುವಾಗಿ, ಈ ಪ್ರದೇಶದ ಭೌಗೋಳಿಕ, ಐತಿಹಾಸಿಕ ಹಾಗೂ ಸಾಮಾಜಿಕ ಕ್ಷೇತ್ರದ ಪರಿಚಯ ಅವಶ್ಯಕ. ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಐತಿಹಾಸಿಕ ಹಿನ್ನೆಲೆ ಭೌಗೋಳಿಕ ಅಂಶಗಳು, ಜನಸಂಖ್ಯೆ, ಶಿಕ್ಷಣ, ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಇತ್ಯಾದಿ ವಿಷಯಗಳ ಸೂಕ್ಷ್ಮಚಿತ್ರಣವನ್ನು ಇಲ್ಲಿ ನೀಡಲಾಗಿದೆ.

ಈ ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪ್ರಮುಖವಾಗಿ ಈ ಭಾಗದ ಪ್ರಸ್ತುತ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡಿದೆ. ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಸ್ಥಾನಮಾನವೇನು. ಹಾಗೆಯೇ ಪ್ರಾದೇಶಿಕ ಅಸಮಾನತೆಯ ದೃಷ್ಟಿಯಿಂದ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದಿರುವ ಗುಲಬರ್ಗಾ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದಕ್ಕೆ ವಿವಿಧ ಅಧ್ಯಯನಗಳು, ಕ್ಷೇತ್ರಕಾರ್ಯದ ಮಾಹಿತಿ ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ. ಆದರೆ ಈ ಮೂರು ಜಿಲ್ಲೆಗಳು ತನ್ನದೇ ಆದ ವಿಭಿನ್ನವಾದ ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ಹಾಗೂ ರಾಜಕೀಯ ಮತ್ತು ಆರ್ಥಿಕ ಆಯಾಮದ ನೆಲೆಗಳನ್ನು ಗಮನಿಸಿದಾಗ ಮೂರು ಜಿಲ್ಲೆಗಳು ವಿಭಿನ್ನ ಸ್ತರಗಳಲ್ಲಿ ನಿಲ್ಲುತ್ತವೆ. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಬೇರೆ ಎಲ್ಲಾ ಪ್ರದೇಶಗಳು ಅಭಿವೃದ್ಧಿಯ ಪಥದಲ್ಲಿ ಮುಂದುವರೆಯುವ ಪ್ರಯತ್ನದಲ್ಲಿದ್ದರೆ ಈ ಮೂರು ಜಿಲ್ಲೆಗಳಲ್ಲಿ ಅಂತಹ ಲಕ್ಷಣಗಳು ಗೌಣವೆಂದು ಹೇಳಬಹುದು.

"ಮಾನವ ಅಭಿವೃದ್ಧಿ ೯೯೯ ವರದಿಯ ಪ್ರಕಾರ ಹೇಳುವಂತೆ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸಲಾಗಿದೆ.

ಈ ಮೂರು ಜಿಲ್ಲೆಗಳು ಶೈಕ್ಷಣಿಕ, ಆರ್ಥಿಕ ಚಟುವಟಿಕೆ, ಸಾಮಾಜಿಕ ಸಂಗತಿಗಳು, ರಾಜಕೀಯ ನೀತಿಗಳು ಮತ್ತು ಸಾಂಸ್ಕೃತಿಕ ಅಂಶಗಳು ಇತರೆ ಯಾವುದೇ ನೆಲೆಯಿಂದ ಅವಲೋಕನ ಮಾಡಿದರೂ ಸಾಮಾಜಿಕ ಅಸಮಾನತೆಯ ಚಿತ್ರಣವು ಕಂಡುಬರುತ್ತದೆ."[೧] ಇಂತಹ ಸಂದರ್ಭದಲ್ಲಿ ಸಮಾಜದಲ್ಲಿರುವ ಬುಡಕಟ್ಟುಗಳ ಪರಿಸ್ಥಿತಿಯು ಯಾವ ತೆರನದು. ಅದರಲ್ಲಿ ಬೇಡ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯೂ ಇನ್ನೂ ಯಾವ ಮಟ್ಟದ್ದು ಎನ್ನುವಂತಹ ಪ್ರಶ್ನೆಯೂ ನಮ್ಮುಂದೆ ಎದುರುಗೊಳ್ಳುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಇಲ್ಲಿನ ಸಾಮಾಜಿಕ ಅಸಮಾನತೆ ಸರಿ ಪಡಿಸುವಲ್ಲಿ ಪ್ರಜಾತಂತ್ರ ಸರಕಾರವು ಸಫಲವಾಗಿಲ್ಲ. ಅದು ಹೈದ್ರಾಬಾದ್ ಕರ್ನಾಟಕದಲ್ಲಿ ಬರುವಂತಹ ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ "ಶಿಕ್ಷಣವನ್ನು ಉತ್ತಮಪಡಿಸುವ ಸಲುವಾಗಿ ೨೦೦೧-೦೨ನೆಯ ಸಾಲಿನಲ್ಲಿ ಈ ಜಿಲ್ಲೆಗಳಿಗೆ ವಿಶೇಷ ಶಿಕ್ಷಣ ನಿರ್ದೇಶನಾಲಯವನ್ನು ಸರ್ಕಾರವು ಸ್ಥಾಪಿಸಿದೆ".[೨] ಇಂತಹ ಕಾರ್ಯಕ್ರಮಗಳು ಇಷ್ಟೊಂದು ವಿಳಂಬವಾಗಿ ಅನುಷ್ಠಾನವಾಗಲು ಸರ್ಕಾರ ಆಡಳಿತ ಅಧಿಕಾರಿಗಳಲ್ಲಿರುವ ತಾತ್ಸಾರವೇ ಕಾರಣವೆನ್ನಬಹುದು. ಪ್ರೊ. ಟಿ.ಆರ್.ಚಂದ್ರಶೇಖರ ಅವರ ಅಭಿಪ್ರಾಯದಂತೆ ಈ ತೆರನಾದ ಜಿಲ್ಲೆಗಳು ಹಿಂದುಳಿಯುವಿಕೆಗೆ ಕೆಳಮಟ್ಟದ ಸಾಕ್ಷರತೆ, ಕೆಳಮಟ್ಟದ ವರಮಾನ ಹಾಗೂ ಲಿಂಗತಾರತಮ್ಯ ಇಂತವೆಲ್ಲವುಗಳಿಗೆ ಜಾತಿ ಆಯಾಮವಿದೆ. ಮುಂದುವರೆದು ಜನಸಾಮಾನ್ಯರ ಶ್ರಮ, ಪ್ರತಿಫಲ, ಕೃಷಿಯ ಮೇಲಿನ ಅವಲಂಬನೆ ಕುರಿತು ಅಂಕಿಸಂಖ್ಯೆಗಳ ಮುಖಾಂತರ ಹಿಂದುಳಿದಿರುವಿಕೆಯನ್ನು ಸ್ಪಷ್ಟಪಡಿಸುತ್ತಾರೆ.

"ಭಾರತೀಯ ಸ್ತ್ರೀಯು ಇಂದು ಎದುರಿಸುತ್ತಿರುವ ಸವಾಲುಗಳನ್ನು, ಸಮಸ್ಯೆಗಳನ್ನು ನೋಡುವಾಗ ಇಪ್ಪತ್ತೊಂದನೆಯ ಶತಮಾನದ ಈ ಸಂದರ್ಭದಲ್ಲಿ ಇದರ ಪರಿಚಯವನ್ನು ಪಡೆಯುವ ಹಿನ್ನೆಲೆಯಲ್ಲಿ ಮಹಿಳೆ ನಡೆದು ಬಂದುದ್ದನ್ನು ನೋಡಬೇಕಾದದ್ದು ಬಹುಮುಖ್ಯವಾದ ಅಂಶ. ಈ ಪ್ರಕಾರದ ಮಾನದಂಡಗಳ ಮೂಲಕವೇ ಗತಿಸಿದ ಕಾಲಮಾನಗಳಲ್ಲಿ ಅವಳ ಸ್ಥಾನಮಾನಗಳನ್ನು ಮತ್ತು ಹಕ್ಕುಗಳಲ್ಲಿ ಉಂಟಾದ ಪರಿವರ್ತನೆಯ ಚಿತ್ರಣವನ್ನು ಪಡೆಯುವುದರ ಜೊತೆಗೆ ಇಡೀ ಮಹಿಳಾ ಸಮುದಾಯವು ಯಾವ ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತ ಬಂದಿತು ಎಂಬುದನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ."[೩] ಗತಿಸಿದ ಚರಿತ್ರೆಯನ್ನು ಅವಲೋಕಿಸಿದಾಗ ಮಾತ್ರ ಮಹಿಳೆಯ ಸಂಪೂರ್ಣ ಮಾಹಿತಿ ದೊರೆಯುತ್ತದೆ. ಮತ್ತು ಮಹಿಳೆಯರನ್ನು ಕುರಿತು ಸ್ವಾಮಿ ವಿವೇಕಾನಂದರು "ಶಕ್ತಿ ಸ್ವರೂಪಿಣಿಯಾದ ಸ್ತ್ರೀಯನ್ನು ಗೌರವಿಸದೇ ಇದ್ದುದೇ ಭಾರತದ ಅವನತಿಗೆ ಕಾರಣವಾಯಿತೆಂದು"[೪] ಪ್ರತಿಕ್ರಿಯಿಸಿದ್ದಾರೆ. ಈ ನಾಡಿನಲ್ಲಿ ಹರಿಯುವ ಎಲ್ಲ ನದಿಗಳು ಸ್ತ್ರೀವಾಚಕವೇ ಹೊರತು ಪುರುಷ ವಾಚಕವುಗಳಲ್ಲ (ಚಂಬಲ್ ಮತ್ತು ಬ್ರಹ್ಮಪುತ್ರ ಇವೆರಡು ಮಾತ್ರ ನದಿಗಳು) ಧಾರ್ಮಿಕವಾಗಿ ನೋಡುವುದಾದರೆ ನಮ್ಮಲ್ಲಿ ಇರುವ ಹನ್ನೆರಡು ಶಕ್ತಿಪೀಠಗಳು ಸ್ತ್ರೀ ಪ್ರಾತಿನಿಧ್ಯವನ್ನು ಎತ್ತಿಹಿಡಿಯುವವು. ಸೌಂದರ್ಯವನ್ನು ಕುರಿತು ವಿವರಣೆ ನೀಡುವಾಗ ಸುಂದರ ಸ್ತ್ರೀಯರನ್ನು ಮುಂದಿಟ್ಟುಕೊಂಡೆ ಕವಿಗಳು,

ಕಲಾವಿದರು ವರ್ಣಿಸುವರು. ಮತ್ತು ವಿದ್ಯೆಯ ಅಧಿದೇವತೆ ಸರಸ್ವತಿ ಮತ್ತು ಸಂಪತ್ತಿನ ಅಧಿದೇವತೆಯಾಗಿ ಲಕ್ಷ್ಮಿಯನ್ನು ಇವತ್ತಿನವರೆಗೂ ಇಂಡಿಯಾದ ಉದ್ದಗಲಕ್ಕೂ ಪೂಜಿಸಲಾಗುತ್ತಿದೆ. ಅದರಂತೆ ನವರಾತ್ರಿಯ ಒಂಬತ್ತು ದಿನಗಳಲ್ಲಿ ಶಕ್ತಿ ಅಧಿದೇವತೆಯಾದ ದುರ್ಗೆಯ ಪೂಜೆಯು ನಮ್ಮಲ್ಲಿ ಸಾಕಷ್ಟು ಮಹತ್ವ ಪಡೆದಿದೆ. ಇಷ್ಟೆಲ್ಲಾ ಆರಾಧನೆ, ಭಕ್ತಿಯಲ್ಲಿ ಮಹತ್ವ ಪಡೆದಿರುವ ಸ್ತ್ರೀಯರು ಅಧಿಕಾರ, ಹಕ್ಕು, ಕರ್ತವ್ಯ, ಸಮಾನತೆ ಹಾಗೂ ಶಿಕ್ಷಣ ಇತರೆ ವಿಷಯಗಳಲ್ಲಿ ಕಡೆಗಣಿಸಿರುವುದಕ್ಕೆ ಕಾರಣವೇನು? ಎನ್ನುವಂತಹ ಪ್ರಶ್ನೆಯನ್ನು ಎತ್ತಿಕೊಂಡು ಮಹಿಳೆಯರಲ್ಲಿ ಬುಡಕಟ್ಟು ಮಹಿಳೆಯರನ್ನು ಪ್ರಮುಖ ವಿಷಯವನ್ನಾಗಿ ಮಾಡಿಕೊಳ್ಳಲಾಗಿದೆ. ಏಕೆಂದರೆ ಅಧ್ಯಯನ ಕ್ಷೇತ್ರದಲ್ಲಿ ಮಹಿಳೆಯರ ಜೀವನ ಅಷ್ಟೊಂದು ಸರಳವಾಗಿಲ್ಲ.

೨.೧. ಗುಲಬರ್ಗಾ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಗುಲಬರ್ಗಾ ಜಿಲ್ಲೆಯು ಕರ್ನಾಟಕ ರಾಜ್ಯದ "ಈಶಾನ್ಯ ಭಾಗದಲ್ಲಿದ್ದು ೧೬-೧೨° ಮತ್ತು ೧೭-೪೬° ಉತ್ತರ ಅಕ್ಷಾಂಶ ಹಾಗೂ ೭೬-೦೪° ಮತ್ತು ೭೭-೪೨° ರೇಖಾಂಶಗಳ ಮಧ್ಯದಲ್ಲಿ ವಿಸ್ತರಿಸಲ್ಪಟ್ಟಿದೆ. ಸಮುದ್ರ ಮಟ್ಟದಿಂದ ಜಿಲ್ಲೆಯು ಸರಾಸರಿ ೬೯೩ ಸೆಂ.ಮೀ ಉತ್ತರದಲ್ಲಿ ಇರುತ್ತದೆ. ಜಿಲ್ಲೆಯ ಉತ್ತರ ಭಾಗದಲ್ಲಿ ಬೀದರ, ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ ಪೂರ್ವ ಭಾಗದಲ್ಲಿ ಆಂಧ್ರಪ್ರದೇಶದ ಮೇಡಕ್ ಹಾಗೂ ಮೆಹಬೂಬನಗರ, ದಕ್ಷಿಣದಲ್ಲಿ ರಾಯಚೂರ ಹಾಗೂ ಪಶ್ಚಿಮದಲ್ಲಿ ಬಿಜಾಪುರ ಮತ್ತು ಮಹಾರಾಷ್ಟ್ರದ ಸೋಲ್ಲಾಪುರ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ".[೫] ಈ ಜಿಲ್ಲೆಯಲ್ಲಿ ಮುಖ್ಯವಾಗಿ ಕೃಷ್ಣಾ, ಭೀಮಾ, ಕಾಗಿಣಾ, ಗೋರಿ, ಅಮರ್ಜಾ ಹಾಗೂ ಮುಲ್ಲಾಮುರಿ ಎಂಬ ನದಿಗಳು ಹರಿಯುತ್ತವೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಜಿಲ್ಲೆಯ ಸುರಪುರ, ಶಹಾಪುರ ಹಾಗೂ ಜೇವರ್ಗಿ ತಾಲ್ಲೂಕುಗಳಿಗೆ ನೀರಾವರಿ ಕಲ್ಪಿಸಲಾಗಿದೆ.

ಈ ರಾಜ್ಯದ ಎರಡನೇ ಅತಿದೊಡ್ಡ ಜಿಲ್ಲೆ ಇದಾಗಿದ್ದು, ಒಟ್ಟು ಭೌಗೋಳಿಕ ಪ್ರದೇಶ ೧೬.೧೦೨ ಚ.ಕಿ.ಮೀ ಇದ್ದು, ರಾಜ್ಯದ ಶೇ. ೮.೦೫ರಷ್ಟು ಪ್ರದೇಶವನ್ನೊಳಗೊಂಡಿದೆ. ಒಟ್ಟು ೧.೪೩೭ ಹಳ್ಳಿಗಳಿದ್ದು. ಇವುಗಳಲ್ಲಿ ೧.೩೬೦ ಜನವಸತಿಗಳಿದ್ದು. ೭೭ ಹಳ್ಳಿಗಳು ಜನವಸತಿ ಇಲ್ಲದವೂ ಆಗಿವೆ. ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೩೧.೩೦ಲಕ್ಷ ಇದ್ದು, ಇದರಲ್ಲಿ ೧೫.೯೨ ಲಕ್ಷ ಗಂಡಸರು ಮತ್ತು ೧೫.೩೮ಲಕ್ಷ ಹೆಂಗಸರು ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ೨೨.೭೮ಲಕ್ಷ ಜನರು ಗ್ರಾಮ ನಿವಾಸಿಗಳಾಗಿದ್ದು, ಉಳಿದ ೮.೫೨ಲಕ್ಷ ಜನರು ನಗರವಾಸಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಪ್ರತಿಯೊಂದು ಸಾವಿರ ಗಂಡಸರ ಪ್ರಮಾಣಕ್ಕೆ ೯೬೬ ಹೆಂಗಸರು ಇದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ಗುಲಬರ್ಗಾ ಜಿಲ್ಲೆಯಲ್ಲಿ ಒಟ್ಟು ೧.೫೪ ಲಕ್ಷ ಪರಿಶಿಷ್ಟ ವರ್ಗದವರಿದ್ದು, ಇದು ಕ್ರಮವಾಗಿ ಒಟ್ಟು ಜನಸಂಖ್ಯೆಯ ಶೇ. ೪.೯೨ ಆಗಿದೆ. ಅದರಲ್ಲಿ ಬೇಡ ಬುಡಕಟ್ಟಿನ ಜನಸಂಖ್ಯೆಯೂ "೨೦೦೧ರಲ್ಲಿ ಒಟ್ಟು ೧,೨೧,೨೭೦ ಇದ್ದು ಅದರಲ್ಲಿ ಪುರುಷರು ೬೧.೦೦೯ ಸ್ತ್ರೀಯರು ೬೦.೨೬೧ ಇರುವುದು ಕಂಡುಬರುತ್ತದೆ".[೬]

ಕೋಷ್ಟಕ-೧

ಗುಲಬರ್ಗಾ ಜಿಲ್ಲೆಯ ಜನಸಂಖ್ಯೆ ಆಯ್ದ ಸೂಚಿಗಳು

ಕ್ರ.ಸಂ	ವಿವರ	ಗುಲಬರ್ಗಾ
೧.	ಭೌಗೋಳಿಕ ಪ್ರದೇಶ	೧೬.೧೦೨
೨.	ಒಟ್ಟು ಜನಸಂಖ್ಯೆ	೩೧.೩೦
೩.	ಜನಸಂಖ್ಯೆ ದಶಕವಾರು	—
೪.	ಪರಿಶಿಷ್ಟ ಜಾತಿ	೭.೧೭.೬೯೫
೫.	ಪರಶಿಷ್ಟ ಪಂಗಡ	೧.೫೪.೧೯೫
೬.	ಬೇಡ ಬುಡಕಟ್ಟು ಜನಸಂಖ್ಯೆ	೧.೨೧.೨೭೦
೭.	ಜನಸಾಂದ್ರತೆ	೧೯೨
೮.	ಲಿಂಗ ಪ್ರಮಾಣ	೯೬೬

ಮೂಲ : ಜನಗಣತಿ ವರದಿ ೨೦೦೧, ಜಿಲ್ಲಾ ಅಂಕಿ-ಸಂಖ್ಯೆಗಳ ವರದಿ.

೨.೧.೧. ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ

ಕರ್ನಾಟಕ ಇತಿಹಾಸದ ಭೂಪಟದಲ್ಲಿ ಮುಕುಟ ಪ್ರಾಯವಾದ ಹಾಗೂ ಅತಿ ಹಿಂದುಳಿದ ಪ್ರದೇಶವಾದ ಗುಲಬರ್ಗಾ ಜಿಲ್ಲೆಯು ಶೈಕ್ಷಣಿಕ ದೃಷ್ಟಿಯಿಂದ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಇದರಲ್ಲಿ ಅತ್ಯಂತ ಚಾರಿತ್ರಿಕವಾಗಿ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಸ್ಥಳವೆಂದರೆ "ಇಂದಿನ ಚಿತ್ತಾಪೂರ ತಾಲ್ಲೂಕಿನ ನಾಗಾಯಿ ನಾಶದ ಅಂಚಿನಲ್ಲಿರುವ ಈ ಊರಲ್ಲಿ ರಾಷ್ಟ್ರಕೂಟ ಅರಸರ ಗತವೈಭವ ಸಾರುವ ಅನೇಕ ಶಿಲಾಶಾಸನಗಳು ಲಭಿಸಿವೆ. ಇದರಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ದೊರೆತಿವೆ. ನಾಗಾಯಿ ವಿಶ್ವವಿದ್ಯಾಲಯ ಮಟ್ಟದ ಜ್ಞಾನ ಪ್ರಸಾರದ ಸಂಸ್ಥೆಯಾಗಿತ್ತು. ಷಟ್‌ಶಾಸ್ತ್ರಗಳ ಬೋಧನೆ ಇಲ್ಲಿ ಲಭ್ಯವಿತ್ತು. ೨೫೭ ವಿದ್ಯಾರ್ಥಿಗಳ ಊಟ ಮತ್ತು ವಸತಿ ಸೌಕರ್ಯವನ್ನು ಈ ಸಂಸ್ಥೆ ಒದಗಿಸಿತ್ತು".[೬] ಇಂತಹ ಅನೇಕ ಅಂಶಗಳಿಂದ ನಾಗಾಯಿ ೮ನೇ ಶತಮಾನದ ಉತ್ತರಾರ್ಧ ಮತ್ತು ೯ನೇ ಶತಮಾನದ ಪೂರ್ವಾರ್ಧದಲ್ಲಿ ಉತ್ಕೃಷ್ಟ ಶಿಕ್ಷಣಕ್ಕೆ ಪ್ರಸಿದ್ಧಿಯಾಗಿತ್ತೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಆದರೆ ಶಿಕ್ಷಣವು ಮಹಿಳೆಯರಿಗೆ ದೊರೆಯುತ್ತಿದ್ದುದ್ದು ಮಾಹಿತಿ ಇಲ್ಲ.

ಮಧ್ಯಕಾಲೀನ ಸಂದರ್ಭದಲ್ಲಿ ನೋಡುವುದಾದರೆ ಮಹಮ್ಮದೀಯ ಅರಸರ ಆಳ್ವಿಕೆಯ ಈ ಪ್ರದೇಶಕ್ಕೆ ಇಸ್ಲಾಂ ಮಾದರಿಯ ಶಿಕ್ಷಣ ಲಭಿಸಿತು. "ಬೀದರಿನ 'ಮಹಮ್ಮದ ಷಾ ಅರಸನ ಘವಾನ್

ಶಿಕ್ಷಣ ಪ್ರೇಮಿಯಾಗಿದ್ದನು. ಅವನು ಈ ಭಾಗದಲ್ಲಿ ಸಾಕಷ್ಟು 'ಮಕ್ತಾಬ' ಅಥವಾ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದನು. ಇದೇ ಸಮಯದಲ್ಲಿ ಬೀದರಿನಲ್ಲಿ ಒಂದು ಪ್ರಸಿದ್ಧ ಮದರಸಾವನ್ನು ಅಥವಾ ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಇಲ್ಲಿನ ಜನತೆಗೆ ಉನ್ನತ ಶಿಕ್ಷಣ ದೊರೆಯುವಂತೆ ಮಾಡಿದನು. ಇವತ್ತಿನವರೆಗೂ ಬೀದರಿನ ಮದರಸಾವನ್ನು 'ಗವಾನ್ ಮದ್ರಾಸ್' ಎಂದೇ ಕರೆಯುತ್ತಾರೆ."[೨] ಆದರೆ ದುರಂತವೆಂದರೆ ಈ ಶಿಕ್ಷಣ ಕೇವಲ ಮಹಮ್ಮದೀಯರಿಗೆ ಮಾತ್ರ ಅವಕಾಶವಿತ್ತು. ಹಿಂದೂಗಳಿಗೆ ಅವಕಾಶವಿರಲಿಲ್ಲ. ಈ ಸಂದರ್ಭದಲ್ಲಿ ಹಿಂದೂಗಳು ತಂತಮ್ಮ ಮನೆಗಳಲ್ಲೋ, ಮಠಮಾನ್ಯಗಳಲ್ಲೋ ಜ್ಞಾನದಾಹ ಪಡೆದುಕೊಳ್ಳುತ್ತಿದ್ದರು. ಇದರಲ್ಲಿ ಮಹಿಳಾ ಶಿಕ್ಷಣ ತೀರಾ ಅಪರೂಪವಾಗಿತ್ತು. ಉನ್ನತ ವರ್ಗದವರಲ್ಲಿ ಮಹಿಳೆಯರು ಪರ್ದಾ ಪದ್ಧತಿಯೂ ಅನುಸರಿಸುತ್ತಿದ್ದರು ಹಾಗೂ ರಾಜಮನೆತನದ ಸ್ಥಾನಿಕ ಅರಸರ ಕುಟುಂಬಗಳಲ್ಲಿ ಮತ್ತು ಅವರ ಬಂಧುಗಳಾದ ಸ್ತ್ರೀಯರಿಗೆ ಮಾತ್ರ ಶಿಕ್ಷಣವು ಅವರವರ ನಿವಾಸಗಳಲ್ಲಿ ದೊರೆಯುತ್ತಿತ್ತು. ಇದೇ ಸಮಯದಲ್ಲಿ ಹಲವಾರು ಸಣ್ಣಪುಟ್ಟ ರಾಜಮನೆತನಗಳ ಆಡಳಿತದ ಕಾರ್ಯವೈಖರಿಯಿಂದ ಸ್ಥಿರತೆ ಕಳೆದುಕೊಂಡಿತ್ತು. ೧೭೨೪ರಲ್ಲಿ ಹೈದ್ರಾಬಾದ್ ಸಂಸ್ಥಾನ ಜನ್ಮತಾಳಿತು. ಇದು ಬ್ರಿಟಿಷ್ ಮಾಂಡಲಿಕತ್ವವನ್ನು ಸ್ವೀಕರಿಸಿದ್ದರಿಂದ ಅವರ ಸಲಹೆಗಳನ್ನು ಹೈದ್ರಾಬಾದ್ ರಾಜ್ಯದಲ್ಲಿ ಸಹಜವಾಗಿಯೇ ಕಾರ್ಯಗತಗೊಳಿಸಲಾಯಿತು. ಇದರ ಅನ್ವಯ ೧೮೫೪ರ ವುಡನ್ ಪತ್ರದ ಪ್ರಭಾವ ಹೈದ್ರಾಬಾದ್ ರಾಜ್ಯಕ್ಕೂ ತಲುಪಿತು. ೧೮೬೯ರಲ್ಲಿಯೇ ಸ್ವತಂತ್ರವಾದ 'ಶಿಕ್ಷಣ ಇಲಾಖೆ' ಪ್ರಾರಂಭ ಹೊಂದಿತು. ಪ್ರತಿ ತಾಲ್ಲೂಕಿಗೆ ಎರಡರಂತೆ ಜಿಲ್ಲಾ ಕೇಂದ್ರದಲ್ಲಿ ಒಂದರಂತೆ ಉರ್ದು ಮಾಧ್ಯಮದ ಶಾಲೆಗಳು ಹಳ್ಳಿಯ ಮುಖ್ಯಸ್ಥ ಅಥವಾ ಪಟವಾರಿಯು ನೋಡಿಕೊಳ್ಳುತ್ತಿದ್ದನು."[೩] ದುರಂತವೆಂದರೆ ಪುರುಷನ ಸರಿಸಮಾನವಾದ ಶಿಕ್ಷಣದ ಅನುಕೂಲಗಳು ಮಹಿಳೆಯ ಪಾಲಿಗೆ ಹತ್ತಿರವಾಗಲೇ ಇಲ್ಲ ಎನ್ನುವಂತಹ ಅಂಶವು ಇವುಗಳಿಂದ ತಿಳಿದುಬರುತ್ತದೆ.

ಮುಂದುವರೆದ ದಿನಗಳಲ್ಲಿ ೧೮೭೫ರಲ್ಲಿ ಆಂಗ್ಲ-ದೇಶಿಯ ಮಾಧ್ಯಮ ಶಾಲೆಯೊಂದು ತೆರೆಯಲ್ಪಟ್ಟಿತು. ಇದರಲ್ಲಿ ಉರ್ದು ಮಾಧ್ಯಮವಿದ್ದು ಆಂಗ್ಲಭಾಷೆಯನ್ನು ಒಂದು ವಿಷಯವನ್ನಾಗಿ ಬೋಧಿಸಲಾಗುತ್ತಿತ್ತು. ಬರಬರುತ್ತ ಇಂತಹ ಶಾಲೆಗಳು ಅಧಿಕವಾದವು. ಇದರ ಜೊತೆಗೆ ವಿಜ್ಞಾನ ವಿಷಯದ ಬೋಧನೆ ಆಂಗ್ಲ ಭಾಷೆಯಲ್ಲೇ ವ್ಯವಸ್ಥೆಯಿತ್ತು. ಹೀಗೆ ಆಧುನಿಕ ಶಿಕ್ಷಣವು ಜಿಲ್ಲೆಯ ಜನತೆಗೆ ಈ ಪ್ರಾಥಮಿಕ ಶಾಲೆಗಳ ಮೂಲಕವಾಗಿಯೇ ಪರಿಚಯವಾಯಿತೆನ್ನಬಹುದು. ಸ್ಥಳೀಯ ಜನತೆಯ ಕನ್ನಡ ಭಾಷೆ ಹಾಗೂ ಮಹಿಳೆಗೆ ಅವಕಾಶ ಸಿಗಲಿಲ್ಲ. ೧೯೦೪ರಲ್ಲಿ ತಾಂತ್ರಿಕ ಮತ್ತು ಇಂಜಿನಿಯರಿಂಗ್ ಸ್ವರೂಪದ ಶಾಲೆಗಳು ಹುಟ್ಟಿ ಪ್ರಪ್ರಥಮವಾಗಿ ನಮ್ಮ ಜನತೆಗೆ ವೃತ್ತಿಪರ ಶಿಕ್ಷಣ ದೊರೆಯುವಂತಾಯಿತು. ಇಂಥ ವೃತ್ತಿಪರ ಶಾಲೆಗಳೆಲ್ಲ ಭಾಗಶಃ ಹೈದ್ರಾಬಾದ್ ಸರಕಾರದ ನಿಯಂತ್ರಣದಲ್ಲಿಯೇ ಇರುತ್ತಿದ್ದವು. ಜೊತೆಗೆ ಬಡವರ ಹಿತವನ್ನು ಬಯಸುವ ಶಿಕ್ಷಣವು ಜಾರಿಗೆ ಬರಲಿಲ್ಲ. ಅದರಂತೆ ೧೯೧೦ರಲ್ಲಿ ಮೆಟ್ರಿಕ್ಯುಲೇಶನ್ ಅಥವಾ ಎಸ್.ಎಸ್.ಎಲ್.ಸಿ. ಬೋರ್ಡ್ ನಿಜಾಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿತು.

೨೦ನೇ ಶತಮಾನದ ಆರಂಭದಲ್ಲಿ ವ್ಯವಸ್ಥಿತವಾದ ಖಾಸಗಿ ಶಿಕ್ಷಣವೂ ಕೂಡ ಜಾರಿಗೊಂಡಿತು. ಜಿಲ್ಲೆಯ ಜನತೆಯ ಕಳಕಳಿ ಹೊಂದಿದ ಅನೇಕ ಗಣ್ಯರಿಂದ ಹಲವಾರು ವಿದ್ಯಾ ಸಂಸ್ಥೆಗಳು ಇಲ್ಲಿ ಉದಯಗೊಂಡವು. ಅವುಗಳಲ್ಲಿ ಮುಖ್ಯವಾದ ಪ್ರಾರಂಭಿಕ ಸಂಸ್ಥೆಗಳೆಂದರೆ ನೂತನ ವಿದ್ಯಾಲಯ ಸಂಸ್ಥೆ ಮತ್ತು ಶರಣ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ ಇವು ಸ್ವಾತಂತ್ರ್ಯ ಪೂರ್ವದಲ್ಲಿಯೇ ಈ ಪ್ರದೇಶದ ಜನರಿಗೆ ಉತ್ತಮ ದೇಶಿಯ ಶಿಕ್ಷಣ ಸುಲಭವಾಗಿ ದೊರೆಯುವಂತೆ ಮಾಡಿದವು. ಈ ಭಾಗ ಇಡೀ ರಾಜಕೀಯ ಆಡಳಿತ ವ್ಯವಸ್ಥೆಯಿಂದ ಉರ್ದು ಭಾಷೆಯ ಶಿಕ್ಷಣವು ಪ್ರಾಮುಖ್ಯತೆ ಪಡೆದಿತ್ತು. ನಂತರದಲ್ಲಿ ಮರಾಠಿ, ಕನ್ನಡ ಭಾಷೆಗೆ ಸ್ಥಾನವನ್ನು ಉಳಿಸಿಕೊಂಡು "ಕಲಬುರ್ಗಿ ಕನ್ನಡ ನಾಡು" ಎಂಬುದು ಅನುಮಾನಾಸ್ಪದವಾಗುವಂತೆ ಅಂದು ಕನ್ನಡ ಶಾಲೆಗಳು ಅಪರೂಪವಾಗಿದ್ದವು. ಆಗ ಖಾಸಗಿ ಸಂಸ್ಥೆಗಳು ಕನ್ನಡ ಶಾಲೆಗಳು ತೆರೆದು ಕನ್ನಡಿಗರಿಗೆ ಶಿಕ್ಷಣದ ಸಂಜೀವಿನಿಗಳೆನಿಸಿದವು.’’[೧೦]

ಹೀಗೆ ಸುಮಾರು ವರ್ಷಗಳ ಕಾಲ ತಳಸಮುದಾಯಗಳ ಪರವಾದಂತಹ ಶಿಕ್ಷಣ ವ್ಯವಸ್ಥೆಯೂ ಸ್ಥಳೀಯ ಭಾಷೆಯಾದ ಕನ್ನಡದಲ್ಲಿ ಜಾರಿಯಾಗಲೇ ಇಲ್ಲ. ಈ ಕಾರಣದಿಂದ ಇಂದಿಗೂ ಗುಲಬರ್ಗಾ ದಲ್ಲಿ ಹಿರಿಯರನ್ನು ಕುರಿತು ಚರ್ಚೆ ಮಾಡಿದಾಗ ಉರ್ದು, ಇಂಗ್ಲಿಷ್ ಭಾಷೆಗಳ ಪ್ರಭಾವವೇ ಅಧಿಕ ವಾಗಿತ್ತು ಎಂದು ಹೇಳುತ್ತಾರೆ. ಅದೇ ಭಾಷೆಯಲ್ಲಿ ವ್ಯಾಸಂಗ ಮಾಡಿದಂತಹ ಪುರುಷರು ಮಾತ್ರ ನಮಗೆ ಸಿಗುತ್ತಾರೆ. ಆದರೆ ಮಹಿಳೆಯರು ಸಿಗುವುದು ಅಪರೂಪವೆಂದು ಹೇಳಬಹುದು.

ಮುಂದುವರೆದ ದಿನಗಳಲ್ಲಿ ಅಂದರೆ ರಾಜ್ಯಗಳ ವಿಂಗಡಣೆಯ ನಂತರ ಕನ್ನಡ ಭಾಷೆಯ ಬೆಳವಣಿಗೆಗೆ ಪೂರಕವಾಗಿ ಶಾಲೆಗಳು ಗ್ರಾಮ, ನಗರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದವು. ಅಂತಹವುಗಳಲ್ಲಿ ಪ್ರಮುಖವಾಗಿ "ಗಾಂಧೀಜಿಯವರ ಜೀವನ ಶಿಕ್ಷಣ ಶಾಲೆಗಳು (ಸುಮಾರು ೧೨೮) ಇದೆ ಜಿಲ್ಲೆಯಲ್ಲಿದ್ದವು’’[೧೧] ಮುಂದೆ ಮೂವತ್ತು ವರ್ಷಗಳ ಅನಂತರ ೧೯೬೫ರಲ್ಲಿ ಈ ಜಿಲ್ಲೆಯಲ್ಲಿ ಶಾಲೆಗಳ ಸಂಖ್ಯೆ ತೃಪ್ತಿಕರವಾಗಿ ಬೆಳೆಯುವಲ್ಲಿ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳ ಪ್ರಯತ್ನವು ಸಾಕಷ್ಟಾಗಿದೆ ಎನಿಸುತ್ತದೆ. ಆದರೆ ಇದರಲ್ಲಿ ಸಾಕ್ಷರತೆ ಪ್ರಮಾಣವು ತೃಪ್ತಿಕರವಾಗಿಲ್ಲ. ಜೊತೆಗೆ ಬೇಡ ಬುಡಕಟ್ಟು ಸಾಕ್ಷರತೆಯೂ ಅದು ೨೦೦೧ರಲ್ಲಿ ರಾಜ್ಯದಲ್ಲಿ ಗಮನಿಸಿದಾಗ ಶೇಕಡ ೪೭.೨೫ರಷ್ಟು ಕಂಡುಬರುತ್ತದೆ. ಈ ಫಲಿತಾಂಶದಿಂದ ಬೇಡ ಸಮುದಾಯವು ಶೇಕಡ ೫೦ರಷ್ಟು ಸಾಕ್ಷರತೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿಲ್ಲ. ಅಂದರೆ ತನ್ನದೆಯಾದ ಸಾಮಾಜಿಕ, ಆರ್ಥಿಕ ಮತ್ತು ಇತರ ತೊಂದರೆಗಳಲ್ಲಿರುವುದು ನಮಗೆ ಸ್ಪಷ್ಟವಾಗುತ್ತದೆ.

ಈ ಭಾಗದ ಮಹಿಳೆಯರ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ನೀಡಿದ ಶಿಕ್ಷಣ ಸಂಸ್ಥೆಯೆಂದರೆ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ. "ಇದು ೧೯೬೫-೬೬ರಲ್ಲಿಯೇ ನಗರ ಪ್ರದೇಶವಾದ ಗುಲಬರ್ಗಾದಲ್ಲಿ ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯವನ್ನು ಸ್ಥಾಪಿಸಿದೆ".[೧೨] ಈ ಶಿಕ್ಷಣ ಸಂಸ್ಥೆಯಿಂದ ನಗರ ವಲಯದ ಮಹಿಳೆಯರಿಗೆ ಮಾತ್ರ ಶಿಕ್ಷಣ ಲಭಿಸುವಂತಾಯಿತು. ಆದರೆ

ಗ್ರಾಮೀಣ ವಲಯದ ಮಹಿಳೆಯರು, ಅದರಲ್ಲಿ ಗ್ರಾಮ ನಿವಾಸಿ ಬೇಡ ಬುಡಕಟ್ಟಿನ ಸ್ತ್ರೀಯರಿಗೆ ಅದರ ಉಪಯೋಗ ಲಭಿಸದೆ ಇರಬಹುದು. ಇಂತಹ ಹತ್ತು ಹಲವಾರು ಕಾರಣಾಂಶಗಳಿಂದ ಈ ಜಿಲ್ಲೆಯ ಬುಡಕಟ್ಟು ಮಹಿಳಾ ಸಾಕ್ಷರತಾ ಪ್ರಗತಿಯೂ ಆಮೆ ವೇಗದಲ್ಲಿದೆ ಎನ್ನಬಹುದು.

೨.೧.೨. ಜಿಲ್ಲೆಯ ಆರ್ಥಿಕತೆ

ಒಂದು ಪ್ರದೇಶದ ಅಥವಾ ಜಿಲ್ಲೆಯ ಆರ್ಥಿಕತೆ ಬಹುಮುಖ್ಯವಾಗಿ ಮೂರು ಪ್ರಧಾನವಾದ ಸ್ತರಗಳಲ್ಲಿ ಕಂಡುಬರುತ್ತವೆ. ಅದರಲ್ಲಿ ಮೊದಲನೆಯ ವಲಯದಲ್ಲಿ ಕೃಷಿ, ಕೃಷಿ ಕಾರ್ಮಿಕರು, ಪಶುಪಾಲನೆ ಮತ್ತು ಅರಣ್ಯಗಾರಿಕೆ ಇತರೆ ಕೆಲಸ ಕಾರ್ಯಗಳು ಬರುತ್ತವೆ. ನಂತರ ಬರುವಂತಹ ಎರಡನೆಯ ಸ್ತರದಲ್ಲಿ ಗುಡಿ ಕೈಗಾರಿಕಾ ಕಾರ್ಯಗಳು ಮತ್ತು ನಿರ್ಮಾಣ ಕೆಲಸ ಕಾರ್ಯಗಳು ಬರುತ್ತವೆ. ಮೂರನೆಯದಾಗಿ ವ್ಯಾಪಾರ, ವಹಿವಾಟು, ಸಾರಿಗೆ, ಸಂಪರ್ಕ ಮತ್ತು ಇತರೆ ಸೇವಾ ಚಟುವಟಿಕೆಗಳು ಒಳಗೊಂಡಿವೆ. ಈ ಮೂರು ಅಂಶಗಳು ಜಿಲ್ಲೆಯಲ್ಲಿ ಸಮರ್ಪಕವಾದ ಅಭಿವೃದ್ಧಿ ಸಾಧಿಸುವಲ್ಲಿ ವಿಫಲತೆಯನ್ನು ಹೊಂದಿದೆ ಎಂದು ಹೇಳಬಹುದು. ಜಿಲ್ಲೆಯು ವಿಶಾಲವಾದ ಬಯಲು ಭೂಮಿ ಹೊಂದಿದೆ. ಅತಿಹೆಚ್ಚು ಬಿಸಿಲು ಬರಗಾಲದಿಂದ ಯಾವಾಗಲೂ ವಿಕೋಪಕ್ಕೆ ಒಳಗಾಗುತ್ತದೆ. ಕುರುಚಲು ಕಾಡು ಕಂಡುಬರುತ್ತದೆ. ಆರ್ಥಿಕ ಅಭಿವೃದ್ಧಿಗೆ ನಿಸರ್ಗದ ನಾಡೇ ಕಾರಣ ಆದರೆ ಇಲ್ಲಿ ಪ್ರಮುಖವಾಗಿ ಮನುಷ್ಯನ ಶ್ರಮವೇ ಬಂಡವಾಳ ಮತ್ತು ವಿನಿಯೋಗ ಇಂತಹ ಅಂಶಗಳು ಅಭಿವೃದ್ಧಿಗೆ ಒಂದು ಸೀಮಿತತೆ ಇರದೆ ಏರುಪೇರುಗಳುಂಟು. ಆದರೂ ಅವುಗಳನ್ನು ಕಡೆಗಣಿಸುವಂತಿಲ್ಲ. ಆರ್ಥಿಕ ಅಭಿವೃದ್ಧಿಯು ಆಯಾ ಜಿಲ್ಲೆಯ ಆದಾಯ ಹಾಗೂ ತಲಾದಾಯಗಳನ್ನು ನಿರ್ಧರಿಸುವಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತವೆ. ಇವತ್ತಿನ ದಿನಮಾನಗಳಲ್ಲಿ ದೈನಂದಿನ ಅಗತ್ಯ ವಸ್ತುಗಳ ಬೆಳೆ ಅಧಿಕವಾಗುತ್ತಿರುವ ಸಂದರ್ಭದಲ್ಲಿ ಜನರ ಜೀವನ ಪ್ರಮಾಣವು ಅನಿಶ್ಚಿತತೆಗೆ ದಾರಿಮಾಡಿ ಕೊಡುತ್ತಿದೆ. ಈ ಪ್ರದೇಶದಲ್ಲಿ ಅತಿಹೆಚ್ಚು ಜನರು ಗ್ರಾಮೀಣ ಜೀವನವನ್ನು ಅನುಸರಿಸುತ್ತಿದ್ದರಿಂದ ಕೃಷಿ, ಕೂಲಿಯಲ್ಲಿ ಸ್ಥಿರತೆ ಕಾಣದೆ, ಅವರ ಜೀವನ ಮಟ್ಟ, ಶಿಕ್ಷಣ, ಆರೋಗ್ಯ, ಸಮಾಜದ ಕೆಲಸ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುತ್ತಿಲ್ಲ. ಇವೆಲ್ಲಕ್ಕೂ ಜಿಲ್ಲೆಯಲ್ಲಿ ಉಂಟಾಗುವ ಮಳೆಯ ಅನಾನುಕೂಲ, ಇರುವಂತಹ ಭೂಮಿಯೂ ಕೆಲವೇ ಕೆಲವರ ಸ್ವತ್ತಾಗಿ ಜನಸಾಮಾನ್ಯರ ಪಾಲಿಗೆ ಭೂಮಿಯೂ ಮರೀಚಿಕೆಯಾಗಿದೆ. ಈ ಅಂಶಗಳಿಂದಲೇ ಭಾರತವು ಬಡಜನರಿಂದ ಕೂಡಿದ ಶ್ರೀಮಂತ ದೇಶ ಎಂಬ ಮಾತು ಸತ್ಯವಾಗಿದೆ. ಈ ಪ್ರದೇಶದ ಜನರ "ಕೃಷಿಯ ಅವಲಂಬನಬನೆಯು ೧೯೯೧ ಮತ್ತು ೨೦೦೧ರಲ್ಲಿ ಕ್ರಮವಾಗಿ ಶೇಕಡ ೭೨.೪೯ರಷ್ಟು ಕಂಡುಬರುತ್ತದೆ"[೧೪] ಜೊತೆಗೆ ಹಿಂದಿನಿಂದ ಬಂದಂತ ವಂಶಪಾರಂಪರ್ಯ ವೃತ್ತಿಗಳು ಹಾಗೂ ಕೃಷಿಯೇತರ ವೃತ್ತಿಗಳಲ್ಲಿ ಮೈಗೂಡಿಸಿಕೊಂಡಿರುವುದರಿಂದ ಅವರ ಜೀವನವು ಆಧುನೀಕರಣ ಪ್ರಭಾವದಿಂದ ದುರ್ಬಲವಾಗಿದೆ ಎಂದು ಹೇಳಬಹುದು.

೨.೧.೩. ಜಿಲ್ಲೆಯ ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಹವಾಮಾನ

ಜಿಲ್ಲೆಯ ಉತ್ತರ ಭಾಗದಲ್ಲಿ ಬೀದರ, ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ ಪೂರ್ವಭಾಗದಲ್ಲಿ ಆಂಧ್ರ ಪ್ರದೇಶದ ಮೇದಕ್ ಹಾಗೂ ಮೆಹಬೂಬನಗರ, ದಕ್ಷಿಣದಲ್ಲಿ ರಾಯಚೂರು ಹಾಗೂ ಪಶ್ಚಿಮದಲ್ಲಿ ಬಿಜಾಪುರ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಕೃಷ್ಣಾ, ಭೀಮಾ, ಕಾಗಿಣಾ, ಗೋರಿ, ಅಮರ್ಜಾ ಹಾಗೂ ಮುಲಾಮುರಿ ಎಂಬ ನದಿಗಳು ಹರಿಯುತ್ತವೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸುರಪುರ, ಶಹಾಪುರ ಹಾಗೂ ಜೇವರ್ಗಿ ತಾಲ್ಲೂಕುಗಳ ಕೃಷಿ ಚಟುವಟಿಕೆಗಳಿಗೆ ನೀರಾವರಿ ಕಲ್ಪಿಸಲಾಗಿದೆ.

ಸಾಮಾನ್ಯವಾಗಿ ಜಿಲ್ಲೆಯಲ್ಲಿ ಶುಷ್ಕ ವಾಯುಗುಣವಿದ್ದು "ಬೇಸಿಗೆಯ ಕಾಲದಲ್ಲಿ ಉಷ್ಣತೆ ೪೬° ಸೆಲ್ಸಿಯಸ್‌ವರೆಗೆ ಇರುತ್ತದೆ. ಕಪ್ಪು-ಕೆಂಪು ಮರಳು ಮಿಶ್ರಿತ ಜೇಡಿ ಹಾಗೂ ಒಕ್ಕಲು ಮಣ್ಣಿನ ಮುಖ್ಯ ವಿಧಗಳಾಗಿವೆ. ಇಲ್ಲಿಯ ವಾಡಿಕೆ ಮಳೆ ೭೭೭ ಮಿ.ಮಿ.ಗಳಿದ್ದು ೨೦೦೪ರಲ್ಲಿ (Actual) ಮಳೆಯು ೬೩೩.೭ ಮಿ.ಮಿ.ಗಳಾಗಿದ್ದು ಕಂಡುಬರುತ್ತದೆ. ಜಿಲ್ಲೆಯಲ್ಲಿ ಶಹಾಬಾದ ಪರ್ಸಿ, ಸುಣ್ಣದ ಕಲ್ಲು ಹೇರಳವಾಗಿ ಸಿಗುತ್ತವೆ. ಅಲ್ಲದೆ ಆರು ದೊಡ್ಡ ಮತ್ತು ಮಧ್ಯಮ ಸಿಮೆಂಟ್ ಕಾರ್ಖಾನೆಗಳು ಮತ್ತು ಮೂರು ಮಿನಿ ಸಿಮೆಂಟ್ ಕಾರ್ಖಾನೆಗಳು ಉತ್ಪಾದನೆಯಲ್ಲಿ ತೊಡಗಿವೆ."[೧೪] ಹಾಗೂ ಅಲ್ಪಪ್ರಮಾಣದಲ್ಲಿ ಸುರಪುರ ಹತ್ತಿರ ಬಂಗಾರ, ಕ್ವಾರ್ಟ್ಸ್, ಮಲ್ಲಟ್ಸ್, ಅರ್ಥಕ್ಲೆ ಉಸುಕು ಹಾಗೂ ಕಿರಶಾತ ಖನಿಜಗಳು ದೊರೆಯುತ್ತವೆ.

೨.೧.೪. ಜಿಲ್ಲೆಯ ಆಡಳಿತ ವಿಭಾಗಗಳು

ಜಿಲ್ಲೆಯ ಕೇಂದ್ರಸ್ಥಾನ ಗುಲಬರ್ಗಾ. ಜಿಲ್ಲೆಯು ಹತ್ತು ತಾಲ್ಲೂಕುಗಳನ್ನು ಹೊಂದಿರುತ್ತದೆ. ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಗುಲಬರ್ಗಾ, ಸೇಡಂ, ಯಾದಗಿರಿ ಎಂದು ಮೂರು ಉಪವಿಭಾಗಗಳನ್ನಾಗಿ ವಿಭಜಿಸಲಾಗಿದೆ. ಗುಲಬರ್ಗಾ ವಿಭಾಗದಲ್ಲಿ ನಾಲ್ಕು ತಾಲ್ಲೂಕಗಳು ಹಾಗೂ ಇನ್ನುಳಿದ ಉಪವಿಭಾಗದಲ್ಲಿ ತಲಾ ಮೂರು ತಾಲ್ಲೂಕುಗಳಿವೆ. ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳು. ಹನ್ನೆರಡು ಪುರಸಭೆ ಹಾಗೂ ಒಂದು ಮಹಾನಗರ ಪಾಲಿಕೆ, ನಲವತ್ತೆಂಟು ಕಂದಾಯ ಹೋಬಳಿಗಳು ಹಾಗೂ ಮುನ್ನೂರ ಮುಪತ್ತೇಳು ಗ್ರಾಮ ಪಂಚಾಯಿತಿಗಳು ಇರುತ್ತವೆ. ಗುಲಬರ್ಗಾದಲ್ಲಿ ಮೊನ್ನೆ ನಡೆದ ಸಂಪುಟ ಸಭೆಯಲ್ಲಿ ಯಾದಗಿರಿಯನ್ನು ಹೊಸ ಜಿಲ್ಲೆಯನ್ನಾಗಿ ಘೋಷಣೆ ಮಾಡಿದೆ.

೨.೧.೫. ಜಿಲ್ಲೆಯ ಆದಾಯ

"ರಾಜ್ಯದ ಒಟ್ಟು ಆದಾಯ ೧,೦೪,೮೧,೪೮೯ ಲಕ್ಷರೂಗಳಲ್ಲಿ ಇದ್ದರೆ ಈ ಜಿಲ್ಲೆಯ ಆದಾಯದ ಸ್ಥಿತಿ ನೋಡಿದರೆ ಜಿಲ್ಲಾ ತಲಾ ನಿವ್ವಳ ಆಂತರಿಕ ಉತ್ಪನ್ನವು ೧೨೦೪೯ರಷ್ಟು, ಹಾಗೂ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು ೩೮೦೬೦೨ರಷ್ಟು ಕಂಡುಬರುತ್ತದೆ. ಹಾಗೂ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದಲ್ಲಿ ಜಿಲ್ಲೆಯ ಪಾಲು ೪.೧% ಇದ್ದು"[೧೫] ಮುಂದುವರೆದು ಹೇಳುವುದಾದರೆ

ಈ ಜಿಲ್ಲೆಯಲ್ಲಿ ಶೇ. ೭೫ರಷ್ಟು ಜನರ ಬದುಕಿನ ಮೂಲ ಕೃಷಿ ಹಾಗೂ ಕೃಷಿಯೇತರ ಕೆಲಸವೇ ಜೀವನಕ್ಕೆ ಆಧಾರ ಆಗಿದೆ.

೨.೨. ರಾಯಚೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಈ ಜಿಲ್ಲೆಯೂ ಐತಿಹಾಸಿಕ ಘನತೆಯಿಂದ ಪ್ರಸಿದ್ಧವಾದುದ್ದಾಗಿದೆ. ಕರ್ನಾಟಕದ ಇತಿಹಾಸದಲ್ಲಿ ರಾಯಚೂರು ಜಿಲ್ಲೆಯು ವಹಿಸಿದ ಪಾತ್ರವು ಸ್ಮರಣೀಯವಾಗಿದೆ. ಇದಕ್ಕೆ ಸುಮಾರು ಕ್ರಿ.ಪೂ. ೨೦೦೦ ವರ್ಷಗಳಷ್ಟು ಐತಿಹಾಸಿಕ ಹಿನ್ನೆಲೆಯುಂಟು. ಹಳೆಯ ಶಿಲಾಯುಗದ ಸಂಸ್ಕೃತಿಯಿಂದ ಪ್ರಾರಂಭವಾಗಿ ರಾಜ್ಯದ ಎಲ್ಲಾ ಮುಖ್ಯ ಅರಸರು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದು ಬರುತ್ತದೆ. ಇದು "ಕೃಷ್ಣೇ-ತುಂಗೆಯರ ಮಂಗಳ-ಅಂಗಳ, ಎಡ ದೊರೆ ನಾಡು ಹಾಗೂ "ದೋಅಬ್" ಎಂಬ ಪ್ರತೀತಿ ಪಡೆದ ಪ್ರದೇಶ. ದೋಅಬ್ ಎಂದರೆ ಎರಡು ನದಿಗಳ ನಡುವಿನ ಪ್ರದೇಶ".[೧೬] ರಾಯಚೂರು ಕರ್ನಾಟಕದ ಈಶಾನ್ಯ ಭಾಗದ ಉತ್ತರದಂಚಿನಲ್ಲಿದೆ. ಇಲ್ಲಿ ಬಂಡೆಗಲ್ಲುಗಳ ಬೃಹತ್ ಪರ್ವತಗಳಿಂದ, ಗಿಡಮರಗಳಿಲ್ಲದ ಬಯಲು ಭೂಮಿಯಿಂದ ಒಣ ಹವೆಯಿಂದ ಕೂಡಿದೆ. ಭೂಮಿಯೂ ಕಪ್ಪು ಮಣ್ಣಿನಿಂದ ಕೂಡಿದ ಪ್ರದೇಶವಾಗಿದೆ. ಈ ಜಿಲ್ಲೆಯೂ ಸಮುದ್ರ ಮಟ್ಟದಿಂದ ಸರಿ ಸುಮಾರು ೧೩೧೧ ಅಡಿ ಎತ್ತರದಲ್ಲಿದೆ. ಈ ಜಿಲ್ಲೆಗೆ ಉತ್ತರದಲ್ಲಿ ಗುಲಬರ್ಗಾ, ಪಶ್ಚಿಮದಲ್ಲಿ ವಿಜಾಪುರ ಹಾಗೂ ಧಾರವಾಡ, ಪೂರ್ವದಲ್ಲಿ ಅಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಆಂಧ್ರದ ಕರ್ನೂಲ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಆವೃತ್ತವಾಗಿದೆ. ಕೃಷ್ಣ ನದಿಯು ಈ ಜಿಲ್ಲೆಯ ಉತ್ತರ ಹಾಗೂ ತುಂಗಭದ್ರಾ ನದಿಯ ದಕ್ಷಿಣ ಮೇರೆಗಳಾಗಿವೆ.

ಜಿಲ್ಲೆಗೆ ರಾಯಚೂರು ಎಂಬ ಹೆಸರು ತಿಳಿಯುವಲ್ಲಿ ನಮಗೆ "ಹೊಯ್ಸಳರ ಕಾಲದ ಕೆಲವು ಶಾಸನಗಳಿಂದ ಮಾಹಿತಿ ತಿಳಿದು ಬರುತ್ತದೆ. ಬೇಲೂರು ತಾಲೂಕಿನ ೧೧೬೧ನೇ ಇಸ್ವಿಗೆ ಹಾಗೂ ಒಂದನೇ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದ ಹುಲಿಕೆರೆ ಶಾಸನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನ ದೊರೆಯು ಗೆದ್ದುಕೊಂಡ ಸ್ಥಳಗಳಲ್ಲಿ "ರಾಚವೂರು" ಒಂದಾಗಿತ್ತೆಂದು ತಿಳಿಸಲಾಗಿದೆ".[೧೭] "ರಾಚ" ಇದನ್ನು "ರಾಜ" ಎಂಬ ಪದದಿಂದ ಆಯ್ದುಕೊಳ್ಳಲಾಗಿದೆ. "ರಾಚ" ಹಾಗೂ "ಊರು" ಸೇರಿ "ರಾಚನೂರು" ಎಂಬ ಹೆಸರು ಬಳಕೆಗೆ ಬಂದಿತು. ರಾಚನೂರು ರಾಜನ ಊರು ಎಂಬ ಅರ್ಥವನ್ನು ಪಡೆದುಕೊಂಡಿತ್ತು. ೧೩ನೇ ಶತಮಾನದಲ್ಲಿ ರಾಚವೂರು ಅಥವಾ ರಾಚನೂರು ಮೊಟಕುಗೊಂಡು ರಾಚೂರು ಎಂದು ಬಳಕೆಗೆ ಬಂದಿತು. ಈ ವಿಷಯವು ಕಾಕತೀಯ ದೊರೆ ಎರಡನೇ ಪ್ರತಾಪ ರುದ್ರನ ಕಾಲದ ರಾಯಚೂರು ಕೋಟೆಯ ಮೇಲೆ ಇರುವ ೧೨೯೪ನೇ ಇಸ್ವಿಯ ಶಾಸನದಿಂದ ಸ್ಪಷ್ಟವಾಗಿದೆ. ಇದರಲ್ಲಿ ರಾಚೂರು ಎಂದು ಕರೆಯಲಾಗಿದೆ.

ಕೃಷ್ಣ ಹಾಗೂ ತುಂಗಭದ್ರಾ ನದಿಗಳ ನಡುವಿನ ಫಲವತ್ತಾದ ಭೂ ಪ್ರದೇಶವಾದ ರಾಯಚೂರು ಜಿಲ್ಲೆ ಆದಿಮ ಕಾಲದಿಂದಲೂ ಮನುಷ್ಯನ ವಾಸ ಸ್ಥಳವಾಗಿತ್ತು. ಮೆಡಾಸ್ ಟೇಲರ್

ಎಂಬುವವರು ಪ್ರಥಮ ಬಾರಿಗೆ ರಾಯಚೂರಿನ ಶಿಲಾಯುಗ ಸಂಸ್ಕೃತಿಯನ್ನು ಬೆಳಕಿಗೆ ತಂದರು. ಮುಂಬೈ ಪ್ರಾಂತ್ಯದ ರಾಯಲ್ ಏಶಿಯಾಟಿಕ್ ಸೊಸೈಟಿಯ ಕ್ರಿ.ಶ. ೧೮೩೫ನೇ ವರ್ಷದ ನಾಲ್ಕನೆಯ ಸಂಪುಟದಲ್ಲಿ ಇದನ್ನು ನಮೂದಿಸಲಾಗಿದೆ.

ಚಾರಿತ್ರಿಕವಾಗಿ ರಾಯಚೂರು ಜಿಲ್ಲೆಯು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ಲಿಂಗಸೂಗೂರು ತಾಲೂಕಿನ ಮಸ್ಕಿಯಲ್ಲಿ ಲಭಿಸಿದ ಅಶೋಕನ ಶಾಸನವು ದೇವನಾಂಪ್ರಿಯ ಎಂಬ ಪರ್ಯಾಯ ಹೆಸರನ್ನು ಹೊಂದಿದ್ದನೆಂದು ಈ ಶಾಸನವು ವಿಶೇಷ ಮಹತ್ವ ಪಡೆದಿದೆ. ಅಶೋಕನ ರಾಜ್ಯದ ದಕ್ಷಿಣ ಗಡಿಯ ಪ್ರಾಂತವಾದ ಸುವರ್ಣಗಿರಿಯು ರಾಯಚೂರು ಜಿಲ್ಲೆಯ ಕನಕಗಿರಿಯಾಗಿತ್ತೆಂಬ ಊಹೆ ಇದೆ. ಮೌರ್ಯರಾದ ನಂತರ "ಕರಡಿಕಲ್ ಶಾಸನವು ಜಿಲ್ಲೆಯ ಭಾಗಗಳಾದ ಮುದಗಲ್ ಹಾಗೂ ಕರಡಿಕಲುಗಳು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ತಿಳಿಸುತ್ತವೆ."[೧೮] ಜಿಲ್ಲೆಯೂ ಇತಿಹಾಸದಲ್ಲೇ ಇನ್ನೊಂದು ಮುಖ್ಯ ಸಂಗತಿಯೆಂದರೆ ವಿಜಯನಗರ ಸಾಮ್ರಾಜ್ಯದ ಆಡಳಿತ. ವಿಜಯಗರದ ಅರಸರು ಹಾಗೂ ಬಹುಮನಿ ಷಾಯಿ ಸುಲ್ತಾನರು ಫಲವತ್ತಾದ ಪ್ರದೇಶದ ಅಧಿಪತ್ಯಕ್ಕಾಗಿ ಹಲವು ಯುದ್ಧಗಳನ್ನು ಮಾಡಿದ್ದರು. ಅಂದು ರಣರಂಗವಾಗಿ ಮಾರ್ಪಟ್ಟಿತು. ಕ್ರಿ.ಶ. ೧೫೨೦ರಲ್ಲಿ ವಿಜಯನಗರದ ಸುಪ್ರಸಿದ್ಧ ಅರಸನಾದ ಶ್ರೀ ಕೃಷ್ಣದೇವರಾಯನು ಬಹಮನಿ ಷಾಯಿ ಸುಲ್ತಾನನಾದ ಇಸ್ಮಾಯಿಲ್ ಆದಿಲ್‌ಶಾಹನನ್ನು ಪರಾಭವಗೊಳಿಸಿ ರಾಯಚೂರು ಕೋಟೆಯನ್ನು ಆಕ್ರಮಿಸಿಕೊಂಡನು. ಇದೇ ಸಮಯದಲ್ಲಿ ಪುರಂದರದಾಸರ ಪ್ರಭಾವದಿಂದಾಗಿ ರಾಯಚೂರು ಜಿಲ್ಲೆಯ ಸಂತರಾದ ಜಗನ್ನಾಥ ದಾಸ ಹಾಗೂ ವಿಜಯದಾಸರು ಪ್ರಸಿದ್ಧ ದಾಸ-ಸಾಹಿತ್ಯವನ್ನು ರಚನೆ ಮಾಡಿದರು. ಕೊನೆಯ ಹಾಗೂ ಏಳನೆಯ ನಿಜಾಮರಾದ ಮೀರ ಉಸ್ಮಾನ್ ಅಲಿಖಾನ್ ಅವರ ಆಡಳಿತ ಸಂದರ್ಭದಲ್ಲಿ ಇವರ ಜಾತೀಯತೆ ಹಾಗೂ ದಬ್ಬಾಳಿಕೆಯ ಸರ್ವಾಧಿಕಾರ ಆಡಳಿತದ ವಿರುದ್ಧ ಹೈದರಾಬಾದ್ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮವು ನಡೆದಿತ್ತು. ಮತ್ತೊಂದು ಕಡೆ ಸ್ವಾತಂತ್ರ್ಯ ಆಂದೋಲನವು ಪ್ರಾರಂಭವಾಗಿತ್ತು. ಈ ಸಮಯದಲ್ಲಿ ಸಂಸ್ಥಾನದ ಇತರ ಭಾಗಗಳಂತೆ ರಾಯಚೂರು ಜಿಲ್ಲೆಯು ಸಹ ರಜಾಕಾರರ ದಬ್ಬಾಳಿಕೆಗೆ ಒಳಗಾಗಿ ಸಾಕಷ್ಟು ಹಾನಿಯನ್ನು ಅನುಭವಿಸಿತ್ತು. "ಆಗಸ್ಟ್ ೧೫, ೧೯೪೭ರಂದು ಭಾರತವು ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದಿದ್ದರೂ ಹೈದರಾಬಾದ್ ಸಂಸ್ಥಾನದ ಸರ್ವಾಧಿಕಾರರ ಕಪಿಮುಷ್ಠಿಯಲ್ಲಿತ್ತು."[೧೯] ಕೊನೆಗೆ ಈ ಪ್ರದೇಶದಲ್ಲಿ ಚಳುವಳಿಯು ಎರಡು ಹಂತದಲ್ಲಿ ನಡೆಯಿತ್ತು. ಮೊದಲನೆಯ ಹಂತದಲ್ಲಿ ಬ್ರಿಟಿಷರ ವಿರುದ್ಧ ಹಾಗೂ ಎರಡನೆಯ ಹಂತದಲ್ಲಿ ನಿಜಾಮರ ವಿರುದ್ಧ ನಡೆದು ಭಾರತ ಸರಕಾರದ ಸೈನಿಕ ಕಾರ್ಯಾಚರಣೆ ನಡೆದು ಸೆಪ್ಟೆಂಬರ್ ೧೮, ೧೯೪೮ರಂದು ರಾಯಚೂರು ಸ್ವಾತಂತ್ರ್ಯ ಹೊಂದಿ ಹೈದರಾಬಾದ್ ಸಂಸ್ಥಾನದಲ್ಲಿಯೇ ೧೯೫೬ರವರೆಗೆ ಮುಂದುವರಿದಿತ್ತು. ಮುಂದೆ ೧೯೫೬ ನವೆಂಬರ್ ೧ ರಂದು ಭಾಷಾವಾರು ರಾಜ್ಯಗಳ ಪುನರ್‌ರಚನೆಯಾದಾಗ ರಾಯಚೂರು ಮೈಸೂರು ರಾಜ್ಯವನ್ನು ಸೇರಿತ್ತು, ಮುಂದೆ ೧೯೭೩ ನವ್ಹೆಂಬರ್ ೧ ರಂದು ಮೈಸೂರು ರಾಜ್ಯವು ಕರ್ನಾಟಕ ರಾಜ್ಯವೆಂದು ಹೆಸರು ಪಡೆಯಿತು.

೨.೨.೧. ಭೌಗೋಳಿಕ ಅಂಶಗಳು

ಮಧ್ಯಮಗತಿಯ ಅಭಿವೃದ್ಧಿಶೀಲ ಜಿಲ್ಲೆಗಳಲ್ಲೊಂದಾದ ರಾಯಚೂರು ಜಿಲ್ಲೆಯು ಕರ್ನಾಟಕದ ಈಶಾನ್ಯ ಭಾಗದ ಉತ್ತರದಂಚಿನಲ್ಲಿದೆ "ಇದರ ಭೌಗೋಳಿಕ ವಿಸ್ತೀರ್ಣ ೬೮೨೭ ಚದರ ಕಿಲೋಮೀಟರ್‌ಗಳಾಗಿದ್ದು, ಇದರಲ್ಲಿ ಲಿಂಗಸೂಗುರು ತಾಲೂಕು ೧೯೪೮ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದ್ದು ಜಿಲ್ಲೆಯಲ್ಲಿಯೇ ದೊಡ್ಡ ತಾಲೂಕು ಎನಿಸಿದೆ."[೨೦] ಈ ಜಿಲ್ಲೆಯು ಉತ್ತರದಲ್ಲಿ ಗುಲಬರ್ಗಾ, ಪಶ್ಚಿಮದಲ್ಲಿ ವಿಜಾಪುರ ಹಾಗೂ ಧಾರವಾಡ, ಪೂರ್ವದಲ್ಲಿ ಆಂಧ್ರಪ್ರದೇಶದ ಮೆಹಬೂಬನಗರ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಆಂಧ್ರದ ಕರ್ನೂಲ ಜಿಲ್ಲೆಯೂ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಆವೃತ್ತವಾಗಿದೆ. ರಾಜ್ಯದಲ್ಲಿ ಭೂವಿಸ್ತಾರದಲ್ಲಿ ರಾಯಚೂರು ಜಿಲ್ಲೆ ಮೂರನೇ ಸ್ಥಾನವನ್ನು ಹಾಗೂ ಜನಸಂಖ್ಯೆಯಲ್ಲಿ ಹತ್ತನೆಯ ಸ್ಥಾನವನ್ನು ಹೊಂದಿದೆ.

೨.೨.೨. ಜಿಲ್ಲೆಯ ಜನಸಂಖ್ಯೆ

ರಾಯಚೂರು ಜಿಲ್ಲೆಯ "ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ೧೬,೬೯.೭೬೨, ಇದ್ದು. ಇದರಲ್ಲಿ ಗಂಡಸರು ೮,೪೧,೮೪೦ ಮತ್ತು ಮಹಿಳೆಯರು ೮,೨೭,೯೨೨ ಸಂಖ್ಯೆಯಲ್ಲಿದ್ದಾರೆ."[೨೧] ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ೧೨,೪೮,೯೨೫ರಷ್ಟು ಜನಸಂಖ್ಯೆ ಹೊಂದಿದ್ದು, ನಗರದಲ್ಲಿ ೪,೨೦,೮೩೭ರಷ್ಟು ಜನಸಂಖ್ಯೆ ಇದೆ.

ಕೋಷ್ಟಕ-೨

ರಾಯಚೂರು ಜಿಲ್ಲೆಯ ಜನಸಂಖ್ಯೆ ಮತ್ತು ಆಯ್ದ ಸೂಚಿಗಳು

ಕ್ರ.ಸಂ.	ವಿವರ	ರಾಯಚೂರು ಜಿಲ್ಲೆ	ಕರ್ನಾಟಕ
೧.	ಭೌಗೋಳಿಕ ಪ್ರದೇಶ	೬೮೨೭	೧.೯೧.೭೯೧
೨.	ಒಟ್ಟು ಜನಸಂಖ್ಯೆ	೧೬.೬೯.೭೬೨	೫೨.೮೫೦.೫೬೨
೩.	ಜನಸಂಖ್ಯೆ ದಶಕವಾರು	೩.೧೭.೯೬೨	೭೭.೫೬.೭೫೭
೪.	ಪರಿಶಿಷ್ಟ ಜಾತಿ	೩.೨೧.೮೧೬	
೫.	ಪರಿಶಿಷ್ಟ ಪಂಗಡ	೩.೦೦.೬೯೦	೨೯.೮೧.೬೪೯
೬.	ಜನಸಾಂದ್ರತೆ	೨೪೫	೨೭೬
೭.	ಲಿಂಗ ಪ್ರಮಾಣ	೯೮೩	೯೬೪
೮.	ಸಾಕ್ಷರತೆಯ ಪ್ರಮಾಣ	೪೮.೮%	೬೭.೦೪%

(ಮೂಲ: ರಾಯಚೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೦೬)

೨.೨.೩. ಜಿಲ್ಲೆಯ ಆದಾಯ

೨೦೦೩-೦೪ನೇ ಸಾಲಿನಲ್ಲಿ ಚಾಲ್ತಿ ಬೆಲೆಗಳಲ್ಲಿ "ಜಿಲ್ಲೆಯ ಒಟ್ಟು ಆದಾಯ ೨,೨೬,೫೦೭ ಲಕ್ಷ ರೂ. ಗಳಾಗಿದ್ದು, ತಲಾ ವರಮಾನ, ೧೩,೨೮೮ ರೂ.ಗಳಾಗಿದ್ದಿತು."[೨೨] ೧೯೯೯-೨೦೦೦ನೇ ಸಾಲಿನಲ್ಲಿ ರಾಜ್ಯದ ಒಟ್ಟು ನಿವ್ವಳ ಆದಾಯವು ಜಾಲ್ತಿ ಬೆಲೆಗಳಲ್ಲಿ ೮೬,೨೯,೬೩೦ ಲಕ್ಷ ರೂ. ಗಳಲ್ಲಿ ಜಿಲ್ಲೆಯ ನಿವ್ವಳ ಆದಾಯ ಚಾಲ್ತಿ ಬೆಲೆಗಳಲ್ಲಿ ೨,೨೬,೫೦೭ ಲಕ್ಷ ರೂ.ಗಳಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳ ಆದಾಯಕ್ಕೆ ಹೋಲಿಸಿದಾಗ ಜಿಲ್ಲೆಯಲ್ಲಿ ಹೇಳಿಕೊಳ್ಳುವಂತಹ ಪ್ರಗತಿ ಸಾಧಿಸಿಲ್ಲವೆಂದು ಹೇಳಬಹುದು.

೨.೨.೪. ಜಿಲ್ಲೆಯ ಪ್ರಾಕೃತಿಕ ಸಂಪತ್ತು ಮತ್ತು ಹವಾಮಾನ

ಯಾವುದೇ ಪ್ರದೇಶದಲ್ಲಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಇತರೆ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ನಿಸರ್ಗದತ್ತವಾಗಿ ಆ ಪ್ರದೇಶಕ್ಕೆ ಬಳುವಳಿಯಾಗಿ ಒದಗಿರುವ ನೈಸರ್ಗಿಕ ಹಾಗೂ ಖನಿಜ ಸಂಪನ್ಮೂಲಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ನೈಸರ್ಗಿಕ ಸಸ್ಯ ಸಂಪತ್ತುಗಳಾದ ಅಪಾರ ಸಸ್ಯರಾಶಿ ಮತ್ತು ನದಿ ನೀರಿನಂತಹ ನೈಸರ್ಗಿಕ ಸಂಪನ್ಮೂಲಗಳು, ಈ ಜಿಲ್ಲೆಯಲ್ಲಿ ಅಲ್ಪಮಟ್ಟಿಗೆ ಉಪಯೋಗವಿದೆ ಎಂದು ಹೇಳಬಹುದು. ಉತ್ತರದಲ್ಲಿ ಕೃಷ್ಣಾನದಿಯೂ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಯು ಜಿಲ್ಲೆಗೆ ಮೇರೆಗಳಾಗಿವೆ. ಈ ಜಿಲ್ಲೆಯು ಸಾಧಾರಣವಾಗಿ ಒಣಭೂಮಿ ಪ್ರದೇಶವಾಗಿದ್ದು, ಗ್ರಾಮೀಣ ಪ್ರದೇಶದ ಜನರನ್ನು ಬಹುಸಂಖ್ಯವಾಗಿ ಹೊಂದಿ ಕೃಷಿ ವೃತ್ತಿಯನ್ನು ಪ್ರಮುಖವಾಗಿ ಮೈಗೂಡಿಸಿಕೊಂಡಿದ್ದಾರೆ. ಸಸ್ಯ ಸಂಪತ್ತಿನಲ್ಲಿ ಹೆಚ್ಚಿನವು ಮನುಷ್ಯ ನಿರ್ಮಿತ ಸಸ್ಯಗಳಾಗಿದ್ದು, ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಬೆಟ್ಟ-ಗುಡ್ಡಗಳಲ್ಲಿ ತೆಳುವಾದ ನೈಸರ್ಗಿಕ ಸಸ್ಯ ಸಂಪತ್ತಿನಿಂದ ಕೂಡಿದ ಪ್ರದೇಶಗಳಿವೆ ಎನ್ನಬಹುದು. "ಜಿಲ್ಲೆಯ ಹವಾಗುಣವು ಬೇಸಿಗೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಉಷ್ಣತೆಯನ್ನು ಹೊಂದಿರುತ್ತದೆ. ಮೇ ತಿಂಗಳಲ್ಲಿ ೪೪° ಸೆಂ.ಮೀವರೆಗೆ ಉಷ್ಣ ಇರುತ್ತದೆ. ಇಲ್ಲಿಯ ವಾಡಿಕೆ(Normal) ಮಳೆಯು ೬೨೧ ಮಿಲಿ ಮೀಟರ್‌ಗಳಾಗಿದ್ದು. ೨೦೦೫ರಲ್ಲಿ ಬಿದ್ದ ವಾಸ್ತವಿಕ ಮಳೆಯ ೭೬೪.೪ ಮಿಲಿ ಮೀಟರ್ ಆಗಿದೆ."[೨೩]

೨.೨.೫. ಜಿಲ್ಲೆಯ ಖನಿಜ ಸಂಪತ್ತು

ಖನಿಜ ಸಂಪತ್ತಿನಲ್ಲಿ ರಾಯಚೂರು ಜಿಲ್ಲೆಯು ರಾಜ್ಯವಲ್ಲದೆ ದೇಶ-ವಿದೇಶಗಳಲ್ಲಿ ಪರಿಗಣಿಸಬಹುದಾದಷ್ಟು ಖನಿಜ ಸಂಪತ್ತನ್ನು ಹೊಂದಿದೆ. "ಹಟ್ಟಿ ಎಂಬ ಸ್ಥಳ ಲಿಂಗಸೂಗೂರು ತಾಲೂಕಿನಿಂದ ೧೮ ಕಿ.ಮೀ. ದೂರದಲ್ಲಿದ್ದು ಇಲ್ಲಿ ಚಿನ್ನದ ಗಣಿ ಇದೆ. ಅದು ಅಲ್ಲದೆ ಸುಣ್ಣದ ಕಲ್ಲು ದೊರೆಯುತ್ತದೆ. ಚಿನ್ನದ ಗಣಿಯಿಂದ ಈ ಭಾಗದ ಬಹುತೇಕ ಜನರಿಗೆ ಉದ್ಯೋಗ ದೊರೆತಿದೆ"[೨೪]

೨.೨.೬. ಜಿಲ್ಲೆಯ ಆಡಳಿತ ವ್ಯವಸ್ಥೆ

ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ ೫ ತಾಲೂಕುಗಳನ್ನಾಗಿ ಹಾಗೂ ಎರಡು ಕಂದಾಯ ಉಪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ರಾಯಚೂರು ಒಂದು ಉಪವಿಭಾಗವಾಗಿದ್ದು, ಇದರಲ್ಲಿ ೩ ತಾಲೂಕುಗಳನ್ನು ಅಂದರೆ ರಾಯಚೂರು, ದೇವದುರ್ಗಾ ಹಾಗೂ ಮಾನವಿಗಳನ್ನು ಒಳಗೊಂಡಿದೆ. ಇನ್ನೊಂದು ಲಿಂಗಸೂಗೂರು ಉಪಕಂದಾಯ ವಿಭಾಗವಾಗಿದ್ದು ಇದರಲ್ಲಿ ಲಿಂಗಸೂಗೂರು ಮತ್ತು ಸಿಂಧನೂರು ತಾಲೂಕುಗಳು ಒಳಗೊಂಡಿದೆ. ಜಿಲ್ಲೆಯಲ್ಲಿ ೮ ಪಟ್ಟಣಗಳು ೭ ಪುರಸಭೆಗಳು ಆಡಳಿತ ನಡೆಸುತ್ತಿವೆ. ೧೬೪ ಗ್ರಾಮ ಪಂಚಾಯಿತಿಗಳು ಆಡಳಿತ ನಡೆಸುತ್ತಿವೆ.

೨.೨.೭. ಪ್ರಮುಖವಾದ ಬೆಳೆಗಳು

ಜಿಲ್ಲೆಯಲ್ಲಿ ಪ್ರಮುಖವಾಗಿ ಶೇಂಗಾ, ಸೂರ್ಯಕಾಂತಿ, ಹತ್ತಿ, ಭತ್ತ, ಜೋಳ, ತೊಗರಿ, ನೆಲಕಡಲೆ(ಶೇಂಗ), ಎಳ್ಳು ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಜೊತೆಗೆ ಅಲಸಂದೆ, ಮಡಿಕೆಕಾಳು, ಹೆಸರು, ಸಜ್ಜೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಲಿಂಗಸೂರು, ದೇವದುರ್ಗ, ತಾಲೂಕುಗಳಲ್ಲಿ ನೆಲಗಡಲೆ ಬೆಳೆಯನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಮಾನವಿ, ಸಿಂಧನೂರು ತಾಲೂಕುಗಳಲ್ಲಿ ಭತ್ತ, ಸೂರ್ಯಕಾಂತಿ, ಮುಸುಕಿನಜೋಳ, ಹತ್ತಿ, ಪ್ರಮುಖವಾಗಿ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಲಿಂಗಸೂರು, ದೇವದುರ್ಗ, ಮಾನವಿ ಮತ್ತು ಸಿಂಧನೂರು ತಾಲೂಕುಗಳಲ್ಲಿ ಅಲ್ಪ-ಸ್ವಲ್ಪ ಭಾಗಗಳಲ್ಲಿ ಕೆಂಪು ಜೇಡಿಮಣ್ಣು ಕಂಡು ಬಂದರೆ ಉಳಿದೆಲ್ಲೆಡೆ ಕಪ್ಪು ಮಣ್ಣನ್ನು ಕಾಣಬಹುದು.

೨.೩. ಕೊಪ್ಪಳ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಕೊಪ್ಪಳ ಜಿಲ್ಲೆಯು "ಪುರಾಣ ಪ್ರಸಿದ್ಧ ಸ್ಥಳವೂ ಹೌದು ಮತ್ತು ಇತಿಹಾಸ ಪ್ರಸಿದ್ಧ ಸ್ಥಳವೂ ಹೌದು."[೨೫] ಕೊಪ್ಪಳಕ್ಕೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಸುದೀರ್ಘ ಪರಂಪರೆಯಿದೆ. ಭಾರತದ ಪ್ರಸಿದ್ಧ ಚಕ್ರವರ್ತಿ ಅಶೋಕ ಚಕ್ರವರ್ತಿಗೆ (ಕ್ರಿ.ಪೂ. ೨೭೩-೨೩೬) ಸಂಬಂಧಿಸಿದ ಎರಡು ಅತೀ ಅಮೂಲ್ಯ ಶಾಸನಗಳು ಇಲ್ಲಿ ದೊರೆತಿವೆ. ಇವು ಚಾರಿತ್ರಿಕವಾಗಿ ತುಂಬಾ ಮಹತ್ವ ಪಡೆದುಕೊಂಡಿವೆ. ಈ ಪರಿಸರದಲ್ಲಿ ಆಡಳಿತ ನಡೆಸಿದ ಪ್ರಥಮ ಚಕ್ರವರ್ತಿ ಅಶೋಕ ಎಂಬುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಮೌರ್ಯರ ನಂತರದಲ್ಲಿ ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು ನಿಜಾಮರ ಆಡಳಿತ ಇನ್ನೂ ಮುಂತಾದ ಅರಸುಮನೆತನ ಚಕ್ರಾಧಿಪತ್ಯಗಳೊಂದಿಗೆ ಈ ಜಿಲ್ಲೆಯ ಪ್ರದೇಶವು ಒಂದೊಂದು ಬಗೆಯ ಸಂಬಂಧ ಸಂಪರ್ಕ ಪಡೆದುಕೊಂಡಿದ್ದು, ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಎಲ್ಲಾ ಅರಸರು ತಮ್ಮ ಅವಧಿಯಲ್ಲಿ ಜಾರಿಗೆ ತಂದಂತಹ ಶಾಸನಗಳಲ್ಲಿ ಸಾಹಿತ್ಯ ಕೃತಿಗಳಲ್ಲಿ ತಾಮ್ರ ಪತ್ರಗಳಲ್ಲಿ ಕೊಪ್ಪಳದ ಉಲ್ಲೇಖ ಸಿಗುತ್ತದೆ.

ಕೊಪ್ಪಳ ಪದದ ಪ್ರಾಚೀನತೆ ಕುರಿತು "ಕನ್ನಡದ ಪ್ರಮುಖ ಕವಿ ರನ್ನ ತನ್ನ ಕೃತಿಯಲ್ಲಿ ತನ್ನ ಆಶ್ರಯದಾತೆಯಾಗಿದ್ದ "ಅತ್ತಿಮಬ್ಬೆ"ಯನ್ನು "ನೆಗಳ್ದ ಕೊಪಣಾಚಲದಂತೆ ಪವಿತ್ರ" ಎಂದು ಬಣ್ಣಿಸಿದ್ದಾನೆ. ಅದರಂತೆ ಕುಮಾರಸೇನನೆಂಬ ಮುನಿ (ಋಷಿ) ಮುಳುಗುಂದದಲ್ಲಿ ತಪಸ್ಸನ್ನು ಆಚರಿಸಲು ತೃಪ್ತಿ ಕಾಣದೆ "ಕೊಪಣಾಚಲಕ್ಕೆ" ಬಂದು ಮುಕ್ತಿ ಪಡೆದನೆಂದು ಚಾವುಂಡರಾಯ ಪುರಾಣ ಹೇಳಿದೆ. ಮುಂದುವರೆದು ಗಮನಿಸುವುದಾದರೆ ಕನ್ನಡದಲ್ಲಿ ಪ್ರಥಮಶಾಸ್ತ್ರ ಗ್ರಂಥವೆಂಬ ಕೀರ್ತಿಗೆ ಪಾತ್ರವಾಗಿರುವ 'ಕವಿರಾಜಮಾರ್ಗ'ದಲ್ಲಿ ಇದನ್ನು 'ಮಹಾಕೊಪಣನಗರ' ಎಂದು ಕರೆಯಲಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಈ ಪ್ರದೇಶವು ಬಿಜಾಪುರದ ಆದಿಲ್‌ಷಾನ (ಕ್ರಿ.ಶ. ೧೫೫೭-೧೫೮೦) ಆಡಳಿತಕ್ಕೆ ಒಳಪಟ್ಟಿತು. ಅಂದು ಈ ಜಿಲ್ಲೆಯನ್ನು 'ಮುಜುಪುರ್ ನಗರ' ಎಂದು ಕರೆಯುತ್ತಿದ್ದರು ಎಂದು ತಿಳಿದು ಬರುತ್ತದೆ. ಶಿವಾಜಿ, ಹೈದರಾಲಿ, ಟಿಪ್ಪು ಅವರುಗಳ ಆಳ್ವಿಕೆಯ ಭಾಗವಾಗಿಯೂ ಇದ್ದುದನ್ನು ಚರಿತ್ರೆ ತಿಳಿಸುತ್ತದೆ. ಕೊನೆಗೆ ೧೮ನೇ ಶತಮಾನದ ಅಂತಿಮ ಭಾಗದಲ್ಲಿ ಇದು ಬ್ರಿಟಿಷರ ವಶವಾದಂತೆ ಕಂಡು ಬರುತ್ತದೆ. ೨೦ನೇಯ ಶತಮಾನದ ಆರಂಭದಲ್ಲಿ ಕೊಪ್ಪಳ ಜಿಲ್ಲೆಯು ಜಹಗೀರ ಜಿಲ್ಲೆಯೆಂದು ವಿಶೇಷ ಸ್ಥಾನಮಾನ ಪಡೆದಿತ್ತು".[೨] ಕೊನೆಗೆ ಹೈದರಾಬಾದ್ ನವಾಬನು ೧೯೪೮ರ ಸೆಪ್ಟೆಂಬರ್ ೧೮ರಂದು ಭಾರತ ಸರ್ಕಾರಕ್ಕೆ ಶರಣಾದ ಮೇಲೆ ಇದು ಭಾರತದ ಗಣರಾಜ್ಯದಲ್ಲಿ ವಿಲೀನವಾಯಿತು.

೨.೩.೧. ಜಿಲ್ಲೆಯ ಭೌಗೋಳಿಕ ಅಂಶಗಳು

ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣತೆಯಲ್ಲಿ ಕೊಪ್ಪಳ ಜಿಲ್ಲೆಯ ವಿಸ್ತೀರ್ಣವು ೫೫೫೯ ಚ.ಕಿ.ಮೀ ಇದೆ. ಈ ಜಿಲ್ಲೆಯು ಕರ್ನಾಟಕದ ಈಶಾನ್ಯ ಭಾಗದಲ್ಲಿದೆ. ಉತ್ತರದಲ್ಲಿ ಬಾಗಲಕೋಟೆ ಮತ್ತು ರಾಯಚೂರು, ಪೂರ್ವದಲ್ಲಿ ರಾಯಚೂರು, ದಕ್ಷಿಣದಲ್ಲಿ ಬಳ್ಳಾರಿ, ಪಶ್ಚಿಮದಲ್ಲಿ ಗದಗ ಈ ಜಿಲ್ಲೆಯ ಮೇರೆಗಳಾಗಿವೆ. ಇದು ತ್ರಿಕೋನಾಕೃತಿಯಲ್ಲಿದೆ. ಉತ್ತರದ ತುದಿ ವಿಸ್ತೃತವಾಗಿದೆ ಮತ್ತು ದಕ್ಷಿಣದ ತುದಿ ಚೂಪಾಗಿದೆ. ಈ ಜಿಲ್ಲೆಯು ೧೯೯೭ ಆಗಸ್ಟ್ ೧೫ ರಂದು ರಾಯಚೂರು ಜಿಲ್ಲೆಯಿಂದ ವಿಭಜಿಸಲಾಯಿತು.

೨.೩.೨. ಜಿಲ್ಲೆಯ ಜನಸಂಖ್ಯೆ

೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧,೧೯೬,೦೮೯ ಇದ್ದು ಇದರಲ್ಲಿ ಪುರುಷರು ೬೦೩,೩೧೨ ಮತ್ತು ಮಹಿಳೆಯರು ೫೯೨,೭೭೭ ಸಂಖ್ಯೆಯಲ್ಲಿದ್ದಾರೆ. ಈ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ೯೯.೭೯೭ರಷ್ಟು ಜನಸಂಖ್ಯೆ ಹೊಂದಿದ್ದು ನಗರದಲ್ಲಿ ೧೯೮.೨೯೨ ಜನಸಂಖ್ಯೆ ಇದೆ.

ಕೋಷ್ಟಕ-೩

ಕೊಪ್ಪಳ ಜಿಲ್ಲೆಯ ಜನಸಂಖ್ಯೆ ಮತ್ತು ಆಯ್ದ ಸೂಚಿಗಳು

ಕ್ರ.ಸಂ.	ವಿವರ	ಕೊಪ್ಪಳ ಜಿಲ್ಲೆ	ಕರ್ನಾಟಕ
೧.	ಭೌಗೋಳಿಕ ಪ್ರದೇಶ	೭೧೮೯.೦೦	೧.೯೧.೭೯೧.೦೦
೨.	ಒಟ್ಟು ಜನಸಂಖ್ಯೆ	೧೧,೯೬,೦೮೯	೫೨.೮೫೦.೫೬೨
೩.	ಜನಸಂಖ್ಯೆ ದಶಕವಾರು	೧೩.೦೧%	೧೭.೨೫%
೪.	ಪರಿಶಿಷ್ಟ ಜಾತಿ	೧.೮೫.೨೯೦	
೫.	ಪರಿಶಿಷ್ಟ ಪಂಗಡ	೧.೩೮.೨೦೯	
೬.	ಜನಸಾಂದ್ರತೆ	೨೧೬	೨೭೬
೭.	ಲಿಂಗ ಪ್ರಮಾಣ	೯೮೩	೯೬೫

(ಮೂಲ : ಕೊಪ್ಪಳ ಜಿಲ್ಲೆಯ ಅಂಕಿ-ಅಂಶಗಳ ಒಂದು ನೋಟ ೨೦೦೪-೦೫)

೩.೩.೩. ಜಿಲ್ಲೆಯ ಆದಾಯ

ರಾಜ್ಯದ ಒಟ್ಟು ಆದಾಯ ೧,೦೪,೮೧,೪೮೯ ಲಕ್ಷ ರೂ.ಗಳಲ್ಲಿ ಇದ್ದರೆ ಈ ಜಿಲ್ಲೆಯ ಆದಾಯದ ಸ್ಥಿತಿ ನೋಡಿದರೆ ೧೬೧೭.೧೪ ಲಕ್ಷ ರೂ.ಗಳಲ್ಲಿದೆ. "ವರಮಾನದ ದೃಷ್ಟಿಯಿಂದ ರಾಜ್ಯದಲ್ಲಿ ಜಿಲ್ಲೆಗೆ ೨೬ನೆಯ ಸ್ಥಾನವಿದೆ."[೨೭] ಇದನ್ನು ಮುಂದುವರೆದು ಹೇಳುವುದಾದರೆ ಈ ಜಿಲ್ಲೆಯಲ್ಲಿ ಶೇ. ೭೪ರಷ್ಟು ಜನರ ಬದುಕಿನ ಮೂಲ ಕೃಷಿ ಆಗಿದೆ.

೩.೩.೪. ಜಿಲ್ಲೆಯ ನೈಸರ್ಗಿಕ ಸಂಪತ್ತು ಮತ್ತು ಹವಾಮಾನ

ಯಾವುದೇ ಪ್ರದೇಶದಲ್ಲಿನ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ನಿಸರ್ಗದತ್ತವಾದ ಆ ಪ್ರದೇಶಕ್ಕೆ ಒದಗಿರುವ ಸಂಪನ್ಮೂಲಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ನೈಸರ್ಗಿಕ ಸಸ್ಯ ಸಂಪತ್ತುಗಳಾದ ಅಪಾರ ಸಸ್ಯವಾಗಿ ಮತ್ತು ನದಿ ನೀರಿನಂತಹ ನೈಸರ್ಗಿಕ ಸಂಪನ್ಮೂಲಗಳು ಈ ಜಿಲ್ಲೆಯಲ್ಲಿ ಬಹುಮಟ್ಟಿಗೆ ಕಡಿಮೆಯೇ ಎಂದು ಹೇಳಬಹುದು. ಏಕೆಂದರೆ ಈ ಜಿಲ್ಲೆ ಸಾಧಾರಣವಾಗಿ ಒಣ ಭೂಪ್ರದೇಶವಾಗಿದ್ದು, ಹಳ್ಳಿಗಾಡಿನ ಮಾನವ ವಸತಿಗಳಿಂದ ಕೂಡಿರುವ ಪ್ರದೇಶವಾಗಿದೆ. "ಜಿಲ್ಲೆಯಲ್ಲಿ ಕಲ್ಲು ಬಂಡೆಗಳಿಂದ ಹಾಗೂ ಅಲ್ಲಲ್ಲಿ ಕುರುಚಲ ಗಿಡಗಳಿಂದ ಕೂಡಿದ ಬೆಟ್ಟಗುಡ್ಡಗಳಿವೆ. ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕುಗಳಲ್ಲಿ ಗ್ರಾನೈಟ್ ನಿಕ್ಷೇಪಗಳಿವೆ. ಕೊಪ್ಪಳ ಮತ್ತು ಗಂಗಾವತಿ ತಾಲೂಕುಗಳಲ್ಲಿ ಕಟ್ಟಡ ಕಟ್ಟಲು ಉಪಯೋಗಿಸುವ ಕಲ್ಲುಗಳ ನಿಕ್ಷೇಪಗಳು ಕೂಡ ಇರುತ್ತವೆ. ಜಿಲ್ಲೆಯಲ್ಲಿ ಅರಣ್ಯ ಪ್ರದೇಶವು ಅತಿ

ಕಡಿಮೆಯಾಗಿದ್ದು, ಒಟ್ಟು ಭೌಗೋಳಿಕ ವಿಸ್ತೀರ್ಣದ ೫.೦ರಷ್ಟಿದೆ. ಜಿಲ್ಲೆಯ ವಾಡಿಕೆ ಮಳೆ ೫೭೨.೦೦ ಮಿಲಿ ಮೀಟರ್ ೨೦೦೫ರಲ್ಲಿ ೫೩೮.೯ ಮಿಲಿ ಮೀಟರ್ ಮಳೆ ಬಂದಿರುವುದು ಈ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳು ಕಡಿಮೆ ಇರುವುದರಿಂದ ಕೃಷಿ ಚಟುವಟಿಕೆಯೇ ಜನರ ಮುಖ್ಯ ಉದ್ಯೋಗವಾಗಿದೆ."[೫೫]

೩.೩.೫. ಜಿಲ್ಲೆಯ ಆಡಳಿತ ವ್ಯವಸ್ಥೆ

ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ ೪ ತಾಲೂಕುಗಳನ್ನಾಗಿಯೂ ಮತ್ತು ೨೦ ಹೋಬಳಿ ಗಳನ್ನಾಗಿಯೂ ವಿಂಗಡಿಸಲಾಗಿದೆ. ಇದರಲ್ಲಿ ೨ ನಗರ ಸಭೆ (ಗಂಗಾವತಿ, ಕೊಪ್ಪಳ) ಹಾಗೂ ೨ ಪಟ್ಟಣ ಪಂಚಾಯತಿಗಳಿವೆ (ಯಲಬುರ್ಗಾ, ಕುಷ್ಟಗಿ).

೩.೩.೬. ಜಿಲ್ಲೆಯ ಪ್ರಮುಖವಾದ ಬೆಳೆಗಳು

ಜಿಲ್ಲೆಯಲ್ಲಿ ಪ್ರಮುಖವಾಗಿ ಜೋಳ, ಭತ್ತ, ಸಜ್ಜೆ, ಗೋದಿ, ಮುಸುಕಿನ ಜೋಳ, ಕಡಲೆ, ತೊಗರಿ, ಕಬ್ಬು, ಹತ್ತಿ, ರೇಷ್ಮೆ ಬೆಳೆಗಳನ್ನು ಬೆಳೆಯುತ್ತಿದ್ದು, ಜೊತೆಯಲ್ಲಿ ಅಲಸಂದಿ, ಹುಚ್ಚೆಳ್ಳು, ಹೆಸರು, ಅವರೆ, ಹಣ್ಣುಗಳಾದ ದಾಳಿಂಬೆ, ದ್ರಾಕ್ಷಿ, ಪಪ್ಪಾಯಿ, ಬೆಳೆಗಳನ್ನು ವಾಣಿಜ್ಯ ಬೆಳೆಗಳಾಗಿ ಬೆಳೆಯಲಾಗುತ್ತಿದೆ. ಗಂಗಾವತಿ, ಕೊಪ್ಪಳ ಭಾಗದಲ್ಲಿ ಭತ್ತದ ಬೆಳೆಯನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಕೊಪ್ಪಳ, ಯಲಬುರ್ಗಾ, ಕುಷ್ಟಗಿ ತಾಲೂಕುಗಳಲ್ಲಿ ಜೋಳ, ಸಜ್ಜೆ, ಶೇಂಗ, ಮುಸುಕಿನ ಜೋಳ, ಹಲಸಂದಿ, ಹೆಸರು, ಬೆಳೆಯಲಾಗುತ್ತಿದೆ. ಕುಷ್ಟಗಿ, ಯಲಬುರ್ಗಾ, ತಾಲೂಕುಗಳಲ್ಲಿ ಹತ್ತಿ, ರೇಷ್ಮೆ, ದ್ರಾಕ್ಷಿ, ಪಪ್ಪಾಯಿ, ದಾಳಿಂಬೆ, ಬೆಳೆಗಳನ್ನು ವಾಣಿಜ್ಯ ಬೆಳೆಗಳನ್ನಾಗಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿನ ಕುಷ್ಟಗಿ, ಕೊಪ್ಪಳ, ಯಲಬುರ್ಗಾ, ಗಂಗಾವತಿ, ಪ್ರಮುಖವಾಗಿ ಮರಳು ಮಿಶ್ರಿತ ಕೆಂಪು ಮಣ್ಣು ಕಪ್ಪುಮಣ್ಣು ಹಾಗೂ ಜೇಡಿಮಣ್ಣಿನಿಂದ ಕೂಡಿದ ಪ್ರದೇಶವು ಬಹುಮುಖ್ಯವಾಗಿ ಕಂಡು ಬರುತ್ತದೆ. ಅಲ್ಪ-ಸ್ವಲ್ಪ ಭಾಗದಲ್ಲಿ ಕಪ್ಪು ಮಣ್ಣಿನ ಪ್ರದೇಶವು ಇದೆ.

೩.೩.೭. ಜಿಲ್ಲೆಯ ಖನಿಜ ಸಂಪತ್ತು

ಖನಿಜ ಸಂಪತ್ತಿನಲ್ಲಿ ಕೊಪ್ಪಳ ಜಿಲ್ಲೆಯು ರಾಜ್ಯದಲ್ಲಿ ಪರಿಗಣಿಸಬಹುದಾದಷ್ಟು ಸಂಪತ್ತು ಹೊಂದಿಲ್ಲವೆಂದು ಹೇಳಬಹುದು. ಜಿಲ್ಲೆಯಲ್ಲಿ ಪ್ರಮುಖವಾಗಿ ದೊರೆಯುವಂತಹ ಖನಿಜಗಳು ಎಂದರೆ ಬೆಣಚುಕಲ್ಲು, ಚೈನಾಕ್ಲೇ, ಅಲ್ಯುಮಿನಸ್‌ಕ್ಲೇ ಹಾಗೂ ಕ್ರೋಮೈಟ ಅದರಲ್ಲಿ ಮುಖ್ಯವಾಗಿ ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕುಗಳಲ್ಲಿ ಗ್ರಾನೈಟ್ ಹೊರತೆಗೆಯಲಾಗುತ್ತಿದೆ.

೩.೩.೮. ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆ

ಈ ಜಿಲ್ಲೆಯ ಶಿಕ್ಷಣವು ರಾಜಕೀಯ ಆಡಳಿತ ಶಕ್ತಿಯ ಅವಕೃಪೆಯ ಆಘಾತಗಳಿಂದ ಘಾಸಿಗೊಂಡ ಕೂಸು ಎಂದು ಹೇಳಬಹುದು. ರಾಜ್ಯ ಅಥವಾ ಜಿಲ್ಲೆಯ ಹಿಂದುಳಿಯುವಿಕೆಗೆ ಆ ಪ್ರದೇಶದ ಶೈಕ್ಷಣಿಕ ಹಿಂದುಳಿಯುವಿಕೆಯೇ ಅಂತಿಮ ಕಾರಣವಾಗಿರುತ್ತದೆ. ದೊರೆಯುವಂತಹ

"ಮಾನವ ಸಂಪನ್ಮೂಲವನ್ನು ಸುಧಾರಿತ ಹಾಗೂ ಉತ್ಪಾದಕ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ತಾಕತ್ತು ಶಿಕ್ಷಣಕ್ಕಿದೆ".[೨೯] ಈ ಕಾರಣದಿಂದಾಗಿಯೇ ಶಿಕ್ಷಣ ಪ್ರಗತಿಯ ಪ್ರೇರಕ ಶಕ್ತಿಯಾಗಿದೆ. ಸಾಮಾನ್ಯವಾಗಿ ಬಹುಸಂಖ್ಯಾತ ಹಿಂದುಳಿದಿರುವಂತಹ ಪ್ರದೇಶಗಳು ಪ್ರಮುಖವಾಗಿ ಶಿಕ್ಷಣದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪ್ರದೇಶಗಳೇ ಆಗಿರುತ್ತವೆ. ಇಂಥ ಸನ್ನಿವೇಶಕ್ಕೆ ಹೈದರಾಬಾದ-ಕರ್ನಾಟಕ ಪ್ರದೇಶವು ಜೀವಂತ ಉದಾಹರಣೆ ಎನ್ನಬಹುದು. ಅದರಲ್ಲಿ ಈ ಜಿಲ್ಲೆಯೂ ಸಹ ಉತ್ತಮ ನಿದರ್ಶನವಾಗಿದೆ. ಹಿಂದಿನ ಸಮಯದಲ್ಲಿ ಸಾರ್ವತ್ರಿಕವಾಗಿ ಶೈಕ್ಷಣಿಕ ಅವಕಾಶವು ಇರಲಿಲ್ಲ. ಆದರೆ ಇವತ್ತಿನ ದಿನಗಳಲ್ಲಿ ತಡವಾಗಿಯಾದರೂ ಶಿಕ್ಷಣವು ಎಲ್ಲರಿಗೂ ಲಭಿಸುವಲ್ಲಿ ಪ್ರಯತ್ನ ಸಾಗಿದೆ.

ಆದಿಮ ಸಂದರ್ಭಗಳಲ್ಲಿ ಕೊಪ್ಪಳ ಜಿಲ್ಲೆಯು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿರುವುದರ ಹೆಗ್ಗುರುತುಗಳು ದೊರೆಯುತ್ತವೆ. ಅದರಲ್ಲಿ "ಪ್ರಾಚೀನ ಜ್ಞಾನಪೀಠಗಳೆಂದು ಗೌರವಿಸಲ್ಪಡುವ ಅಗ್ರಹಾರಗಳು, ಮಠಗಳು, ಘಟಿಕೆಗಳು ಜಿಲ್ಲೆಯಾದ್ಯಾಂತ ಪಸರಿಸಿದ್ದವು. ಶಿಕ್ಷಣದ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದವು. ಅಳವಂಡಿ, ಕವಲೂರು, ಮಾದಿನೂರು ಮತ್ತು ಇಟಗಿ, ಕುಕನೂರು, ಮುಧೋಳ ಅಗ್ರಹಾರಗಳು ಪ್ರಸಿದ್ಧಿ ಪಡೆದಿದ್ದವು"[೩೦] ಅಂದಿನ ಸಮಯದಲ್ಲಿ ಶಿಕ್ಷಣಕ್ಕೆ ಪ್ರಮುಖ ಆದ್ಯತೆಯಿದ್ದರೂ ಸಹ ಕೇವಲ ಕೆಲವೆ ವರ್ಗ, ಸಮುದಾಯಗಳಿಗೆ ಮೀಸಲಾಗಿತ್ತೆಂದು ಹೇಳಬಹುದು. ಈ ತೆರನಾದ ಕ್ರಮವು ಸಾರ್ವತ್ರಿಕ ಸ್ವರೂಪ ಪಡೆದಿರಲಿಲ್ಲ. ಆ ಕಾರಣದಿಂದಾಗಿ ನಿಮ್ನ ಜಾತಿ-ವರ್ಗಗಳಿಗೆ ಶಿಕ್ಷಣದ ಅವಕಾಶವಿರಲಿಲ್ಲವೆಂದು ತಿಳಿದುಬರುತ್ತದೆ. "ಕ್ರಿ.ಶ. ೧೭೪೨ರಲ್ಲಿ ಮೊಗಲ್ ಸಾಮ್ರಾಜ್ಯದ ದಕ್ಷಿಣದ ಸುಬೇದಾರ ಮೀರ್ ಕರೀಮುದ್ದಿನ್ ಹೈದರಾಬಾದ್ ಸಂಸ್ಥಾನ ಸ್ಥಾಪಿಸಿದ. ಈ ಮಹಾ ಸಂಸ್ಥಾನ ಹದಿನೆಂಟು ಜಿಲ್ಲೆಗಳನ್ನೊಳಗೊಂಡಿತ್ತು. ಕೊಪ್ಪಳ ಜಿಲ್ಲೆಯನ್ನೊಳಗೊಂಡಿದ್ದ ರಾಯಚೂರು ಜಿಲ್ಲೆ ಆ ಹದಿನೆಂಟು ಜಿಲ್ಲೆಗಳ ಪೈಕಿ ಒಂದಾಗಿತ್ತು. ೧೯೨೦ ದಶಕದಲ್ಲಿ ಸಾಲಾರಜಂಗ್ ಬಹದ್ದೂರರು ಕೊಪ್ಪಳ, ಯಲಬುರ್ಗಿ ತಾಲೂಕುಗಳನ್ನೊಳ ಗೊಂಡಂತೆ ಕೊಪ್ಪಳಕ್ಕೆ ಜಿಲ್ಲೆಯ ಸ್ಥಾನಮಾನಕೊಟ್ಟು ಈ ಜಹಗೀರನ ನವಾಬರಾಗಿ ಹೈದರಾಬಾದಿನಿಂದಲೇ ಆಡಳಿತ ನಡೆಸುತ್ತಿದ್ದರು. ೧೯೪೮ರಲ್ಲಿ ಜಹಗೀರುಗಳು ರದ್ದಾದವು. ಜಹಗೀರಿನ ಕೊಪ್ಪಳ ಮತ್ತು ಯಲಬುರ್ಗ ತಾಲೂಕುಗಳು ರಾಯಚೂರು ಜಿಲ್ಲೆಗೆ ಸೇರ್ಪಡೆಯಾದವು. ೧೯೫೬ರಲ್ಲಿ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆಯಾಯಿತು. ಆ ಸಂದರ್ಭದಲ್ಲಿ ರಾಯಚೂರು ಜಿಲ್ಲೆ ಈಗಿನ ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳಾದ ಗಂಗಾವತಿ, ಕುಷ್ಟಗಿ, ಯಲಬುರ್ಗ ಮತ್ತು ಕೊಪ್ಪಳ ಒಳಗೊಂಡಂತೆ ಒಂಬತ್ತು ತಾಲೂಕುಗಳ ಒಂದು ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು."[೩೧] ಅಂದಿನ ಸಮಯದಲ್ಲಿ ವಿಸ್ತಾರದಲ್ಲಿ ರಾಯಚೂರು ಜಿಲ್ಲೆ ರಾಜ್ಯದಲ್ಲೇ ಮೂರನೇ ಅತಿ ದೊಡ್ಡ ಜಿಲ್ಲೆಯಾಗಿದ್ದರೂ ಸಹ ಶಿಕ್ಷಣದಲ್ಲಿ ಮಾತ್ರ ಅಂತಿಮ ಇಪ್ಪತ್ತು ಜಿಲ್ಲೆಗಳ ಪೈಕಿ ಹದಿನೈದನೇ ಸ್ಥಾನದಲ್ಲಿತ್ತು. ೧೯೯೭ನೇ ಆಗಸ್ಟ್ ೨೪ರಂದು ಕೊಪ್ಪಳ, ಯಲಬುರ್ಗ, ಕುಷ್ಟಗಿ ಹಾಗೂ ಗಂಗಾವತಿಯನ್ನೊಳಗೊಂಡ ನೂತನ ಕೊಪ್ಪಳ ಜಿಲ್ಲೆ ಅಸ್ತಿತ್ವಕ್ಕೆ ಬಂದಿತು.

ಈ ಸಂದರ್ಭಗಳಿಗಿಂತ ಮುಂಚೆ ಸುಮಾರು ಆರುನೂರು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೩೪೭ ರಿಂದ ೧೯೪೮ರವರೆಗಿನ ವರೆಗೂ ಈ ಭಾಗದಲ್ಲಿ ಅನ್ಯ ಭಾಷಿಕರ ಉರ್ದುವಿನ ಆಡಳಿತ ಹಾಗೂ ಶಿಕ್ಷಣವು ಮುಖ್ಯವಾಗಿ ಕಂಡುಬರುತ್ತದೆ. ಅದರಲ್ಲಿ "ಶೇಕಡ ೧೩ರಷ್ಟು ಜನರ ಆಡುಭಾಷೆ ಉರ್ದುವಿನ ಎದುರು ಶೇಕಡ ೮೭%ರಷ್ಟು ಜನರ ಆಡುಭಾಷೆ ಕನ್ನಡವು ನೆಲ ಕಚ್ಚಿತು. ತೀವ್ರ ಪ್ರತಿಕೂಲದ ಪರಿಸ್ಥಿತಿಯೂ ಶಿಕ್ಷಣಕ್ಕೆ ಅದರಲ್ಲಿ ಜನಸಾಮಾನ್ಯರ ಪಾಲಿಗೆ ದೊಡ್ಡ ಅಘಾತ ನೀಡಿತು."[೨] ಇದಕ್ಕೆ ಒಂದು ಉದಾಹರಣೆಯೆಂದರೆ ಹೈದರಾಬಾದ್‌ನ ಸರ್ ಸಾಲಾರ್‌ಜಂಗ್‌ರವರು ರೂಪಿಸಿದ "ದಾರುತ್-ಉಲಾಮ್" ಈ ಭಾಗದ ಶಿಕ್ಷಣದ ಮೊದಲ ಅಧ್ಯಾಯ ಎನ್ನಬಹುದು. ೧೯೧೮ರಲ್ಲಿ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯ ಉರ್ದು ಭಾಷೆಯನ್ನು ಪ್ರಾಥಮಿಕ ಹಂತದಿಂದ ಪದವಿ ಹಂತದವರೆಗೂ ಶಿಕ್ಷಣ ಮಾಧ್ಯಮವನ್ನಾಗಿ ಘೋಷಿಸಿತು. ಆದ್ದರಿಂದ ಹೈದರಾಬಾದ್-ಕರ್ನಾಟಕದಲ್ಲಿ ಕನ್ನಡ ಶಾಲೆಗಳು ೧೯೫೦ರ ನಂತರವೇ ಆರಂಭಗೊಂಡದ್ದನ್ನು ಕಾಣುತ್ತೇವೆ. ಅಲ್ಲಿಯವರೆಗೆ ಗ್ರಾಮ-ಹಳ್ಳಿಗಳಲ್ಲಿ ಕನ್ನಡ ಶಿಕ್ಷಣದ ಜವಾಬ್ದಾರಿಯೂ ಮಠಗಳು-ಖಾಸಗಿ ಶಿಕ್ಷಕರ ಮೇಲಿತ್ತು.

ಇನ್ನು ಈ ಪ್ರದೇಶದಲ್ಲಿ ಸಾಕ್ಷರತೆಯನ್ನು ಕುರಿತು ನೋಡಿದಾಗ, ದೇಶಕ್ಕೆ ಸ್ವಾತಂತ್ರ್ಯ ಬಂದ ದಶಕದಲ್ಲಿ "ಇಡೀ ದೇಶದ ಸಾಕ್ಷರತೆ ಪ್ರಮಾಣವು ೧೯,೩೦%ರಷ್ಟು ಇತ್ತು. ಅದೇ ಸಮಯದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸಾಕ್ಷರತೆ ಕೇವಲ ಶೇ. ೮.೫%ರಷ್ಟು ಇತ್ತು"[೩] ಮುಂದೆ ಭಾಷಾವಾರು ವಿಂಗಡಣೆಯಾದಾಗ ಸಹ ಈ ಭಾಗವು ನಿರ್ಲಕ್ಷ್ಯಕ್ಕೊಳಗಾಯಿತು. ಇಲ್ಲಿನ ಇನ್ನೊಂದು ಮುಖ್ಯ ಅಂಶವೆಂದರೆ ೧೯೭೧ರ ಜನಗಣತಿ ಪ್ರಕಾರ ಅಂದಿನ ಕೊಪ್ಪಳವನ್ನು ಒಳಗೊಂಡ ರಾಯಚೂರು ಜಿಲ್ಲೆಯ ಸಾಕ್ಷರತೆ ಶೇ. ೨೦.೨%ರಷ್ಟಿತ್ತು. ಅಂದರೆ ರಾಯಚೂರು ಜಿಲ್ಲೆ ಸಾಕ್ಷರತೆ ರಾಷ್ಟ್ರಮಟ್ಟದ ಸಾಕ್ಷರತಾ ಪ್ರಗತಿಗಿಂತ ೨೦ವರ್ಷ ಹಿಂದುಳಿದಿತ್ತು. ಈ ಶತಮಾನದ ಕೊನೆಯ ದಶಕದ ಸಂದರ್ಭದಲ್ಲಿ ಈ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಸಾಕ್ಷರತಾ ಪ್ರಮಾಣ ಪ್ರತಿಶತ ೨೦ರ ಗೆರೆದಾಟಲಿಲ್ಲ. ಅದರಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವಂತೂ ಅತ್ಯಂತ ಕೆಳಮಟ್ಟದಲ್ಲಿತ್ತು ಎಂದು ಹೇಳಬಹುದು. ಈ ರೀತಿಯಾಗಿ ಅಧ್ಯಯನ ಮೂರು ಜಿಲ್ಲೆಗಳು ಹೊಂದಿರುವಂತಹ ಅಂಕಿ ಅಂಶಗಳನ್ನು ಗಮನಿಸಿದಾಗ ಬೇಡ ಸಮುದಾಯದ ಮಹಿಳೆಯರು ಏಕೆ ನಗಣ್ಯವಾಗಿದ್ದಾರೆ ಎನ್ನುವಂತಹ ಪ್ರಶ್ನೆ ಎದುರುಗೊಳ್ಳುತ್ತದೆ. ಇದರ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಅವಶ್ಯಕತೆಯಿದೆ ಎನ್ನಬಹುದು.

ಟಿಪ್ಪಣಿಗಳು

೧. ಟಿ.ಆರ್. ಚಂದ್ರಶೇಖರ, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ೨೦೦೩, ಪು. ೪೨.

೨. ಅದೇ ಪುಟ.೪೨.

೩. ಟಿ.ಎಂ. ಭಾಸ್ಕರ್ (ಸಂ.), ಕಲಬುರ್ಗಿ ಜಿಲ್ಲಾದರ್ಶನ, ಶ್ರೀ ರಾಜಶೇಖರ ಹತಗುಂದಿ, ೨೦೦೫, ಪು. ೨೪೭.

೪. ಅದೇ ಪುಟ. ೨೪೭.

೫. ಗುಲಬರ್ಗಾ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೦೫. ಪುಟ.೬೧

೬. ಕೆ.ಎಂ. ಮೇತ್ರಿ ಮತ್ತು ಡಾ. ಚಲುವರಾಜು (ಸಂ), ಬುಡಕಟ್ಟು ಅಧ್ಯಯನ, ಸಂಪುಟ ೩, ಸಂಚಿಕೆ ೨, ೨೦೦೬, ಪುಟ. ೧೫೩.

೭. ಟಿ.ಎಂ. ಭಾಸ್ಕರ್ (ಸಂ.), ೨೦೦೫, ಕಲಬುರ್ಗಿ ಜಿಲ್ಲಾದರ್ಶನ, ಶ್ರೀ ರಾಜಶೇಖರ ಹತಗುಂದಿ, ಪುಟ. ೧೦.

೮. ಅದೇ., ಪುಟ. ೧೦.

೯. ಅದೇ., ಪುಟ. ೧೦.

೧೦. ಅದೇ ಪುಟ.೧೨.

೧೧. ಅದೇ ಪುಟ.೧೩.

೧೨. ಅದೇ ಪುಟ.೧೮.

೧೩. ಟಿ.ಆರ್. ಚಂದ್ರಶೇಖರ, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ೨೦೦೩, ಪುಟ. ೪೨-೪೩.

೧೪. ಗುಲಬರ್ಗಾ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೦೫, ಪುಟ.೬೨.

೧೫. ಕರ್ನಾಟಕ ಮಾನವ ಅಭಿವೃದ್ಧಿ, ೨೦೦೫, ಪುಟ.೮೬.

೧೬. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪ್ಪಿಮಠ (ಸಂ.), ರಾಯಚೂರು ಜಿಲ್ಲಾದರ್ಶನ, ೨೦೦೫, ಪುಟ. ೧.

೧೭. ಅದೇ., ಪುಟ. ೨.

೧೮. ಅದೇ., ಪುಟ. ೪.

೧೯. ಅದೇ ಪುಟ.೬.

೨೦. ರಾಯಚೂರು ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೦೫-೦೬, ಪುಟ.೭೬.

೨೧. ರಾಯಚೂರು ಜಿಲ್ಲಾ ಅಂಕಿ-ಅಂಶ ನೋಟ. ೨೦೦೫-೦೬, ಪುಟ.೮೧-೮೨

೨೨. ಅದೇ ಪುಟ.೬೬.

೨೩. ಅದೇ ಪುಟ. ೭೭.

೨೪. ಅದೇ ಪುಟ.೭೮.

೨೫. ಟಿ.ಆರ್. ಚಂದ್ರಶೇಖರ, ಜಿಲ್ಲಾ ಅಭಿವೃದ್ಧಿ ಅಧ್ಯಯನ-ಕೊಪ್ಪಳ, ೧೯೯೯, ಪುಟ. ೨೩.

೨೬. ಅದೇ., ಪುಟ. ೨೪.

೨೭. ಅದೇ., ಪುಟ. ೧೨೩.

೨೮. ಕೊಪ್ಪಳ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೪-೦೫, ಪುಟ.೮೬.

೨೯. ಅಲ್ಲಮಪ್ರಭು ಬೆಟ್ಟದೂರು, ಶ್ರೀ ಎಚ್.ಎಸ್.ಪಾಟೀಲ, ಕೊಪ್ಪಳ ಜಿಲ್ಲಾ ದರ್ಶನ, ೨೦೦೫. ಪುಟ.೧೫.

೩೦. ಅದೇ ಪುಟ. ೧೫.

೩೧. ಅದೇ ಪುಟ. ೧೬.

೩೨. ಅದೇ ಪುಟ. ೧೬.

೩೩. ಅದೇ ಪುಟ. ೧೬.

ಅಧ್ಯಾಯ ಮೂರು

ಬೇಡ ಸಮುದಾಯದಲ್ಲಿ ಮಹಿಳಾ ಪರಿಕಲ್ಪನೆ

ಬುಡಕಟ್ಟು ಸಮುದಾಯಗಳು ಆದಿಮ ಸಂದರ್ಭದಲ್ಲಿ ಉತ್ತಮ ಜೀವನ ನಿರ್ವಹಿಸುತ್ತಿದ್ದರು. ಅಂದರೆ ವೈದಿಕ ಧರ್ಮದ ಪೂರ್ವದಲ್ಲಿ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಅರಣ್ಯವಾಸಿ ಜನರು ಪ್ರಮುಖವಾಗಿ ಮಾತೃವಂಶಿಯ ಕಲ್ಪನೆಯಧಾರದ ಅನ್ವಯ ಕುಟುಂಬ ಪದ್ಧತಿ ರೂಢಿಯಲ್ಲಿತ್ತು. ಇದಕ್ಕೆ ಹಲವು ಕಾರಣಾಂಶಗಳು ಸಹ ದೊರೆಯುತ್ತವೆ. ಪ್ರಮುಖವಾಗಿ ಅರಣ್ಯ ಪ್ರದೇಶದಲ್ಲಿ, ಬೇಟೆ ವೃತ್ತಿ, ಗೆಡ್ಡೆ-ಗೆಣಸುಗಳ ಸಂಗ್ರಹ ಮತ್ತು ನಾಗರಿಕರಾಗುವ ಹಂತದಲ್ಲಿರುವ ಸಂದರ್ಭ. ಇನ್ನೂ ವೈದಿಕ ಧರ್ಮದ ಪ್ರಭಾವದಿಂದ ದೂರ ಉಳಿದ ಸನ್ನಿವೇಶ. ಈ ಎಲ್ಲಾ ಕಾರಣಗಳಿಂದ ಅಂದಿನ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದಲ್ಲಿ ಮಹಿಳೆಯ ಸ್ಥಿತಿಗತಿ ಅನ್ನುವುದಕ್ಕಿಂತಲೂ ಅವಳ ಅಂತಸ್ತು ಉತ್ತಮ ಸ್ಥಿತಿಯಲ್ಲಿತ್ತು. ಅದುವೇ ಸ್ತ್ರೀ ಪ್ರಧಾನ ಪರಿಕಲ್ಪನೆ.

೩.೧. ಮಹಿಳಾ ಪರಿಕಲ್ಪನೆಯ ಸ್ವರೂಪ

ಈ ಪರಿಕಲ್ಪನೆ ಕುರಿತು ಪ್ರಥಮವಾಗಿ ಗುರುತಿಸಿ ಒಂದು ಸೈದ್ಧಾಂತಿಕ ಚೌಕಟ್ಟನ್ನು ರಚನೆ ಮಾಡಿದವರು "ಬಾಹೊಫೆನ್‌ರು ಇವರ ಅಭಿಪ್ರಾಯದಲ್ಲಿ ಅಂದಿನ ಬುಡಕಟ್ಟು ಸಮುದಾಯದಲ್ಲಿರುವಂತಹ ಮಹಿಳೆಯ ಪರಿಕಲ್ಪನೆ ಕುರಿತು ಬುಡಕಟ್ಟು ಅಥವಾ ಆದಿವಾಸಿಗಳ ಕುಟುಂಬ ಜೀವನದಲ್ಲಿ ಮಾತೃ ಅಧಿಕಾರದ ಪ್ರಭಾವ ಪ್ರಬಲವಾಗಿತ್ತು ಎಂದು ಪ್ರತಿಪಾದಿಸಿದ್ದಾರೆ. ಈ ಕುರಿತಂತೆ ಏಂಗೆಲ್ಸರು ಹೀಗೆ ಪ್ರತಿಕ್ರಿಯಿಸಿದ್ದಾರೆ. ಆರಂಭದಲ್ಲಿ ಮಾನವ ಕುಲವು ಲೈಂಗಿಕ ಚಟುವಟಿಕೆಗಳು ಮುಕ್ತ ರೀತಿಯಲ್ಲಿ ಇದ್ದವು. ಲೈಂಗಿಕತೆಯಲ್ಲಿ ಮುಕ್ತತೆ ಇದ್ದುದರಿಂದ ಯಾವುದೇ ಮಗುವಿನ ತಂದೆ ಯಾರೆಂದು ಖಂಡಿತವಾಗಿ ಹೇಳುವುದು ಸಾಧ್ಯವಿರಲಿಲ್ಲ. ಪ್ರಮುಖವಾಗಿ ಆದಿಮದಲ್ಲಿ ಜಗತ್ತಿನ ಎಲ್ಲ ಪ್ರಾಚೀನ ಜನತೆಗಳ ಮಧ್ಯೆಯೂ ಇಂತಹದ್ದೆ ಪರಿಸ್ಥಿತಿಯ ಜನ್ಮದಾತ್ರಗಳಾಗಿದ್ದರು. ಅವರನ್ನು ಅಂದಿನ ಸಮಯದಲ್ಲಿ ತುಂಬ ಗೌರವಾದಾರಗಳಿಂದ ನೋಡಲಾಗುತ್ತಿದ್ದಿತು. ಇದನ್ನೇ ಬಾಹೊಫೆನರ್ ಕಲ್ಪನೆಯ ಪ್ರಕಾರ ಮಹಿಳೆಯ ಸಂಪೂರ್ಣ ಪ್ರಭುತ್ವದ ಮಟ್ಟಕ್ಕೆ ತಲುಪಿದ ಸುಸಂದರ್ಭದ ಅವಧಿಯಂದು ಹೇಳಬಹುದು. ಇಂತಹ ಸಂದರ್ಭದಲ್ಲಿ ತಾಯಿಯ ಮೂಲಕ ವಂಶಾವಳಿಯನ್ನು ಅದರಿಂದ ದೊರೆಯುವ ಉತ್ತರಾಧಿಕಾರತ್ವದ ಸಂಗತಿಯನ್ನು ಇಟ್ಟುಕೊಂಡು ಚಿಂತಕರು ಮಹಿಳೆಯನ್ನು ಅಧಿಕಾರದ ನೆಲೆಯಲ್ಲಿ ನಿರೂಪಿಸಿ, ಅವಳಿಗೆ ಪ್ರಭುತ್ವದ ಸ್ಥಾನವನ್ನು

ಕಲ್ಪಿಸಿದ್ದಾರೆ. ಮುಂದುವರೆದು ವಿವಾಹ ಪೂರ್ವದಲ್ಲಿ ಜನ್ಮದಾತೆಯ ಮೂಲಕ ಮಕ್ಕಳನ್ನು ಗುರುತಿಸಲು ಸಾದ್ಯವಾಗಿದ್ದುದರಿಂದ ಸಹಜವಾಗಿ ಮಹಿಳೆಯರಿಗೆ ಉತ್ತರಾಧಿಕಾರ ಲಭಿಸಿತು. ಹೀಗಾಗಿ ಅದು ಮಾತೃವಂಶಿಯವೇ ಹೊರತು, ಮಾತೃ ಅಧಿಕಾರವಲ್ಲ ಅನ್ನುವುದಕ್ಕಿಂತ ಮಕ್ಕಳನ್ನು ಗುರುತಿಸುವ ಪ್ರಧಾನತೆಯ ಅಧಿಕಾರದ ಒಂದು ಪ್ರತಿರೂಪವೆಂದು ಹೇಳಬಹುದು"[೧] ಈ ಎಲ್ಲ ಅಂಶಗಳಿಂದ ಮಹಿಳೆ ಆದಿವಾಸಿ ಸಮಾಜದಲ್ಲಿ ಪ್ರಧಾನಳಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಇನ್ನೊರ್ವ ಪ್ರಮುಖ ಚಿಂತಕರಾದ ಏಂಗೆಲ್ಸ್‌ರ ಅಭಿಪ್ರಾಯದಂತೆ "ಬೇಸಾಯ ಪೂರ್ವ ಸಮುದಾಯಗಳಲ್ಲಿ ಪುರುಷರು ಸ್ತ್ರೀಯರಲ್ಲಿ ಮೂಲಭೂತವಾದ ಸಮಾನತೆ ಇತ್ತೆಂಬುದು ಇವರ ವಾದ ನಿಜವಿದೆ. ಪುರುಷರು ಉತ್ಪಾದಕರಾಗಿ (ಬೇಟೆ, ವ್ಯವಸಾಯ, ಪಶುಸಂಗೋಪನೆ) ಇದ್ದ ಸಂದರ್ಭದಲ್ಲಿ ಮಹಿಳೆ ಮನೆಯಲ್ಲಿ ಮರು ಉತ್ಪಾದಕಿಯಾಗಿ ಅತ್ಯಂತ ಮಹತ್ವಪೂರ್ಣ ಕೆಲಸ ನಿರ್ವಹಿಸುತ್ತಿದ್ದಳು."[೨] ಪುರುಷರು ಅರಣ್ಯದಲ್ಲಿ ದೊರೆಯುವಂತಹ ಆಹಾರ ಸಾಮಗ್ರಿಗಳಾದ ಹಣ್ಣು ಹಂಪಲ, ಪ್ರಾಣಿ ಪಕ್ಷಿಗಳ ಮಾಂಸ ಮತ್ತು ದವಸ ಧಾನ್ಯಗಳನ್ನು ತಂದ ನಂತರ ಮಹಿಳೆಯೂ ಕಚ್ಚಾ ರೂಪದಿಂದ ಶುದ್ದ ರೂಪಕ್ಕೆ ತರುವಂತಹ ಕ್ರಿಯೆ ಹಾಗೂ ಮರುಉತ್ಪಾದಕತೆಯ ಕಾರ್ಯನಿರ್ವಹಿಸುತ್ತಿದ್ದರಿಂದ ಮಗುವಿನ ತಂದೆ ಯಾರೆಂದು ಗೊತ್ತಿಲ್ಲದ್ದರಿಂದ ಮಹಿಳಾ (ತಾಯಿ) ಹಕ್ಕು ಚಲಾವಣೆಯಲ್ಲಿದ್ದು ಕುಟುಂಬದಲ್ಲಿ ಸ್ತ್ರೀಗೆ ಅಧಿಕಾರಯುತ ಸ್ಥಾನ ದೊರೆಯುತ್ತಿತ್ತು.

ಅಂದಿನ ಆದಿವಾಸಿ ಸಮಾಜ ಕುಟುಂಬ ಜೀವನ ನಿರ್ವಹಣೆಯ ಸಂದರ್ಭದಲ್ಲಿ ಮಹಿಳೆಯನ್ನು ಗುರುತಿಸುವಿಕೆಯಲ್ಲಿ ಪ್ರಮುಖವಾಗಿ ಮೂರು ಅಂಶಗಳು ಪ್ರಭಾವ ಬೀರಿವೆ. ಅವುಗಳೆಂದರೆ ೧. ಮಾತೃತ್ವ ೨. ಮರುಉತ್ಪಾದಕಿ ೩. ಮಗುವನ್ನು ಗುರುತಿಸುವ ಸ್ವರೂಪ. ಇದರಲ್ಲಿ ಮಾತೃತ್ವಕ್ಕೆ ಅಥವಾ ಫಲವಂತಿಕೆಗೆ ಹೆಚ್ಚಿನ ಮಹತ್ವನೀಡಿ ಬುಡಕಟ್ಟು ಸಮುದಾಯದ ಪುರುಷರು ಗುರುತಿಸಿದ್ದಾರೆ. ಇದರಿಂದ ಅರಣ್ಯವಾಸಿ ಜನ ಸಮುದಾಯಗಳಲ್ಲಿ ಮಹಿಳೆಯರು ಸಂಪೂರ್ಣ ಅಧಿಕಾರದ ಸವಲತ್ತು ಪಡೆಯದಿದ್ದರೂ, ಪಡೆದಂತಹ ಅಲ್ಪ ಅವಕಾಶದಲ್ಲಿ ತೃಪ್ತರಾಗಿ ಪುರುಷರ ಸರಿಸಮಾನರಾಗಿ ಬಾಳುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಬುಡಕಟ್ಟು ಸಮುದಾಯದಲ್ಲಿ ಮಹಿಳೆ ಪರಿಕಲ್ಪನೆ ಕುರಿತು ಭಾರತೀಯ ಪುರುಷ ಚಿಂತಕರು ಸಹ ನಾರಿ ಪ್ರಧಾನತೆಯನ್ನು ಪಾಶ್ಚಿಮಾತ್ಯ ಚಿಂತಕರ ದಾಟಿಯಲ್ಲಿಯೇ ಸ್ಥಳೀಯ ಉದಾಹರಣೆಗಳೊಂದಿಗೆ ಸಮರ್ಥಿಸುತ್ತಿರುವುದು ಕಂಡುಬರುತ್ತದೆ. ಅದರಲ್ಲಿ "ದೇವಿಪ್ರಸಾದ ಚಟ್ಟೋಪಾಧ್ಯಾಯರು ಮಾತೃಪ್ರಧಾನ ಅಥವಾ ಮಹಿಳೆ ಪರಿಕಲ್ಪನೆ, ನಾರಿಪ್ರಧಾನ ಸಮಾಜ ಎಂದು ಎರಡು ಪದಪುಂಜಗಳನ್ನು ಒಂದೇ ಅರ್ಥದಲ್ಲಿ ಬಳಸಿರುವರು. ದೇವಿ ಪ್ರಸಾದರು ನಾರಿಪ್ರಧಾನತೆಯನ್ನು ಅಥವಾ ಮಾತೃಪ್ರಧಾನತೆಯನ್ನು ಹಲವು ಅಂಶಗಳಿಂದ ಗುರುತಿಸಿರುವರು. ೧. ತಾಯಿಯ ವಂಶದಿಂದ ಮಕ್ಕಳನ್ನು ಗುರುತಿಸುವುದು ಬುಡಕಟ್ಟುಗಳ ಆದಿಮ ಸ್ಥಿತಿಯ ಸಂದರ್ಭದಲ್ಲಿ ವೈದಿಕ ಧರ್ಮದ

ಪ್ರಭಾವದ ಲಕ್ಷಣಗಳು. ಈ ಸಮುದಾಯದವರ ಮೇಲೆ ಒತ್ತಡ ಇರಲಿಲ್ಲ. ಇದರಿಂದ ವಿವಾಹ, ಬಂಧುತ್ವ, ಕಲ್ಪನೆಯಿಂದ ಬಹುದೂರವಿದ್ದ ಸಮಯದಲ್ಲಿ ಸ್ತ್ರೀ ಪುರುಷರ ಲೈಂಗಿಕತೆಗೆ ರೀತಿನೀತಿಗಳ ಚೌಕಟ್ಟು ಎಂದ ಕಾರಣ ಜನ್ಮಿಸಿದಂತಹ ಮಕ್ಕಳಿಗೆ ಮಾತ್ರ ಪ್ರಮುಖವಾಗಿ ಪ್ರಾಧಾನ್ಯತೆಯನ್ನು ಹೊಂದಿದ್ದಳು ಹಾಗೂ ಗುರುತಿಸುವಿಕೆ ಮಹಿಳೆಯನ್ನು ಒಳಗೊಂಡಿತ್ತು. ಹಾಗೂ ಸಂಪತ್ತಿನ ಉತ್ತರಾಧಿಕಾರಿತ್ವ ಸ್ತ್ರೀಯರದ್ದಾಗಿತ್ತು ಎಂಬುದಕ್ಕೆ ಅಂದಿನ ಪರಿಸರವು ಕಾರಣವಾಗುತ್ತಿತ್ತು."[8] ಪ್ರಮುಖವಾಗಿ ಪುರುಷನ ದಿನನಿತ್ಯದ ಚಟುವಟಿಕೆಗಳಾದ ಬೇಟೆಯಾಡುವಿಕೆ, ಆಹಾರ ಸಂಗ್ರಹಣೆ, ಪಶುಸಂಗೋಪನೆ ಮತ್ತು ಕೃಷಿ ಚಟುವಟಿಕೆಗಳನ್ನು ಅವಲೋಕಿಸಿದಾಗ ಪುರುಷನಿಗೆ ಬಿಡುವೆಂಬುದು ಇರಲಿಲ್ಲ. ಹಾಗೂ ಕರ್ತವ್ಯ ಸಹ ಇವುಗಳಿಗೆ ಸೀಮಿತ ಮಾಡಿಕೊಂಡಿದ್ದ ಇಂತಹ ಸಂದರ್ಭದಲ್ಲಿ ಸಂಪತ್ತಿನ ಅಧಿಕಾರವನ್ನು ಪ್ರಮುಖವಾಗಿ ಸ್ತ್ರೀಯೆ ನಿರ್ವಹಣೆ ಮಾಡುತ್ತಿದ್ದಳು. ಅಂದಿನ ಸಂದರ್ಭದಲ್ಲಿ ಸಮುದಾಯದ ಸಂಪತ್ತು ಪ್ರಮುಖವಾಗಿ ಅರಣ್ಯ ಉತ್ಪನ್ನಗಳು, ಪ್ರಾಣಿ ಪಕ್ಷಿಗಳ ಪರಿಕರಗಳು, ಇತರೆ ವಸ್ತುಗಳು ಅವರ ಸಂಪತ್ತುಗಳಾಗಿದ್ದವು. ಇವುಗಳನ್ನು ಕಾಯ್ದುಕೊಳ್ಳುವಿಕೆಯ ಕಾರ್ಯವು ಮಹಿಳೆಯೇ ನಿರ್ವಹಿಸುತ್ತಿದ್ದುದು ಪ್ರಮುಖವಾಗಿ ತಿಳಿದುಬರುತ್ತದೆ. ಇಂತಹ ಅಂಶಗಳ ಕಾರ್ಯವನ್ನು ನಿಭಾಯಿಸುವಂತಹ ಅವಧಿಯಲ್ಲಿ ಬಹುಸಂಖ್ಯಾತವಾಗಿ ಸ್ತ್ರೀದೇವತೆಗಳು ಪ್ರಧಾನ ವಾಗಿರುವುದು ಸಹ ಕಂಡುಬರುತ್ತದೆ. ಸ್ತ್ರೀದೇವತೆಗಳನ್ನು ಶಕ್ತಿ ಸ್ವರೂಪದಲ್ಲಿ ಕಂಡುಕೊಳ್ಳಲಿಕ್ಕೆ ಪ್ರಮುಖವಾಗಿ ಭೂಮಿಗಿರುವಂತಹ ಉತ್ಪಾದನೆ ಕ್ರಿಯೆಯು ಸ್ತ್ರೀಗೆ ಇರುವುದರಿಂದ ಸ್ತ್ರೀ ದೇವತೆಗಳು ಅಧಿಕ ಪ್ರಮಾಣದಲ್ಲಿ ಪೂಜೆಗೆ ಒಳಪಟ್ಟಿದ್ದವು. ಇದರಿಂದ ಅರಣ್ಯವಾಸಿಗಳಲ್ಲಿ ಮಹಿಳೆಯರಿಗೆ ಪ್ರಮುಖ ಸ್ಥಾನ ದೊರಕಿತ್ತು. ಮುಂದುವರೆದು ಧಾರ್ಮಿಕ ವಿಧಿ-ವಿಧಾನಗಳಾದ ಪೂಜೆ, ಪುನಸ್ಕಾರ ಕಾರ್ಯಕ್ರಮಗಳನ್ನು ಸಹ ಸ್ತ್ರೀಯರೇ ನಿರ್ವಹಿಸುತ್ತಿದ್ದರು. ಆದ್ದರಿಂದ ಸ್ತ್ರೀ ಪುರೋಹಿತರು ಸಹ ಮಹತ್ವ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮದುವೆಯಾದ ನಂತರವೂ ಮಹಿಳೆಯ ಸ್ಥಾನಮಾನ ಹಾಗೂ ವಾಸಸ್ಥಾನ ಬದಲಾವಣೆಗೆ ಬುಡಕಟ್ಟು ಸಮಾಜದಲ್ಲಿ ಅವಕಾಶವಿರಲಿಲ್ಲ. ಏಕೆಂದರೆ ಕುಟುಂಬದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ಸ್ತ್ರೀಯರದಾಗಿತ್ತು. ಆದರಿಂದ ಮದುವೆಯಾದ ನಂತರದಲ್ಲಿ ಪುರುಷನೇ ಪತ್ನಿಯ ಮನೆಗೆ ಬರುವುದು ರೂಢಿಯಲ್ಲಿತ್ತು. ಇದರಿಂದ ಇವರ ಸಮಾಜದಲ್ಲಿ ಪುರುಷನ ಪ್ರಭುತ್ವ ಪ್ರಧಾನ್ಯತೆ ಅಷ್ಟೊಂದು ಕಂಡುಬರುವುದಿಲ್ಲ. ಪ್ರಮುಖವಾಗಿ ಮಹಿಳೆಯ ಮುಖಂಡತ್ವ ಮಹತ್ವದ ರೀತಿಯಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭದ ಸಮಾಜದಲ್ಲಿ ಪುರುಷ ಕೇವಲ ದುಡಿಮೆಗಾರನಾಗಿ ಕುಟುಂಬಕ್ಕೆ ಬೇಕಾದ ಪರಿಕರಗಳನ್ನು ಉತ್ಪಾದಿಸುವುದು ಹಾಗೂ ಸಂಗ್ರಹಿಸುವುದು ಸಂಗ್ರಹಿಸಿದಂತಹ ವಸ್ತುಗಳನ್ನು ತಂದು ಒಪ್ಪಿಸುವ ಶ್ರಮವನ್ನು ಮಾತ್ರ ನಿರ್ವಹಿಸುತ್ತಿದ್ದರಿಂದ ಪುರುಷ ಅಧಿಕಾರ, ಅಂತಸ್ತು, ಹೊಣೆಗಾರಿಕೆಗಳ ಕರ್ತವ್ಯವಿರದೆ, ಸಕಲ ಕುಟುಂಬದ ಹೊಣೆಗಾರಿಕೆಗಳಾದ ಮುಖಂಡತ್ವ, ಉತ್ತರಾಧಿಕಾರತ್ವ, ಧಾರ್ಮಿಕ ಆಚರಣೆಗಳ ಉಪಕ್ರಮಗಳು, ಸಂಪತ್ತಿನ ಸಂಗ್ರಹದ ನೋಡಿಕೊಳ್ಳುವಿಕೆ

ಕುಟುಂಬ ನಿರ್ವಹಣೆಗೆ ಬೇಕಾದ ನೀತಿ-ನಿಯಮಗಳು, ರೂಢಿ-ನಿಯಮಗಳನ್ನು ರೂಪಿಸಿ ಕಾರ್ಯ ರೂಪದಲ್ಲಿ ಚಲಾವಣೆಗೊಳಿಸುವುದು ಸ್ತ್ರೀಯರ ಪ್ರಮುಖ ಕರ್ತವ್ಯವಾಗಿತ್ತು. ಆದರಿಂದ ಆದಿಮ ಸಮಾಜದ ಆದಿವಾಸಿಗಳಲ್ಲಿ ಸ್ತ್ರೀಯರಿಗೆ ಉತ್ತಮವಾದ ಪ್ರತಿಫಲಗಳು ಅವಕಾಶಗಳಿದ್ದು ಅವು ಪ್ರಮುಖವಾಗಿ ಕುಟುಂಬಕ್ಕೆ ಸೀಮಿತವಾಗಿರುವುದು ಹಲವಾರು ಆಧಾರಾಂಶಗಳಿಂದ ತಿಳಿದುಬರುತ್ತದೆ.

ಬುಡಕಟ್ಟು ಸಮುದಾಯದಲ್ಲಿ ಮಹಿಳೆಯನ್ನು ಪುರುಷನ ಸರಿ ಸಮಾನವಾದ ರೀತಿಯಲ್ಲಿ ಪರಿಕಲ್ಪಿಸುವುದು ಕಂಡುಬರುತ್ತದೆ. ಇವರ ದಿನನಿತ್ಯದ ಚಟುವಟಿಗಳಾದ ಅರಣ್ಯದಲ್ಲಿ ಬೇಟೆ ವೃತ್ತಿ ಯೊಂದನ್ನು ಹೊರತುಪಡಿಸಿದರೆ, ಉಳಿದ ಕಾರ್ಯಗಳಾದ ಕೃಷಿ, ತೋಟಗಾರಿಕೆ, ಸಾಂಸ್ಕೃತಿಕ ಚಟುವಟಿಕೆಗಳು, ಧಾರ್ಮಿಕ ಕಾರ್ಯಗಳು, ಸಂಗಾತಿ ಆಯ್ಕೆ, ಮನೋಭಿಲಾಷೆ ವ್ಯಕ್ತಪಡಿಸಲು, ಜಾನಪದ ಹಾಡುಗಳನ್ನು ಹಾಡಲು, ಗೃಹ ಕೆಲಸಗಳೊಂದಿಗೆ ಇತರ ಕರ್ತವ್ಯ ನಿರ್ವಹಿಸಿ, ಪುರುಷನ ಸರಿಸಮನಾದ ಅವಕಾಶಗಳನ್ನು ಪಡೆಯುವಲ್ಲಿ ಅಲ್ಪಮಟ್ಟಿನ ಯಸಸ್ಸಿ ಪಡೆದಿರುವಳು.

ವೈದಿಕ ಧರ್ಮದ ಪರಿಪಾಲನೆಯನ್ನು ಅನುಸರಿಸುವಂತಹ ಸಮುದಾಯದ ಮಹಿಳೆಗೆ ಇರುವಂತಹ ನೀತಿ ನಿರ್ಬಂಧನೆಗಳಷ್ಟು ಬುಡಕಟ್ಟು ಸಮುದಾಯದ ಸ್ತ್ರೀಯರಿಗೆ ನಿರ್ಬಂಧನೆಗಳು ಇರಲಿಲ್ಲ ಎಂದು ಹೇಳಬಹುದು. ಆಧುನೀಕರಣದ ಪ್ರಭಾವದ ಅಲೆ ಭಾರತದ ಅರಣ್ಯವಾಸಿ ಜನ ಸಮುದಾಯದ ಮೇಲೆಂದು ಕಣ್ಣು ಬಿತ್ತೋ ಅಂದಿನಿಂದ ವಿಶ್ವದ ಹಲವು ಧರ್ಮಗಳ ಪ್ರವರ್ತಕರು ಇವರ ಮನಃವೊಲಿಸಲು ನಡೆಸಿದ ಪ್ರಯತ್ನಗಳು ಕಾಲಾಂತರದಲ್ಲಿ ಪ್ರಭಾವ ಬೀರತೊಡಗಿದವು. ಅದರಲ್ಲಿ ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವ ಬೀರಿ ಆ ಧರ್ಮದ ವಿಚಾರಗಳು, ನಡೆನುಡಿಗಳು ಈ ಸಮುದಾಯಗಳ ಮೇಲೆ ಹೇರಲ್ಪಡತೊಡಗಿದವು.

ಈ ಕಾರಣದಿಂದ ಹಲವಾರು ಬುಡಕಟ್ಟು ಸಮುದಾಯಗಳು ಆ ಧರ್ಮದ ಸವಲತ್ತುಗಳನ್ನು ತಮ್ಮದಾಗಿಸಿಕೊಂಡು, ಧರ್ಮದ ನೆಲೆಯಲ್ಲಿ ಸಮ್ಮಿಲನಗೊಂಡು, ಅದರ ಆಚಾರ-ವಿಚಾರಗಳು, ಜೀವನ ವಿಧಾನವನ್ನು ವರ್ತಮಾನದಲ್ಲಿ ಅನುಸರಿಸತೊಡಗಿದವು. ಇದರಂತೆ "ಇಸ್ಲಾಂ ಧರ್ಮವು ಕೂಡ ತಮ್ಮ ಆಡಳಿತದ ಸಂದರ್ಭದಲ್ಲಿ ಅರಣ್ಯ ಪ್ರದೇಶದ ಆದಿವಾಸಿ ಸಮುದಾಯಗಳನ್ನು ಮತಾಂತರಗೊಳಿಸಲು ಪ್ರಯತ್ನಿಸಿ, ಅಲ್ಪಮಟ್ಟಿನ ಯಶಸ್ಸಿ ಪಡೆದಿದೆ. ಅದರಲ್ಲಿ ಪ್ರಮುಖವಾಗಿ ಕರ್ನಾಟಕದ ವಾಲ್ಮೀಕಿ ಬುಡಕಟ್ಟು ಸಮುದಾಯ. ಇದಕ್ಕೆ ಉದಾಹರಣೆ ಎಂದರೆ ಮ್ಯಾಸಬೇಡರಲ್ಲಿ ಮುಸ್ಲಿಂ ಧರ್ಮ ಅನುಸರಿಸುವ ಧಾರ್ಮಿಕ ವಿಧಾನಗಳಲ್ಲಿ ಒಂದಾದ ಮುಂಜಿ, ಮೊಹರಂ, ಇತರೆ ಆಚರಣೆಗಳು ಇವರಲ್ಲಿ ಪ್ರಭಾವ ಬೀರಿ ನಾಮಾಂಕಿತಗಳನ್ನು ಧರಿಸುವಷ್ಟರಮಟ್ಟಿಗೆ ತಲುಪಿದೆ."[9] ಇಂತಹ ಹಲವಾರು ಧರ್ಮಗಳು ಈ ಬುಡಕಟ್ಟು ಸಮುದಾಯದ ಮೇಲೆ ಪ್ರಭಾವ ಬೀರಿದ ನಂತರದಲ್ಲಿ ಇವರಲ್ಲಿ ಇರುವಂತಹ ಮಹಿಳೆಯರ ಕುರಿತು ಸರಳವಾದಂತಹ ಪರಿಕಲ್ಪನೆಗಳು, ಅಂದರೆ ಜಂಗಮ ಸ್ಥಿತಿಯಿಂದ ಸ್ಥಾವರ ಹಂತಕ್ಕೆ ಬಂದು ತಲುಪಿತು. ಅಂದಿನಿಂದ ಬುಡಕಟ್ಟು

ಸಮುದಾಯದಲ್ಲಿ ಸಹ ಪುರುಷ ಪ್ರಧಾನ್ಯತೆಯ ಕರಿನೆರಳು ಸ್ಪಷ್ಟವಾಗಿ ಹರಡುವ ಪ್ರಥಮ ಹೆಜ್ಜೆ ಪ್ರಾರಂಭವಾಯಿತು. ತದನಂತರದಲ್ಲಿ ಭಾರತವು ಪ್ರಮುಖವಾಗಿ ಹಿಂದೂ ರಾಷ್ಟ್ರ! ಇದರ ಪ್ರವರ್ತಕರಾದ ಶ್ರೀ ಶಂಕರಚಾರ್ಯರು ಹಾಗೂ ಇತರ ವೈದ್ದಿಕ ನೀತಿ ನಿಯಮ, ಪಾಲನೆ, ಪೋಷಣೆಗಳಿಂದಾಗಿ ಮಹಿಳೆ ಯರು ಇಲ್ಲಿ ಇರಬೇಕು. ಇಂತಹ ಅವಕಾಶಗಳು ಬೇಡ ಕೆಲವು ಕರ್ತವ್ಯಗಳು ಅವಳಿಂದ ನಿಭಾಯಿ ಸಲು ಅಸಾಧ್ಯ. ಅವಳು ಏನಿದ್ದರೂ ಪುರುಷನ ಅಧೀನದಲ್ಲಿ ಇರಬೇಕು ಎಂಬ ನಿರ್ಬಂಧನೆಗಳಿಗೆ ಒಳಪಡಿಸಿ ಬುಡಕಟ್ಟು ಜೀವನದ ಸ್ವಾತಂತ್ರ್ಯ, ಸಮಾನತೆ, ಸಹಭಾಗಿತ್ವ, ಇತರೆ ವಿಚಾರಗಳಿಗೆ ತಿಲಾಂಜಲಿಯಿತ್ತರು. ಮತ್ತು ಮಹಿಳೆಯರ ಚಲನವಲನೆಗಳಿಗೆ ಲಕ್ಷ್ಮಣರೇಖೆ ಗುರುತಿಸಿದರು. ಇದರಿಂದ ಬುಡಕಟ್ಟು ಮಹಿಳೆಯ ಸ್ವಚ್ಛಂದವಾದಂತಹ ಸ್ವಾತಂತ್ರ್ಯದ ಜೀವನವು ಸೀಮಿತಗೊಂಡು ಹಲವು ಅನಿಷ್ಟ ಆಚರಣೆ, ಪದ್ಧತಿ, ರೂಢಿ ಸಂಪ್ರದಾಯಗಳು ಹೇರಲ್ಪಟ್ಟವು.

ಭಾರತೀಯ ಧಾರ್ಮಿಕ ಜೀವನ, ವಿಧಿ-ವಿಧಾನಗಳ ತತ್ವಜ್ಞಾನಿಯೆಂದು ಪ್ರಸಿದ್ಧಿ ಪಡೆದ ಮನು ಖಂಡಿತ ಸಮಾಜಮುಖಿ ಅಲ್ಲ. ಸಮಾನ ತತ್ವದ ಜ್ಞಾನಿಯಲ್ಲ. ಪುರುಷರನ್ನು ಪ್ರಧಾನತೆ, ಸ್ತ್ರೀಯರನ್ನು ಅಧೀನತೆ ನಿಲುವಿನಲ್ಲಿ ಪ್ರತಿಪಾದಿಸಿ "ಸ್ತ್ರೀ ಬಾಲ್ಯದಲ್ಲಿ ತಂದೆ ತಾಯಿ, ಯೌವ್ವನದಲ್ಲಿ ಪತಿಯ, ವೃದ್ಧಾಪ್ಯದಲ್ಲಿ ಮಗನ ಆಧೀನದಲ್ಲಿ"[8] ಇರಬೇಕು ಎಂದು ಇಡೀ ಮಹಿಳೆಯ ಜೀವನಕ್ಕೆ ಸ್ವಾತಂತ್ರ್ಯವಿರದಂತೆ ದ್ವಿತೀಯ ದರ್ಜೆಯ ಪ್ರಜೆಯಾಗಿ ಮಾಡುವಲ್ಲಿ ಕೃತ್ರಿಮಾ ಬುದ್ಧಿ ಉಪಯೋಗಿಸಿ ದ್ದಾನೆ. ಆದರೆ ಅವನು ಜಗತ್ತಿಗೆ ಬರಬೇಕಾದರೆ ಮಹಿಳೆ ಕಾರಣ ಎಂಬ ವಿಚಾರವಂತಿಕೆ ಅವನಲ್ಲಿ ಇರಲಿಕ್ಕಿಲ್ಲ. ಇಂತಹವನು ರೂಪಿಸಿದಂತಹ ವಿಧಿ-ವಿಧಾನಗಳು, ಆಚಾರ-ವಿಚಾರ, ನೀತಿ - ನಿಬಂರ್ಧಗಳು, ಲೋಕ ರೂಢಿಗಳು, ಸಂಪ್ರದಾಯಗಳನ್ನು, ವಿರೋಧಿಸದೆ ಮಹಿಳೆಯರು ಮಾತ್ರ ಪಾಲಿಸುವುದು ಯಾವ ನ್ಯಾಯ. ಒಂದು ವೇಳೆ ಪುರುಷ ಸಮಾಜಬಾಹಿರ, ಕುಟಂಬದ ನೀತಿ ಉಲ್ಲಂಘನೆ ಮಾಡಿದರೆ ಅವನು ಎಷ್ಟಾದರೂ ಪುರುಷ! ಎಂದು ಸಾಮಾನ್ಯವಾಗಿ ಪ್ರತಿಕ್ರಿಯಿಸುವ ಈ ಸಮಾಜ ಅದೇ ಮಹಿಳೆ ಇಂತಹ ಕೃತ್ಯ ಮಾಡಿದರೆ ವ್ಯಭಿಚಾರಿಣಿಯಂದು ಪರಿಗಣಿಸುವುದು ಇದೇ ಸಮಾಜ.

ಒಂದು ವೇಳೆ ಮನು ಎಂಬ ಮನುಷ್ಯ ಪ್ರಾಣಿ, ಇಂದಿನ ಸಂದರ್ಭದಲ್ಲಿ ಮಹಿಳಾ ಹೋರಾಟಗಾರರಿಗೆ, ಚಳುವಳಿಗಾರರಿಗೆ ವೈಚಾರಿಕ ಪ್ರಜ್ಞೆಯುಳ್ಳವರಿಗೆ ಮುಖಾಮುಖಿಯಾಗುವಂತಿದ್ದರೆ ಖಂಡಿತವಾಗಿ ಅಷ್ಟೊಂದು ಸರಳವಾದ ರೀತಿಯಲ್ಲಿ ಬಿಡುತ್ತಿರಲಿಲ್ಲ. ಆದರೂ ಪರವಾಗಿಲ್ಲ ಅಲ್ಪಮಟ್ಟಿನ ಯಶಸ್ವಿಯಾಗುವಲ್ಲಿ ಫಲಿತಾಂಶಗಳು ಹಲವು ದಶಕಗಳಿಂದ ಕಣ್ಮುಂದೆ ಗೋಚರಿಸು ತ್ತಿರುವುದು ಸಂತೋಷದ ಸಂಗತಿ. ಆದರೆ ಇಂದು ನಡೆಯುತ್ತಿರುವ ಚಳವಳಿ, ಹೋರಾಟಗಳು, ದಿಗ್ಬಂಧನಗಳು, ಸತ್ಯಾಗ್ರಹ ಇತರೆ ಪ್ರತಿರೋಧಗಳನ್ನು ಬಹುಸೂಕ್ಷ್ಮವಾಗಿ ಅವಲೋಕಿಸಿದರೆ, ಯಾವ ವರ್ಗದ ಮಹಿಳೆಯರು ಇದರಲ್ಲಿ ತೊಡಗಿಕೊಂಡು ತಮ್ಮ ಜೀವನ ಮಟ್ಟದ ಅಭಿಲಾಷೆಯನ್ನು ಪೂರೈಸಿಕೊಳ್ಳುತ್ತಿದ್ದಾರೆಂದು ತಿಳಿದುಬರುತ್ತದೆ. ಅಂದರೆ ಇಂದಿಗೂ ಅಭಿವೃದ್ಧಿಯಾಗಿರುವಂತಹ

ಸ್ತ್ರೀಯರು ಎಂದರೆ ಅದು ಮೇಲ್ವರ್ಗದ ಮಹಿಳೆಯರು ಶಿಕ್ಷಿತ ಮಹಿಳೆಯರು, ಉನ್ನತ ಮನೆತನದಿಂದ ಬಂದಂತಹ ಸ್ತ್ರೀಯರು ಮಾತ್ರ ಅವಕಾಶಗಳನ್ನು ಈಡೇರಿಸಿಕೊಂಡಿದ್ದಾರೆ. ವಿನಹಃ ಅದೇ ತಳಸಮುದಾಯುವಾದ ಬುಡಕಟ್ಟುಗಳು ಅರೆ ಅಲೆಮಾರಿ ಸಮುದಾಯಗಳು, ದಲಿತ ಸಮುದಾಯಗಳು ಇಂತಹ ವಿಷಯಗಳಿಂದ ಬಹುದೂರ ಮರೆಮಾಚಿ ಹೋಗಿದ್ದಾರೆ. ಅದಕ್ಕೆ ಕಾರಣ ಇವತ್ತಿನವರೆಗೂ ಸಾಕ್ಷರತೆಯನ್ನು ಸಂಪೂರ್ಣವಾಗಿ ಸಾಧಿಸಿಲ್ಲ.

ಇಂತಹ ಸಮುದಾಯದಲ್ಲಿ ಪ್ರಮುಖವಾಗಿ ಅನಕ್ಷರತೆ ತಾಂಡವಾಡುತ್ತಿರುವುದರಿಂದ ಜೊತೆಗೆ ಸಂಪ್ರದಾಯ, ರೂಢಿ, ಪದ್ಧತಿಗಳು, ಮನೆ ಮಾತಾಗಿರುವಂತಹ ಸಂದರ್ಭದಲ್ಲಿ ಸ್ತ್ರೀಯರ ಸ್ಥಾನಮಾನಗಳು ಕುಟುಂಬದ ನೀತಿ ನಿಯಮಗಳಿಂದ ಬಂಧಿಸಲ್ಪಟ್ಟಿವೆ. ಇವರಿಗೆ ಪ್ರತಿರೋಧಿಸಲು ಧ್ವನಿಯೂ ಇಲ್ಲದಂತಾಗಿ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಂಕಷ್ಟದ ಜೀವನ ನಿರ್ವಹಿಸುತ್ತಿದ್ದಾರೆ. ಈ ಎಲ್ಲಾ ಮೂಲ ಕಾರಣಗಳಿಗೆ ಪ್ರೇರಣೆ ಹಿರಿಯರಿಂದ ರೂಢಿಯಲ್ಲಿ ಬಂದಂತಹ ಸಂಪ್ರದಾಯವೇ ಕಾರಣ. ಇಂತಹವುಗಳ ಪ್ರಭಾವದಿಂದ ಶಿಕ್ಷಣವು ಲಭಿಸದಂತಹ ಪರಿಸ್ಥಿತಿ ಉಂಟಾಗಿದೆ. ಜೊತೆಗೆ ಬೌದ್ಧಿಕತೆ, ವೈಚಾರಿಕತೆ, ಸಾರ್ವತ್ರಿಕ ಪರಿಸರದಲ್ಲಿ ಭಾಗವಹಿಸಲಿಕ್ಕೆ ಅಡೆತಡೆಗಳು, ಲಿಂಗತಾರತಮ್ಯತೆ, ವ್ಯಭಿಚಾರ, ಪುರುಷ ಪ್ರಧಾನ್ಯತೆ ಜೊತೆಗೆ ಸರಕಾರದ ದೋಷಪೂರಿತ ಕಾಯ್ದೆ ಕಾನೂನುಗಳು ಸಹ ಉಳ್ಳವರ ಪರವಾಗಿ ಕಾರ್ಯನಿರ್ವಹಿಸಿದ್ದರಿಂದ ಗ್ರಾಮೀಣ ಪ್ರದೇಶದ ಅದರಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರ ಪರಿಸ್ಥಿತಿ ಅತ್ಯಂತ ದುರ್ಗಮವಾದ ಸ್ಥಿತಿಯಲ್ಲಿ ಜೀವಿಸುತ್ತಿರುವುದು ಕಂಡುಬರುತ್ತದೆ.

ಯಾವ ಸಂದರ್ಭದಲ್ಲಿ ಹೆಣ್ಣಿನ ಸ್ಥಾನಮಾನಗಳು ಸಂಪೂರ್ಣವಾಗಿ ಪುರುಷ ಪ್ರಧಾನ್ಯತೆಗೆ ಒಳಪಟ್ಟವೋ ಅಂದಿನಿಂದ ಅವಳ ಅಧೀನತೆಯ ಇತಿಹಾಸ ಪ್ರಾರಂಭವಾಯಿತು. ಅಂದರೆ ಸ್ತ್ರೀಯನ್ನು ಶಿಕ್ಷಣ ಕ್ಷೇತ್ರದಿಂದ ಹೊರಗಿಟ್ಟುದುದು ಅವಳನ್ನು ಪುರುಷಾಧೀನವಾಗಿಸುವ ಕಾರ್ಯತಂತ್ರವೇ ಆಗಿತ್ತು. ಈ ನಿಜವನ್ನು ತಿಳಿದುಕೊಳ್ಳಬೇಕಾದರೆ ಮಹಿಳಾ ಶಿಕ್ಷಣದ ಪ್ರಶ್ನೆಯನ್ನು ಇಂದಿನ ಸಂದರ್ಭದಲ್ಲಿ ಇಟ್ಟು ನೋಡಬೇಕಾದದ್ದು ತುಂಬಾ ಅವಶ್ಯಕತೆಯಿದೆ. ಅದರಲ್ಲಿ ಭಾರತದಂತಹ ಸಂಕೀರ್ಣ ಸಮಾಜದಲ್ಲಿ ಬಹುಸಂಖ್ಯಾತವಾಗಿ ಗ್ರಾಮೀಣ ಕಾಡು ಪ್ರದೇಶಗಳಲ್ಲಿ ಬದುಕು ನಿರ್ವ ಹಿಸುತ್ತಿರುವಂತಹ ಸಮುದಾಯಗಳನ್ನು ಪರಿಗಣನೆಗೆ ತೆಗೆದುಕೊಂಡು ನೋಡಿದರೆ, ಅಲ್ಲಿನ ಸ್ತ್ರೀಯರಿಗೆ ಭಾರತ ಸರ್ಕಾರ, ಸಂವಿಧಾನ, ಸಂಘ-ಸಂಸ್ಥೆಗಳು, ಹಕ್ಕು-ಕರ್ತವ್ಯಗಳು, ಸವಲತ್ತುಗಳು, ನೀತಿ ನಿಯಮಗಳು, ರಕ್ಷಣೆ, ವಿಧಿ ನಿಯಮಗಳು, ಆಸ್ತಿಹಕ್ಕು ಕಾಯ್ದೆ, ಲಿಂಗತಾರತಮ್ಯದ ನಿರ್ಬಂಧದಂತಹ ನಿಯಮಗಳು ಕುರಿತು ಇನ್ನು ಹಲವಾರು ವಿಚಾರಗಳ ಬಗ್ಗೆ ಎಳ್ಳಷ್ಟು ಸಹ ಪರಿಜ್ಞಾನವಿಲ್ಲದೆ ಬಾವಿಕಪ್ಪೆಯಂತೆ ಇದ್ದು ತಮ್ಮ ಸೀಮಿತ ಜಗತ್ತಿನಲ್ಲಿ ಹೇರಲ್ಪಟ್ಟಂತಹ ಕರ್ತವ್ಯಗಳು, ಸಂಪ್ರದಾಯಗಳು, ರೂಢಿ ನಿಯಮಗಳು ಪ್ರಮಾಣಿಕತೆಯಿಂದ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಗೃಹ

ಚಟುವಟಿಕೆಗಳ ಜೊತೆಗೆ ಕೃಷಿ ಹಾಗೂ ಕೃಷಿ ಕೂಲಿಯಂತಹ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಜೀವಿಸುತ್ತಿರುವುದು ಕಂಡುಬರುತ್ತದೆ. ಇದಕ್ಕೆಲ್ಲ ಪ್ರಮುಖ ಸೂತ್ರಧಾರರೆಂದರೆ ಪುರುಷ ಪ್ರಾಧಾನ್ಯತೆಯ ತಂತ್ರಗಳು ಮುಖ್ಯವಾಗಿ ಇವರ ಮೇಲೆ ಪ್ರಭಾವ ಬೀರುತ್ತವೆ. ಇಂತಹವರ ಸಮಸ್ಯೆಗಳನ್ನು ಸರಿಪಡಿಸಬೇಕಾದರೆ ಯಾರು ಪ್ರಯತ್ನಿಸಬೇಕು? ಕೇವಲ ಅವರನ್ನು ಇವತ್ತಿನ ದಿನಮಾನಗಳಲ್ಲಿ ಆಕರಗಳಾಗಿ ಮಾತ್ರ ನೋಡಲಾಗುತ್ತಿದೆ ಹೊರತು ಅವರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳು ಕಲ್ಯಾಣವಾಗುವಂತಹ ಉದ್ದೇಶಗಳು ಯಾರಲ್ಲಿ ಸಹ ಕಂಡುಬರುತ್ತಿಲ್ಲ. ಇದರಿಂದ ಬುಡಕಟ್ಟು ಸಮಾಜದಲ್ಲಿನ ಸ್ತ್ರೀಯರ ಬದುಕು ಆಸರೆಯಿಲ್ಲದಂತಾಗಿ ಜೀವನದಲ್ಲಿ ಬೇಸರಗೊಂಡು ತಮ್ಮ ಪ್ರತಿರೋಧವನ್ನು ಪ್ರಕಟಿಸದೆ ಮೌನವಾಗಿ ಜೀವನ ನಿರ್ವಹಿಸುತ್ತಿದ್ದಾರೆ.

ಹಿಂದೆ ಇರುವಂತಹ ಬುಡಕಟ್ಟು ಪರಿಸರ ಜೀವನವು ಸಂಪೂರ್ಣ ಬದಲಾಗಿ ಹಲವು ಧರ್ಮಗಳ ಆಚಾರ ವಿಚಾರಗಳ ಪ್ರಭಾವಗಳಿಂದ ಇಂದು ಆದಿವಾಸಿ ಸಮಾಜದಲ್ಲಿ ಸಹ ಮಹಿಳೆಯರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅಂದಿನ ಸಂದರ್ಭದಲ್ಲಿ ಮಗುವಿನ ಪ್ರತಿನಿಧಿಸುವಿಕೆ, ಮರು ಉತ್ಪಾದಕಿ ಹಾಗೂ ಯಜಮಾನ, ಇತರ ಸ್ಥಾನಮಾನಗಳು ಇಲ್ಲವಾಗಿ ಕೇವಲ ದ್ವಿತೀಯ ದರ್ಜೆಯ ಪ್ರಜೆಯಾಗಿ ಪ್ರಸ್ತುತ ಸಾಮಾಜಿಕ ರಚನೆಯಲ್ಲಿ ಹೆಣ್ಣನ್ನು ಹುಟ್ಟಲು ಬಿಡದ ಲಿಂಗವ್ಯವಸ್ಥೆಯ ಕೌರ್ಯ, ಹುಟ್ಟಿದ ಹೆಣ್ಣನ್ನು ಬದುಕಲು ಬಿಟ್ಟಿಲ್ಲ. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಶ್ರೇಣೀಕರಣ ಜೊತೆಗೆ ಮಾನವನ ಮೂಲಭೂತ ಅಗತ್ಯಗಳಾದ ಆಹಾರ, ಆರೋಗ್ಯ, ಬಟ್ಟೆ, ಶಿಕ್ಷಣ, ಅಂತಸ್ತು ಮತ್ತು ನಿರ್ಣಯದಂತಹ ವಿಷಯಗಳಲ್ಲಿ ನಿರ್ಬಂಧಯಿರಿಸಿದೆ. ಕುಟುಂಬದೊಳಗಿನ ಈ ಲಿಂಗೀಕರಣ ಪ್ರಕ್ರಿಯೆ ಹೇಗಿರುತ್ತದೆ ಎಂದರೆ ಹೆಣ್ಣು ಎಲ್ಲಿರಬೇಕು-ಎಲ್ಲಿರಬಾರದು, ಹೇಗಿರಬೇಕು-ಹೇಗಿರಬಾರದು, ಯಾರೊಡನೆ ಮಾತಾಡಬೇಕು-ಮಾತಾಡಬಾರದು ಯಾವ ಕೆಲಸ ಮಾಡಬೇಕು-ಮಾಡಬಾರದು, ಯಾವ ಬಟ್ಟೆ ತೊಡಬೇಕು-ತೊಡಬಾರದು ಎನ್ನುವಲಿಂದ ಹಿಡಿದು ಯಾವ ಮಗುವನ್ನು ಹೇರಬೇಕು-ಹೇರಬಾರದು ಎಷ್ಟು ಮಕ್ಕಳನ್ನು ಹೇರಬೇಕು-ಹೇರಬಾರದು ಎನ್ನುವ ಆಯ್ಕೆ ರಹಿತ ಸ್ಥಿತಿಗೆ ಮಹಿಳೆಯನ್ನು ತಳ್ಳಿದೆ.

ಇಂದು ಕುಟಂಬದಲ್ಲಿ ಹೆಣ್ಣಾಗಲು ಆಕೆಗೆ ತರಬೇತಿ ನೀಡಲಾಗುತ್ತದೆ ಹೊರತು ಅವಳಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುವ ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಯುತ್ತಿಲ್ಲ ಮತ್ತು ಬದುಕು ಹಾಗೂ ಹಕ್ಕುಗಳ ಬಗೆಗೆ ಪೂರ್ಣಕುರುಡಾಗಿರುವ ಹೆಣ್ಣು ಪ್ರಶ್ನಿಸುವ ಪ್ರಜ್ಞೆ ಹಾಗೂ ಪ್ರತಿಭಟಿಸುವ ಧೈರ್ಯ ಎರಡನ್ನು ಇಂದು ಕಳೆದುಕೊಂಡಿದ್ದಾಳೆ. ಹೆಣ್ಣಿನ ಹುಟ್ಟು-ಬದುಕು, ದೇಹ-ಮನಸ್ಸು ಎಲ್ಲವೂ ಗಂಡಿಗಾಗಿ ಎನ್ನುವ ಆದರ್ಶದ ನೆಲೆಯ ಪ್ರವೃತ್ತಿಗಳೇ ಗಂಡಿನ ದೌರ್ಜನ್ಯವನ್ನು ಹೆಣ್ಣಿನ ದಮನವನ್ನು ನಿರಾತಂಕವಾಗಿಸಿದುದು ದುರಂತದ ಸಂಗತಿ. ಈ

ಪ್ರಕಾರವಾಗಿ ಆದಿವಾಸಿ ಸಮುದಾಯದಲ್ಲಿ ಸಹ ಮಹಿಳೆಯ ಬದುಕು ಅವಳ ಕುರಿತ ಪರಿಕಲ್ಪನೆಯು ಸಂಪೂರ್ಣ ಬದಲಾಗಿದೆ. ಸ್ವಚ್ಛಂದ ಜೀವನಕ್ಕೆ ತೆರೆಬಿದ್ದಿದೆ ಹಾಗೂ ಸರಳವಾದ ಜೀವನಕ್ಕೆ ಸಂಕೋಲೆಗಳ ಹಿಡಿತದಿಂದ ಬದುಕು ಬರ್ಬರವಾಗಿ ತನ್ನೆಲ್ಲ ಅವಕಾಶಗಳನ್ನು ಕಳೆದುಕೊಂಡು ಪುರುಷನಿಗಾಗಿ ತ್ಯಾಗ ಮಾಡಿದ್ದಾಳೆ. ಹೊರತು ತನ್ನದಾಗಿಸಿಕೊಳ್ಳುವಲ್ಲಿ ಮೌನ ವಹಿಸಿರುವುದು ಮಾನವ ಕುಲಕ್ಕೆ ತುಂಬಲಾರದ ನಷ್ಟ ಎಂದು ಹೇಳಬಹುದು.

೩.೨. ಬೇಡ ಸಮುದಾಯದ ಸ್ಥೂಲ ಪರಿಚಯ

ಭಾರತವು ವಿಭಿನ್ನ ಸಂಸ್ಕೃತಿಗಳ ನಾಡು ಇದು. ಹಲವು ಬುಡಕಟ್ಟುಗಳ ತವರುಮನೆ. ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜಾತಿ-ಉಪಜಾತಿಗಳು ಇವೆ. ಅವುಗಳಲ್ಲಿ ಸಮುದಾಯ ಜಾತಿ ಬುಡಕಟ್ಟು ಮುಂತಾದ ಹೆಸರುಗಳಿಂದ ಚದುರಿಹೋಗಿವೆ. ಪ್ರತಿಯೊಂದು ಜಾತಿ ಮತ್ತು ಬುಡಕಟ್ಟು ಅದರದ್ದೆ ಆದ ಜೀವನ ವಿಧಾನ, ಆಚಾರ, ವಿಚಾರ, ಸಂಪ್ರದಾಯ, ನಂಬಿಕೆ, ನಡಾವಳಿಕೆ, ಕುಲಾಚಾರಗಳನ್ನು ಒಳಗೊಂಡಿವೆ. ಈ ಎಲ್ಲಾ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವುದೇ ವೈಶಿಷ್ಟವಾಗಿವೆ. ಇಂತಹ ಸಮುದಾಯಗಳಲ್ಲಿ ಬೇಡ ಬುಡಕಟ್ಟು ಒಂದು.

ಕರ್ನಾಟಕದಲ್ಲಿ ಹಲವಾರು ಬುಡಕಟ್ಟುಗಳು ಬಹು ದೀರ್ಘಕಾಲದಿಂದಲೂ ವಾಸಿಸುತ್ತಿದ್ದಾರೆ. ಅದರಲ್ಲಿ ಇತರೆ ಆದಿವಾಸಿ ಬುಡಕಟ್ಟುಗಳು ನಾಗರೀಕತೆಯನ್ನು ಬೆಳೆಸಿಕೊಂಡು ಆಧುನಿಕ ಸ್ಥಿತಿಗೆ ಬಂದಿದ್ದಾರೆ. ಆದರೆ ಇಂದಿಗೂ ಬೇಡರು ಆದಿಮ ಸ್ಥಿತಿಯಲ್ಲೇ ಇದ್ದಾರೆ. ಇವರು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸವಾಗಿದ್ದಾರೆ. ಪ್ರಾದೇಶಿಕವಾಗಿ ಬೇರೆ ಬೇರೆ ನಾಮಾಂಕಿತದಿಂದ ನಮೋದಿಸಲ್ಪಟ್ಟಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ೨೯.೧೮.೬೪೯ ಜನಸಂಖ್ಯೆಯೂ ಕರ್ನಾಟಕದಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ "೧೯೯೩ರಲ್ಲಿ ಬೇಡ ಬುಡಕಟ್ಟಿನ ಪರ್ಯಾಯ ಪದಗಳಾದ ನಾಯಕ, ಬೇಡ, ಬೇಡರ್, ವಾಲ್ಮೀಕಿ ಇತರೆ ಪದಗಳು ಬುಡಕಟ್ಟು ಪಟ್ಟಿ (ಎಸ್.ಟಿ.)ಗೆ ಸೇರಿರುವುದರಿಂದ ೨೦೦೧ರ ಜನಗಣತಿಯಲ್ಲಿ ಈ ಬುಡಕಟ್ಟಿನ ಜನಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವ ಸಾಧ್ಯತೆಯಿದೆ".[೬] ಇಂದು ಕರ್ನಾಟಕದ ಬುಡಕಟ್ಟುಗಳಲ್ಲಿ ಜನಸಂಖ್ಯೆ ದೃಷ್ಟಿಯಿಂದ ಬೇಡರು ಮೊದಲನೆಯ ಸ್ಥಾನದಲ್ಲಿರುವುದು ವ್ಯಕ್ತವಾಗುತ್ತದೆ.

ನಾಯಕ ಸಮುದಾಯದಲ್ಲಿ ಅನೇಕರು ವೀರ ಸಾಹಸಿಗಳಾಗಿ ಬಾಳಿ ಬದುಕಿ ಪಾಳೆಯಗಾರರಾಗಿ ರಾಜರೆನಿಸಿಕೊಂಡು, ಗಂಡುಗಲಿಗಳಾಗಿ ತಮ್ಮ ಪ್ರಭುತ್ವ ಸಾಧಿಸಿ ರಾಜ್ಯ-ರಾಷ್ಟ್ರ ಪ್ರೇಮಕ್ಕೆ, ಸಾಹಸಕ್ಕೆ, ಧೈರ್ಯಕ್ಕೆ, ಶೌರ್ಯ, ಪರಾಕ್ರಮಗಳಿಗೆ ಹೆಸರಾಗಿ ಸಮಾಜ, ಸಮುದಾಯ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಪ್ರೋತ್ಸಾಹಕರಾಗಿ ಹೋಗಿದ್ದಾರೆ. ಇವರ ಮೂಲ ವೃತ್ತಿಯಾದ ಬೇಟೆಯನ್ನು ಅದನ್ನು ಬದುಕಿನ ಭಾಗವಾಸಿಕೊಂಡ ಈ ಸಮುದಾಯವು ಬೇಟೆಯಾಡಿ ತನ್ನ ಜೀವನವನ್ನು ಸಾಗಿಸುತ್ತಿತ್ತು. ಬೇಟೆಯಾಡುವುದರಿಂದಲೇ ಈ ಬುಡಕಟ್ಟು ಸಮುದಾಯವು ಬೇಡರೆಂದು ಕರೆಯಿಸಿಕೊಂಡಿತೆನ್ನಬಹುದು.

ಬೆಟ್ಟಗುಡ್ಡಗಳ ಮಧ್ಯೆ ತಮ್ಮ ವಾಸಸ್ಥಳ ಮಾಡಿಕೊಂಡ ಇವರು ಚರ್ಮದ ತೊಗಟೆಯಿಂದಲೇ ತಮ್ಮ ಉಡುಪನ್ನು ತಯಾರಿಸಿಕೊಳ್ಳುತ್ತಿದ್ದರು. ಇಂದು ಸಮಾಜವು ಪರಿವರ್ತನೆಯಾದರೂ ಇವರಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಯಾಗಿಲ್ಲ.

೧. ಬೇಡ ಪದದ ಅರ್ಥ

"ಬೇಡ ಅನ್ನುವ ಶಬ್ದವು "ವ್ಯಾದ" ಎಂಬ ಸಂಸ್ಕೃತ ಶಬ್ದದಿಂದ ಬಂದಿದೆ. ಇದರರ್ಥ ಬೇಟೆಯಾಡುವುದೆಂದು ಯಜುರ್ವೇದದಲ್ಲಿ ಪ್ರಸ್ತಾಪಿಸಲಾಗಿದೆ."[೪] ಬೇಡ ಎಂದರೆ "ಬೇಟೆಗಾರ" ಎಂದರ್ಥ ಇವರು ಬೇಟೆಯನ್ನು ಕಸುಬಾಗಿಯುಳ್ಳ "ಭಿಲ್ಲ" ಜಾತಿಗೆ ಹೊಂದಿಕೊಂಡವರು ಎಂದಾಗುತ್ತದೆ. ಮೂಲತಃ ಬೇಡರು ಅರಣ್ಯವಾಸಿಗಳು. ಇವರು ತಮ್ಮ ಜೀವನಕ್ಕಾಗಿ ಬೇಟೆಯಾಡಿ ಬದುಕುವುದೇ ಪ್ರಮುಖವಾಗಿ ರೂಢಿಯಾಗಿತ್ತು. ಇದರಿಂದ ಬೇಟೆ ಮತ್ತು ಬೇಡ ಎರಡು ಶಬ್ದಗಳು ಒಂದೆಂದು ತಿಳಿದು ಬರುತ್ತದೆ. ಈ ಕಾರಣದಿಂದ ಬೇಟೆ ವೃತ್ತಿಗನುಗುಣವಾಗಿ ಬೇಡ ಎಂಬ ಪದವು ರೂಢಿಗೆ ಬಂದಿದೆ. ಆಡುವ ಭಾಷೆ ರೂಢಿಯಲ್ಲಿ ಈ ಪದವು ಬೇಟೆ>ನಂತರ ಬೇಡ ಎಂದು ರೂಪಾಂತರಗೊಂಡಿದೆ. ಬೇಟೆ ಎಂಬ ಪದವೇ ಬೇಟ>ಬೇಡ ಎಂದು ಬದಲಾವಣೆ ಆಗಿರುವುದು. "ಬೇಡ ಎಂದರೆ A Tribe of Forest people Living by the Change ಎಂಬ ಅರ್ಥವಿದೆ. ಬೇಟೆಯ ಮೂಲಕವೇ ಗುರುತಿಸಿಕೊಂಡರವನ್ನು ಬೇಡರು ಎಂದು ಕರೆದರು"[೫]. ಇವರಂತೆ ಸಮಾಜದಲ್ಲಿ ವೃತ್ತಿಯ ಆಧಾರದ ಮೇಲೆ ಜಾತಿಯ ಹೆಸರನ್ನು ಸಂಭೋದಿಸುವುದು, ರೂಢಿಯಲ್ಲಿದೆ. ಉದಾಹರಣೆಗೆ, ಕುಂಬಾರ ವೃತ್ತಿ ಮಾಡುವವರಿಗೆ ಕುಂಬಾರರೆಂದು, ಕಂಬಾರಿಕೆ ಮಾಡುವವರಿಗೆ ಕಂಬಾರರೆಂದು ಹೀಗೆ ಇತರೆ ಸಮುದಾಯದವರೂ ಸಹ ಕಂಡು ಬರುತ್ತಾರೆ. ಅದರಂತೆ ಬೇಟೆ ವೃತ್ತಿಗನುಸಾರವಾಗಿ ಮುಂದುವರೆದು ಕೊಂಡು ಬಂದಮೇಗೆ "ಬೇಡರ್" ಎಂದು ಕರೆದಿರಬಹುದು. ಆದ್ದರಿಂದ ಬೇಟೆ ಬೇಡರ್ ಎಂದಾಗಿದೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಜಾತಿ ನಿರ್ಮಾಣದಲ್ಲಿ ತೊಡಗಿದ್ದ ಬ್ರಹ್ಮನು ಹಸಿ ಮಣ್ಣಿನಿಂದ ಹಲವು ಹೆಸರುಗಳ ಜಾತಿ ನಿರ್ಮಾಣಗಳನ್ನು ಮಾಡಿ ಊರಿನೊಳಗೆ ಎಸೆಯುತ್ತಿದ್ದ ಸೃಷ್ಟಿಸುವುದು ಸಾಕೆನಿಸಿ ತನ್ನ ಕೈಲಿದ್ದ ಮಣ್ಣನ್ನು ಬೇಡವೆಂದು ಬೇಲಿಯಾಚೆಗೆ ಎಸೆದನು. ಅದರಲ್ಲಿಯೇ ಒಂದು ಸಮೂಹ ಸೃಷ್ಟಿಯಾಗಿ ಊರಿನೊಳಗೆ ಪ್ರವೇಶಿಸಲು ಪ್ರಯತ್ನಿಸಿದರು. ನೀವ್ಯಾರು ಎಂದು ಪ್ರಶ್ನಿಸಿದ ಬ್ರಹ್ಮನಿಗೆ ನಾವು ಬೇಡರು ಎಂದು ಉತ್ತರಿಸಿದರಂತೆ. ನೀವು ಊರಿನೊಳಗೆ ಹೋಗುವುದು ಬೇಡವೆಂದು ತಡೆದಿದ್ದರಿಂದ ಕಾಡಿಗೆ ಹೋಗಿ ಬೇಟೆಯಾಡುತ್ತಾ ಬೇಡರಾದರು ಎಂದು ಹೇಳಲಾಗಿದೆ. ಬೇಡರೆಂದರೆ ಪೂರ್ವದಲ್ಲಿ ದಾರಿಯಲ್ಲಿ ಹೋಗುವವರನ್ನು ಹಿಡಿಸಿ ಅವರಿಂದ ವಸ್ತುಗಳನ್ನು ಕಸಿದುಕೊಳ್ಳುತ್ತಿದ್ದರಂತೆ. ಆದ್ದರಿಂದ ಊರೊಳಗೆ ಬೇಡರು ಬರುತ್ತಾರೆಂದರೆ ಅಯ್ಯೋ ಬೇಡರು ಬಂದರು ಇನ್ನೇನು ನಮ್ಮ ಸಾಮಾನುಗಳನ್ನು ಕಸಿದುಕೊಳ್ಳುತ್ತಾರೆಂದು

ಜನರೆಲ್ಲಾ ಹೆದರಿ ತಮ್ಮ ಮನೆಯನ್ನು ಪ್ರವೇಶಿಸಲು ತಡೆಯೊಡ್ಡುತ್ತಿದ್ದರಂತೆ ಇಂತಹ ಭಯವು ಹಿಂದೆಯಿತ್ತು ಇಂದು ಇಲ್ಲ.

ಇನ್ನೊಂದು ಮೂಲದ ಪ್ರಕಾರ "ಬೇಡ ಬುಡಕಟ್ಟಿನವರು ಕಣ್ವ ಋಷಿಯ ವಂಶಜರೆಂದು ನಂಬಿಕೆಯುಳ್ಳವರಾಗಿದ್ದಾರೆ. ಇದರಿಂದ ತಮ್ಮನ್ನು ಕಾಣ್ವಮ ಕುಲದವರೆಂದು ಕರೆದುಕೊಳ್ಳುತ್ತಾರೆ".[೯] ಹಾಗೂ ತಮ್ಮ ವಂಶದ ಮೂಲ ಪುರುಷ ಶ್ರೀ ಮಹರ್ಷಿ ವಾಲ್ಮೀಕಿಯೆಂದು ಕರೆದುಕೊಳ್ಳುವ ಪದ್ಧತಿ ಇವರಲ್ಲಿದೆ. ಋಷಿ ಮುನಿಗಳಾದ ಮಹರ್ಷಿ ವಾಲ್ಮೀಕಿ ಮೂಲತಃ ಅರಣ್ಯವಾಸಿಗ ಈತನು ಬೇಟೆಯಿಂದಲೇ ಜೀವನ ಸಾಗಿಸುತ್ತಿದ್ದ ಹಾಗೂ ಕ್ರೂರಿಯಾಗಿದ್ದು, ಮುಂದೆ ದೇವರ ಕೃಪೆಯಿಂದ ಪರಿವರ್ತನೆಯಾಗಿ ಮಹರ್ಷಿಯಾಗಿ ಪೂಜ್ಯನೀಯ ವ್ಯಕ್ತಿಯಾಗಿ ಆರಾಧನೆಗೆ ಅರ್ಹವಾಗಿರುವುದು ಕಂಡುಬರುತ್ತದೆ. ವಾಲ್ಮೀಕಿಯ ಕುರಿತು ಒಂದು ಜನಪ್ರಿಯ ದಂತಕಥೆ ಭಾರತದ ಬಹುತೇಕ ಎಲ್ಲ ಭಾಗಗಳಲ್ಲಿ ಪ್ರಚಲಿತವಿದೆ. ಅದರಂತೆ ವಾಲ್ಮೀಕಿ ಒಬ್ಬ ದರೋಡೆಕೋರ, ನಂತರ ಪಶ್ಚಾತ್ತಾಪ ಹೊಂದಿದ. ಆತ ತನ್ನ ಪಾಪಗಳನ್ನು ತೊಳೆಯಲು ಪ್ರಯತ್ನಿಸಿದ. ಅನಂತರ ಕವಿಯಾದ "ಈತ ಒಬ್ಬ ದರೊಡೆಕೋರ ಎಂಬ ಪ್ರಸ್ತಾಪ ಸ್ಕಂದ ಪುರಾಣದಲ್ಲಿ ಬಂದಿದೆ".[೧೦] ಹುಟ್ಟಿನಿಂದ ಪ್ರತಿಯೊಬ್ಬನು ದರೋಡೆಕೋರನಲ್ಲ ಅಂದಿನ ಸಂದರ್ಭದ ಸನ್ನಿವೇಶಗಳು ಇಂತಹ ಕೃತ್ಯಕ್ಕೆ ಇಳಿಸಿವೆ.

ಹೀಗೆ ಬೇಡ ಸಮುದಾಯದ ಹಿನ್ನೆಲೆ ನೋಡಲು ಪ್ರಯತ್ನಿಸಿದಾಗ ಒಂದು ಪ್ರದೇಶದಿಂದ ಬೇರೊಂದು ಪ್ರದೇಶಕ್ಕೆ ಹೋಲಿಸಿದಾಗ ಭಿನ್ನವಾದ ಹೇಳಿಕೆಗಳು ಇವರ ಪೂರ್ವಿಕರ ಅನುಕರಣೆ ಮಾಡಿಕೊಂಡು ಬಂದಂತಹ ಆಚರಣೆಗಳ ಮೇಲೆ ಪ್ರಭಾವಿತವಾಗಿರುವುದು ತಿಳಿದು ಬರುತ್ತದೆ. ಪುರಾಣಗಳಲ್ಲಿ ಪ್ರಸ್ತಾಪವಾಗಿರುವಂತೆ ಮೂಲತಃ ಕಾಡಿನಲ್ಲಿ ವಾಸವಾಗಿದ್ದುಕೊಂಡು ವನ್ಯ ಪ್ರಾಣಿ-ಪಕ್ಷಿಗಳ ಬೇಟೆಯಾಡುವ ವೃತ್ತಿಯಿಂದ ಜೀವಿಸುವ ಜನ ಸಮುದಾಯವನ್ನು ಬೇಡರು ಎಂದು ಕರೆಯಲಾಗಿದೆ. ತಮಿಳು ನಾಡಿನಲ್ಲಿ ಆಗಿಹೋದ ಅರವತ್ಮೂರು ಶಿವಶರಣರಲ್ಲಿಯ "ಬೇಡರ ಕಣ್ಣಪ್ಪ" ಎನ್ನುವ ವ್ಯಕ್ತಿಯೂ ಸಹ ಬೇಡ ಬುಡಕಟ್ಟಿನ ಆದರಣಿಯ ಹಾಗೂ ಆದರ್ಶ ವ್ಯಕ್ತಿ ಎಂದು ತಿಳಿದು ಬರುತ್ತದೆ. ಮೂಲತಃ ಬೇಡರ ಕಣ್ಣಪ್ಪ ಅರಣ್ಯವಾಸಿ ಎಂಬುದಕ್ಕೆ ಬೇಡರ ಎಂಬ ನಾಮಾಂಕಿತ ಮುಂದಿರುವ ಪದವೇ ಸಾಕ್ಷಿ. ಈತನು ಬೇಟೆಗಾರನಾಗಿದ್ದನೆಂಬುದಕ್ಕೆ ಪುರಾಣದಲ್ಲಿ ಪ್ರಸ್ತಾಪಸಿರುವ ಶಿವನಿಗೆ ನೈವೇದ್ಯವಾಗಿ ಬೇಟೆಯಾಡಿದ ಕಾಡು ಪ್ರಾಣಿಯಾದ ಮೊಲದ ಮಾಂಸವನ್ನು ಅರ್ಪಿಸಿ ಧನ್ಯತೆ ಕಂಡ ಹಿನ್ನಲೆಯಲ್ಲಿ ಇಂದಿಗೂ ಬೇಡರು ಯುಗಾದಿ ಹಬ್ಬದಂದು ಮೊಲದ ಬೇಟೆಗೆ ಪ್ರಥಮ ಆದ್ಯತೆ ನೀಡುತ್ತಿರುವುದು ಇಡೀ ಹೈದರಾಬಾದ್ ಕರ್ನಾಟಕದಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುತ್ತದೆ. ತಮ್ಮ ನಿತ್ಯ ಜೀವನದಲ್ಲಿ ಕೆಲವೊಂದು ಆಚರಣೆ ಸಂದರ್ಭದಲ್ಲಿ ಬೇಡರು ಪ್ರಾಣಿಗಳ ಬಲಿ ನೀಡಿ ಸಂಪ್ರದಾಯಗಳನ್ನು ಪೂರ್ಣಗೊಳಿಸುವುದನ್ನು ನೋಡಬಹುದು.

ಪ್ರಸ್ತುತ ಅಧ್ಯಯನದ ಸಲುವಾಗಿ ಚರಿತ್ರೆ ಪುಟಗಳನ್ನು ಅವಲೋಕನ ಮಾಡಿದಾಗ, ಭಾರತ ದೇಶದಲ್ಲಿ ಆದಿಮ ಅಥವಾ ಪ್ರಾಚೀನ ಬುಡಕಟ್ಟುಗಳಲ್ಲಿ ಬೇಡ ಸಮುದಾಯವೂ ಒಂದು. ಆರಂಭದಿಂದ ಇವರು ಕಾಡಿನಲ್ಲಿ ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ ವೃತ್ತಿಗಳಿಂದ ವಿಕಾಸಗೊಂಡವರು ಹೀಗೆ ವೃದ್ಧಿಯ ಜೊತೆಗೆ ವಿಸ್ತರಣೆಗೊಂಡಿದ್ದು. ಶಿಲಾಯುಗದಿಂದಲೂ ನಡೆದ ಪ್ರಕ್ರಿಯೆ. ಉತ್ತರ ಭಾರತದ ಸಿಂಧೂ, ಗಂಗಾ, ಬ್ರಹ್ಮಪುತ್ರ ನದಿ ಬಯಲುಗಳಲ್ಲಿ ಕಿರಾತ ದೇಶ ಪುಳಿಂದ ಶಬರನಾಡುಗಳಿದ್ದವೆಂದು ತಿಳಿದುಬರುತ್ತದೆ. ಈ ಸಮುದಾಯದವರನ್ನು ನಿಷಾಧ, ಪುಲಿಂಗ, ವ್ಯಾಧ, ಕಿರಾತ, ಶಬರ, ವಾಲ್ಮೀಕಿ ತಳವಾರ, ಪರಿವಾರ, ಬೋಯಾ, ಬೇರಾದ್, ವೇದಾನ್ ರಾಮೋಶಿ ಮೊದಲಾದ ಹದಿನೆಂಟಕ್ಕೂ ಹೆಚ್ಚು ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. ಬೇಡ ಅಂದರೆ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುವವನು. ನಾಯಕ ಅಂದರೆ ಸಮಾಜಕ್ಕೆ, ಸಮುದಾಯಕ್ಕೆ, ರಾಜ್ಯಕ್ಕೆ ಮುಖಂಡನೆಂದು ಹೆಸರು. ಗತಿಸಿದ ವಿವಿಧ ಚಾರಿತ್ರಿಕ ಕಾಲಘಟ್ಟಗಳಲ್ಲಿ ಸೈನಿಕ, ದಂಡ ನಾಯಕ, ತಳವಾರ, ದೊರೆ, ದಳಪತಿ, ಕೋಲುಕಾರ, ಖಾಸಪಡೆ, ಮೀಸಲು ಪಡೆ, ಬಿಚ್ಚುಗತ್ತಿ, ಮುಖಂಡನೆಂದು ನಾಯಕನೆಂದು ಕರೆಸಿಕೊಂಡವರೇ ಬೇಡ-ನಾಯಕರಾಗಲು ಮತ್ತು ನಾಯಕ ಎಂದಾಗಲೂ ಕಾರಣವಾಯಿತು.

"ಇವರು ಸಮಾಜ ಪರಿವರ್ತನೆ ಆದಂತೆ ಬದುಕಿನ ಮುಂದುವರಿಕೆಗಾಗಿ ಒರಿಸ್ಸಾ, ಆಂಧ್ರ ಪ್ರದೇಶಗಳಿಂದ ಕರ್ನಾಟಕದ ಹಲವು ಪ್ರದೇಶಗಳಿಗೆ ವಲಸೆ ಬಂದು ನೆಲೆಸಿದರೆಂದು ತಿಳಿದು ಬರುತ್ತದೆ".[೧೧] ತಮ್ಮ ಬದುಕಿಗೆ ಪೂರಕವಾದ ಬೇಟೆ ಪಶುಪಾಲನೆ ಕೃಷಿ, ಪರಿಸರದಲ್ಲಿ ಆದಿಯಿಂದಲೂ ಇದ್ದರೆಂದೂ ಹೇಳಲಾಗುತ್ತದೆ. ರಾಜ್ಯದ ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಬೆಳಗಾವಿ, ಗುಲಬರ್ಗಾ, ದಾವಣಗೆರೆ, ತುಮಕೂರು, ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಜನಸಂಖ್ಯೆಯಲ್ಲಿ ನಾಯಕರಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ೨೦೦೧ರ ಜನಗಣತಿ ಪ್ರಕಾರ ೨೯.೧೮.೬೪೯ ಜನಸಂಖ್ಯೆಯು ೨೭ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಅದು ಈ ರೀತಿ ನೋಡಬಹುದು.

ಕೋಷ್ಟಕ ೧

ಕರ್ನಾಟಕದಲ್ಲಿ ಜಿಲ್ಲಾವಾರು ಬೇಡರ ಜನಸಂಖ್ಯೆ ವಿವರ ೨೦೦೧ ಪ್ರಕಾರ

ಜಿಲ್ಲೆ	ಗಂಡು	ಹೆಣ್ಣು	ಒಟ್ಟು
ಬಾಗಲಕೋಟೆ	೩೭.೬೩೫	೩೭.೫೨೩	೭೫.೧೫೮
ಬೆಂಗಳೂರು (ಗ್ರಾ.)	೨೫.೧೪೬	೨೩.೯೪೭	೪೯.೦೯೩
ಬೆಂಗಳೂರು (ನ)	೨೭.೯೯೬	೨೫.೨೪೪	೫೩.೨೪೦
ಬಳ್ಳಾರಿ	೧.೮೧.೭೫೧	೧.೭೯.೧೦೧	೩.೬೦.೮೫೨

ಬೆಳಗಾವಿ	೧.೧೯.೯೧೫	೧.೧೭.೪೨೫	೨.೩೭.೩೪೦
ಬೀದರ	೩.೬೮೮	೩.೬೪೫	೭.೩೩೩
ಬಿಜಾಪುರ	೧೦.೩೭೮	೯.೭೯೫	೨೦.೧೭೩
ಚಾಮರಾಜನಗರ	೪೩.೪೬೪	೪೩.೪೨೪	೮೬.೮೮೮
ಚಿಕ್ಕಮಗಳೂರು	೯.೦೫೧	೮.೭೪೬	೧೭.೭೯೭
ಚಿತ್ರದುರ್ಗ	೧.೮೮.೧೩೫	೧.೨೯.೫೧೭	೨.೬೫.೧೮೮
ದಕ್ಷಿಣ ಕನ್ನಡ	೭.೧೭೧	೬.೯೩೩	೧೪.೧೦೪
ದಾವಣಗೆರೆ	೧.೦೪.೬೬೭	೧.೦೦.೫೫೨	೨.೦೫.೨೧೯
ಧಾರವಾಡ	೩೨.೯೯೨	೩೧.೧೧೦	೬೪.೧೦೨
ಗದಗ	೨೭.೨೦೨	೨೬.೧೦೧	೫೩.೩೦೩
ಗುಲಬರ್ಗಾ	೬೧.೦೦೯	೬೦.೨೬೧	೧.೨೧.೨೭೦
ಹಾಸನ	೧೦.೭೫೯	೧೦.೬೭೧	೨೧.೪೩೦
ಹಾವೇರಿ	೬೪.೩೧೦	೬೦.೫೩೩	೧.೨೪.೮೪೩
ಕೊಡಗು	೨.೮೪೧	೨.೮೩೦	೫.೬೭೧
ಕೋಲಾರ	೧.೦೧.೬೨೦	೯೮.೮೩೭	೨.೦೦.೪೫೭
ಕೊಪ್ಪಳ	೬೯.೫೯೦	೬೮.೦೫೭	೧.೩೭.೬೪೭
ಮಂಡ್ಯ	೫.೭೦೪	೫.೫೪೨	೧೧.೨೪೬
ಮೈಸೂರು	೧.೨೦.೯೫೮	೧.೧೯.೧೭೨	೨.೪೦.೧೩೦
ರಾಯಚೂರು	೧.೫೦.೮೭೪	೧.೪೯.೮೧೬	೩.೦೦.೬೯೦
ಶಿವಮೊಗ್ಗ	೨೧.೮೩೫	೨೧.೦೧೩	೪೨.೮೪೮
ತುಮಕೂರು	೯೭.೧೩೬	೯೩.೪೩೪	೧.೯೦.೫೭೦
ಉಡುಪಿ	೧.೩೦೫	೧.೩೨೮	೨.೬೩೩
ಉತ್ತರ ಕನ್ನಡ	೪.೯೦೧	೪.೫೨೩	೯.೪೨೪
	೧೫.೩೨.೦೩೩	೧೪.೩೯.೦೮೦	೨೯.೭೧.೧೧೩

(ಕೃಪೆ: ಬುಡಕಟ್ಟು ಅಧ್ಯಯನ ಪತ್ರಿಕೆ ಸಂಪುಟ.೩ ಸಂಚಿಕೆ. ೨ ೨೦೦೬ ಪುಟ. ೧೫೨-೫೩)

ಕೋಷ್ಟಕ ೨

ಅಧ್ಯಯನ ಕ್ಷೇತ್ರದಲ್ಲಿ ಕಂಡುಬರುವ ಬೇಡ ಬುಡಕಟ್ಟು ಜನಸಂಖ್ಯೆ ವಿವರ

ಕ್ರ.ಸಂ.	ಜಿಲ್ಲೆಗಳು	ಗಂಡು	ಹೆಣ್ಣು	ಒಟ್ಟು
೧.	ಗುಲಬರ್ಗಾ	೬೧.೦೦೯	೬೦.೨೬೧	೧.೨೧.೨೭೦
೨.	ರಾಯಚೂರು	೧.೫೦.೮೭೪	೧.೪೯.೮೧೬	೩.೦೦.೬೯೦
೩.	ಕೊಪ್ಪಳ	೬೯.೫೯೦	೬೮.೦೫೭	೧.೩೭.೬೪೭
				೫.೫೯.೬೦೭

೨. ಬೇಡ ಸಮುದಾಯದ ಮೂಲ

ನೀರಿನ ಆಳ ಕುದುರೆಯ ಮತ್ತು ಹೆಣ್ಣಿನ ಆಳವನ್ನು ನಿರ್ದಿಷ್ಟ ಪಡಿಸಲು ಹೇಗೆ ಅಸಾಧ್ಯವೋ, ಹಾಗೇನೆ ಸಮುದಾಯದ ಮೂಲವನ್ನು ಹುಡುಕುವ ಪ್ರಯತ್ನವು ಅಷ್ಟೇ ಕಷ್ಟಕರವಾದುದು. ಆದರೂ ಸತ್ಯಕ್ಕೆ ಹತ್ತಿರವಿರುವ ಅಂಶಗಳನ್ನು ನಾವು ನೋಡಬಹುದು. "ಬಿ.ಎಲ್. ರೈಸ್ ವ್ಯಕ್ತಪಡಿಸುವಂತೆ ಕರ್ನಾಟಕದ ಬೇಡರು ಉತ್ತರ ಮಲಬಾರಿನ ಪೆರಿಂಗಾಲ್ ಪೇಟಮನ್ಸ ಸಿಲೋನಿನ ವೆಡ್ಡರ ಒಂದೇ ಮೂಲದವರೆಂದು ಹೇಳುತ್ತಾರೆ".[೨] ಇವರ ಬೆಡಗುಗಳು ಅವರು ಆಡುವ ಭಾಷೆ, ಆರಾಧಿಸುವ ದೈವಗಳನ್ನು ಕುರಿತು ನೋಡಿದಾಗ ಮೂಲತಃ ಇವರು ಆಂಧ್ರ ಪ್ರದೇಶದವರು ಅಲ್ಲಿಯ ಶ್ರೀಶೈಲ ಪರ್ವತವಾಸಿಗಳೆಂದು ತಿಳಿದುಬರುತ್ತದೆ.

ಸಮಾಜ ಪರಿವರ್ತನೆಯ ಸಂದರ್ಭದಲ್ಲಿ ತಮ್ಮ ಉಪಜೀವನಕ್ಕಾಗಿ ಬೇರ್ಪಟ್ಟ ಬುಡಕಟ್ಟು ಆಗಿರಬಹುದು. ಅದರ ಜೊತೆಗೆ ಧೈರ್ಯ, ಸಾಹಸ, ಬಿಲ್ಲುಗಾರಿಕೆ, ಪ್ರಾಣಿಗಳಿಗೆ ಗುರಿಯಿಟ್ಟು ಕೊಲ್ಲುವ ಚಾಣಕ್ಷತನ ಇತರೆ ಅಂಶಗಳು. ಇವರಲ್ಲಿ ಸಾಮ್ಯತೆ ಕಂಡುಬಂದ ಕಾರಣದಿಂದ ರೈಸ್‌ರವರ ಅಭಿಪ್ರಾಯ ಸತ್ಯಕ್ಕೆ ಹತ್ತಿರವೆಂದು ತಿಳಿಯುತ್ತದೆ. "ಆದಿಮ ಕಾಲದಿಂದಲೂ ಇವರನ್ನು ಕಿರಾತ, ಶಬರ್, ಕಂಕ, ನೈಪದ, ಕುಳಿಂದ, ಪುಳಿಂದ, ಬಿಲ್ಲ, ವ್ಯಾದ, ವನಚರ, ವಾಲ್ಮೀಕಿ, ನಿಷಾದ, ತಳವಾರ, ದೊರೆ, ನಾಯಕ, ಕಣ್ಣಪ್ಪನ ಮಕ್ಕಳು, ಬೆಂದ, ವೆದನ್, ಭೋಯಿ ಎಂಬ ಇನ್ನಿತರ ಪರ್ಯಾಯ ಹೆಸರುಗಳಿವೆ. ಇವರೂ ಪ್ರೋಟೋ ಅಸ್ಟ್ರಾಲಾಯಿಡ್ ಜನಾಂಗಕ್ಕೆ ಸೇರಿದವರು. ಇಂಡಿಯಾದಲ್ಲಿ ಇವರು ಮೂಲ ದ್ರಾವಿಡರಾಗಿದ್ದಾರೆ. ದ್ರಾವಿಡ ಭಾಷೆಯಲ್ಲಿ ವೇಡನ್ನ, ವಟ್ಟುವನ ಹಾಗೂ ಹಳೆಗನ್ನಡದಲ್ಲಿ ವೇಡರ, ವೇಳರ್, ಎದಿರ ಬಿಲ್ಲ, ಬೇಟೆಯವರ, ಬೇಂಟೆಕಾರ, ವಿಯದರ್, ಬಿಯದರ್, ಕಣಂದರ, ಕೋವರ ಎಂಬ ಸಂವಾದಿ ಪದಗಳನ್ನು ಬಳಸಲಾಗಿದೆ."[೩]

ಕಾಲಮಾನಕ್ಕನುಗುಣವಾಗಿ, ವೃತ್ತಿಗನುಗುಣವಾಗಿ, ಭಾಷೆಗೆ ಅನುಗುಣವಾಗಿ ವಿಭಿನ್ನವಾದ ಪದಗಳನ್ನು ಬಳಸಿರುವುದು ಕಂಡುಬರುತ್ತದೆ. ಅದರ ಜೊತೆಗೆ ಕೆಲವೊಂದು ಪದಗಳನ್ನು ಅವಲೋಕಿಸಿದಾಗ

ಬೇಡರು ಅರಣ್ಯವಾಸಿಗಳು, ಕ್ರೂರ ಪ್ರವೃತ್ತಿಯವರು, ಬೇಟೆಗಾರರು, ಮುಖಂಡರು, ರಕ್ಷಕರು, ರಾಜ್ಯದ ಸೇವಕರು ಎಂದೂ ತಿಳಿದುಬರುತ್ತದೆ.

ಇಂದಿನ ಸಂದರ್ಭದಲ್ಲಿ ಬೇಡ ಬುಡಕಟ್ಟಿನವರು ಬೇಡ, ಬೇಡರ, ನಾಯಕ, ವಾಲ್ಮೀಕಿ, ದೊರೆ, ದೊರೆಮಕ್ಕಳು, ಕಣ್ಣಯ್ಯನ ಮಕ್ಕಳು, ತಳವಾರ, ರಾಜ ಪರಿವಾರದವರು ಎಂದು ಮೈಸೂರು ಪರಿಸರದಲ್ಲಿ ವಾಸವಾಗಿರುವರು ವಾಲ್ಮೀಕಿ ಸಮುದಾಯದವರೆಂದು ಕರೆಯಿಸಿಕೊಳ್ಳುತ್ತಾರೆ. ಮುಖ್ಯವಾಗಿ ಪರಿವಾರ, ರಾಜ ಪರಿವಾರ ಮೂಲತಃ ಬೇಡರು ಇವರು ಮುಂಚೆ ಪಾಳೆಪಟ್ಟು ಆಳಿದ ರಾಜ ಪರಿವಾರ ದವರು, ತಮ್ಮ ಅರಸುತನವನ್ನು ಅಂತ್ಯ ಹೊಂದಿದ ನಂತರ ಪರಿವಾರದವರು ಎಂದು ಹೇಳಿಕೊಂಡು ಜೀವಿಸುತ್ತಿರುವುದು ನೋಡಬಹುದು. ಆದರೆ ಪರ್ಯಾಯ ನಾಮಾಂಕಿತ ಹೇಳಿಕೊಂಡು ಮೂಲ ಸಮುದಾಯದ ವಿಧಾನಗಳು, ರೂಢಿನಿಯಮಗಳು ಮರೆತಿಲ್ಲವೆಂದು ಕಂಡುಬರುತ್ತದೆ. ಇವರಂತೆ ಇನ್ನೂ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ನಾಯಕ ಅರಸು ಮನೆತನದವರು ಅಥವಾ ರಾಜ ಪರಿವಾರದವರು ಇರುವುದನ್ನು ಸಹ ನೋಡಬಹುದು. ಉದಾಹರಣೆಗೆ ಚಿತ್ರದುರ್ಗ, ಗುಡೇಕೋಟೆ, ಜರಿಮಲೆ, ಕನಕಗಿರಿ, ಕಂಪ್ಲಿ, ಹುಲಿಹೈದರ ಗುಂತಗುಳೆ, ದೇವದುರ್ಗ, ಗಲಗ, ಗುರುಗುಂಟ, ಸುರಪುರ, ಇತರೇ ಸಂಸ್ಥಾನದ ರಾಜಪರಿವಾರದವರು ಇರುವರು. ಬೇಡರಾಗಲಿ ಇತರೆ ಯಾವುದೇ ಸಮುದಾಯವಾಗಲಿ ಅಧ್ಯಯನಿಸುವಾಗ ಅವರ ಆಚರಣೆ ಮಾಡುವಂತಹ ದೈವ-ದೇವರುಗಳು, ಹೇಳಿಕೊಳ್ಳುವಂತಹ ಸ್ಥಳನಾಮಗಳು-ನಾಮಾಂಕಿತಗಳು ಪ್ರಾದೇಶಿಕವಾಗಿ ವಿಭಿನ್ನವಾಗಿ ಗೋಚರವಾದರೂ ತಮ್ಮ ಜನ್ಮದತ್ತವಾಗಿ ಬಂದಿರುವಂತಹ ಮೂಲವನ್ನು ಬದಲಾಯಿಸಿಕೊಂಡಿರುವುದು ಎಲ್ಲಿ ಕಂಡಬಂದಿಲ್ಲ.

ಬೇಡ ಸಮುದಾಯದ ಪರ್ಯಾಯ ಪದನಾಮಗಳು

ತಮಿಳುನಾಡು	ನಾಯಕ್ಕ ನಾಯಿಡು, ಗೆಂಟು, ಬಿಲ್ಲರು, ನಾಯಕ್ ನಾಯ್ಕರ್, ವೇಡನ, ವೇಞುಕನ, ವೆತ್ತಲೆ, ನಾಯಕರ್
ಆಂಧ್ರಪ್ರದೇಶ	ನಾಯಿನಿ, ನಾಯಿಡು, ಬೋಯಾ, ಬೋವಿ,ಬೋಯ, ಬೋಯಸು
ಮಹಾರಾಷ್ಟ್ರ	ಬೇಂಡ, ರಾಮೋಶಿ, ರಾಣವಾಸಿ, ಥೇರಬೇಡ, ಮದಾರಬೇಡ
ರಾಜಸ್ಥಾನ ಪಂಜಾಬ ಮಧ್ಯಪ್ರದೇಶ	ಬಿಲ್, ಬಾಲ್ಮೀಕಿ, ವಾಲ್ಮೀಕಿ, ನಾಯಕ, ಮಾಂಗ,
ಕೇರಳ ಮಲೇಷಿಯಾ	ನಾಯರ
ಉತ್ತರ ಭಾರತ	ವಾಸಿ
ಕಾಶ್ಮೀರ	ಡೋಗ್ರಾ

ಉತ್ತರ ಪ್ರದೇಶ	ಜಾಟಿ
ಬಂಗಾಲ, ಬಿಹಾರ	ಸೇನ್
ಸಿಲೋನ್	ವೇಟನ, ವೇಡು, ವಾಸ, ವಡ್ಡಾಸ್, ಬಂದರ ನಾಯಕ,
ಸಿಂಗಾಪುರ	ವಾಲ್ಮೀಕಿ

(ಕೃಪೆ: ಡಂಗ. ಡಿ.ಬಿ. ಜನಾಂಗ ಪರಿಚಯ, ೧೯೮೮, ಪುಟ. ೩)

ಹೀಗೆ ಪ್ರಾದೇಶಿಕ ಅನುಗುಣವಾಗಿ ಬೇಡ ಬುಡಕಟ್ಟಿನ ಪದಗಳು ಹಲವು ದೃಷ್ಟಿಯಿಂದ ಭಿನ್ನವಾಗಿವೆ. ಆದರೆ ಪ್ರಾದೇಶಿಕವಾಗಿ ಪರ್ಯಾಯ ಪದನಾಮಗಳನ್ನು ಹೊಂದಿದ್ದರು. ಮೂಲದ ಅರ್ಥ ಒಂದೇ ಆಗಿರುವುದನ್ನು ಕಾಣುತ್ತದೆ. ಮೂಲತಃ ಇವುಗಳನ್ನು ವಿವೇಚಿಸಿದ್ದು ವೃತ್ತಿ ಅನುಗುಣವಾಗಿ ಬೇಟೆಯಾಡುವ ವೃತ್ತಿಯಿಂದ ಹಾಗೂ ಮೂಲ ಪುರುಷರ ಅನುಗುಣವಾಗಿ ಅರಣ್ಯವಾಸಿಗಳೆಂದು ದೊರೆ, ಮಕ್ಕಳೆಂದು, ಪೋಷಕರ ನಾಮಾಂಕಿತದಿಂದ ಇನ್ನಿತರ ಪ್ರದೇಶಗಳ ಅನುಗುಣವಾಗಿ ಸಂಭೋಧಿಸಿಕೊಂಡಿರುವುದು ಕಂಡುಬರುತ್ತದೆ. ಇವೆಲ್ಲ ಒಂದೇ ಕಳ್ಳುಬಳ್ಳಿಯ ಕುಡಿಗಳಾಗಿರಬಹುದೆಂಬುದನ್ನು ತಳ್ಳಿಹಾಕುವಂತಿಲ್ಲ.

೩. ಬೇಡ ಸಮುದಾಯದ ಬೆಡಗುಗಳು

ನಮ್ಮ ದೇಶದಲ್ಲಿ ಪುರಾತನ ಕಾಲದಿಂದಲೂ ಬೇಡರನ್ನು ಕಿರಾತ, ವ್ಯಾಧ, ನಿಷಾದ, ಶಬರ, ವಾಲ್ಮೀಕಿ, ಪುಳಿಂದ ನಾಯಕ ಇನ್ನಿತರ ಪರ್ಯಾಯ ಪದಗಳಿಂದ ಕರೆದಿದ್ದಾರೆ. ಪ್ರಸ್ತುತದಲ್ಲಿ ಸಹ ಬೇರೆ ಬೇರೆ ಹೆಸರುಗಳಿಂದ ಕರೆದುಕೊಂಡಿರುವುದನ್ನು ನೋಡಬಹುದು. "ಭಾರತದಲ್ಲಿ ಒಟ್ಟು ೪೬೧ ಪರಿಶಿಷ್ಟ ಪಂಗಡಗಳಿವೆ. ಈ ಬುಡಕಟ್ಟುಗಳಲ್ಲೊಂದಾದ ಬೇಡರ ಬಗ್ಗೆ ೧೯೭೬ರ ನಂತರ ಕರ್ನಾಟಕದಲ್ಲಿ ಮಾತ್ರ ಹದಿನೆಂಟು ಪರ್ಯಾಯ ಹೆಸರುಗಳಿವೆ."[೧೪]

ಪ್ರಸ್ತುತದವರೆಗೂ ಬೇಡ ಅಥವಾ ನಾಯಕರು ತಮ್ಮ ಕುಲ-ಗೋತ್ರಗಳನ್ನು ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ದೊರೆ, ತಳವಾರ, ಪರಿವಾರ, ರಾಜಪರಿವಾರ, ವಾಲ್ಮೀಕಿ, ನಾಯಕ ಬೇಡ ಬುಡಕಟ್ಟು ಪಂಗಡದಲ್ಲಿ ಹಲವಾರು ಉಪ ಗುಂಪುಗಳಿವೆ. ಅದರಲ್ಲಿ ಊರು ಬೇಡರು ಮತ್ತು ಮ್ಯಾಸಬೇಡರು, ಮೊಂಡರು, ದುರ್ಗಾಮುರುಗಿಯರು, ಬೇಡಗಂಪಣರು ಇತ್ಯಾದಿ ಆಗಿ ಕಂಡುಬರುತ್ತಾರೆ. ಇವರಲ್ಲಿ ಕಂಡುಬರುವ ಕುಲ-ಬಳ್ಳಿಗಳಲ್ಲಿ ಪ್ರಮುಖವಾಗಿ ಆದಿಮ ಅರಣ್ಯ ಪರಿಸರವನ್ನು ಪ್ರತಿಬಿಂಬಿಸುವ ಮತ್ತು ಇವರ ಗುಣ, ಸಾಧನೆ, ಶೌರ್ಯ, ಸಾಹಸ, ಶೀಲ, ನಿಷ್ಠೆ, ಪ್ರಾಮಾಣಿಕತೆ ಇನ್ನು ಮುಂತಾದ ಬೆಡಗುಗಳು ಕನ್ನಡ, ತೆಲುಗು ಭಾಷೆಯ ಮಿಶ್ರಿತ ಬೆಡಗುಗಳಾಗಿವೆ. ಅದರಲ್ಲಿ ವಿಶೇಷವಾಗಿ ಶಕ್ತಿದೇವತೆ, ಗ್ರಾಮದೇವತೆ, ಪ್ರಾಣಿ, ಪಕ್ಷಿ, ದೈಹಿಕ ಲಕ್ಷಣ, ಬಣ್ಣ, ಸ್ವರೂಪ, ಹೂವು ಹೀಗೆ ಸಾಂಪ್ರದಾಯಿಕ ಪದಗಳನ್ನು ತಮ್ಮ ಬೆಡಗುಗಳಿಗೆ ಅಳವಡಿಸಿಕೊಂಡಿದ್ದಾರೆ. ಅಧ್ಯಯನಕಾರರ

ಉಪಯೋಗಕ್ಕಾಗಿ ಇದರಲ್ಲಿ ಊರುಬೇಡರ ಶಕ್ತಿ ದೇವತೆಯಾದ ಊರಮ್ಮನನ್ನು ಮತ್ತು ಹನುಮಂತ, ಗೋಪಾಲಸ್ವಾಮಿ, ಬೇಡರಕಣ್ಣಪ್ಪ, ಏಕಲವ್ಯ, ವೆಂಕಟೇಶ್ವರ ಇತ್ಯಾದಿ ದೇವತೆಗಳ ಜೊತೆಗೆ ತಮ್ಮ ಪೂರ್ವಿಕರನ್ನು ಆರಾಧನೆ ಮಾಡುತ್ತಾರೆ. ಆದರೆ ಮ್ಯಾಸ ಬೇಡರಲ್ಲಿ ತಮ್ಮ ಪ್ರಾದೇಶಿಕವಾಗಿರುವ ಸಮುದಾಯದ ಹಿರಿಯರನ್ನು ಹಾಗೂ ಸಾಂಸ್ಕೃತಿಕ ನಾಯಕರನ್ನು ಪೂಜೆ ಮಾಡುತ್ತಾರೆ.

೪. ಊರು ಬೇಡರ ಬೆಡಗುಗಳು

ಇವರಲ್ಲಿನ ೨೨೪ ಬೆಡಗುಗಳ ಕುರಿತು ಹಲವಾರು ವಿದ್ವಾಂಸರು ಕಲೆ ಹಾಕಿದ್ದಾರೆ. ಅದರಲ್ಲಿ ಬೆಳಗಾವಿಯ ಶಿ.ಗು.ಕುಸಗಲ್ಲು, ಧಾರವಾಡ, ಆರ್.ಬಿ.ಕಿತ್ತೂರು, ಬಳ್ಳಾರಿಯ ದಳವಾಯಿ ವೀರಣ್ಣ ಅವರುಗಳು ಸಂಗ್ರಹಿಸಿಕೊಟ್ಟಿರುವ ಜೊತೆಗೆ ಫೆಬ್ರವರಿ ೧೯೯೮ರ ವಾಲ್ಮೀಕಿವಾಣಿ ಮತ್ತು ಡಿಸೆಂಬರ್ ೧೯೯೯ರ ವಾಲ್ಮೀಕಿ ಬಂಧು ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾದ ಬೆಡಗುಗಳನ್ನು ಇಲ್ಲಿ ನೀಡಲಾಗಿದೆ.

ಗುಜ್ಜಲರ್	ಗೋಸಲರ್
ಮೀನಗಲರ್	ಬಿಲ್ಲರ್
ಗಬ್ಬೆಲರ್ಮಲ್ಲರ್	ಕುರ್ತೀರ್
ಮುಮ್ಮಡಲವರ್	ಬಡಕಲರಕ್ಕಕಳಿಸಲದ
ರೆಂಗಾಲೇರ	ಬೆಲ್ಲೋಲರ
ಕೆಂಗಲರ	ಜಿನಗಲರ
ಮಿರ್ತೀರ	ಪಿಂಗಾರ
ಮಣಿಕಲರ	ಮಳಗಲ್ಲರ
ಈರಗಾರ	ಚಂಪಲರ
ಮನವೊಲ್ಲಾರ್	ಮುದುಗೊಂಡ್ಲರ್
ಗೊಬ್ಬಿಲರ್	ಮಸಗಲ್ಲರ್
ಪೋತಲರ	ಪೋಲರ
ಪುರ್ತೀರ	ಪೊತ್ತುಗಳೇರ
ಪರಮುಖಿರ	ಬರಿಪಿಲರ್
ಮನ್ನಲರ್	ಮೋಗಲರ್
ಭಟ್ಟರ್	ಬೋಗಿಲರ

ಜಾಡಲರ
ತರಮುಖರ
ಬೆಂಚಲರ
ಕೊಣಿಗಲ್
ಗುಡಗ್ಗೇರ
ಬಂಡೆಬಲದವರ
ತುರುಮನೇರ
ನಲ್ಲೆತೀರ
ದ್ವಿರಕಲ್ಲೇರ
ದೊರಿಲವರ
ಕರೇಸಲ್ಲರ್
ಗವಲೇರ್
ತಿರಮುಖರ್
ಪಡವಲಿವಲರ್
ಸಾಕೆಲರು
ಮುತ್ತೋೇರು
ಪೂಲೋೇರು
ಆನ್ಯಾವರು
ಗೌಲರು
ಮಿನುಗೋತ್ರ
ಜಂಪಲರ
ತಟ್ಟೆಲರ
ಕಲ್ಲಲ್ಲೇರ

ತಳಗಲ್ಲ
ತಂಗಲರ
ಮಲ್ಲಗ್ಗರ
ಸಂತಾಲೇರ
ಕುರ್ಗಲೇರ
ಹುಲೇರ
ಮರ್ತೇರ
ರೆಂಬೆಲವರ
ಯುದ್ಧಲವರ
ಸೊಳ್ಳೇರ್
ದೇವಕಲ್ಲರ್
ಚಾಟಕಲ್ಲೇರ್
ಮುತಶ್ಯರ್
ಮಂದಲೋೇರು
ಮಲೆಯರು
ಮದಲೋೇರು
ನಿಚ್ಚಮಲೆಯರು
ಗೊರಲಾರ
ಅಂಕೆಲಾರು
ಅನಾಲರ
ಮಳಲೇರು
ನೆಲ್ಲೆಲ್ಲಾರು
ಪೆರುಮಕ್ಕಳೀರ್

ಹೊನ್ನಬಂಟ್ನವರ

ಅರಕೋರು

ಲಕ್ಷ್ಮಿಲೇರು

ಕಳಘದವರು

ಯಮಗಲೂರ್

ಅಕ್ಕಲೂರು

ಇಮ್ಮುಳ್ಳು

ಅಜ್ಜಮುತ್ತಿಯವರು

ಅಜ್ಜಪ್ಪಲ್ಲೋರು

ಅಲಕತ್ತು

ಅಂಗುಮೋಲರು

ಅವುಲೋರ್ಲು

ಉರಿಶಿಗರು

ಎಪ್ಪೋತಲೋರು

ನುಮಲ್ಲೈರುಏರ್ರ

ಓಬನಾಯಕರು

ಓತಲವರು

ಕಂತಾಳಸಹಕೇತರು

ರಾಮಕೇತಲವರು

ಕಿರಿಯ ಮುಚ್ಚಲವರು

ಕಸೂರಿಯವರು

ಕಲ್ಯಾನದವರು

ಕತ್ತಿಯವರು

ಹೊನ್ನಗೋಸಲವರ

ಬೆನಕನವರರ್ಕುತಿಕ

ಚಂದಬಲನ್ನವರ

ಅಗಸ್ತ್ಯ

ಮುಚ್ಚಳವರ್

ಬುಟಕಲು

ಅಂದರದವರು

ಅಜ್ಜಡ್ಲೋರು

ಆನಂದರು

ಬುಟಕಲವರು

ಆಚರ್ಲರವರು

ಈಟಿಯವರು

ಎದ್ದಲೋರು

ಎಕ್ಕೇಲೋರು

ಮ್ಯೊಲವರು

ಏಳುಬೆಟ್ಟದವರು

ಕಂಕರು

ಕಾಂಗೆತ್ತವರು ಕಲ್ನಕ್ಷರು

ಕಾಮಲವರು

ಕಿಜ್ಜಿಷರು

ಕುಂಚೇಲವರು

ಕವಲವರು

ಕೂರಿಯವರು

ಕವಾರಿಕಾರರು

ಕಿನ್ನರರು

ಕುಂತಳದವರು

ಕುಂಬಳದವರು

ಕುರುಜರು

ಕೊರೇಣ್ಣನವರು

ರೆಂಗಪುಟ್ಟಲವರು

ಕಬ್ಬಿಲವರು

ಕುರಸಾಲವರು

ಕೆಬ್ಬೊಳು

ಗಗ್ಗಡಲವರು

ಪೆನ್ನಯ್ಯಲವರು

ಕಾಗಣ್ಣವರು

ಗೂಜಲವರು

ಗೆದ್ದಲವರು

ಗೋಪಾಲಪಾತರು

ಗೊಲ್ಲಾಳರು

ಗೌಂಪೋರು

ಗುಲ್ಲಿನವರು

ಚಕ್ರ

ಚಿನ್ನಮಾಗೇಲವರು

ಚಿನಮದಿಲವರು

ಚೇಮಲವರು

ಕಿರಾತರು

ಕುರ್ನೇರು

ಸಹಕೇತರು

ಕಾಡುಚರರು

ಕಮಲದವರು

ಕುಂಟ್ಲವರು

ಕಾಶೀಗೋತ್ರ

ಕೊಳಾಯಿಲವರು

ಕಂದಿರ್ಲವರು

ಗಂಗನಾಥರು

ಗಂಗೋನಾಯ್ಕ

ಗಜ್ಜಲವರು

ಗುಮ್ಮಟದವರು

ಗಡ್ಡದವರು

ಗೋಲೇರು

ಗೋಪನವರು

ಗೋವಿನವರು

ಗೆಜ್ಜೇಡರು

ಗುರುಲೇ ಅವರು

ಚಿಪ್ಪಲವರು

ಚಿನಗಾಟಿನಾಯಕರು

ಚಿನ್ನಗಟ್ಟೋರು

ಚೆಡುಬೋತಲವರು

ಚಿಚ್ಚಟ್ಲವರು
ಜನುಕ್ತಿಯವರು
ಜಿಂಕೇಲವರು
ತನುಲಮತ್ತೇರು
ತಪುಲವರು
ತೊಡಲವರು
ನವಣೆಯವರು
ಕುರುವಂತದವರು
ನಾರಪೋರು
ನಲಕೇತಲವರು
ನಾದೆರ್ಲವರು
ನೀಲಮೋರು
ಪಾಲೋರು
ನಗರಾಂತರಕರು
ಪಾನುಮಲವರು
ಪಾಲಮುನಿಗೋತ್ರದವರು
ಪಾಮುಡಲವರು
ಪಾಮುಲವರು
ಪೆಯ್ಯಲವರು
ಪುಟ್ಟಲವರು
ಪೆದ್ದಮದಿಲವರು
ಪೆದ್ದ ಮುಕ್ಕಲವರು
ಬೊಂತುಲವರು

ಜಂತಲವರು
ಜುಕ್ಕಲವರು
ಡಾಕೇಲವರು
ತಂಪುಲೋರು
ತೇರುಸಾಮಂತರು
ನಲ್ಲಬೋತುಲವರು
ನಾಮಾಲರು
ನಾಗರಸರು
ನಲ್ಲೇಲವರು
ನಾಯಿಗಜ್ಜಲವರು
ನೀರಾಕಾಶೀ
ಪುಟ್ಟಮುಲವರು
ಪಲ್ಲಪರಲವರು
ಪರಮಶಿವಲಯ
ಪಗಲವರು
ಪುಟ್ಟು ಪೊಲವರು
ಪಾವಕಲವರು
ಪಿತಲವರು
ಪೊಲರು
ಪೊಲಮಾಲವರು
ಪೆದ್ದಳ್ಳ ನಾಯಕರು
ಹೆಗಡ
ಪೆದ್ದಮಾಗಲವರು

ಪೋತುಗೂಳ್ಳೇರು

ಪಲೆವರು

ಪದ್ಮಕಾಶೀಲವರು

ಪದ್ಮಕಾಂತರು

ಪಾಲವುರು

ಒಳ್ಳೆಲವರು

ಬಟೀಜೆನಾಥರು

ಬಂಟ್ಲವರು

ಬಂದೇಲವರು

ಬಸವನವರು

ಬಂಟ್ರಮುಲವರು

ಬಾಲನಾಯಕರು

ಬಾರಿ

ಮುಂಡಲೀಕಲವರು

ಬಾಗಮಿಲವರು

ಬಾಚನವರು

ಭೀಷ್ಮ

ಪಂಚಕದವರು

ಬಿಲ್ಲನ

ಸುಳ್ಳೇರು

ಬುಟ್ಟಕಲವರು

ಬುಲ್ಲಡಲವರು

ಬೊಗೋಳ್ಳ

ಬೋಪಿನಾಯಕರು

ಬೊಮ್ಮರಾಜ

ಬುಟಕಲವರು

ಬುಟಗಲವರು

ಬೊಮ್ಮದೇವಡ್ಲನಾಯಕರು

ಬೋಗಿಮರು

ಬಡಸಲವರು

ಬಂಟನವರು

ಮಲ್ಲೇಲವರು

ಮಂದಲವರು

ಮಂದೋರು

ಮಂಡ್ಲೆಯವರು

ಮರಲೆಯವರು

ಮಡಿತೋಡು

ಮಂಡಲವರು

ಮಡಿಪತಿಯರು

ಮಳ್ಳೇಲವರು

ಮಲಿಗೇಲವರು

ಮಾರ್ದೇಲಿಂಗ

ಬುಟುಕರು

ಮಾಗೇಲವರು

ಮಾರೆಪ್ಪ

ಬುಟುಗರು

ಮಷಿಲರು

ಮಾಲಿಗಲವರು

ಮುಚ್ಚಲವರು

ಮುಮ್ಮಿಗಿಳ್ಳು

ಮುಗಲವರು

ಮೇಕಲವರು

ಮಲ್ಲೋರು

ಮಿಲಿಗಲೋರು

ಮಾರ್ಲೆಯವರು

ಯಲಮನವರು

ಯಾಕಲವರು

ಯರಕಾಟನಾಯಕರು

ಯಮ್ಮಾಲವರು

ರಾಜಪುತ್ರರು

ರಂಗಾಶ್ಕರು

ರಾಜಧಾನಿಯವರು

ಬುಡಕಲವರು

ರಾಷಾಂಕನಾಥರು

ರಾಣಿವೇಯವರು

ರೊಮ್ಮಾನವರು

ವೆಂಕಲವರು

ವೆನ್ನಲವರು

ಶಿನಮಾಗುಲವರು

ಮಂಚಿಕಲ್ಲು ಬುಟುಕರು

ಮಿಳ್ಳೇಲವರು

ಮಂಡ್ರಿಗವರು

ಮುದಿಗಂಡ್ಲರು

ಮುದುಗಂಟಲವರು

ಮೊಂಡ್ಲವರು

ಪುವ್ವಲವರು

ಮಂಪಾಲರು

ಮೋದರ್ಲವರು

ಯಮುಡಲವರು

ಪೂವಮೂಡಲವರು

ಯರಬಾಲನಾಯಕರು

ಯಂಡಿಲವರು

ಯಿಡಿತರಪವರು

ರಾಜಬುಟಕಲವರು

ರಾಘುವ

ಪುರುಳಿಯವರು

ರಾಜೀಲವರು

ರಾಯಿಗುಜ್ಜಲವರು

ಲಿಂಗದೇವರು

ವಾಲ್ಮೀಕಿ

ಶೀಲದವರು

ಶಿದ್ದಕಲ್ಲು

ಬುಡುಕರು

ಕಂಕುಲವರು

ಸಹಕೇತುಲವರು

ಸಾಚ್ವಿಕರು

ಸಾಗರಚಕ್ರವರ್ತಿಗಳು

ಸಿಲ್ನಾಲದವರು

ಸೆಲ್ನಾಲದವರು

ಸೂರ್ಯವಂಶದವರು

ಪರಿಬಲ್ಲಾಳರು

ಪೊನ್ನಮೀನಿಗಲವರು

ಪದ್ನಲವರು

ಮೂಡಲವರು

ಮಸಿಬಟ್ಟಲವರು

ಪುರುಳಿಯವರು

ಕೆಟ್ಟಿಲವರು

ಸಮ್ಮಲವರು

ಸಾರ್ಜರು

ಸಾತ್ರಲವರು

ಸಮುದ್ರದವರು

ಸಿನಮದಿಲವರು

ಸೆಟ್ನಿದವರು

ಸ್ಯಾವಂತಲವರು

ಪಿರಿಯಿ ಮಿನಗಲವರು

ಎರ್ರಿಸ್ವಾಮಿ

ಮರುವಲೋರು

ರಾಗೋಜಿಯವರು

ಸೀಮಲರು

೫. ಮ್ಯಾಸ ನಾಯಕರ ಬೆಡಗುಗಳು

ಅಜ್ಜಡ್ಲೋರು

ಗೊಡಗುದಾಸರ

ಕತ್ತಿಯವರು

ಅಜ್ಜದಲ್ಲೋರು

ಗೊಲ್ಲಾಳರು

ಕರಿಬೇವಿನವರು

ಅರಕೋಶರು

ಗೋಪಾಲರು

ಕಶ್ಯಪನವರು

ಕಗ್ಗಲ್ಲರು

ಅಚ್ಚಡಲದವರು

ಗೊಲ್ಲಪ್ಪನವರು

ಕನ್ನೆಲ್ಲರು

ಅಜ್ಜಮುತ್ತಿಯವರು

ಗೋನೂರರು

ಕಲಶದವರು

ಅಲಿಕೇರು

ಗೋಪಾಲಪಾತಕರು

ಅನಂದಲವರು	ಕಾಡು ಚೆಂಚರು
ಗೋವಿನವರು	ಈಗ್ಲಾರು
ಕಾಮಗೇತರು	ಗೋಸಲವರು
ಈರಗಾರವರು	ಕಾವರಿಕರು
ಚನ್ನೆನಾರು	ಈಚಿಯವರು
ಕಿನ್ನರವರು	ಚಿನಗಾಟನಾಯ್ಕರು
ಉದ್ದಲೋರು	ಕಿರಾತಕರು
ಚಿನ್ನಮೊಗಲವರು	ಉರವಲರು
ಕುಂಚಲದವರು	ಜಂಟಿಗೆರು
ಉರಶಿಂಗರು	ಕುಂತಲದವರು
ಜಗ್ಗೇಲವರು	ಉರಶಿಂಗರು
ಕುಂಬಳದವರು	ಜಂಕೇಲವರು
ಎಕ್ಕೆಲೋರು	ಕುರಿಯವರು
ಜಗ್ಗೇಲವರು	ಎತ್ತಿನವರು
ಕುಳಿಂದರು	ಜಂಕೇಲವರು
ಎದ್ದಲೋರು	ಗಂಡ್ಲರು
ಜೋಗಯ್ಯನವರು	ಎನುಮಲರು
ಗಜ್ಜಡ್ಲರು	ತಮಲಮತ್ತೇರು
ಎಮ್ಮೇಲವರು	ಗಜ್ಜಿನಾಯ್ಕರು
ತೊಡಲವರು	ಏಳುಮನೆಯವರು
ಗಡ್ಡದವರು	ದಡ್ಡಿಮುತ್ತಿನಾರು
ಏಳುಬೆಟ್ಟದವರು	ಗಾಡಿಗಿರಿಯವರು
ದಡ್ಡಿಸೂರನಾಯಕರು	ಓತಲವರು
ಗುಂಡೆತ್ಲರು	ದೇವಲರು
ಓಬನಾಯಕರು	ಗುಜಗುಡ್ಲರು
ದೊಡ್ಡೆತಿನವರು	ಓಬಳೆಯವರು

ಗುಜ್ಜಲವರು

ಕಾಕರು

ನಗರಿಮನೆರು

ನಲ್ಲಕ್ಕಿಯವರು

ನಾಗರತಕರು

ಯರಬೊಮ್ಮನವರು

ಬೊಗ್ಗಲೋರು

ನೀರಗಂಟಿಯವರು

ಯರಮಂತಲರು

ಬೋಸೇನಾಯ್ಕರು

ಪರಮೇಶಿಗಲವರು

ಯಾಕಲೋರು

ಮದಗಟ್ಟಿದವರು

ಪಾಮುಡ್ಲವರು

ರಂಗಯಚ್ಚಿಯರು

ಮಲ್ಲೋರು

ಪೆನ್ನಯ್ಯಲೋರು

ರಾಜಧಾನಿಯವರು

ಮಾಚಿಕಲ್ಲು

ರಾಜಬುಟಕಲರು

ಮಾದೇಲಿಂಗನವರು

ಪೊಟ್ಟಪೊಲ್ಲಲೋರು

ರಾಣಿಗಳವರು

ಮಾರೆಮ್ಮಬುಟಕಲರು

ಬಂಗೇರಹಟ್ಟಿಯವರು

ರಾರ ಪೋರರವರು

ದೊರೆಲವರು

ಗೆಜ್ಜಲವರು

ನಲ್ಲಕೇತ್ಲವರು

ನಲ್ಲಬೋದ್ಲವರು

ಬೊಗ್ಗಲೋರು

ನಾಗಪೋರರು

ಯರ್ರಬೋತ್ಲರು

ಬೊಮ್ಮದೇವರು

ಪಟ್ಟಪಲ್ನಾರು

ಯರಮಂಚನಾಯಕರು

ಮಂದಲವರು

ಪೀಪನವರು

ರಂಗಾನಾಥಾರು

ಮಲ್ಲಿನಾಯಕನೋರು

ಪಾಲೋರು

ರಾಜಪುತ್ರರು

ಮಸಿಗೇಲವರು

ಪೆದ್ದನ್ನರು

ಬುಟಕಲರು

ಪೆದ್ದಳ್ಳನಾಯ್ಕರು

ರಾಜ್ಯಂಗದವರು

ಮಾನಗಲವರು

ಪೋತರಾಜಲರು

ರಾಮಂಡಳಾದವರು

ಮಾಸಲೋರು

ಬಂಜಿಗೆರೆಯವರು

ಮೀನಗಲವರು	ಲಸ್ಮೇಲರು
ಬಲ್ಲಾಳವರು	ಮುಚ್ಚಲವರು
ಲಿಂಗದವರು	ಬಲ್ಲೆಡದವರು
ಮುದಿಗೊಡ್ಲರು	ಶಬ್ಬಿಲದವರು
ಬಸವನವರು	ಮೂಡೆಲರು
ಸನ್ನಲವರು	ಬಿಜ್ಜಡ್ಲವರು
ಮೇಕೆಲರು	ಸಮುದ್ರವರು
ಬಿಲ್ಲಿನವರು	ಯಮಡಲವರು
ಸಾರೇಲವರು	ಭಿಲ್ಲಿನಸೂರರ
ಯಮ್ಮೇಲರು	ಸಾಲ್ಯೆಕರು
ಬುಟಕಲವರು	ಯರಗಾನ ನಾಯಕರು
ಸಾಮಂತರು	ಬುಡ್ಡಬೋರನರು
ಯರಗಾಟರು	ಸಿನಮಂಗಲವರು
ಯರಗೊತ್ಲಾರು	ಸಿದ್ದಿಪಲ್ಲು ಬುಡಕಲು
ಯರಪಾಮುಡ್ಲರು	ಯರಬಾಲನಾಯಕರು
ಸೂರ್ಯವಂಶದವರ್ರು	ಸೆಟ್ಟೆಲವರು
ಹಬ್ಬಲವರು	ಹೊರಹೊರಗಿನವರು

(ದೇವರಕುರಿ ಓಬಯ್ಯ ಪಿಎಚ್.ಡಿ. ವಿದ್ಯಾರ್ಥಿ, ಕವಿವಿ, ಹಂಪಿ)

ಇನ್ನು ಹಲವಾರು ರೀತಿಯ ಕುಲ, ಬೆಡಗುಗಳು ಕಂಡುಬರುವವು. ಆದರೆ ಇವುಗಳಲ್ಲಿನ ವಿಶಿಷ್ಟತೆ ಎಂದರೆ ಒಂದೇ ಕುಲ, ಬೆಡಗುಗಳಿಗೆ ಸೇರಿದವರೆಲ್ಲ ಅಣ್ಣ ತಂಗಿ ಇಲ್ಲವೆ ಅಕ್ಕ ತಮ್ಮಂದಿರಂತೆ. ಒಂದೇ ಕುಲ, ಬಳ್ಳಿಯೊಳಗೆ ವೈವಾಹಿಕ ಸಂಬಂಧ ನಿಷಿದ್ದವಿದೆ.

೩.೩. ಮಾತೃಪ್ರಧಾನ ಸಮಾಜ

ಈ ಸ್ವರೂಪದ ಕುಟುಂಬವು ಸಾಮಾಜಿಕ ವ್ಯವಸ್ಥೆಯ ಪ್ರಾಚೀನತೆ, ಅದರ ಇತಿಹಾಸ ಮತ್ತು ಮಹತ್ವಗಳ ಬಗೆಗೆ ಮಾನವಶಾಸ್ತ್ರಜ್ಞರಲ್ಲಿ ಹಲವು ಬಗೆಯ ಚರ್ಚೆ ನಡೆಯುತ್ತಲೇ ಬಂದಿದೆ. "ವಿದ್ವಾಂಸರಾದ ಇ.ಬಿ. ಟೈಲರ್, ಎಲ್.ಎಚ್. ಮಾರ್ಗನ್ ಮೊದಲಾದವರು ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಜಗತ್ತಿನ ಕುಟುಂಬ ವ್ಯವಸ್ಥೆಯ ಮೂಲರೂಪವೆಂದೂ ಅಭಿಪ್ರಾಯಪಡುತ್ತಾರೆ"[೧೫]

ಬುಡಕಟ್ಟು ಸಮಾಜದ ಪ್ರಾಚೀನ ಕುಟುಂಬ ವ್ಯವಸ್ಥೆಯಲ್ಲಿ ಪಿತೃತ್ವದ ಬಗೆಗಿದ್ದ ಅಂದತ್ವದ ಫಲವಾಗಿ ಮಾತೃಪ್ರಧಾನ ಕೌಟುಂಬಿಕ ಸ್ವರೂಪದಲ್ಲಿ ಸಮಾಜವು ರಚನೆಗೊಂಡಿತ್ತು. ಇದರಿಂದ ಮಗು ತಾಯಿಯ ಮೂಲಭೂತ ಒಂದು ಭಾಗವೆಂದು ಭಾವಿಸಿ, ಅದರ ಸರ್ವತೋಮುಖ ಪಾಲನೆ ಪೋಷಣೆಗಳನ್ನು ಆಕೆಯೇ ಮಾಡುವುದರಿಂದ ಮಗುವೂ ತಾಯಿಯದೆಂದೇ ನಂಬಲಾಗುತ್ತಿತ್ತು. ಹೊರತು ಪತಿಯಾದವನು ಈ ಕರ್ತವ್ಯವನ್ನು ನಿರ್ವಹಿಸದೆ ಪತ್ನಿ ಇದ್ದಲ್ಲಿಗೆ ಆಗಾಗ ಬಂದು ಹೋಗುತ್ತಿದ್ದನು.

ಈ ಸಂದರ್ಭದಲ್ಲಿ ಬೇಟೆಗಾರಿಕೆಯು ಜೀವನೋಪಾಯದ ಬಹುಮುಖ್ಯ ಕಸುಬಾಗಿತ್ತು. ಸದಾ ಇದೇ ಪ್ರಕ್ರಿಯೆಯಲ್ಲಿ ತೊಡಗುತ್ತಿದ್ದ ಪುರುಷರು ಬಹುದಿನಗಳವರೆಗೆ ಪ್ರಾಣಿ ಪಕ್ಷಿಗಳನ್ನು ಅರಸಿ, ಅವುಗಳ ಬೆನ್ನು ಹತ್ತಿಹೋಗುತ್ತಿದ್ದರು. ಕೆಲವೊಂದು ಸಂದರ್ಭದಲ್ಲಿ ಅವರೇ ಬೇಟೆಯ ಪ್ರಾಣಿಗಳಿಗೆ ತಮ್ಮ ಪ್ರಾಣ ಅರ್ಪಿಸುತ್ತಿದ್ದುದುಂಟು. ಇಂತಹ ಸಮಯದಲ್ಲಿ ಗುಂಪು ಕುಟುಂಬದ ಪೂರ್ಣ ಹೊಣೆಗಾರಿಕೆ ಗುಹೆ ಮನೆಯಲ್ಲಿ ನೆಲೆಸಿದ್ದ ತಾಯಿಯ ಮೇಲೆ ಬೀಳುತ್ತಿತ್ತು. ಇದರಿಂದಾಗಿ ಸ್ತ್ರೀಗೆ ಪ್ರಾಶಸ್ತ್ಯ ಮತ್ತು ಪ್ರಾಮುಖ್ಯತೆಗಳು ಪ್ರಾಪ್ತವಾಗತೊಡಗಿದ್ದವು. ಮಹಿಳೆ ಕುಟುಂಬದ ಯಜಮಾನಿ ಎಂದು ಪರಿಗಣಿತವಾಗಿ ಕ್ರಮೇಣ ಮಾತೃಪ್ರಧಾನ ಸಮಾಜದ ಕುಟುಂಬ ವ್ಯವಸ್ಥೆ ಜಾರಿಗೆ ಬಂದಿತು.

ಮಾನವನ ತಿಳಿವಳಿಕೆ ತೀಕ್ಷ್ಣವಾಗಿ, ನೆಲೆ ನಿಂತ ಪರಿಸರದಲ್ಲಿ ಪರಿವರ್ತನೆಗೆ ಒಳಪಟ್ಟು ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ, ವ್ಯವಸಾಯದ ಮರ್ಮವರಿತು ಒಂದೆಡೆ ನೆಲಸಿ, ಸಮೂಹ ಜೀವನವನ್ನು ನಡೆಸತೊಡಗಿದನು. ಅಂದಿನಿಂದ ಮಹಿಳೆಯ ಪ್ರಾತಿನಿಧ್ಯ ಕ್ಷೀಣಿಸತೊಡಗಿತು ಎಂದು ಹೇಳಬಹುದು. ಇಡೀ ಉತ್ಪಾದನೆ ಮಾಡುವ ಕೃಷಿಯ ಸಕಲ ಚಟುವಟಿಕೆಗಳು ಹಾಗೂ ಅದರ ಪ್ರತಿಫಲಗಳು ಪುರುಷನ ಸ್ವಾಧೀನವಾದವು ಎಂದು ವಿದ್ವಾಂಸರ ವಿವೇಚನೆಯ ಸಾರ. "ಆದಿಮ ಕಾಲದ ಸಂದರ್ಭದಿಂದಲೂ ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆಯು ಬುಡಕಟ್ಟುಗಳಲ್ಲಿ ಇರುವಂತೆ, ನಾಗರೀಕ ಸಮಾಜದಲ್ಲಿ ಸಹ ಇದು ಕಂಡುಬರುತ್ತದೆ. ಪ್ರಮುಖವಾಗಿ ಬುಡಕಟ್ಟುಗಳಲ್ಲಿ ಭಾರತದ ಖಾಸಿ, ಗಾರೋ ಮೊದಲಾದ ಸಮಾಜದಲ್ಲಿ ಕಂಡುಬರುತ್ತದೆ. ಅದರಂತೆ ನಾಗರೀಕರಾದ ಅಮೆರಿಕೆಯ ರೆಡ್ ಇಂಡಿಯನ್‌ರಾದ ಹೋಪಿ, ಪ್ಯೂಬ್ಲೊ, ಹಿಡಟ್ಸ ಮುಂತಾದವರಲ್ಲಿ ಕಾಣಬಹುದು.'"[5] ಹಾಗೂ ಕರ್ನಾಟಕದ ಬೇಡ ಬುಡಕಟ್ಟು ಸಮುದಾಯದಲ್ಲಿಯೂ ಸಹ ಮೇಲ್ನೋಟಕ್ಕೆ ಪುರುಷ ಪ್ರಧಾನ ಸ್ವರೂಪದ ಕುಟುಂಬ ವ್ಯವಸ್ಥೆ ಕಂಡುಬಂದರೂ, ಆಂತರಿಕವಾಗಿ ಇಡೀ ಕುಟುಂಬದ ಆಗುಹೋಗುಗಳ ಬಗ್ಗೆ ಮೇಲುಸ್ತುವಾರಿ ನೋಡಿಕೊಳ್ಳುವವಳು ಮಹಿಳೆಯೇ ಆಗಿದ್ದಾಳೆ. ಈ ತೆರನಾದ ಪದ್ಧತಿಯನ್ನು ಕುರಿತು ಪ್ರಾಚೀನತೆಯನ್ನು ನೋಡುವುದಾದರೆ ವಿದ್ವಾಂಸರು ಅಭಿಪ್ರಾಯ ಪಟ್ಟಂತೆ "ನಾಗರೀಕತೆಯ ಔನ್ನತ್ಯವನ್ನು ತಲುಪಿದ ಈಜಿಪ್ಟ್‌ನಲ್ಲಿ ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆ ಪ್ರಧಾನವಾಗಿತ್ತು. ಅಂದಿನ ಸಂದರ್ಭದಲ್ಲಿ ಈಜಿಪ್ಟ್‌ನಲ್ಲಿ ಆಡಳಿತವು ರಾಜರಿಗೆ ಸೇರಿದ್ದರೂ

ಅವರನ್ನು ರಾಜರನ್ನಾಗಿಸುವ ಅಧಿಕಾರ, ಅವಕಾಶಗಳು ಸ್ತ್ರೀಯರಿಗೆ ಇದ್ದವು ಎನ್ನುವುದು ಬಹುಮುಖ್ಯವಾಗಿ ಕಂಡುಬರುತ್ತದೆ.''[೧೭]

ಇಂದಿನವರೆಗೂ ಸಾಮಾಜಿಕ ಹಾಗೂ ರಾಜಕೀಯ ವ್ಯವಹಾರಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತಾರೆ. ಅವರು ಆರಾಧನೆ ಮಾಡುವ ದೇವತೆಗಳಲ್ಲಾದರೂ ಸ್ತ್ರೀದೇವತೆಗೆ ಪ್ರಥಮ ಪ್ರಾಶಸ್ತ್ಯ ನೀಡುತ್ತಾರೆ. ಆದರೆ ಭಾರತದಲ್ಲಿ ಸ್ತ್ರೀಗೆ ಉನ್ನತ ಸ್ಥಾನಮಾನಗಳಿದ್ದರೂ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ರೂಢವಾಗಿತ್ತೆನ್ನಲು ಪ್ರಮುಖವಾದ ಆಧಾರಗಳಿಲ್ಲ. ಈ ಕಾರಣದಿಂದ ಇದನ್ನು ಸ್ಪಷ್ಟಪಡಿಸಲು "ನಮಗೆ ಇರುವ ಆಧಾರಗಳು ಎಂದರೆ ಆರಾಧನೆ ಮಾಡುವಂತಹ ದೇವತೆಗಳು ಮಾತ್ರ. ಇವುಗಳನ್ನು ಮುಂದಿಟ್ಟುಕೊಂಡು ಇಂದು ಮಹಿಳೆಯ ಪ್ರಾತಿನಿಧ್ಯವನ್ನು ಹುಡುಕುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ. ಆದಿಮ ಸಮಾಜದ ಮಾನವರು ಮಹಿಳೆಯನ್ನು ಸೃಷ್ಟಿಯ ಸಂಕೇತಗಳಲ್ಲಿ ಮನುಷ್ಯ ಕಂಡುಕೊಂಡಿದ್ದರಿಂದ ಮೆದುಳಿನ ವಿಕಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಇದರಿಂದಲೇ ನಿಸರ್ಗದ ಸೃಷ್ಟಿ ಕ್ರಿಯೆಯ ಗುಣಕ್ಕೂ ಸ್ತ್ರೀಯ ಸೃಷ್ಟಿ ಕ್ರಿಯೆಗೂ ಸಮಾನ ಸಂಬಂಧ ಕಂಡುಕೊಂಡಿದ್ದರಿಂದ ಸಹಜವಾಗಿಯೇ ಮನುಷ್ಯ ವ್ಯಾಪ್ತಿಯನ್ನು ಮೀರಿದ ಶಕ್ತಿಯು ಮಹಿಳೆಯ ಪರ ಜನ್ಮತಾಳಲು ಬಲವಾದ ನಂಬಿಕೆ ಮೂಡಿತು. ಮುಂದುವರೆದು ಹೆಣ್ಣನ್ನು ಸೃಷ್ಟಿಗೆ ಹೋಲಿಸಿ ಅದರ ಶಕ್ತಿಗೆ ಸಮೀಕರಿಸಿದ್ದರಿಂದ ದೈವದ ಕಲ್ಪನೆ ಮೊಳಕೆಯೊಡೆಯಿತು. ಈ ಸಂದರ್ಭದಲ್ಲಿ ಆದಿಮ ಮಾನವರಿಗೆ ಸ್ತ್ರೀಯನ್ನು ಹೊರತುಪಡಿಸಿ ನಿಸರ್ಗದತ್ತವಾದ ವಿಷ್ಮಯಕರವಾದ ಸಂಗತಿಗಳನ್ನು ಸ್ತ್ರೀಯಲ್ಲೇ ಶೋಧಿಸುವುದು ಅನಿವಾರ್ಯವು ಕೂಡ ಆಗಿತ್ತು. ಏಕೆಂದರೆ ಪುರುಷನ ಪ್ರಜ್ಞಾಶಕ್ತಿಯನ್ನು ಸಂಸ್ಕೃತಿಯನ್ನಾಗಿ ಪರಿವರ್ತಿಸುವಂತಹ ಶಾರೀರಿಕ ಹಾಗೂ ಮಾನಸಿಕವಾದ ಎರಡು ಶಕ್ತಿಗಳನ್ನು ಸ್ತ್ರೀಮಾತ್ರವೇ ತನ್ನದಾಗಿಸಿಕೊಂಡಿದ್ದರಿಂದ ಮಾತೃ ಪ್ರಧಾನ್ಯತೆ ಹಾಗೂ ದೈವದ ವಿಕಾಸವು ಅವಳ ಮೂಲಕವೇ ವಿಶಾಲ ರೂಪವನ್ನು ಪಡೆದುಕೊಂಡಿತು.''[೧೮]

ಅರಣ್ಯವಾಸಿ ಬುಡಕಟ್ಟು ಸಮಾಜದಲ್ಲಿ ಮಾತೃಪ್ರಧಾನ್ಯತೆ ಮತ್ತು ದೈವದ ಕಲ್ಪನೆ ಅಥವಾ ಪ್ರಜ್ಞೆ ನಿರ್ದಿಷ್ಟವಾಗಿ ಯಾವ ಹಂತದಲ್ಲಿ ಯಾತಗೋಸ್ಕರ ಉಂಟಾಯಿತು ಎಂದು ನಿರ್ಧಾರ ಮಾಡಲು, ನಮ್ಮ ಮುಂದಿರುವ ಸ್ತ್ರೀನಿಷ್ಟ ಪರವಾದ ಆಚರಣೆಗಳು. ಪುರಾಣಗಳು, ನಂಬಿಕೆಗಳು ಹಲವಾರು ಬಗೆಯ ಜಾನಪದೀಯ ಕಥೆಗಳು ಅನೇಕ ಬಗೆಯ ಸಾಧ್ಯತೆಗಳನ್ನು ತೋರ್ಪಡಿಸುವುದರಿಂದ ನಿರ್ದಿಷ್ಟವಾದ ಅಂತಿಮ ತೀರ್ಮಾನವನ್ನು ಕೊಡಲಾಗದು. ಇದಕ್ಕೆ ಪ್ರಮುಖ ಕಾರಣವೆಂದರೆ ಇಂದಿನವರೆಗೂ ಚರಿತ್ರೆಯನ್ನು ಮಾನವ ಸಮಾಜಕ್ಕೆ ಮಾತ್ರ ನಿಗದಿಪಡಿಸಿವೆ. ಆದರೆ ಮಹಿಳಾ ಪ್ರಾಧಾನ್ಯತೆ ದೈವ ವ್ಯವಸ್ಥೆ ನಿರ್ಮಾಣ ಕುರಿತು ಚಾರಿತ್ರಿಕವಾದ ದಾಖಲೆಗಳು ನೀಡಬಯಸುವುದಿಲ್ಲ. ಈ ಎಲ್ಲ ಕಾರಣ ಅಂಶಗಳಿಂದ ಮಹಿಳಾ ಪ್ರಧಾನ ಸಮಾಜವು ಇದೇ ಕಾಲಘಟ್ಟದಲ್ಲಿ ಪ್ರಾರಂಭ ವಾಯಿತೆಂದು ಹೇಳಲಾಗದು.

ಅಂದಿನ ಕೃಷಿಯ ಆರಂಭಿಕ ಮತ್ತು ಪೂರ್ವ ಮಾತೃಪ್ರಧಾನ ವ್ಯವಸ್ಥೆ ಪರಿಪೂರ್ಣವಾಗುವ ಹಂತದಲ್ಲಿ ತಾಯಿಯೇ ಕುಟುಂಬದ ಒಡತಿಯಾಗಿದ್ದಳು. ಸಕಲ ವಿಷಯದಲ್ಲಿ ಸ್ತ್ರೀಗೆ ವಿಫಲವಾದ ಪ್ರಾಮುಖ್ಯತೆ ಇತ್ತು. ಆಗ ಸಾಮೂಹಿಕ ಲೈಂಗಿಕತೆ ರೂಢಿಯಲ್ಲಿತ್ತು. ಇದರಿಂದಾಗಿ ಜನ್ಮಿಸುವ ಮಕ್ಕಳನ್ನು ಮಹಿಳೆಯ ಮೂಲಕವೇ ಗುರುತಿಸಲಾಗುತ್ತಿತ್ತು. ಪುರುಷ ಬೇಟೆಯಾಡುವ ಕ್ರಿಯೆಯಲ್ಲಿ ತೊಡಗಿದ್ದರಿಂದ ಬೇಟೆಗಾಗಿ ಆತ ಕಾಡುಮೇಡು ಅಲೆಯುವ ಅಲೆಮಾರಿಯಾಗಿದ್ದು, ಬೇಟೆಗೆಂದು ಎಲ್ಲಿಯೋ ಹೋಗಿ ಮತ್ಯಾವಾಗಲೋ ಬರುತ್ತಿದ್ದ. ಒಟ್ಟಿನಲ್ಲಿ ಅವನ ಬರುವಿಕೆ ಕುಟುಂಬದಲ್ಲಿ ಅನಿಶ್ಚಿತೆ ಮೂಢಿಸಿತು. ಹಾಗಾಗಿ ಪುರುಷ ಕೇವಲ ಬಂದು ಹೋಗುವ ಅತಿಥಿಯಾಗಿದ್ದ. ಮಕ್ಕಳ ಲಾಲನೆ ಪಾಲನೆ, ಪೋಷಣೆಯ ಹೊಣೆಗಾರಿಕೆ ಮಹಿಳೆಯ ಮೇಲೆಯೇ ಇರುತ್ತಿತ್ತು. ಇದರ ಜೊತೆಗೆ ಆಹಾರ ಸಂಗ್ರಹಿಸುವಲ್ಲಿ ಮತ್ತು ಆಹಾರ ಶೇಖರಣೆ ಶುದ್ಧೀಕರಿಸುವಲ್ಲಿ ಮಹಿಳೆ ಪಾಲ್ಗೊಳ್ಳುತ್ತಿದ್ದಳು. ಈ ಕಾರಣದಿಂದ ಕುಟುಂಬ ಆಹಾರ ಪೂರೈಕೆಯಲ್ಲಿ ಮಹಿಳೆಯು ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಳು ಎಂದು ತಿಳಿದುಬರುತ್ತದೆ.

ಇದರ ತಾತ್ಪರ್ಯವೆಂದರೆ ಪುರುಷ ಬೇಟೆಯಿಂದ ತಂದ ಮಾಂಸ ತಾತ್ಕಾಲಿಕ ಹಸಿವು ನೀಗಿಸುತ್ತಿತ್ತು. ಆದರೆ ಮಹಿಳೆಯಿಂದ ಸಂಗ್ರಹಿಸಲ್ಪಟ್ಟ ಆಹಾರ ಪದಾರ್ಥಗಳಾದ ಗೆಡ್ಡೆ-ಗೆಣಸುಗಳು ಬಹುಕಾಲದವರೆಗೆ ಇರುತ್ತಿದ್ದರಿಂದ ಅವರ ಹಸಿವು ನೀಗಿಸುವಲ್ಲಿ ಹೆಚ್ಚು ಅನುಕೂಲಕರವಾಗಿತ್ತು. ಅಲ್ಲದೇ ಅಂದಿನ ಸಂದರ್ಭದ ಉತ್ಪಾದನಾ ವಿಧಾನ ಅತ್ಯಲ್ಪವಾಗಿರುತ್ತಿದ್ದರಿಂದ ಅದನ್ನು ಶ್ರಮವಹಿಸಿ ಅಗತ್ಯಾನುಸಾರ ಹಂಚುವ ಕೆಲಸವು ಮಹಿಳೆಯದೇ ಆಗಿರುತ್ತದೆ ಎಂದು ಡಿ.ಡಿ. ಕೋಸಂಬಿಯವರು ಅಭಿಪ್ರಾಯ ಪಟ್ಟಿದ್ದಾರೆ. ಆಗ ಉತ್ಪಾದಿಸಿದ್ದೆಲ್ಲವೂ ನೇರವಾಗಿ ಬಳಕೆಯಾಗುತ್ತಿದ್ದರಿಂದ ಕೊಡುವ ತೆಗೆದುಕೊಳ್ಳುವ ಪ್ರಶ್ನೆಯೇ ಇರಲಿಲ್ಲ. ಹಾಗಾಗಿ ಉತ್ಪಾದಿಸಿದ ತನ್ನ ಉತ್ಪಾದನೆಯ ಮೇಲೆ ಆಗ ಮಹಿಳೆಗೆ ಸಂಪೂರ್ಣವಾದ ಹಿಡಿತವಿತ್ತು. ಇಂತಹ ಹಲವಾರು ಸ್ವಂತಿಕೆಯಿಂದ ಮಾತೃಪ್ರಧಾನ ಸಮಾಜದಲ್ಲಿ ಭಾಜನವಾಗಿದ್ದಳು.

ಇಂದು ಭಾರತೀಯ ಸಂಸ್ಕೃತಿ ಸಮಾಜದಲ್ಲಿ ಮಾತೃಮೂಲ ಕುಟುಂಬಗಳು ಬಹುಮಟ್ಟಿಗೆ ಕಣ್ಮರೆಯಾಗುತ್ತಿವೆ ಎನ್ನುವಂತಹ ವಿಚಾರವು ನಿಜವಾದರೂ ಸಾಂಸ್ಕೃತಿಕ ಮತ್ತು ಸಾಂಕೇತಿಕ ಕ್ಷೇತ್ರಗಳಲ್ಲಿ ಮಾತ್ರ ಇಂದು ಅವು ಸಮೃದ್ಧವಾಗಿಯೇ ಇವೆ. ಅದರಲ್ಲಿ "ಕೆಳಜಾತಿ ಮತ್ತು ಆದಿವಾಸಿ ವರ್ಗಗಳಲ್ಲಿ ಸಾಂಕೇತಿಕ ಮತ್ತು ಸಾಮಾಜಿಕ ಜಗತ್ತಿನಲ್ಲಿ ಅನೇಕ ಸ್ತರಗಳಲ್ಲಿ ಶಕ್ತಿಶಾಲಿಗಳಾಗಿವೆ"[7] ಎಂದು ನಾಗರಾಜ್ ಅವರು ಹೇಳುತ್ತಾರೆ. ಅದರ ಜೊತೆಗೆ ಬಹುಸಂಖ್ಯಾತ ವಿದ್ವಾಂಸರು ಬುಡಕಟ್ಟು ಮಹಿಳೆಯರನ್ನು ಸರ್ವಸ್ವತಂತ್ರರು ಶೋಷಣೆ ರಹಿತರು ಎಂದೇ ಅರ್ಥೈಸುತ್ತಾರೆ. ಮಹಿಳೆಯರನ್ನು ಸ್ಥೂಲವಾಗಿ ಎರಡು ನೆಲೆಗಳಲ್ಲಿ ವಿಂಗಡಿಸಿಕೊಳ್ಳಬಹುದು. ಒಂದು ಪೌರ ಸಮಾಜದ ಹೊರಗಿದ್ದವರು. ಎರಡು ಪೌರ ಸಮಾಜದ ಒಳಗಿದ್ದವರು. ಪೌರ ಸಮಾಜದ

ಹೊರಗಿರುವ ಮಹಿಳೆಯರು ಬುಡಕಟ್ಟು ಮಹಿಳೆಯಾಗಿರುವರು. ಬುಡಕಟ್ಟು ಮಹಿಳೆಯರನ್ನು ಕೂಡ ಏಕ ಘಟಕವಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಭಿನ್ನ ಭಿನ್ನ ಬುಡಕಟ್ಟು ಸಮಾಜಗಳಿಗೆ ಅನುಗುಣವಾಗಿ ಆಯಾ ಬುಡಕಟ್ಟು ಮಹಿಳೆಯರ ಶೋಷಣಾ ಸಂರಚನೆಯ ಸ್ವರೂಪವೂ ಕೂಡ ಭಿನ್ನವಾಗಿರುತ್ತದೆ. ಪೌರ ಸಮಾಜದ ಒಳಗಿರುವ ಮಹಿಳೆಯರು ವರ್ಣ, ಜಾತಿ ಮತ್ತು ವರ್ಗ ಹೀಗೆ ಅನೇಕ ಸ್ತರಗಳಲ್ಲಿ ಹಂಚಿಹೋಗಿದ್ದು ಈ ಎಲ್ಲಾ ಮಹಿಳೆಯರ ನಡುವೆ ಅಪಾರವಾದ ಕಂದಕಗಳಿವೆ. ಬುಡಕಟ್ಟು ಸಮಾಜಗಳು ಪೌರ ಸಮಾಜದ ಹೊರಗಿದ್ದರೂ, ಪೌರ ಸಮಾಜದ ಜೊತೆ ಯಾವ ಸಂಬಂಧ ಹಾಗೂ ಸಂಪರ್ಕವನ್ನು ಇಟ್ಟುಕೊಂಡಿಲ್ಲ ಎಂದು ಹೇಳಲಾಗುವುದಿಲ್ಲ. ಅನೇಕ ಬುಡಕಟ್ಟು ಸಮುದಾಯಗಳು ಪೌರ ಸಮಾಜದ ಒಳಗಡೆ ಬಂದು ಸೇರಿಕೊಂಡಿವೆ. ಪೌರ ಸಮಾಜದ ಹೊರಗಿರುವ ಬುಡಕಟ್ಟು ಸಮುದಾಯಗಳಾಗಿರಬಹುದು, ಪೌರ ಸಮುದಾಯದ ಒಳಗಿರುವ ಬುಡಕಟ್ಟು ಸಮುದಾಯಗಳಿರಬಹುದು. ಇವುಗಳು ತಮ್ಮ ಸಮುದಾಯದ ಮಹಿಳೆಯರನ್ನು ಹೇಗೆ ನಡೆಸಿಕೊಂಡಿವೆ. ಬುಡಕಟ್ಟು ಮಹಿಳೆ ಕುರಿತು ಪೌರಸಮಾಜವು ಯಾವ ಯಾವ ಗ್ರಹಿಕೆಗಳನ್ನು ಇಟ್ಟುಕೊಂಡಿದೆ. ಇದು ಬುಡಕಟ್ಟು ಮಹಿಳಾ ಜೀವನದ ಮೇಲೆ ಯಾವ ಯಾವ ರೀತಿಯ ಪರಿಣಾಮವನ್ನು ಉಂಟುಮಾಡಿದೆ ಎನ್ನುವುದು ಮೊದಲು ನೋಡಬೇಕಾಗಿದೆ.

೧. ಪುರಷರ ಗ್ರಹಿಕೆಗಳು ಮತ್ತು ಬುಡಕಟ್ಟು ಮಹಿಳೆ

ಇಂದಿನ ಪುರಷ ಪ್ರಧಾನ ಸಮಾಜದಲ್ಲಿ ಹಾಗೂ ಹಿಂದೆ ಗತಿಸಿದ ಸಂಗತಿಗಳನ್ನು ಒಳಗೊಂಡು ನೋಡಿದಾಗ ಮೇಲ್ಜಾತಿ ಮತ್ತು ಮೇಲ್ವರ್ಗ ಸಮಾಜದವರು ಬುಡಕಟ್ಟು ಮತ್ತು ತಳಸಮುದಾಯದವರನ್ನು ತಮ್ಮ ಸ್ವಂತಕ್ಕಾಗಿಯೇ ಉಪಯೋಗಿಸಿಕೊಂಡಿದ್ದಾರೆ. ಇದರಿಂದಾಗಿ ಶೂದ್ರ, ದಲಿತ ಹಾಗೂ ಬುಡಕಟ್ಟು ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕ ಶ್ರೇಣೀಕರಣದ ಹಿನ್ನೆಲೆಯಲ್ಲಿ ದೈಹಿಕ ಶೋಷಣೆಯ ಜೊತೆಗೆ ಲೈಂಗಿಕ ಕಿರುಕುಳಕ್ಕೂ ಒಳಗಾಗಿದ್ದಾರೆ. ಇಂತಹವುಗಳನ್ನು ದೃಢಪಡಿಸಿಕೊಳ್ಳಲು ನಮ್ಮುಂದೆಯಿರುವಂತಹ "ಜನಪದ ಕಥನ-ಕಾವ್ಯಗಳನ್ನು ನೋಡಬಹುದು. ಉದಾ 'ಬೆಟ್ಟದ ಚಾಮುಂಡಿ' ಮತ್ತು 'ಗಂಗೀ ಗೌರಿ' ಹಾಡು ಎನ್ನುವ ಕಥನ ಗೀತೆಗಳನ್ನು ಆಯ್ದುಕೊಳ್ಳಲಾಗಿದೆ. ಈ ಎರಡು ಕಥನ ಗೀತೆಗಳ ಆರಂಭದ ಭಾಗಗಳನ್ನು ಮಾತ್ರ ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದೆ. ಬೆಟ್ಟದ ಚಾಮುಂಡಿ ಆರಂಭದ ಕಥನ ಸಾರಾಂಶ ಹೀಗಿವೆ" ಬೇಟೆಯಾಡಿ ಬಂದ ಚಾಮುಂಡಿ ತನ್ನ ರಕ್ತಸಿಕ್ತವಾದ ದೇಹವನ್ನು ತೊಳೆದುಕೊಳ್ಳಲು ಹೊಳೆಯಲ್ಲಿ ಇಳಿಯುತ್ತಾಳೆ. ಸ್ನಾನ ಮಾಡಿದ ಚಾಮುಂಡಿ ತನ್ನ ತಲೆಗೂದಲನ್ನು ಬಿಸಿಲಿಗೆ ಒಡ್ಡಿಕೊಳ್ಳಲು ಕುಳಿತಿರುತ್ತಾಳೆ. ಆಗ ಬಂದ ನಂಜುಂಡನು ಅವಳನ್ನು ನೋಡಿ ಮೋಹಗೊಳ್ಳುತ್ತಾನೆ. ಅದಕ್ಕಾಗಿ ಅವನು ಚಾಮುಂಡಿಗೆ ತನ್ನನ್ನು ಕೂಡುವಂತೆ ಒತ್ತಾಯಿಸುತ್ತಾನೆ. ಅದಕ್ಕವಳು ತಿರಸ್ಕರಿಸುತ್ತಾಳೆ. ಮತ್ತೆ ಮತ್ತೆ ನಂಜುಂಡನು ಒತ್ತಾಯಿಸಿದಾಗ ತಂದೆ-ತಾಯಿ ಇಲ್ಲದ ಚಾಮುಂಡಿ ಅವನ ಒತ್ತಾಯಕ್ಕೆ ಮಣಿಯುತ್ತಾಳೆ."[೨೦]

ಇದೇ ಹಿನ್ನೆಲೆಯಲ್ಲಿ "ಗಂಗೀ ಗೌರಿ ಕಥನ ಗಂಗಿನ ತರಬೇಕಂತ ನಂದಿ ಜೊತೆ ಶೃಂಗಾರ ಮಾಡಿಕೊಂಡು ಶಿವನು ಹೊರಡುತ್ತಾನೆ. ಹಳ್ಳದ ದಂಡಿಗೆ ಹೂವೂ ತೊಟ್ಟು, ನಿಂತ ಗಂಗೆಯನ್ನು ತನ್ನ ಜೊತೆ ಬಲಲು ಶಿವನು ಒತ್ತಾಯಿಸುತ್ತಾನೆ. ಅದಕ್ಕವಳು "ನಮ್ಮವ್ವ ನಮಗ ಬೈದಾಳ, ನಮ್ಮಪ್ಪ ನಮಗ ಬಡದಾನ" ಎಂದೂ ಹೇಳಿದರೂ "ನಿಮ್ಮವ್ವ ಬೈದರ, ನಿಮ್ಮಪ್ಪ ಬಡಿದರ ಬೇಗ ಬಾ ಗಂಗಾ ಜಡಿಯಾಗ" ಎನ್ನುತ್ತಾನೆ. ತನಗೆ ಹೆಂಡತಿಯಿಲ್ಲ ಎಂದು ಸುಳ್ಳು ಹೇಳಿ ಗಂಗೆಯನ್ನು ಶಿವನು ಕರೆದುಕೊಂಡು ಹೋಗುತ್ತಾನೆ. ಸುಮ್ಮನೆ ಕುಳಿತುಕೊಂಡಿದ್ದ ಚಾಮುಂಡಿಯ ಹತ್ತಿರ ಮೇಲ್ಜಾತಿಯ ನಂಜುಂಡ "ಗಡ ಗಡನೆ ಓಡಿ ಬಂದು, ಮುತ್ತಿನ ಮುನ್ಸೆರಗ ಹಿಡಿದು ತನ್ನನ್ನು ಕೂಡಿ ಬಾಳುವಂತೆ ಒತ್ತಾಯಿಸುತ್ತಾನೆ. ಹೂ ಕುಯ್ಯುತಾ ನಿಂತ ಬೆಸ್ತರ ಹುಡುಗಿ ಗಂಗೆಯನ್ನು ತನ್ನ ಜೊತೆ ಬರುವಂತೆ ಶಿವನು ಒತ್ತಾಯಿಸುವನು. ತನಗೂ ಕುಟುಂಬದವರು ಇದ್ದಾರೆ ಎನ್ನುವುದನ್ನು "ನಮ್ಮವ್ವ ಬೈದಾಳ, ನಮ್ಮಪ್ಪ ನಮಗ ಬಡಿದಾನ" ಎಂದು ಹೇಳಿದರು. "ನಿಮ್ಮಪ್ಪ ಬೈದರ, ನಿಮ್ಮಪ್ಪ ಬಡಿದರ ಬೇಗ ಬಾ ಗಂಗ ಜಡಿಯಾಗ" ಎಂದು ಒತ್ತಾಯಿಸುವನು. ಮೇಲ್ವರ್ಣ ಮೇಲ್ಜಾತಿ ಮತ್ತು ಮೇಲ್ವರ್ಗದ ಪುರುಷರು ತಳಸಮುದಾಯದ ಮಹಿಳೆಯರನ್ನು ಮತ್ತು ಬುಡಕಟ್ಟು ಮಹಿಳೆಯರನ್ನು ಲೈಂಗಿಕ ಕ್ರಿಯೆಗೆ ಒತ್ತಾಯಿಸುವುದು ಅವರ ಒತ್ತಡಕ್ಕೆ ಅಸಹಾಯಕತೆಯಿಂದ ತಳಸಮುದಾಯದ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ತಲೆಬಾಗುವುದು ಇಂತಹ ಚಿತ್ರಣಗಳು ಜನಪದ ಮತ್ತು ಬುಡಕಟ್ಟು ಕಾವ್ಯಗಳಲ್ಲಿ, ಕಥೆಗಳಲ್ಲಿ ಹೇರಳವಾಗಿ ದೊರೆಯುತ್ತವೆ.[೨೧] ಇಂತಹ ಉದಾಹರಣೆಗಳು ಮೇಲ್ಜಾತಿ ಮತ್ತು ಮೇಲ್ವರ್ಗದ ಪುರುಷರು ಶೂದ್ರ, ದಲಿತ ಮತ್ತು ಬುಡಕಟ್ಟು ಮಹಿಳೆಯರ ಮೇಲೆ ನಡೆಸಿದ ಲೈಂಗಿಕ ದೌರ್ಜನ್ಯವನ್ನು ಸಾಬೀತುಪಡಿಸುತ್ತದೆ. ಹಾಗೆಯೇ ಇಂತಹ ಕಥನಗಳನ್ನು ಹಾಡುವ ಮತ್ತು ಕೇಳುವ ತಳಸಮುದಾಯಗಳಲ್ಲಿನ ಸ್ತ್ರೀ-ಪುರುಷರು ಹಾಗೂ ಬುಡಕಟ್ಟು ಸಮುದಾಯಗಳಲ್ಲಿನ ಸ್ತ್ರೀ-ಪುರುಷರಿಬ್ಬರ ಪ್ರತಿರೋಧದ ಶಕ್ತಿಯನ್ನು ಹತ್ತಿಕ್ಕುತ್ತಿರುತ್ತದೆ.

ವರ್ಣ ಆಧಾರಿತ, ಜಾತ್ಯಾಧಾರಿತ, ವರ್ಗಾಧಾರಿತ ಮತ್ತು ಲಿಂಗಾಧಾರಿತ ಶ್ರೇಣೀಕರಣಗಳು, ತಳಸಮುದಾಯಗಳು ಮತ್ತು ಬುಡಕಟ್ಟು ಸಮುದಾಯಗಳಲ್ಲಿನ ಸ್ತ್ರೀ ಪುರುಷರಲ್ಲಿನ ಪರ್ಯಾಯ ವ್ಯವಸ್ಥೆಗಳನ್ನು ನಿರ್ಮಿಸಿಕೊಳ್ಳಲು ಇವರ ಆತ್ಮವಿಶ್ವಾಸವನ್ನು ಚಿವುಟಿ ಹಾಕುತ್ತಿರುತ್ತದೆ. ಅವರಿಗೆ "ತಾವು ಸದಾ ಪರಾಧೀನರು, ಸ್ವಾತಂತ್ರ್ಯ ಹೀನರು ಮತ್ತು ಉಳ್ಳವರ ಬಯಕೆಗಳಿಗೆ ತೆತ್ತುಕೊಳ್ಳಲು ಹುಟ್ಟಿದವರು ಎನ್ನುವ ಭಾವನೆಗಳನ್ನು ಸೃಷ್ಟಿಸುತ್ತಿರುತ್ತವೆ"[೨೨]. ಇದರಿಂದಾಗಿ ತಳಸಮುದಾಯದವರಲ್ಲಿ ಮತ್ತು ಬುಡಕಟ್ಟು ಸಮುದಾಯದವರಲ್ಲಿ ಪ್ರಚಲಿತವಿರುವ ಕಥೆಗಳು, ಕಾವ್ಯಗಳು ತಳಸಮುದಾಯದ ಮಹಿಳೆಯರು ಮತ್ತು ಬುಡಕಟ್ಟು ಸಮುದಾಯದ ಮಹಿಳೆಯರ ಮೇಲೆ ಮೇಲ್ಜಾತಿ, ಮೇಲ್ವರ್ಗದವರು ನಡೆಸಿದ ಲೈಂಗಿಕ ದೌರ್ಜನ್ಯವನ್ನು ಸಾಬೀತುಪಡಿಸುವಂತೆ, ಮೇಲ್ಜಾತಿ, ಮೇಲ್ವರ್ಗದವರ ಕುರಿತು ಸದಾ ಭಯವನ್ನು ಸೃಷ್ಟಿಸುತ್ತಿರುತ್ತವೆ. ಮೇಲ್ಜಾತಿ, ಮೇಲ್ವರ್ಗದವರು ನಡೆಸುವ ಶೋಷಣೆ ಮತ್ತು

ತಳಸಮುದಾಯಗಳು ಹಾಗೂ ಬುಡಕಟ್ಟು ಸಮುದಾಯಗಳಲ್ಲಿರುವ ಮೇಲ್ಜಾತಿ, ಮೇಲ್ವರ್ಗದವರ ಕುರಿತು ಇರುವ ಭಯ, ಈ ಎರಡು ಸಂಗತಿಗಳಲ್ಲಿ ಹೆಚ್ಚು ಪ್ರಬಲವಾಗಿ ಕಾರ್ಯಸಾಧಿಸುವುದು ಎರಡನೆಯದು. ಯಾಕೆಂದರೆ ಮೇಲ್ಜಾತಿ, ಮೇಲ್ವರ್ಗದ ಪುರುಷರೇ ಸಾಮಾಜಿಕ ಕಾನೂನುಗಳನ್ನು ಸೃಷ್ಟಿಸುವರು ಮತ್ತು ಸೃಷ್ಟಿಸಿದ ಕಾನೂನುಗಳನ್ನು ಆಳುವವರೂ ಆಗಿರುತ್ತಾರೆ. ಆದ್ದರಿಂದ ಶೋಷಣೆಯ ಸಂರಚನೆಯನ್ನು ಅರ್ಥೈಸಿಕೊಂಡು ಶೋಷಕರನ್ನು ಗುರುತಿಸಿ ಜಾತಿ ಶ್ರೇಣೀಕೃತ ಮತ್ತು ವರ್ಗಶ್ರೇಣೀಕೃತ ಸಮಾಜದಲ್ಲಿ ಹೇಗೆ ಶೋಷಣೆಗೆ ಒಳಗು ಮಾಡಲಾಗುತ್ತಿದೆ ಎಂಬುದನ್ನು ತಿಳಿಯುವುದು ಕಠಿಣ. ಇಂಥ ಕ್ಲಿಷ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕಿರುವ ಮತ್ತು ಇಂಥ ಸಮಾಜದೊಂದಿಗೆ ಸಂಪರ್ಕ ಇಟ್ಟುಕೊಂಡ ತಸಮುದಾಯಗಳು ಮತ್ತು ಬುಡಕಟ್ಟು ಸಮುದಾಯಗಳು ಹೇಳುವ ಕಾವ್ಯಗಳಲ್ಲಿನ ವಸ್ತು, ವಿಷಯ, ಮೇಲ್ಜಾತಿ, ಮೇಲ್ವರ್ಗದ ಸಮಾಜದ ಕುರಿತು ಆಳವಾದ ಭಯವನ್ನು ಸೃಷ್ಟಿಸುತ್ತ ಅದನ್ನೇ ಜೀವಂತವಾಗಿಸುತ್ತದೆ.

"ಇಂತಹ ಒತ್ತಡಗಳಿಗೆ ಅಂದರೆ ಮೇಲ್ಜಾತಿ ಮತ್ತು ಮೇಲ್ವರ್ಗದವರು ನೀತಿ-ನಿಯಮಗಳ ಹೆಸರಿನಲ್ಲಿಯೇ ತಮ್ಮನ್ನು ಲೈಂಗಿಕ ಶೋಷಣೆಗೆ ಒಳಪಡಿಸಿದ ಪ್ರಕ್ರಿಯೆಗೆ ತಳಸಮುದಾಯದವರು, ಬುಡಕಟ್ಟು ಸಮುದಾಯದವರು ಹೇಗೆ ಪ್ರತಿಕ್ರಿಯಿಸಿದ್ದಾರೆ. ಈ ತೆರನಾದ ಪ್ರಕ್ರಿಯೆಗಳಿಗೆ ಪ್ರತಿ ತಂತ್ರಗಳನ್ನು ಹೆಣೆದು ತಮ್ಮನ್ನು ತಾವು ಕಾಪಾಡಿಕೊಂಡ ಉದಾಹರಣೆಗಳು ಜನಪದ ಮತ್ತು ಬುಡಕಟ್ಟು ಸಾಹಿತ್ಯದಲ್ಲೇನಾದರೂ ದೊರೆಯುತ್ತವೆ. ಯಾವ ಪ್ರತಿರೋಧ ಇಲ್ಲವೆ. ಪ್ರತಿ ತಂತ್ರಗಳ ಮೂಲಕ ಮಹಿಳೆಯೊಬ್ಬಳೇ ತನ್ನ ಅಸ್ತಿತ್ವವನ್ನು ತಾನೇ ಕಾಪಾಡಿಕೊಳ್ಳುವ, ತನ್ನ ಬದುಕಿಗೆ ತಾನೇ ನಂಬುಗೆಯನ್ನು ತಂದುಕೊಳ್ಳುವ ಇಂತಹ ಕಥನಗಳನ್ನು ಹೇಗೆ ಅರ್ಥೈಸಬೇಕಿದೆ. ಇಂತಹ ಹಲವು ಸಂಗತಿಗಳನ್ನು ಒಳಗೊಂಡ ಸೂಕ್ತ ಜಿಜ್ಞಾಸೆ ನಡೆಸಬೇಕಿದೆ. "ಕೂರಾತಿ ಕಂಚಿಯ ಕತೆ"ಯನ್ನು ಈ ವಿಷಯದ ಹಿನ್ನೆಲೆಯಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಈ ಕಥೆಯ ಸಂಕ್ಷಿಪ್ತ ರೂಪ ಹೀಗಿದೆ. ಕೂರಾತಿ ಕಂಚಿಯೂ ಸೌದೆ ತರಲು ಗುಡ್ಡದಾಚೆಗೆ ಹೋಗಿರುತ್ತಾಳೆ. ಇವಳು ಇರುವಲ್ಲಿಗೆ ನಾರಾಯಣ ಸ್ವಾಮಿ ಬಂದು ಕೂರಾತಿ ಕಂಚಿಯನ್ನು ಲೈಂಗಿಕತೆಗೆ ಒತ್ತಾಯಿಸುತ್ತಾನೆ. ಈ ಸಂದರ್ಭದಲ್ಲಿ "ನಾನು ಕೂರಾತಿ ಕಂಚಿ ಹೀಗಾಗಿ ನೀವು ನನ್ನನ್ನು ಮುಟ್ಟಲಾಗುವುದಿಲ್ಲ" ಎಂದು ಉಗ್ರವಾಗಿ ಹೇಳುತ್ತಾಳೆ. ಆದರೂ ಸಹ ಲೈಂಗಿಕ ಸಂಬಂಧಕ್ಕೆ ಒತ್ತಾಯಿಸಿದಾಗ "ಗಂಡನಿಗೆ ಗಂಜಿ ಹಾಕಿ ಬರುತ್ತೇನೆ" ಎಂಬ ನಯವಾದ ಉಪಾಯ ಹೇಳುತ್ತಾಳೆ. ಇವಳ ಮಾತಿಗೆ ಪ್ರತಿಯಾಗಿ "ನೀನು ಬರುತ್ತೀಯ ಇಲ್ಲವೋ ಎನ್ನುವುದೇ ಭರವಸೆ ಇಲ್ಲ" ಎಂದು ಸ್ವಾಮಿ ಕೇಳಿದಾಗ ಕೂರಾತಿಕಂಚಿ ಸ್ವಾಮಿಯಿಂದ ಮುದ್ರೆ ಉಂಗುರ ಪಡೆದುಕೊಂಡು ಮರಳಿ ಬರುತ್ತೇನೆ ಎನ್ನುತ್ತಾಳೆ. ಹೀಗೆ ಕೂರಾತಿ ಕಂಚಿಯು ನೇರವಾಗಿ ಸ್ವಾಮಿ ಹೆಂಡತಿ ಹತ್ತಿರ ಬಂದು ತನ್ನೆಲ್ಲ ಉಡುಪು ತೊಡಪುಗಳನ್ನು ಹಾಕಿಸಿ, ಅವಳ ಕೈಯಲ್ಲಿ ಮುದ್ರೆ ಉಂಗುರ ಕೊಟ್ಟು ನಾರಾಯಣ ಸ್ವಾಮಿ ಇರುವ ಗುಡ್ಡದಾಚೆಯ ಸ್ಥಳಕ್ಕೆ ಕಳುಹಿಸುವಳು. ಮುದ್ರೆ ಉಂಗುರವನ್ನು ನೀಡಿದ "ಮಾಹಲಕ್ಷ್ಮಿ ಅಮ್ಮನರ"ನ್ನು ಕೂರಾತಿ ಕಂಚಿ ಎಂದು ಭಾವಿಸಿದ ಸ್ವಾಮಿ ಅವಳನ್ನು ಕೂಡುವನು.

ಇದರಲ್ಲಿ ಗಮನಿಸಬೇಕಾದ ವಿಷಯವೆಂದರೆ ನಾರಾಯಣ ಸ್ವಾಮಿ ಆಹ್ವಾನಿಸಿದ ಕೂರಾತಿ ಕಂಚಿಯು ವಿವಾಹಿತೆಯಾಗಿದ್ದುದು, ನಂಜುಂಡ ಆಹ್ವಾನಿಸಿ ಚಾಮುಂಡಿಯು, ಶಿವನು ಆಹ್ವಾನಿಸಿದ ಗಂಗೆ ಇವರು ಅವಿವಾಹಿತರಾಗಿದ್ದುದು. "ನನ್ನ ಕೂರ್ಲ್ ಬಪ್ ಹೊತ್ತಾಯ್ತ್ ಅನಿಗೆ ಗಂಜಿ ಹಾಕಿ ಒತ್ತೆ" ಎಂದು ಪರೋಕ್ಷವಾಗಿ ಕೂರಾತಿ ಕಂಚಿಯು ತಾನು ವಿವಾಹಿತೆ, ತನಗೊಬ್ಬ ಪುರುಷನಿರುವ ವಿಷಯವನ್ನು ನಯವಾಗಿ ಹೇಳುವಳು. ಆದರೆ ಇದರಲ್ಲಿ ಮೇಲ್ಜಾತಿ, ಮೇಲ್ವರ್ಗ, ಮಧ್ಯಮಜಾತಿ, ಮಧ್ಯಮವರ್ಗದ ಸ್ತ್ರೀಯರಿಗೆ ವೈವಾಹಿಕ ಸಂಬಂಧವು ಪರಪುರುಷರ ಕಾಮುಕ ದೃಷ್ಟಿಯಿಂದ ರಕ್ಷಿಸುತ್ತದೆ. ಇದೇ ಮಹಿಳೆಯರಿಗೆ ಒದಗಿಸಿಕೊಡುವುದಿಲ್ಲ ಎನ್ನುವುದಕ್ಕೆ ಸ್ವಾಮಿ ಮತ್ತು ಕೂರಾತಿ ಕಂಚಿಯನ್ನು ಲೈಂಗಿಕ ಸಂಬಂಧಕ್ಕೆ ಆಹ್ವಾನಿಸಿದ ಪ್ರಸಂಗವೇ ಸಾಕ್ಷಿಯಾಗಿ ನಿಲ್ಲುತ್ತದೆ. ಇನ್ನೊಂದು ಇಲ್ಲಿ ಗಮನಿಸಬೇಕಾದುದೇನೆಂದರೆ ನಾರಾಯಣ ಸ್ವಾಮಿ ತನ್ನನ್ನು ಕಾಮಕ್ಕೆ ಆಹ್ವಾನಿಸಿದ ಸಂಗತಿಯನ್ನು ಕೂರಾತಿ ಕಂಚಿಯು ಗಂಡನ ಗಮನಕ್ಕೆ ತರದೇ ಇರುವುದು. ಅದು ಅವಳಿಗೆ ಅಗತ್ಯವೆನಿಸುವುದೇ ಇಲ್ಲ. ಒಂದು ವೇಳೆ ಕೂರಾತಿ ಕಂಚಿಯು ವಿಷಯವನ್ನು ಗಂಡನ ಗಮನಕ್ಕೆ ತಂದರೂ ಸಹ ತಾನು ಎದುರಿಸಬೇಕಾದ ಸಂದರ್ಭದಲ್ಲಿ ವ್ಯತ್ಯಾಸವೇನೂ ಆಗುತ್ತಿರಲಿಲ್ಲ. ಇದರಲ್ಲಿ ಮೇಲಾಗಿ ಸ್ವಾಮಿಯ ಹೆಂಡ್ತಿ ಕಂಚಿಯ ಸಂಕಟಕ್ಕೆ ಸ್ಪಂದಿಸಿದ್ದು. ಜಾತಿ-ಜಾತಿಗಳ ಹೆಸರಿನಲ್ಲಿ ಸೃಷ್ಟಿಸಿದಂತಹ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿರುವ ಮೇಲ್ವರ್ಣಕ್ಕೆ ಸೇರಿದ ಮಹಿಳೆಯೊಬ್ಬಳು ಆದಿವಾಸಿ ಮಹಿಳೆಯ ಜೊತೆ ಮಾತನಾಡುವುದೇ ಕಷ್ಟಕರವಾದುದಾಗಿದೆ. ಇಂತಹ ವ್ಯವಸ್ಥೆಯೊಳಗೆ ಅನುಸರಿಸಿದ ಕ್ರಮವು ಮಹಾಕ್ರಾಂತಿಯೇ ಸರಿ."[೨೩]

೩.೪. ಮುಕ್ತ ಸಮಾಜದಲ್ಲಿ ಮಹಿಳೆ

ಭರತ ಭೂಮಿಯ ಅನೇಕ ಪ್ರದೇಶಗಳ ಬೆಟ್ಟ-ಗುಡ್ಡಗಳಲ್ಲಿ ಹಾಗೂ ಬಯಲು ಪ್ರದೇಶಗಳಲ್ಲಿ, ಹಲವಾರು ಬುಡಕಟ್ಟು ಗುಂಪುಗಳು ವಾಸವಾಗಿದ್ದು, ಪುರಾತನ ಸಂದರ್ಭದಲ್ಲಿ ಈ ಬುಡಕಟ್ಟು ಸಮುದಾಯಗಳು ತಮ್ಮ ದೈನಂದಿನ ಉಪಜೀವನಕ್ಕಾಗಿ, ಅರಣ್ಯ, ಪರ್ವತ ಪ್ರದೇಶಗಳಲ್ಲಿ ದೊರೆಯುವಂತಹ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುವುದು, ಅಲ್ಲಿಯೇ ಗಡ್ಡೆ ಗೆಣಸು ಪಡೆಯಲು -ಹುಡುಕಲು ಮಹಿಳೆಯರು ಪುರುಷರಿಗೆ ಸರಿ ಸಮಾನವಾಗಿ ಹೋಗುವುದು ಮತ್ತು ಸಹಾಯ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಅಂದಿನ ಸಂದರ್ಭದ ಸಮಾಜದಲ್ಲಿ ಮಹಿಳೆಯೂ ಕೌಟುಂಬಿಕ, ಸಮುದಾಯಕ ಹಾಗೂ ಸಾಮಾಜಿಕವಾಗಿ ನೀತಿ-ನಿರ್ಬಂಧಗಳಿಲ್ಲದೆ, ಪ್ರಾಣಿಗಳನ್ನು ಬೆನ್ನಟ್ಟಿಕೊಂಡು, ಬೇಟೆಯಾಡುವ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಹ ಅನುಕೂಲತೆಯನ್ನು ತನ್ನದಾಗಿಸಿಕೊಂಡಿದ್ದಳು. ಜೊತೆಗೆ ಬಲೆ ಬೀಸಿ ಬೇಟೆಯಾಡುವ ಗುಂಪು ಬೇಟೆಯೂ ಆಡುವ ಸಂದರ್ಭದಲ್ಲಿ ಪುರುಷನ ಜೊತೆ ಮಹಿಳೆಯರು, ಮಕ್ಕಳು ಪ್ರಧಾನವಾಗಿ ಪಾತ್ರ ನಿರ್ವಹಿಸುತ್ತಿದ್ದುದುಂಟು. ಒಂದೊಂದು ಅವದಿಯಲ್ಲಿ ಮಹಿಳೆಯೊಬ್ಬಳೇ ಭೌಗೋಳಿಕ ನೆಲೆಯಲ್ಲಿ

ಜೀವಿಸುತ್ತಿದ್ದ, ಒಂದೇ ಗುಂಪು, ಭಾಷೆ, ಧರ್ಮ, ಜೀವನ, ರೀತಿ, ನಂಬಿಕೆ, ಕೆಲಸ-ಕಾರ್ಯಗಳಲ್ಲಿ ತೊಡಗಿಕೊಂಡು ಬಹಳ ಪರಿಶ್ರಮ ಪಡುತ್ತಿದ್ದರು. ಈ ಸಂದರ್ಭವನ್ನು ಅವಲೋಕಿಸಿದ "ಅನೇಕ ಸ್ತ್ರೀವಾದಿ ಚಿಂತಕ-ಚಿಂತಕಿಯರು ಕೂಡ ಬುಡಕಟ್ಟು ಸಮಾಜ-ಸಮುದಾಯಗಳಲ್ಲಿ ಸ್ತ್ರೀಶಕ್ತಿ ಪ್ರತಿಮೆ ಆಕೃತಿಗಳಿವೆ ಎಂದು ನಂಬುತ್ತಾರೆ. ಗಾಯಿತ್ರಿ ನಾವಡ ಅವರು ಅಭಿಪ್ರಾಯ ಪಡುವಂತೆ ಭಾರತೀಯ ಸ್ತ್ರೀವಾದಿ ಚಿಂತನೆಗಳು ಜಾನಪದ ಅಥವಾ ಮೌಖಿಕ ಪರಂಪರೆ ಮತ್ತು ಮಾತೃಪ್ರಧಾನ ಬುಡಕಟ್ಟು ಸಂಸ್ಕೃತಿಗಳು ಪ್ರಕಟಿಸುವ ಸ್ತ್ರೀಶಕ್ತಿ ಪ್ರತಿಮೆ ಆಕೃತಿಗಳನ್ನು ಶೋಧಿಸಬೇಕಾಯಿತು. ಈ ಬಗೆಯ ಭಿನ್ನ ಸ್ತ್ರೀವಾದವನ್ನು ಕಟ್ಟಬೇಕಾಗಿದೆ ಎಂದು ಹೇಳುವರು ಬಹಳಷ್ಟು ಸ್ತ್ರೀ ನಿಲುವುಳ್ಳ ಸ್ತ್ರೀವಾದಿಗಳು ಮಹಿಳೆ ಅಬಲೆಯಲ್ಲ, ಅವಳು ಒಂದು ಕಾಲದಲ್ಲಿ ಸಬಲಳಿದ್ದಳು ಎಂದು ದೃಢಪಡಿಸುವುದಕ್ಕೆ ಗಿರಿಜನ ಮಹಿಳೆಯರ ಕುರಿತಿರುವ, ಕಾವ್ಯ, ಕಥನ, ಸಂಕಥನಗಳನ್ನು ಗಮನಿಸಿದಾಗ ಕಂಡುಬರುತ್ತದೆ."[೨೪]

ಎಚ್.ಎಸ್.ಶ್ರೀಮತಿಯವರು ಅಭಿಪ್ರಾಯ ಪಡುವಂತೆ "ಇತಿಹಾಸಪೂರ್ವ ಕಾಲದ ದಾಖಲೆಗಳಿಂದ ಮನುಷ್ಯ ಹಿಂದಿನಿಂದಲೂ ಆಯುಧಗಳನ್ನು ಹೊಂದಿದ್ದುದು ತಿಳಿದುಬರುತ್ತದೆ. ಆಗ ಭಾರಿ ಗಾತ್ರದ ದೊಣ್ಣೆಗಳನ್ನು ಹಿಡಿದು ಕ್ರೂರಮೃಗಗಳನ್ನು ದೂರವಿರಿಸಬೇಕಾದ ಪ್ರಸಂಗ ಉಂಟಾಗುತ್ತಿತ್ತು. ಆಗೆಲ್ಲ ಹೆಂಗಸಿನ ದೈಹಿಕ ದೌರ್ಬಲ್ಯ ಎದ್ದು ಕಾಣುವಂತಿದೆ, ಆಕೆಯ ಶಕ್ತಿಗೆ ಮೀರಿದ ಆಯುಧವನ್ನು ಬಳಸಬೇಕಾಗಿ ಬಂದರಂತೂ ಆಕೆ ಸಂಪೂರ್ಣವಾಗಿ ಕೈಚೆಲ್ಲಬೇಕಾಗುತ್ತಿತ್ತು."[೨೫] ಇದು ಒಂದು ಮುಖವಾಗಿ ಯೋಚನೆ ಮಾಡಿದಾಗ ನಿಜ ಎಂದು ತಿಳಿದುಬರುತ್ತದೆ. ಅದೇ ಮಹಿಳೆಯನ್ನು ಪುರುಷನು ತನ್ನ ಬೇಟೆಯಾಡುವ ಸಂದರ್ಭದಲ್ಲಿ ತನ್ನಂತೆ ಅವಳನ್ನು ಗ್ರಹಿಸಿಕೊಂಡು ಕಾಡು ಮೃಗಗಳನ್ನು ಬೆನ್ನಟ್ಟಿ ಹೊಡೆದೋಡಿಸುವ ತಂತ್ರಗಳನ್ನು ನಿರ್ದೇಶನ ಮಾಡಿಸಿದರೆ! ಅದರ ಜೊತೆಗೆ ಪುರುಷನು ಎಷ್ಟೇ ಶಕ್ತಿಶಾಲಿಯಂದೂ ತಿಳಿದುಕೊಂಡರು ಸಹ ಒಂದೊಂದು ಸಂದರ್ಭದಲ್ಲಿ ಅಸಹಾಯಕನಾಗಿ ಬೃಹತ್ ಕಾಡು ಪ್ರಾಣಿ-ಪಕ್ಷಿಗಳಿಗೆ ಬಲಿಯಾಗಿರುವಂತಹ ಹಲವು ಸಂಗತಿಗಳು ನಮಗೆ ದೊರೆಯುತ್ತವೆ.

ಆದಿಮಾ ಮಾನವನಲ್ಲಿ ಕೃಷಿ ಅಥವಾ ಕುಟುಂಬ ವ್ಯವಸ್ಥೆ ರೂಪಗೊಳ್ಳುವದಕ್ಕಿಂತ ಮುಂಚಿತವಾಗಿ ಆತನು ಎದುರುಗೊಳ್ಳುವಂತಹ ಪರಿಸರದ ಸೂಕ್ಷ್ಮ ಸಂಗತಿಗಳು ಅದು, ಕತ್ತಲು, ಬೆಳಕು, ಮಳೆ, ಗಾಳಿ, ಬಿಸಿಲು, ಚಳಿ ಹಾಗೂ ಗುಡುಗು, ಸಿಡಿಲು, ಮಿಂಚು ಇಂತಹ ಅನೇಕ ಪ್ರಸಂಗಗಳು ಆತನನ್ನು ಆಶ್ಚರ್ಯಕ್ಕೆ ಒಳಪಡಿಸಿದುಂಟು. ಇದರ ಜೊತೆಗೇನೇ ತನ್ನೊಂದಿಗೆ ಹಗಲಿರುಳು ಸದಾ ಇರುವಂತಹ ಮಹಿಳೆಯ ದೈಹಿಕ ರಚನೆ, ಗರ್ಭಧರಿಸುವುದು, ಮಕ್ಕಳನ್ನು ಹೆರುವುದು ಇನ್ನೂ ಅನೇಕ ಸೂಕ್ಷ್ಮ ವಿಷಯಗಳನ್ನು ಕಂಡು ಭೂಮಿ, ಪರಿಸರ, ನಿಸರ್ಗ ಹಾಗೂ ಮಹಿಳೆಯಲ್ಲಿರುವ ಸಂಗತಿಯೊಳಗಡೆ ಏನೋ ಸಾಮ್ಯತೆಯಿದೆ ಎಂದು ತಿಳಿದು ಒಂದು ಕಡೆಗೆ ಭಯ, ಇನ್ನೊಂದು ಕಡೆಗೆ ಭಕ್ತಿ ಇವೆರಡರ ನಡುವೆ ತನ್ನ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನದಿಂದ ಮಹಿಳೆಯನ್ನು ತಮಾಸ ಗುಣದಿಂದ ನೋಡತೊಡಗಿದ. ಇಲ್ಲಾಂದರೆ ಪುರುಷ ಮತ್ತು ಸ್ತ್ರೀಯರ

ನಡುವೆ ಇರುವಂತಹ ಜೈವಿಕ ಭಿನ್ನತೆಯನ್ನು ವಿರೋಧದ ನೆಲೆಯಲ್ಲಿ ನೋಡಿದ್ದನೆಂದರೆ ಅಂದಿನ ಸಂದರ್ಭದಲ್ಲಿಯೇ ಇದು ನನ್ನಂತೆಯಿಲ್ಲ, ಏನೋ ಬೇರೆನೆಯಿದೆ ಎಂಬ ನಂಬಿಕೆಯಿಂದ ಕಾಡಿನ ಪ್ರಾಣಿ-ಪಕ್ಷಿಗಳಂತೆ ಬೇಟೆಯಾಡಿ ಕೊಂಜು ಬಿಡುತ್ತಿದ್ದನೇನೋ! ಎನ್ನುವಂತಹ ಮಾತು ಬರುತ್ತದೆ. ಈ ರೀತಿಯಾದ ಸಂಗತಿಗಳಿಂದ ಮಹಿಳೆಯೂ ಪುರುಷನ ಪರಿಕಲ್ಪನೆಯಲ್ಲಿ ಪ್ರಾಚೀನ ಕಾಲದ ಸಂದರ್ಭದಿಂದಲೂ ಒಂದು ರೀತಿಯ ಜೈವಿಕತೆಯ ಹಿನ್ನೆಲೆಯಲ್ಲಿ ಬಾರವಾದಂತಹ ಕೆಲಸ ಕಾರ್ಯಗಳನ್ನು, ಧೈರ್ಯ ಸಾಹಸದಂತಹ ಸಮಯದಲ್ಲಿ ಪುರುಷನಷ್ಟೇ ಸಕ್ರಿಯವಾಗಿ ಪಾಲ್ಗೊಳ್ಳುವಂತಹ ಸಂದರ್ಭವೇ ಬರಲಿಲ್ಲ ಎಂದೂ ಹೇಳಬಹುದು.

ಒಂದು ವೇಳೆ ಬಂದಿದ್ದರೂ ಸಹ ಅಲ್ಪ ಸಮಯ ಹೆಂಗಸರು ಸಹ ಬಲಿಷ್ಠರು ಎಂಬುದಕ್ಕೆ ಸಾಕ್ಷಿಗಳಿವೆ. ಹೆರೊಡೊಟಸ್ ಹೇಳಿದ ಕತೆಗಳಲ್ಲಿ ತೀರ ಈಚಿಗೆ ದಹೊಮೆ (Dahomey) ನಿರೂಪಿಸಿದ ಗಂಡುಬೀರಿಯರ ಕಥನಕಗಳಲ್ಲಿ, ಹೆಂಗಸರೂ ಯುದ್ಧಗಳಲ್ಲಿ ಪಾಲ್ಗೊಂಡ ವಿವರಗಳಿವೆ. ಅವರು ಗಂಡಸರಷ್ಟೇ ಉಗ್ರವಾಗಿ, ಕ್ರೂರಿಗಳಾಗಿ ಹೋರಾಡಿದ್ದಾರೆ, ಆದರೂ ದೊಣ್ಣೆಗಳನ್ನು ಹಿಡಿದು ಕಾಡು ಮೃಗಗಳನ್ನು ಎದುರಿಸುತ್ತಿದ್ದ ಆ ಕಾಲದಲ್ಲಿ, ಗಂಡಸಿನಲ್ಲಿದ್ದ ಅಧಿಕ ಬಲಕ್ಕೆ ಹೆಚ್ಚಿನ ಮನ್ನಣೆ ದೊರಕಿದ್ದು ಅಚ್ಚರಿಯೇನಲ್ಲ, ಅಲ್ಲದೆ, ಹೆಂಗಸು ಎಷ್ಟೇ ಬಲಶಾಲಿಯಾಗಿರಲಿ, ಹೆರುವ ಹೊಣೆಗಾರಿಕೆಯ ಬಂಧ ಅವಳನ್ನು ಈ ಹೋರಾಟದಲ್ಲಿ ಕೈಕಟ್ಟುವಂತೆ ಮಾಡಿತ್ತು. ಬಸಿರು, ಹೆರಿಗೆ, ಮುಟ್ಟುಗಳು ಅವರಲ್ಲಿ ದುಡಿಯುವ ಸಾಮಾರ್ಥ್ಯವನ್ನು ಕುಗ್ಗಿಸುತ್ತಿದ್ದವು. ಅಲ್ಲದೆ, ಆಹಾರ ಹಾಗೂ ರಕ್ಷಣೆಗಾಗಿ ಎಷ್ಟೋ ವೇಳೆ ಗಂಡಸಿನ ನೆರವನ್ನು ಬಯಸುವಂತೆ ಮಾಡುತ್ತಿದ್ದವು. ಶಿಶುಜನನದ ಮೇಲೆ ನಿಯಂತ್ರಣವಿರಲಿಲ್ಲ. ಇತರ ಸಸ್ತನಿಗಳ ಹೆಣ್ಣುಮಕ್ಕಳಲ್ಲಿರುವಂತೆ ಅಂಡಾಣು ಸಿದ್ಧವಾಗುವ ನಿರ್ದಿಷ್ಟ ಋತುಮಾನದ ಸೌಲಭ್ಯವಿರಲಿಲ್ಲ.

ಇದರಿಂದ ಒಂದಾದ ಮೇಲೊಂದರಂತೆ ಹೆರಬೇಕಾಗಿ ಬರುತ್ತಿತ್ತು. ಅವರ ಸಮಯ ಮತ್ತು ಶ್ರಮವನ್ನು ಇದು ನುಂಗಿ ಹಾಕುತ್ತಿತ್ತು. ತಾವೇ ಹೆತ್ತ ಮಕ್ಕಳಿಗೆ ಅಗತ್ಯವಾದ ಆಹಾರವನ್ನು ನೀಡಲು ಕೂಡ ಅವರು ಅಸಮರ್ಥರಾಗುತ್ತಿದ್ದರು. ಇದು ಹೆಂಗಸು ಎದುರಿಸಿದ ಮೊದಲ ಸಂಕಷ್ಟ. ಮಾನವ ಜೀವಿಗಳ ಮೊದಮೊದಲು ದಿನಗಳು ಅತಿ ತ್ರಾಸದಾಯಕವಾಗಿದ್ದವು. ಆಹಾರ ಸಂಗ್ರಹಣೆ, ಬೇಟೆ, ಮೀನುಗಾರಿಕೆಗಳಲ್ಲಿ ತೊಡಗಿದ್ದು, ಜನರು ನೆಲದಿಂದ ಅಷ್ಟಿಷ್ಟು ಬೆಳೆ ತೆಗೆಯಲು ತುಂಬಾ ಶ್ರಮಪಡಬೇಕಾಗುತ್ತಿತ್ತು. ಗುಂಪಿಗೆ ಇದ್ದ ಸಂಪನ್ಮೂಲಗಳು ಕಡಿಮೆ. ಹುಟ್ಟುತ್ತಿದ್ದ ಮಕ್ಕಳು ಹೆಚ್ಚು, ಒಂದೇ ಸಮನೆ ಹೆರುತ್ತಿದ್ದ ಹೆಂಗಸು ತನ್ನ ಸಮುದಾಯದ ಸಂಪನ್ಮೂಲಗಳನ್ನು ಹೆಚ್ಚಿಸಲು ನೆರವಾಗುವುದು ಸಾಧ್ಯವಿರಲಿಲ್ಲ. ಆದರೆ ತಿನ್ನುವ ಬಾಯಿಗಳನ್ನು ಅವಳು ಹೆಚ್ಚಿಸುತ್ತಿದ್ದಳು. ಜೀವಿವರ್ಗದ ಮುನ್ನಡೆಗೆ ಅವಳ ಅಗತ್ಯವೇನೋ ಇತ್ತು. ಆದರೆ ಆ ನಿಟ್ಟಿನಲ್ಲಿ ಅವಳ ಕೊಡುಗೆ ಭರಿಸಲಾಗದಷ್ಟು ಉದಾರವಾಗಿತ್ತು. ಹೀಗಾಗಿ, ಗುಂಪಿನ ಸದಸ್ಯರ ಹೆಚ್ಚಳ ಮತ್ತು ಸಂಪನ್ಮೂಲಗಳ ನಡುವೆ ಸಮತೋಲನವನ್ನು ರೂಪಿಸುವ ಹೊಣೆ ಗಂಡಸಿನ ಮೇಲೆ ಬಿತ್ತು. ಮತ್ತು ಮಾತೃತ್ವಕ್ಕೆ

ಹೆಚ್ಚಿನ ಮನ್ನಣೆ ಇದ್ದಾಗ ಕೂಡ, ದೈಹಿಕ ಶ್ರಮ ಅತ್ಯಂತ ಹೆಚ್ಚು ಅವಶ್ಯವಾಗಿತ್ತು. ಆದರೆ, ಹೆಂಗಸು ಅದರಲ್ಲಿ ಪಾಲುದಾರಳಾಗಲು ಅವಕಾಶವಿರಲಿಲ್ಲ. ಆದಿಮ ಸಮುದಾಯದಗಳಲ್ಲಿ ಆಸ್ತಿ ಎಂಬುದು ಇರಲಿಲ್ಲ. ತಮ್ಮ ಹಕ್ಕು ಸಾಧಿಸುವ ಭೂಮಿ ಅವರಿಗಿರಲಿಲ್ಲ. ಹೀಗಾಗಿ ನಾಳೆಗಾಗಿ ಏನನ್ನೂ ಅವರು ಕಾಯ್ದಿರಿಸುವಂತಿರಲಿಲ್ಲ. ಅವರಿಗೆ ಮಕ್ಕಳು ಆಸ್ತಿ ಎನ್ನುವುದಕ್ಕಿಂತ ಬೇಡದ ಹೊರೆ ಎನಿಸದ್ದೇ ಹೆಚ್ಚು ಎಂದೂ ಹೇಳಬಹುದು."[15]

ಏಂಗೆಲ್ಸ್ ಅವರು 'The origion of Family, Private property and the state ಎಂಬ ತನ್ನ ಕೃತಿಯಲ್ಲಿ ಈ ರೀತಿಯಾಗಿ ಪ್ರತಿಕ್ರಿಯಿಸಿದ್ದಾನೆ. "ಹಿಂದಿನ ಚರಿತ್ರೆಯೂ ತಂತ್ರಜ್ಞಾನವನ್ನು ಅವಲಂಬಿಸಿ ಬೆಳವಣಿಗೆ ನಡೆದಿದೆ ಎಂಬುದು ಆತನ ಮುಖ್ಯ ನಿಲುವಾಗಿದೆ. ಶಿಲಾಯುಗದಲ್ಲಿ ಭೂಮಿ ಸಮುದಾಯದ ಎಲ್ಲರಿಗೂ ಸೇರಿತ್ತು, ಆ ಕಾಲದ ಅಗೆಯುವ, ತೋಡುವ ಸಾಧನಗಳು ಒರಟೊರಟಾಗಿದ್ದು ಅಲ್ಪಸ್ವಲ್ಪ ಪ್ರಮಾಣದ ಕೃಷಿಗೆ ನೆರವಾಗುವಂತಿದ್ದವು. ಅಷ್ಟು ಕೆಲಸ ಮಾಡಲು ಮಹಿಲೆಯಲ್ಲಿದ್ದ ಬಲ ಸಾಕಾಗಿತ್ತು. ಅಂದರೆ, ಆಗ ಶ್ರಮ ವಿಭಜನೆಯ ಈ ಎರಡು ಲಿಂಗಗಳನ್ನು ಎರಡು ವರ್ಗಗಳನ್ನಾಗಿ ರೂಪಿಸಿತ್ತು. ಆದರೆ, ಈ ವರ್ಗಗಳಲ್ಲಿ ಸಮಾನತೆ ಇದ್ದಿತು. ಗಂಡಸು ಮೀನು ಹಿಡಿಯುವುದು, ಬೇಟೆಯಾಡುವುದು ಇತ್ಯಾದಿ ಕೆಲಸ ಮಾಡುತ್ತಿದ್ದಾಗ ಹೆಂಗಸು ಮನೆಯಲ್ಲಿ ಉಳಿಯುತ್ತಿದ್ದಳು. ಆದರೆ ಮನೆಗೆಲಸದಲ್ಲೂ, ಕುಂಬಾರಿಕೆ, ನೇಯ್ಗೆ, ತೋಟಗಾರಿಕೆ ಮುಂತಾದ ಉತ್ಪಾದಕ ಚಟುವಟಿಕೆಗಳು ಇದ್ದುದರಿಂದ ಆರ್ಥಿಕತೆಯಲ್ಲಿ ಹೆಂಗಸಿಗೂ ಸಮಪಾಲಿತ್ತು. ತಾಮ್ರ, ಸತು, ಕಂಚು, ಕಬ್ಬಿಣ ಮುಂತಾದ ಲೋಹಗಳು ಬಳಕೆಗೆ ಬಂದಾಗ ಮತ್ತು ನೇಗಿಲು ಉಪಕರಣವಾಗಿ ಸಿದ್ಧಗೊಂಡಾಗ ಕೃಷಿಯ ವ್ಯಾಪ್ತಿ ಹೆಚ್ಚಾಯಿತು. ಅದಕ್ಕಾಗಿ ಹೆಚ್ಚು ಶ್ರಮ ಬಳಸಿ ಕಾಡು ಕಡಿದು ನೆಲವನ್ನು ಹಸನು ಮಾಡಬೇಕಾಗಿ ಬಂತು.

ಇದಕ್ಕಾಗಿ, ಇನ್ನಿತರ ಗಂಡಸರ ಶ್ರಮವನ್ನು ಬಳಸಿಕೊಂಡು ಅವರನ್ನು ಒಬ್ಬ ಗಂಡಸು ಹಿಡಿತದಲ್ಲಿರಿಸಿಕೊಳ್ಳತೊಡಗಿದ, ಖಾಸಗಿ ಆಸ್ತಿ ತಲೆ ಎತ್ತಿತ್ತು. ಗುಲಾಮರನ್ನು, ನೆಲವನ್ನು, ತನ್ನ ಮುಷ್ಟಿಯಲ್ಲಿಟ್ಟುಕೊಂಡು ಗಂಡಸು ಇದೇ ಬಗೆಯಲ್ಲಿ ಹೆಂಗಸನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡ. ಇದು ಹೆಣ್ಣಿಗೆ ಬದೊಂದಗಿದ ಅತಿ ದೊಡ್ಡ ಚಾರಿತ್ರಿಕ ಸೋಲು. ಹೊಸ ಉಪಕರಣಗಳ ಬಳಕೆಯಿಂದ ಹಿಂದಿನ ಶ್ರಮ ವಿಭಜನೆಯಲ್ಲಿದ್ದ ಸಮತೋಲನ ತಲೆಕೆಳಗಾಯಿತು. "ಯಾವ ಕಾರಣದಿಂದ ಹೆಣ್ಣು ಮನೆಯೊಳಗೆ ತನ್ನ ದುಡಿಮೆಯನ್ನು ಸೀಮಿತಗೊಳಿಸಿಕೊಳ್ಳಬೇಕಾಗಿತ್ತೋ, ಅದೇ ಕಾರಣ ಈಗ ಗಂಡಸಿನ ಅಧಿಕಾರಕ್ಕೆ ಹಾದಿ ಮಾಡಿತು. ಏಕೆಂದರೆ, ಮನೆಗೆಲಸಕ್ಕೆ ಗಂಡಸಿನ ಉತ್ಪಾದನೆ ನೆಲೆಯಲ್ಲಿ ಕವಡೆಯಷ್ಟೂ ಕಿಮ್ಮತ್ತಿರಲಿಲ್ಲ" ತಾಯಿಯ ಅಧಿಕಾರ ತಂದೆಯ ಅಧಿಕಾರಕ್ಕೆ ಜಾಗ ನೀಡಿತು. ತಂದೆಯ ಆಸ್ತಿ ಮಗನ ಪಾಲಾಗುವ ಪದ್ಧತಿ ಬಂದದ್ದರಿಂದ ಹೆಣ್ಣಿನ ಆಸ್ತಿ ಆಕೆಯ ಕುಲಕ್ಕೆ ರವಾನೆಯಾಗುವ ಪದ್ಧತಿ ತಪ್ಪಿ ಹೋಯಿತು. ಖಾಸಗಿ ಆಸ್ತಿಯ ತಳಹದಿಯ ಮೇಲೆ ಪಿತೃಪ್ರಧಾನ ಕುಟುಂಬ ನೆಲೆಗೊಂಡಿತು.

ಈ ಕುಟುಂಬದಲ್ಲಿ ಹೆಂಗಸು ಅಧೀನಳಾದಳು. ಅಧಿಕಾರಸ್ಥ ಗಂಡಸು ಲೈಂಗಿಕ ಲೋಯು ಪತೆಯಲ್ಲಿ ತೊಡಗಿದ. ಗುಲಾಮರು, ವೇಶ್ಯೆಯರು ಇವರನ್ನೆಲ್ಲ ಬಳಸಿಕೊಂಡು ಹೆಚ್ಚು ಹೆಣ್ಣುಗಳ ಸಂಬಂಧ ಮಾಡತೊಡಗಿದ. ಸಾಧ್ಯವಿದ್ದ ಕಡೆಗಳಲ್ಲೆಲ್ಲ ಸ್ಥಳೀಯ ಪದ್ಧತಿಗಳಿಗೆ ಅನುಗುಣವಾಗಿ ಹೆಣ್ಣೂ ಕೂಡ ನಂಬಿಕೆದ್ರೋಹದ ಮೂಲಕ ಪ್ರತೀಕಾರ ಕೈಕಗೊಂಡಳು. ವಿವಾಹ ವ್ಯವಸ್ಥೆಯಲ್ಲಿ ಬಾಹಿರ ಸಂಬಂಧಗಳು ನೆಲೆಗೊಂಡವು. ಮನೆಗೆಲಸದ ಗುಲಾಮಗಿರಿಗೆ ಕಟ್ಟುಬಿದ್ದಿದ್ದ ಹೆಂಗಸಿಗೆ ಇದ್ದದ್ದು ಇದೊಂದೇ ಹೊರದಾರಿ. ಈ ಆರ್ಥಿಕ ಶೋಷಣೆಯು ಸಾಮಾಜಿಕ ಶೋಷಣೆಗೂ ದಾರಿ ಮಾಡಿತು. ಈ ಎರಡೂ ಲಿಂಗಗಳ ನಡುವೆ ಹಕ್ಕುಗಳ ಸಮಾನತೆ ನೆಲೆಗೊಳ್ಳದ ಹೊರತು ಅವೆರಡೂ ಸಮಾನವಾಗಲಾರವು. ಹೀಗಾಗಿಬೇಕಾದರೆ ಹೆಂಗಸರು ಅಧಿಕ ಪ್ರಮಾಣದ ದುಡಿಮೆಯಲ್ಲಿ ತೊಡಗುವಂತಾ ಗಬೇಕು. "ಹೆಂಗಸು ಸಾಮಾಜಿಕವಾಗಿ ಹೆಚ್ಚು ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿದಾಗ ಮತ್ತು ಮನೆಗೆಲಸದ ಪ್ರಮಾಣ ತೀರಾ ಕಡಿಮೆಯಾದಾಗ ಮಾತ್ರ ಆಕೆಯ ಸ್ಥಿತಿ ಉತ್ತಮಗೊಳ್ಳಬಲ್ಲದು. ಹೊಸಕಾಲದ ಬೃಹತ್ ಉದ್ಯಮಗಳು ಮಾತ್ರ ಇಂಥಾ ಅವಕಾಶವನ್ನು ಕಲ್ಪಿಸಬಲ್ಲವು. ಅವು ಹೆಚ್ಚು ಹೆಂಗಸರನ್ನು ದುಡಿಮೆಯಲ್ಲಿ ಒಳಗೊಳ್ಳಬಲ್ಲವು. ಹಾಗೆ ಅವರು ಒಳಗಾಗುವುದನ್ನು ಅದು ಬಯಸುತ್ತದೆ ಕೂಡ"[೨೨] ಮಹಿಳೆಯೂ ಸಾರ್ವತ್ರಿಕವಾಗಿ ದುಡಿಮೆಯಲ್ಲಿ ಭಾಗವಹಿಸಿದಾಗ ಮಾತ್ರ ಆಕೆಯ ಸ್ಥಿತಿಯೂ ಉತ್ತಮವಾಗುವುದು.

ಇದರ ಹಿಂದಿನ ತಾತ್ಪರ್ಯವು ನಮ್ಮ ಆದಿವಾಸಿ ಸಮುದಾಯಗಳಲ್ಲಿ ಗಮನಿಸಿದರೆ ಮಹಿಳೆಯರೇ ಅಧಿಕ ಜವಾಬ್ದಾರಿ ವಹಿಸಿಕೊಂಡು ಕುಟುಂಬವನ್ನು ಮುನ್ನಡಿಸುತ್ತಿರುವುದು ಕಂಡುಬರುತ್ತದೆ. ಇನ್ನೊಂದು ಕಡೆ ಜಾಣ ಪುರುಷ ಹೇಗೋ ಮಹಿಳೆ ಶ್ರಮವಹಿಸುತ್ತಿದ್ದಾಳೆ ಎನ್ನುವ ನಂಬಿಕೆಯುಂಟಾಗಿ ಸೋಮಾರಿತನಕ್ಕೂ ಪ್ರವೇಶ ಪಡೆದಿರುವ ಉದಾಹರಣೆಗಳು ನಮಗೆ ಸಾಕಷ್ಟು ಲಭಿಸುತ್ತವೆ. ಇವತ್ತಿನ ಹೊಸಕಾಲದ ಸಂದರ್ಭದಲ್ಲಿ ದೊಡ್ಡ ಉದ್ಯಮಗಳು ಸಹ ಮಹಿಳೆಯರನ್ನು ಕೆಲಸ ಕಾರ್ಯಗಳಿಗೆ ಸೇರ್ಪಡೆ ಮಾಡಿಕೊಂಡರು ಸಹ ಆ ವಲಯದಲ್ಲಿ ಬಹುಸಂಖ್ಯಾತವಾಗಿ ಪುರುಷರೇ ಪ್ರಮುಖಪಾತ್ರ ನಿರ್ವಹಿಸುತ್ತಿರುವುದರಿಂದ, ಮಹಿಳೆಯರು ಮೂರು ನಾಲ್ಕನೇ ದರ್ಜೆಯಲ್ಲಿ ತನ್ನ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅಲ್ಲಿಯೂ ಸಹ ಸಮಾನತೆ ಮುಕ್ತವಾಗಿ ಇರಲು ಸಾಧ್ಯವಿಲ್ಲ. ಅದರಲ್ಲಿ ಬುಡಕಟ್ಟು ಇರುವ ಕಾರಣದಿಂದ ಬೃಹತ್ ಉದ್ಯಮಗಳಲ್ಲಿ ಕೆಲಸ ಪ್ರವೇಶ ದೊರೆಯುತ್ತೆ ಅಥವಾ ದೊರೆಯುತ್ತಿದೆಯೆನ್ನುವುದು ಸಂದೇಹದ ಮಾತು.

ಇಂತಹ ಅನೇಕ ಸಮಸ್ಯೆಗಳು ಇವತ್ತಿನ ಬುಡಕಟ್ಟು ಸಮುದಾಯದ ಮಹಿಳೆಯರು ಎದುರುಗೊಳ್ಳುತ್ತಿದ್ದಾರೆ. ಆದಿಮ ವ್ಯವಸ್ಥೆಯಲ್ಲಿರುವುವಂತಹ ಸಮಾಜವು ಇಂದು ವಿಶ್ವರೂಪಿಯಾಗಿದೆ. ಪ್ರತಿಯೊಂದು ವ್ಯವಸ್ಥೆಯಲ್ಲಿ ಸಂಕಿರಣತೆ ಏರ್ಪಟ್ಟಿದೆ. ಅಧಿಕಾರ, ಸಂಪತ್ತು, ನೀತಿ ನಿರ್ಧಾರ ಮುಂದಾಳತ್ವ, ಇತರೆಲ್ಲ ಕೆಲಸ ಗಳು ಪುರುಷ ಪ್ರಧಾನ ಸಮಾಜವು ತನ್ನದಾಗಿ ಮಾಡಿಕೊಂಡಿದೆ

ಕೆಲವು ಸಂದರ್ಭಗಳಲ್ಲಿ ಮಹಿಳೆಯನ್ನು ಗೌರವ, ಪ್ರತಿಷ್ಠೆ, ಮರ್ಯಾದೆ, ತೋರ್ಪಡಿಸಿ, ಪುನಃ ಯತಾ ರೀತಿ ನಿರ್ಬಂಧಕ್ಕೆ ಒಳಪಡಿಸುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ ನಮ್ಮ ದೇಶದಲ್ಲಿ ಇವತ್ತಿನವರೆಗೂ ನವರಾತ್ರಿಯಂದು, ಭುವನೇಶ್ವರಿಯನ್ನು ಕುರಿತು ಆರಾಧನೆ ಮಾಡುತ್ತಾರೆ. ಈ ೯ ದಿನಗಳಂದು ಮನೆಯಲ್ಲಿ ಮಹಿಳೆಯರು ಸಂಭ್ರಮ ಆಚರಣೆ ಮಾಡಲು ಮನೆಯ ಯಜಮಾನನ ಒಪ್ಪಿಗೆ ಅವಶ್ಯಕವಾಗಿ ಬೇಕು, ಒಂದು ಹೆಣ್ಣು ದೇವತೆಯನ್ನು ಪೂಜೆ ಪುನಸ್ಕಾರ, ನೈವೇದ್ಯ, ದರ್ಶನ ಮಾಡಿಕೊಂಡು ಬರುವಲ್ಲಿ ಸ್ವತಂತ್ರವಾಗಿ ತನ್ನ ಮನೆಯ ಬಾಗಿಲನ್ನು ದಾಟಿ ದೇವಿ ದರ್ಶನ ಮಾಡಲು ಮಹಿಳೆಯರಿಗೆ ಮುಕ್ತವಾದ ಅವಕಾಶವಿಲ್ಲ. ಅದು ಕೇಳಿ ಪಡೆಯಬೇಕು, ಮತ್ತೆ ಕೇಳಿ ಪಡೆದಂತಹ ಅವಕಾಶವು ಸಮಯದ ನಿರ್ಬಂಧವುಂಟು. ಇದರ ಜೊತೆಗೆ ತಳ ಸಮುದಾಯಗಳಾದ ಆದಿವಾಸಿಗಳು ತಮ್ಮ ಪ್ರದೇಶದಲ್ಲಿ ಗ್ರಾಮದೇವತೆ ಉತ್ಸವದಲ್ಲಿಯೂ ಸಹ ಇಂತಹ ಸಮಸ್ಯೆಗಳು ಎದುರುಗೊಳ್ಳುತ್ತಿರುವುದು ಕಂಡುಬರುತ್ತದೆ.

ಹಿಂದಿನ ಬುಡಕಟ್ಟು ವ್ಯವಸ್ಥೆಯ ಸಮಾಜದ ಮುಕ್ತ ಅವಕಾಶಗಳು ಮಹಿಳೆಗೆ ವರ್ತಮಾನದಲ್ಲಿ ದೊರೆಯದೆ, ಪ್ರತಿಯೊಂದು ವಿಷಯಗಳಲ್ಲಿ ಕೇಳಿ ಪಡೆದುಕೊಳ್ಳುವ ಪರಾವಲಂಬಿ ಜೀವನವು ಮಹಿಳೆಯರ ಪಾಲಿಗೆ ಶಾಪವಾಗಿ ಪರಿಣಮಿಸಿದೆ. ಇಂತಹ ಪರಿಸ್ಥಿತಿಗೆ ಕಾಲಾನುಕ್ರಮದ ಹಲವಾರು ಸಂಗತಿಗಳು ಕಾರಣವಾಗಿವೆ. ಅವುಗಳಲ್ಲಿ ಪ್ರಮುಖವಾಗಿ ಪುರುಷನ ಅಧಿಕಾರ, ಸಂಪತ್ತು, ಆಸ್ತಿ ಇನ್ನಿತರೆ ದಾಹಗಳು ಎಲ್ಲೆಮೀರಿ ಬೆಳವಣಿಗೆ ಆದದ್ದರಿಂದ ಮಹಿಳೆಯ ಸ್ವಾತಂತ್ರ್ಯಕ್ಕೆ ಕುಂದುಬಂದಿದೆ ಎಂದು ಹೇಳಬಹುದು, ಕೆಲವೊಂದು ಸಂದರ್ಭದಲ್ಲಿ ಸಮಾಜದ ನಿಯಮ ಉಲ್ಲಂಘಿಸಿ ಮಹಿಳೆಯರು ಮುಂದೆ ಹೋಗಿದ್ದೆ ಆದರೆ ಅಂತಹವರನ್ನು ಸಮಾಜವು ಮೂರು ಬಿಟ್ಟವಳು ಊರಿಗೆ ದೊಡ್ಡವಳು ಎನ್ನುವ ಅಪವಾದ ಕೂಡ ತಪ್ಪಿದ್ದಲ್ಲ. ಇದರಿಂದಾಗಿ ಮಹಿಳೆಯರು ಪುರುಷ ಪ್ರಧಾನ ಸಮಾಜದ ತತ್ವಾದರ್ಶಗಳು ಪಾಲನೆ ಮಾಡಿದರೆ ಅವಕಾಶ ವಂಚಿತಳಾಗುತ್ತಾಳೆ. ಪಾಲಿಸದಿದ್ದರೆ ಅಪಾಧನೆಗೆ ಒಳಪಡುತ್ತಾಳೆ. ಈ ತೆರನಾದ ಎರಡು ಹಲಗೆ ಖಡ್ಗದ ಮೇಲೆ ಇವರ ಜೀವನವು ಮುಂದುವರೆಯುತ್ತದೆ ಎನ್ನಬಹುದು.

೬.೫. ಸ್ತ್ರೀದೇವತೆಗಳ ರೂಪಾಂತರಗಳು

ಭಾರತದಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಪ್ರದಾಯ, ಆಚರಣೆ, ಆರಾಧನೆ ಇತರೆ ಹಲವು ರೀತಿಯ ರೂಢಿ ನಿಯಮಗಳು ಬಹುದೀರ್ಘಕಾಲದಿಂದಲೂ ಕ್ರಿಯಾತ್ಮಕವಾಗಿ ಆಚರಣೆಗೊಳ್ಳುತ್ತಾ ಬಂದಿವೆ. ಅಂತಹವುಗಳಲ್ಲಿ ಪ್ರಮುಖವಾಗಿ ಬುಡಕಟ್ಟು ಸಮಾಜವನ್ನು ಗ್ರಹಿಸಿದಾಗ ಸ್ತ್ರೀದೇವತೆಗಳ ಪ್ರಭಾವವನ್ನು ಅತಿಮುಖ್ಯವಾಗಿ ಕಾಣುತ್ತೇವೆ. ಶಕ್ತಿಯ ಆರಾಧನೆಯು ಈ ದೇಶದ ಧಾರ್ಮಿಕ ಇತಿಹಾಸ, ಚರಿತ್ರೆಯಲ್ಲಿ ಮಹತ್ವದ ಸಂಗತಿಯಾಗಿದೆ. ವಿಶ್ವದಲ್ಲೆಡೆ ಪ್ರಾಚೀನ ಸಂದರ್ಭದಿಂದಲೂ ಕಂಡುಬಂದರೂ ಇಂದಿಗೂ ವಿಶಿಷ್ಟವಾಗಿ ಮುಂದುವರೆದುಕೊಂಡು ಬಂದಿರುವುದು

ಭಾರತದಲ್ಲಿ ಮಾತ್ರ. “ಶಕ್ತಿ ದೇವತೆಯ ಆರಾಧೆಯು ಇಂದಿನ ಸಂದರ್ಭದಲ್ಲಿ ಗ್ರಾಮದೇವತೆಗಳ ರೂಪದಲ್ಲಿ, ಶಿಷ್ಟದೇವತೆಗಳ ರೂಪದಲ್ಲಿ ವ್ಯಾಪಕವಾದ ಆಚರಣೆಯೂ ಕಂಡುಬರುತ್ತದೆ.”[೨೮] ಪ್ರಪಂಚದಲ್ಲಿ ಮಾತೃದೇವತೆಯ ಆರಾಧನೆಯೂ ಬೆಳೆದು ಬಂದದ್ದು ಸಮಾನ ಗುಣದಿಂದ. ಆದ ಕಾರಣ ಮಾತೃಮೂಲದ ಕುಟುಂಬ ವ್ಯವಸ್ಥೆಯಿಂದ ಎಂದು ಹೇಳಬಹುದು.

ಬುಡಕಟ್ಟು ಸಮಾಜದ ಸಂದರ್ಭದಲ್ಲಿಯೂ ಸಹ ಕುಟುಂಬದಲ್ಲಿ ತಾಯಿಯೇ ಪ್ರಧಾನ ಪಾತ್ರವಹಿಸುತ್ತಿದ್ದಳು. ಪುರುಷ ಬೇಟೆಗಾಗಿ ಅರಣ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕಾಗುತ್ತಿತ್ತು. ಜೊತೆಗೆ ಪ್ರಾಣಿಗಳನ್ನು ಸಾಕಾಣಿಕೆಯ ಕಾರ್ಯದಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿರುವಾಗ ಇಡೀ ಕುಟುಂಬದ ಮೇಲುಸ್ತುವಾರಿಕೆಯನ್ನು ಮಹಿಳೆಯೇ ಮುನ್ನೆಡೆಸುತ್ತಿದ್ದಳು. ಅದರೊಂದಿಗೆ ಅವಳ ಪ್ರಕೃತಿಯು ಗಂಡಿನ ರೀತಿಯಲ್ಲಿ ಎಲ್ಲ ಕಾಲದಲ್ಲಿ ಅಲೆದಾಟಕ್ಕೆ ಅನುಕೂಲಕರವಾಗಿರಲಿಲ್ಲ. ಆ ಕಾರಣಕ್ಕೆ ಕೆಲಸಮಯ ಒಂದೇ ಕಡೆ ನೆಲೆ ನಿಲ್ಲಬೇಕಾಗುತ್ತಿತ್ತು. ಹೀಗೆ ನೆಲೆ ನಿಲ್ಲಬೇಕಾದ ಸಮಯದಲ್ಲಿ ಸ್ತ್ರೀಯೂ ತನ್ನ ಸಮಸ್ತ ಪರಿವಾರವನ್ನು ಸಂರಕ್ಷಿಸಬೇಕಾಗಿತ್ತು. ಅಲ್ಲದೇ ಹಲವು ರೀತಿಯ ನೂತನ ಹುಡುಕಾಟಗಳಿಗೆ ಇದು ಕಾರಣವಾಗಿರಬೇಕು. ಇಂತಹ ಸಂದರ್ಭದಲ್ಲಿ ಜೀವನ ಮುಂದುವರೆಕೆಗೆ ಅವಶ್ಯಕವಾದ ಮಡಿಕೆ ಮಾಡುವುದು, ಅಡುಗೆ ಮಾಡುವುದು, ಮನೆ ಕಟ್ಟುವ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಅನೇಕ ಕಾರ್ಯಗಳು ಮಹಿಳೆಯಿಂದಲೇ ಮೊದಲುಗೊಂಡವು. ನಿರಂತರವಾಗಿ ಕಾಡುಪ್ರಾಣಿ ಪಕ್ಷಿಗಳ ಬೇಟೆಯಲ್ಲಿ ತಲ್ಲೀನನಾದ ಪುರುಷ ದೂರದ ಪ್ರದೇಶಗಳಿಗೆ ಅಲೆಯುತ್ತಿದ್ದ. “ಆ ಸಮಯದಲ್ಲಿ ಆಹಾರದ ಕೊರತೆಯನ್ನು ನೀಗಿಸಲು ತನ್ನ ಸುತ್ತ ಸಿಗುವ ಸಸ್ಯ ಜನ್ಯ ಆಹಾರ ಪದಾರ್ಥಗಳನ್ನು ಮಹಿಳೆ ಕಂಡುಕೊಂಡಿರಬೇಕು. ಅಲ್ಲದೇ ತನಗೆ ದೊರೆಯುವ ಬಿಡುವಿನ ಸಮಯದಲ್ಲಿ ಅಲ್ಪಪ್ರಮಾಣದಲ್ಲಿ ಕೈತೋಟಗಾರಿಕೆ ಮಾಡಿ ಬೆಳೆಗಳನ್ನು ಬೆಳೆಯಲು ತನ್ನನ್ನೂ ತೊಡಗಿಸಿಕೊಂಡಿರಬೇಕು. ಅದು ಮುಂದಿನ ಸಂದರ್ಭದಲ್ಲಿ ಕೃಷಿಯ ಆವಿಷ್ಕಾರಕ್ಕೆ ಕಾರಣವಾಯಿತು.”[೨೯] ಈ ಆವಿಷ್ಕಾರದ ಕ್ರಮವೇ ಅವಳ ಜೀವನ ವಿಧಾನವನ್ನು ಬದಲಾಯಿಸಿತು. ಇಡೀ ಆದಿವಾಸಿ ಸಮುದಾಯಗಳು ವಲಸೆಯ ಜೀವನ ಕ್ರಮಕ್ಕೆ ಮುಕ್ತಿ ದೊರಕಿಸಿ ಕೊಟ್ಟಿತ್ತಲ್ಲದೆ ಒಂದು ಕಡೆ ನೆಲೆ ನಿಲ್ಲಲ್ಲು ಕಾರಣವಾಯಿತು.

“ಆದಿಮ ಮನುಷ್ಯನನ್ನು ಪ್ರಧಾನವಾಗಿ ಕಾಡಿದ್ದು ಎರಡು ಅಂಶಗಳು. ಒಂದು ಹುಟ್ಟುವಿಕೆ ಯಾದರೆ ಇನ್ನೊಂದು ಮರಣ. ಈ ಎರಡು ಅಂಶಗಳು ಅವನ ಹುಡುಕಾಟದ ಜೀವನಕ್ಕೆ ಪ್ರೇರಕವಾದ ಶಕ್ತಿಯಾಗಿ ಪರಿಣಮಿಸಿ ಇಂದಿಗೂ ಕೆಲಸಮಾಡುತ್ತಿದೆ. ಪ್ರಕೃತಿಯ ವೈಚಿತ್ರದಲ್ಲಿ ಗರ್ಭ ಧರಿಸುವುದು ಒಂದು ವಿಸ್ಮಯಕಾರಕವಾದ ಅಂಶವಾಗಿದೆ. ಹೆಣ್ಣಿನ ಈ ಸಹಜ ಗುಣವು ಅವಳಿಗೆ ಒಂದು ರೀತಿಯ ಉನ್ನತವಾದ ಸ್ಥಾನ ದೊರಕಿಸಿಕೊಡುವಲ್ಲಿ ಮೊದಲು ಕಾರಣವಾಯಿತು. ಕಾರಣ ಈ ಕ್ರಿಯೆಯಲ್ಲಿ ಪುರುಷನ ಪಾತ್ರದ ಅರಿವಿರಲಿಲ್ಲ ಎಂಬುದು ಅವರ ಅರಿವಿಗೆ ಬಂದಿರಲಿಲ್ಲ.

ಅದು ತನ್ನ ಹಿಂದಿನ ಪಿತೃಗಳ ಬಸಿರಿನಲ್ಲಿ ಸೇರುತ್ತಾರೆ ಎಂಬ ನಂಬಿಕೆ ಬೆಳೆದು ಬಂದಿತು. ಆದರೆ ಮುಂದೆ ಗರ್ಭ ಧರಿಸುವ ಕ್ರಿಯೆಯಲ್ಲಿ ತನ್ನ ಪಾತ್ರವೇ ಪ್ರಧಾನವಾದುದು ಎಂಬ ಅರಿವು ಬಂದಾಗ ಪುರುಷ ಕೈಮೇಲಾಯಿತು. ಇನ್ನೊಂದು ಪ್ರಮುಖವಾದ ಘಟನೆಯೆಂದರೆ ಸಾವು. ಮರಣ ಒಂದು ಬಗೆಹರಿಯದ ಬಹುದೊಡ್ಡ ಸಮಸ್ಯೆಯಾಗಿ ಕಾಡಿರಬೇಕು.''[೨೦] ಯಾಕೆಂದರೆ ಈ ಸಂದರ್ಭದಲ್ಲಿ ಇದ್ದ ವ್ಯಕ್ತಿ ಇನ್ನೊಂದು ಕ್ಷಣದಲ್ಲಿ ಮರಣ ಹೊಂದುವುದು. ಒಂದು ರೀತಿಯ ಕುತೂಹಲ ಹಾಗೂ ಭಯಂಕರವಾದ ಅನುಭವವಾಗಿದೆ ಆದಿಮ ಮನುಷ್ಯನಿಗೆ. ಈ ಅನುಭವವನ್ನು ಮೀರುವ ಪ್ರಯತ್ನದಲ್ಲಿ ಅವ್ಯಕ್ತ ಶಕ್ತಿಯ ಕಡೆ ಮುಖ ಮಾಡುವಂತೆ ಮಾಡಿರಬೇಕು, ಅಲ್ಲದೆ ನಿತ್ಯ ಜೀವನದ ಹೋರಾಟದ ಬದುಕು ಹಾಗೂ ಇದಕ್ಕೆ ಪೂರಕವಾದ ಅನೇಕ ಘಟನೆಗಳು ಅವ್ಯಕ್ತ ಶಕ್ತಿಯನ್ನು ಹುಡುಕುವಂತೆ ಮಾಡಿತು. ಮೊದಲಿಗೆ ಅವನಿಗೆ ಕಂಡಿದ್ದು ನಾಶ ಮಾಡುವ ಶಕ್ತಿಯನ್ನು, ಈ ನಾಶ ಮಾಡುವ ಶಕ್ತಿಯನ್ನು ಪೊರೆಯುವ ಶಕ್ತಿಯನ್ನಾಗಿ ಮಾಡಿಕೊಳ್ಳುವ ಅಥವಾ ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಅದಕ್ಕೊಂದು ರೂಪ ಕೊಟ್ಟುಕೊಂಡ. "ಯಾವುದು ನಾಶ ಮಾಡುವುದು ಅಥವಾ ಹುಟ್ಟಿಸುವುದು ಅದೇ ಪೊರೆಯುವ ಶಕ್ತಿಯಾಗಿ ಕಾರ್ಯನಿರ್ವಹಿಸುವ ಗುಣವನ್ನು ಹೊಂದಿರುವಂತವು. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಾಗ ಅವು ರಕ್ಷಿಸುವ ಬದುಕನ್ನು ಹಸನ ಮಾಡುವ ಚೈತನ್ಯಗಳಾಗುತ್ತವೆ. ಅಂತೆಯೇ ತಾಯಿಯೂ ಸಹ, ಅವಳಿಂದಲೇ ಹುಟ್ಟು, ಅವಳಿಂದಲೇ ರಕ್ಷಣೆ ಹಾಗೂ ಅವಳಲ್ಲಿಯೇ ಸೇರಿ ಮತ್ತೆ ಅವಳಿಂದಲೇ ಹುಟ್ಟಿಬರುವ ಈ ಕ್ರಿಯೆಗಳು ಅವಳನ್ನು ಒಂದು ರೀತಿಯ ದೈವಿಕ ಗುಣಗಳನ್ನು ಹೊಂದಿರುವ ಶಕ್ತಿಯನ್ನಾಗಿ ನೋಡುವಂತೆ ಮಾಡಿತು. ಮುಂದೆ ಅದಕ್ಕೆ ಅವ್ಯಕ್ತ ಶಕ್ತಿಯ ರೂಪವನ್ನು ಕೊಡಲಾಗಿರಬೇಕು. ಕೃಷಿಯ ಆವಿಷ್ಕಾರದ ನಂತರದಲ್ಲಿ ಹೆಣ್ಣಿನ ರೀತಿಯಲ್ಲಿಯೇ ಫಲವಂತಿಕೆಯ ಇನ್ನೊಂದು ರೂಪವಾಗಿ ಭೂಮಿಯೂ ಕಂಡಿತು. ಹೆಣ್ಣು ಹಾಗೂ ಭೂಮಿಯು ಸಮಾನವಾದ ಗುಣಗಳನ್ನು ಹೊಂದಿರುವುದರಿಂದ ಅವುಗಳನ್ನು ದೇವತೆಯ ರೂಪದಲ್ಲಿ ಆರಾಧಿಸಲು ತೊಡಗಿದನು.''[೨೧]

ಈ ತೆರನಾದ ಕಲ್ಪನೆಯು ವಿಸ್ತೃತವಾಗುತ್ತಾ ಹೋದಂತೆ ನಿಸರ್ಗದ ಪ್ರತಿಯೊಂದನ್ನು ದೈವದ ರೂಪವಾಗಿ ಕಾಣಲಾಯಿತು. ಹೀಗೆ ದೈವದ ಪರಿಧಿ ವಿಸ್ತೃತಗೊಂಡಂತೆ ಆಚರಣೆಗಳು, ನಂಬಿಕೆಗಳು ಹುಟ್ಟಿಕೊಳ್ಳತೊಡಗಿದವು. ಮುಂದೆ ಪುರುಷ ಪ್ರಧಾನ ನೆಲೆಗೆ ಹೋದಾಗಲೂ ಸಹ ಸಾಮಾಜಿಕ ಪದ್ಧತಿಗಳು ಬದಲಾವಣೆಯನ್ನು ಹೊಂದಿದಾಗಲೂ ಮೂಲ ನಂಬಿಕೆಗಳು ಬದಲಾವಣೆ ಹೊಂದಲಾಗಲಿಲ್ಲ. ಅವು ಹಾಗೆಯೇ ಉಳಿದುಕೊಂಡು ಬಂದವು. "ಭಾರತದ ಧಾರ್ಮಿಕ ಇತಿಹಾಸದಲ್ಲಿ ಯಂತೂ ಇದು ನಿಜವು ಕೂಡಾ ಪುರುಷ ಪ್ರಾಧಾನ್ಯ ದೈವಗಳ ಮಧ್ಯದಲ್ಲಿಯೂ ಮಾತೃದೇವತೆಯರು ಅದು ಶಿಷ್ಟವಾಗಿರಬಹುದು ಗ್ರಾಮ ದೇವತೆಗಳಾಗಿರಬಹುದು ಅವು ತಮ್ಮ ಸ್ಥಾನವನ್ನು ಬಿಟ್ಟುಕೊಡದೆ ಉಳಿಸಿಕೊಂಡು ಬಂದಿವೆ.''[೨೨] ಮುಂದುವರೆದು ಹೇಳುವುದಾದರೆ ಮನುಷ್ಯನ ಪಾಲನೆ, ಪೋಷಣೆ,

ರಕ್ಷಕ ದೇವತೆಯರಾಗಿ ಸಮೃದ್ಧಿಯನ್ನು ತಂದುಕೊಡುವ ದೇವತೆಯರಾಗಿ ಹಾಗೂ ರೋಗಗಳನ್ನು ನಿಯಂತ್ರಿಸುವ ದೇವತೆಯರಾಗಿದ್ದಾರೆ. ಈ ರೀತಿಯ ಬೆಳವಣಿಗೆಗೆ ಪ್ರಧಾನವಾದ ಕಾರಣವೆಂದರೆ ಸಾಮಾಜಿಕ ವ್ಯವಸ್ಥೆ ಅದರಲ್ಲೂ ಮಾತೃಮೂಲದ ಕುಟುಂಬ ವ್ಯವಸ್ಥೆಯೆಂದರೆ ತಪ್ಪಾಗಲಿಕ್ಕಿಲ್ಲ. ದಕ್ಷಿಣ ಏಷ್ಯಾದಲ್ಲಿ ಅದರಲ್ಲೂ ಭಾರತವಂತೂ ಇಂದಿಗೂ ಮಾತೃವಂಶೀಯ ಗುಣಗಳನ್ನು ಉಳಿಸಿಕೊಂಡು ಬಂದಿರುವುದು ಆ ಮೂಲಕ ಶಕ್ತಿ ಆರಾಧನೆಯ ಕೇಂದ್ರವಾಗಿರುವುದಕ್ಕೆ ಕಾರಣವಾಗಿದೆ.

ಪಿತೃಪ್ರಧಾನ ವ್ಯವಸ್ಥೆಯು ಅನುಮಾನದ ಅಥವಾ ಹಮ್ಮಿನ ಅಥವಾ ಧಾರ್ಷ್ಟ್ಯವಾಗಿದ್ದು, ಮಾತೃ ವ್ಯವಸ್ಥೆಯು ನಿಜವಾದ ವ್ಯವಸ್ಥೆಯಾಗಿದೆ ಎನ್ನಲಾಗಿದೆ. ಮಗು ಹುಟ್ಟಿನಿಂದ ಹಿಡಿದು ಬೆಳೆದು ದೊಡ್ಡದಾಗುವ ತನಕ ಅದು ತಾಯಿಯ ಆಶ್ರಯದಲ್ಲಿಯೇ ಇರುತ್ತದೆ. ತಾಯಿಯನ್ನು ಆಶ್ರಯಿಸಿದಷ್ಟು ತಂದೆಯನ್ನು ಅದು ಆಶ್ರಯಿಸುವುದಿಲ್ಲ. ಕುಟುಂಬದಲ್ಲಿಯೂ ಸಹ ತಂದೆ ದುಡಿಯುವ ಕೆಲಸವನ್ನು ಮಾತ್ರ ನಿರ್ವಹಿಸುತ್ತಾನೆ. ಅಂದರೆ ಅವನು ಆರ್ಥಿಕವಾಗಿ ಗಳಿಸುವುದಷ್ಟೇ ಅವನ ಕೆಲಸ. ಉಳಿದಂತೆ ಎಲ್ಲಾ ಸಾಮಾಜಿಕ ಜವಾಬ್ದಾರಿಗಳನ್ನು ಸ್ತ್ರೀಯರೇ ನಿರ್ವಹಿಸುತ್ತಾರೆ. ಈ ಕಾರಣದಿಂದ ವಿದ್ವಾಂಸರು ಪ್ರಾಚೀನ ಸಮಾಜದಲ್ಲಿ ಪುರುಷನಿಗಿಂತ ಸ್ತ್ರೀಯರೇ ಪ್ರಧಾನ ಪಾತ್ರವಹಿಸುತ್ತಿದ್ದರು ಎಂದಿದ್ದಾರೆ. ಅಲ್ಲದೆ ಮಕ್ಕಳ ಹಾಗೂ ಇತರರ ಬೇಡಿಕೆಗಳಿಗೆ ತಾಯಿಯು ಮಣಿಯುವಷ್ಟು ಬೇಗ ತಂದೆ ಮಣಿಯುವುದಿಲ್ಲ.

ಮಾತೃ ದೇವತೆಯ ವಿಕಾಸ ಉನ್ನತ ಹಂತಕ್ಕೆ ಬಂದದ್ದು ಕಂಚಿನ ಯುಗದಲ್ಲಿ ಎಂದು ಹೇಳಬಹುದು. ಜೊತೆಗೆ ಇದೇ ಯುಗದಲ್ಲಿ ಅವನತಿಯತ್ತ ಸಾಗಿದ್ದು ಕೂಡಾ ಈ ಕಾಲದಲ್ಲಿಯೇ. ಇದಕ್ಕೆ ಅತೀ ಮುಖ್ಯವಾದ ಕಾರಣವೆಂದರೆ ಮಾನವ ನಾಗರೀಕತೆಯತ್ತ ಹೆಜ್ಜೆಯಿಡುತ್ತಿರುವ ಸಂಧಿಕಾಲವೂ ಹೌದು. ಹಿಂದಿನ ಆಹಾರ ಸಂಗ್ರಹಣೆ, ಬೇಟೆಯ ಹಂತದಿಂದ ಕೃಷಿಯನ್ನಾಧರಿಸಿ ಜೀವನ ನಿರ್ವಹಿಸುತ್ತಾ ಅಲೆಮಾರಿ ಜೀವನ ನಡೆಸುತ್ತಿದ್ದ ಮನುಷ್ಯ ಒಂದು ಸಂಘಟಿತನಾಗಿ ಸಮುದಾಯದ ಮೂಲದಲ್ಲಿ ನೆಲೆನಿಂತ. ಹೀಗೆ ನೆಲೆನಿಂತು ಸಣ್ಣ ಪ್ರಮಾಣದ ಕೃಷಿಯನ್ನು ಪ್ರಾರಭಿಸಲಾಯಿತು. ಮೊದಲು ಕೈಯಿಂದಲೇ ನಡೆಯುತ್ತಿತ್ತು. ಆದರೆ ಯಾವಾಗ ಅದು ದೊಡ್ಡ ಪ್ರಮಾಣದಲ್ಲಿ ಭೂಮಿಯ ಉಪಯೋಗ ಹಾಗೂ ಪ್ರಾಣಿಗಳ ಬಳಕೆಯಿಂದ ಕೃಷಿಯ ವ್ಯಾಪ್ತಿ ಹಿಗ್ಗಿತ್ತು. ಅದು ಅಲ್ಲದೆ ಕಬ್ಬಿಣದ ಬಳಕೆಯು ಈ ಕಾಲಕ್ಕಾಗಲೇ ಬಳಕೆಗೆ ಬಂದಿದ್ದರಿಂದ ಮಹಿಳೆಯು ಕೃಷಿಯನ್ನು ಮಾಡಲಾರದ ಸ್ಥಿತಿಯನ್ನು ತಲುಪಿ ಅದು ಪುರುಷನ ಕೆಲಸವಾಗಿ ಸ್ಥಿತ್ಯಂತರವಾಗಿರಬೇಕು. ಇದಕ್ಕಿಂತ ಮುಂಚೆ ಭೂಮಿಯ ಮೇಲಿನ ಒಡೆತನದ ಸ್ವಾಮ್ಯತೆಯ ಅರಿವು ಪುರುಷನಿಗೆ ಇರಲಿಲ್ಲ. ಮುಂದೆ "ಸಮುದಾಯ ಕೇಂದ್ರಿತವಾದ ಸಾಮಾಜಿಕ ವ್ಯವಸ್ಥೆಯು ಗ್ರಾಮಗಳಾಗಿ, ಗ್ರಾಮಗಳು ನಗರಗಳಾಗಿ ಪರಿವರ್ತಿತವಾಗುವುದು ಆ ಮೂಲಕ ಹೋರಾಟದ ಜೀವನ ಆರಂಭವಾಯಿತು. ಆಯುಧಗಳ ಆವಿಷ್ಕಾರವು ವೀರರನ್ನು ಹುಟ್ಟುಹಾಕಲು ಕಾರಣವಾಯಿತು".[11]

ಇಂತಹ ಸ್ಥಿತ್ಯಂತರಗಳ ಪ್ರಭಾವದಿಂದ ಸಮಾಜದಲ್ಲಿ ಸ್ತ್ರೀಪ್ರಾಧಾನ್ಯತೆ ಕಡಿಮೆಯಾಗಿ ಪುರುಷ ಪ್ರಾಧಾನ್ಯತೆ ಹೆಚ್ಚಾದಂತೆ ಮಾತೃ ದೇವತೆಯ ಸ್ಥಾನ ಕೂಡ ಕಡಿಮೆಯಾಯಿತು. ಈ ಕಂಚಿನ ಯುಗದ ಮತ್ತೊಂದು ಪ್ರಮುಖ ಬದಲಾವಣೆಯೆಂದರೆ "ಭೂಮಿ ಹಾಗೂ ಆಕಾಶಗಳನ್ನು ಬೇರೆ ಎಂದು ತಿಳಿಯಲಾಯಿತು."[೩೪] ಈ ಮೂಲಕ ಸಮಾಜದ ಬೆಳವಣಿಗೆಯಾಗಿರುವುದು ಕಂಡುಬರುತ್ತದೆ. ಅಲ್ಲದೆ ಸಮಾಜವು ಮಕ್ಕಳನ್ನು ಗುರುತಿಸುವಾಗ ಹೆಣ್ಣಿನ ಕಡೆಯಿಂದಲೇ ಗುರ್ತಿಸಲಾಗುತ್ತಿತ್ತು, ಈ ಕಾರಣಕ್ಕಾಗಿ ಕುಟುಂಬದ ಆಸ್ತಿಯೂ ಸಹ ತಾಯಿಯ ಹೆಸರಿನಲ್ಲಿಯೇ ಮುಂದಿನ ತಲೆಮಾರಿನ ಹೆಣ್ಣಿಗೆ ವರ್ಗಾಯಿಸಲ್ಪಡುತ್ತಿತ್ತು. ಮುಂದೆ ಸಿಂಧೂ ನಾಗರಿಕತೆ ಕಾಲಕ್ಕೆ ಸಂಪೂರ್ಣ ಅಲೆಮಾರಿತನವನ್ನು ಬಿಟ್ಟುಕೊಟ್ಟು, ಗುಂಪಾಗಿ, ಒಟ್ಟಾಗಿ ಬದುಕುವ ಸಮುದಾಯ ಸಂಸ್ಕೃತಿಯನ್ನು ಹೊಂದಿದ್ದು ನೋಡಬಹುದು. ಹೀಗೆ ಸಮಾಜವು ಆರ್ಥಿಕವಾಗಿ ಸಬಲೀಕರಣವಾದಂತೆ ಪುರುಷನ ಆಸೆ ಆಕಾಂಕ್ಷೆಗಳಿಗೆ ರೆಕ್ಕೆಪುಕ್ಕಗಳೂ ಮೂಡಿ ಮಹಿಳೆಯ ಪ್ರಧಾನ್ಯತೆ ಕಡಿಮೆಯಾಗಲು ಕಾರಣವಾಯಿತು. ಇದರಿಂದ ಸಾಂಸ್ಕೃತಿಕ ಒಡೆತನದ ಬಗೆಗೆ ಹೆಚ್ಚಿನ ಆಸಕ್ತಿ ಉಂಟಾಗಿ ಪುರುಷ ಸಬಲನಾಗತೊಡಗಿದ ಆತನ ದೈಹಿಕ ಬಲದ ಜೊತೆಗೆ ಆರ್ಥಿಕ ಪರಿಸ್ಥಿತಿ ಸೇರಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಹೀಗಾಗಿ ಹೆಣ್ಣಿನ ಮೇಲಿನ ಅಧಿಕಾರವನ್ನು ಪಡೆಯಲು ಸಾಧ್ಯವಾಯಿತು. ಇಷ್ಟೆಲ್ಲಾ ಅವಕಾಶಗಳನ್ನು ಪಡೆದುಕೊಂಡ ಪುರುಷನು ಒಂದು ಕಡೆ ಸ್ತ್ರೀ ದೈವಗಳನ್ನು ಆರಾಧನೆಯ ರೂಪಗಳಲ್ಲಿ ನೋಡಿದ್ದಾರೆ. "ಅದು ಭೂಮಿ ತಾಯಿಯಾಗಿ, ಮನುಷ್ಯನ ತಾಯಿಯಾಗಿ, ದೇವತೆಗಳ ತಾಯಿಯಾಗಿ, ವನದೇವತೆಯಾಗಿ ಹಾಗೂ ಪ್ರಾಣಿಗಳ ದೇವತೆಯಾಗಿ, ವೃಕ್ಷ ದೇವತೆಯಾಗಿ, ಪಕ್ಷಿಗಳ ದೇವತೆಯಾಗಿ"[೩೫] ಇನ್ನೂ ಅನೇಕ ಸ್ವರೂಪಗಳಿಂದ ಶಕ್ತಿಯ ಆರಾಧನೆಯನ್ನು ಮಾಡಿದ್ದಾರೆ. ತದನಂತರ ಕಾಲದಲ್ಲಿ ಅಂದರೆ ವೇದ ಯುಗದ ಸಂದರ್ಭದಲ್ಲಿಯೂ ಸಹ ಸ್ತ್ರೀ ದೈವಗಳನ್ನು ಆರಾಧನೆ ಮಾಡುವುದು ಕಂಡುಬರುತ್ತದೆ. ಅದು ವಿಶ್ವಸೃಷ್ಟಿಯ ರಚನೆಯಲ್ಲಿ ಕೆಲವು ದೇವತೆಗಳು ಕಂಡುಬಂದರು ಪ್ರಧಾನವಾದ ಪಾತ್ರವಹಿಸದೇ ಪುರುಷನ ಅಧೀನತೆಯಲ್ಲಿ ಬರುತ್ತಾರೆ. ಉದಾಹರಣೆಗೆ ಅದಿತಿಯಂತಹ ದೇವತೆಯ ಸ್ವತಂತ್ರವಾಗಿ ಕಂಡುಬಂದರು. ಬದಲಾದ ಕಾಲದಲ್ಲಿ ಬ್ರಹ್ಮನ ನಂತರದ ಸ್ಥಾನವನ್ನು ಪಡೆಯುತ್ತಾಳೆ. ಈ ಅಂಶಕ್ಕೆ ಸೇರಿಸಿ ಹೇಳುವುದಾದರೆ "ಲ್ಯಾನ್ನಗಟ್‌ಊಡ್ ಅವರು ವೇದಗಳಲ್ಲಿ ಕಂಡುಬರುವ ದೇವತೆಗಳನ್ನು ಸ್ವತಂತ್ರ, ಅರೆಸ್ವತಂತ್ರ ಹಾಗೂ ಸಂಪೂರ್ಣವಾಗಿ ಆದೀನದಲ್ಲಿರುವ ದೇವತೆಗಳೆಂದು ನೋಡುತ್ತಾರೆ. ಅಥವಾ ಮದುವೆಯಾಗದ ಮದುವೆಯಾದ ಹೆಂಡತಿಯರ ರೂಪದಲ್ಲಿ ನೋಡುತ್ತಾರೆ. ಅದಿತಿ, ಉಷಸ್ ದೇವತೆಯರು ಸ್ವತಂತ್ರವಾಗಿ ಕಂಡುಬಂದರೆ, ಪೃಥ್ವಿಯು ದ್ಯೌದ ಪತ್ನಿಯಾಗಿದ್ದಾಳೆ. ಅದೇ ರೀತಿ ಸಚಿ ಸಂಪೂರ್ಣವಾಗಿ ಇಂದ್ರನ ಅಧೀನ ದೇವತೆಯಾಗಿದ್ದಾಳೆ. ಋಗ್ವೇದದಲ್ಲಿ ಕಂಡುಬರುವ ದೇವತೆಗಳು ಸಂಪೂರ್ಣವಾಗಿ ತಮ್ಮದೇ ಆದ ಅಸ್ತಿತ್ವವನ್ನು ಹೊಂದಿರುವುದು ಕಂಡುಬರುವುದಿಲ್ಲ. ಉಸಸ್ ದೇವತೆಯು ಸ್ವತಂತ್ರವಾಗಿ ಕಂಡುಬಂದರೂ ಸಹ ಇಂದ್ರನ ಗಧಾಘಾತಕ್ಕೆ ಅವಳು ಬಲಿಯಾಗಬೇಕಾಗಿ ಬರುತ್ತದೆ. ಮುಂದೆ ಯುದ್ಧವೊಂದರಲ್ಲಿ ಇಂದ್ರನಿಗೆ ಸೋತು ಶರಣಾಗುತ್ತಾಳೆ."[೩೬]

ಹೀಗೆ ಮಹಿಳೆಯ ಸ್ಥಾನಮಾನ ಹಾಗೂ ದೈವಾರಧನೆಯಲ್ಲಿ ಆದ ಬದಲಾವಣೆಗಳು ಅಂದರೆ ಅದು ಜಾತಿ ವ್ಯವಸ್ಥೆಯಾಗಿರಬಹುದು, ಕುಟುಂಬ ಪದ್ಧತಿಯ ಅಳವಡಿಕೆಯಾಗಿರಬಹುದು, ಕುಟುಂಬ ವ್ಯವಸ್ಥೆಯಾಗಿರಬಹುದು ಅಥವಾ ಆರ್ಥಿಕವಾಗಿ ಗಂಡು ಸಬಲನಾಗುವುದರ ಮೂಲಕ ಇಡೀ ಸಮಾಜವನ್ನು ತನ್ನ ಹತೋಟಿಯಲ್ಲಿ ಸ್ತ್ರೀ ದೇವತೆಗಳ ಆರಾಧನೆಯೂ ತನ್ನ ವಶಕ್ಕೆ ತೆಗೆದುಕೊಂಡಿರುವ ಹಾಗೆ ಕಂಡುಬರುತ್ತದೆ. ಈ ಕಾರಣದಿಂದಲೇ ತಾಯಿಯು ತನ್ನ ಸ್ಥಾನವನ್ನು ಕಳೆದುಕೊಳ್ಳಲು ಸಾಧ್ಯವಾಯಿತು. ಈ ಸ್ಥಾನ ಕಳೆದುಕೊಂಡಿದ್ದರಿಂದ ಬುಡಕಟ್ಟು ಸಮುದಾಯಗಳಲ್ಲಿ ಸಹ ದೇವತೆಯು ತಮ್ಮ ಸ್ಥಾನವನ್ನು ಎರಡನಯ ಸ್ಥಾನಕ್ಕೆ ಬರಬೇಕಾಯಿತು. ಅದರಲ್ಲಿ ಪೂಜಾರಿಣಿಯ ಸ್ಥಾನವಾಗಿರ ಬಹುದು, ಕುಟುಂಬದ ಸ್ಥಾನವಾಗಿರಬಹುದು, ಅಥವಾ ಉಚ್ಛಸ್ಥಾನವನ್ನು ಹೊಂದಿರುವ ದೇವತ ೆಯಾಗಿರಬಹುದು. ಈ ಎಲ್ಲವೂ ತಮ್ಮ ಸ್ಥಾನಮಾನವನ್ನು ಕಳೆದುಕೊಳ್ಳಲು ಆರಂಭವಾಯಿತು. ಮಾತೃಕೇಂದ್ರಿತವಾದ ಸಮಾಜದಿಂದ ಪಿತೃಪ್ರಧಾನ ಹಂತಕ್ಕೆ ಸ್ಥಿತ್ಯಂತರಗೊಂಡಾಗ ವಿಶ್ವದ ಎಲ್ಲಾ ಸಂಸ್ಕೃತಿಗಳಲ್ಲಿ ಮಾತೃದೇವತೆಯ ಸ್ಥಾನ ಕೆಳಗಿಳಿದಿರುವುದನ್ನು ಕಾಣಬಹುದು. ಮೊದಲೇ ಹೇಳಿದಂತೆ ಕೃಷಿ ಹಾಗೂ ಅದರ ಉಪಭೋಗಗಳಿಂದ ಮಾತೃ ಸಮಾಜ ತನ್ನ ಅವನತಿಯನ್ನು ಹೊಂದುತ್ತಾ ನಡೆದಂತೆ ಪಿತೃಪ್ರಧಾನ ಸಮಾಜದ ಕಡೆ ಮುಖ ಮಾಡಿತು. ಹೀಗೆ ಪಿತೃಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರಗೊಂಡಾಗ ತಾಯಿಯ ಬದಲಾಗಿ ತಂದೆಗೆ ಹೆಚ್ಚು ಮನ್ನಣೆ ದೊರೆಯಿತು. "ಮಾತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರಗೊಂಡಿದ್ದನ್ನು As the great historical defect of the faminine Sex ಎಂದು ಹೇಳಲಾಗಿದೆ."[೩೭] ಕಾಲಕ್ರಮೇಣ ಮಹಿಳೆಯರ ಜೀವನದ ಸುವರ್ಣ ದಿನಗಳು ಕಡಿಮೆಯಾಗುತ್ತಾ ಹೋದವು. ಪುರುಷ ಪ್ರಾಧಾನ್ಯತೆಯಿಂದ ಸ್ತ್ರೀಯರ ಮೇಲಿನ ಗೌರವ ಹಾಗೂ ಸ್ವಾತಂತ್ರಗಳು ಗೌಣವಾಗುತ್ತಾ ಬಂದವು. ಗಂಡಿಗೆ ಯಾವ ರೀತಿಯಿಂದಲೂ ಸಮಾನಳಲ್ಲವೆಂದೂ, ಅವಳು ಮನೆಯ ಕೆಲಸ ಮಾಡಲು ಮಾತ್ರ ಯೋಗ್ಯಳು, ಅಲ್ಲದೆ ಮಕ್ಕಳನ್ನು ಪಡೆಯಲು ಗಂಡೇ ಪ್ರಮುಖ ಪಾತ್ರವಹಿಸುತ್ತಾನೆ. ಇಲ್ಲಿ ಹೆಣ್ಣಿನ ಪಾತ್ರವೇನು ಇಲ್ಲ ಎಂಬ ಅಂಶಗಳು ಪ್ರಮುಖವಾಗಿ ಹೆಣ್ಣಿನ ಸ್ಥಾನ ಅಧೋಗತಿಗಿಳಿದಂತೆ ಸ್ತ್ರೀ ದೈವಗಳು ಸಹ ಆರಾಧನೆಯಲ್ಲಿ ಸ್ಥಾನಮಾನವನ್ನು ಕಳೆದುಕೊಂಡಿರಬೇಕು. ಗೃಹಕೃತ್ಯದ ಕೆಲಸಗಳಿಂದಾಗಿಯೇ ಮೊದಲು ಮನೆಯ ಯಜಮಾನಿಕೆಯನ್ನು ಹೊಂದಿದ ಮಹಿಳೆ ಈಗ ಅದೇ ಕೆಲಸಗಳಿಂದಾಗಿ ಮನೆಯಲ್ಲಿ ತನ್ನ ಪ್ರಥಮ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು.

ಹೀಗೆ ಬದಲಾದ ಸಾಮಾಜಿಕ ಸಂದರ್ಭದಲ್ಲಿ ಸಮಾಜವು ಪುರುಷನಿಗೆ ಸರ್ವ ಅಧಿಕಾರವನ್ನು ನೀಡಿತು. ಆ ಮೂಲಕ ಮಹಿಳೆ ಗಂಡಿಗೆ ಅಡಿಯಾಳಾಗಬೇಕಾಯಿತು. ಗಂಡು ಎಷ್ಟೇ ಕೆಟ್ಟವನಾಗಿರಲಿ ಆತನ ಹಿಡಿತದಲ್ಲಿ ಜೀವಿಸಬೇಕಾಯಿತು. ಗಂಡು ಎಷ್ಟು ಬೇಕಾದರೂ ಹೆಣ್ಣುಗಳನ್ನು ಮದುವೆಯಾಗಬಹುದಾಗಿತ್ತು. ಆದರೆ ಹೆಣ್ಣಿಗೆ ಗಂಡನೊಬ್ಬನೆ, ಅವನೆ ದೈವವಾಗುವ ಮೂಲಕ ಪಾತಿವ್ರತ್ಯದ ಅಗತ್ಯತೆಯನ್ನು ಗಟ್ಟಿಗೊಳಿಸಲಾಯಿತು. ಇದರಿಂದಾಗಿ ಅನೇಕ ಅನಿಷ್ಟ ಪರಿಣಾಮಗಳು

ಉಂಟಾದವು. ಜೊತೆಗೆ ಮೊದಲಿದ್ದ ಸ್ತ್ರೀ ದೈವಗಳ ಆರಾಧನೆಯೂ ಕಡಿಮೆಯಾಗಿ ಅದರ ಸ್ಥಾನದಲ್ಲಿ ಪುರುಷ ದೈವಗಳು ಪ್ರಮುಖವಾದ ಪಾತ್ರ ನಿರ್ವಹಿಸಲು ಪ್ರಾರಂಭಿಸಿದವು. ಆದರೂ ಸಹ ದ್ರಾವಿಡ ಹಾಗೂ ಇನ್ನಿತರೆ ಬುಡಕಟ್ಟು ಸಮುದಾಯಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಮಾತೃ ಮೂಲೀಯ ಅಂಶಗಳು ಸಾಬೀತು ಪಡಿಸುತ್ತವೆ. ಅದು ಇಂದಿನ ಬೇಡ ಬುಡಕಟ್ಟು ಸಮುದಾಯದಲ್ಲಿ ಆಚರಣೆಯಲ್ಲಿರುವ ಹುಲಿಗೆಮ್ಮ, ಎಲ್ಲಮ್ಮ, ತಾಯಮ್ಮ, ಸುಂಕಲಮ್ಮ, ಇನ್ನಿತರ ಸ್ತ್ರೀ ದೈವಗಳನ್ನು ಇವತ್ತಿನ ಪುರುಷ ಪ್ರಾಧಾನ್ಯ ಸಮಾಜದಲ್ಲಿ ಕೆಲವೊಂದು ಕ್ರಮಗಳು ಕಳಚಿಕೊಂಡು ಆಚರಣೆ ಮಾಡುತ್ತಿರುವುದು ಕಂಡುಬರುತ್ತದೆ.

ಉದಾಹರಣೆಗೆ ಶಾಹಪೂರು ತಾಲೂಕಿನ ಸಗರ ಎಂಬ ಗ್ರಾಮದ ಹೊರಹೊಲಯದಲ್ಲಿ ಬರುವ ದೊಡ್ಡ ಬೆಟ್ಟದಲ್ಲಿ ಇರುವ ಎಲ್ಲಮ್ಮ ದೇವಿಯನ್ನು ಬೇಡ ಸಮುದಾಯದವರು ಬಹಳ ನಿಷ್ಠೆಯಿಂದ ಆರಾಧನೆಯನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಎಲ್ಲಮ್ಮನಿಗೆ ಹರಕೆ ಒತ್ತಿರುವ ಸ್ತ್ರೀಯೂ ತನ್ನ ತಲೆಯ ಮೇಲೆ ದೀಪದ ಆರತಿಯನ್ನು ಹೊತ್ತುಕೊಂಡು ಎಲ್ಲಮ್ಮನ ಸನ್ನಿಧಿಗೆ ಹೋಗುವವರೆಗೆ ಮತ್ತು ಮರಳಿ ತಮ್ಮ ಸ್ಥಳಕ್ಕೆ ಬರುವ ಸಮಯದವರೆಗೂ ಪುರುಷರು ಅತಿಯಾದ ಭಕ್ತಿಯನ್ನು ವ್ಯಕ್ತಪಡಿಸುವುದು ನಮ್ಮ ಗಮನಕ್ಕೆ ಬಂತು. ಆದರೆ ವಿಚಿತ್ರವೆಂದರೆ ಈ ಆಚರಣೆ ಮುಗಿದ ನಂತರದಲ್ಲಿ ಅದೇ ಪುರುಷರು ಮಹಿಳೆಯನ್ನು ಕಾಣುವಂತಹ, ನೀಡುವಂತಹ ಗೌರವಗಳು ಬೇರೆಯಾಗುತ್ತವೆ. ಅಂದರೆ ಪುರುಷನು ಪ್ರಾಚೀನ ಸಮಯದಿಂದಲೂ ಮಹಿಳೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಶೈಲಜ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪುಟ.೨.

೨. ಅದೇ ಪುಟ.೩.

೩. ಅದೇ ಪುಟ.೧೦.

೪. ಕರಿಶೆಟ್ಟಿ ರುದ್ರಪ್ಪ, ಮ್ಯಾಸ ನಾಯಕರ ಒಂದು ಜನಾಂಗೀಯ ಅಧ್ಯಯನ, ೧೯೯೫, ಪುಟ.೧೩

೫. ಆರ್.ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪುಟ.೮೨.

೬. ಜಗದೀಶಕುಮಾರ್, ಬೇಡಬುಡಕಟ್ಟಿನ ಬೇಟೆ ಆಚರಣೆ: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪, ಪುಟ.೫

೭. ಕೆ.ಅಭಿಶಂಕರ್, ಬಳ್ಳಾರಿ ಜಿಲ್ಲೆಯ ಗೆಸೆಟಿಯರ್, ೧೯೭೨, ಪುಟ.೧೬-೧೭.

೮. ಎಂ.ಕೆ.ದುರುಗಪ್ಪ, ವಿಜಯನಗರೋತ್ತರ ಕಾಲೀನ ಬೇಡ ಜನಾಂಗದಲ್ಲಿನ ಸ್ಥಿತ್ಯಂತರಗಳು ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೩. ಪುಟ.೧೧.

೯. ಎಲ್.ಕೆ.ಎ.ಐಯಾರ್, ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ವ್ಯಾಲೂಮ್ V. ೧೯೮೮. ಪುಟ.೧೯೭.

೧೦. ವಿರೂಪಾಕ್ಷಿ ಪೂಜಾರಹಳ್ಳಿ, ಮಧ್ಯಕಾಲೀನ ಕನ್ನಡ ಕಾವ್ಯದಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು ಒಂದು ಅಧ್ಯಯನ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೦೦. ಪುಟ.೯೫

೧೧. ವಿರೂಪಾಕ್ಷಿ ಪೂಜಾರಹಳ್ಳಿ, ಮಧ್ಯಕಾಲೀನ ಕನ್ನಡ ಕಾವ್ಯದಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು ಒಂದು ಅಧ್ಯಯನ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೦೦. ಪುಟ.೯೭.

೧೨. ಕರಿಶೆಟ್ಟಿ ರುದ್ರಪ್ಪ, ಮ್ಯಾಸ ನಾಯಕರ ಜನಾಂಗೀಕ ಅಧ್ಯಯನ, ೧೯೯೫ ಪುಟ.೧೧.

೧೩. ಕೆ.ಎಂ.ಮೇತ್ರಿ, ಬುಡಕಟ್ಟು ಕುಲಕಸುಬುಗಳು, ೨೦೦೨, ಪುಟ.೧೮೭-೧೮೮.

೧೪. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ೨೦೦೭, ಪುಟ.೩೨೦.

೧೫. ನಂ.ತಪಸ್ವಿಕುಮಾರ, ಸಂಸ್ಕೃತಿ ವಿಕಾಸ, ೨೦೦೦, ಪುಟ.೧೩೬.

೧೬. ಅದೇ ಪುಟ. ೧೩೬.

೧೭. ಅದೇ ಪುಟ.೧೩೭.

೧೮. ಮೊಗಳ್ಳಿ ಗಣೇಶ, ಆದಿಮ, ೨೦೦೫, ಪುಟ.೫೨.

೧೯. ಡಿ.ಆರ್.ನಾಗರಾಜ್, ಸ್ತ್ರೀವಾದಿ ಸಾಹಿತ್ಯ ಮೀಮಾಂಸೆಯ ಸ್ವರೂಪ, ಸಮಸ್ಯೆಗಳು, ಸಾಧ್ಯತೆಗಳು ಭಾರತೀಯ ಸ್ತ್ರೀವಾದ ಮನುಚಕ್ರವರ್ತಿ ಎನ್.(ಸಂ) ೧೯೯೩, ಪುಟ.೧೨೨

೨೦. ರಾಜಶೇಖರ ಪಿ.ಕೆ. (ಸಂ) ಬೆಟ್ಟದ ಚಾಮುಂಡಿ, ೧೯೭೨, ಪುಟ.೪೫.

೨೧. ಕಾಪಸೆ ರೇವಪ್ಪ, ಸಂ. ಹಲಸಂಗಿ ಹಾಡುಗಳು, ೨೦೦೦, ಪುಟ. ೧೮೫-೧೮೭.

೨೨. ಎ.ಎಸ್.ಪ್ರಭಾಕರ, ಆದಿವಾಸಿ ಆಖ್ಯಾನ, ೨೦೦೬, ಪುಟ. ೨೫೪ ರಿಂದ ೨೫೫

೨೩. ಕೃಷ್ಣಮೂರ್ತಿ ಹನೂರು, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ೧೯೯೮, ಪುಟ. ೧೪೦ ರಿಂದ ೧೪೧.

೨೪. ಗಾಯಿತ್ರಿ ನಾವಡ, ವಿರಚನೆ, ೧೯೯೭ ಪುಟ.೧೩.

೨೫. ಎಚ್.ಎಸ್.ಶ್ರೀಮತಿ, ದ ಸೆಕೆಂಡ್ ಸೆಕ್ಸ್, ೨೦೦೭ ಪುಟ.೬೧ ರಿಂದ ೬೨.

೨೬. ಅದೇ ಪುಟ. ೭೪ ರಿಂದ ೭೫.

೨೭. ಅದೇ ಪುಟ.೬೨ ರಿಂದ ೬೩.

೨೮. ಕಲವೀರ ಮನ್ವಾಚಾರ್, ಮಾತೃ ದೇವತಾ ಆರಾಧನೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೦೨, ಪುಟ.೩.

೨೯. ಅದೇ ಪುಟ.೩

೩೦. ಅದೇ ಪುಟ.೩

೩೧. ಅದೇ ಪುಟ.೪

೩೨. ಅದೇ ಪುಟ.೫

೩೩. ಅದೇ ಪುಟ.೩೬

೩೪. ಅದೇ ಪುಟ.೩೭

೩೫. ಅದೇ ಪುಟ.೫೦

೩೬. ಅದೇ ಪುಟ.೫೩

೩೭. ಅದೇ ಪುಟ.೨೦೮

ಅಧ್ಯಾಯ ನಾಲ್ಕು

ಬೇಡ ಸಮುದಾಯ ಮತ್ತು ಮಹಿಳೆ

೪.೧. ಮಹಿಳೆ ನಡೆದು ಬಂದ ದಾರಿ

೪.೨. ಮಹಿಳೆಯ ಸಾಮಾಜಿಕ ಸ್ಥಾನಮಾನ

೪.೩. ಶೈಕ್ಷಣಿಕ ಸ್ಥಾನಮಾನ

೪.೪. ರಾಜಕೀಯ ಸ್ಥಾನಮಾನ

೪.೫. ಬೇಡರ ಸಂಸ್ಕೃತಿ ಮತ್ತು ಮಹಿಳೆ

ಈ ಅಧ್ಯಾಯದಲ್ಲಿ ಬೇಡ ಬುಡಕಟ್ಟು ಮಹಿಳೆಯ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನ, ಬೇಡ ಬುಡಕಟ್ಟಿನ ಸಂಸ್ಕೃತಿ ಮತ್ತು ಮಹಿಳೆ ಎಂಬ ವಿಷಯದ ಜೊತೆಗೆ ಇತರೆ ಅಂಶಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಈ ಬುಡಕಟ್ಟು ಸಮುದಾಯದವರ ಕುಟುಂಬಗಳು ಪತಿ, ಪತ್ನಿ ಮತ್ತು ಮಕ್ಕಳನ್ನು ಹೊಂದಿರುವ ಪ್ರಾಥಮಿಕ ಸಂಬಂಧ ಎಂದರೆ ತಂದೆ, ತಾಯಿ, ಮಕ್ಕಳು ಇರುವ ಕುಟುಂಬ, ಖ್ಯಾತ ಸಮಾಜಶಾಸ್ತ್ರಜ್ಞೆ ಇರಾವತಿ ಕರ್ವೆ ತಿಳಿಸುವಂತೆ "ಒಂದೇ ಒಲೆಯಲ್ಲಿ ತಯಾರಿಸಿದ ಅಡಿಗೆಯನ್ನು ಸ್ವೀಕರಿಸುವ, ಸಾಮೂಹಿಕ ಆಸ್ತಿಯನ್ನು ಹೊಂದಿರುವ, ಕುಟುಂಬದ ಪೂಜಾಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಒಂದೇ ರಕ್ತ ಸಂಬಂಧವನ್ನು ಹೊಂದಿರುವ, ಜನ ಸಮೂಹ"[೧]. ಇನ್ನೂ ಕೆಲವು ಕುಟುಂಬಗಳಲ್ಲಿ ಹಿರಿಯರು, ವಯಸ್ಸಾದವರು ಒಟ್ಟಿಗೆ ವಾಸಿಸುತ್ತಾರೆ. ಆ ತೆರನಾದ ಕುಟುಂಬಗಳು ಬಹಳ ವಿರಳವೆಂದು ಹೇಳಬಹುದು. ಕಾರಣವೆಂದರೆ ಬೇಡ ಬುಡಕಟ್ಟಿನ ಜನರು ಬಡತನದಿಂದ ಬಳಲುತ್ತಿರುವುದರಿಂದ, ಆರು ತಿಂಗಳು ತಮ್ಮ ಊರಿನಲ್ಲಿದ್ದರೆ ಇನ್ನುಳಿದ ಆರು ತಿಂಗಳು ನಗರ ಪ್ರದೇಶಗಳಿಗೆ ವಲಸೆ ಹೋಗಿರುವ ಪ್ರಸಂಗಗಳೇ ಅಧಿಕವಾಗಿವೆ. ಇಂತಹ ಸಂದರ್ಭದಲ್ಲಿ ವೃದ್ಧರನ್ನು ಆರೈಕೆಮಾಡುವುದು ಕಷ್ಟದ ಕೆಲಸ. ಈ ಅಧ್ಯಯನಕ್ಕೆ ದೊರೆಯುತ್ತಿರುವಂತಹ ಕುಟುಂಬಗಳೆಲ್ಲವೂ ವಿಭಕ್ತ ಕುಟುಂಬಗಳಾಗಿದ್ದು ಇವರಿಗೆ ಕಡಿಮೆ ಪ್ರಮಾಣದ ಭೂಮಿಯಿದ್ದು ಅದರಲ್ಲಿ ಕೃಷಿ ಮಾಡುವುದರ ಜೊತೆಗೆ ಕೂಲಿಕೆಲಸ ಮಾಡಿಕೊಂಡು ತಮ್ಮ ಜೀವನ ಸಾಗಿಸುತ್ತಾರೆ. ಇಡೀ ಕುಟುಂಬದ ಕೆಲಸಕಾರ್ಯಗಳು ತಂದೆ, ತಾಯಿ ಮತ್ತು ಮಕ್ಕಳ ಸುತ್ತ ಸುತ್ತಿಕೊಂಡಿರುತ್ತದೆ. ಈ ಎಲ್ಲಾ ಕುಟುಂಬಗಳಲ್ಲಿಯೂ ಪುರುಷನೇ ಪ್ರಧಾನ ವ್ಯಕ್ತಿ. ಇವರಲ್ಲಿ ಮಹಿಳೆಯರು, ಮಕ್ಕಳು ಶ್ರಮವಹಿಸಿ ತಂದಂತಹ ಕೂಲಿಯು ಸಹ ಮನೆಯ ಯಜಮಾನನಾದ ಪುರುಷನಿಗೆ ಸೇರುತ್ತದೆ.

೪.೧. ಮಹಿಳೆ ನಡೆದು ಬಂದ ದಾರಿ

ಪುರಾತನ ಕಾಲದ ಮಹಿಳೆಯರ ವಿಷಯದ ಜೊತೆಗೆ ಕೆಲವು "ಆಧುನಿಕ ಮಹಿಳೆಯರ ಸ್ಥಿತಿಗತಿಯಲ್ಲಿ ಆದ ಬದಲಾವಣೆಗೆ ಸಮಾಜ ಸುಧಾರಕರಾದ ರಾಜಾರಾಮ ಮೋಹನರಾಯ್ ವಿದೇಶಿ ಅಧಿಕಾರಿ ವಿಲಿಯಂಬೆಂಟಿಕ್ ಮೊದಲಾದವರ ಹೋರಾಟದ ಫಲಿತತೆಗಳ ಕುರಿತು ಗಮನಿಸಿದರೆ

ಸಹಗಮನ ಪದ್ಧತಿ, ಬಾಲ್ಯವಿವಾಹ, ಇತರೆ ದುಷ್ಟ ಸಂಪ್ರದಾಯಗಳು ಇದರೊಂದಿಗೆ ಮಹಿಳಾ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಿದರು. ಈ ವಿಷಯದಲ್ಲಿ ನಾವು ಬ್ರಿಟಿಷ ಆಡಳಿತವನ್ನು ಸ್ಮರಿಸಲೇಬೇಕು"[3] ಏಕೆಂದರೆ ಅವರು ತಮ್ಮ ಮತ ಪ್ರಚಾರಕ್ಕಾಗಿ ಎಲ್ಲಡೆ ಶಾಲೆಗಳನ್ನು ಪ್ರಾರಂಭಿಸಿದರು. ಇದರ ಉಪಯೋಗ ಸಮಾಜದ ಯಾವಸ್ತರದ ಮಹಿಳೆಗೆ ಅನುಕೂಲವಾಯಿತು ಅದು ಹೇಗೆ ಎಂಬುದನ್ನು ತಾರ್ಕಿಕವಾಗಿ ನೋಡಿದರೆ ಈ ಸಮಯದಲ್ಲಿ ಸಹ ತಳ ಸಮುದಾಯದ ಮಹಿಳೆಯರ ಶಿಕ್ಷಣ ಕಲಿಯುವ ಪ್ರಾರಂಭದ ಹಂತದಲ್ಲಿ ಚಿವುಟಿ ಹಾಕಲಾಗಿದೆ. ಆದರೆ ಕೆಲವು ಬೃಹತ ನಗರ ಪ್ರದೇಶಗಳಲ್ಲಿ ಪ್ರಮುಖವಾಗಿ ಮೇಲ್‌ಸ್ತರದ ಮಹಿಳೆಯರು ಮಾತ್ರ ಶಿಕ್ಷಿತರಾಗಿ ಸಮಾಜದಲ್ಲಿ ಪುರುಷರ ಜೊತೆ ಸರಿಸಮಾನವಾಗಿ ಸ್ಥಾನಪಡೆಯುವಲ್ಲಿ ಸಫಲರಾದರೆ ಹೊರತು. ತಳಮಟ್ಟದ ಮಹಿಳೆಯರು ಇದರಲ್ಲಿ ಒಳಗೊಳ್ಳಲಿಲ್ಲ. ಈ ಮಹಿಳೆಯರು ಅಶಿಕ್ಷಿತ ವಲಯಗಳಾದ ಅಥವಾ ಸಮಾಜಿಕ ಕೆಳಸ್ತರಗಳಾದ ಆದಿವಾಸಿ ಸಮುದಾಯ, ದಲಿತ ಸಮುದಾಯ, ಅಲೆಮಾರಿ, ಬುಡಕಟ್ಟು, ಅರೆ ಅಲೆಮಾರಿ ಇತರೆ ಸಮುದಾಯಗಳನ್ನು ಪರಿಗಣಿಸಿದರೆ ಪ್ರಸ್ತುತದಲ್ಲಿ ಮಹಿಳಾ ಮಿಸಲಾತಿಯ ಅವಶ್ಯಕತೆಯಿರುತ್ತಿರಲಿಲ್ಲ. ಆದರೆ ಅಂದಿನ ಪರಿಸ್ಥಿತಿಯಲ್ಲಿ ಶಿಕ್ಷಣವೆಂಬ ಸಾಧನವು ತಳಸ್ತರದ ಸಮುದಾಯಗಳಲ್ಲಿ ಮಹಿಳೆಯರಿಗಷ್ಟೇಯಲ್ಲದೆ ಪುರುಷರಿಗೂ ಮರುಭೂಮಿಯಲ್ಲಿ ನೀರಿಗಾಗಿ ಕಾದುಕುಳಿತ್ತಂತ ಪರಿಸ್ಥಿತಿಯಿತ್ತು.

ಸಮಾಜದ ಮೇಲ್‌ಸ್ತರದ ಮಹಿಳೆಯರು ಶಿಕ್ಷಣ ಪಡೆದು ಅಂದಿನ ವಸಾಹತುಶಾಹಿ ಅಧಿಕಾರಿಗಳೊಡನೆ ಜೊತೆ ಜೊತೆಯಲ್ಲಿ ವ್ಯವಹರಿಸುವುದು ಆಗಿನ ಕಾಲದ ಆಧುನಿಕತೆಯ ಪ್ರತಿಷ್ಠತೆಯ ಸಂಕೇತವಾಗಿತ್ತು. ಅದರೊಂದಿಗೆ ವೈದಿಕ ಧರ್ಮದ ಪ್ರಭಾವವಿತ್ತು. ಇದರಿಂದ ಹೆಂಗಸರು ಮತ್ತು ಗಂಡಸರು ಜೊತೆಗೂಡಿ ಹೋಗಿ ಬರುವುದು ರೂಢಿಯಾಗಿದ್ದರಿಂದ ನವಭಾರತದ ಶ್ರೀಮಂತರು ತಮ್ಮ-ತಮ್ಮ ಪತ್ನಿಯರಿಗೆ ಇಂಗ್ಲಿಷ್ ಭಾಷೆ ಕಲಿಸಿ ಆಧುನಿಕ ವೇಷ ಭೂಷಣದಿಂದ ಅಲಂಕಾರಮಾಡಿ ಆಳರಸರ್ ಜೊತೆಯಲ್ಲಿ ವ್ಯವಹರಿಸಲು ಸಜ್ಜಾದರು. ಇದರಿಂದಾಗಿ ಅಂದಿನ ಮೇಲ್‌ಸ್ತರದ ಮಹಿಳೆಯರಿಗೂ ಸಮಾಜದಲ್ಲಿ ಒಂದು ಸ್ಥಾನ ಬಂದಂತಾಯಿತು. ಅದು ತಳ ಸಮುದಾಯದ ಮಹಿಳೆಯರನ್ನು ಹೊರತುಪಡಿಸಿ.

ಈ ಸಂದರ್ಭದಲ್ಲಿ ಭಾರತೀಯ ಸಮಾಜದ ನಿಯಂತ್ರಣ ಕೌಶಲ್ಯವನ್ನು ಹೊಂದಿರುವಂತಹ ವೈದಿಕ ಸಮಾಜದ ಪ್ರಭಾವ ಬುಡಕಟ್ಟು ಸಮುದಾಯದ ಮೇಲೆ ಸವಾರಿ ಮಾಡಿರುವದರಿಂದ ಇವರಲ್ಲಿಯು ಸಹ ಪುರುಷ ಪ್ರಧಾನ್ಯತೆಯ ಕರಿನೆರಳು ಆವರಿಸಿಕೊಂಡು ತಳಸಮುದಾಯದ ಮಹಿಳೆಯರಿಗೆ ಶಿಕ್ಷಣದಿಂದ ವಂಚಿತರಾದರೆ, ಮೇಲ್‌ಸ್ತರದ ಮಹಿಳೆಯರ ಪಾಡು ಬೇರೆ ರೂಪಾಂತರದಲ್ಲಿ ಗೋಚರಿಸುತ್ತದೆ. ಹೇಗೆಂದರೆ ಶ್ರೀಮಂತ ಮಹಿಳೆಯರು ಶಿಕ್ಷಣ ಕಲಿತರು ಎಂಬ ಪೋಷಾಕಿನ ಹಿಂದುಗಡೆ ಮಹಿಳೆಯನ್ನು ಪುರುಷ ಸಮಾಜ ಸಮಾನ ರೀತಿ ತಯಾರಿಮಾಡಿರುವುದು

ತಮ್ಮ ವ್ಯವಹಾರಗೋಸ್ಕರವೆಂದು ಹೇಳಬಹುದು. ಪ್ರಮುಖವಾಗಿ ಗಮನಿಸುವುದಾದರೆ ಪುರುಷ-ಸ್ತ್ರೀ ಸರಿ ಸಮಾನತೆಗಾಗಿ ಅಲ್ಲವೆಂದು ನಿಸ್ಸಂದೇಹವಾಗಿ ತಿಳಿದುಕೊಳ್ಳಬಹುದು. ಈ ಸಂದರ್ಭದಲ್ಲಿ ಪುರುಷ ಸಮಾಜದ ಅಧಿಕಾರ ಸಂಕೋಲೆಯ ವಿವಿಧ ರೂಪಾಂತರದಲ್ಲಿ ತನ್ನ ಮೂಲಭೂತ ಆಸೆ-ಆಕಾಂಷೆಗಳನ್ನು ಅದುಮಿಟ್ಟು ಪುರುಷನ ವ್ಯವಹಾರಕ್ಕೆ ತಕ್ಕಂತೆ ಮದುವೆ, ಸಮಾರಂಭಗಳಿಗೆ ತನ್ನನ್ನು ತೊಡಗಿಸಿಕೊಂಡು ಅದರಲ್ಲೇ ತೃಪ್ತಿ ಮನರಂಜನೆ ಕಾಣಬೇಕಾಗಿತ್ತು.

ಶಿಕ್ಷಣವೆಂಬ ದಿಕ್ಸೂಚಿಯ ಪಯಣದಿಂದ ಆಧುನಿಕ ಸಂದರ್ಭದಲ್ಲಿ ಶಾಲೆಗಳು ಪ್ರಾರಂಭವಾಗಿ ಸ್ತ್ರೀಯರು ವಿದ್ಯಾವತಿಯಾದರು. ಪ್ರಪಂಚದ ಆಗು-ಹೋಗುಗಳ ಬಗ್ಗೆ ಅರಿವು ಉಂಟಾಯಿತು. ಸಮಾಜ ಬದಲಾವಣೆಯಾದಂತೆಲ್ಲಾ ಹೆಚ್ಚಿನ ಜ್ಞಾನ ಪಡೆದು ಪುರುಷರ ಉತ್ಕಟವನ್ನು ಟೀಕಿಸುವಂತಾಯಿತು ಹೀಗೆ ಇಂಡಿಯಾದಲ್ಲಿ ಮೇಲ್‌ಸ್ತರದ ಮಹಿಳೆಯರು (ಶ್ರೀಮಂತ) ಸಾಕಷ್ಟು ಪ್ರಮಾಣದಲ್ಲಿ ಜಾಗೃತಳಾಗುತ್ತಿದ್ದಾಳೆ. ಇನ್ನೊಂದೆಡೆ ಆಧುನಿಕತೆಯ ಪ್ರಭಾವದಿಂದ ಕೈಗಾರಿಕೀಕರಣ, ಖಾಸಗೀಕರಣ, ಜಾಗತೀಕರಣದಿಂದ ಅರಣ್ಯವಾಸಿ ಹಲವಾರು ಬುಡಕಟ್ಟು ಸಮುದಾಯಗಳಾದ ಸಂತಾಲರು, ಗೊಂಡರು, ಮುಂಡರು, ಹಾಲಕ್ಕಿ ಒಕ್ಕಲಿಗರು, ಮಲೆಕುಡಿಯರು, ಸೋಲಿಗರು, ಬೇಡರು ಇತ್ಯಾದಿ ಆದಿವಾಸಿ ಸಮುದಾಯಗಳನ್ನು ಕೈಗಾರೀಕರಣದ ಅಭಿವೃದ್ಧಿಯ ನೀತಿ ಇವರನ್ನು ಕಾಡಿನಿಂದ ಒಕ್ಕಲೆಬ್ಬಿಸಿರುವುದರಿಂದ "ನೀರನ್ನು ತೊರೆದ ಮೀನಿನಂತಾಗಿದೆ". ಇದರಿಂದ ಅತಂತ್ರ ಸ್ಥಿತಿಯಲ್ಲಿದ್ದ ಬುಡಕಟ್ಟು ಸಮುದಾಯಗಳು ಶಿಕ್ಷಣವೆಂಬ ಸಾಧನದಿಂದ ಬಹುದೂರ ಉಳಿದುಕೊಂಡಿವೆ.

ರಾಜ್ಯದ ಬುಡಕಟ್ಟು ಸಮುದಾಯಗಳಲ್ಲಿ ನಾಯಕ ಬುಡಕಟ್ಟು ಅಥವಾ ವಾಲ್ಮೀಕಿ ಸಮುದಾಯವು ಒಂದು. ಈ ಸಮುದಾಯದ ಜನಸಂಖ್ಯೆ ಎಲ್ಲಾ ಬುಡಕಟ್ಟುಗಳಿಗಿಂತ ಅಧಿಕವಾಗಿದೆ. "ಅಂದರೆ ೨೦೦೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ೨೯.೧೮.೬೪೯ ಎಂದು ದಾಖಲಾಗಿದೆ."[೩] ಈ ರಾಜ್ಯದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಬುಡಕಟ್ಟು ಇದಾಗಿರುವುದು. ಆದರೆ ಈ ಸಮುದಾಯವು ಪಡೆದಿರುವಂತಹ ಶಿಕ್ಷಣ ಮಟ್ಟ ನೋಡಿದರೆ ತುಂಬಾ ಹಿಂದುಳಿದಿದ್ದಾರೆ. ಇವರ ಸಾಕ್ಷರತೆ ಪ್ರಮಾಣ ಕೇವಲ ೮%ರಷ್ಟು ಇದೆ. ಇದರಲ್ಲಿ ಪುರುಷರನ್ನು ಹೊರತು ಪಡಿಸಿ ಸ್ತ್ರೀಯರ ಸಾಕ್ಷರತೆ ನೋಡಿದರೆ ಈ ಸಮುದಾಯದ ಮಹಿಳೆಯ ನಿಜ ಚಿತ್ರಣ ಬಯಲಾಗುತ್ತದೆ. ಇಂತಹ ದುರ್ಗಮ ಪರಿಸ್ಥಿತಿಯಲ್ಲಿ ತನ್ನ ಜೀವನವನ್ನು ಮುಂದುವರೆಸುತ್ತಿದ್ದಾಳೆ. ಒಂದಡೆ ಬುಡಕಟ್ಟಿನ ಸಂಪ್ರದಾಯ ಇನ್ನೊಂದಡೆ ವೈದಿಕ ಧರ್ಮ ನೀತಿ ಸಂಹಿತೆಗಳು ಮತ್ತೊಂದಡೆ ಸೌಲಭ್ಯಗಳ ಕೊರತೆ. ಈ ಎಲ್ಲಾ ಕಾರಣಗಳಿಂದ ಬೇಡ ಸಮುದಾಯದ ಸ್ತ್ರೀಯೂ ಶಿಕ್ಷಣ, ರಾಜಕಾರಣ, ತಂತ್ರಜ್ಞಾನ, ವಿಜ್ಞಾನ ಮುಂತಾದ ಜ್ಞಾನ ಸಾಧನಗಳಿಂದ ಅಸ್ಪೃಶ್ಯಳಾಗಿದ್ದಾಳೆ. ಜೊತೆಗೆ ಸೂಕ್ಷ್ಮವಾಗಿ ಗಮನ ಹರಿಸಿದರೆ ಸ್ತ್ರೀಯ ಸ್ವಾತಂತ್ರ ಹರಣ, ಅಧಿಕಾರ ಅಂತಸ್ತು, ವರನ ಆಯ್ಕೆ ಇತರೆ ಅವಕಾಶಗಳು ಘೋಷಾ ಪದ್ಧತಿ (ಪರಧಾ) ಎಂಬ ಸಂಪ್ರದಾಯದಡಿಯಲ್ಲಿ ಮೊಟಕುಗೊಳ್ಳುತ್ತಿವೆ. ಕೇವಲ ಉತ್ಸವ ಮೂರ್ತಿಯಾಗಿ ಕೆಲವೊಂದು

ಸಂದರ್ಭದಲ್ಲಿ ಮಾತ್ರ ಭಾಗಿಯಾಗಿ ಮತ್ತೆ ನಾಲ್ಕು ಗೋಡೆ ಮದ್ಯ ಬಂದಿಸಲ್ಪಟ್ಟಿದ್ದಾಳೆ. ಇಂತಹ ದುಸ್ಥಿತಿ ಬೇಡ ಸಮುದಾಯದ ಮೇಲ್‌ಸ್ತರದಲ್ಲಿ ಕಂಡುಬರುತ್ತದೆ. ಅದೇ ಸಮುದಾಯದ ಮದ್ಯಮ ಹಾಗೂ ಕೆಳಸ್ತರದಲ್ಲಿ ಗಮನಹರಿಸಿದರೆ ಅವರ ಸ್ಥಿತಿ ಇನ್ನೊಂದು ಮುಖದ ಸಂಕಷ್ಟದ ಚಿತ್ರಣವನ್ನು ನೋಡಲು ಆಹ್ವಾನಿಸಿಕೊಳ್ಳುತ್ತದೆ. ಬೇಡ ಸಮುದಾಯದ ಮೇಲ್‌ಸ್ತರದ ಮಹಿಳೆಯರು ಶ್ರಮ ಜೀವಿಗಳಾಗದೆ ಸುಖಭೋಗಜೀವನದಲ್ಲಿ ತಮ್ಮ ಸ್ವಾತಂತ್ರ್ಯಹರಣ ಮಾಡಿಕೊಂಡರೆ ಇದೇ ಸಮುದಾಯದ ಕೆಳಸ್ತರದವರು ಶ್ರಮಜೀವಿಗಳಾಗಿ ದಿನನಿತ್ಯದ ಚಟುವಟಿಕೆಯಲ್ಲಿ ಭಾಗವಹಿಸಿಕೊಂಡು ದೊರೆಯುವಂತಹ ಕೆಲಸ-ಕಾರ್ಯಗಳನ್ನು ನಿರ್ವಹಿಸಿ ಪ್ರತಿನಿತ್ಯ ತಮ್ಮ ಊಟೋಪಚಾರಕ್ಕೆ ಸರಿಪಡಿಸಿಕೊಂಡು ಸಹಜೀವನ ನಡೆಸುತ್ತಿದ್ದಾರೆ. ಆದರೆ ಇವರಲ್ಲಿ ಘೋಷಾ (ಪರದಾ) ಪದ್ಧತಿ ಕಂಡುಬರುವುದಿಲ್ಲ. ಹಾಗೂ ಜನ ಸಾಮಾನ್ಯರ ಜೊತೆಯಲ್ಲಿ ಕೃಷಿ ಕೂಲಿ, ಚಟುವಟಿಕೆಯಲ್ಲಿ ತೊಡುಗುತ್ತಾರೆ. ಸೂರ್ಯೋದಯದಿಂದ ಸೂರ್ಯೋಸ್ತ್ರಮದವರೆಗೆ ಗೃಹ ಕಾರ್ಯದಿಂದ ಹಿಡಿದು ಕೃಷಿ ಚಟುವಟಿಕೆಯವರೆಗೆ ವಿಸ್ತರಿಸಿಕೊಂಡಿರುತ್ತದೆ. ತಮ್ಮ ಹೆತ್ತ ಮಕ್ಕಳ ಪಾಲನೆ-ಪೋಷಣೆಯ ಕಾರ್ಯ ಹಿರಿಯ ಮಕ್ಕಳಿಗೆ ವಹಿಸಿರುತ್ತಾರೆ. ಇದರಿಂದ ಮಕ್ಕಳು ಶಿಕ್ಷಣದಿಂದ ಮೊದಲ ಹಂತದಲ್ಲೆ ವಂಚಿತವಾಗಿರುವುದು ಭಾರತದ ಮಾನವ ಸಂಪನ್ಮೂಲದ ಪ್ರಥಮ ಕೊರತೆ ಎಂದು ಹೇಳಬಹುದು.

ಶಿಕ್ಷಣದಿಂದ ವಂಚಿತವಾದ ಮಕ್ಕಳು ತಮ್ಮ ಚಿಕ್ಕ ಜಗತ್ತಿನಲ್ಲೇ ಚೊಕ್ಕ ಕನಸನ್ನು ಕಂಡುಕೊಳ್ಳುತ್ತವೆ. ಇದರಿಂದ ಸಮಾಜದಲ್ಲಿ ಮೇಲ್‌ಸ್ತರದ ಮಹಿಳೆಯರ ಅಭಿವೃದ್ಧಿಯನ್ನು ಕಂಡು ಮಾನಸಿಕವಾಗಿ ನೊಂದು ಅವರ ಅಡಿಯಾಳಾಗಿ ಬದುಕಲು ಪ್ರಾರಂಭಿಸಿ ತಮ್ಮ ಮೊಳಕೆಯೊಡಿದಿರುವ ಕನಸಿಗೆ ಚಿಗುರಿನಲ್ಲೇ ಚಿವುಟಿದಂತಾಗುತ್ತದೆ. ಅದರಲ್ಲಿ ಈ ಸಂಶೋಧನೆಯ ವ್ಯಾಪ್ತಿಯಾದ ಗುಲಬರ್ಗಾ, ರಾಯಚೂರು. ಕೊಪ್ಪಳ ಜಿಲ್ಲೆಗಳು ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ಪ್ರದೇಶವಾಗಿರುವುದರಿಂದ ಹಾಗೂ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಇನ್ನೂ ಮೂಲಭೂತ ಅವಕಾಶಗಳಿಂದ ತುಂಬಾ ಹಿಂದುಳಿದಿವೆ. ಹೀಗಾಗಿ ಇವರಲ್ಲಿ ಪ್ರಜ್ಞಾವಂತ ಜನರು ದೊರೆಯುವುದು ಅತಿ ವಿರಳ ಹಾಗೂ ಇತ್ತ ಕಡೆ ಜನಸಂಖ್ಯೆ ಯೋಜನೆ, ಕುಟುಂಬ ಯೋಜನೆ ಬುಡಕಟ್ಟುಗಳ ಅಭಿವೃದ್ಧಿ ಕಾರ್ಯಕ್ರಮಗಳು ಇಂತಹ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗಳು ದಾಖಲೆಯಲ್ಲಿ ಮಾತ್ರ ಪ್ರಜ್ವಲಿಸುತ್ತಿವೆ ಹೊರತು ತಲುಪಬೇಕಾದ ಸಮುದಾಯಗಳಿಗೆ ತಲುಪಿಲ್ಲ. ಹಾಗೂ ಕರ್ನಾಟಕದಲ್ಲಿ ಬೇಡ ಸಮುದಾಯವು ಪರಿಶಿಷ್ಟ ಪಂಗಡಕ್ಕೆ ಅನ್ವಯವಾಗಿ ೧೯೯೩ರಿಂದ ಜಾರಿಗೆ ಬಂದಿರುವುದು ನೋಡಿದರೆ ೧೨ವರ್ಷದಲ್ಲೆ ಈ ಸಮುದಾಯವು ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಆದರಿಂದ ಈ ಸಮುದಾಯವು ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕ, ಆರ್ಥಿಕ, ಇನ್ನಿತರ ಅಂಶಗಳಿಂದ ಮುಖ್ಯವಾಹಿನೆಡೆಗೆ ಬರಲು ಸಾಧ್ಯವಾಗಿಲ್ಲ. ಈ ಕಾರಣಗಳಿಂದ ಭೌದ್ಧಿಕವಾಗಿ-ಭೌತಿಕವಾಗಿ ಅರಿವು ಮೂಡದಿರುವುದಕ್ಕೆ ಇವರಲ್ಲಿನ ಜಡ ಸಂಪ್ರದಾಯದಿಂದ ಹೊರ ಬರದೆ ಇರುವುದು ಪ್ರಮುಖ ಕಾರಣವಾಗಿದೆ. ಹಾಗೂ ಶಿಕ್ಷಣವೆಂಬ

ಗಂಧಗೊತ್ತಿಲ್ಲದೆ ಅನಾಥವಾಗಿ ನೆಲೆಕಂಡುಕೊಂಡಿರುವಂತಹ ಪ್ರದೇಶಗಳಲ್ಲಿ ಮೇಲ್ವರ್ಗದವರ ಸೇವೆಯನ್ನು ಮಾಡಿಕೊಂಡು, ಪುರುಷ ಪ್ರಧಾನ ಸಮಾಜದ ದಾಸ್ಯದಿಂದ ಬಿಡುಗಡೆ ಹೊಂದದೆ ಈ ಸಮುದಾಯದ ಮಹಿಳೆಯರು ಸ್ವಾತಂತ್ರ್ಯರಹಿತವಾಗಿ ಸ್ವಾಲಂಬಿಗಳಾಗದೆ ಪರಾವಲಂಬಿಯಾಗಿ ತಮ್ಮ ಜೀವನ ಮುಂದುವರೆಸುತ್ತಿರುವುದು ದುರಂತದ ಸಂಗತಿಯೇ ಸರಿ.

ವಿಶ್ವದ ಮಾನವ ವಿಕಾಸದ ಚರಿತ್ರೆಯನ್ನು ಅವಲೋಕನ ಮಾಡಿ ನೋಡಿದಾಗ ತನ್ನ ದೈನಂದಿನ ಅಗತ್ಯಕ್ಕೆ ಅನುಗುಣವಾಗಿ ಆಹಾರ ಸಂಗ್ರಹಣೆ ಹಾಗೂ ಬೇಟೆಯನ್ನುವಲಂಬಿಸಿ ಹಸಿಮಾಂಸ ತಿನ್ನುತ್ತ ಬರಿ ಮೈಯಲ್ಲಿ ತಿರುಗುತ್ತಿದ್ದ ಕಾಡುಮಾನವನು ಬೆಂಕಿಯ ಶೋಧದಿಂದ ಪ್ರಾರಂಭವಾದ ನಾಗರೀಕತೆ ಅಭಿವೃದ್ಧಿಯ ಸಾಮಾಜಿಕ ಬೆಳಕಿನಲ್ಲಿ ಒಂದೊಂದಾಗಿ ತನ್ನ ಹೆಜ್ಜೆ ಮುಂದಿಡುತ್ತಾ ನಡೆದ, ಪಶುಪಾಲನೆ ಕೃಷಿ ಅವಿಸ್ಕಾರದಿಂದ ಹೊಟ್ಟೆ ಹೊರೆಯುವ ಕಲೆ ಕರಗತ ಮಾಡಿಕೊಂಡು ಅಲೆಮಾರಿ ಅರೆ-ಅಲೆಮಾರಿ ಬದುಕಿಗೆ ವಿದಾಯ ಹೇಳಿ ಗುಹೆ-ಗುಡಿಸಲುಗಳಲ್ಲಿ ನೆಲೆ-ನಿಲ್ಲುವಂತಾದ ನಾಗರೀಕತೆಯ ವಿಕಾಸದ ಈ ಸಾವಿರಾರು ವರ್ಷಗಳ ಅವಧಿಯಲ್ಲಿ ಹೆಚ್ಚಿನ ಬದುಕು ಅನೇಕ ರೀತಿಯಿಂದ ಪಲ್ಲಟಗಳನ್ನು ಕಂಡಿದೆ. ಅದರಲ್ಲಿ ಪ್ರಮುಖವಾಗಿ ಆರ್ಥಿಕ ಸಂಪನ್ಮೂಲಗಳ ಉತ್ಪಾದನಾ ವ್ಯವಸ್ಥೆಯೂ ಪುರುಷನ ಪ್ರಾಬಲ್ಯದ ಕ್ಷೇತ್ರವಾಗುತ್ತ ಬಂದಂತೆ, ಹೆಣ್ಣು ಗೃಹ ಸ್ವಾಮಿನಿಯಾಗಿ ಮಾತ್ರ ಉಳಿಯುವಂತಾಗಿ ಪಿತೃಪ್ರಧಾನ ವ್ಯವಸ್ಥೆ ಬಲಗೊಂಡು ಹೆಣ್ಣಿನ ಸ್ಥಾನಮಾಗಳಲ್ಲಿ ಪ್ರಮುಖ ಪರಿವರ್ತನೆಯಾಗಿದೆ. ಮುಂದುವರೆದು ಕುಟುಂಬದ ಯಜಮಾನತ್ವವನ್ನು ಸ್ವಾಯತ್ತಗೊಳಿಸಿಕೊಂಡು ಪುರುಷಾಧಿಕಾರದ ಒಡೆತನದಲ್ಲಿ ಹೆಣ್ಣು ಬಹಿರಂಗದ ಪ್ರಪಂಚದಿಂದ, ವಿದ್ಯೆಯ ಅವಕಾಶ, ಸಾಮಾಜಿಕ ಸ್ಥಾನಮಾನಗಳಿಂದ ಬಹಿಷ್ಕೃತೆಯಾಗಿ ನಿರಂತರ ದುಡಿಮೆ ಆರ್ಥಿಕ ಪರಾವಲಂಬನೆಯ ದೈನ್ಯ ಸ್ಥಿತಿಯನ್ನನುಭವಿಸುವಂತಾಯಿತು.

ಇದು ಸ್ತ್ರೀಕುಲದ ಶತಮಾನಗಳ ದುರಂತಕ್ಕೆ ಸ್ಥಾನಮಾನಗಳ ಅಧಃಪನತಕ್ಕೆ ಕಾರಣವಾಗಿದೆ. ಮಾತೃತ್ವದ ಪರಮಾಧಿಕಾರವನ್ನು ಪಿತೃತ್ವ ಕಸಿದುಕೊಂಡಾಗಲೇ ಸ್ತ್ರೀ ಕುಲವು ಶೂದ್ರ ಸಮಾನ ನೆಲೆಗೆ ಶ್ರೇಣೀಕೃತ ವ್ಯವಸ್ಥೆಯ ಅಂಚಿಗೆ ತಳ್ಳಲ್ಪಟ್ಟಿತು. ಉತ್ಪಾದನಾ ಕ್ಷೇತ್ರಗಳಿಂದ ಸಂಪೂರ್ಣವಾಗಿ ಹೊರಗುಳಿಯುವಂತಾಗಿ ಇಂಥ ಸ್ಥಿತಿಯಲ್ಲಿ ಹೆಣ್ಣು ಪರಾಧೀನತೆ ಪರಾವಲಂಬನೆಯ ಬದುಕಿನಲ್ಲಿ ಕೌಟುಂಬಿಕ ಹಿತಾಸಕ್ತಿಗಳಿಗಾಗಿ ಗಾಣದೆತ್ತಿನಂತೆ, ಕಣ್ಣಿದ್ದು ಕುರುಡಳಾಗಿ, ಬಾಯಿದ್ದೂ ಮೂಕಳಾಗಿ ಪಂಚೇಂದ್ರಿಯಗಳನ್ನೆಲ್ಲ ಪುರಷಾಧಿಪತ್ಯಕ್ಕೆ ಮಾರಿಕೊಂಡು ಅದೃಶ್ಯ ನೆಲೆಯಲ್ಲಿ ಬದುಕಬೇಕಾಯಿತು. ಮಹಿಳಾ ಸಮಾಜದ ಇಂಥ ಆತ್ಮ ವಿಸ್ಮೃತಿಯ ಫಲವಾಗಿಯೇ ಅವಳ ಸಹಭಾಗಿತ್ವದ ಸುಧೀರ್ಘ, ಚರಿತ್ರೆಯ ಇತಿಹಾಸ ಚರಿತ್ರೆ ಸಂಸ್ಕೃತಿಯ ಪುಟಗಳಲ್ಲಿ ದಾಖಲಾಗದೆ ಹೋಗುವಂತಾಯಿತು. ಮಾನವ ಸಂಸ್ಕೃತಿಯನ್ನು ಕಟ್ಟಿ-ಪೋಷಿಸಿ ಪಾಲಿಸುವಲ್ಲಿ ಸಂತತಿಯ ನಿರಂತರತೆಗಾಗಿ ಗಂಡಿನೊಡನೆ ಸರಿಸಮವಾಗಿ ತನ್ನಶ್ರಮ ಶಕ್ತಿಯಲ್ಲವನ್ನು ಪ್ರತಿಫಲಾಕಾಂಕ್ಷೆರಹಿತವಾಗಿ ಧಾರೆಯರೆದ ಹೆಣ್ಣು ಮಾನವ ಚರಿತ್ರೆಯಲ್ಲಿ

ಮೌನ ಸಂಸ್ಕೃತಿಯ ಕತ್ತಲೆಯ ಅಗೋಚರ ಪ್ರಪಂಚದಲ್ಲಿ ಉಸಿರಾಡುವಂತಾಯಿತು. ಅಬಲತ್ವ, ಅಧೀನತೆ, ಅಸಾಹಯಕತೆ, ಬುದ್ಧಿಹೀನತೆಯ ಪುರುಷ ಕಲ್ಪಿತ ಮಿಥ್ಯಾರೋಪಗಳಿಂದಾದ ವ್ಯಕ್ತಿತ್ವ, ಕೀಳರಿಮೆ, ಅಜ್ಞಾನ, ವಿದ್ಯೆ, ಆತ್ಮ ವಿಶ್ವಾಸದ ಕೊರತೆಯಿಂದ ಹೆಣ್ಣಿನ ಪ್ರಕೃತಿ ಸಹಜ ಶಕ್ತಿಗಳು ವಿಕಾಸಗೊಳ್ಳದೆ ಮುರುಟುವಂತಾಗಿದ್ದರಿಂದ ಹೆಣ್ಣು ಗಂಡಿನ ನೆರಳಾಗಿಯೇ ನರಳುತ್ತ ಬದುಕಿದುದು ಮಾನವ ಕುಲದ ಕರಾಳ ವಾಸ್ತವವಾಗಿದೆ.

ಇಂದಿನ ಆಧುನಿಕ ಸಮಾಜದ ಪರಿಸರದಲ್ಲಿ ಸಹ "ಬುಡಕಟ್ಟು, ಆದಿವಾಸಿ, ಕುಟುಂಬ ವ್ಯವಸ್ಥೆಯಲ್ಲಿ ಮಾತೃಪ್ರಧಾನತೆ ಕುಟುಂಬ ಪದ್ಧತಿಯ ಜೀವನ ಕ್ರಮ ಕಂಡುಬರುವ ಬೇಡ ಸಮುದಾಯದಲ್ಲಿ ಮಾತೃಪ್ರಧಾನ್ಯತೆಯ ಅಂಶಗಳು ಸಹ ಇಂದಿನ ಸಂದರ್ಭದಲ್ಲಿ ಕೆಲವೊಂದು ಭಾರಿ ಕಂಡುಬರುತ್ತವೆ. ಪುರುಷ ಪ್ರಧಾನ್ಯತೆ ಪ್ರಭಾವಿತ ಸನ್ನಿವೇಶಗಳು ಅಗೋಚರವಾಗಿ ಅಂತರಾತ್ಮಕವಾಗಿ ಸ್ತ್ರೀಯರ ಮೇಲೆ ಬಂದ ಪರಿಣಾವಾಗಿ ಸ್ತ್ರೀಯೂ ಪುರುಷನ ಕೈಗೊಂಬೆಯಾಗಿ ತಿರಸ್ಕಾರ, ಅಪನಂಬಿಕೆ, ಅವಹೇಳನಕ್ಕೆ ಗುರಿಯಾಗಿದ್ದಾಳೆ. ಅನಿಷ್ಟ ಶಕ್ತಿಯಾಗಿ ಬಿಂಬಿಸಲ್ಪಟ್ಟಿದ್ದಾಳೆ. ಇದರಿಂದ ಮಹಿಳೆಯ ಜೀವನಕ್ಕೆ ಸ್ವಾಲಂಬನೆಯಿಲ್ಲದಂತಾಗಿ ಪುರುಷ ಪ್ರಭುತ್ವಕ್ಕೆ ಹೆಣ್ಣು ಬಲಿಪಶುವಾಗಿದ್ದಾಳೆ. ಸಂತಾನೋತ್ಪತ್ತಿಯ ಸಾಧನವಾಗಿ, ಭೋಗದ ಸರಕಾಗಿ, ದುರ್ಬಳಕೆಯಾಗಿದೆ. ಹೆಣ್ಣಿನ ದೇಹದ ಬಗೆಗೆ ಆಸಕ್ತವಾದ ಪುರುಷ ಮನಸ್ಸು ಆಕೆಯ ಆತ್ಮವನ್ನು ಮರೆತಿದೆ. ಸ್ತ್ರೀ ದೇಹವನ್ನು ಲೈಂಗಿಕತೆಯ ಚಿಹ್ನೆಯಾಗಿ ಕಾವ್ಯಕಲೆಯ ವಸ್ತುವಾಗಿ ಬಳಸಿಕೊಳ್ಳುತ್ತಲೇ ಅದನ್ನೆ ಪಾಪಕೂಪವೆಂದು ಜರಿಯಲಾಗಿದೆ. ಪ್ರಸ್ತುತದಲ್ಲಿ ಸಹ ಬುಡಕಟ್ಟು ಸಮುದಾಯದಲ್ಲಿ ಸ್ತ್ರೀಯನ್ನು ಅಗೌರವದಿಂದ ನೋಡಲಾಗುತ್ತದೆ." ಅವಳನ್ನು ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಪುರುಷರು ವಿಶ್ರಾಂತಿ ಹೊಂದುವ ಪರಿಪಾಠವು ಇವರಲ್ಲಿ ಅಧಿಕವಾಗುತ್ತಿದೆ. ಅವಳು ಶ್ರಮವಹಿಸಿದ ಫಲದಲ್ಲೇ ಇಡೀ ಕುಟುಂಬ ನಿರ್ವಹಿಸುತ್ತಿರುವುದು ತಿಳಿದುಬರುತ್ತದೆ. ಸ್ತ್ರೀಯೂ ತನ್ನ ಕುಟುಂಬದ ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕಳಾಗಿ, ಕೃಷಿಕೂಲಿಯಾಗಿ, ಮೇಲ್ವರ್ಗದ ಮನೆಯವರ ಮನೆಕೆಲಸ ಮಾಡಿಕೊಂಡು ಕುಟುಂಬ ನಿರ್ವಹಿಸುತ್ತಿರುವ ಅನೇಕ ಉದಾರಣೆಗಳು ದೊರೆಯುತ್ತಿವೆ. ಆದರೆ ಪುರುಷ ಮಾತ್ರ ನ್ಯಾಯ, ಪಂಚಾಯಿತಿ, ಹರಟೆ ಕಟ್ಟೆಗಳಂತ ಗುಂಪುಗಳನ್ನು ಸೇರಿಕೊಂಡು ಸೋಮಾರಿಯಾಗಿರುವುದು ಸಹ ನಿಜದ ಸಂಗತಿ. ಇದರಿಂದ ಆರ್ಥಿಕವಾಗಿ ಸ್ವಾತಂತ್ರ್ಯವಿರದೆ ಕುಟುಂಬದ ಜವಾಬ್ದಾರಿ ಇವಳ ಮೇಲಿದೆ.

ಪ್ರಸ್ತುತ ಸಂದರ್ಭದಲ್ಲಿ ಕೈಗಾರೀಕರಣದ ಪ್ರಭಾವದಿಂದ ಗ್ರಾಮೀಣ ಸಮಾಜದ ಮೇಲೆ ಯಂತ್ರಶಕ್ತಿಯೂ ಹೆಚ್ಚಿನ ಪ್ರಭಾವ ಬೀರಿ ದುಡಿಯುವಂತಹ ಸಮುದಾಯಗಳಾದ ಕೆಳಸ್ತರದವರು ದಲಿತರು ಬುಡಕಟ್ಟು ಸಮುದಾಯದವರು ಅದರಲ್ಲಿ ಬೇಡ ಸಮುದಾಯದ ಜನರು ದುಡಿಯುವ ಕೈಗಳಿಗೆ ಕೆಲಸವಿಲ್ಲದೆ ಉಪಜೀವನ ನಡೆಸಲು ತೊಂದರೆಯಾಗಿರುವುದರಿಂದ ಹಾಗೂ ಆರ್ಥಿಕ

ದುಸ್ಥಿತಿ ಎದುರಾದ್ದರಿಂದ ವಲಸೆ ಹೋಗುವ ಪರಿಪಾಟದ ಪ್ರಮಾಣ ಅಧಿಕವಾಗಿದೆ. ಯಾಕೆಂದರೆ ಮೂಲತಃ ಬೇಡ ಸಮುದಾಯದ ಜನತೆ ಅರಣ್ಯವಾಸಿಗಳಾದ ಕಾರಣ ಅಲ್ಲಿಯ ಅಲ್ಪ ಸ್ವಲ್ಪ ಸಾಗುವಳಿ ಭೂಮಿಯನ್ನು ಸರ್ಕಾರ ಒಕ್ಕಲೆಬ್ಬಿಸಿದ ನೀತಿಯಿಂದ ಆಸ್ತಿಹೀನರಾಗಿ ನಾಡು ಪ್ರವೇಶಮಾಡಿ ಅಸಾಹಾಯಕರಾದರು. ಆದರೆ ನಾಡಿನಲ್ಲಿ ಆಸ್ತಿ ಮಾಡಿದವರು ಅಲ್ಪಜನರು ಮಾತ್ರ. ಆದರೆ ಬಹುಸಂಖ್ಯಾತ ಭೂರಹಿತ ಜನರು ಮೇಲ್ವರ್ಗದವರ ಭೂಮಿಯಲ್ಲಿ ಕೃಷಿ ಕಾರ್ಮಿಕರಾಗಿ ದುಡಿ ಯುತ್ತಿರುವರು. ಅಂದರೆ ಬಿತ್ತನೆಯಿಂದ ಫಸಲು ಬರುವವರೆಗೆ ಕಾರ್ಯಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇಂದು ಯಂತ್ರಶಕ್ತಿ ಬಳಕೆಯಿಂದ ಇವರು ಬೇರೆ ಪ್ರದೇಶಕ್ಕೆ ಹೋಗುವುದು ಅನಿವಾರ್ಯತೆ ಇದೆ. ಪ್ರಸ್ತುತದಲ್ಲಿ ಈ ಸಮುದಾಯ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಜೀವನ ನಡೆಸುತ್ತಿದ್ದಾರೆ.

ಇವರು ಪ್ರಮುಖವಾಗಿ ತಮ್ಮ ಹಿರಿಯರ ಜೊತೆಗೂಡಿ ಕುಟುಂಬ ನಿರ್ವಹಣೆ ಮಾಡುತ್ತಿದ್ದರು. ಮತ್ತು ಬೆಳೆಯುವಂತಹ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿ, ನಂತರದಲ್ಲಿ ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದರು. ಆದರೆ ಈಗ ಈ ಎರಡರಿಂದಲೂ ಸೌಲಭ್ಯವಂಚಿತರಾಗಿ ತಮ್ಮ ಸೂರು (ಮನೆ) ಕಾಯಲು ಹಿರಿಯರನ್ನು ಬಿಟ್ಟು ತಮ್ಮ ಜೊತೆ ಮಕ್ಕಳನ್ನು ಕೂಡಿಕೊಂಡು ನಗರ ಪ್ರದೇಶಗಳಾದ ಪುನಾ, ಬಾಂಬೆ, ಗೋವ, ಬೆಂಗಳೂರು ಇತರೆ ನಗರ ಪ್ರದೇಶಗಳ ಕಡೆ ಮುಖಮಾಡಿ ಹೋಗುವುದರಿಂದ ಪ್ರಮುಖವಾಗಿ ಇವರ ಮಕ್ಕಳ ಶಿಕ್ಷಣ ಕುಂಠಿತಗೊಳ್ಳುತ್ತಿದೆ. ಅದರಲ್ಲಿ ಈ ಸಮುದಾಯದ ಸ್ತ್ರೀಯೂ ಸೇರಿಕೊಂಡಿದ್ದಾಳೆ ಎಂಬ ವಿಚಾರ ಪ್ರಮುಖವಾದದ್ದು ಅವಳಲ್ಲಿ ಸಹ ಬೇರೆಯವರಂತೆ ಶಿಕ್ಷಣ ಕಲಿಯಬೇಕೆಂಬ ಮಾಹಾದಾಸೆ ಮಣ್ಣುಪಾಲಾಗಿ ಮನೆಯವರ ಮಾತಿಗೆ ಬೆಲೆ ನೀಡಿ ವಲಸೆ ಹೋಗುವ ಕುಟುಂಬಗಳಲ್ಲಿ ಒಬ್ಬ ಸದಸ್ಯಳಾಗಿ ಪ್ರತಿನಿಧಿಸುತ್ತಿದ್ದಾಳೆ.

ಇನ್ನು ವಲಸೆ ಹೋದಂತಹ ಪ್ರದೇಶವನ್ನು ಗಮನಿಸುವದಾದರೆ ಅದು ಪ್ರಮುಖವಾಗಿ ನಗರ ಪ್ರದೇಶವಾದ್ದರಿಂದ ಇವರು ವಾಸಮಾಡುವಂತಹ ಸ್ಥಳ ಕೊಳಚೆ ಪ್ರದೇಶವಾಗಿರುತ್ತದೆ. ಇದರಿಂದ ಈ ಸಮುದಾಯವು ಶಿಕ್ಷಣವನ್ನು ಪರಿಗಣಿಸದೆ ತನ್ನ ಆರ್ಥಿಕತೆಯನ್ನು ಮಾತ್ರ ಮೂಲಭೂತವಾಗಿ ಕಂಡುಕೊಂಡು ಕುಟುಂಬ ನಿರ್ವಹಣೆ ಮಾಡಬೇಕಾಗಿರುತ್ತದೆ. ಹಾಗೂ ಕುಟುಂಬದ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಆಸೆಯೂ ಸಹ ಅವರಲ್ಲಿ ಕಮರಿರುತ್ತದೆ. ಇದರಿಂದ ಶಿಕ್ಷಣದಿಂದ ವಂಚಿತರಾದ ಯುವಜನತೆ ಮಾನವ ಸಂಪನ್ಮೂಲಕ್ಕೆ ತುಂಬಲಾರದ ಕೊರತೆಯಾಗುತ್ತದೆ. ಈ ಪ್ರಕಾರವಾಗಿ ಸಮಾಜ ಬದಲಾವಣೆಯಾದರು ಇವರ ಕೌಟುಂಬಿಕ ಪರಿಸ್ಥಿತಿ ಬದಲಾವಣೆಯಾಗದೆ ಅಶಿಕ್ಷಿತರ ಸಂಖ್ಯೆ ಅಧಿಕವಾಗುವಲ್ಲಿ ಈ ಒಂದು ಅಂಶ ಪ್ರಮುಖವಾಗಿದೆ. ವಲಸೆ ಹೋದವರ ಪರಿಸ್ಥಿತಿ ಈ ರೀತಿಯಾದರೆ ಇನ್ನು ವಲಸೆ ಹೋಗದೆ ಇರುವವರ ದುಸ್ಥಿತಿ ಗ್ರಾಮೀಣ ಪರಿಸರದಲ್ಲಿ ತುಂಬಾ ಚಿಂತಾಜನಕವಾಗಿರುತ್ತದೆ. ಇವರು ಸಹ ಅವರಂತೆ ಭೂರಹಿತ ಹಾಗೂ ಭೂ ಸಹಿತ ಸಮುದಾಯದವರು

ಕಡಿಮೆ ಜನಸಂಖ್ಯೆಯಲ್ಲಿದ್ದಾರೆ. ತಮ್ಮ ಕುಟುಂಬವನ್ನು ಹಿರಿಯರನ್ನೊಳಗೊಂಡು ತಮ್ಮ-ತಮ್ಮ ಮಕ್ಕಳೊಂದಿಗೆ ಅತಂತ್ರ ಸ್ಥಿತಿಯಲ್ಲಿ ಇತರೆ ಸಮೂಹ ಜೀವನದೊಂದಿಗೆ ಸಮರಸ ಜೀವನ ನಡೆಸುತ್ತಿದ್ದರು. ಸಂಕಷ್ಟಗಳ ಸರಮಾಲೆ ಅಧಿಕವಾಗಿರುತ್ತಿವೆ. ಅವು ಯಾವ ರೀತಿಯೆಂದರೆ ಭೂ ರಹಿತ ಜನರು ಮೇಲ್ವರ್ಗದ ಭೂಮಾಲೀಕರಲ್ಲಿ ಜೀತದಾಳಾಗಿ ಶ್ರಮಿಸುತ್ತಿರುವವರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಇದರಲ್ಲಿ ವಯಸ್ಕರು ಹಾಗೂ ಚಿಕ್ಕ ಮಕ್ಕಳು ಕಂಡುಬರುತ್ತಾರೆ. ಇವರಲ್ಲಿ ವಯಸ್ಕರು ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಇನ್ನೂ ಚಿಕ್ಕಮಕ್ಕಳು ಕುರಿ-ಮೇಕೆ, ದನ ಕಾಯುವಂತಹ ಕೆಲಸದಲ್ಲಿ ಹಾಗೂ ಮೇಲ್ವರ್ಗದ ಮನೆಯಲ್ಲಿ ಗೃಹ ಚಟುವಟಿಕೆಗಳಾದ ಸಗಣಿ ಗೂಡಿಸುವುದು. ಕಸ ಗೂಡಿಸುವುದು, ನೀರು ತರುವುದು ಇತರ ಚಟುವಟಿಕೆಗಳಲ್ಲಿ ಜೀವನ ಮುಂದುವರಿಸುತ್ತಿದ್ದಾರೆ. ಇವರು ತಮ್ಮ ಜೀವನಕ್ಕೆ ಅನಿವಾರ್ಯತೆ ಎಂದು ತೃಪ್ತಿಯಿಂದ ಕೆಲಸ ಕಾರ್ಯಗಳು ಮಾಡಿದರೆ, ಭೂ ಒಡೆಯರಿಂದ ಸಿಗುವಂತಹ ಸೌಲಭ್ಯಗಳು ಮಾತ್ರ ಕಳಪೆ ಹಾಗೂ ಮಾರಕವಾದಂತಹವು ಎಂದು ತಿಳಿದುಬರುತ್ತದೆ.

ಜೀತದಾಳು ಪದ್ಧತಿಯಲ್ಲಿ ಪುರುಷರಂತೆ-ಸ್ತ್ರೀಯೂ ಪಾಲುದಾರಳಾಗಿದ್ದಾಳೆ. ಇಲ್ಲಿ ಸ್ತ್ರೀಯರ ಕೆಲಸ ಬಟ್ಟೆ ತೊಳೆಯುವುದು, ಕಸ, ಮುಸುರಿ, ಮಾಡುವುದು ಹಾಗೂ ಹೆಚ್ಚಿನದಾಗಿ ಭೂ ಮಾಲೀಕರ ಮಕ್ಕಳ ಪಾಲನೆ ಪೋಷಣೆ ಮಾಡುವುದು ಹಾಗೂ ಇತರೆ ಚಟುವಟಿಕೆಗಳು ಒಳಗೊಂಡಿರುತ್ತವೆ. ಆದರೆ ಇವರೆಲ್ಲರನ್ನು ಒಳಗೊಂಡು ವಾರ್ಷಿಕ ವೇತನ ನೋಡಿದರೆ ಕಳಪೆ ಮಟ್ಟದ್ದಾಗಿರುತ್ತದೆ ಹೇಗೆಂದರೆ ಕೆಳ ಸಮುದಾಯದ ಸ್ತ್ರೀಯರಿಗೆ ಮಾತ್ರ ಹಾಗೂ ಇತರೆ ಸ್ತ್ರೀರಿಯರಿಗೂ ಸಹ ವರ್ಷಕ್ಕೊಂದು ಸೀರೆ ಹಾಗೂ ಉಪಜೀವನಕ್ಕೆ ಬೇಕಾದ ದವಸ-ಧಾನ್ಯಗಳಾದ ಜೋಳ, ಸಜ್ಜೆ, ಇತರೆ ಧಾನ್ಯಗಳು ೧ ಕ್ವಿಂಟಲ್ ಒಳಗಡೆ ವೇತನವಾಗಿ ಪಡೆದುಕೊಂಡು ಜೀವನವನ್ನು ಅದರಲ್ಲೇ ಸಾಗಿಸುತ್ತಾರೆ. ಅದೇ ಪುರುಷನ ವೇತನ ನೋಡಿದರೆ ಅದರಲ್ಲಿ ಚಿಕ್ಕ ಮಕ್ಕಳಿಗೆ ಊಟ, ಬಟ್ಟೆ ಸಹಿತ ೧೦೦೦ ರೂಪಾಯಿ ವೇತನವಾಗಿ ಪಡೆಯುವುದು ಹಾಗೂ ವಯಸ್ಕ ಪುರುಷನಿಗೆ ವರ್ಷಕ್ಕೆ ಒಂದು ಜೋಡು ಬಟ್ಟೆ ಹಾಗೂ ಒಂದೊತ್ತಿನ ಊಟ ಕೊಟ್ಟು ವರ್ಷಕ್ಕೆ ೩ ರಿಂದ ೪ ಸಾವಿರ ವೇತನ ಪಡೆಯುವ ಪರಿಸ್ಥಿತಿ ಇಂದಿಗೂ ಸಹ ಸಮಾಜದಲ್ಲಿದೆ.

ಇದು ತಳ ಸಮುದಾಯದವರ ಪಾಲಿಗೆ ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಜೊತೆಗೆ ಭೂಮಾಲೀಕರ ಮನೆಯಲ್ಲಿ ದುಡಿಯುವಂತಹ ಕೆಲಸದ ಅವಧಿ ದಿನಕ್ಕೆ ೧೮ ಗಂಟೆ ಕಾರ್ಯ ನಿರ್ವಹಿಸಬೇಕು. ಇದೇ ರೀತಿಯ ಸ್ಥಿತಿ ಸಣ್ಣ ಮಕ್ಕಳ ಹಾಗೂ ಮಹಿಳೆಯರ ಪರಿಸ್ಥಿತಿಯಾಗಿದೆ. ಇವರಿಗೆ ನೀಡುವಂತಹ ಊಟ-ವಸ್ತ್ರ ಕಳಪೆ ಮಟ್ಟದ್ದಾಗಿರುವುದರಿಂದ ಜೀವನದಲ್ಲಿ ಆರೋಗ್ಯ ಅಸ್ತವ್ಯಸ್ಥವಾಗುವುದರಲ್ಲಿ ಸಂದೇಹವಿಲ್ಲ. ಹಾಗೂ ಭೂಮಾಲೀಕರ ಕಪಿಮುಷ್ಟಿಯಲ್ಲಿ ಶ್ರಮಿಸುತ್ತಿರುವ ಪುರುಷರು-ಮಹಿಳೆಯರು ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ

ಆರ್ಥಿಕ ದುಸ್ಥಿತಿ. ಈ ರೀತಿಯಾದ ಸಮಸ್ಯೆಯನ್ನು ಎದುರಿಸುತ್ತಿರುವ ಹಲವಾರು ಸಮುದಾಯಗಳಲ್ಲಿ ಬೇಡ ಸಮುದಾಯವು ಒಂದು.

೪.೧.೧. ಧರ್ಮ ಮತ್ತು ಮಹಿಳೆ ಸ್ಥಾನಮಾನ

ಜಗತ್ತಿನ ಬಹುತೇಕ ಸಂಸ್ಕೃತಿಗಳಲ್ಲಿ ದೈವಾರಾಧನೆಯ ಮೊದಲ ಘಟ್ಟವು ಮಾತೃ ಆರಾಧನೆಯಾಗಿದ್ದರೂ ಪುರುಷ ಪ್ರಾಧ್ಯಾನ್ಯತೆಯ ಶಕ್ತಿ ರಾಜಕಾರಣವು ಲಿಂಗಾಧಾರಿತ ತಾರತಮ್ಯ ಹುಟ್ಟು ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿ ಹೆಣ್ಣಿನ ಆರಾಧನೆಯ ಅಸ್ತಿತ್ವದ ಸನಾತನತೆಯ ಪದ್ಧತಿಯೂ ಬದಲಾವಣೆಗೊಳಸಿದ್ದು ಸ್ಪಷ್ಟವಾಗಿದೆ. ಹೀಗೆ ಪುರಾತನ ಸಂದರ್ಭದಲ್ಲಿ ಧಾರ್ಮಿಕ ಆಚರಣೆಯಲ್ಲಿ ಪ್ರಧಾನ ಗೌರವ ಅಂತಸ್ತು ಹೊಂದಿದ್ದ ಮಹಿಳೆಯನ್ನು ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಂಗದಿಂದ ದೂರ ಸರಿಸಿದ ಪುರುಷ ನಿಷ್ಠ ಚಿಂತನೆಗಳು ಹೆಣ್ಣಿನ ವ್ಯಕ್ತಿತ್ವವನ್ನು ಸ್ತ್ರೀತ್ವದ ಸ್ವರೂಪವನ್ನು ನೇತಾತ್ಮಕವಾಗಿಯೇ ವ್ಯಾಖ್ಯಾನಿಸಿದ ಹೇಳಿಕೆಯ ವಿಧಾನಗಳು ಆಶ್ಚರ್ಯಕಾರಿಯಾಗಿವೆ. ಅಷ್ಟೇ ಅವಾಸ್ತವವಾಗಿವೆ. ಪುರುಷಾತ್ಮಕವಾಗಿಯೆ ವ್ಯಾಖ್ಯಾನಿಸುವ ಜಗತ್ತಿನ ಎಲ್ಲಾ ಧರ್ಮ ತತ್ವ ಸಿದ್ಧಾಂತಗಳು ಸ್ತ್ರೀ ಸಂಬಂಧಿತ ವಿಚಾರಗಳಲ್ಲಿ ವ್ಯಕ್ತಪಡಿಸುವ ತಾರತಮ್ಯ ಧೋರಣೆ ನಿಷ್ಠುರತೆ ಮತ್ತು ಏಕಪಕ್ಷೀಯ ನಿರ್ಣಯಗಳಿಗೆ ಪುರುಷ ಹಿತಾಸಕ್ತಿಗಳೇ ಕೇಂದ್ರಲಕ್ಷ್ಯಗಳಾಗಿವೆ. ಇದರಿಂದ ಸಂಸ್ಕೃತಿ ಧರ್ಮ ಒಟ್ಟಾರೆ ಬದುಕಿನ ಏಕಮುಖ ಗ್ರಹಿಕೆಯ ಅಪಾಯಕಾರಿ ನಿಲುವುಗಳು ಎಂಬುದು ಸ್ಪಷ್ಟವಾಗಿವೆ.

ಜಗತ್ತಿನ ಹಲವು ಧರ್ಮಗಳಲ್ಲಿ ಹೆಣ್ಣು ಅಧೀನ ನೆಲೆಯ ಜೀವಿಯಾಗಿ ತಾಮಸ ಶಕ್ತಿಯಾಗಿ ಕೇಡಿನ ಮೂಲವಾಗಿ ಪರಿಗಣಿತವಾಗಿದ್ದಾಳೆ, ಅಥವಾ ಚಿತ್ರಿತಳಾಗಿದ್ದಾಳೆ. ನಿಸರ್ಗದ ಜೀವರಾಶಿಗಳಲ್ಲಿಯೇ ಶ್ರೇಷ್ಠ ಜೀವಿಯಾಗಿರುವವನು ಪುರುಷ. ಆತ್ಮ ಜ್ಞಾನಕ್ಕೆ ಧರ್ಮ ಸಾಧನೆಯ ಹಾದಿಯಲ್ಲಿ ವಿಪತ್ತಾಗಿದ್ದಾಳೆ. ನಿವೃತ್ತಿಪರ ಮನಸ್ಸನ್ನು, ಚಿತ್ತಶುದ್ಧಿಯನ್ನು ಪ್ರವೃತ್ತಿಯೆಡೆಗೆ ಭೋಗ ಲಾಲಸೆಗೆ ಎಳೆಯುವ ಚಂಚಲೆಯಾಗಿ, ಮಾಯಾಶಕ್ತಿಯಾಗಿದ್ದಾಳೆ. ಅಪ್ರಬುದ್ಧತೆ ಅನೈತಿಕತೆಯನ್ನು ಪ್ರೇರೇಪಿಸುವ ಅಜ್ಞಾನದ ಸಂಕೇತವಾಗಿದ್ದಾಳೆ. ಹೀಗೆ ನಿಸರ್ಗ ಸಹಜವಾದ ಮಹಿಳೆಯ ಇತ್ಯಾತ್ಮಕ ಗುಣಗಳನ್ನು ಮರೆಮಾಡಿ, ನಿಷೇಧಾತ್ಮಕ ನೆಲೆಯಲ್ಲಿಯೇ ಮಹಿಳೆಯ ವ್ಯಕ್ತಿತ್ವವನ್ನು, ಗೌರವವನ್ನು ಅಂತಸ್ತನ್ನು ಬಿಂಬಿಸುತ್ತ ಬಂದಿರುವ ಸ್ತ್ರೀ ವಿರೋಧಿ, ಧೋರಣೆಗಳ ಮಾದರಿಗಳು ಜಾಗತಿಕ ಸಾಹಿತ್ಯದಲ್ಲಿ ಶಾಸ್ತ್ರ-ಗ್ರಂಥಗಳಲ್ಲಿ, ವಿದೇಶಿಯ ಧರ್ಮ-ಭೋಧನೆಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ.

ವೈದ್ಧಿಕ ಧರ್ಮದಲ್ಲಿ ಭೂಮಿಯನ್ನು ತಾಯಿ ಸ್ವರೂಪದಲ್ಲಿ ಕಾಣುವಂತೆ, ಸ್ತ್ರೀಯನ್ನು ಸಹ ತಾಯಿಯಾಗಿ ಬಹುತೇಕ ಎಲ್ಲ ಧರ್ಮಗಳಲ್ಲಿಯೂ ಮನ್ನಣೆಪಡೆದುಕೊಂಡಿರುವ ಮಹಿಳೆ ಉಳಿದ ಇನ್ನಿತರ ಪಾತ್ರಗಳಲ್ಲಿ ತಿರಸ್ಕಾರ, ಅಪನಂಬಿಕೆ, ಅವಹೇಳನಕ್ಕೆ ಗುರಿಯಾಗಿದ್ದಾಳೆ. ಅನಿಷ್ಠ ಶಕ್ತಿಯಾಗಿ ಬಿಂಬಿಸಲ್ಪಟ್ಟಿದ್ದಾಳೆ. ಅದನ್ನು ಪ್ರತಿಯೊಂದು ಧರ್ಮದಲ್ಲಿ ನೋಡಬಹುದು. ಈ ರೀತಿಯಾದ

ತಾತ್ಪಾರ ಮನೋಭಾವನೇ ಸ್ತ್ರೀ ಪುರುಷರಲ್ಲಿ ಏಕೆ ಕಂಡುಬಂದಿತೆಂಬುದು ಬೇರೆ ವಿಷಯ. ಆದರೆ ಅರಣ್ಯವಾಸಿಯಾದ ಬುಡಕಟ್ಟು ಸಮುದಾಯಗಳು ಪ್ರಾಚೀನತೆಯಿಂದ ಕಂಡುಬರುವ ಕೆಲವು ವೈಶಿಷ್ಟ್ಯಗಳು ಬೇರೆ ಯಾವ ಜನಸಮುದಾಯದ ಸಮಾಜದಲ್ಲಿ ಕಂಡುಬರಲು ಸಾಧ್ಯವಿಲ್ಲ. ಇನ್ನೊಂದು ವಿಶೇಷತೆಯೆಂದರೆ "ಇಡೀ ಪ್ರಪಂಚದಲ್ಲಿ ಸ್ತ್ರೀಯನ್ನು ದೇವತ್ವಕ್ಕೆ ಏರಿಸಿದ ದೇಶ ಭಾರತವೊಂದೇ "ಮಾತೃದೇವೋಭವ" ಎಂಬ ಮಾತೇ ಇದಕ್ಕೆ ಸಾಕ್ಷಿಯಾಗಿದೆ."[8] ಆದರೆ ಇಂತಹ ಮರ್ಯಾದೇ ಬಹುರೀತಿಯಲ್ಲಿ ಕಂಡುಬಂದರೂ ಅದು ಗೌರವ ಸೂಚಕವಾಗಿ ಮಾತ್ರ ಕಂಡುಬರುತ್ತದೆ. ಹಾಗೂ ಮಹಿಳೆಗೆ ತನ್ನ ಸ್ವಂತ ಅನಿಸಿಕೆಗಳನ್ನು, ವಿಚಾರಗಳನ್ನು ವ್ಯಕ್ತಪಡಿಸಲು ಅವಕಾವಶವನ್ನೇ ಕೊಟ್ಟಿಲ್ಲ. ಈ ಪುರುಷ ಸಮಾಜ ಅದು ಬುಡಕಟ್ಟು ಸಮುದಾಯಗಳನ್ನು ಅವಲೋಕಿಸಿ ನೋಡಿದಾಗ ಮೊದಲು ಮಹಿಳೆಯ ಕುರಿತು ಅಷ್ಟೊಂದು ಜಡ ಸಮಸ್ಯೆಗಳು ಕಂಡುಬರದಿದ್ದರೂ ನಂತರದ ಸಾಮಾಜಿಕ ಬದಲಾವಣೆಯಲ್ಲಿ ಇವರ ಸಮುದಾಯದಲ್ಲಿ ಸಹ ಧಾರ್ಮಿಕವಾಗಿ ಸ್ವಾತಂತ್ರ್ಯ ರಹಿತವಾಗಿ ರೂಪಗೊಂಡಿದ್ದು ತಿಳಿದುಬರುತ್ತದೆ. ಅಂದರೆ ಬುಡಕಟ್ಟು ಸಮುದಾಯವು ಸಹ ವೈಷ್ಣವ, ಶೈವ, ಶಕ್ತಿ ಇತರೆ ವೈದಿಕ ಧರ್ಮನೀತಿಗಳಿಗೆ ಹೊಂದಿಕೊಂಡ ನಂತರದಲ್ಲಿ ಇವರಲ್ಲಿ ಸಹ ಪುರುಷರ ಅಧಿಕಾರ ಪ್ರಮುಖವಾಗಿ ಮಹಿಳೆಯರ ಮೇಲೆ ಬಿಗಿ ಹಿಡಿತ ಸಾಧಿಸಲು ಪ್ರಯತ್ನ ಕಾಲಾಂತರದಲ್ಲಿ ಮುಂದುವರೆದಿರುವದರಿಂದ ಪ್ರಸ್ತುತದಲ್ಲಿ ಬುಡಕಟ್ಟು ಸಮುದಾಯವಾದ ಬೇಡ, ಸಮುದಾಯದಲ್ಲಿ ಮಹಿಳೆಯ ಸ್ಥಿತಿಗತಿ ತುಂಬಾ ಸಂಕರವಾಗಿ ಕಂಡುಬರುತ್ತವೆ.

ಇಂದಿಗೂ ಹಲವಾರು ಅಧಿಕಾರ ಸ್ವಾತಂತ್ರ್ಯ ಸೌಲಭ್ಯಗಳು ಹಕ್ಕು ಮತ್ತು ಕರ್ತವ್ಯಗಳಿಂದ ಅಸಹಾಯಕಳಾಗಿ ಬಾಲ್ಯವಸ್ಥೆಯಿಂದ ಇದೇ ರೀತಿಯ ತರಬೇತಿ ಪಡೆದು ಸಾಯುವವರೆಗೆ ಮೌನವಾಗಿ ನೋವನ್ನು ನುಂಗಿ, ಮನಸ್ಸಿದ್ದೂ ಮೌನಿಯಾಗಿ, ಬಾಯಿಯಿದ್ದೂ ಮೂಕಿಯಾಗಿ ಬಾಳಿದ್ದಾಳೆ-ಬಾಳುತ್ತಿದ್ದಾಳೆ. ಇಂದರಿಂದ ಅವಳ ವಿಚಾರಗಳೆಲ್ಲ ಅವಳ ಅಂತರಂಗದಲ್ಲಿಯೇ ಹುಟ್ಟಿ ಹೊಯ್ದಾಡಿ ಹೊರಬರುವ ಧೈರ್ಯವಿಲ್ಲದೇ ಒಳಗೇ ಅಸುನೀಗಿವೆ. ಇಂದು ಆಧುನಿಕವಾಗಿ ಎಷ್ಟೇ ಮುಂದವರೆದಿದ್ದರೂ ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಕೆಲವು ಮಹಾನುಭಾವರು ವೇದ-ಸ್ಮೃತಿಗಳಲ್ಲಿನ ಶ್ಲೋಕಗಳಿಗೆ ಪುರುಷರ ಪರವಾಗಿ ವಿಪರೀತಾರ್ಥ ಕಲ್ಪಿಸಿ ತಮ್ಮ ಅನುಕೂಲತೆ ಹಾದಿ ಸರಳಮಾಡಿಕೊಂಡು ಸಮಾಜದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದ್ದು ಪ್ರಥಮ ಹೆಜ್ಜೆಯಾಗಿದೆ. ಮುಂದೆ ಮಹಿಳಾ ಸ್ವಾತಂತ್ರ್ಯದ ಅವನತಿ ಹಂತ-ಹಂತವಾಗಿ ಪ್ರಾರಂಭವಾಯಿತು. ಇದರ ಪ್ರಕ್ರಿಯೆಯಲ್ಲಿ ಪುರುಷ ವರ್ಗ ಸಮಾಜವನ್ನು ಆಳುವ ಗುತ್ತಿಗೆ ಪಡೆದು ಮಹಿಳೆಯ ಸ್ಥಾನ-ಮಾನಗಳಿಗೆ, ಕರ್ತವ್ಯಗಳಿಗೆ ಸಮಾನತೆಗೆ ಒಂದು ರೇಖೆ ಗುರುತಿಸಿ ಮಿತಿ ಹಾಕಿತು.

ಮಹಿಳೆಯಿಂದ ಶಿಕ್ಷಣದ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರು ಜನ್ಮಿಸಿರುವುದೇ ಪುರುಷರ ಸೇವೆಗಾಗಿ ಎಂಬ ಭಾವನೆಯನ್ನು ಬಿತ್ತಿ ಬೆಳೆಸಿದರು. ಇದರಿಂದ ಮಹಿಳೆ ಪರ ಪುರುಷರೊಡನೆ

ಸ್ನೇಹಿತರೊಡನೆ ತನ್ನ ಭಾವನೆ ಹಂಚಿಕೊಳ್ಳುವ ಪ್ರಕ್ರಿಯೆಗೆ ಬಲವಾದ ಕೊಡಲಿ ಪೆಟ್ಟುಬಿತ್ತು. ಅದೇ ವೇಳೆಗೆ ಮಹಿಳೆ ತನ್ನ ದಾಸ್ಯಸ್ಥಿತಿಯನ್ನೂ, ಸಹಜಸ್ಥಿತಿಯೆಂದೇ ತಿಳಿದು ಬಿಟ್ಟಿರಬೇಕು. ಇನ್ನೂ ಮುಂದುವರೆದು ಬಾಲ್ಯ ವಿವಾಹ ತೀರ ಸಾಮಾನ್ಯವಾಯಿತು. ಎಂಟು ವರ್ಷಕ್ಕೆ ಮಗಳ ಮದುವೆ ಮಾಡಿಕೊಟ್ಟರೆ, ತಂದೆಗೆ ಸ್ವರ್ಗ ದೊರೆಯುವುದೆಂಬ ನಂಬಿಕೆ ಬಲವಾಯಿತು. ಇದರಿಂದ ಮಹಿಳೆಗೆ ಮದುವೆಮಾಡಿ ಪುರುಷನ ಹಿಡಿತದಲ್ಲಿ ಸೂತ್ರದ ಬೊಂಬೆಯಾಗಿ ತನ್ನ ಮನೆಯಿಂದ ಗಂಡನ ಮನೆಗೆ ಗುಲಾಮರ ಬದಲಾವಣೆಯಂತೆ ಮಾಡುತ್ತಿದ್ದರೆ ಅವಳಿಗೆ ಸ್ವಾತಂತ್ರ್ಯ ಎಲ್ಲಿ ದೊರೆಯುತ್ತಿದೆ ಇಂತಹ ಸಂಕರ ಸಮಾಜದಲ್ಲಿ ಬುಡಕಟ್ಟು ಸಮುದಾಯವಾದ ಬೇಡ ಸಮುದಾಯವು ಎಂಟ್ರಿಯಾದ ನಂತರವೇ ಮಹಿಳೆಯರಿಂದ ಅಧಿಕಾರ ಪುರುಷರಿಗೆ ಹಸ್ತಾಂತರವಾಗಿ ಪುರುಷನ ಅಧೀನಳಾಗಿ ಇಂದು ಸಮಸ್ಯೆಗಳ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿರುವುದು ನಿಜದ ಸಂಗತಿಯಾಗಿದೆ.

ಸಮಾಜವು ನಿಂತ ನೀರಿನಂತಲ್ಲ ಅದು ನಿತ್ಯ ಪರಿವರ್ತನಾ ಶೀಲವಾಗಿದ್ದು, ಪರಿಸ್ಥಿತಿ ರೂಪಾಂತರಗೊಂಡಂತೆ ಸಮಾಜದ ಸಮೂಹದಲ್ಲಿ ಜೀವಿಸುವ ಸ್ತ್ರೀ-ಪುರುಷ ಜೀವಿಗಳ ಮನಸ್ಸು ವಿಚಾರ ವೈಚಾರಿಕತೆ ರೀತಿ, ನೀತಿ ನಿಯಮಗಳು ಸಹ ಬದಲಾವಣೆಗೊಂಡು ಮುಂದುವರೆದಂತೆ ಮಹಿಳೆಯಲ್ಲಿ ಸಹ ವೈಚಾರಿಕ ಪ್ರಜ್ಞೆಯುಂಟಾಗಿ ಅವಳ ವಿಚಾರ ಲಹರಿ ಹಲವಾರು ಕ್ಷೇತ್ರಗಳಲ್ಲಿ ಸಂಚಲನೆಗೊಂಡು ಸ್ವಾತಂತ್ರ್ಯ, ಸಹಭಾಗಿತ್ವ, ಸಮಾನತೆ, ಸಹಕಾರ, ಮೀಸಲಾತಿ, ಇನ್ನಿತರ ಕ್ಷೇತ್ರಗಳಲ್ಲಿ ತನ್ನನ್ನೂ ವಿನಿಯೋಗಿಸಿಕೊಳ್ಳಲು ವಿನಯದಿಂದ ಪ್ರಯತ್ನಿಸುತ್ತಲೆ ಪುರುಷ ಪ್ರಧಾನ ಸಮಾಜಕ್ಕೆ ಎದುರು ಸಡ್ಡು ಹೊಡೆದು ನಿಂತಿರುವುದು ಸ್ತ್ರೀ ಹಕ್ಕಿನ ಹಾಗೂ ವೈಚಾರಿಕತೆ, ಭೌದ್ಧಿಕತೆಯಲ್ಲಾದ ಕ್ರಾಂತಿಯ ಪ್ರತೀಕ. ತನ್ನ ಮೇಲೆರಿದ ಅಗ್ನಿಕಿರಣಗಳಾದ ಸತಿ ಪದ್ಧತಿ, ಬಾಲ್ಯವಿವಾಹ, ಪರದಾಪದ್ಧತಿ, ಲಿಂಗತಾರತಮ್ಯ ಇನ್ನಿತರ ಸಮಸ್ಯೆಗಳು ಆದಿಯಿಂದ ಹಿಡಿದು ಮದ್ಯಕಾಲವನ್ನು ಒಳಗೊಂಡು ಆಧುನಿಕದ ಸಂದರ್ಭದಲ್ಲಿ ತನ್ನ ಸುತ್ತಲು ಪಸರಿಸಿದ ಅಂದಕಾರವನ್ನು ದೂರುಮಾಡಲು ದಿಟ್ಟ ಹೆಜ್ಜೆಗಳನ್ನು ನಿಧಾನಗತಿಯಲ್ಲಿ ಮುಂದಿಡುತ್ತಿರುವುದು ಸಂತೋಷದ ಸಂಗತಿ.

ಇಂತಹ ಸನ್ನಿವೇಶವನ್ನು ಕರ್ನಾಟಕದ ತುಂಬೆಲ್ಲಾ ನೋಡಲು ಸಾಧ್ಯವಿಲ್ಲ. ಪ್ರಾದೇಶಿಕವಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಲಿಕೆ ಮಾಡಿನೋಡಿದಾಗ ವಿಭಿನ್ನತೆ ವ್ಯತ್ಯಾಸ ಬೇಧ ಅಂಶಗಳು ಕಂಡುಬರುವುದು ಸಹಜ. ಅದರಲ್ಲಿ ಹೈದರಾಬಾದ-ಕರ್ನಾಟಕದ ಗುಲಬರ್ಗಾ, ರಾಯಚೂರು, ಕೊಪ್ಪಳ, ಜಿಲ್ಲೆಯಲ್ಲಿ ಕಂಡುಬರುವಂತಹ ಪರಿಸ್ಥಿತಿ-ಸಂದರ್ಭಗಳು ಮಹಿಳೆ ಪಾಲಿಗೆ ನೀರು ಇಳಿಯದ ಗಂಟಲಲ್ಲಿ ಕಡಬು ತುರಿಕಿದಂತಾಯಿತು ಎಂಬ ನಾಣ್ನುಡಿಯಂತೆ ಗೋಚರವಾಗುತ್ತವೆ. ಈ ಪ್ರದೇಶದಲ್ಲಿ ಪುರುಷ ಸಮಾಜ ಹಾಗೂ ಮೇಲ್ವರ್ಗದವರ ದಬ್ಬಾಳಿಕೆ ಅಟ್ಟಹಾಸ ದ್ವಂದ್ವಾತ್ಮಕ ನೀತಿಗಳು ಈ ಸಮುದಾಯದ ಸ್ತ್ರೀಯನ್ನು ಕೇವಲ ಕೃಷಿ, ಕೃಷಿಕೂಲಿ, ಗೃಹ ಚಟುವಟಿಕೆಗಳಲ್ಲಿ ಬಂದಿಯಾಗಿ ಮಾಡಿವೆ. ಇದರಿಂದ ಹೂವಾಗಿ ಅರಳಿ ಸುಗಂಧ ಬೀರಬೇಕಾದ ಮಹಿಳೆಯು

ಮೊಗ್ಗಲೇ ಕಮರುವಂತೆ ಮಾಡಿರುವದರಿಂದ ಸಮಾನತೆ ಎಂಬ ಕಲ್ಪನೆ ಈ ಸಮುದಾಯದ ಸ್ತ್ರೀಯರಿಗೆ ಗಗನ ಕುಸುಮವಾಗಿದೆ.

೪.೨. ಮಹಿಳೆಯ ಸಾಮಾಜಿಕ ಸ್ಥಾನಮಾನ

ಭಾರತದಂತಹ ನಾಡಿನಲ್ಲಿ ಹಲವು ಸಂಪ್ರದಾಯ, ಸಂಸ್ಕೃತಿ, ಧರ್ಮ, ಮತ, ಪಂಥ, ಪಂಗಡಗಳಿಂದ ಜೀವಿಸುತ್ತಿರುವ ಹಲವು ಸಮುದಾಯಗಳಿವೆ. ಅದರಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಭೌದ್ಧ ಇತರೆ ಧರ್ಮಗಳು ಕಂಡುಬಂದರೂ, ಒಂದು ಧರ್ಮದ ಆಚರಣೆ ಕ್ರಮಗಳು ಇನ್ನೊಂದು ಧರ್ಮಕ್ಕೆ ಸಾಮ್ಯತೆ ಹೊಂದುವುದಿಲ್ಲ. ಅದರಂತೆ ಹಿಂದೂ ವೈದಿಕ ಧರ್ಮದಲ್ಲಿ ತನ್ನನ್ನು ಪವಡಿಸಿಕೊಂಡು, ಈ ಧರ್ಮದ ಶ್ರೇಣೀಕರಣ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿ ನಮೂದಿಸಲ್ಪಟ್ಟಿರುವ ಆದಿವಾಸಿ, ಅರಣ್ಯವಾಸಿ, ಗಿರಿಜನರು, ಪರಿಶಿಷ್ಟ ಪಂಗಡದವರು ಹೀಗೆ ಇತರೆ ನಾಮಾಂಕಿತಗಳಿಂದ ಕರೆಯಲ್ಪಡುತ್ತಿರುವ ಸಮುದಾಯಗಳಲ್ಲಿ ಬೇಡ ಸಮದಾಯವು ಒಂದು.

ಈ ಪರಿಶಿಷ್ಟ ಪಂಗಡವು ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿ ಒಳಗೊಳ್ಳುವುದಕ್ಕಿಂತ ಮುಂಚಿತವಾಗಿ ಹಿಂದುಳಿದ ವರ್ಗದಲ್ಲಿತ್ತು ಅದಕ್ಕಿಂತ ಮುಂಚೆ ಅರಣ್ಯದಲ್ಲಿ ವಾಸಿಸುವಂತಹ ಸಂದರ್ಭದಲ್ಲಿ ಬೇಡ-ವಾಲ್ಮೀಕಿ ಸಮುದಾಯವು ಯಾವುದೆ ರೀತಿಯ ಧರ್ಮದ ಚೌಕಟ್ಟಿಗೆ ಒಳಪಟ್ಟಿರಲಿಲ್ಲ. ತನ್ನದೇ ಆದಂತಹ, ತಮ್ಮವರೇ ಸೃಷ್ಟಿಸಿಕೊಂಡು ತಲಾತಲಾಂತರದಿಂದ ಮುಂದುವರೆಸಿಕೊಂಡು ಬಂದಂತಹ ತತ್ವಾದರ್ಶಗಳು ಇವರನ್ನು ನಿಯಂತ್ರಿಸುತ್ತಿದ್ದವು. ಜೊತೆಗೆ ವೈದಿಕ ಧರ್ಮದ ಪೂರ್ವೋತ್ತರದಲ್ಲಿ ಬುಡಕಟ್ಟು ಸಮಾಜವು ಸರಳತೆ, ಸಮಾನತೆ, ಲಿಂಗಭೇದ ರಹಿತ ವ್ಯವಸ್ಥೆಯಲ್ಲಿ ಪುರುಷ-ಮಹಿಳೆಯರು ಶ್ರಮವಿಭಜನೆ ಕ್ರಮಾನುಕರಣೆಯಲ್ಲಿ ಸಮಾನವಾಗಿ ಭಾಗವಹಿಸುತ್ತಿದ್ದರು. ಅದು ಬೇಟೆ, ಆಹಾರ, ಸಂಗ್ರಹ, ಪಶುಸಂಗೋಪನೆ, ಕೃಷಿ ಹಂತದವರೆಗೂ ಇದ್ದಂತಹ ವ್ಯವಸ್ಥೆ. ಕೃಷಿಯಲ್ಲಿ ಕಂಡುಕೊಂಡಂತಹ ಆಹಾರ ಉತ್ಪಾದನೆಯಲ್ಲಿ ಸ್ವತಂತ್ರ್ಯಗೊಂಡ ನಂತರದಲ್ಲಿ, ಇಡೀ ಕುಟುಂಬ ವ್ಯವಸ್ಥೆಯಲ್ಲಿ ಅಧಿಕಾರ, ನೀತಿ, ನಿರ್ಧಾರ, ಆಸ್ತಿ, ಸಂಪತ್ತಿನ ವಿಚಾರಗಳಲ್ಲಿ ಸಂಪೂರ್ಣ ಬದಲಾವಣೆಗೊಂಡದ್ದು, ಮಹಿಳೆಯರ ಪಾಲಿಗೆ ದುರಂತದ ಸಂಗತಿ ಎಂದೇ ಹೇಳುವುದು ಸೂಕ್ತ. ಈ ಸಂದರ್ಭದಿಂದಲೇ ಮಹಿಳೆಯರು ಕುಟುಂಬ ಜೀವನದಲ್ಲಿ ಪ್ರಥಮವಾಗಿ ನೇಪಥ್ಯಕ್ಕೆ ತಳ್ಳಲ್ಪಟ್ಟರು. ಸಮಾಜವು ಬದಲಾವಣೆ ಪ್ರಕ್ರಿಯೆಗೆ ಮೈಗೂಡಿಸಿಕೊಂಡಂತೆ ಮಾತೃ ಪ್ರಧಾನ ವ್ಯವಸ್ಥೆಯೂ ಬಲಹೀನವಾಗತೊಡಗಿತ್ತು. ಪುರುಷ ಪ್ರಧಾನ ಪ್ರಭಾವ ಕುಟುಂಬವಲ್ಲದೆ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ತನ್ನದೇಯಾದ ಚಾಪು ಮೂಡತೊಡಗಿತು.

"ಪುರಾತನ ಕಾಲದ ಸಂದರ್ಭದಿಂದಲೂ ಭೂಮಿ, ಮತ್ತು ಮಹಿಳೆಗೆ ಇಂಡಿಯಾದಂತಹ ಬೃಹತ ರಾಷ್ಟ್ರದಲ್ಲಿ ಪೂಜ್ಯನೀಯ ಭಾವನೆಯಿಂದ ಸಾಂಕೇತಿಕವಾಗಿ ಗೌರವಿಸುತ್ತಿದ್ದಾರೆ ಹೊರತು ಸಂಪತ್ತು ಮತ್ತು ಅಧಿಕಾರ ಹಂಚಿಕೆ ವಿಚಾರಗಳು ಬಂದಾಗ ಸಂಘರ್ಷಗಳು ಉದ್ಭವಿಸಿರುವಂತಹ ಸಂಗತಿಗಳು ಭಾರತದಂತಹ ದೇಶಗಳಲ್ಲಿ ಸಾಮಾನ್ಯವೆಂದು ಚರಿತ್ರೆ ದಾಖಲಾತಿಗಳಿಂದ ಅರಿತುಕೊಳ್ಳಬಹುದು.

ಇದರಡಿಯಲ್ಲಿಯೇ ಪುರುಷರ ಪ್ರಾಧಾನ್ಯತೆಯನ್ನು ಕಿತ್ತೊಗೆಯುವ ವಿಚಾರದ ಹಾದಿಯಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಜಾನಪದೀಯವಾಗಿ ಬಂದಂತಹ ಕಥನ ಕಾವ್ಯಗಳು, ಸಾಕಷ್ಟು ನಮಗೆ ಲಭಿಸುತ್ತವೆ. ಅದರಲ್ಲಿ ಬಹುಮುಖ್ಯವಾಗಿ ಸಿರಿಪಾಡ್ದನ, ಗ್ರಾಮ ದೇವತೆ ಆಚರಣೆ ಕ್ರಮಗಳು, ಇತ್ಯಾದಿ".[7] ಇಂತಹವುಗಳಲ್ಲಿ ವ್ಯಕ್ತವಾಗುವ ಪ್ರಸಂಗಗಳು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಪುರುಷ ಪ್ರಧಾನ್ಯ ವಿರುದ್ಧ ಹೆಣೆಯಲ್ಪಟ್ಟಿರುವ ಕಥನ ಕಾವ್ಯಗಳು ಇವತ್ತಿನ ಸ್ತ್ರೀವಾದಕ್ಕಿಂತಲೂ ಮುಂಚಿನವು ಎಂಬುವುದು ತಿಳಿದು ಬರುತ್ತದೆ. ಆದರೆ ಇಂತಹ ಪ್ರತಿಕ್ರಿಯೆಗೆ ವೈದಿಕಶಾಹಿ ಪೋಷಕರಾದ ಮನು ಶಾಸ್ತ್ರಜ್ಞರ ಪ್ರಕಾರ ಮಹಿಳೆಯರು ಸ್ವಾತಂತ್ರ್ಯಕ್ಕೆ ಅರ್ಹರು ಅಲ್ಲ ಅನ್ನುವಂತಹ ವಿಚಾರವಿದೆ ಬಹು ಪ್ರಮುಖವಾದ ಕುತಂತ್ರ ರಾಜಕಾರಣವು ಕೆಲಸಮಾಡಿದೆ. ಮತ್ತೊಂದು ಕಡೆಗೆ ಮಹಿಳೆಯು ದೇವತೆಗೆ-ಭೂಮಿಗೆ ಹೋಲಿಕೆ ಮಾಡಿರುವುದು ತಿಳಿದು ಬರುತ್ತದೆ. ಅಂದರೆ ಯಾರ ಮನೆಯಲ್ಲಿ ಸ್ತ್ರೀಯರನ್ನು ಗೌರವಿಸುತ್ತಾರೆ ಆ ಮನೆಯಲ್ಲಿ ದೇವತೆಗಳು ನೆಲೆಸಿರುತ್ತವೆಂದು ಮನು ಅಭಿಪ್ರಾಯ ಪಡುತ್ತಾನೆ.

ಈ ವೈದಿಕಶಾಹಿ ಹಿಂದೂ ಧರ್ಮದ ಒಳಾರ್ಥವಿಷ್ಟೇ ಮಹಿಳೆಯನ್ನು ದೇವತೆಯನ್ನಾಗಿ ಅದರ ಸ್ವರೂಪದ ಮುಕುಟ ನೀಡಿದರೆ ಸಾಕು ಸರಿ ಹೋಗುತ್ತಾಳೆ. ಸಂಪತ್ತು-ಅಧಿಕಾರ, ಅಂತಸ್ತು ಪುರುಷರ ಸ್ವಾಧೀನವಾಗಿರುತ್ತದೆ ಎನ್ನುವ ಅರ್ಥವು ಒಳಗೊಂಡಿದೆ. ಇದರಲ್ಲಿ ಇನ್ನೊಂದು ವಿಚಾರ ಇಲ್ಲಿ ಚರ್ಚಿಸಲೇಬೇಕಾದ ವಿಷಯವೆಂದರೆ ಸ್ತ್ರೀಯನ್ನು ಭೂಮಿಗೆ ಹೋಲಿಕೆ ಮಾಡಿರುವ ವಿಚಾರದಲ್ಲೂ ನಿಗೂಢ ಕುತಂತ್ರವು ಅಡಗಿದೆ. ಭೂಮಿಯಲ್ಲಿರುವಂತಹ ಮರು ಉತ್ಪಾದನೆ ಕ್ರಿಯೆಗೆ ಯಾವ ರೀತಿ ಪುರುಷರ ಸಿಂಪತಿ ಇದೆಯೋ ಅದೇ ರೀತಿಯಾಗಿ ಮಹಿಳೆಯಲ್ಲಿಯೂ ಸಹ ಸಂತಾನ ಉತ್ಪತ್ತಿ ಪ್ರಕ್ರಿಯೆಗೆ ಸಮೀಕರಿಸಿಕೊಂಡಿದ್ದಾರೆ. ವಿನಹಃ ಏನೂ ಹೇಳಿಕೊಳ್ಳುವಂತಹ ಘನತೆ, ಗೌರವ, ಕಂಡುಬರದೆ ಉದಾರ ಭಾವನೆ ಹೊಂದಿರುವುದು ಮೇಲ್ನೋಟದಲ್ಲಿ ತಿಳಿದುಬರುತ್ತದೆ. ಇದರಿಂದ ಸ್ತ್ರೀಯರು ಎಷ್ಟೇ ಪ್ರತಿಭಟನೆ ಅಭಿವ್ಯಕ್ತ ಪಡಿಸಿದರೂ ಪ್ರೋತ್ಸಾಹ ದೊರೆಯದೆ ಇರುವುದು ಕಂಡುಬರುತ್ತದೆ. ಇಂತಹ ಹಲವಾರು ವಿಚಾರಗಳು, ಧಾರ್ಮಿಕ ನಂಬಿಕೆಗಳು, ಸಂಪ್ರದಾಯಗಳು, ಲೋಕಾರೂಢಿಗಳನ್ನು ಪಾಲಿಸಬೇಕು ಅನ್ನುವಂತಹ ವಿಚಾರವು ಸಹ ಮಹಿಳಾ ವಿರೋಧಿ ನಿಲುವುಗಳು ಆಗಿವೆ.

ಇವತ್ತಿನ ಪ್ರಜಾಪ್ರಭುತ್ವ ಮಾದರಿಯ ರಾಷ್ಟ್ರವಾದ ಇಂಡಿಯಾದಲ್ಲಿ ಮಹಿಳಾ ಪರ ಚಳುವಳಿಗಳು ಹೋರಾಟಗಳು ಮತ್ತು ಸುಧಾರಣ ಕ್ರಮಗಳು ನಡೆಯುತ್ತಲೇ ಬಂದರೂ ಸಹ ಇವತ್ತಿನ ಸಂದರ್ಭದವರೆಗೂ ಅರಣ್ಯವಾಸಿ-ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಹಿಂದುಳಿದ, ದಲಿತ, ಕೆಳಸ್ತರದ ಸಮುದಾಯದ ಮಹಿಳೆಯರಿಗೆ ಕುಟುಂಬದ ಒಳಗೂ-ಹೊರಗೂ ಸೂಕ್ತವಾದ ಮನ್ನಣೆ ದೊರೆಯುತ್ತಿಲ್ಲ. ಇನ್ನು ಬುಡಕಟ್ಟು ಸಮು

ದಾಯಗಳಲ್ಲಿ ಪ್ರಮುಖವಾದ ಕರ್ನಾಟಕದಲ್ಲಿ ಬಹುಸಂಖ್ಯಾತ ಜನಸಂಖ್ಯೆಯನ್ನು ಹೊಂದಿರುವ ಬೇಡ ಸಮುದಾಯವು ತನ್ನದೆಯಾದ ಸಂಪ್ರದಾಯ, ಚರಿತ್ರೆ, ಒಳಗೊಂಡಿದೆ. ಇಂತಹ ಚರಿತ್ರೆಯನ್ನು ಒಳಗೊಂಡ ಬೇಡ ಸಮುದಾಯವು ಸರ್ಕಾರದ ದೃಷ್ಟಿಯಲ್ಲಿ ಗಮನಕ್ಕೆ ಭಾರದಂತಹ ಪ್ರದೇಶಗಳಾದ ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಜೀವನ ಮುಂದುವರೆಸುತ್ತಿರುವ ಬೇಡ ಸಮುದಾಯದ ಮಹಿಳೆಯ ಸ್ಥಾನಮಾನದ ಕುರಿತು ಕ್ಷೇತ್ರಾಧ್ಯಾಯನದ ಮೂಲಕ ವಿಷಯವನ್ನು ಸಂಗ್ರಹಿಸಿ ಕಂಡುಕೊಂಡಂತಹ ಹಲವು ವಿಷಯಗಳು ಇಲ್ಲಿ ಪ್ರಸ್ತಾಪಿಸಲು ಪ್ರಯತ್ನಿಸುತ್ತಿರುವೆನು.

ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವೆಂದೇ ಪ್ರಸಿದ್ಧಿಯಾಗಿರುವ ಹೈದರಾಬಾದ್ ಕರ್ನಾಟಕ ಭಾಗದ ಈ ಮೂರು ಜಿಲ್ಲೆಯಲ್ಲೆ ಬೇಡ ಸಮುದಾಯದ ಜನರು ಅಧಿಕವಾಗಿ ಕಂಡುಬರುತ್ತಾರೆ. ಇವರ ಪ್ರಮುಖ ಉದ್ಯೋಗ ಕೃಷಿ ಕೂಲಿ ಮತ್ತು ಅಲ್ಪಸ್ವಲ್ಪ ಕೃಷಿಕರಾಗಿದ್ದಾರೆ. ಅದು ಕೃಷಿ ಕಾರ್ಯಚಟುವಟಿಕೆಗಳು ನಡೆಯುವುದು ಮಳೆಗಾಲದಲ್ಲಿ ಮಾತ್ರ. ಮಳೆ ಬಾರದ ಸಮಯದಲ್ಲಿ ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವಂತಹ ಪರಿಪಾಠ ಅಧಿಕವಾಗಿದೆ. ಏಕೆಂದರೆ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಉದ್ಯೋಗವನ್ನು ಹೊಂದಿದ್ದು ಮಳೆ ರಹಿತ ಪ್ರದೇಶವು ಇದಾಗಿರುವುದರಿಂದ ಈ ವಲಯದಲ್ಲಿ ವಾಸಿಸುವಂತಹ ಜನರ ಜೀವನ ಮಟ್ಟವು ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ಕೊನೆಯ ಸ್ಥಾನದಲ್ಲಿದೆ.

ಇಂತಹ ಸಮಾಜದ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿರುವ ಮತ್ತು ಪರ ಜಾತಿಯವರೊಂದಿಗೆ ಸಹೋದರರಂತೆ ಸಹಬಾಳ್ವೆ ಕಂಡುಕೊಂಡಿರುವ ವಾಲ್ಮೀಕಿ ಸಮುದಾಯದ ಪರಿಸ್ಥಿತಿ ಅಷ್ಟೊಂದು ಹೇಳಿಕೊಳ್ಳುವಂತ ಸ್ಥಿತಿಯಲ್ಲಿಲ್ಲ. ಈ ಸಮುದಾಯದ ಮಹಿಳೆಯ ಪರಿಸ್ಥಿತಿಯೂ ಇಲ್ಲಿ ಎದುರುಗೊಳ್ಳುತ್ತವೆ. ಅದರಲ್ಲಿ ಸ್ಥಾನಮಾನ ಅಂದರೆ ಯಾವವು. ಅವುಗಳು ಯಾವ ರೀತಿಯ ಮಾನದಂಡಗಳಲ್ಲಿ ಅವುಗಳನ್ನು ಗುರುತಿಸಬೇಕು ಅನ್ನುವ ವಿಚಾರ ಬಹುಮುಖ್ಯವಾಗಿ ನಮ್ಮ ಮುಂದೆ ಬರುತ್ತದೆ. ಇಲ್ಲಿ ಸಮುದಾಯದ ಮಹಿಳೆಯನ್ನು ಯಾವ ಪ್ರಕಾರದ ಅಂತಸ್ತು ಅಥವಾ ಸ್ಥಾನಮಾನಗಳು ಅಲಂಕಾರಿಸಿದ್ದಾಳೆಯನ್ನುವುದು ಮುಂದಿನಂತೆ ಅವಲೋಕಿಸೋಣ.

೧. ಬೇಡ ಸಮುದಾಯ ಕುಟುಂಬ ಪದ್ಧತಿ

ಮನುಷ್ಯ ಅಲೆಮಾರಿ ಜೀವನಕ್ಕೆ ತಿಲಾಂಜಲಿ ಇಟ್ಟ ನಂತರದಲ್ಲಿ ಕುಟಂಬ ರಚನೆಯಾಯಿತು ಎಂದು ಹೇಳಬಹುದು. ಆದಿಮ ಕಾಲದಿಂದ ಆಧುನಿಕ ಕಾಲದ ಇಂದಿನವರೆಗೂ ಹಲವಾರು ಓರೆ-ಕೋರೆಗಳನ್ನು ಮೈಗೂಡಿಸಿಕೊಂಡು ಎರಡು ರೀತಿಯ ಕುಟುಂಬಗಳ ರಚನೆಯನ್ನು ಪಡೆದುಕೊಂಡು ಮುಂದುವರಿಯುತ್ತಿವೆ. ಅವುಗಳಲ್ಲಿ ೧. ಮಾತೃ ಮೂಲ ಕುಟುಂಬ. ೨. ಪಿತೃ ಮೂಲ ಕುಟುಂಬ.

೨. ಮಾತೃ ಮೂಲ ಕುಟುಂಬ

ಈ ಪದ್ಧತಿಯ ಕುಟುಂಬದಲ್ಲಿ ಸಮಸ್ತ ಕುಟುಂಬ ಜವಾಬ್ದಾರಿಯನ್ನು ಮಹಿಳೆಯು ನಿರ್ವಹಿಸುತ್ತಾಳೆ.

ತಮ್ಮ ಉಪಜೀವನಕ್ಕೆ ಮೂಲಭೂತವಾಗಿ ಅವಶ್ಯಕತೆಯಿರುವಂತಹ ಆರ್ಥಿಕ, ಸಾಮಾಜಿಕ, ಕೌಟುಂಬಿಕ ನಿರ್ಧಾರ ಅಂಶಗಳೆಲ್ಲವನ್ನು ಮಹಿಳೆಯೇ ನಿರ್ಧರಿಸುತ್ತಾಳೆ. ಆದರೂ ಸಹ ತನ್ನ ಪತಿಯ ಮಾರ್ಗ ದರ್ಶನ ಇರುವುದು ವಿಶೇಷವಾಗಿ ಕಂಡುಬರುತ್ತದೆ. ಒಂದೊಂದು ವಿಶೇಷ ಸಂದರ್ಭದಲ್ಲಿ ಪತ್ನಿ-ಪತಿಯು ಇರ್ವರೂ ಸೇರಿಕೊಂಡು ಕುಟುಂಬದ ವೈವಾಹಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಇಂತಹವುಗಳನ್ನು ಹೊರತುಪಡಿಸಿದರೆ ಮಾತೃ ಮೂಲ ಕುಟುಂಬದಲ್ಲಿ ಪುರುಷರ ಸಹಭಾಗಿತ್ವ ಅಷ್ಟೊಂದು ಪ್ರಮುಖವಾಗಿ ಕಾಣದು. ಕೇವಲ ಇಲ್ಲಿ ಪುರುಷ ಕೃಷಿ ಭೂಮಿಯಲ್ಲಿ ದೈಹಿಕ ಶ್ರಮವನ್ನು ಮಾತ್ರ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾನೆ. ಕುಟುಂಬ ಮುಖ್ಯಸ್ಥೆಯಾದವಳು ಕೃಷಿಗೆ ಅವಶ್ಯಕತೆಯಿರುವಂತಹ ಉಪಕರಣಗಳು, ಬಿತ್ತನೆ ಬೀಜಗಳು, ಇತರೆ ಕೊಂಡುಕೊಳ್ಳುವಿಕೆ ವ್ಯವಹಾರದಲ್ಲಿ ಹಣಕಾಸಿನ ನೆರವು ಮಹಿಳೆಯಿಂದಲೆ ದೊರೆಯುತ್ತದೆ. ಮಾತೃ ಮೂಲ ಕುಟುಂಬದ ಇನ್ನೊಂದು ವಿಶೇಷತೆಯೆಂದರೆ ಪಿತೃಪ್ರಧಾನ ಕುಟುಂಬದ ತತ್ವಕ್ಕೆ ವಿರುದ್ಧವಾಗಿ ಮದುವೆಯಾದ ಪುರುಷನನ್ನು ತಮ್ಮ ಕುಟುಂಬಕ್ಕೆ ಸೇರ್ಪಡೆಮಾಡಿಕೊಳ್ಳುತ್ತಾರೆ. ಇದೇ ಸಂಪ್ರದಾಯವು ಮುಂದಿನ ತಲೆಮಾರಿಗೆ ಚಲಾವಣೆಯಾಗುತ್ತದೆ. ಇದಕ್ಕೆ ಉದಾಹರಣೆಯೆಂದರೆ ಕೊರಗ, ಗೌಡಲು, ಬಂಟರು ಪಂಗಡಗಳಲ್ಲಿ ಇವತ್ತಿನವರೆಗೂ ಕೆಲವೊಂದು ಬದಲಾವಣೆಯೊಂದಿಗೆ ಮುಂದುವರೆಯುತ್ತಿದೆ.

ಕರ್ನಾಟಕದಲ್ಲಿ ವಾಸವಾಗಿರುವ ಬೇಡ ಸಮುದಾಯದಲ್ಲಿ ಸಹ ಈ ತರಹದ ಲಕ್ಷಣಗಳು ವಿಭಿನ್ನ ನೆಲೆಯಲ್ಲಿ ಕಾಣಲು ಸಾಧ್ಯ. ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತಹ "ಮಾಹಿತಿದಾರರ ಪ್ರಕಾರ ಈ ಸಮುದಾಯದಲ್ಲಿ ಮೇಲ್ನೋಟಕ್ಕೆ ಪಿತೃಪ್ರಾಧನ ಕುಟುಂಬದ ಚಹರೆ ಕಂಗೊಳಿಸಿದರು ಸಹ ಚಲನೆಯಲ್ಲಿ ಆದಿವಾಸಿ ವ್ಯವಸ್ಥೆಯಲ್ಲಿನ ಮಾತೃಪ್ರಧಾನ ಕುಟುಂಬದ ಲಕ್ಷಣಗಳು ನಮಗೆ ಕಂಡುಬರುತ್ತವೆ. ಹೈದಾರಾಬಾದ-ಕರ್ನಾಟಕದ ಗುಲಬರ್ಗಾ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಬೇಡ ಸಮುದಾಯದ ಕುಟುಂಬ ವ್ಯವಸ್ಥೆಯನ್ನು ಬಹು ಸೂಕ್ಷ್ಮವಾಗಿ ಗಮನಹರಿಸಿದಾಗ ಇಡೀ ಕುಟುಂಬದ ನಿರ್ವಹಣೆ ಮಹಿಳೆಯರದೆಂದು ಹೇಳಬಹುದು ಒಂದು ಮಾಹಿತಿ ಪ್ರಕಾರ ಮಹಿಳೆಯ ಹಿಡಿತದಲ್ಲಿ ಕುಟುಂಬವು ಮುಂದುವರೆದರೆ ಆರ್ಥಿಕ ದೃಷ್ಟಿಯಿಂದ ಉತ್ತಮವಾದದ್ದು ಎಂದು ಅಭಿಪ್ರಾಯಪಟ್ಟಿದ್ದಾರೆ."[1] "ಇನ್ನೊಬ್ಬ ಮಾಹಿತಿದಾರನ ಅಭಿಪ್ರಾಯದಂತೆ ಕುಟುಂಬವನ್ನು ಸ್ತ್ರೀಯರು ಮುನ್ನೆಡಿಸಿದರೆ ಸಂವೃದ್ಧಿಯಾಗುತ್ತದೆ ಹಾಗೂ ಮನೆಯ ಜವಾಬ್ದಾರಿಯು ನಮಗೆ ಕಡಿಮೆಯಾಗಿ ಕೃಷಿ ಕೂಲಿ ಕೃಷಿಯ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ನಮ್ಮನ್ನು ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆಂದಿದ್ದಾರೆ."[2] ಇದೇ ತೆರನಾದ ಪದ್ಧತಿಯು ಕರ್ನಾಟಕದ ಕೆಲವೊಂದು ಪ್ರದೇಶಗಳನ್ನು ಹೊರತುಪಡಿಸಿದರೆ ಉಳಿದೆಲ್ಲವುಗಳಲ್ಲಿ ಮಹಿಳೆಯರು ಕುಟುಂಬದ ಪುರುಷರ ಸಹಾಯದೊಂದಿಗೆ ಮುನ್ನಡೆಯುತ್ತಿದ್ದಾರೆ. ಹೀಗಾಗಿ ಜಗತ್ತು ಎಷ್ಟೇ ಅಭಿವೃದ್ಧಿ ಎನ್ನುವ ವೇಗೋತ್ಕರ್ಷದಲ್ಲಿ ಸಿಲುಕಿದರೂ ಸಹ ಅಲ್ಪ ಪ್ರಮಾಣದಲ್ಲಿ ಬೇಡ ಸಮುದಾಯದವರು ತಮ್ಮ ಪೂರ್ವಿಕರ ಸಮಾನ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ಜೀವನ ಮುಂದವರೆಸುತ್ತಿರುವುದು ನಿಜದ ಸಂಗತಿ.

೩. ಪಿತೃ ಮೂಲ ಕುಟುಂಬ

ಮಾತೃ ಪ್ರಧಾನ ಕುಟುಂಬಕ್ಕೆ ವಿರುದ್ಧವಾದ ಚಹರೆಯನ್ನು ಹೊಂದಿರುವ ಕುಟುಂಬದ ಸ್ವರೂಪವೇ ಪಿತೃ ಪ್ರಧಾನ ಕುಟುಂಬ. ಈ ಕುಟುಂಬ ಪದ್ಧತಿಯಲ್ಲಿ ಪುರುಷನದೇ ಪರಮಾಧಿಕಾರ ಸಕಲ ಕೆಲಸ ಕಾರ್ಯಗಳು ಎಲ್ಲವೂ ಪುರುಷನ ಸಮ್ಮತಿ ಮೇರೆಗೆ ನಡೆಯುವಂತಹ ನಿಯಮಗಳು ಇದರಲ್ಲಿ ಕಂಡುಬರುತ್ತದೆ.

ಇಂತಹ ಕುಟುಂಬದಲ್ಲಿ ವರ್ಷವಿಡಿ ನಡೆಯುವಂತಹ ವಾರ್ಷಿಕಾವರ್ತನ ಆಚರಣೆಗಳು, ಜೀವನಾವರ್ತನ ಆಚರಣೆಗಳಲ್ಲಿ ಕುಟುಂಬದ ಯಜಮಾನ ಬಹುಮುಖ್ಯವಾದ ಪಾತ್ರವನ್ನು ಪ್ರತಿನಿಧಿಸುತ್ತಾನೆ. ಆದರೆ ಕೆಲಸ ಕಾರ್ಯಗಳೆಲ್ಲವನ್ನು ಇತರೆ ಸದಸ್ಯರು ನಿರ್ವಹಿಸುತ್ತಾರೆ. ಅದು ಕೃಷಿ ಆರ್ಥಿಕ, ವೈವಾಹಿಕ, ಸಂಪತ್ತಿನ ಒಡೆತನ, ಇತರೆ ಎಲ್ಲಾ ನಿರ್ಧಾರಗಳು ಇವನ ಮುಖಾಂತರವೇ ಕುಟುಂಬದಲ್ಲಿ ಜರುಗುತ್ತವೆ. ಪಿತೃಪ್ರಧಾನ ಪದ್ಧತಿ ಕುಟುಂಬದಲ್ಲಿ ವೈವಾಹಿಕ ವಿಚಾರಕ್ಕೆ ಸಂಬಂಧಿಸಿದಂತೆ, ಮಾತೃ ಪ್ರಧಾನ ಕುಟುಂಬ ಪದ್ಧತಿಗೆ ವಿರುದ್ಧವಾಗಿ ನಡೆಯುತ್ತವೆ. ಇದರಲ್ಲಿ ಪುರುಷನೇ ವಧುವನ್ನು ಮನೆತುಂಬಿಸಿಕೊಳ್ಳುತ್ತಾನೆ. ಮಹಿಳೆಯು ಪುರುಷನಿಗೆ ಗೃಹ ಹಾಗೂ ಕೃಷಿ ಇತರೆ ಚಟುವಟಿಕೆಗಳಲ್ಲಿ ಸಹಾಯಕಳಾಗಿ ಕೆಲಸ ನಿರ್ವಹಿಸುತ್ತಾಳೆ. ಪಿತೃಪ್ರಧಾನ ಕುಟುಂಬದಲ್ಲಿ ಮಹಿಳೆಯು ಕೆಲವೊಂದು ಸಂದರ್ಭದಲ್ಲಿ ಅಂದರೆ ಕುಟುಂಬದ ಗೌರವ, ಮರ್ಯಾದೆ, ಘನತೆ, ವಿವಾಹದಂತಹ ಸಮಯದಲ್ಲಿ ಯಜಮಾನನಿಗೆ ಸಲಹೆಗಾರಳಾಗಿರುತ್ತಾಳೆ. ಈ ರೀತಿಯ ಕುಟುಂಬ ಪದ್ಧತಿಯನ್ನು ಬೇಡ ಸಮುದಾಯದಲ್ಲಿ ಸಹ ವಿಶಿಷ್ಟವಾಗಿ ಕಾಣಬಹುದು. ಉದಾಹರಣೆ ಸುರಪುರದ ಅರಸರು, ಗುರುಗುಂಟಿ, ಪಾಳೆಗಾರರು, ಕನಕಗಿರಿಯ ಅರಸರು, ದೇವದುರ್ಗದ ಪಾಳೆಗಾರರು ಈ ತರಹದ ಅರಸು ಮನೆತನಗಳು ಬೇಡ ಬುಡಕಟ್ಟು ಸಮುದಾಯದಲ್ಲಿ ಕಂಡುಬರುವುದು ಒಂದು ವಿಶೇಷವೆಂದು ಕಂಡುಬಂದರೂ ಇವತ್ತಿನ ಸಮಯಕ್ಕೆ ಅದು ಮಹಿಳೆಯ ಸಬಲೀಕರಣದ ವಿಚಾರಕ್ಕೆ ವಿರೋಧವಿದೆ ಎಂದು ಹೇಳಿದರೆ ಸಂದೇಹವಿಲ್ಲ. ರಾಜ್ಯಾಡಳಿತದ ಕಾಲದಲ್ಲಿ ಬೇಡ ಬುಡಕಟ್ಟು ಜನ ಸಮುದಾಯದವರು ಧೈರ್ಯವಂತರು ಹೆದರದವರು ಎನ್ನುವ ನಂಬಿಕೆಯಿಂದ ಮಧ್ಯಕಾಲೀನ ಅವಧಿಯಲ್ಲಿ ಅರಸರ ರಕ್ಷಣೆ ಹಾಗೂ ರಾಜ್ಯ ರಕ್ಷಣೆಗೆ ಇವರನ್ನು ತೊಡಗಿಸಿಕೊಂಡು ಮುಂದೆ ಬದಲಾವಣೆ ಸಮಯದಲ್ಲಿ ಅಧಿಕಾರ ಇವರ ಕೈ ಸೇರಿದಾಗ ಹಿಂದಿನ ಸೇವೆ ಸಲ್ಲಿಸಿದ ರಾಜರ ವೈಭವದ ಗುಣಗಳು ಇವರಲ್ಲಿ ಸೇರಿಕೊಂಡವು. ಅದೇ ವೈಭವದ ಲಕ್ಷಣಗಳು ಇಂದಿನವರೆಗೂ ಕುಟುಂಬವನ್ನು-ಸಮುದಾಯವನ್ನು ನಿಯಂತ್ರಣದಲ್ಲಿರಿಸಿವೆ. ಈ ಅರಸು ಮನೆತನದ ಕುಟುಂಬ ವ್ಯವಸ್ಥೆಯಲ್ಲಿ ಪುರುಷನೆ ಯಜಮಾನ, ರಾಜರ ವೈಭವದ ಅನುಕರಣೆಯಿಂದ ಮಹಿಳೆಯರಿಗೆ ಘರದಾ (ಘೋಷ) ಪದ್ಧತಿ ರೂಢಿಸಿಕೊಂಡು ಇಂದಿನವರೆಗೂ ಅನುಸರಿಸುತ್ತಿರುವದರಿಂದ ಮಹಿಳೆಯರ ಬದುಕಿಗೆ ದುರಂತ ಎದುರಾಗಿದೆ.

ಈ ಘೋಷ ಪದ್ಧತಿಯಿಂದ ಮಹಿಳೆಯು ಹೊರಗಡೆ ಹೋಗಬೇಕಾದರೆ ರವಿಕೆ ಧರಿಸಿಕೊಳ್ಳಬೇಕು, ಇದರಿಂದ ಮಹಿಳೆಯರಿಗೆ ಶಿಕ್ಷಣ, ಹೊರ ಜಗತ್ತಿನ ಪರಿಚಯವಿರದೇ ಪಂಜರದ ಗಿಳಿಯಂತೆ ಬಂಧನದಲ್ಲಿದ್ದಾರೆ. ಆದರೆ ಅರಸು ಮನೆತನಗಳು ಅನುಸರಿಸಿಕೊಂಡು ಬಂದಂತಹ ಆಚರಣೆಗಳನ್ನು ಇತರೆ ಸಾಮಾನ್ಯ ಮಹಿಳೆಯರು ರೂಢಿಸಿಕೊಂಡಿಲ್ಲ. ಈ ಬೇಡ ಸಮುದಾಯದಲ್ಲಿಯೂ ಸಹ ಉನ್ನತ ಅಧಮ ಎನ್ನುವ ಶ್ರೇಣೀಕರಣ ವ್ಯವಸ್ಥೆಯು ಕಂಡುಬರುತ್ತದೆ.

ಒಂದೇ ಸಮುದಾಯದಲ್ಲಿ ಮಹಿಳೆಯ ಸ್ಥಿತಿ-ಗತಿಗಳ ಬದಲಾವಣೆ ಇರುವುದು ಕಂಡುಬರುತ್ತದೆ. ಕ್ಷೇತ್ರಾಧ್ಯಯನದ ಸಮಯದಲ್ಲಿ ಅರಸು ಮನೆತನದ ಬೇಡ ಸಮುದಾಯವನ್ನು ಸಂದರ್ಶಿಸಲು ಹೋದಾಗ ಅಂದಿನ ರಾಜ ವೈಭವದ ಯಾವುದೇ ಕುರುಹುಗಳು ಇವತ್ತಿನ ದಿನಗಳಲ್ಲಿ ಇಲ್ಲದಿದ್ದರು. ಅಂದಿನ ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಇವತ್ತಿನವರೆಗೂ ತಮ್ಮ ಬಿಗುವು ಬಿಟ್ಟಿಲ್ಲ ಇದರಿಂದ ಎಷ್ಟೋ ಮಹಿಳೆಯರು ಅಶಿಕ್ಷಿತರಾಗಿದ್ದಾರೆ.

೪.೩. ಶಿಕ್ಷಣ ಕ್ಷೇತ್ರದಲ್ಲಿ ಮಹಿಳಾ ಸ್ಥಾನಮಾನಗಳು

ಶಿಕ್ಷಣವು ಮಾನವನ ಭೌದ್ಧಿಕ ಅಭಿವೃದ್ಧಿಗೆ ಪ್ರಮುಖ ಸಾಧನವಾಗಿದೆ. ಭಾರತದಂತಹ ಅಭಿವೃದ್ಧಿ ಶೀಲರಾಷ್ಟ್ರದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ನಂತರದಲ್ಲಿ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಿದರು ಸಹ ಜನ ಸಾಮಾನ್ಯರ ಪಾಲಿಗೆ ಏಟುಕದಂತಹ ವಿಷಯವಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಕಾಣಬಹುದು. ಆ ಚರ್ಚೆಯನ್ನು ಇಲ್ಲಿ ಮಾಡುವದು ಬೇಡ, ಇಡೀ ರಾಜ್ಯದಲ್ಲಿಯೇ ಬೇಡ ಬುಡಕಟ್ಟು ಸಮುದಾಯವನ್ನು ಬಾಧಿಸುತ್ತಿರುವ ಮುಖ್ಯ ಸಂಗತಿಯೆಂದರೆ ನಮ್ಮ ಶೈಕ್ಷಣಿಕ ಹಿಂದುಳಿಯುವಿಕೆ. ಇದಕ್ಕೆ ಪ್ರಮುಖ ಕಾರಣ "ಈ ಸಮುದಾಯವು ತಾಳಿರುವ ಧೋರಣೆಗಳಿಂದ ಹಿಂದುಳಿಯಲು ಪ್ರಮುಖ ಕಾರಣವಾಗಿದೆ"[೮]. ಅದರಲ್ಲಿ ಅಧ್ಯಯನದ ಕ್ಷೇತ್ರಗಳಾದ ಹೈದರಾಬಾದ-ಕರ್ನಾಟಕದ ಮೂರು ಜಿಲ್ಲೆಗಳಾದ ಗುಲಬರ್ಗಾ-ರಾಯಚೂರು ಮತ್ತು ಕೊಪ್ಪಳ ಈ ಜಿಲ್ಲೆಗಳು ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ಇಲ್ಲಿ ವಾಸಮಾಡುವ ಈ ಬುಡಕಟ್ಟು ಸಮುದಾಯದವರ ಶೈಕ್ಷಣಿಕ ಮಟ್ಟವು ಅತ್ಯಂತ ಶೋಚನೀಯವಾಗಿದೆ. "೨೦೦೧ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಸಾಕ್ಷರತೆ ಪ್ರಮಾಣದಲ್ಲಿ ಮೂರು ಜಿಲ್ಲೆಯನ್ನು ಒಳಗೊಂಡು ಹತ್ತೊಂಬತ್ತು ತಾಲ್ಲೂಕುಗಳಲ್ಲಿ ಬರುವ ಹಳ್ಳಿಗಳಲ್ಲಿ ಕೆಳಸ್ತರದ (Bottom) ಶ್ರೇಣಿಯನ್ನು ಹೊಂದಿರುವ ಪ್ರಮಾಣವು ೧೧% ರಷ್ಟು (೨೦೦೧ರ ಜನಗಣತಿ ವರದಿ) ಕಂಡುಬರುತ್ತದೆ[೯]." ಅಂದರೆ ನಾವುಗಳು ಯಾವ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ. ಮುಂದುವರೆದು ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರ ಸಾಕ್ಷರತೆ ಪ್ರಮಾಣವು ಸಹ ೨೦೦೧ರ ಜನಗಣತಿ ಅನ್ವಯ ಗ್ರಾಮೀಣ ಪ್ರದೇಶದಲ್ಲಿ ಪುರುಷ ಸಾಕ್ಷರತೆ ಪ್ರಮಾಣ ೫೬.೯% ಮಹಿಳೆ ಸಾಕ್ಷರತಾ ಪ್ರಮಾಣ ೩೩.೩%ರಷ್ಟು ಕಂಡುಬಂದರೆ ನಗರ ಪ್ರದೇಶದಲ್ಲಿ ಪುರುಷರ ಸಾಕ್ಷರತೆ ಪ್ರಮಾಣವು ೭೪.೪%ರಷ್ಟು ಮಹಿಳಾ ಸಾಕ್ಷರತೆ ಪ್ರಮಾಣ ೪೫.೩%ರಷ್ಟು ನಗರದಲ್ಲಿ ೬೪.೬%ರಷ್ಟು

ಇದ್ದು, ರಾಜ್ಯದಲ್ಲಿ ಒಟ್ಟು ಆದಿವಾಸಿಗಳ ಸಾಕ್ಷರತಾ ಪ್ರಮಾಣವು ೪೮.೩%ರಷ್ಟು ಕಂಡುಬರುತ್ತದೆ. ಇಂಡಿಯಾ ಸ್ವಾತಂತ್ರ್ಯವನ್ನು ಅಲಂಕರಿಸಿಕೊಂಡು ೬೦ನೇ ವರ್ಷದಲ್ಲಿ ಇದ್ದರು ಸಹ ಬುಡಕಟ್ಟು ಸಮುದಾಯದವರ ಸಾಕ್ಷರತೆ ಪ್ರಮಾಣವು ೫೦%ರಷ್ಟು ಆಗುವಲ್ಲಿ ಇವತ್ತಿನವರೆಗೂ ಸಾಧ್ಯವಾಗಿಲ್ಲ. ಈ ಮೇಲಿನ ಅಂಕಿ-ಅಂಶಗಳಲ್ಲಿ ಕರ್ನಾಟಕದಲ್ಲಿರುವ ಐವತ್ತು ಬುಡಕಟ್ಟು ಸಮುದಾಯಗಳಿಗೆ ವಿಂಗಡಿಸಿ ನೋಡಿದಾಗ ಶಿಕ್ಷಣದ ನಿಜ ಚಿತ್ರಣವು ನಮಗೆ ದೊರೆಯುತ್ತದೆ.

ಕೋಷ್ಟಕ ೧

ರಾಜ್ಯದಲ್ಲಿ ಸಾಮಾನ್ಯ ಮಹಿಳಾ ಸಾಕ್ಷರತೆ ಪ್ರಮಾಣ ೨೦೦೧ರ ಪ್ರಕಾರ ಸಾಮಾನ್ಯ

ಜಿಲ್ಲೆಗಳು	ನಗರ	ಗ್ರಾಮೀಣ	ಒಟ್ಟು
ಬೆಂಗಳೂರು ನ	೭೯.೭೦	೬೦.೭೮	೭೭.೪೮
ಬೆಂಗಳೂರು ಗ್ರಾ	೬೯.೯೭	೫೦.೫೯	೫೪.೯೯
ಕೋಲಾರ	೪೭.೨೭	೪೪.೯೯	೫೨.೨೩
ತುಮಕೂರು	೭೬.೩೫	೫೨.೨೯	೫೬.೯೪
ಶಿವಮೊಗ್ಗ	೭೮.೫೦	೬೦.೬೬	೬೬.೮೮
ಚಿತ್ರದುರ್ಗ	೭೪.೭೪	೪೯.೧೨	೫೩.೭೮
ದಾವಣಗೆರೆ	೭೧.೮೯	೫೨.೦೨	೫೮.೦೪
ಮೈಸೂರು	೭೮.೧೨	೪೨.೩೧	೫೫.೮೧
ಚಾಮರಾಜನಗರ	೬೩.೮೬	೩೮.೫೯	೪೨.೪೮
ಮಂಡ್ಯ	೭೨.೨೬	೪೭.೬೫	೫೧.೫೩
ಹಾಸನ	೭೯.೩೫	೫೪.೭೨	೫೯.೦೦
ಚಿಕ್ಕಮಗಳೂರು	೭೭.೭೮	೬೦.೭೦	೬೪.೦೧
ಕೊಡಗು	೮೬.೧೧	೭೦.೧೦	೭೨.೨೬
ದಕ್ಷಿಣ ಕನ್ನಡ	೮೪.೪೭	೭೨.೬೯	೭೭.೨೧
ಉಡುಪಿ	೮೫.೩೧	೭೨.೯೭	೭೫.೧೯
ಬೆಳಗಾವಿ	೭೨.೫೩	೪೫.೮೦	೫೨.೩೨

ಬಿಜಾಪುರ	೬೪.೮೯	೩೭.೩೨	೪೩.೫೬
ಬಾಗಲಕೋಟೆ	೬೦.೮೭	೩೬.೩೩	೪೩.೫೬
ಧಾರವಾಡ	೭೩.೨೮	೪೭.೭೦	೬೧.೯೨
ಗದಗ	೬೩.೮೮	೪೬.೨೮	೫೨.೫೨
ಹಾವೇರಿ	೬೮.೧೭	೫೪.೫೨	೫೭.೩೭
ಉತ್ತರ ಕನ್ನಡ	೮೦.೫೯	೬೩.೫೨	೬೮.೪೭
ಗುಲಬರ್ಗಾ	೬೦.೪೯	೨೯.೪೩	೩೭.೯೦
ಬಳ್ಳಾರಿ	೬೦.೬೯	೩೬.೮೨	೪೫.೨೮
ರಾಯಚೂರು	೫೬.೫೪	೨೮.೮೬	೩೫.೯೦
ಕೊಪ್ಪಳ	೫೮.೩೪	೩೫.೮೧	೩೯.೬೧
ಬೀದರ್	೬೬.೪೭	೪೩.೬೪	೪೮.೮೧
ಒಟ್ಟು ಕರ್ನಾಟಕ	೭೪.೧೩	೪೮.೦೧	೫೬.೯೦

ಇಂತಹ ಸಂದಿಗ್ಧವಾದ ಸಂದರ್ಭದಲ್ಲಿ ವಾಲ್ಮೀಕಿ ಬುಡಕಟ್ಟು ಸಮುದಾಯದ ಮಹಿಳೆಯ ಶೈಕ್ಷಣಿಕ ಸ್ಥಾನಮಾನಗಳನ್ನು ಅವಲೋಕನ ಮಾಡುವುದು ಮುಜುಗರದ ಸಂಗತಿಯೆಂದು ಹೇಳಬಹುದು. ಈ ಪರಿಸರದಲ್ಲಿ ಜೀವಿಸುತ್ತಿರುವವರ ಭೌದ್ಧಿಕ ಮಟ್ಟವು ಯಾವ ಸ್ವರೂಪದಲ್ಲಿ ಇರುತ್ತದೆ ಎಂದರೆ ಸನಾತನ ವ್ಯವಸ್ಥೆಯಿಂದ ರೂಢಿಗತವಾಗಿ ಬಂದಂತಹ ಸತ್ ಸಂಪ್ರದಾಯಗಳು, ಲೋಕರೂಢಿಗಳು, ಆಚರಣೆಗಳು, ಕೌಟುಂಬಿಕ ವ್ಯವಸ್ಥೆ, ಬಡತನ, ನಿರುದ್ಯೋಗ, ಆಹಾರದ ಸಮಸ್ಯೆ ಇತರೆ ಕಾರಣಾಂಶಗಳಿಂದ ಸರ್ಕಾರವು ಅನುಷ್ಠಾನ ಗೊಳಿಸಿರುವಂತ ಶೈಕ್ಷಣಿಕ ಚಟುವಟಿಕೆಗಳು ಯಶಸ್ವಿ ಯಾಗುವಲ್ಲಿ ವಿಫಲವಾಗುತ್ತಿರುವುದು ದುರದುಷ್ಟಕರ ಸಂಗತಿಯಂದು ಹೇಳಬಹುದು. ಅದರಲ್ಲಿ ಈ ಬುಡಕಟ್ಟು ಸಮುದಾಯದಲ್ಲಿ ಪ್ರಾದೇಶಿಕವಾಗಿ ಒಂದೊಂದು ರೀತಿಯ ಸಂಪ್ರದಾಯ ಆಚರಣೆಗಳಿಗೆ ಒಳಪಟ್ಟಿದ್ದಾರೆ. ಆರ್ಥಿಕ ದೃಷ್ಟಿಯಿಂದ ಕೆಳಸ್ತರದಲ್ಲಿರುವ ಈ ಸಮುದಾಯದವರು ಗುಲಬರ್ಗಾ ಜಿಲ್ಲೆಯನ್ನು ಹೊರತು ಪಡಿಸಿ ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ದೇವರಿಗೆ ಸ್ತ್ರೀಯರನ್ನು ಲೇಸಿ ಪದ್ಧತಿಗೆ ಬಿಡುವ ಪರಿಪಾಠವು ಕಂಡುಬರುತ್ತದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಅತ್ಯಂತ ಹೇರಳವಾಗಿ ಇವರಲ್ಲಿ ಮನೆಮಾಡಿದೆ. ಇವತ್ತಿನ ಸಂದರ್ಭದಲ್ಲಿ ಸಮುದಾಯದ ಸಂಘಟನೆಗಳು, ವಿಶ್ವವಿದ್ಯಾಲಯದ ಸಮುದಾಯದ ಅಧ್ಯಯನ ಪೀಠಗಳು ಹಾಗೂ ಸರ್ಕಾರದ ವತಿಯಿಂದ ಜಾಗೃತಿ ಕಾರ್ಯಕ್ರಮಗಳು ಏರ್ಪಡಿಸಿದರೂ ಸಹ ನಿರ್ಮೂಲನೆ ಆಗುವ ಪ್ರಮಾಣವು ಆಮೆಗತಿಯಲ್ಲಿದೆ.

ಕೇವಲ ಶಿಕ್ಷಣವೊಂದರಿಂದಲೇ ಸಮಾಜದ ಅನಿಷ್ಟ ಆಚರಣೆಗಳು ನಿರ್ಮೂಲನೆ ಆಗುತ್ತವೆ ಅನ್ನುವಂತ ವಿಚಾರವು ಇಂದು ಸುಳ್ಳಾಗಿದೆ. ಅದರ ಜೊತೆಗೆ ಕುಟುಂಬದ ಪರಂಪರೆಯಿಂದ ಬಂದಂತಹ ಆಚರಣೆಗಳು ಕಣ್ಮರೆಯಲ್ಲಿ ಜರುಗುತ್ತಿರುವುದು ಕಂಡುಬರುತ್ತದೆ.

ಸಮಾಜದಲ್ಲಿ ಅಳಸದೆ ನೆಲೆಯೂರಿರುವ ಪುರುಷ ಪ್ರಧಾನ ಪ್ರಭಾವವು ಸಹ ಮಹಿಳೆಯರ ಶಿಕ್ಷಣಕ್ಕೆ ಅಡ್ಡಿಯನ್ನುಂಟು ಮಾಡಿದೆ. ಅದರಲ್ಲಿ ಕುಟುಂಬ ವ್ಯವಸ್ಥೆಯಲ್ಲಿರುವ ಲಿಂಗಭೇದದ ನೀತಿಯಿಂದ ಪುರುಷರಿಗೆ ದೊರೆಯುತ್ತಿರುಪ ಶಿಕ್ಷಣದ ಅವಕಾಶಗಳು, ಮಹಿಳೆಯರಿಗೆ ದೊರೆಯದೆ ಇರುವುದು ಸಹ ದುರಂತದ ಸಂಗತಿಯಾಗಿದೆ. "ಇಡೀ ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಯ ಪ್ರಕಾರ ಕೊನೆಯ ಸ್ಥಾನದಲ್ಲಿರುವ ರಾಯಚೂರಿನ ದೇವದುರ್ಗ ತಾಲ್ಲೂಕಿನಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣವು ಶೇಕಡ ೧೮.೧%ರಷ್ಟು ಕಂಡುಬರುತ್ತದೆ."[೧೦] ಇಲ್ಲಿ ಸ್ತ್ರೀಯರಿಗೆ ಶೈಕ್ಷಣಿಕ ಅವಕಾಶಗಳು ದೊರೆಯದೆ ಇರುವುದು ಗೋಚರ ವಾಗುತ್ತದೆ. ಇದಕ್ಕಿಂತ ದುರದೃಷ್ಟಕರ ಸಂಗತಿಯಂದರೆ "ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಬೆಂಚಿಗಡ್ಡಿ ಗ್ರಾಮ ಸಾಕ್ಷರತೆ ಪ್ರಮಾಣವು ೪.೫%ರಷ್ಟು ಕಳಪೆ ಮಟ್ಟದಲ್ಲಿರುವುದು ಕಂಡುಬರುತ್ತದೆ."[೧೧] ಈ ಪ್ರದೇಶದಲ್ಲಿ ಸ್ತ್ರೀಯರಿಗೆ ಶೈಕ್ಷಣಿಕ ಅವಕಾಶಗಳು ಕನಸಿನಲ್ಲಿ ಸಹ ಕಾಣದೆ ಇರುವಂತಹ ಪರಿಸ್ಥಿತಿ ಕಂಡುಬರುತ್ತದೆ. ಅಂದರೆ ಬೇಡ ಬುಡಕಟ್ಟು ಸಮುದಾಯದ ಮಹಿಳೆಯ ಶೈಕ್ಷಣಿಕ ಮಟ್ಟ ಯಾವ ರೀತಿ ಇದೆವೆಂಬುದನ್ನು ಕಲ್ಪಿಸಿಕೊಳ್ಳಲು ಸಹ ಸಾಧ್ಯವಾಗುತ್ತಿಲ್ಲ.

ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಯ ಪ್ರಕಾರ ಹೈದರಾಬಾದ-ಕರ್ನಾಟಕದ ಈ ಮೂರು ಜಿಲ್ಲೆಗಳು ಭೌಗೋಳಿಕವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ ಅತ್ಯಂತ ಕೆಳಸ್ಥಾನ ಹೊಂದಿದೆ. ಈ ಪ್ರದೇಶದಲ್ಲಿ ಕೃಷಿ ಪ್ರಧಾನ ಕುಟುಂಬಗಳೇ ಅಧಿಕವಾಗಿ ಕುಂಡುಬರುತ್ತವೆ. ಅದರಲ್ಲಿ ಬೇಡ ಬುಡಕಟ್ಟು ಸಮುದಾಯದ ಅಲ್ಪ-ಸ್ವಲ್ಪ ಕುಟುಂಬಗಳು ಭೂಮಿಯನ್ನು ಹೊಂದಿವೆ. ಇನ್ನುಳಿದ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ. ಅವರುಗಳು ಕೃಷಿ, ಕೂಲಿ, ಕಾರ್ಮಿಕರಾಗಿ, ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಇವರ ಜೀವನವು ಸಾವು ಬದುಕಿನ ಪ್ರಶ್ನೆಯಾಗಿದೆ. ಇಲ್ಲಿ, ಇನ್ನು ಶಿಕ್ಷಣದ ಕುರಿತ ಯೋಚನೆ ಎಲ್ಲಿಯದು? ಇಂತಹ ಪರಿಸ್ಥಿಯಲ್ಲಿ ಮಕ್ಕಳ ಶೈಕ್ಷಣಿಕ ಭವಿಷ್ಯ ಕಗ್ಗತ್ತಲೆಯದು, ಬೇಡ ಸಮುದಾಯದ ಮಹಿಳೆಯರಲ್ಲಿ ಶಿಕ್ಷಣವಿಲ್ಲದಿರುವುದರಿಂದ ನೆಚ್ಚಿಕೊಳ್ಳುವ ಮೂಢನಂಬಿಕೆ, ನಡವಳಿಕೆಗಳು, ದುಶ್ಚಟಗಳು ಕುಟುಂಬವನ್ನು ದುರಂತದ ಹಾದಿಗೆ ಕೊಂಡೊಯ್ಯುತ್ತಿದೆ. ಆದರೆ ಕುಟುಂಬದಲ್ಲಿ ಹೆಣ್ಣು ಕಲಿತವಳಾದರೆ ಎಂತಹ ಸಂಕಷ್ಟದಲ್ಲೂ ಪ್ರಜ್ಞಾಪೂರಕವಾಗಿ ಚಿಂತಿಸಿ ಪರಿಹಾರ ಕಂಡುಕೊಳ್ಳಬಲ್ಲಳು ಮತ್ತು ತನ್ನ ಮಕ್ಕಳನ್ನು ಅಕ್ಷರಸ್ಥರನ್ನಾಗಿ ಅಷ್ಟೆ ಮಾಡುವುದಲ್ಲ ವಿಚಾರವಂತರ ನ್ನಾಗಿ, ವಿದ್ಯಾವಂತರನನ್ನಾಗಿ ಮಾಡುತ್ತಾಳೆ. ಹೀಗಾಗಿ ಒಂದು ಹೆಣ್ಣು ಕಲಿತರೆ ಆ ಒಂದು ಇಡೀ ಕುಟುಂಬ ಶಿಕ್ಷಣ ಪಡೆಯುವಂತಾಗುತ್ತದೆ.

ಮಹಿಳಾ ಶಿಕ್ಷಣ ಅಭಿವೃದ್ಧಿ ಕುರಿತು ವಸಾಹತು ಕಾಲದಿಂದಲೇ ನಮ್ಮಲ್ಲಿ ಸ್ತ್ರೀ ಶಿಕ್ಷಣದ ಪ್ರಯತ್ನಗಳು ನಡೆಯುತ್ತ ಬಂದಿವೆ. ಆದರೆ ನಿರೀಕ್ಷಿತ ಫಲಶ್ರುತಿ ಆಗಿಲ್ಲ. ಶಿಕ್ಷಣದಲ್ಲಿ ಸ್ತ್ರೀ-ಪುರುಷರ ಅಸಮಾನತೆ ಹೈದರಾಬಾದ-ಕರ್ನಾಟಕದಲ್ಲಿ ಇನ್ನೂ ಉಳಿದಿದೆ.

ಕೋಷ್ಟಕ ೨

ಜಿಲ್ಲಾವಾರು ಬುಡಕಟ್ಟು ಮಹಿಳೆಯರ ಸಾಕ್ಷರತಾ ಪ್ರಮಾಣ

ಜಿಲ್ಲೆ	ಮಹಿಳೆ	ಪುರುಷ	ಒಟ್ಟು
ಗುಲಬರ್ಗಾ	೨೦.೮	೪೩.೮	೩೨.೪
ರಾಯಚೂರು	೧೬.೯	೪೧.೧	೨೯.೦
ಕೊಪ್ಪಳ	೨೬.೫	೫೭.೫	೪೨.೧
ಬಿಜಾಪುರ	೩೧.೯	೫೯.೭	೪೬.೨
ಬಾಗಲಕೋಟೆ	೨೮.೫	೫೭.೩	೪೨.೯
ಬೆಳಗಾವಿ	೨೯.೫	೫೭.೮	೪೩.೭
ಬೀದರ	೩೫.೬	೬೧.೧	೪೮.೭
ಬಳ್ಳಾರಿ	೨೮.೫	೫೩.೪	೪೧.೧
ಗದಗ	೪೨.೧	೭೨.೯	೫೭.೭
ಧಾರವಾಡ	೪೨.೦	೬೬.೩	೫೪.೫
ಉತ್ತರಕನ್ನಡ	೫೩.೬	೭೧.೮	೬೨.೭
ಹಾವೇರಿ	೪೫.೨	೭೧.೩	೫೮.೭
ಚಿತ್ರದುರ್ಗ	೪೧.೫	೬೫.೬	೫೩.೯
ದಾವಣಗೆರೆ	೪೩.೦	೬೪.೮	೫೪.೧
ಶಿವಮೊಗ್ಗ	೫೨.೫	೭೧.೪	೬೨.೧
ಉಡುಪಿ	೬೨.೮	೭೬.೭	೬೯.೬
ಚಿಕ್ಕಮಗಳೂರು	೪೯.೪	೬೮.೨	೫೮.೮
ತುಮಕೂರು	೪೮.೭	೭೦.೩	೫೯.೭

ಕೋಲಾರ	೩೬.೨	೫೯.೧	೪೭.೮
ಬೆಂಗಳೂರು ನಗರ	೬೪.೮	೮೦.೧	೭೨.೮
ಬೆಂಗಳೂರು ಗ್ರಾಮ	೪೬.೦	೬೫.೯	೫೬.೨
ಮಂಡ್ಯ	೪೫.೪	೬೩.೭	೫೬.೪
ಹಾಸನ	೪೫.೪	೬೩.೭	೫೪.೬
ದಕ್ಷಿಣ ಕನ್ನಡ	೬೫.೭	೮೦.೨	೭೨.೯
ಕೊಡಗು	೩೪.೬	೪೬.೧	೪೦.೪
ಮೈಸೂರು	೩೭.೫	೫೦.೧	೪೬.೪
ಚಾಮರಾಜನಗರ	೩೨.೮	೫೦.೨	೪೧.೫
ಒಟ್ಟು	೩೬.೬	೫೯.೭	೪೮.೩

ಪ್ರತಿಶತ ಮಹಿಳಾ ಅಕ್ಷರಸ್ಥ ಸಂಖ್ಯೆ ಪುರುಷರಿಗಿಂತ ತುಂಬ ಕಡಿಮೆ ಇದೆ. ಹಾಗಾದರೆ ಮಹಿಳಾ ಶಿಕ್ಷಣಕ್ಕೆ ಕಾಲ್ತೊಡಕಾದ ಸಂಗತಿಗಳೇನು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ಇದಕ್ಕೆ ಮುಖ್ಯವಾಗಿ ನಮ್ಮಲ್ಲಿರುವ ಲಿಂಗಭೇದ ನೀತಿ ಹಾಗೂ ಮಹಿಳಾ ಬದುಕಿನ ಇಕ್ಕಟ್ಟುಗಳು ಕಾರಣವಾಗಿವೆ. ಇವತ್ತಿನ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದಲ್ಲಿ ಸಹ ಮಹಿಳಾ ಶಿಕ್ಷಣ ಅಗತ್ಯವೇ ಎಂಬ ವೈದ್ದಿಕ ಶಾಹಿ ತತ್ವಾದರ್ಶಗಳು ನೆಲೆ ನಿಂತಿರುವುದರಿಂದ, "ಹೆಣ್ಣುಕಲಿತು ಏನಾಗಬೇಕು"? ನಮ್ಮನ್ನು ಸಾಕುವಳೇ? ನಮ್ಮಮನೆ ದೀಪ ಬೆಳಗುವಳೇ? ಹೆಣ್ಣು ಪರರ ವಸ್ತು ಮದುವೆ ಮಾಡಿದ ನಂತರದಲ್ಲಿ ಬೇರೆ ಮನೆಗೆ ಜ್ಯೋತಿಯಾಗುವಳು. "ಮಹಿಳೆಗೆ ಮದುವೆ ಹಾಗೂ ತಾಯ್ತನಗಳೆ ಪ್ರಧಾನ್ಯ"ಗಳಂತಹ ಲಿಂಗ ಸಾಪೇಕ್ಷ ನಂಬಿಕೆಗಳು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿಲ್ಲ. ಜೊತೆಗೆ ನಮ್ಮ ಪುರುಷ ಪ್ರಧಾನ್ಯದ ನಿರ್ಧಾರದ ಅಂಶಗಳಾದ ಅಧಿಕಾರ, ಸಂಪತ್ತಿನ ಒಡೆತನ, ಆಸ್ತಿ ಹಂಚಿಕೆ ಇತರೆ ಅಂಶಗಳು ಬುಡಮೇಲು ಮಾಡುತ್ತಾಳೆ ಎನ್ನುವಂತಹ ವಿಚಾರವು ಪುರುಷ ವರ್ಗಕ್ಕೆ ನುಂಗಲಾರದ ತುತ್ತಾಗಿದೆ. ಇಂತಹ ಹಲವು ಕಾರಣಗಳಿಂದ ಮಹಿಳಾ ಶಿಕ್ಷಣಕ್ಕೆ ಕುಂದುಂಟಾಗಿದೆ.

ಕೋಷ್ಟಕ ೩

ಅಧ್ಯಯನದ ಕ್ಷೇತ್ರದಲ್ಲಿ ಬೇಡ ಬುಡಕಟ್ಟು ಮಹಿಳಾ ಸಾಕ್ಷರತಾ ಪ್ರಮಾಣ

ಜಿಲ್ಲೆಗಳು	ಪುರುಷ	ಮಹಿಳೆ	ಒಟ್ಟು
ಗುಲಬರ್ಗಾ	೪೩.೮	೨೦.೮	೩೨.೪
ರಾಯಚೂರು	೪೧.೧	೧೬.೯	೨೯.೦
ಕೊಪ್ಪಳ	೫೭.೫	೨೬.೫	೪೨.೧

ಶೈಕ್ಷಣಿಕ ಸ್ಥಾನಮಾನ

ದಿನ ನಿತ್ಯದ ಬದುಕಿನ ಸವಾಲುಗಳಲ್ಲಿ ಬಹುಮುಖ್ಯವಾದ ಮಹಿಳೆಯ ಜೈವಿಕ ಪಲ್ಲಟಗಳಾದ ಋತುಚಕ್ರ, ಪ್ರಜನನ ಸಂದರ್ಭಗಳು ಹಾಗೂ ಕೌಟುಂಬಿಕ ಸಂಗೋಪನೆ ಜವಾಬ್ದಾರಿಗಳೊಂದಿಗೆ ಕಲಿಕೆಯನ್ನು ಹೊಂದಿಸಿಕೊಳ್ಳುವುದು ಕೂಡಾ ಆಕೆಗೆ ದುಸ್ತರವಾಗಿದೆ. ತಾಯಿಯ ಬಸಿರು, ಬಾಣಂತಿತನದ ಜೀವನ ಸಂದರ್ಭಗಳಲ್ಲಿ ಹೆಣ್ಣುಮಗಳು ತಾಯಿಯ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಕುಟುಂಬದ ದೈನಂದಿನ ಅಗತ್ಯಗಳಾದ ಆಹಾರ, ನೀರು, ಕಟ್ಟಿಗೆ, ಮೇವು, ಇತ್ಯಾದಿಗಳನ್ನು ಸಂಗ್ರಹಿಸುವ ಮತ್ತು ಪೂರೈಸುವಲ್ಲಿ ಹೆಣ್ಣು ದಿನದ ಬಹುಕಾಲ ದುಡಿಯುವುದರಿಂದ ಆಕೆಗೆ ಬಿಡುವು ದುರ್ಲಬವಾಗಿದೆ. ಈ ದುಡಿತಕ್ಕೆ ತಕ್ಕ ಆಹಾರದ ಪ್ರಮಾಣ ಇಲ್ಲದಿರುವುದು ಮತ್ತು ವಿಶ್ರಾಂತಿ ರಹಿತ ಜೀವನದಿಂದ ಮಹಿಳೆ ಅನಾರೋಗ್ಯದಿಂದ ಬಳಲುವಂತಾಗಿದೆ. ಶಿಕ್ಷಣದ ಕೊರತೆಯಿಂದ ಬೆನ್ನು ಹತ್ತಿದ ಮೌಢ್ಯಗಳು, ಇವೆಲ್ಲದರಿಂದ ಮಹಿಳೆಯಲ್ಲಿ ವಿಶ್ವಾಸವಿಲ್ಲದಾಗಿದೆ. ಬತ್ತಿಹೋದ ಆತ್ಮ ವಿಶ್ವಾಸವನ್ನು ತುಂಬಲು ಭರವಸೆಯ ಹೆಜ್ಜೆಯನ್ನು ಇಡಲು ಸ್ತ್ರೀ ಶಿಕ್ಷಣದಿಂದ ಮಾತ್ರ ಸಾಧ್ಯ.

ಗ್ರಾಮೀಣ ಸಮುದಾಯದಲ್ಲಿ ಮಹಿಳಾ ಶಿಕ್ಷಣಾವಕಾಶಗಳ ಸಮಾನ ಬಳಕೆಗೆ ಅಡ್ಡಿ ಬರುವ ಪ್ರಮುಖ ಅಂಶಗಳೆಂದರೆ ಬಡತನ, ಅಜ್ಞಾನ, ಮೌಢ್ಯ ಹಾಗೂ ಸ್ತ್ರೀ ಶಿಕ್ಷಣವನ್ನು ಕುರಿತಂಥ ಸಾಮಾಜಿಕ ಧೋರಣೆ. ಅನೇಕ ಹೆಣ್ಣುಮಕ್ಕಳ ಜೀವನದಲ್ಲಿ ಈ ನಾಲ್ಕು ಅಂಶಗಳು ಅವರ ಶೈಕ್ಷಣಿಕ ಪ್ರಗತಿಗೆ ಬಲವಾದ ಗದಾಪ್ರಹಾರವನ್ನು ನೀಡುತ್ತವೆ. ಅದರಲ್ಲಿ ಕುಟುಂಬವು ಲಿಂಗಾಧಾರಿತ ಶೈಕ್ಷಣಿಕ ಅಸಮಾನತೆಯನ್ನು ಸೃಷ್ಟಿಸುವ ಮೊದಲನೆಯ ಮೂಲ ಎಂದೂ ಹೇಳಿದರು ತಪ್ಪಾಗಲಾರದು. ಕುಟುಂಬ ಆರ್ಥಿಕವಾಗಿ ಅನುಕೂಲಕರವಾದ ಪರಿಸ್ಥಿಯಲ್ಲಿರುವಾಗಲೇ ಅನೇಕ ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕಿಂತ, ಅವರ ವಿವಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವಂಥ ಪರಿಸ್ಥಿತಿ ಇರುವಾಗ, ಬಡ ಕುಟುಂಬಗಳ ಪರಿಸ್ಥಿತಿಯ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅವರಲ್ಲಿರುವ ಸನಾತನ ಕಲ್ಪನೆಯೊಂದು ವೈಚಾರಿಕತೆ ಹಾದಿಯನ್ನು ಬದಲಾಯಿಸಿದೆ, ಗಂಡು ಮಗು ಭವಿಷ್ಯದ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ನೀಡಬಲ್ಲಂಥವನು, ಎಂಬ ಭ್ರಮೆಗೆ ಬಲಿಯಾಗಿ ತಮಗಿರುವ ನಿಯಮಿತ ಸಂಪನ್ಮೂಲಗಳನ್ನು ಗಂಡು ಮಕ್ಕಳ ಶಿಕ್ಷಣದ ಮೇಲೆ ವ್ಯಯ ಮಾಡುವ ಕುಟುಂಬಗಳು ಅನೇಕ ಇವೆ. ಮಗಳು ವಿವಾಹನಂತರ ಪರರ ಮನೆಗೆ ಹೋಗುವಳು. ಅವರು ಕೆಲಸಕ್ಕೆ ಸೇರಿದರೂ ಆಕೆಯ ಗಳಿಕೆಯ ಮೇಲಿನ ಅಧಿಕಾರ ಆಕೆಯ ಪತಿಯ ಅಥವಾ ಆತನ ಮನೆಯವರಿಗೆ ಸೇರತಕ್ಕಂತದ್ದು, ನಮಗೆ ಅವರ ಶಿಕ್ಷಣದಿಂದ ಯಾವುದೇ ಬಗೆಯ ಪ್ರಯೋಜನವಿಲ್ಲ ಎನ್ನುವವಾದ ಇವರದು.

ಪುರುಷ ಪ್ರಧಾನ ಮೌಲ್ಯಗಳಿಂದ ಆವೃತ್ತವಾಗಿರುವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹವೇ ಹೆಣ್ಣಿನ ಜೀವನದ ಪರಮಗುರಿ, ಆಕೆಯ ಬದುಕನ್ನು ಕುರಿತ ನಿರ್ಧಾರಗಳನ್ನು

ತೆಗೆದುಕೊಳ್ಳುವ ಪರಮಾಧಿಕಾರ ಆಕೆಯ ಪತಿಗೆ ಹೊರತು ಇತರರಿಗಲ್ಲ ಎನ್ನುವ ನಂಬಿಕೆಯೇ ಹೆಚ್ಚಾಗಿ ಚಾಲ್ತಿಯಲ್ಲಿರುವುದುರಿಂದ ಸ್ತ್ರೀ ಶಿಕ್ಷಣಕ್ಕೆ ದೊರೆಯಬೇಕಾದಂಥ ಆಧ್ಯತೆ ದೊರೆಯುತ್ತಿಲ್ಲ.

ಬೇಡ ಬುಡಕಟ್ಟು ಸಮುದಾಯದಲ್ಲಿ ಅನಕ್ಷರಸ್ತರ ಸಂಖ್ಯೆಯು ಬಹು ಸಂಖ್ಯಾತವಾಗಿರುವುದರಿಂದ, ಸಣ್ಣ ವಯಸ್ಸಿನಲ್ಲೇ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು, ಒಂದು ಸಂಪ್ರದಾಯವಾಗಿದೆ. ಇದರಿಂದ ಶಾಲಾ ದಾಖಲಾತಿ ಹಾಜರಾತಿಗಳು ಇಂದಿಗೂ ಕಡಿಮೆ ಮಟ್ಟದಲ್ಲಿರುವುದಕ್ಕೆ ಮತ್ತೊಂದು ಪ್ರಮುಖ ಕಾರಣ, ವಿವಾಹ ಸಂಬಂಧದಲ್ಲಿ ಪ್ರವೇಶಿಸಲು ಕನಿಷ್ಟ ೧೮ ವಯಸ್ಸಾದರೂ ಆಗಿರಬೇಕು ಎಂಬ ಕಾನೂನು ಜಾರಿಯಲ್ಲಿದ್ದರೂ ವಾಸ್ತವ್ಯದಲ್ಲಿ ಎಲ್ಲ ಪರಿಸ್ಥಿತಿಗಳಲ್ಲಿ ಹಾಗಾಗುತ್ತಿಲ್ಲ. ಹೆಣ್ಣು ಮಗು ದೈಹಿಕವಾಗಿ-ಮಾನಸಿಕವಾಗಿ ವಿವಾಹ ಎನ್ನುವ ವ್ಯವಸ್ಥೆಯನ್ನು ಪ್ರವೇಶಿಸಲು ತಯಾರಾಗಿಲ್ಲದಿರುವಾಗಲೇ, ಆಕೆಯ ಇಡೀ ಭವಿಷ್ಯವನ್ನು ಕುಂಠಿತಗೊಳಿಸಿದಂತೆ. "ಎಲ್ಲಿಯವರೆಗೆ ಹೆಣ್ಣು ಮಕ್ಕಳು ಶಾಲೆಯಲ್ಲಿ ಮುಂದುವರೆಯುತ್ತಾರೋ, ಅಲ್ಲಿ ವಿವಾಹದ ವಯಸ್ಸು ತಾನೇ ತಾನಾಗಿ ಏರುತ್ತದೆ".[೨] ಆದರೆ ಬಹುಸಂಖ್ಯಾತವಾಗಿ ಗ್ರಾಮೀಣ ಸಮಾಜದಲ್ಲಿ ಸಂಪ್ರದಾಯಗಳ ಪ್ರಭಾವದಿಂದ ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಿ ಮದುವೆ ಮಾಡುವ ಕ್ರಮವು ಪರಿಣಾಮಕಾರಿಯಾಗಿ ಕಂಡುಬರುತ್ತದೆ. ಅದು ವರದಕ್ಷಣೆ, ಕೌಟುಂಬಿಕ ಪ್ರತಿಷ್ಠೆ ಅಡ್ಡದಾರಿ ಹಿಡಿಯುವದು, ಮತ್ತು ಮಹಿಳೆಯ ಕೌಮಾರ್ಯದ ದುರುಪಯೋಗ.

ಬೇಡ ಬುಡಕಟ್ಟು ಸಮುದಾಯದಲ್ಲಿ ಶಿಕ್ಷಣದ ಕೊರತೆ ಬಹಳಷ್ಟು ಇರುವುದು ಕಂಡುಬರುತ್ತದೆ. ಇವರಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರ ಸಾಲಿಗೆ ಇರುವುದು ಕ್ಷೇತ್ರಕಾರ್ಯದಲ್ಲಿನ ಸಂದರ್ಭದಲ್ಲಿ ಕಂಡು ಬಂದಿರುವುದು. ಇದರಿಂದ ಹೆಚ್ಚಿನ ವಿಷಯಗಳಾಗಲಿ, ಮಾಹಿತಿಗಳಾಗಲಿ, ಪೂರ್ವ ಐತಿಹ್ಯದ ಬಗ್ಗೆಯಾಗಲಿ ತಿಳಿದುಕೊಳ್ಳಲು ಬಹಳಷ್ಟು ಶ್ರಮ ಪಡಬೇಕಾಯಿತು. ಆದರೂ ಶಿಕ್ಷಣವು ಜ್ಞಾನ ಹಾಗೂ ವೈಚಾರಿಕ ತಿಳುವಳಿಕೆ ಒದಗಿಸಿ ಸಮಾಜದಲ್ಲಿ ತಾವೊಬ್ಬರು ಆದರ್ಶಪ್ರಾಯವಾಗಿ ಜೀವನ ನಡೆಸಲು, ಮೂಲಭೂತವಾದ ಕೌಶಲ್ಯವನ್ನು ಕೊಡುತ್ತದೆಂಬ ಕಲ್ಪನೆಯಿಂದ ಪುರುಷರಿಗಿಂತ ಮಹಿಳೆಯರು ಬಹುದೂರವಿರುವುದು ಈ ಮೂರು ಜಿಲ್ಲೆಗಳ ಪರಿಸರದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅವರ ಜೊತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಪುರುಷರ ಸರಿಸಮಾನತೆ ಪಡೆದುಕೊಳ್ಳುವಂತಹ ಹಂಬಲವು ಕಡಿಮೆಯಿದೆ ಎಂದು ಹೇಳಬಹುದು. ಇದಕ್ಕೆ ಅನೇಕ ಕಾರಣಗಳು ಇರಬಹುದು. ಅದರಲ್ಲಿ ಪ್ರಮುಖವಾಗಿ ಕುಟುಂಬದಲ್ಲಿ ಇರುವಂತಹ ಬಡತನ ಬೆನ್ನೇರಳಾಗಿ ಇರುವುದೇ ಮಹಿಳೆಯರ ಪಾಲಿಗೆ ಶಾಪವಾಗಿದೆ. ಬೇಡ ಬುಡಕಟ್ಟು ಸಮುದಾಯದಲ್ಲಿ ತಮ್ಮ ಜೀವನಕ್ಕೆ ಮೂಲಭೂತ ಅವಶ್ಯಕತೆಗಳಾದ ಆಹಾರ, ವೃತ್ತಿ, ವಸತಿ ಇತರೆ ಅಂಶಗಳು ಸಮರ್ಪಕವಾಗಿ ಇರದ ಕಾರಣದಿಂದ ಶಿಕ್ಷಣದ ಬಗ್ಗೆ ಅಸಡ್ಡೆ ಮನಸ್ಸು ಮಾಡಿ ಇಡೀ ಜೀವನವೇ ದುಡಿಮೆಯೆಂದು ಭಾವಿಸಿಕೊಂಡಿರುವುದು ಅವರ ದಿನಚರಿಯನ್ನು ಗಮನಿಸಿದರೆ ಪ್ರತಿಯೊಬ್ಬ ಸಾಮಾನ್ಯನಿಗೂ ಅರಿವವಾಗುತ್ತದೆ.

ಹಾಗೂ ವಿಶೇಷ ಯೋಜನೆಗಳ ಅಡಿಯಲ್ಲಿ ವ್ಯಯ ಮಾಡಿದರ ಫಲಿತಾಂಶವೇನು, ಪ್ರಸ್ತುತದವರೆಗೂ ೬ ರಿಂದ ೧೪ವರ್ಷದ ಮೂಲಭೂತ ಶಿಕ್ಷಣ ಸಮರ್ಪಕವಾಗಿ ಆದಿವಾಸಿಗಳಿಗೆ ತಲುಪುತ್ತಿಲ್ಲ. ಇದರ ಕುರಿತು ಕ್ಷೇತ್ರಕಾರ್ಯದಲ್ಲಿ ಪಡೆದಿರುವಂತಹ ಮಾಹಿತಿ ಮತ್ತು ಸರಕಾರದ ದಾಖಲೆಗಳಲ್ಲಿ ಸೇರ್ಪಡೆಗೊಂಡಿರುವ ಮಾಹಿತಿಯನ್ನು ಗಮನಿಸಿದಾಗ ಅಧ್ಯಯನದ ಈ ಮೂರು ಜಿಲ್ಲೆಗಳಲ್ಲಿ ಬೇಡ ಬುಡಕಟ್ಟು ಮಹಿಳೆ ಶೈಕ್ಷಣಿಕ ಉಪಯೋಗವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿಲ್ಲವೆಂದು ಹೇಳಬಹುದು. ಅದಕ್ಕೆ ಹಲವು ಕಾರಣಗಳು ಉಂಟು. ಅದರಲ್ಲಿ ಪ್ರಮುಖವಾಗಿ ಅಧ್ಯಯನದ ಕ್ಷೇತ್ರದಲ್ಲಿ ಬುಡಕಟ್ಟು ಮಹಿಳೆಯರು ಅತಿಹೆಚ್ಚು ಕೆಲಸದಲ್ಲಿ ಭಾಗವಹಿಸುವಿಕೆ ಕುರಿತು. "ಮಾನವ ಅಭಿವೃದ್ಧಿವರದಿಯಲ್ಲಿ ಈ ರೀತಿಯಾಗಿ ಪ್ರಸ್ತಾಪಿಸಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಮಹಿಳೆಯರು ಸಂಯುಕ್ತ ವಲಯದಲ್ಲಿ ಶೇ.೩೪.೯ರಷ್ಟು ಮಹಿಳೆಯರು ಕೆಲಸದಲ್ಲಿ ಪಾಲ್ಗೊಳ್ಳುತ್ತಾರೆ. ಅದರಲ್ಲಿ ಪರಿಶಿಷ್ಟ ವರ್ಗದ ಮಹಿಳೆಯರು ಶೇ.೪೨ರಷ್ಟು ಮಹಿಳೆಯರು ಕೆಲಸದಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಅದೇ ಪ್ರಕಾರವಾಗಿ ರಾಯಚೂರು ಜಿಲ್ಲೆಯಲ್ಲಿ ಸಂಯುಕ್ತ ವಲಯದಲ್ಲಿ ೩೪.೭ರಷ್ಟು ಮಹಿಳೆಯರು ಕೆಲಸದಲ್ಲಿ ಭಾಗಿಯಾಗಿದ್ದಾರೆ. ಇನ್ನೂ ಕೊಪ್ಪಳ ಜಿಲ್ಲೆಯಲ್ಲಿ ಸಂಯುಕ್ತ ವಲಯದಲ್ಲಿ ೩೮.೯ರಷ್ಟು ಮಹಿಳೆಯರು ಕಂಡುಬಂದರೆ, ಬುಡಕಟ್ಟು ಮಹಿಳೆಯರು ೪೫.೮ರಷ್ಟು ದಿನನಿತ್ಯದ ಕೆಲಸದಲ್ಲಿ ಭಾಗವಹಿಸುತ್ತಾರೆ. ಇಡೀ ಮೂರು ಜಿಲ್ಲೆಯಲ್ಲಿ ಕೊಪ್ಪಳದಲ್ಲಿ ಅತ್ಯಧಿಕವಾಗಿ ಕೆಲಸದಲ್ಲಿ ಭಾಗಿಯಾಗಿರುವುದು, ಕಂಡುಬರುತ್ತದೆ. ತದನಂತರದಲ್ಲಿ ರಾಯಚೂರು ಹಾಗೂ ಗುಲಬರ್ಗಾ ಜಿಲ್ಲೆಗಳು ಬರುತ್ತವೆ."[೧೪] ಅಂದಾಗ ಈ ಪ್ರದೇಶದ ಬುಡಕಟ್ಟು ಮಹಿಳೆಯರ ಪ್ರಮುಖ ಕರ್ತವ್ಯ ಕೆಲಸ ಮಾಡುವುದೆ ಹೊರತು ತಮ್ಮ ಹಕ್ಕುಗಳನ್ನು ಪಡೆಯುದರತ್ತ ಗಮನ ಹರಿಸಿದೆ ಇರುವುದು ದುರದೃಷ್ಟಕರ ಸಂಗತಿ. ಈ ರೀತಿಯ ಹಲವಾರು ತೊಂದರೆಗಳ ನಡುವೆ ಒಂದಿಷ್ಟು ಮಹಿಳೆಯರು ಸಾಕ್ಷರತೆಯನ್ನು ಪಡೆದುಕೊಂಡಿರುವುದನ್ನು ನಾವು ನೋಡಬಹುದು.

ಕೋಷ್ಟಕ ೪

ಗುಲಬರ್ಗಾ ಜಿಲ್ಲೆಯ ಸಾಮಾನ್ಯ ಸಾಕ್ಷರತಾ ಪ್ರಮಾಣ

ತಾಲೂಕುಗಳು	ಗ್ರಾಮೀಣ			ನಗರ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಅಫಜಲಪುರ	೬೨.೬	೩೫.೮	೪೯.೫	೭೧.೯	೫೧.೯	೬೨.೨	೬೩.೬	೩೭.೫	೫೦.೯
ಆಳಂದ	೬೪.೧	೩೭.೬	೫೧.೬	೭೨.೬	೫೧.೫	೬೨.೫	೬೬.೦	೩೯.೨	೫೨.೯
ಚಿಂಚೋಳಿ	೬೧.೧	೩೩.೨	೪೭.೨	೭೫.೮	೫೩.೩	೬೫.೧	೬೨.೩	೩೪.೭	೪೮.೬
ಚಿತಾಪುರ	೫೩.೩	೨೯.೩	೪೧.೩	೭೪.೮	೫೩.೪	೬೪.೪	೬೧.೦	೩೭.೭	೪೯.೫
ಗುಲಬರ್ಗಾ	೬೨.೬	೩೫.೫	೪೯.೩	೮೩.೮	೬೭.೮	೭೬.೧	೭೬.೩	೫೬.೧	೬೬.೫
ಜೇವರ್ಗಿ	೫೬.೪	೨೮.೦	೪೨.೪	೭೦.೮	೫೧.೭	೬೩.೫	೫೭.೯	೨೯.೯	೪೪.೧

ಸೇಡಂ	೫೧.೨	೨೭.೯	೩೯.೪	೭೫.೭	೫೩.೩	೬೫.೭	೫೬.೪	೩೩.೪	೪೪.೮
ಶಾಹಪೂರ	೪೫.೭	೨೩.೧	೩೪.೫	೭೨.೫	೫೨.೨	೬೨.೬	೪೯.೯	೨೭.೫	೩೮.೮
ಸುರಪುರ	೫೩.೪	೩೭.೧	೪೦.೩	೭೧.೧	೫೨.೭	೬೪.೦	೫೬.೩	೩೦.೪	೪೩.೪
ಯಾದಗಿರಿ	೩೯.೦	೧೮.೭	೨೮.೯	೭೪.೪	೫೩.೨	೬೩.೯	೪೭.೫	೨೬.೯	೩೭.೨
ಒಟ್ಟು	೫೪.೯	೨೯.೪	೪೨.೩	೭೯.೨	೬೦.೫	೭೦.೧	೬೧.೮	೩೭.೯	೫೦.೦

(ಮೂಲ: ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೪-೦೫ ಪುಟ.೧೨)

ಈ ಮೇಲಿನ ಕೋಷ್ಟಕದ ಅನ್ವಯ ಗುಲಬರ್ಗಾ ಜಿಲ್ಲೆಯ ಸಾಕ್ಷರತೆಯ ಪ್ರಮಾಣವು ಗಮನಿಸಿದಾಗ ಅದರಲ್ಲಿ ಗ್ರಾಮೀಣ ಪ್ರದೇಶದ ಪುರುಷರ ಸಾಕ್ಷರತೆಯ ಪ್ರಮಾಣವು ೫೪.೯% ರಷ್ಟು ಕಂಡುಬರುತ್ತದೆ ಅದರಲ್ಲಿ ಮಹಿಳಾ ಸಾಕ್ಷರತೆಯೂ ೨೯.೪.% ರಷ್ಟು ಇರುವುದು, ಇಡೀ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತೆ ಕಡಿಮೆ ಇರುವುದು ನಾವು ನೋಡಬಹುದು. ಅದೇ ರೀತಿಯಾಗಿ ನಗರ/ಪಟ್ಟಣ ಪ್ರದೇಶಗಳಲ್ಲಿ ಪುರುಷರ ಸಾಕ್ಷರತೆ ಪ್ರಮಾಣವು ೭೯.೨%ರಷ್ಟು ಇದ್ದರೆ ಮಹಿಳಾ ಸಾಕ್ಷರತೆ ಪ್ರಮಾಣವು ೬೦.೫%ರಷ್ಟು ಇದ್ದು ಆದರೆ ಗ್ರಾಮೀಣ ಮತ್ತು ಒಟ್ಟು ಸಾಕ್ಷರತೆಯಲ್ಲಿ ಕೊನೆಯ ಸ್ಥಾನದಲ್ಲಿನ ತಾಲೂಕು ಎಂದರೆ ಯಾದಗಿರಿ ತಾಲೂಕು ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೋಡಿದಾಗ ಪುರುಷರ ಸಾಕ್ಷರತೆಯೂ ೩೯.೦%ರಷ್ಟು ಮಹಿಳೆಯ ಸಾಕ್ಷರತೆ ಪ್ರಮಾಣವು ೧೮.೭% ರಷ್ಟು ಇದ್ದು ಅತ್ಯಂತ ಕನಿಷ್ಟ ಮಟ್ಟದಲ್ಲಿದೆ. ಈ ಅಂಕಿ ಅಂಶಗಳನ್ನು ಅಂತರ್ಗತವಾಗಿ ನೋಡಿದಾಗ ಇಡೀ ಜಿಲ್ಲೆಯಲ್ಲಿ ಬೇಡ ಬುಡಕಟ್ಟು ಮಹಿಳೆಯ ಸಾಕ್ಷರತೆ ಪ್ರಮಾಣವು ಅತ್ಯಂತ ಕಡಿಮೆಯಿದೆ ಎಂದು ತಿಳಿದು ಬರುತ್ತದೆ.

ಕೋಷ್ಟಕ ೫

ಗುಲಬರ್ಗಾ ಜಿಲ್ಲೆಯ ಬುಡಕಟ್ಟು ಮಹಿಳೆಯ ಸಾಕ್ಷರತೆ ಪ್ರಮಾಣ ೨೦೦೧

ಗುಲಬರ್ಗಾ ಜಿಲ್ಲೆ	ಪ್ರದೇಶ	ಒಟ್ಟು	ಪುರುಷರು	ಮಹಿಳೆಯರು
	ಒಟ್ಟು	೩೨.೪	೪೩.೪	೨೦.೮
	ಗ್ರಾಮೀಣ	೨೯.೪	೪೦.೭	೧೮.೦
	ನಗರ	೫೨.೨	೬೪.೭	೩೯.೨
ಕರ್ನಾಟಕ ರಾಜ್ಯ	ಒಟ್ಟು	೪೮.೩	೫೯.೭	೩೬.೬
	ಗ್ರಾಮೀಣ	೪೫.೩	೫೬.೯	೩೩.೩
	ನಗರ	೬೪.೬	೭೪.೪	೫೪.೩

(ಮೂಲ: ಗುಲಬರ್ಗಾ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೪-೦೫ ಪುಟ.೧೨)

ಈ ಕೋಷ್ಟಕವನ್ನು ಗಮನಿಸಿದಾಗ ಇಡೀ ಗುಲಬರ್ಗಾ ಜಿಲ್ಲೆಯ ಪಾಲು ರಾಜ್ಯಕ್ಕೆ ಹೋಲಿಕೆಮಾಡಿದಾಗ ಅತ್ಯಂತ ಕಡಿಮೆ ಮಟ್ಟದಲ್ಲಿದೆ ಎಂದು ಹೇಳಬಹುದು. ಅದು ರಾಜ್ಯದ ಒಟ್ಟು ಸಾಕ್ಷರತೆ

ಪ್ರಮಾಣವು ೪೮.೩%ರಷ್ಟು ಇದ್ದು, ಅದರಲ್ಲಿ ಪುರುಷರ ಸಾಕ್ಷರತೆಯೂ ೫೯.೭%ರಷ್ಟು ಕಂಡುಬರುತ್ತದೆ. ಈ ತೆರನಾದ ಅಂತರಕ್ಕೆ ಹಲವಾರು ಕಾರಣಗಳು ಇರಬಹುದು. ಅದರಲ್ಲಿ ಪ್ರಮುಖವಾಗಿ ಬುಡಕಟ್ಟುಗಳಲ್ಲಿ ಇರುವಂತಹ ಬಡತನ, ಸಂಪ್ರದಾಯ, ಪರಿಸರ, ಇತ್ಯಾದಿ ಕಾರಣವಾಗಿದೆ ಎಂದು ಹೇಳಬಹುದು. ಇದೇ ಪಲಿತಾಂಶವನ್ನು ಗುಲಬರ್ಗಾ ಜಿಲ್ಲೆಗೆ ಹೋಲಿಕೆಮಾಡಿದಾಗ ಜಿಲ್ಲೆಯಲ್ಲಿ ಒಟ್ಟು ಸಾಕ್ಷರತೆ ಪ್ರಮಾಣವು ೩೨.೪%ರಷ್ಟು ಇದ್ದು, ಪುರುಷರ ಸಾಕ್ಷರತೆ ಪ್ರಮಾಣವು ೪೩.೮%ರಷ್ಟು ಮಹಿಳೆಯರ ಸಾಕ್ಷರತೆ ಪ್ರಮಾಣವು ಕೇವಲ ೨೦.೮%ರಷ್ಟು ಇದೆ. ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣವು ಅವಲೋಕಿಸಿದಾಗ ಇನ್ನೂ ಕೆಳ ಹಂತಕ್ಕೆ ಹೋಗಿರುವುದು ಕಂಡು ಬರುತ್ತದೆ. ಅದರಲ್ಲಿ ರಾಜ್ಯದ ಒಟ್ಟು ಸಾಕ್ಷರತೆ ೪೮.೩%ರಷ್ಟು ಹಾಗೂ ಗುಲಬರ್ಗಾ ಜಿಲ್ಲೆಯ ಒಟ್ಟು ಸಾಕ್ಷರತೆ ೩೨.೪%ರಷ್ಟು ಎರಡು ಹೋಲಿಕೆ ಮಾಡಿದಾಗ ಅದರ ಅಂತರವು ನೋಡಿದಾಗ ರಾಜ್ಯದಲ್ಲಿ ೩೬.೬%ರಷ್ಟು ಇದ್ದು, ಜಿಲ್ಲೆಯಲ್ಲಿ ೨೦.೮%ರಷ್ಟು ಕಂಡು ಬರುತ್ತದೆ. ಇವೆರಡರ ನಡುವೆ ಇರುವಂತಹ ಅಂತರವು ೧೫.೮%ರಷ್ಟು ಕಂಡುಬರುತ್ತದೆ. ಈ ತೆರನಾದ ಮಹಿಳಾ ಸಾಕ್ಷರತೆ ಪ್ರಮಾಣಕ್ಕೆ ಹಲವಾರು ಕಾರಣಾಂಶಗಳು ಇವೆ. ಅದರಲ್ಲಿ ಪ್ರಮುಖವಾಗಿ ಪುರುಷ ಪ್ರಧಾನ್ಯ ಸಮಾಜದಲ್ಲಿ ಮಹಿಳೆಯೂ ಲಿಂಗಭೇದ ಸ್ಥಿತಿಗೆ ಒಳಪಟ್ಟು ಶಿಕ್ಷಣದಿಂದ ವಂಚಿತವಾಗಿದ್ದಾಳೆ ಎಂದು ಹೇಳಬಹುದು.

ಇದೇ ಪ್ರಕಾರವಾಗಿ ರಾಯಚೂರು ಜಿಲ್ಲೆಯನ್ನು ಅವಲೋಕನ ಮಾಡಿದಾಗ ಹಾಗೂ ಕ್ಷೇತ್ರಕಾರ್ಯದ ಮಾಹಿತಿಯನ್ನು ಪರಿಶೀಲನೆಗೆ ಒಳಪಡಿಸಿದಾಗ ರಾಯಚೂರು ಜಿಲ್ಲೆಯ ಸಾಕ್ಷರತೆ ಪ್ರಮಾಣದ ಸಾಮಾನ್ಯ ವಿವರ ಈ ರೀತಿಯಾಗಿದೆ.

ಕೋಷ್ಟಕ ೬

ರಾಯಚೂರು ಜಿಲ್ಲೆಯ ಸಾಮಾನ್ಯ ಸಾಕ್ಷರತಾ ಪ್ರಮಾಣ

ತಾಲೂಕುಗಳು	ಗ್ರಾಮೀಣ			ನಗರ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ದೇವದುರ್ಗ	೪೮.೭	೨೪.೪	೩೬.೬	೬೨.೬	೪೪.೧	೫೩.೬	೫೦.೧	೨೬.೩	೩೮.೩
ಲಿಂಗಸೂಗೂರು	೬೧.೨	೩೦.೨	೪೫.೮	೭೯.೪	೫೫.೫	೬೭.೮	೬೫.೬	೩೬.೧	೫೧.೦
ಮಾನ್ವಿ	೫೩.೨	೨೮.೨	೪೦.೭	೬೫.೧	೪೦.೨	೫೫.೩	೫೪.೫	೩೦.೧	೪೨.೩
ರಾಯಚೂರು	೫೧.೭	೨೪.೮	೩೮.೩	೮೦.೧	೬೧.೧	೭೦.೮	೬೯.೯	೪೩.೯	೫೫.೬
ಸಿಂಧನೂರು	೬೨.೮	೩೪.೩	೪೮.೪	೭೦.೨	೫೧.೫	೬೨.೪	೬೪.೬	೩೭.೧	೫೦.೮
ಒಟ್ಟು	೫೬:೧	೨೮.೯	೪೨.೫	೭೬.೮	೫೬.೫	೬೬.೯	೬೧.೫	೩೫.೯	೪೮.೮

(ಮೂಲ: ರಾಯಚೂರು ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೦೫-೦೬ ಪುಟ.೧೨)

ಈ ಮೇಲಿನ ಕೋಷ್ಟಕದ ಅನ್ವಯ ರಾಯಚೂರು ಜಿಲ್ಲೆಯ ಸಾಕ್ಷರತೆಯ ಪ್ರಮಾಣವು ನೋಡಿದಾಗ ಅದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆಯು ೪೨.೫%ರಷ್ಟು ಕಂಡುಬರುತ್ತದೆ. ಇದರಲ್ಲಿ ಪುರುಷ ಸಾಕ್ಷರತೆಯ ೫೬.೧%ರಷ್ಟು ಮಹಿಳೆಯರದು ೨೮.೯%ರಷ್ಟು ಅದೇ ಪ್ರಕಾರವಾಗಿ ನಗರಪ್ರದೇಶ ಒಟ್ಟು ಸಾಕ್ಷರತೆಯೂ ೬೬.೯%ರಷ್ಟು ಇದರಲ್ಲಿ ಪುರುಷರ ಸಾಕ್ಷರತೆಯು ೭೬.೮%ರಷ್ಟು ಮಹಿಳೆಯರದು ೫೬.೫%ರಷ್ಟು ಇರುವುದು ನಾವು ಇದರಲ್ಲಿ ನೋಡಬಹುದು. ಆದರೆ ಇವೆರಡನ್ನು ಕ್ರೂಢೀಕರಿಸಿ ನೋಡಿದಾಗ ಇಡೀ ಜಿಲ್ಲೆಯ ಸಾಕ್ಷರತೆಯ ಪ್ರಮಾಣವು ೪೮.೮%ರಷ್ಟು ಇದ್ದು. ಪುರುಷರ ಸಾಕ್ಷರತೆಯೂ ೬೧.೫%ರಷ್ಟು ಹಾಗೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ೩೫.೯%ರಷ್ಟು ಇರುವುದು ಕಂಡುಬರುತ್ತದೆ. ಆದರೆ ಇದರಲ್ಲಿ ನಿರ್ದಿಷ್ಟವಾಗಿ ಬೇಡ ಬುಡಕಟ್ಟು ಮಹಿಳೆಯರು ಸಾಕ್ಷರತೆ ಪ್ರಮಾಣ ನೋಡಿದಾಗ ಅತ್ಯಂತ ಆಶ್ಚರ್ಯಕರವಾದ ಸಂಗತಿಗಳು ನಮ್ಮುಂದೆ ಬರವವು.

ಕೋಷ್ಟಕ ೭

ರಾಯಚೂರು ಜಿಲ್ಲೆಯ ಬುಡಕಟ್ಟು ಮಹಿಳೆಯ ಸಾಕ್ಷರತೆ ಪ್ರಮಾಣ ೨೦೦೧

ರಾಯಚೂರು ಜಿಲ್ಲೆ	ಪ್ರದೇಶ	ಒಟ್ಟು	ಪುರುಷರು	ಮಹಿಳೆಯರು
	ಒಟ್ಟು	೨೯.೧	೪೧.೧	೧೬.೯
	ಗ್ರಾಮೀಣ	೨೭.೮	೩೯.೯	೧೫.೭
	ನಗರ	೪೧.೮	೫೩.೦	೩೦.೧
ಕರ್ನಾಟಕ	ಒಟ್ಟು	೪೮.೩	೫೯.೭	೩೬.೬
	ಗ್ರಾಮೀಣ	೪೫.೩	೫೬.೯	೩೩.೩
	ನಗರ	೬೪.೬	೭೪.೪	೫೪.೩

(ಮೂಲ: ಸೆನ್ಸಸ್ ೨೦೦೧ ಮತ್ತು ಅಭಿವೃದ್ಧಿ ಅಧ್ಯಯನ ೨೦೦೫)

ಈ ಕೋಷ್ಟಕವನ್ನು ಗಮನಿಸಿದಾಗ ಇಡೀ ರಾಯಚೂರು ಜಿಲ್ಲೆಯ ಬುಡಕಟ್ಟು ಮಹಿಳಾ ಸಾಕ್ಷರತೆ ಪ್ರಮಾಣವು ರಾಜ್ಯಕ್ಕೆ ಹೋಲಿಕೆ ಮಾಡಿದಾಗ ಅತೀ ಕೆಳ ಮಟ್ಟದಲ್ಲಿದೆ ಎಂದು ಹೇಳಬಹುದು. ಅದು ರಾಜ್ಯದ ಒಟ್ಟು ಸಾಕ್ಷರತೆ ಪ್ರಮಾಣವು ೪೮.೩೧% ಇದ್ದು. ಅದರಲ್ಲಿ ಪುರುಷರ ಸಾಕ್ಷರತೆಯೂ ೫೯.೭%ರಷ್ಟು ಇದ್ದರೆ ಮಹಿಳೆಯರು ೩೬.೬%ರಷ್ಟು ಇದೆ. ಇವೆರಡರ ನಡುವೆ ಅಂತರವು ೨೩.೧%ರಷ್ಟು ಕಂಡುಬರುತ್ತದೆ. ಇದರಲ್ಲಿ ರಾಯಚೂರು ಜಿಲ್ಲೆಯ ಬುಡಕಟ್ಟುಗಳ ಸಾಕ್ಷರತೆ ಪ್ರಮಾಣವು ೨೯.೦%ರಷ್ಟು ಇದ್ದು ಅದರಲ್ಲಿ ಪುರುಷರು ೪೧.೧%ರಷ್ಟು ಮಹಿಳೆಯರದು. ೧೬.೯%ರಷ್ಟು ಇರುವುದು ಕಂಡುಬರುತ್ತದೆ. ಅದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೋಡಿದಾಗ ಒಟ್ಟು ಸಾಕ್ಷರತೆಯೂ ೨೭.೮%ರಷ್ಟು ಇದ್ದು ಅದರಲ್ಲಿ ಪುರುಷರು ೩೯.೯%ರಷ್ಟು ಇದ್ದರೆ ಮಹಿಳೆಯರು ೧೫.೭%ರಷ್ಟು ಇರುವುದು ಗಮನಿಸಬಹುದು. ಇನ್ನೂ ನಗರ ಪ್ರದೇಶದಲ್ಲಿ ಒಟ್ಟು ಸಾಕ್ಷರತೆಯೂ

೪೧.೮%ರಷ್ಟು ಇದ್ದು ಪುರುಷರು ೫೩.೦%ರಷ್ಟು ಇದ್ದು ರಾಯಚೂರಿನ ಬುಡಕಟ್ಟು ಮಹಿಳೆಯರ ಒಟ್ಟು ಸಾಕ್ಷರತೆ ಪ್ರಮಾಣ ೧೬.೯%ರಷ್ಟು ಹೋಲಿಕೆ ಮಾಡಿದಾಗ ಅದರ ನಡುವಿನ ಅಂತರವು ೧೯.೭%ರಷ್ಟು ಕಂಡುಬರುತ್ತದೆ. ಅಂದರೆ ಈ ಅಂತರವು ತಲುಪುವದು ಯಾವಾಗ. ಮತ್ತೆ ಇದೇ ಪ್ರಕಾರವಾಗಿ ಮುಂದುವರೆದರೆ ಬುಡಕಟ್ಟು ಮಹಿಳೆಯರ ಜೀವನ ಮಟ್ಟವು ಸುಧಾರಿಸಬಹುದೇ ಎನ್ನುವಂತಹ ಪ್ರಶ್ನೆಯೂ ನಮಗೆ ಎದುರಾಗುತ್ತದೆ. ಇದೇ ರೀತಿಯಾ ಕೊಪ್ಪಳ ಜಿಲ್ಲೆಯನ್ನು ಅವಲೋಕನ ಮಾಡಿದಾಗ ಹಾಗೂ ಕ್ಷೇತ್ರಕಾರ್ಯದ ಮಾಹಿತಿಯನ್ನು ಪರಿಶೀಲನೆಗೆ ಒಳಪಡಿಸಿದಾಗ ಕೊಪ್ಪಳ ಜಿಲ್ಲೆಯ ಸಾಕ್ಷರತೆ ಪ್ರಮಾಣವು ಸಾಮಾನ್ಯ ವಿವಿರ ಈ ರೀತಿಯಾಗಿದೆ.

ಕೋಷ್ಟಕ ೮

ಕೊಪ್ಪಳ ಜಿಲ್ಲೆಯ ಸಾಮಾನ್ಯ ಸಾಕ್ಷರತಾ ಪ್ರಮಾಣ

ತಾಲೂಕುಗಳು	ಗ್ರಾಮೀಣ			ನಗರ			ಒಟ್ಟು		
	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
ಗಂಗಾವತಿ	೬೨.೧	೩೫.೫	೪೮.೮	೭೬.೯	೫೪.೪	೬೫.೮	೬೫.೯	೪೦.೩	೫೩.೧
ಕೊಪ್ಪಳ	೬೮.೪	೩೮.೯	೫೩.೮	೮೨.೩	೬೩.೬	೭೩.೧	೭೧.೪	೪೪.೦	೫೭.೮
ಕುಷ್ಟಗಿ	೬೬.೦	೩೧.೮	೪೮.೯	೮೪.೪	೬೩.೪	೭೪.೨	೬೭.೭	೩೪.೬	೫೧.೩
ಯಲಬುರ್ಗ	೬೯.೧	೩೬.೮	೫೩.೦	೮೦.೮	೫೪.೧	೬೭.೨	೬೯.೭	೩೭.೬	೫೩.೭
ಒಟ್ಟು	೬೬.೧	೩೫.೮	೫೧.೦	೭೯.೭	೫೮.೩	೬೯.೧	೬೮.೪	೩೯.೬	೫೪.೧

(ಮೂಲ: ಕೊಪ್ಪಳ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೫-೦೬ ಪುಟ.೧೪)

ಈ ಮೇಲಿನ ಕೋಷ್ಟಕದ ಅನ್ವಯ ಕೊಪ್ಪಳ ಜಿಲ್ಲೆಯ ಸಾಕ್ಷರತೆ ಪ್ರಮಾಣವು ಗಮನಿಸಿದಾಗ ಒಟ್ಟು ೫೪.೧%ರಷ್ಟು ಅದರಲ್ಲಿ ಗ್ರಾಮೀಣ ಭಾಗದ ಪುರುಷರ ಸಾಕ್ಷರತೆಯ ಪ್ರಮಾಣವು ೬೬.೧%ರಷ್ಟು ಕಂಡುಬರುತ್ತದೆ. ಇದೇ ಪ್ರದೇಶದ ಮಹಿಳೆಯರ ಸಾಕ್ಷರತೆ ಪ್ರಮಾಣ ೩೫.೮%ರಷ್ಟು ಮಾತ್ರ ಒಟ್ಟಾಗಿ ಗ್ರಾಮೀಣ ಪ್ರದೇಶದ ಸಾಕ್ಷರತೆಯೂ ೫೧.೦% ಇದರ ಒಳಗಡೆ ಪುರುಷರ ಸಾಕ್ಷರತೆಗೂ ಮಹಿಳೆಯರ ಸಾಕ್ಷರತೆಗೂ ಇರುವ ಅಂತರ ೩೦.೩%ರಷ್ಟು ಇದೆ. ಅದೇ ರೀತಿಯಾಗಿ ನಗರ ಪ್ರದೇಶದಲ್ಲಿ ಪುರುಷರ ಸಾಕ್ಷರತೆ ಪ್ರಮಾಣವು ೭೯.೭%ರಷ್ಟು. ಮಹಿಳೆಯರ ಸಾಕ್ಷರತೆ ಪ್ರಮಾಣ ೫೮.೩% ಒಟ್ಟು ನಗರ ಪ್ರದೇಶದ ಸಾಕ್ಷರತೆ ಪ್ರಮಾಣದ ಅಂತರವು ೨೧.೪%ರಷ್ಟು ಇದ್ದು. ಗ್ರಾಮೀಣ ಪ್ರದೇಶಕ್ಕೆ ಹೋಲಿಕೆ ಮಾಡಿದರೆ ನಗರ ಪ್ರದೇಶದಲ್ಲಿ ಮಹಿಳೆಯರಿಗೆ ಅವಕಾಶವಿದೆ ಎಂದು ಹೇಳಬಹುದು. ಇಡೀ ಜಿಲ್ಲೆಯಲ್ಲಿ ಪುರುಷ ಮಹಿಳೆಯರ ಸಾಕ್ಷರತೆ ಪ್ರಮಾಣದ ಅಂತರವು ೨೮.೮%ರಷ್ಟು ಕಂಡುಬರುತ್ತದೆ. ಈ ಸಾಮಾನ್ಯ ಸಾಕ್ಷರತೆ ಪ್ರಮಾಣವು ಗಮನಿಸಿದಾಗ ಮಹಿಳೆಯೂ ಶಿಕ್ಷಣದ ಅವಕಾಶಗಳನ್ನು ಪಡೆಯುವಲ್ಲಿ ವಿಫಲವಾಗುತ್ತಿದ್ದಾಳೆಂದು ತಿಳಿದುಬರುತ್ತದೆ. ಆದರೆ ಇದೇ ಸಾಕ್ಷರತೆ ಪ್ರಮಾಣವು ಬೇಡ ಬುಡಕಟ್ಟು ಸಮುದಾಯದ ಮಹಿಳೆಯ

ಕುರಿತು ನೋಡಿದಾಗ ಇಡೀ ಜಿಲ್ಲೆಯಲ್ಲಿ ೨೬.೫%ರಷ್ಟು ಇರುವುದು ಕಂಡುಬರುತ್ತದೆ. ಇದೇ ಫಲಿತಾಂಶವನ್ನು ಗ್ರಾಮೀಣ, ನಗರ, ತಾಲೂಕು ಮಟ್ಟದಲ್ಲಿ ನೋಡಿದರೆ ಅತ್ಯಂತ ದುಃಸ್ಥಿತಿಯಲ್ಲಿದೆ.

ಕೋಷ್ಟಕ ೯

ಕೊಪ್ಪಳ ಜಿಲ್ಲೆಯ ಬುಡಕಟ್ಟು ಮಹಿಳೆಯ ಸಾಕ್ಷರತೆ ಪ್ರಮಾಣ ೨೦೦೧

ಕೊಪ್ಪಳ ಜಿಲ್ಲೆ	ಪ್ರದೇಶ	ಒಟ್ಟು	ಪುರುಷರು	ಮಹಿಳೆಯರು
	ಒಟ್ಟು	೪೨.೧	೫೭.೫	೨೬.೫
	ಗ್ರಾಮೀಣ	೪೧.೧	೫೬.೭	೨೫.೩
	ನಗರ	೫೫.೧	೬೮.೩	೪೧.೮
ಕರ್ನಾಟಕ	ಒಟ್ಟು	೪೮.೩	೫೯.೭	೩೬.೬
	ಗ್ರಾಮೀಣ	೪೫.೩	೫೬.೯	೩೩.೩
	ನಗರ	೬೪.೬	೭೪.೪	೫೪.೩

(ಮೂಲ: ಸೆನ್ಸಸ್ ೨೦೦೧ ಮತ್ತು ಅಭಿವೃದ್ಧಿ ಅಧ್ಯಯನ, ೨೦೦೫ ಪುಟ.೧೪)

ಈ ಕೋಷ್ಠಕವನ್ನು ನೋಡಿದಾಗ ಇಡೀ ಕೊಪ್ಪಳ ಜಿಲ್ಲೆಯ ಪಾಲು ರಾಜ್ಯಕ್ಕೆ ಹೋಲಿಕೆ ಮಾಡಿದಾಗ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ ಎಂದು ತಿಳಿದು ಬರುತ್ತದೆ. ರಾಜ್ಯದ ಒಟ್ಟು ಸಾಕ್ಷರತೆ ಪ್ರಮಾಣವು ೪೮.೩%ರಷ್ಟು ಇದೆ. ಅದರಲ್ಲಿ ಪುರುಷ ಸಾಕ್ಷರತೆಯೂ ೫೯.೭%ರಷ್ಟಿದ್ದರೆ ಮಹಿಳೆಯರದು ೩೬.೬% ಇದೆ. ಇವೆರಡರ ನಡುವಿನ ಅಂತರವು ೨೩.೧%ರಷ್ಟು ಕಂಡುಬರುತ್ತದೆ. ಈ ತೆರನಾದ ಅಂತರಕ್ಕೆ ಹಲವು ಕಾರಣಗಳು ಇರಬಹುದು. ಪ್ರಮುಖವಾಗಿ ಆದಿವಾಸಿ ಸಮುದಾಯಗಳಲ್ಲಿ ಇರುವಂತಹ ಬಡತನ, ಸಂಪ್ರದಾಯ, ಪರಿಸರ ಇತ್ಯಾದಿ ಅಂಶಗಳ ಜೊತೆಗೆ ಪುರುಷ ಪ್ರಧಾನ್ಯವು ಮಹಿಳಾ ಸಾಕ್ಷರತೆ ಹಿಂದುಳಿವಿಕೆಗೆ ಕಾರಣವಾಗಿದೆ. ಇದೇ ಫಲಿತಾಂಶವನ್ನು ಕೊಪ್ಪಳ ಜಿಲ್ಲೆಗೆ ಹೋಲಿಕೆ ಮಾಡಿದಾಗ ಜಿಲ್ಲೆಯಲ್ಲಿ ಒಟ್ಟು ಸಾಕ್ಷರತೆ ಪ್ರಮಾಣವು ೪೨.೧%ರಷ್ಟು ಇದ್ದು ಪುರುಷರ ಸಾಕ್ಷರತೆಯೂ ೫೭.೫%ರಷ್ಟು ಮಹಿಳೆಯರ ಸಾಕ್ಷರತೆ ಪ್ರಮಾಣವು ೨೬.೫.%ರಷ್ಟು ಇದೆ. ಇದರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತೆ ಮಟ್ಟವು ಕೆಳಹಂತದಲ್ಲಿ ಇರುವುದು ತೋರುತ್ತದೆ.

ಅದರಲ್ಲಿ ರಾಜ್ಯ ಮಟ್ಟದ ಸಾಕ್ಷರತೆ ೪೮.೩%ರಷ್ಟು ಹಾಗೂ ಕೊಪ್ಪಳ ಜಿಲ್ಲೆ ಒಟ್ಟು ಸಾಕ್ಷರತೆ ಎರಡು ಹೋಲಿಕೆ ಮಾಡಿದಾಗ ಅದರ ಅಂತರವು ೦೬.೨.%ರಷ್ಟು ಕಂಡುಬರುತ್ತದೆ. ಇದರಲ್ಲಿ ಮಹಿಳೆ ಸಾಕ್ಷರತೆಯ ಅಂತರವು ನೋಡಿದಾಗ ರಾಜ್ಯದಲ್ಲಿ ೩೬.೬%ರಷ್ಟು ಇದೆ. ಜಿಲ್ಲೆಯಲ್ಲಿ ೨೬.೫%ರಷ್ಟು ಕಂಡುಬರುತ್ತದೆ. ಇವೆರಡರ ನಡುವೆ ಇರುವಂತಹ ಅಂತರವು ೧೦.೧%ರಷ್ಟು ಕಂಡುಬರುತ್ತದೆ. ಈ ತೆರನಾದ ಮಹಿಳಾ ಸಾಕ್ಷರತೆ, ಮಹಿಳೆ ದುಡಿಮೆಯಲ್ಲಿ ಭಾಗವಹಿಸುವಿಕೆಯೂ ಪ್ರಮುಖವಾಗಿದೆ ಎಂದು ಹೇಳಬಹುದು.

ಕ್ಷೇತ್ರಕಾರ್ಯದಲ್ಲಿ ಮಹಿಳೆಯರ ಶಿಕ್ಷಣದ ಹಿನ್ನಡೆಗೆ ಕಾರಣಗಳನ್ನು ಕುರಿತು ಕುಟುಂಬಗಳಲ್ಲಿ ಪ್ರಶ್ನಿಸಿದಾಗ ಅವರು ಈ ರೀತಿಯಾಗಿ ವಿವರಿಸುತ್ತಾರೆ. “ನಾನು ಐದನೆ ತರಗತಿಯವರೆಗೆ ಗೆಳತಿಯರ ಜೊತೆಗೆ ಶಾಲೆಗೆ ಹೋಗುತ್ತಿದ್ದೆ ಅದೇ ವರ್ಷ ಪರೀಕ್ಷೆಯಲ್ಲಿ ಪಾಸಾದೆ, ಮುಂದೆ ಶಾಲೆ ಕಲಿಯುವ ಮನಸ್ಸು ನನ್ನಲ್ಲಿ ಇದ್ದರು ನನ್ನ ತಂದೆ ತಾಯಿ ಶಾಲೆಗೆ ಹೋಗುವುದು ಬಿಡಿಸಿದರು. ಯಾಕೆಂದರೆ ತಾಯಿ ಜೊತೆಗೆ ಮನೆಯಲ್ಲಿ ಹೊಲದಲ್ಲಿ ಕೆಲಸ ಮಾಡಲಿಕ್ಕೆ ಹಚ್ಚಿದರು. ತಾಯಿ ಜೊತೆಗೆ ಬೆಳಿಗ್ಗೆ ಎದ್ದು ನಮ್ಮ ಅವ್ವ ರೊಟ್ಟಿ ಹಂಚು ತೊಳೆದುಕೊಂಡು, ರೊಟ್ಟಿಮಾಡಲಿಕ್ಕ ಕುಳಿತಳೆಂದರೆ ನಾನು ಇನ್ನೂಳಿದ ಕಸ ಮುಸುರಿ ಕೆಲಸ ಮಾಡಲು ಸಹಕರಿಸಬೇಕಾಗುತ್ತಿತ್ತು. ಹೀಗೆ ನಮ್ಮ ತಾಯಿ ಜೊತೆಗೆ ಕೆಲಸ ಮಾಡಿದರೆನೇ ಬೇಗ ಕೆಲಸ ಮುಗಿದು ಕೂಲಿ ಮಾಡಲಿಕ್ಕೆ ನಮ್ಮವ್ವ ಹೋಗುತ್ತಿದ್ದಳು. ಆಕೆಯ ಜೊತೆಗೆ ಎರಡು ಸಣ್ಣಕುರಿಮರಿಗಳು ಇದ್ದವು. ಅವುಗಳನ್ನು ಹೊಲದಲ್ಲಿ ನಿಂತುಕೊಂಡು ಬೆಳೆ ತಿನ್ನದಂತೆ ನೋಡಿಕೊಂಡು ಸಾಕಬೇಕಾಗಿತ್ತು. ಇದೇ ರೀತಿಯಾಗಿ ನಮ್ಮವ್ವನ ಸಂಗಡ ಇದ್ದುಕೊಂಡು ಕೆಲಸ ಮಾಡುತ್ತಿನಿ, ನಮ್ಮಂತ ಬಡವರ ಮಕ್ಕಳು ಶಾಲೆ ಕಲಿತರ ಸರಕಾರಿ ನೌಕರಿ ಸಿಗಲ್ಲ. ಅದು ಇದ್ದವರ ಪಾಲು ಅಂತ ನಮ್ಮವ್ವ ನನಗೆ ಆಗಾಗ ಹೇಳತ್ತಿರುತ್ತಾಳೆ ಮತ್ತು ನಮ್ಮ ಮನೆಗೆ ನಾನೊಬ್ಬಳೇ ಮಗಳು ಶಾಲೆ ಕಲಿಸಿ ಮುಂದ ದೂರ ಹೋಗುವುದು ಇಷ್ಟವಿಲ್ಲ ನಮ್ಮ ತಾಯಿಗೆ, ಹಾಗೂ ಇವತ್ತಿಗೆ ಶಾಲೆ ಬಿಟ್ಟು ಐದುವರ್ಷ ಆಯಿತು. ಇವತ್ತಿನವರೆಗೂ ನನಗೆ ಬೇರೆಯವರ ಹೊಲಕ್ಕೆ ಕೂಲಿಗಿ ಕಳಸಿಲ್ಲ. ನಮ್ಮ ತಂದೆ ತಾಯಿಯರೇ ದುಡಿತಾರೆ ಇದರಿಂದ ನಾನು ಅವರಲ್ಲಿ ಏನು ಕೇಳುವುದಿಲ್ಲ. ಬರುವ ವರ್ಷ ನನ್ನ ಮದುವಿ ಮಾಡಬೇಕಂತ ಸೂದರಮಾವನ ಜೊತೆಗೆ ಮಾತುಕತೆ ಗಟ್ಟಿಯಾಗ್ಯಾದ (ನಿಶ್ಚಿತಾರ್ಥ) ಏನ್ ಮಾಡೋದು ನಮ್ಗ ಬಡತನ ಬಿಟ್ಟಿಲ್ಲ. ಬಹಳ ಕಷ್ಟದಾಗ ಜೀವನ ಮಾಡ್ತಾಯಿದ್ದಿವಿ ಎಂದು ಸಣ್ಣ ಮುಖಮಾಡಿ ಮಾತು ಮುಗಿಸಿದಳು.”[೧೫]

ಇದು ಕೇವಲ ಒಬ್ಬಳ ಕಥೆಯಲ್ಲ. ನಮ್ಮ ಸಮುದಾಯದ ಬಹುತೇಕ ಮಹಿಳೆಯರು ಕೇವಲ ೧ ರಿಂದ ೫ನೇ ತರಗತಿಯ ಶಿಕ್ಷಣಕ್ಕೆ ಕೊನೆ ಹಾಡಿದವರು ಸಿಗುತ್ತಾರೆ. ಇದಕ್ಕೆ ಮೂಲ ಕಾರಣವೂ ಇದೇ ಮೊದಲಿಗೆ “ನಮ್ಮ ಹಿರಿಕರು ಮಾಡಿದ ಅಸಡ್ಡೆಯಿಂದ ಮಹಿಳೆಯರು ಶಾಲೆಗಳಿಂದ ವಂಚಿತವಾಗಿ ಯಾವಾಗ ಅವರ ಕೈಯಲ್ಲಿದ್ದ ಸ್ಲೇಟು (ಪಾಟಿ) ಬಳಪಗಳನ್ನು ಬಿಡಿಸಿ ಕುರಿ ಕಾಯಲು, ಮನೆಗೆ ಕಟ್ಟಿಗೆ ತರಲು, ಬಟ್ಟೆ ತೊಳೆಯಲು, ಮನೆಯಲ್ಲಿ ಕಸಗುಡಿಸಲು ಜೊತೆ ನೆಲಸಾರಿಸಿ ಸುಂದರಗೊಳಿಸಲು ಮತ್ತು ಮಕ್ಕಳನ್ನು ಹೆತ್ತಾಡಿಸಲು ಇನ್ನು ಮುಂತಾದ ಕೆಲಸಗಳನ್ನು ಕೊಟ್ಟು ಮಹಿಳೆಯ ಮುಂದಿನ ಜೀವನಕ್ಕೆ ಹೇಗೆ ತಯಾರಿ ಮಾಡಿಕೊಳ್ಳಬೇಕೆಂದು ಮನೆಯಲ್ಲಿ ಚಿಕ್ಕಮಯಸ್ಸಿ ನಿಂದಲೇ ತರಬೇತಿಯನ್ನು ನೀಡುವುದು ಇವರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಮಗಳು ಯಾವಾಗ ಈ ಎಲ್ಲಾ ಕೆಲಸಗಳನ್ನು ಕಲಿಯುತ್ತಾಳೋ ಅಂದೇ ಅವಳನ್ನು ಮುಂದಿನ ಗೃಹಣೀಯಾಗಿ ಮನೆಗೆಲಸ ಮಾಡುವಂತಹ ಕನಸು ಕಾಣುತ್ತಾರೆ. ಈ ಮೂಲ ಪ್ರವೃತ್ತಿಯೇ ನಮ್ಮ ಮಹಿಳೆಯರ

ಭವಿಷ್ಯದ ಬದುಕು ಕಸಿದುಕೊಳ್ಳುತ್ತಿದೆ. ಈ ಪ್ರಕಾರವಾಗಿ ನಮ್ಮ ಬುಡಕಟ್ಟು ಸಮುದಾಯದ ಮಹಿಳೆಯರಲ್ಲಿ ಹಾಗೂ ನಮ್ಮಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಮೂಡಸದೆ ಇರುವುದರಿಂದ ಮಹಿಳೆಯರು ಅಕ್ಷರಭ್ಯಾಸದಿಂದ ವಂಚಿತರಾಗುತ್ತಿದ್ದಾರೆ ಎಂದು ರಾಯಚೂರು ಕ್ಷೇತ್ರಕಾರ್ಯದ ಸಂದರ್ಶನದಲ್ಲಿ ಸಮುದಾಯದ ವಕ್ತೃಗಳು ಹೇಳಿರುವುದುಂಟು.''[೧೬]

ಹೀಗೆ ಒಂದು ಬುಡಕಟ್ಟು ಸಮುದಾಯವು ಶಿಕ್ಷಣದಿಂದ ವಂಚಿತವಾಗಿ ಅದು ಸಮಾಜದ ಮುಖ್ಯವಾಹಿನಿಗೆ ಬರದೆ ಸಮಾಜದ ಅಂಚಿಗೆ ತನ್ನಷ್ಟಕ್ಕೆ ತಾನೇ ದೂರವಾಗುತ್ತದೆ. ಹಾಗೂ ಸರಿದು ಕೊಳ್ಳುತ್ತದೆ ಎಂದು ಹೇಳಬಹುದು. ಸಧ್ಯದಲ್ಲಿ ಇವರು ಮುಖ್ಯವಾಹಿನಿಗೆ ಬರಲು ಆಗುತ್ತಿಲ್ಲ. ಅದರ ಹಿಂದಿರುವ ಕಾರಣಗಳು ಸಹ ಗಮನಿಸಿದರೆ ಪ್ರತಿಯೊಬ್ಬರಿಗೆ ಶಿಕ್ಷಣವು ಏನಕ್ಕೆ ಅಗತ್ಯ ಅದರಿಂದಾಗುವ ಪ್ರಯೋಜನೆಗಳು ಏನು ಎನ್ನುವಂತಹ ತಿಳುವಳಿಕೆ ಮಾಹಿತಿಯನ್ನು ನೀಡುವವರು ಇವರಲ್ಲಿ ಕಂಡುಬರುವುದಿಲ್ಲ. ಮಕ್ಕಳು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ನಂತರ ಮುಂದೆ ಯಾವುದನ್ನು ಓದಬೇಕು. ಅವರ ತಿಳುವಳಿಕೆಗೆ ಯಾವ ಮಾರ್ಗ ಸೂಕ್ತವಾದುದು. ಯಾವ ವಿಷಯವನ್ನು ಆಯ್ಕೆ ಮಾಡಿಕೊಂಡರೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಹೀಗೆ ಹತ್ತು ಹಲವು ವಿಷಯಗಳನ್ನು ಕುರಿತು ಚಿಂತಿಸುವವರು ಮಾರ್ಗದರ್ಶನ ಮಾಡುವರು ವಿದ್ಯಾವಂತರು ಈ ಸಮುದಾಯದಲ್ಲಿ ತುಂಬಾ ಕಡಿಮೆ ಎಲ್ಲೋ ಒಬ್ಬಿಬ್ಬರಿದ್ದರು. ಅವರ ಕೆಲಸ ಕಾರ್ಯಗಳಲ್ಲಿ ತಲ್ಲೀನರಾಗಿರುತ್ತಾರೆ. ಇಂತಹ ಸಮಯದಲ್ಲಿ ಕಲಿಯುವವರು ಕಲಿತವರ ಹತ್ತಿರ ಹೋಗಲು ಹೆದರಿಕೆ ಮುಜುಗರ ಉಂಟಾಗಿ ಅರ್ಧಕ್ಕೆ ವಿದ್ಯಾಭ್ಯಾಸವನ್ನು ನಿಲ್ಲಿಸಿ ಕೃಷಿ, ಕೂಲಿ ಇತ್ಯಾದಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದುಂಟು. ಇವರು ಮುಖ್ಯವಾಗಿ ಮೊದಲು ಆರ್ಥಿಕವಾಗಿ ಕುಟುಂಬಗಳು ಸಬಲಗೊಂಡರೆ ಶೈಕ್ಷಣಿಕ ಸಾಮಾಜಿಕವಾಗಿ ಮುಂದುವರೆಯಲು ಸಾಧ್ಯ.

ಬೇಡ ಬುಡಕಟ್ಟು ಸಮುದಾಯದಲ್ಲಿ ಕೆಲವರು ಪಿ.ಯು.ಸಿ., ಬಿ.ಎ. ಓದಿರುವಂತಹ ಯುವಕ ಯುವತಿಯರಿಗೆ ಇಂದಿನವರೆಗೂ ಸರಕಾರದ ನೌಕರಿ ಸಿಗದೇ ಇರುವುದು ಸಮುದಾಯದ ಪಾಲಕರಲ್ಲಿ ಶಿಕ್ಷಣದ ಬಗ್ಗೆ ಅಸಡ್ಡೆ ಮೂಡಲು ಪ್ರಮುಖ ಕಾರಣವಾಗಿದೆ. ಇದರಿಂದ ನಾವು ಯಾಕೇ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು, ಶಿಕ್ಷಣ ಕೊಡಿಸಲು ನಾವುಗಳು ಎಷ್ಟೋ ತೊಂದರೆ ಪಟ್ಟು, ಕೂಲಿ ಮಾಡಿ, ಮನೆಯಲ್ಲಿ ಸಾಕಾಣಿಕೆ ಮಾಡಿದ ಕುರಿ, ಕೋಳಿ, ಮೇಕೆ ಅಷ್ಟೇ ಏಕೆ ಬೇರೆಯವರ ಹತ್ತಿರ ಸಾಲ ಮಾಡಿ ಕೊನೆಗೆ ಎತ್ತು ಎಮ್ಮೆನೋ ಮಾರಾಟ ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಮುಂದೆ ಅವರಿಗೆ ನೌಕರಿಗಳನ್ನು ಕೊಡುವವರು ಯಾರು, ಅವರಿಗೆ ಸಿಗುತ್ತವೆಯೇ ಎಂಬ ಪ್ರಶ್ನೆಗಳೊಂದಿಗೆ ಅಲ್ಲಿಯೂ ಸಲ್ಲದೆ ಇಲ್ಲಿಯೂ ಸಲ್ಲದೆ "ಅಗಸರ ನಾಯಿ ಹಳ್ಳನು ಕಾಯದೆ ಮನೆಯೂ ಕಾಯದೆ" ವ್ಯರ್ಥ ಸುತ್ತಾಡುವುದು ಬೇಡ ಎಂಬ ಕಾರಣದಿಂದ ಮಕ್ಕಳಿಗೆ ಶಿಕ್ಷಣ ಕೊಡಿಸದೆ ತಪ್ಪು ಮನೆ ಕೆಲಸದಲ್ಲಿ ತಂದೆ ತಾಯಿಗೆ ಸಹಾಯಕರಾಗಿ ತೊಡುಗುವಂತೆ ಒತ್ತಾಯಿಸುತ್ತಾರೆ.

ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಅವರು ಮನೆಗೆಲಸ ಕಲಿಯುವುದು ಯಾವಾಗ, ಅವಳ ಮುಂದಿನ (ಬಾವಿ) ಜೀವನ ರೂಢಿಗತ ಮಾಡಿಕೊಳ್ಳುವುದು ಯಾವಾಗ ಎನ್ನುವಂತ ಪ್ರತಿಧ್ವನಿಗಳು ಈ ಸಮುದಾಯದ ಮಹಿಳೆಯರ ಪಾಲಿಗೆ ದಿನಾಲು ಪುನರಾವರ್ತನೆ ಆಗಿರುತ್ತವೆ. ಆದರೆ ಗಂಡು ಮಗುವಿಗೆ ಇರುವಂತಹ ಅವಕಾಶಗಳು ಹೆಣ್ಣುಮಕ್ಕಳಿಗೆ ಇರುವುದಿಲ್ಲ. ಪುರುಷನಿಗೆ ಶಿಕ್ಷಣ ಕೊಡಿಸಿದರೆ ಮುಂದೆ ನಮ್ಮನ್ನು ನಮ್ಮ ಮನೆಯನ್ನು ನೋಡುತ್ತಾನೆ. ಅವನ ಮನಸ್ಸಿಗೆ ಎಷ್ಟು ವಿದ್ಯಾಭ್ಯಾಸ ಮಾಡಬೇಕೆಂತ ಆಸೆ ಇದೆಯೋ ಅಲ್ಲಿಯವರೆಗೆ ನಾವು ಕಷ್ಟಪಟ್ಟರು ಚಿಂತೆಯಿಲ್ಲ ಏನಾದರೂ ಮಾಡಿ ಶಿಕ್ಷಣ ಕೊಡುಸ್ತಿವಿ. ನೆರಳು ನಮ್ಮದಾಗುತ್ತದೆಯೇ ಎನ್ನುವಂತಹ ಪೂರ್ವಕಲ್ಪಿತ ನಂಬಿಕೆಗಳು ಪ್ರತಿಯೊಂದು ಕುಟುಂಬದ ತಂದೆ ತಾಯಿಯರ ದೃಢವಾದ ನಿರ್ಧಾರವಾಗಿದೆ.

ಇಂತಹ ಹಲವು ಸನಾತನ ನಂಬಿಕೆಗಳಿಂದ ಅನೇಕ ಕುಟುಂಬಗಳಲ್ಲಿ ಇರುವಂತಹ ಮಹಿಳೆಯರು ಪುರುಷನ ಸರಿಸಮಾನವಾಗಿ ಶಿಕ್ಷಣ ಪಡೆಯುವಲ್ಲಿ ದುರ್ಬಲಳು ಆಗಿರುವುದು ಆಗುತ್ತಿರುವುದು ಅಧ್ಯಯನ ಕ್ಷೇತ್ರದಲ್ಲಿ ಕಂಡಂತ ನಿಜದ ಸಂಗತಿಯಾಗಿದೆ. ನಮ್ಮ ಸರಕಾರವು ಪ್ರತಿನಿತ್ಯ, ಪ್ರತಿದಿನ ಎಲ್ಲರಿಗೂ ಶಿಕ್ಷಣ, ಸಮಾಜದ ಉನ್ನತೀಕರಣ, ಸಕಲರ ಏಳ್ಗೆಯೇ ನಮ್ಮ ಗುರಿ ಎನ್ನುವಂತಹ ಕೂಗುಗಳು ಪತ್ರಿಕೆ, ಆಕಾಶವಾಣಿ, ದೂರದರ್ಶನ ಹಾಗೂ ಸಭೆ ಸಮಾರಂಭಗಳಲ್ಲಿ ನೀಡುತ್ತಾರೆ. ಅದಕ್ಕೆ ಸಂಬಂಧಿಸಿದ ಬೃಹತ್ ಯೋಜನೆಗಳು ಜಾರಿಯಲ್ಲಿ ಇದ್ದಾವೆ, ಆದರೂ ಒಂದು ಸಮುದಾಯದ ಮಹಿಳೆಯ ಅಂತರ್ಗತ ನೋವುಗಳನ್ನು ಅರಿತುಕೊಳ್ಳುವಲ್ಲಿ ನಾವೆಲ್ಲರೂ ವಿಫಲರಾಗುತ್ತಿದ್ದೇವೆ. ಈ ಎಲ್ಲಾ ಕಾರಣಗಳಿಂದ ಬೇಡ ಬುಡಕಟ್ಟು ಸಮುದಾಯದ ಮಹಿಳೆ ಶೈಕ್ಷಣಿಕವಾಗಿ ಹಿಂದುಳಿದಿದ್ದಾಳೆ ಎಂದು ಹೇಳಬಹುದು.

೪.೪. ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಸ್ಥಾನಮಾನ

ಭಾರತದ ರಾಜಕೀಯ ವ್ಯವಸ್ಥೆಯು ಶಕ್ತಿ ಮತ್ತು ಹಣವುಳ್ಳ ಸಮೂಹಗಳಿಗೆ ಮಾತ್ರ ಅಧಿಕಾರ ಎಂಬುವುದು ಒಂದು ಅನುಶಾಸನ ಮೌಖಿಕ ಅರ್ಥವಂತಿಕೆಯಾಗಿ ನಮ್ಮಲ್ಲಿ ಮುಂದುವರಿಯುತ್ತಿದೆ. ಇಂತಹ ಸಂದರ್ಭದಲ್ಲಿ "ರಾಜಕೀಯವೆಂಬುದು ವ್ಯಕ್ತಿಯೊಬ್ಬನು ತನ್ನ ಗುರಿಗಮ್ಯತೆಯನ್ನು ಮುಟ್ಟುವ ಸಲುವಾಗಿ ಬಳಸುವ ತಂತ್ರಗಾರಿಕೆಯೆಂದು ಭಾವಿಸಲಾಗಿದೆ. ಈ ತಂತ್ರಗಾರಿಕೆಯನ್ನು ರೂಪಿಸುವ ಹಕ್ಕೆಲ್ಲ ಗಂಡಸಿನದೆ ಆಗಿರುವುದರಿಂದ ಆತನ ಹಿತಾಹಿತಗಳೇ ಚರಿತ್ರೆಯ ಏಳುಬೀಳುಗಳಿಗೆ ಕಾರಣವಾಗಿವೆ. ಲಿಂಗರಾಜಕಾರಣವೆಂಬುದು ಸಾಮಾಜಿಕ ಸಾಂಸ್ಕೃತಿಕ ನೆಲೆಗಟ್ಟನ್ನು ಹೊಂದಿದಾಗ ಹೊರಡುವ ಧ್ವನಿಗೂ ಮತ್ತು ಆರ್ಥಿಕ ಶಕ್ತಿಯನ್ನು ಒಳಗೊಂಡ ಹಾಗೇ ಹೊರಡುವ ಧ್ವನಿಗೂ ವ್ಯತ್ಯಾಸವಿರುತ್ತದೆ. ಸಾಂಸ್ಕೃತಿಕ ಲಿಂಗರಾಜಕಾರಣ ಆರ್ಥಿಕ ಆಸ್ತಿಭಾರದ ಮೇಲೆ ಮೈದಳೆದ ಕಾರಣ ಬಲಿಷ್ಠರು ಮಾತ್ರ ಬದುಕುವ ಹಾದಿಗಳನ್ನು ಇಲ್ಲಿ ತೋರಿಸಲಾಗಿದೆ. ಲಿಂಗರಾಜಕರಾಣದ ಜೊತೆಗೆ ಶಕ್ತಿರಾಜಕಾರಣವೆಂಬುದು ಸೇರಿಕೊಂಡು ರಾಜಕೀಯ ಕ್ಷೇತ್ರವನ್ನು ಪುರುಷಮಯವಾಗಿಸಿದೆ. ಅಧಿಕಾರದ

ಗದ್ದುಗೆಗೆ ಬಲಿಷ್ಟ ಗಂಡಸಿನ ವಾರಸುದಾರಿಕೆಯಿಲ್ಲವೆಂದಾಗ ಮಾತ್ರ ಅದೇ ಮೂಲದ ಹೆಣ್ಣನ್ನು ಮುಂಚಾಚುತ್ತದೆ. ಹೀಗಾಗಿಯೇ ಕಿತ್ತೂರು ರಾಣಿ ಚೆನ್ನಮ್ಮನಿಂದ ಪ್ರಾರಂಭಿಸಿ ಇಂದಿರಾಗಾಂಧಿಯನ್ನು ಒಳಗೊಂಡ ಹಾಗೆ ಇಂದಿನ ರಾಜಕೀಯ ರಂಗದಲ್ಲಿ ಚಲಾವಣೆಯಲ್ಲಿರುವವರನ್ನು ಗಮನಿಸಬಹುದು. ಜೊತೆಗೆ ಇವರನ್ನೆಲ್ಲ ಭಾರತೀಯ ನಾರಿಯರ ಶ್ರೇಷ್ಟ ಸ್ಥಾನಮಾನಕ್ಕೆ ನಿದರ್ಶನವಾಗಿ ದಾಖಲಿಸುತ್ತ ಬರೆಯಲಾಗಿದೆ"[೧೮] ಹೀಗಾಗಿ ಕೆಳವರ್ಗದ ಜಾತಿ/ವರ್ಗಗಳಲ್ಲಿ ಶಿಕ್ಷಿತ ಜನಸಂಖ್ಯೆಯೂ ಕಡಿಮೆ ಇದ್ದು ಜೊತೆಗೆ ಆರ್ಥಿಕ ಪರಿಸ್ಥಿತಿಯು ತುಂಬಾ ಹೀನಾಯ ಸ್ಥಿತಿಯಲ್ಲಿರುವುದರಿಂದ ಇವರ ರಾಜಕೀಯ ಅವಕಾಶದ ಮಾತು ನಿರರ್ಥಕವೇ ಸರಿ.

ಅನಕ್ಷರಸ್ಥರೇ ಅಧಿಕವಾಗಿರುವ ಬೇಡ ಬುಡಕಟ್ಟು ಸಮುದಾಯಕ್ಕೆ ಸೌಲಭ್ಯ ಎಂದರೇನು, ಸರಕಾರ ಎಂದರೇನು, ರಾಜಕೀಯ ಎಂದರೇನು ಅರ್ಥಮಾಡಿಕೊಳ್ಳಲು ಹೋಗದೆ ತಮ್ಮ ದೈನಂದಿನ ಕೌಟುಂಬಿಕ ಹೊಣೆಗಾರಿಕೆಯನ್ನು ತೂಗಿಕೊಂಡು ಮುಂದೆ ನೆಡೆಯುವುದರಲ್ಲಿ ಇವರು ತೃಪ್ತರಾಗಿ ನಾಳಿನ ಚಿಂತೆ ಏಕೆ ಎಂದು ಇರುವುದರಲ್ಲೇ ಜೀವನ ನಡೆಸುವ ಅರೆಹೊಟ್ಟೆಯಲ್ಲಿ ಜೀವನ ಸಾಗಿಸುವುದನ್ನು ಇಂದು ನಾವು ಕಾಣಬಹುದು. ಇಂಥ ಸಂದರ್ಭದಲ್ಲಿ ಯಾವುದೇ ಒಂದು ಸಮುದಾಯಕ್ಕೆ ಸೌಲಭ್ಯ ಸವಲತ್ತುಗಳು ಸಿಗಬೇಕೆಂದರೆ ಇವರು ತಮ್ಮ ಪವಿತ್ರವಾದ ಮತಗಳನ್ನು ಬಲಿಷ್ಠ ಜಾತಿಗಳಿಗೆ ಮಾರಾಟ ಮಾಡಬೇಕು. ಇಲ್ಲಾ ಸರ್ಕಾರ ಇವರ ಮೇಲೆ ಕರುಣೆಯನ್ನು ತೋರಬೇಕು. ಹಾಗಾದಾಗ ಮಾತ್ರ ಏನಾದರು ಅಲ್ಪಸ್ವಲ್ಪ ಸೌಲಭ್ಯ ಸಿಗಲು ಸಾಧ್ಯವೆಂದು ಹೇಳಬಹುದು.

"ಭಾರತದ ಸಂದರ್ಭದಲ್ಲಿ ಪ್ರಭುತ್ವದ ಹಕ್ಕುಗಾರಿಕೆಯೆಂಬುದು ವಂಶ ಮತ್ತು ಕುಲಾ ಆಧರಿತವಾಗಿತ್ತು. ಇಂತಹ ಹಳೆಯ ಪಾತ್ರೆಯಲ್ಲಿಯೇ ಪ್ರಜಾಪ್ರಭುತ್ವವೆಂಬ ಮಧ್ಯವನ್ನು ಸುರಿಯಲಾಗಿದೆ ಎಂಬುದಕ್ಕೆ ಸಮಕಾಲೀನ ರಾಜಕೀಯ ನಿದರ್ಶನವಾಗಿದೆ. ಅಧಿಕಾರ ಎಂಬುದು ಶಕ್ತಿಗೆ ಸಂಬಂಧಿಸಿದ್ದು ಎಂಬುದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ನಿದರ್ಶನಗಳಿವೆ. ಶಕ್ತಿ ಮತ್ತು ಯುಕ್ತಿಬಳಸಿ ಅಧಿಕಾರ ಹೊಂದುವ ಪ್ರಸಂಗದಲ್ಲೆಲ್ಲ ಜಾತಿ, ಕುಲ, ಧರ್ಮ, ಲಿಂಗವೆಂಬುವುಗಳೆಲ್ಲ ಗೌಣವಾಗಿರುತ್ತವೆ. ರಾಜಕೀಯ, ರಾಜಕಾರಣ, ಅಧಿಕಾರ ಇವುಗಳೊಳಗೆ ಅವಿನಾಭಾವ ಸಂಬಂಧವಿದೆ. ರಾಜಕೀಯವೆಂಬುದು ಸಮೂಹ ನೆಲೆಯಲ್ಲಿ ಕ್ರಿಯಾಶೀಲವಾದರೆ ರಾಜಕಾರಣವೆಂಬುದು ವ್ಯಕ್ತಿನೆಲೆಯಲ್ಲಿ ಉಸಿರಾಡುತ್ತದೆ. ಸಾಮೂಹಿಕ ನೆಲೆಯಲ್ಲಿ ಒಂದು ನಿರ್ದಿಷ್ಟ ಉದ್ದೇಶ, ಗುರಿಗಾಗಿ ಸಾಮೂಹಿಕ ತಂತ್ರಗಾರಿಕೆಯ ಮೂಲಕ ಅಧಿಕಾರ ಕೇಂದ್ರಕ್ಕೆ ಹತ್ತಿರವಾಗುವುದೆಲ್ಲ ರಾಜಕೀಯವೆನಿಸಿಕೊಳ್ಳುತ್ತದೆ. ಇಲ್ಲಿ ಪಕ್ಷಸಿದ್ಧಾಂತ, ಗುರುತು, ಮತ ಚುನಾವಣೆಗಳೆಂಬವುಗಳೆಲ್ಲ ಉಪಕರಣಗಳಾಗುತ್ತವೆ. ಆದರೆ ರಾಜಕಾರಣವೆಂಬುದು ವ್ಯಕ್ತಿಯೊಬ್ಬನು ತನ್ನ ಹಿತ, ಗುರಿ, ಉದ್ದೇಶಕ್ಕಾಗಿ ರೂಪಿಸಿಕೊಳ್ಳುವ ತಂತ್ರಗಾರಿಕೆಯಾಗಿದ್ದು ಇದಕ್ಕೆ ರಾಜಕೀಯದ ಉಪಕರಣಗಳ ಅಗತ್ಯವಿಲ್ಲ. ಈ ಸ್ಥಾನದಲ್ಲಿ ಕುಲ, ಲಿಂಗ, ತೋಳ್‌ಬಲ, ಹಣ

ಬಲವೆಲ್ಲ ಮುನ್ನೆಲೆಗೆ ಬರುತ್ತದೆ. ಚರಿತ್ರೆಯಲ್ಲಿ ಹೆಣ್ಣು ನೇರವಾಗಿ ರಾಜಕೀಯ, ರಾಜಕಾರಣ ಮಾಡಿದ ಉದಾಹರಣೆಗಳು ತುಂಬಾ ಕಡಿಮೆ. ಆದರೆ ಅನ್ಯ ಕಾರಣಗಳಿಂದ, ಅನ್ಯರ ಮೂಲಕ ರಾಜಕೀಯ ರಂಗದಲ್ಲಿ ದಾಳದಂತೆ ಬಳಸಲ್ಪಟ್ಟಿರುವಳು. ಚಕ್ರವರ್ತಿಯನ್ನು ಹೆತ್ತುಕೊಡುವ ಮತ್ತು ಬೆಳಸಿಕೊಡುವ ಅತ್ಯುತ್ತಮ ಸೇವಕಿ ಹೆರಿಗೆಯಂತ್ರದಂತೆ ಹಾಗೂ ರಾಜಕೀಯ ನೆಲೆಯಲ್ಲಿ ಎದುರಾಳಿಯನ್ನು ಸದೆ ಬಡಿಯುವಲ್ಲಿ ಸಮರ್ಥವಾಗಿ ಬಳಸಲ್ಪಡುವ ಆಯುಧದಂತೆಯೂ ಹೆಣ್ಣು ಕಾಣಿಸಿಕೊಂಡಿದ್ದಾಳೆ."[೧೮] ಉದಾಹರಣೆಗಾಗಿ ಅನಿತಾ ಕುಮಾರಸ್ವಾಮಿ, ಸಂದರ್ಭದ ಸವಲತ್ತನ್ನು ಪಡೆದುಕೊಂಡವರು. ಮೇಲ್ನಾಗಿ ಪುರುಷನಿಷ್ಠ ತತ್ವಗಳಿಗೆ ಒಪ್ಪಿಕೊಂಡು ರಾಜಕಾರಣಕ್ಕೆ ಪ್ರವೇಶ ಪಡೆದುಕೊಂಡವರು.

"ವರ್ತಮಾನದ ಪುರುಷ ಪ್ರಧಾನ್ಯ ರಾಜಕೀಯ, ರಾಜಕಾರಣದಲ್ಲಿ ಮಹಿಳೆಯೂ ಸಾಧನ ಸರಕು ಆಗಿರುವುದಕ್ಕೆ ವ್ಯವಹಾರ ಆದರಿತ ಹಿತದ ಹುನ್ನಾರವೂ ಇದೆ. ಪಕ್ಷ ರಾಜಕಾರಣದ ಸಂದರ್ಭದಲ್ಲಿ ಮಹಿಳಾ ಮತಗಳ ಮೇಲೆ ಕಣ್ಣಿಟ್ಟವರು ಮಹಿಳಾ ಮೀಸಲಾತಿ, ಮಹಿಳಾ ಸಮಾನತೆಯನ್ನು ಪ್ರಣಾಳಿಕೆಯಲ್ಲಿ ಆದ್ಯತೆಯ ವಿಷಯವನ್ನು ದೊಡ್ಡದಾಗಿ ಮಾಡಿಕೊಂಡು ಕಳೆದ ಹಲವು ವರ್ಷಗಳಿಂದ ರಂಪಾಟ ಮಾಡುತ್ತಿರುವರು, ಆದರೆ ಇಂದಿಗೂ ಯಾವುದೇ ಪಕ್ಷ ಚುನಾವಣೆಯ ಟಿಕೇಟು ಹಂಚಿಕೆಯಲ್ಲಿ ಕುಲ ಮತ್ತು ಹಣವನ್ನು ಪ್ರಮುಖ ಮಾನದಂಡವನ್ನಾಗಿ ಮಾಡಿಕೊಂಡಿವೆ"[೧೯] ಟಿಕೇಟ್ ವಿಂಗಡಣೆ ಸಮಯದಲ್ಲಿ ಮೀಸಲಾತಿ ಅನ್ವಯ ಇಂತಿಷ್ಟು ಮಹಿಳೆಯರಿಗೆ ಎಂದು ಬಾಯಿ ಬಿಡುವುದಿಲ್ಲ. ಇದೇ ಸಂದರ್ಭದಲ್ಲಿ ಅನುಕಂಪ ಪ್ರೇರಿತ ಮತಗಳು ಬರುವಂತಿದ್ದರೆ ಗಂಡಸು ರಾಜಕಾರಣಿ ಸತ್ತ ಮನೆಯಿಂದ ಮಹಿಳೆಯನ್ನು ಹೊತ್ತು ತರುತ್ತಾರೆ. ಉದಾಹರಣೆಗೆ ಮದ್ದೂರು ಕ್ಷೇತ್ರದಿಂದ ಕಲ್ಪನಾ ಸಿದ್ಧರಾಜು ಆಯ್ಕೆ ಆಗಿರುವುದು ಇದರ ಹಿಂದೆ ಮಹಿಳಾ ಮೀಸಲು ರಾಜಕಾರಣವಲ್ಲ. ಅದರಲ್ಲಿ ಪುರುಷ ನಿಷ್ಠ ರಾಜಕೀಯವಿದೆ.

"ಸ್ವಾತಂತ್ರ್ಯ ನಂತರದ ಭಾರತದ ರಾಜಕೀಯ ಇತಿಹಾಸವನ್ನು ಒಮ್ಮೆ ಗಮನಿಸಿದರೆ ಪ್ರಜಾಪ್ರಭುತ್ವವನ್ನು ಮೀರಿಸವಂತೆ ಲಿಂಗವಿರೋಧಿ ತತ್ವವನ್ನು ಯಥೇಚ್ಛವಾಗಿ ಪಾಲಿಸಿಕೊಂಡು ಬರಲಾಗಿದೆ. ಅದರಲ್ಲಿ ರಾಜ್ಯಸಭೆ, ಲೋಕಸಭೆಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ಯ ವ್ಯವಸ್ಥೆಯ ಬುನಾದಿಗಳಾದ ಗ್ರಾಮ ಪಂಚಾಯತ್‌ಗಳು ಶಕ್ತಿ ಕೇಂದ್ರಗಳಂತೆ ಕಾಣಿಸಿಕೊಂಡಿರುವುದರಿಂದ ಸಾಂಸ್ಕೃತಿಕ ಮತ್ತು ಆರ್ಥಿಕ ಬಲಿಷ್ಠತೆಯ ಲಿಂಗರಾಜಕಾರಣವನ್ನು ಎಗ್ಗಿಲ್ಲದೆ ಬಳಸುತ್ತಿವೆ. ಇಂತಹ ಸ್ವರೂಪದ ಭಾಗವಾಗಿಯೇ ಇಲ್ಲಿಯ ಮಹಿಳಾ ಆಕೃತಿಗಳು ಹುಟ್ಟಿಕೊಂಡಿವೆ."[೨೦] ದುರಂತವೆಂದರೆ ಇವರಲ್ಲಿ ಸ್ತ್ರೀಯಾತ್ಮಕ ಆಕೃತಿಗಳು ರಾಜಕೀಯ ಉದ್ಯಮದಲ್ಲಿ ಚಲಾವಣೆಗೊಳ್ಳಲು ಸಾಧ್ಯವಾಗದೆ ಹೋಗಿರುವುದರಿಂಧ ಸಂವಿಧಾನಾತ್ಮಕವಾಗಿರುವ ಮಹಿಳಾ ಕಾನೂನುಗಳು ಹಲ್ಲುಕಿತ್ತ ಹಾವಿನಂತಿವೆ.

ಮಹಿಳೆಯ ರಾಜಕೀಯ ಪ್ರವೇಶ ಬಲಪಡಿಸುವ ಪುರುಷ ನಿಷ್ಠವು ಪ್ರಮುಖವಾಗಿ ಲಿಂಗರಾಜಕಾರಣವನ್ನು ಒಳಗೊಂಡಿದೆ ಎಂದು ಹೇಳಬಹುದು. ಅದರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ

ಮಹಿಳಾ ಮೀಸಲಾತಿ ದೊರೆತ ನಂತರ ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಸಾವಿರಾರು ಜನ ಮಹಿಳೆಯರು ಈ ಕ್ಷೇತ್ರದಲ್ಲಿ ಕಾಣಿಸಿಕೊಂಡಿರುವವರು ಮೊದಲ ಹಂತದಲ್ಲಿ ಹೊರಬಂದ ಇಷ್ಟೊಂದು ಬೃಹದಾಕಾರದ ಮಹಿಳೆಯರ ಭಾಗವಹಿಸುವಿಕೆಯನ್ನು ಸ್ವಾಗತಿಸಬೇಕೆ ಹೊರತು ಅನುಮಾನಿಸುವುದಲ್ಲ ನಂತರ ಇವರ ನಡಿಗೆಯನ್ನು ಗಮನಿಸಬೇಕು. "ಇಡೀ ಸಮಾಜವನ್ನು ಕಾಡುವ ಅನಕ್ಷರತೆ, ಅಜ್ಞಾನ, ಬಡತನದಿಂದ ಈ ಮಹಿಳಾ ಸಮುದಾಯ ಹೊರತಾಗಿಲ್ಲ. ಪರಂಪರಾಗತವಾಗಿ ಅನ್ಯಾಶ್ರಯವೇ ಸುರಕ್ಷಿತವೆಂದು ಭಾವಿಸಿರುವ ಮಹಿಳೆಯರು ತಕ್ಷಣಕ್ಕೆ ಹೊರ ಜಗತ್ತಿನಗೆ ತೆರೆದುಕೊಳ್ಳುವಾಗಿನ ಸಂಕಷ್ಟ ಅರ್ಥ ಮಾಡಿಕೊಳ್ಳಬೇಕಾಗಿದೆ. ಪಿತೃಸತ್ತೆ ಮತ್ತು ಅಧಿಕಾರ ಸತ್ತೆಯು ಇಬ್ಬಾಯ ಖಡ್ಗದ ಮೇಲೆ ನಡೆಯಬೇಕಾಗಿರುವ ಮೀಸಲಾತಿ ಫಲಾನುಭವಿ ಮಹಿಳೆಯರಿಂದ ದಿಢೀರನೆ ಮಹತ್ತರವಾದದ್ದನ್ನು ಮಾಡುತ್ತಾಳೆ. ಮಾಡಬೇಕೆಂಬುದೆಲ್ಲ ಆದರ್ಶವೇ ಹೊರತು ವಾಸ್ತವವಲ್ಲ."[೨೧]

ಈ ರೀತಿಯಾದ ಹಲವು ಪುರುಷನಿಷ್ಠ ಹುನ್ನಾರಗಳಿಂದ ರೂಪಿತವಾಗಿರುವ ರಾಜಕೀಯದಲ್ಲಿ ಮೀಸಲಾತಿ ಅನ್ವಯ ಮಹಿಳೆಯರು ಇದ್ದರು ಸಹ ಬುಡಕಟ್ಟು ಸಮುದಾಯಗಳಿಗೆ ಹೆಚ್ಚಿನ ಸೌಲಭ್ಯ ಒಂದೆಡೆ ಇರಲ್ಲ. ಮೂಲಭೂತವಾದ ಅವಕಾಶಗಳು ಪಡೆದುಕೊಳ್ಳುವುದು ಸಂಶಯದ ಮಾತೆ ಸರಿ. ಈ ಕುರಿತು ರಾಮಮನೋಹರ ಲೋಹಿಯಾರವರು ಹೀಗೆ ತಿಳಿಸುತ್ತಾರೆ. "ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕಾಗಿದೆ. ಸಮಿತಿಗಳನ್ನು ರಚಿಸುವಾಗ ಗಿರಿಜನ, ಹರಿಜನ ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಏಕೆಂದರೆ ಇವರಲ್ಲಿ ನೂರಾರು ಬಗೆಯ ಸಮಸ್ಯೆಗಳಿವೆ, ಅವರ ಕೇರಿಗಳಿಗೆ ಒಳ್ಳೆಯ ರಸ್ತೆಗಳು, ಸೂಕ್ತ ಬೆಲೆಗೆ ಕಚ್ಚಾ ಸಾಮಗ್ರಿಗಳು ದೊರೆಯಬೇಕು. ಪೋಲೀಸರ ದಬ್ಬಾಳಿಕೆ ಇವರ ಮೇಲೆ ನಿಲ್ಲಬೇಕು, ಇವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು"[೨೨]

ಬಹುತೇಕ ನಿರ್ಲಕ್ಷಿತ ಬುಡಕಟ್ಟು ಸಮುದಾಯಗಳು ರಾಜ್ಯದಲ್ಲಿ ಇನ್ನೂ ಅನೇಕ ಇವೆ. ಅವುಗಳು ಇರುವ ಕುರಿತು ಸರಕಾರ ಗಮನ ಹರಿಸುತ್ತಿಲ್ಲ. ಅಂತಹ ನಿರ್ಭಾಗ್ಯ ಬುಡಕಟ್ಟುಗಳು ಸ್ವತಃ ತಾವು ನಿರ್ಲಕ್ಷಿತರು ಎಂದು ಹೇಳಿಕೊಳ್ಳಲೂ ಗಂಟಲಿಲ್ಲದ ಅಸಹಾಯಕರಾಗಿದ್ದಾರೆ. ನಾಗರೀಕತೆಯ ಪ್ರಭಾವದಿಂದಾಗಿ ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವ ಸಮುದಾಯಗಳು ತಮ್ಮ ಮೂಲವೃತ್ತಿ ಬದುಕಿನ ಜಂಜಾಟಗಳಲ್ಲೆ ಕಾಲ ಕಳೆಯುತ್ತಿವೆ. ಇಂತಹ ಸಮುದಾಯಗಳಿಗೆ ಅನಕ್ಷರತೆಯು ಬಹುದೊಡ್ಡ ಶಾಪವಾಗಿದೆ. ಮೊದಲೆ ಆರ್ಥಿಕವಾಗಿ ಹಿಂದುಳಿದ ಸಮುದಾಯ ಅನಕ್ಷರತೆಯಿಂದ ಇನ್ನಷ್ಟು ಹಿಂದುಳಿದು ರಾಜಕೀಯ ಜ್ಞಾನ ಪಡೆಯುವಲ್ಲಿ ಎಷ್ಟುಕಾಲ ಹಿಡಿಯುತ್ತದೆಯೋ.

ಇಂದು ಕರ್ನಾಟಕದಲ್ಲಿ ರಾಜಕೀಯ ಮುಂದುವರೆಯುತ್ತಿರುವುದೇ ಜಾತಿಗಳ ಆಧಾರದ ಮೇಲೆ ಜನಸಂಖ್ಯಾ ದೃಷ್ಟಿಯಿಂದ ಬಹುಸಂಖ್ಯಾತವಾಗಿ, ಆರ್ಥಿಕತೆಯಿಂದ ಬಲಾಡ್ಯವಾದ ಜಾತಿಗಳು

ಸರ್ಕಾರದಿಂದ ಸಿಗುವ ಅಲ್ಪ ಅವಕಾಶಗಳು ತಮ್ಮದಾಗಿಸಿಕೊಳ್ಳುತ್ತಿವೆ. ಮತ್ತು ಅಂತಹ ಸಮುದಾಯದವರು ಇಂದು ತುಂಬಾ ಪ್ರಜ್ಞಾವಂತರಾಗಿದ್ದು ತಾವು. 'ಮತಗಳ ಕೇವಣಿ (Voting Bank) ಎಂಬುದನ್ನು ಸೂಚ್ಯವಾಗಿ ಆಡಳಿತರೂಢ ರಾಜಕೀಯ ಪಕ್ಷಗಳಿಗೆ ಎಚ್ಚರಿಕೆ ಕೊಡುವುದರ ಮೂಲಕ ತಮಗೆ ಬೇಕಾದ ಸೌಲಭ್ಯಗಳು ಧಾರಣ ಮಾಡಿಕೊಳ್ಳುವ ಗುಣಗಳನ್ನು ಪಡೆದಿವೆ. ಆದರೆ ರಾಜ್ಯದಲ್ಲಿ ೨೦೦೧ರ ಜನಗಣತಿ ವರದಿ ಪ್ರಕಾರ ಇಡೀ ಪರಿಶಿಷ್ಟ ವರ್ಗಗಳಲ್ಲೆ ಜನಸಂಖ್ಯೆ ದೃಷ್ಟಿಯಿಂದ ಬಹುಸಂಖ್ಯಾತವಾಗಿರುವ ಬೇಡ ಬುಡಕಟ್ಟು ಸಮುದಾಯವು ಸಂಪೂರ್ಣವಾಗಿ ಅಕ್ಷರ ಜ್ಞಾನವಿಲ್ಲದೆ ಅತಂತ್ರ ಪರಿಸ್ಥಿತಿಯಲ್ಲಿದೆ. ಅದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣಕ್ಕಿಂತ ಮಹಿಳೆಯರ ಅಕ್ಷರ ಜ್ಞಾನವು ಹೇಳಿಕೊಳ್ಳುವ ಪ್ರಮಾಣದಲ್ಲಿ ಕಂಡುಬರುವುದಿಲ್ಲ.

ಇಂತಹ ಸಂದಿಗ್ಧ ಸಮಯದಲ್ಲಿ "ಅಶೋಕ ಮೆಹತಾ ಸಮಿತಿಯ ಸಿಫಾರಸ್ಸಿನಂತೆ ಕರ್ನಾಟಕ ಸರ್ಕಾರವು ೧೯೮೩ರಲ್ಲಿ ಕರ್ನಾಟಕ ಜಿಲ್ಲಾ ಪರಿಷತ, ತಾಲೂಕ್ ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಮಸೂದೆಯನ್ನು ಜಾರಿಗೊಳಿಸಿತು. ಗ್ರಾಮಗಳ ಮಟ್ಟದಲ್ಲಿ ಮಂಡಲ್ ಪಂಚಾಯತ್‌ಗಳು ಮತ್ತು ತಾಲೂಕು ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್‌ಗಳನ್ನು ಒಳಗೊಂಡ ಹೊಸ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದಿತು. ಈ ಸಂಸ್ಥೆಗಳಲ್ಲದೆ ಕಾಯಿದೆಯಲ್ಲಿ 'ಗ್ರಾಮಸಭೆ' (ಹಳ್ಳಿಸಭೆ) ಎಂಬ ಸಂಸ್ಥೆಗೂ ಅವಕಾಶ ಮಾಡಿ ಕೊಡಲಾಯಿತು. ಅದು ಮಂಡಲನ್ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಸರಕಾರಿ ಅಧಿಕಾರಿಗಳು ತನ್ನ ಸದಸ್ಯರಾಗಿ ಹೊಂದಿದೆ. ಈ ಸಂಸ್ಥೆ ೧.ಗ್ರಾಮದ ಅಭಿವೃದ್ಧಿ ಸಮಸ್ಯೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಚರ್ಚಿಸಬೇಕು ಮತ್ತು ಪರಾಮರ್ಶಿಸಬೇಕು ೨. ಫಲಾನುಭವಿ ಆಧರಿತ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ೩. ಗ್ರಾಮದ ಕನಿಷ್ಠ ಅಗತ್ಯತೆಗಳು ಜನಕಲ್ಯಾಣ ಹಾಗೂ ಉತ್ಪಾದನಾ ಆಧರಿತ ಚಟುವಟಿಕೆಗಳನ್ನು ಒಳಗೊಂಡಂತೆ ಜನರ ಮತ್ತು ಗ್ರಾಮದ ಆರ್ಥಿಕತೆಯ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸುವುದು ಮುಂತಾದ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಕಾಯಿದೆಯಲ್ಲಿ ನಿಗದಿಪಡಿಸಲಾಯಿತು. ಜನರು ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ನೀಡುವ ವೇದಿಕೆಯಾಗಬೇಕೆಂದೂ ಚುನಾಯಿತ ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ತಾವು ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ತಮ್ಮ ಜವಾಬ್ದಾರಿಯನ್ನು ಜನರಿಗೆ ವಿವರಿಸುವ ವೇದಿಕೆಯಾಗಬೇಕೆಂದೂ ಮತ್ತು ಆಡಳಿತದಲ್ಲಿ ಪಾರದರ್ಶಕತೆಯು ಇದರಿಂದ ಸಾಧ್ಯವಾಗಬೇಕೆಂದೂ 'ಗ್ರಾಮಸಭೆ'ಯನ್ನು ಪರಿಭಾವಿಸಿಕೊಳ್ಳಲಾಗಿದೆ"[೨೪] ೧೯೮೩ರ ಕಾಯಿದೆಯು ಅಸ್ತಿತ್ವಕ್ಕೆ ತಂದ ವಿಕೇಂದ್ರಿಕರಣ ವ್ಯವಸ್ಥೆಯು ನಿಜವಾಗಿ ಕ್ರಾಂತಿಕಾರಿಯಾಗಿತ್ತು. ಇದರಲ್ಲಿ ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗಗಳಿಗಾಗಿ ವ್ಯಾಪಕ ಮೀಸಲಾತಿ ಒದಗಿಸಲಾಯಿತು. ಇದರ ಅನ್ವಯ ಕರ್ನಾಟಕ ರಾಜ್ಯದ ಗ್ರಾಮ ಪಂಚಾಯತ, ತಾಲೂಕ ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಮಟ್ಟದಲ್ಲಿ

ಇಂದು ಬುಡಕಟ್ಟು ಮಹಿಳೆಯರು ಅಧಿಕಾರ ಆಡಳಿತದಲ್ಲಿ ಸಕ್ರಿಯವಾಗಿ ಪದಾರ್ಪಣೆ ಮಾಡಿದ್ದಾರೆ ಎಂದು ಹೇಳಬಹುದು. ಈ ಅಧ್ಯಯನದ ಕ್ಷೇತ್ರದಲ್ಲಿ ಬರುವ ಗುಲಬರ್ಗಾ, ರಾಯಚೂರು, ಮತ್ತು ಕೊಪ್ಪಳ ಜಿಲ್ಲೆ ಈ ಮೂರು ಹಂತಗಳಲ್ಲಿ ಇರುವಂತಹ ಮಹಿಳೆಯರು ಬಹುಸಂಖ್ಯಾತವಾಗಿದ್ದಾರೆ. ಅದರಲ್ಲಿ ತಾಲೂಕು ಜಿಲ್ಲಾ ಪಂಚಾಯತ್ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಇರುವಂತಹ ಬೇಡ ಬುಡಕಟ್ಟು ಮಹಿಳೆಯರ ವಿವರವನ್ನು ಇದರಲ್ಲಿ ಕೊಡಲಾಗಿದೆ.

ಕೋಷ್ಟಕ ೧೦

ಗುಲಬರ್ಗಾ ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆ

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ
೧.	ಶ್ರೀಮತಿ ಶಾಂತಮ್ಮ ಗಂಡ ಭೀಮಣ್ಣಾ	ಅಂದೋಲಾ	ಭಾರತೀಯ ರಾಷ್ಟ್ರೀಯ ಕಾಂಗ್ರೆಸ್
೨.	ಶ್ರೀಮತಿ ಲಲಿತಾಬಾಯಿ ಗಂಡ ವೀರಪ್ಪ	ಐನೊಳ್ಳಿ	ಭಾರತಯ ರಾಷ್ಟ್ರೀಯ ಕಾಂಗ್ರೆಸ್

ಕೋಷ್ಟಕ ೧೧

ಗುಲಬರ್ಗಾ ಜಿಲ್ಲೆಯ ಪ್ರತಿ ತಾಲೂಕು ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆ

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ
೧.	ಬಸ್ಸಮ್ಮ ತಂದೆ ಸಿದ್ದಪ್ಪ	ಅಫಜಲಪುರ (ಉಡಚಣ)	ಜನತಾದಳ(ಜಾ)
೨.	ನೀಲಮ್ಮರಾಜೇಂದ್ರ ಶುಕ್ರವಾಡಿ	ಆಳಂದ (ತಡಕಲ್)	ಕಾಂಗ್ರೆಸ್
೩.	ಪದ್ಮಾವತಿ, ಯಂಪಳ್ಳಿ	ಚಿಂಚೋಳಿ, (ಸಾಲೆಬೀರನಳ್ಳಿ)	ಕಾಂಗ್ರೆಸ್
೪.	ಲಕ್ಷ್ಮಿಬಾಯಿ ಮಲ್ಲೇಶ್	ಚಿತ್ತಾಪುರ (ದಿಗ್ಗಾಂವ)	ಕಾಂಗ್ರೆಸ್
೫.	ಮಹಾನಂದ, ರಮೇಶ	ಗುಲಬರ್ಗಾ (ಮಹಾಗಾಂವ)	ಕಾಂಗ್ರೆಸ್
೬.	ಭೀಮಭಾಯಿ, ಭೀಮರಾಯ	ಜೇವರ್ಗಿ, (ಕೆಲ್ಲೂರ)	ಬಿಜೆಪಿ
೭.	ಕೃಷ್ಣಮ್ಮ ಅರ್ಜುನಜಮಾದಾರ	ಸೇಡಂ (ಊಡಗಿ)	ಕಾಂಗ್ರೆಸ್
೮.	ದ್ಯಾವಮ್ಮ ಈರಣ್ಣಾ	ಶಹಾಪುರ (ಕೊಳ್ಳೂರ)	ಜನತಾದಳ(ಜಾ)
೯.	ನಿಂಗಮ್ಮ ಬಸವರಾಜ	ಸುರಪುರ (ಬೂದನೂರದೊಡ್ಡಿ)	ಅಭಾಪ್ರಜದ
೧೦.	ಸಾಬಮ್ಮ ಲಿಂಗಣ್ಣಾ	ಯಾದಗಿರಿ (ಠಾಣಗುಂದಿ)	ಜನತಾದಳ(ಜಾ)

ಮೂಲ: ಜಿಲ್ಲಾ ಪಂಚಾಯತ್, ಗುಲಬರ್ಗಾ)

ಕೋಷ್ಟಕ ೧೨

ರಾಯಚೂರು ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆ

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ
೧.	ನಾಗಮ್ಮ ಗಂಡ ನಾಗಪ್ಪ	ದೇವದುರ್ಗ (ಗಲಗ)	
೨.	ನಾಗಮ್ಮ ಗಂಡ ಭೀಮಯ್ಯ	ರಾಯಚೂರು (ತಲಮಾರಿ)	
೩.	ಸರಸ್ವತಿ ಗಂಡ ಬಸವನಗೌಡ	ಮಾನವಿ (ಹಿರೇಕೋಟ್ನಿಕಲ್)	

ಕೋಷ್ಟಕ ೧೩

ರಾಯಚೂರು ಜಿಲ್ಲೆಯ ಪ್ರತಿ ತಾಲೂಕು ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆಯರು

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ
೧.	ಪದ್ಮಮ್ಮ ಗಂಡ ಸಣ್ಣಕರೆಪ್ಪ	(ರಾಯಚೂರು) ಬಿಜ್ಜನಗೇರಾ	
೨.	ಮಹಾಲಕ್ಷ್ಮಿ ಗಂಡ ಯಲ್ಲಪ್ಪ	(ರಾಯಚೂರು) ತಲಮಾರಿ	
೩.	ಗೀತಾ ಗಂಡ ಸಣ್ಣ ಅಮರೇಶ	(ಮಾನವಿ) ಬಿಲ್ಲಟಗಿ	
೪.	ಶಾಂತಮ್ಮ ಗಂಡ ಈರಣ್ಣ ಕರಡಿಗುಡ್ಡ	(ಮಾನವಿ) ಸಂಗಪೂರು	
೫.	ಶಾಂತಮ್ಮ	(ಸಿಂಧನೂರು) ಗೋನದಾರ	
೬.	ದ್ಯಾವಮ್ಮ ಗಂಡ ಮನುಷಪ್ಪ	(ಸಿಂಧನೂರು) ಉಮಲೂಟಿ	
೭	ಸೌಭಾಗ್ಯ ಗಂಡ ಪಿ.ದಿವಾಕರನಾಯಕ	(ಲಿಂಗಸೂಗೂರು) ಗುರುಗುಂಟಾ	
೮.	ಯಲ್ಲಮ್ಮ ಗಂಡ ಚಿಂದಯ್ಯ	(ಲಿಂಗಸೂಗೂರು) ಪೈದೊಡ್ಡಿ	
೯.	ಮದಾಹೇವಮ್ಮ	(ದೇವದುರ್ಗ) ಆಲ್ಕೋಡ	
೧೦.	ಲಕ್ಷ್ಮಿದೇವಿ	(ದೇವದುರ್ಗ) ಗಲಗ	
೧೧.	ಅನ್ನಪೂರ್ಣ	(ದೇವದುರ್ಗ) ಕೆಳಗಿನಇರಬಗೇರಾ	

(ಮೂಲ: ಜಿಲ್ಲಾ ಪಂಚಾಯತಿ, ರಾಯಚೂರು)

ಕೋಷ್ಟಕ ೧೪

ಕೊಪ್ಪಳ ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆ

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ
೧.	ಶ್ರೀಮತಿ ಸುಜಾತ ಹನುಮೇಶ ನಾಯಕ	ಹುಲಿ ಹೈದರ್	ಕಾಂಗ್ರೆಸ್
೨.	ಶ್ರೀಮತಿ ಮಾಲತಿ ರಾಮಚಂದ್ರ ನಾಯಕ	ಹನುಮನಾಳ	ಜೆಡಿಎಸ್

ಕೋಷ್ಟಕ ೧೫

ಕೊಪ್ಪಳ ಜಿಲ್ಲೆಯ ಪ್ರತಿ ತಾಲೂಕು ಪಂಚಾಯತ್‌ಗೆ ಆಯ್ಕೆಯಾದ ಬೇಡ ಬುಡಕಟ್ಟು ಮಹಿಳೆಯರು

ಕ್ರ.ಸಂ.	ಹೆಸರು	ಕ್ಷೇತ್ರ	ಪಕ್ಷ	ತಾಲೂಕು
೧.	ಶ್ರೀಮತಿ ಹೊಳೆಮ್ಮ ಪೊಲೀಸ್ ಪಾಟೀಲ್	ಹಿರೆಹರಳಹಳ್ಳಿ	ಕಾಂಗ್ರೆಸ್	ಯಲಬುರ್ಗಾ
೨.	ಶ್ರೀಮತಿ ಸಾವಿತ್ರಮ್ಮ ನಾಗಪ್ಪ	ಕರೋನಾ	ಜೆಡಿಎಸ್	ಗಂಗಾವತಿ

(ಮೂಲ: ಜಿಲ್ಲಾ ಪಂಚಾಯತ್, ಕೊಪ್ಪಳ)

೪.೫. ಬೇಡರ ಸಂಸ್ಕೃತಿ ಮತ್ತು ಮಹಿಳೆ

ಪೃಥ್ವಿಯ ಮೇಲಿನ ಮಾನವನ ಜೀವನದ ಉದಯದೊಂದಿಗೆ ಸಾಂಸ್ಕೃತಿಕ ಪರಂಪರೆಯು ಪ್ರಾರಂಭವಾದದ್ದನ್ನು ನೋಡಬಹುದು. ಮಾನವನು ಎಂದು ಗುಂಪಿನ ಜೀವನವನ್ನು ಮೈಗೂಡಿಸಿಕೊಂಡನೋ, ಅಂದಿನಿಂದಲೇ ನಾಗರೀಕತೆಯನ್ನು ಕಂಡುಕೊಂಡನು. ಈ ನಾಗರೀಕ ಹಂತದಲ್ಲಿ ಹಲವಾರು ದೈಹಿಕ, ಮಾನಸಿಕ ಪರಿವರ್ತನೆಗಳೊಂದಿಗೆ ಸಾಂಸ್ಕೃತಿಕ ಬದಲಾವಣೆಗಳು ಆಗುತ್ತಾ ಬಂದವು. ಇಂತಹ ಸಾಂಸ್ಕೃತಿಕ ಬದಲಾವಣೆಗಳನ್ನು ಅಥವ ವಿಕಾಸಗಳನ್ನು ವಿದ್ವಾಂಸರು ಬುಡಕಟ್ಟು ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಗಳೆಂದು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ.

ಎಲ್ಲಾ ಸಮುದಾಯಗಳಲ್ಲಿ ಏಕಕಾಲದಲ್ಲಿ ಹೊಸ-ಹೊಸ ಆವಿಷ್ಕಾರ ಮತ್ತು ಚಿಂತನೆಗಳುಂಟಾಗಲಿಲ್ಲ. ಸಮುದಾಯಗಳಲ್ಲಿ ಕೆಲವು ಹೊಸ ಶೋಧನೆ ಮತ್ತು ಚಿಂತನೆಗಳಿಂದ ಆಧುನಿಕತೆಯ ಕಡೆಗೆ ಚಲಿಸಿದರೆ, ಇನ್ನೂ ಕೆಲವು ಆಧುನಿಕತೆಗೆ ಬೆನ್ನು ಮಾಡಿದ್ದುಂಟು. ಹೀಗಾಗಿ ಒಂದು ಸಮುದಾಯ ನಾಗರೀಕತೆಯ ತುದಿಯಲ್ಲಿ ನಿಂತಿದ್ದರೆ, ಇನ್ನೊಂದು ಸಮುದಾಯ ನಾಗರೀಕತೆ ಪೂರ್ವವ್ಯವಸ್ಥೆಯಲ್ಲಿಯೇ ಇರುವ ಸಾಧ್ಯತೆ ಹೆಚ್ಚು. ಆದುದರಿಂದಲೇ ಭಾರತದಲ್ಲಿ ಇಂದಿಗೂ ಗ್ರಾಮ ಮತ್ತು ನಗರಗಳಿಂದ ದೂರವಿರುವ ಆಧುನೀಕತೆಯ ಸೋಂಕಿಲ್ಲದ ಅನೇಕ ಸಮುದಾಯಗಳು ಅಸ್ತಿತ್ವದಲ್ಲಿವೆ.

ಇತ್ತೀಚಿನ ಬೆಳವಣಿಗೆಗಳಂತೂ ಸಮುದಾಯದ ಸ್ವರೂಪವನ್ನೇ ಬದಲಾಯಿಸುತ್ತಿವೆ. ಒಂದು ಕಡೆ ಅರಣ್ಯನಾಶ, ಇನ್ನೊಂದು ಕಡೆ ಅರಣ್ಯ ರಕ್ಷಣಾ ನೀತಿಗಳು, ಧರ್ಮ ಪ್ರಚಾರಕರ ಪ್ರಭಾವ, ಇಂತಹ ಹಲವು ಕಾರಣಗಳಿಂದ ಸಮುದಾಯದ ಜನರು ತಮ್ಮ ಜೀವನದಲ್ಲಿ ಸಂಪೂರ್ಣ ಹೊಸತನ್ನು ಅಳವಡಿಸಿಕೊಳ್ಳಲಾಗದೆ, ಸ್ಮಂತಿಕೆಯನ್ನು ಉಳಿಸಿಕೊಳ್ಳುವ ವಿಫಲ ಪ್ರಯತ್ನ ನಡೆಸಿದ್ದಾರೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಯಾವುದೇ ಸಮುದಾಯಗಳು ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲದೆ, ಹೊರ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಈ ಬದಲಾವಣೆಯೂ ಅನಿವಾರ್ಯ. ಯಾವುದೇ ಬೆಳೆಯುತ್ತಿರುವ ಸಮಾಜದಲ್ಲಿ ಈ ಅನಿವಾರ್ಯತೆ ನಡೆಯುತ್ತಲೇ ಇರುತ್ತದೆ.

ಈ ಹಿನ್ನೆಲೆಯಲ್ಲಿ ಅನೇಕ ಸಮುದಾಯಗಳು ಮಾರ್ಪಾಡುಗಳನ್ನು ಒಪ್ಪಿಕೊಂಡು ಮತ್ತೆ ಕೆಲವು ವಿರೋಧ ಮಾಡಿ ತಮ್ಮ ಆಚಾರ-ವಿಚಾರಗಳಲ್ಲಿ ತಮ್ಮದೇ ಆದ ವಿಶಿಷ್ಟತೆಗಳನ್ನು ಸಮಾಜ-ಸಂಸ್ಕೃತಿಯ ವೈಶಿಷ್ಟತೆಗಳನ್ನು ಉಳಿಸಿಕೊಂಡು ಬಂದಿವೆ. ಅದರ ಜೊತೆಗೆ ತಮ್ಮ ಹಿರಿಯರ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಪ್ರತಿಯೊಂದು ಸಮುದಾಯಗಳಲ್ಲಿ ತನ್ನದೇ ಆದ ಗುರಿ ಸಾಧಿಸಿದ ಜ್ಞಾನ ಪರಂಪರೆಯಿಂದ ಮುಂದುವರೆದುಕೊಂಡು ಬಂದಿರುತ್ತದೆ. ಸಂಸ್ಕೃತಿ ಮತ್ತು ಸಮಾಜವು ಜೊತೆ-ಜೊತೆಯಾಗಿ ಮುನ್ನಡೆಯುತ್ತವೆ. ಮಲಿನ್ನೋಸ್ಕಿಯವರು "ತನ್ನ ಗೊತ್ತು ಗುರಿಗಳನ್ನು ಈಡೇರಿಸಿಕೊಳ್ಳಲು ಮಾನವನೇ ನಿರ್ಮಿಸಿಕೊಂಡತಹ ಸಾಧನಗಳನ್ನು ಅವನ ಸಂಸ್ಕೃತಿ ಎಂದಿದ್ದಾರೆ".[೨೪] ಒಂದು ಪೀಳಿಗೆಯಲ್ಲಿ ಕಲಿತದ್ದು ಮುಂದಿನ ಪೀಳಿಗೆಗಳಿಗೆ ವರ್ಗಾಯಿಸಲ್ಪಡುತ್ತದೆ ಎಂಬ ಪ್ರಮುಖ ಅಂಶವನ್ನು ಗುರುತಿಸಿದಂತಾಗುತ್ತದೆ. ಬುಡಕಟ್ಟಿನ ಪರಂಪರೆಯ ಮೂಲಕ ಒಂದು ನಿರ್ಧಿಷ್ಟ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವುದು ಸಾಧ್ಯ. "ಸಂಸ್ಕೃತಿ ಎನ್ನುವುದು ಮಾನವನ ಸಾಮಾಜಿಕ ಬಳುವಳಿ ಎಂದಿದ್ದಾರೆ"[೨೫]. ಆದಿವಾಸಿ ಸಮಾಜದಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ತಲೆಮಾರುಗಳಿಗೆ ಸಾಮಾಜಿಕ ಕೊಡುಗೆಯಾಗಿ ಬಂದಿರುವುದನ್ನು ಇಂದಿನ ಸಮಾಜದಲ್ಲಿ ನೋಡಬಹುದು.

ಪ್ರತಿಯೊಂದು ಸಮುದಾಯಕ್ಕೆ ತನ್ನದೇ ಆದ ಚರಿತ್ರೆ ಇರುವಂತೆ ಬೇಡರಿಗೆ, ಬೇಡ ನಾಯಕರಿಗೆ, ವಾಲ್ಮೀಕಿ ಸಮುದಾಯಕ್ಕೆ ಒಂದು ವಿಶಿಷ್ಟವಾದ ಸಂಸ್ಕೃತಿಯಿದೆ. ಮೂಲತಃ ಇವರು ದ್ರಾವಿಡ ಸಮುದಾಯಕ್ಕೆ ಸೇರಿದವರು. ಅಂತೆಯೇ ದ್ರಾವಿಡ ಭಾಷೆಗಳಲ್ಲಿ ಬೇಡನ, ವೇಂದನ್, ವೇಟ್ಟುವನ್ ಎಂದೆಲ್ಲಾ ಹೆಸರುಗಳಿದ್ದವು. "ರಾಷ್ಟ್ರಕೂಟರ ಕಾಲದ ದ್ವಿತೀಯ ಭಾಷೆಯಾಗಿದ್ದ ಆಫಭ್ರಂಶ ಭಾಷೆಯಲ್ಲಿ ನಾಹಲ, ನಾಹಿಲ, ನಾ ಇಲ್ಲ, ವಾಹ, ಸಮರ, ಸಿಮೀರ, ಬೆಲಾಡ, ಬಾದ್ಧಿಯ ಮುಂತಾದ ಅನೇಕ ಹೆಸರುಗಳು ದೊರಕುತ್ತವೆ."[೨೬] ಇವೆಲ್ಲ ಪದಗಳು ಬೇಡ ಸಮುದಾಯದ ಪ್ರಾಚೀನತೆಯ ವ್ಯಾಪ್ತಿಯನ್ನು ಪ್ರಚುರಪಡಿಸುತ್ತದೆ.

ವಿಲಿಯಂ ಸ್ಮಿಥ್‌ನ ಅಭಿಪ್ರಾಯದಂತೆ "ವಿಶ್ವದಲ್ಲಿಯೇ ಬೇಡರಷ್ಟು ಶೂರರು ಸಿಗಬಹುದು ಆದರೆ ಬೇಡರಕ್ಕಿಂತ ಶೂರರು ಸಿಗಲಾರರು".[೨೫] ಈ ಮಾತು ಅರಿತುಕೊಂಡರೆ ಸಾಕು ಸಮುದಾಯದವರ ಸಾಹಸ, ಧೈರ್ಯ, ಚಾಣಕ್ಷತೆ ಬಗ್ಗೆ ತಿಳಿಯುತ್ತದೆ. ಅದರ ಜೊತೆಗೆ ಬಹುದೀರ್ಘಾವಧಿಯಿಂದ ರೂಢಿಗತವಾಗಿ ಮುಂದುವರೆದುಕೊಂಡು ಬಂದಂತಹ ರೂಢಿನಿಯಮಗಳು, ಸಂಪ್ರದಾಯ, ನೈತಿಕ ನಿಯಮಗಳು ಮತ್ತು ಕೌಟುಂಬಿಕ ನಿಯಂತ್ರಣ-ನಿರ್ಬಂಧಗಳು ದಿನ ನಿತ್ಯದ ಜೀವನ ಕ್ರಮದಲ್ಲಿ ಬಹು ಜಾಗುರೂಕತೆಯಿಂದ ಜೀವನ ನಡೆಸುತ್ತಾರೆ. ಅದರಲ್ಲಿ ಸಮುದಾಯವನ್ನು ಪ್ರತಿನಿಧಿಸುವ ಬೇಟೆ, ಸಂಸ್ಕೃತಿ, ಸಮುದಾಯದ ಆದಿಮ ಕಾಲದ ಸಂದರ್ಭದಿಂದಲೂ ಇವತ್ತಿನ ಆಧುನಿಕದವರೆಗೂ ಚಲನೆಗೊಂಡಿರುವುದು ಕಂಡುಬರುತ್ತದೆ. ವೈದಿಕ ಶಾಹಿ ಹಿಂದೂ ಧರ್ಮದ ಪ್ರಭಾವಕ್ಕಿಂತ ಮುಂಚಿತವಾಗಿ ಸಮುದಾಯದಲ್ಲಿ ಅಥವಾ ಸಾಮೂಹಿಕ ಜೀವನದಲ್ಲಿ ಸ್ತ್ರೀ-ಪುರುಷವೆಂಬ ಭೇದ ಕಾಣದು, ಸ್ವಚ್ಛಂದವಾಗಿ ಕುಟುಂಬದಲ್ಲಿ ಹೊರಗಿನ ಕೆಲಸ ಕಾರ್ಯಗಳಲ್ಲಿ ಪುರುಷರು ತೊಡಗಿಕೊಂಡಿದ್ದರು.

ಕುಟುಂಬ ನಿರ್ವಹಣೆಯಲ್ಲಿ ಸಂಪೂರ್ಣ ಸ್ತ್ರೀಗೆ ಸ್ವಾತಂತ್ರ್ಯವನ್ನು ನೀಡಿದ್ದರು ಎನ್ನುವದಕ್ಕಿಂತಲೂ ಅಂದಿನ ಪರಿಸರದಲ್ಲಿ ಅನಿವಾರ್ಯತೆಯೂ ಕಂಡುಬರುತ್ತದೆ. ಅಂದಿನ ಸಂದರ್ಭದಲ್ಲಿ ಸಂಪತ್ತಿನ ಏಕಸ್ವಾಮ್ಯದ ವಿಚಾರ ಅವರಿಗೆ ತಿಳಿದಿರಲಿಲ್ಲ. ಈ ಕಾರಣದಿಂದ ಅಧಿಕಾರ (Power)ದ ಕಲ್ಪನೆ ವಿಚಾರಕ್ಕೆ ಬಾರದೆ ನಮ್ಮದು ಎನ್ನುವಂತಹ ವಿಚಾರದಿಂದ ಸಮಾಜದಲ್ಲಿ ಸಮುದಾಯಗಳು ಮುಂದುವರೆಯುತ್ತಿದ್ದವು. ಜೊತೆಗೆ ಮಿತವಾದ ಜನಸಂಖ್ಯೆ, ಸರಳ ರೀತಿಯಲ್ಲಿ ದೊರೆಯುವಂತಹ ಆಹಾರ ಇವೆಲ್ಲವನ್ನು ಗಮನಿಸಿದಾಗ ಮಾನವನಿಗೆ ಸ್ಪರ್ಧೆಯಂಬ ಕಲ್ಪನೆಯೂ ಇವರಲ್ಲಿ ಕಂಡುಬರುತ್ತಿರಲಿಲ್ಲ.

ಬಹಳ ಸ್ಪಷ್ಟವಾಗಿ ಹೇಳುವುದಾದರೆ ಸಮೂಹ ಜೀವನದಲ್ಲಿ ವಾಸಿಸುವಂತಹ ಸಂದರ್ಭದಲ್ಲಿ ಪುರುಷ-ಸ್ತ್ರೀವೆಂಬ ಲಿಂಗಭೇದವಿರಲಿಲ್ಲ. ಯಾವತ್ತು ಬೇಟೆಯಾಡುವ ಸಂದರ್ಭವು ಅಂತ್ಯಗೊಂಡಿತು ಪಶುಪಾಲನೆ-ಕೃಷಿ ಚಟುವಟಿಕೆಯಿಂದ ಭೂಮಿ ಉಳುಮೆ ಮಾಡಿ ಧವಸ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಕಂಡುಕೊಂಡರೊ ಅಲ್ಲಿಂದಲೇ ಪುರುಷ-ಸ್ತ್ರೀಯರ ಶ್ರಮ ವಿಭಜನೆಯಲ್ಲಿ ಏರುಪೇರುಂಟಾಯಿತು. ಕಾಲದ ಚಲನೆಯಲ್ಲಿ ಸಮಾಜವು ಪರಿವರ್ತನಾ ಪ್ರಕ್ರಿಯೆಗೆ ಒಳಪಟ್ಟು, ಮುಂದೆ ಹಲವಾರು ಧರ್ಮ, ಜಾತಿ, ಪಂಗಡ, ಪಂಥ ಇತರೆ ಸ್ತರಗಳಲ್ಲಿ ಭಾಗಗಳಾದವು. ನಗರವಾಸಿ ಜನರು ಆದಿವಾಸಿ ಸಮಾಜದ ಮೇಲೆ ಪ್ರಭಾವ ಬೀರುತ್ತಾ ಬಹು ತೀಕ್ಷ್ಣವಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಂಡರು, ಈ ತರಹದ ಹಲವಾರು ಕೃತ್ರಿಮ ಚಟುವಟಿಕೆಯಾಗಿ ಪುರುಷ ತನ್ನ ಪ್ರಭಾವವನ್ನು ದ್ವಿಗುಣ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು. ಮುಂದಿನ ಕಾಲಗತಿಯಲ್ಲಿ ಮಹಿಳೆಯೂ ಸಂಕಷ್ಟ ಜೀವನ ನಡೆಸುತ್ತಿರುವುದು ಕ್ಷೇತ್ರಕಾರ್ಯದ ಹಾಗೂ ಸಾಹಿತ್ಯ ಆಕಾರಗಳ ಪರಾಮರ್ಶನದಿಂದ

ತಿಳಿದು ಬರುತ್ತದೆ. ಇಂದು ಹೊಸ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಈ ಬದಲಾವಣೆ ಅನಿವಾರ್ಯ. ಯಾವುದೇ ಬೆಳೆಯುತ್ತಿರುವ ಸಮಾಜದಲ್ಲಿ ಈ ಅನಿವಾರ್ಯತೆ ನಡೆಯುತ್ತಲೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಸಮುದಾಯಗಳು ಮಾರ್ಪಾಡುಗಳನ್ನು ಒಪ್ಪಿಕೊಂಡು ತಮ್ಮ ಆಚಾರ-ವಿಚಾರಗಳಲ್ಲಿ ತಮ್ಮದೇ ಆದ ವಿಶಿಷ್ಟತೆಗಳನ್ನು ಸಮಾಜ ಸಂಸ್ಕೃತಿಯ ವೈಶಿಷ್ಟತೆಗಳನ್ನು ಉಳಿಸಿಕೊಂಡು ಬಂದಿವೆ. ಅದರ ಜೊತೆಗೆ ತಮ್ಮ ಹಿರಿಯರ ಸಂಸ್ಕೃತಿಯನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು. ಕೆಲವೊಂದು ಸಮುದಾಯಗಳಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಪಂಗಡಗಳಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಗೊಂಡ, ರಾಜಗೊಂಡ, ಕಾಡುಕುರುಬ, ಜೇನುಕುರುಬ, ಊರುಬೇಡ, ಮ್ಯಾಸಬೇಡು ಇತ್ಯಾದಿ.

"ಈ ರೀತಿಯಲ್ಲಿ ಪರಿವರ್ತನೆಗೆ ಒಳಗಾದ ಭಾರತೀಯ ಸಮುದಾಯಗಳಲ್ಲಿ ಧೀರೇಂದ್ರನಾಥ ಮಜುಂದಾರ್ ಅವರು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ.

೧. ಜಾತಿಗಳಾಗಿ ಸಂಪೂರ್ಣ ಪರಿವರ್ತಿತವಾಗಿರುವ ಸಮುದಾಯಗಳು.

೨. ಹಿಂದೂಗಳೊಡನೆ ಭಾಗವಹಿಸಿಯೂ ತಮ್ಮ ಸಂಪ್ರದಾಯಗಳನ್ನು ನಂಬಿಕೆಗಳನ್ನು ಉಳಿಸಿಕೊಂಡಿರುವ ಸಮುದಾಯಗಳು.

೩. ಹಿಂದು ಧರ್ಮದ ಪ್ರಭಾವಕ್ಕೆ ಒಳಗಾಗದೆ ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರತ್ಯೇಕವಾಗಿ ಹೋರಾಡುತ್ತಿರುವ ಸಮುದಾಯಗಳು."[೨೮]

ಈ ಮೂರು ಹಂತಗಳನ್ನು ಅವಲೋಕಿಸಿ, ಬೇಡರ ಸಂಸ್ಕೃತಿ ಮತ್ತು ಮಹಿಳೆ ಎಂಬ ವಿಷಯವನ್ನು ಅರಿತುಕೊಳ್ಳುವುದು ಬಹು ಪ್ರಮುಖವಾಗಿದೆ.

ಈ ಬುಡಕಟ್ಟಿನ ಸಂಸ್ಕೃತಿಯನ್ನು ನೋಡುವದಾದರೆ ಪುರಾತನ ಕಾಲದಿಂದಲೂ ಕಾಡು ಪ್ರಾಣಿ-ಪಕ್ಷಿಗಳನ್ನು ಕೊಂದು ತಿನ್ನುವ ಪರಂಪರೆಯುಳ್ಳವರು ಎಂದು ಇಂದಿಗೂ ಜನಸಾಮಾನ್ಯರಲ್ಲಿ ಪ್ರಚಲಿತವಿದೆ. ಜೊತೆಗೆ ಏನು ದೊರೆಯದ ಸಂದರ್ಭದಲ್ಲಿ ದಾರಿಹೋಕರನ್ನು ತಡೆದು ವಸ್ತುಗಳನ್ನು ದೋಚುವ ಕ್ರಮವು ಕೆಲವೊಂದು ಕಥೆ, ಮಹಾಕಾವ್ಯಗಳಿಂದ ನಮಗೆ ಲಭಿಸುತ್ತವೆ. ಬಹುಮುಖ್ಯವಾಗಿ ಸಂಸ್ಕೃತಿಯಿಂದ ಬಂದಂತಹ ರೂಢಿನಿಯಮಗಳು, ಆಚರಣೆ, ವಿಧಿ-ವಿಧಾನಗಳು, ನಿಷೇಧಗಳು ಇತರೆ ಕ್ರಮಗಳು ಸಹ ತಮ್ಮ ಜೀವಿತದ ಸಂದರ್ಭದಲ್ಲಿ ಪ್ರತಿಯೊಂದು ಕ್ಷಣ-ಕ್ಷಣಕ್ಕೂ ನಿಯಂತ್ರಣ ನಿರ್ಬಂಧವಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ. ಹಾಗೂ ಈ ಸಮುದಾಯದಲ್ಲಿ ಗೋಚರಿಸುತ್ತದೆ. ಅದರಲ್ಲಿ ಸಮುದಾಯವನ್ನು ಪ್ರತಿನಿಧಿಸುವ ಬೇಟೆ ಸಂಸ್ಕೃತಿ, ಸಮುದಾಯದಲ್ಲಿ ಆರಾಧನಾಗೊಳ್ಳುತ್ತಿರುವ ಅತಿ ಹೆಚ್ಚು ಸ್ತ್ರೀ ದೇವತೆಗಳ ಸಂಸ್ಕೃತಿ-ಸಂಪ್ರದಾಯಗಳು. ಆದಿಮ ಕಾಲದ ಸಂದರ್ಭದಿಂದಲೂ, ಇವತ್ತಿನ ಆಧುನಿಕದವರಿಗೂ ಎಷ್ಟೋ ಏರು-ಪೇರುಗಳನ್ನು ಕಂಡುಕೊಂಡಿದೆ.

ಭಾರತ ಸಮಾಜದಲ್ಲಿ ನಡೆದು ಹೋಗಿರುವಂತಹ (ಹೆಣ್ಣು ಹೊನ್ನು, ಮಣ್ಣು, ಮತ್ತು ಅಧಿಕಾರಕ್ಕಾಗಿ) ರಾಷ್ಟ್ರ-ರಾಜ್ಯ-ಪ್ರಾದೇಶಿಕ ಕಲಹಗಳಿಂದ ಈ ತರಹದ ಅದೆಷ್ಟೋ ಬುಡಕಟ್ಟು ಸಮುದಾಯಗಳ ಮೇಲೆ ತೀವ್ರತರನಾದ ಪ್ರತಿಕೂಲ ಪರಿಣಾಮ ಬೀರಿ, ಇಡೀ ಜೀವನಕ್ರಮದ ಮೇಲೆ ಹಲವಾರು ಧಾರ್ಮಿಕ ಪ್ರತಿಪಾದಕರ ಒತ್ತಡದ ವಿಚಾರಗಳಿಗೆ ಒಳಗಾಗಬೇಕಾಗಿ ಬಂದು, ತಮ್ಮ ಸ್ವಂತಿಕೆಯ, ನೀತಿ-ನಿರೂಪಣೆಗಳು ಅನಿವಾರ್ಯವಾಗಿ ಬಿಡಬೇಕಾಗಿ ಬಂದು, ಪ್ರಭಾವಿತ ಧರ್ಮದ ನೀತಿನಿಯಮಗಳಿಗೆ ಹೊಂದಿಕೊಳ್ಳಲೇಬೇಕಾಗಿರುವಂತಹ ಸಂದರ್ಭವು ಏರ್ಪಟ್ಟು, ತಮ್ಮಲ್ಲಿರುವಂತಹ ಅನಂತತೆಯನ್ನು ಒಂದಡೆಗೆ ಇರಿಸಿ, ಹಿಂದು, ಮುಸ್ಲಿಂ, ಕ್ರೈಸ್ತ, ಅದರಲ್ಲಿ ವೈಷ್ಣವ, ಶೈವ, ಪಂಥಗಳ ನಿಯಮಗಳಿಗೆ ತೊಡಗಿಸಿಕೊಂಡರು. ಇದಕ್ಕಿಂತಲೂ ಮುನ್ನ ಸಮುದಾಯದಲ್ಲಿ ಸ್ತ್ರೀ-ಪುರುಷವೆಂಬ ಭೇದ ಕಾಣದು. ಸ್ವಚ್ಛಂದವಾಗಿ ಕುಟಂಬದ-ಹೊರಗಿನ ಕೆಲಸ ಕಾರ್ಯಗಳಲ್ಲಿ ಪುರುಷರು ತೊಡಗಿಕೊಂಡರೆ, ಕುಟುಂಬ ನಿರ್ವಹಣೆಯಲ್ಲಿ ಸಂಪೂರ್ಣ ಸ್ತ್ರೀಗೆ ಸ್ವಾತಂತ್ರ್ಯವನ್ನು ನೀಡಿದರು. ಒಂದೊಂದು ಸಂದರ್ಭದಲ್ಲಿ ಮಹಿಳೆ ಕಾಡಿನಲ್ಲಿ ಬೇಟೆಯಾಡಲು ಪುರಷನ ಸರಿಸಮನಾಗಿ ಕೆಲಸ ನಿರ್ವಹಿಸುವುದು ಸಹ ಕಂಡುಬರುತ್ತದೆ. ಅದೇ ರೀತಿಯಾಗಿ ಕುಟುಂಬದ ಕರ್ತವ್ಯ ಜವಾಬ್ದಾರಿಯನ್ನು ಸಹ ಮಹಿಳೆಯೇ ನಿಭಾಯಿಸುತ್ತಿದ್ದಳು, ಎನ್ನುವ ವಿಷಯವನ್ನು ಅನೇಕ ಆಧಾರಗಳಿಂದ ಕಂಡುಕೊಳ್ಳಬಹುದು. ಬುಡಕಟ್ಟಿನ ಸ್ಥಿತಿಯಲ್ಲಿರುವಂತಹ ಸಮಯದಲ್ಲಿ ಪುರುಷರ ಮೂಲಭೂತ ಕರ್ತವ್ಯ ಬೇಟೆಯಾಡುವುದು ಪ್ರಮುಖವಾಗಿತ್ತು.

ದಟ್ಟವಾದ ಕಾಡಿನಲ್ಲಿ ಗುಂಪು ಗುಂಪಾಗಿ ವಾಸಿಸುವ ಸಂದರ್ಭದಲ್ಲಿ ಪುರುಷ-ಸ್ತ್ರೀಎಂಬ ಲಿಂಗಭೇದವಿರಲಿಲ್ಲ. ಅಂದು ಶ್ರಮವಿಭಜನೆ ವಿಷಯವು ಬಂದಾಗ ಪುರುಷರಾದವರಿಗೆ ಭಾರವಾದಂತಹ ಕೆಲಸವನ್ನು ನಿರ್ವಹಿಸಲು ನಿಯೋಜಿಸುತ್ತಿದ್ದರು. ಭಾರ ರಹಿತವಾದ ಕೆಲಸ ಕಾರ್ಯಗಳನ್ನು ಮಹಿಳೆಯರಿಗೆ ವಹಿಸುತ್ತಿದ್ದರು. ಈ ಕಾರಣದಿಂದ ಬುಡಕಟ್ಟು ವ್ಯವಸ್ಥೆಯಿಂದಲೇ ಮಹಿಳೆಯು ಪುರುಷನ ಸರಿಸಮಾನ ಕೆಲಸ ನಿರ್ವಹಿಸಲು ಅಸಾಧ್ಯಳು ಎಂಬ ಭಾವನೆ ಜನರಲ್ಲಿ ಹುಟ್ಟಿಕೊಳ್ಳಲು ಕಾರಣವಾಯಿತು. ಅದಕ್ಕೆ ಬಹುಮುಖ್ಯವಾದ ಕಾರಣ ಪುರುಷ ವರ್ಗದಲ್ಲೇ ದೋಷ ಕಂಡುಬರುತ್ತದೆ ಎನ್ನುವ ವಿಚಾರ ಮಹತ್ವವಾದದ್ದು. ಅಂದರೆ ಪ್ರಥಮ ಹಂತದಿಂದಲೂ ಮಹಿಳೆಯೆಂದು ನಿರೂಪಿಸದೆ, ಪುರುಷನ ಸರಿಸಮಾನವಾಗಿ ಕೆಲಸ ಕಾರ್ಯಗಳಲ್ಲಿ ಸಮನ್ವಯವಾಗಿ ತೊಡಗಿಸಿಕೊಂಡಿದ್ದರೆ ಇವತ್ತಿನ ಸಂದರ್ಭದಲ್ಲಿ ಪುರುಷ ವರ್ಗಕ್ಕೆ ಎದುರಾಗಿ ಸ್ತ್ರೀವಾದವು ಜನ್ಮಿಸುತ್ತಿರಲಿಲ್ಲ. ಮುಂದೆ ಕಾಲಾಗತಿಯಲ್ಲಿ ಹಲವಾರು ಧರ್ಮ ಪ್ರಚಾರಕರು ಇಂಡಿಯಾದ ಪ್ರತಿಯೊಂದು ಪ್ರದೇಶಗಳಲ್ಲಿ ವಾಸಿಸುವಂತಹ ನೆಲೆಗಳನ್ನು ಒಳಗೊಂಡು ಒಂದೊಂದು ಬುಡಕಟ್ಟು ಸಮುದಾಯಗಳ ಮೇಲೆ ತಮ್ಮದೇ ಆದ ವೈದಿಕ ಶಾಹಿ ಪ್ರಭಾವಕ್ಕೆ ಒಳಪಡಿಸುವಲ್ಲಿ ಯಶಸ್ವಿಯಾದರು. ಇದರಿಂದ ಬುಡಕಟ್ಟುಗಳಲ್ಲಿ ಪುರಾತನ ಕಾಲದ ಸರಳತ್ವ ಜೀವನವು ಕಣ್ಮರೆಗೊಂಡು, ಸಂಕೀರ್ಣತೆಗೆ ಹೆಜ್ಜೆಯಿರಿಸಿತು.

ಬದಲಾಗುತ್ತಿರುವ ಸಮಾಜದಲ್ಲಿ ಹಲವು ಸಮುದಾಯಗಳು ಆದಿವಾಸಿ ನೀತಿ-ನಿಯಮಗಳನ್ನು ಮರೀಚಿಕೆ ಮಾಡಿಕೊಳ್ಳತೊಡಗಿದವು. ಇಂಡಿಯಾದಲ್ಲಿ ಪ್ರಾಚೀನ ಕಾಲದಿಂದಲೂ ಸಂಕೀರ್ಣ ಸಮಸ್ಯೆಯೊಂದಿಗೆ ಮುಂದುವರೆದುಕೊಂಡು ಬಂದಿರುವ ಆರ್ಯರು-ದ್ರಾವಿಡರು ಎಂಬ ವಾದವನ್ನು ನೋಡಿದಾಗ, ಆರ್ಯರಿಗೆ-ದ್ರಾವಿಡರಿಗೆ ಸಂಘರ್ಷಗಳು ಹಲವು ಸಲ ಏರ್ಪಟ್ಟಿರುವುದು ಕಂಡುಬರುತ್ತದೆ. ಅದರ ಉದ್ದೇಶವಿಷ್ಟೇ, ಆರ್ಯರ ವೈದಿಕ ವಿಚಾರಗಳನ್ನು ವಿಶ್ವವ್ಯಾಪ್ತಿಯಾನ್ನಾಗಿ ಮಾಡುವುದು ಪ್ರಮುಖವಾಗಿತ್ತು. ಇದರಿಂದ ನಗರ-ಗ್ರಾಮೀಣ ಪರಿಸರದಲ್ಲಿ ಜೀವಿಸುತ್ತಿರುವಂತಹವರು ಅರಣ್ಯವಾಸಿಯಾದ ಸಮುದಾಯಗಳ ಮೇಲೆ ವೈದಿಕ ಶಾಹಿ ತತ್ವಗಳ ಪ್ರಭಾವ ಬೀರುವುದೇ ಬಹು ಮುಖ್ಯವಾಗಿತ್ತು. ಅದರ ಜೊತೆಗೆ ಭಾರತದ ಸಂಪತ್ತು ವಿದೇಶಿಯರಿಗೆ ಕಣ್ಣು ಸೆಳೆಯುವಂತೆ ಮಾಡುವುದರಲ್ಲಿ ಸಂದೇಹವೆ ಇಲ್ಲ. ಈ ರಾಷ್ಟ್ರಕ್ಕೆ ಬಂದುಹೋದ ಎಲ್ಲರೂ ಇಲ್ಲಿನ ನೈಸರ್ಗಿಕ ಸಂಪತ್ತನ್ನು ತಮ್ಮದಾಗಿಸಿಕೊಳ್ಳುವುದರ ಜೊತೆಗೆ ತಮ್ಮ ಧರ್ಮಕ್ಕೆ ಮತಾಂತರಗೊಳಿಸಿರುವುದದನ್ನು ಕಾಣಬಹುದು. ಇದರ ಪರಿಣಾಮವು ಈಗಲೂ ಬುಡಕಟ್ಟು ಸಮುದಾಯಗಳ ಮೇಲೆ ಅಳಿಸದಂತೆ ಬಿಟ್ಟು ಹೋಗಿದ್ದಾರೆ. ಇವರಾದ ನಂತರದಲ್ಲಿ ಮುಸ್ಲಿಂ ದಾಳಿಕಾರರ ಹಿಡಿತಕ್ಕೆ ಒಳಪಟ್ಟಿರುವಂತಹ ಸಮುದಾಯಗಳು ಇಸ್ಲಾಂ ಧರ್ಮದ ಆಚರಣೆಗೆ ಸೇರ್ಪಡೆಗೊಂಡಿವೆ. ಇಂತಹ ಹಲವು ಕಾರಣಗಳಿಂದ ಸಿಲುಕಿಕೊಂಡಿರುವಂತಹ ಸಮುದಾಯಗಳ ಸಾಮಾಜಿಕ ಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಆಧುನಿಕ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಬಳಿಕೆ ಸಮುದಾಯಗಳಾಗಿ ಜೀವನ ಮುಂದುವರೆಸುತ್ತಿರುವುದು ಖೇದದ ಸಂಗತಿಯಾಗಿದೆ. ಅದರಲ್ಲಿ ಅತ್ಯಂತ ಸಂಕೀರ್ಣ ಸಂಪ್ರದಾಯ, ರೂಢಿ, ನಿಯಮಗಳಿಗೆ ಒಳಪಟ್ಟಿರುವ ಬೇಡ ಬುಡಕಟ್ಟು ಸಮುದಾಯ ಒಂದು ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಆರ್.ಎಸ್. ಶರ್ಮಾರವರ "ಪ್ರಾಚೀನ ಭಾರತದಲ್ಲಿ ಶೂದ್ರರು" ಎಂಬ ಗ್ರಂಥದಲ್ಲಿ ವೈದ್ದಿಕ ಪದ್ಧತಿಯ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ನಿಷಾದ, ಕಿರಾತ, ಸಮುದಾಯಗಳನ್ನು ಶೂದ್ರ ವರ್ಗಕ್ಕೆ ಅಂದರೆ ಶ್ರಮಿಕವಲಯದಲ್ಲಿ ಸೇರಿಸಿರುವುದು ಕಂಡುಬರುತ್ತದೆ."[*] ಇಲ್ಲಿನ ಮಹತ್ವವಾದ ಚರ್ಚೆಯೆಂದರೆ ವೈದಿಕರಿಗೆ ದೇಶದಲ್ಲಿ ಧರ್ಮವನ್ನು ಬಲಪಡಿಸುವ ಉದ್ದೇಶವಿತ್ತೆ ವಿನಹಃ ತಳ ಸಮುದಾಯಗಳಿಗಲ್ಲ. ತಳ ಸಮುದಾಯಗಳನ್ನು ಸಬಲೀಕರಣ ಮಾಡುವ ಕಿಂಚಿತ್ತು ಮನೋಭಾವನೆ ಅವರಲ್ಲಿರಲಿಲ್ಲ. ಇಂತಹ ಸಂಕ್ರಮಣ ಪರಿಸ್ಥಿತಿಯಿಂದ ಅನಾದಿ ಕಾಲದಿಂದಲೂ ಈ ಸಮುದಾಯಗಳು ಜೀವಿಸುತ್ತಾ ಬಂದಿವೆ. ಇನ್ನು ಕರ್ನಾಟಕದಲ್ಲಿ ನೋಡುವುದಾದರೆ ಆದಿವಾಸಿಗಳಲ್ಲೇ ಅತ್ಯಂತ ಬಹುಸಂಖ್ಯಾತವಾಗಿರುವ ಬೇಡ ಅಥವಾ ವಾಲ್ಮೀಕಿ ಸಮುದಾಯ ತನ್ನದೆಯಾದ ಪರಂಪರಾಗತ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡು ಬಂದಿದೆ. ಸಮುದಾಯದಲ್ಲಿ ಹಲವು ವಿಚಿತ್ರವಾದ ಸತ್ ಸಂಪ್ರದಾಯಗಳು ನಿರ್ಬಂಧಗಳು ಕಂಡುಬರುವುದು ಸಹಜ. ಅವು ಪ್ರಾದೇಶಿಕವಾಗಿ ಭಿನ್ನ ನಿಲುವಿನಲ್ಲಿ ಚಲಾವಣೆಯಲ್ಲಿವೆ. ಹೈದರಾಬಾದ-ಕರ್ನಾಟಕದ ಪರಿಸರದಲ್ಲಿ ಅವಲೋಕನ ಮಾಡಿದಾಗ ಪುರುಷ ಪ್ರಧಾನ್ಯತೆ ಪ್ರಬಲವಿರುವುದುದನ್ನು ಕಾಣಬಹುದು. ಮಹಿಳೆಯರಿಗೆ ಹಲವು ವಿಷಯಗಳಲ್ಲಿ ನಿರ್ಬಂಧಗಳು

ಹೇರಲ್ಪಟ್ಟಿದ್ದಾರೆ. ಮಹಿಳೆ ಪುರುಷನ ಸರಿಸಮಾನವಾಗಿ ಇರದೆ ಅಧೀನಳಾಗಿ ಜೀವಿಸುತ್ತಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಅಧ್ಯಯನದ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು, ಕೊಪ್ಪಳ ಪರಿಸರದಲ್ಲಿ ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಮಹಿಳೆಯನ್ನು ಮುಖಾ-ಮುಖಿ ಸಂದರ್ಶನ ಮಾಡಿದಾಗ ಇವರು ಜೀವಿಸುವಂತಹ ಕ್ರಮವು ಸ್ವತಂತ್ರ್ಯರಹಿತವಾದುದ್ದು. ಈ ಪ್ರದೇಶದಲ್ಲಿ ಮಹಿಳೆಯು ಹುಟ್ಟಿನಿಂದ ಹಿಡಿದು ಮರಣದವರೆಗೂ ಒಂದಿಲ್ಲೊಂದು ನಿರ್ಬಂಧಕ್ಕೆ ಒಳಪಟ್ಟಿದ್ದಾಳೆ. ಅದರಲ್ಲಿ ಹಲವು ಬಗೆಗಳು ಈ ಮುಂದಿನಂತಿವೆ.

೧. ಆಸ್ತಿಹಕ್ಕು ಮತ್ತು ಸಂಪತ್ತು

ಬಹು ದೀರ್ಘಕಾಲದಿಂದ ಬುಡಕಟ್ಟು ಸಮುದಾಯದ ಸಮಾಜದಲ್ಲಿ ಆಸ್ತಿ ಹಕ್ಕು ಮತ್ತು ಸಂಪತ್ತಿನ ವಿಚಾರ ಕುರಿತು ಅಷ್ಟೊಂದು ಬದಲಾವಣೆಯಾಗಿರುವುದು ಕಂಡುಬರುವುದಿಲ್ಲ. ಮೊದಲಿನಿಂದ ಬುಡಕಟ್ಟು ಸಮುದಾಯದವರಿಗೆ ಆಸ್ತಿಯೆಂಬುದೇ ಇಲ್ಲ. ಬಹು ಸಂಖ್ಯಾತವಾಗಿ ಆಸ್ತಿ ರಹಿತ ಕುಟುಂಬಗಳೇ ಅಧಿಕವಾಗಿ ಕಂಡುಬರುತ್ತವೆ. ಇದ್ದುದರಲ್ಲಿ ಅಲ್ಪ-ಸ್ವಲ್ಪ ಭೂಮಿಯನ್ನು ಹೊಂದಿದ ಕುಟುಂಬದಲ್ಲಿ ಮಹಿಳೆಗೆ ಆಸ್ತಿಯಲ್ಲಿ ಹಂಚಿಕೆ ಎನ್ನುವಂತಹ ವಿಚಾರವು ಬಹುದೂರದ ಮಾತು. ಈ ಪುರುಷ ಪ್ರಧಾನ್ಯದ ಪರಿಸರದಲ್ಲಿ ಮಹಿಳೆಯು ಕೇವಲ ಗೃಹ ಕೆಲಸ-ಕಾರ್ಯಗಳಲ್ಲಿ ಹಾಗೂ ಭೂ ಕೃಷಿ ಚಟುವಟಿಕೆಗಳಲ್ಲಿ ಸಹಾಯಕಳಾಗಿ ಕರ್ತವ್ಯ ನಿರ್ವಹಿಸುತ್ತಾಳೆ ವಿನಹಃ ಯಾವುದೇ ತರಹದ ಪಾಲುದಾರಿಕೆಯಲ್ಲಿ ಚಿತ್ರಹೀನಳಾಗಿದ್ದಾಳೆ.

ಬುಡಕಟ್ಟು ಅವಸ್ಥೆಯಲ್ಲಿರುವಂತಹ ಸಂದರ್ಭದಲ್ಲಿ ಮಹಿಳೆಯ ಪರ ಆಸ್ತಿ ಮತ್ತು ಸಂಪತ್ತಿನ ವಿಚಾರ ಮಾಡಿದಾಗ ಅಂದು ಆಸ್ತಿಯ-ಸಂಪತ್ತಿನ ಹಂಚಿಕೆಯ ಮಾತು ಬರುವುದಿಲ್ಲ. ಏಕೆಂದರೆ ಅಲೆಮಾರಿ ಜೀವನ ನಡೆಸುವಂತಹ ಸಮಯದಲ್ಲಿ ಆಹಾರಕ್ಕಾಗಿ ಪುರುಷ ಅಲೆದಾಟ ಮಾಡಿದರೆ, ಸ್ತ್ರೀಯು, ಆಹಾರವನ್ನು ಹಂಚಿಕೆ ಮತ್ತು ಮಿಕ್ಕಿದ್ದನ್ನು ಕ್ರೋಢೀಕರಿಸುವಂತಹ ಕಾರ್ಯವು ನೆರವೇರಿಸುತ್ತಿದ್ದಳು. ಇಂತಹದ್ದರಲ್ಲಿ ಸ್ತ್ರೀ-ಪುರುಷರ ಸಂಪತ್ತು ಎನ್ನುವ ವಿಚಾರ ಅರಣ್ಯದಲ್ಲಿ ಬಾರದೆ ಇರಬಹುದು, ಸರಳವಾಗಿ ದೊರೆಯುವಂತಹ ಪ್ರಾಣಿ-ಪಕ್ಷಿಗಳ ದಂತ, ಗರಿ, ಉಗುರು, ಇತರೆ ಆಭರಣಗಳೇ ಸಂಪತ್ತಿನ ಸ್ವರೂಪ ಪಡೆದಿರುವುದರಿಂದ ಸಂಪತ್ತು ಅನ್ನುವುದು ಒಬ್ಬರ ಸ್ವತ್ತು ಆಗಿರಲಿಲ್ಲ. ಅಂದಿನ ದಿನಮಾನಗಳಲ್ಲಿ ಸಾಮೂಹಿಕವಾಗಿ ಸಂಪತ್ತು ಪಾತ್ರ ವಹಿಸಿತ್ತು. ಕಾಲಮಾನ ಬದಲಾದಂತೆ ಸಮಾಜದಲ್ಲಿ ವೈದಿಕ ಸಂಸ್ಕೃತಿಯು ಇಂತಹ ಸಮುದಾಯಗಳ ಮೇಲೆ ಪ್ರಭಾವ ಬೀರಿ ಮಹಿಳಾ ಸ್ಥಾನಮಾನವು ನಗಣ್ಯವಾಗುವಂತೆ ಮಾಡಿದವು. ಪುರುಷರ ಸ್ಥಾನಮಾನವು ಪ್ರಧಾನ ಸ್ಥಾನದಲ್ಲಿ ಇರಿಸಿ, ಮಹಿಳೆಯನ್ನು ಮೂಲೆ ಗುಂಪಾಗಿ ಮಾಡುವಲ್ಲಿ ಯಶಸ್ವಿಯಾದವು. ಈ ಕಾರಣದಿಂದ ಇವತ್ತು ಮಹಿಳಾ ಪರವಾಗಿ ಯಾವುದೇ ತೆರನಾದ ಸಮಾನತೆ ಅಂಶಗಳು ಕಂಡುಬರುವುದಿಲ್ಲ. ಕುಟುಂಬದಲ್ಲಿ ತಂದೆಯಿಂದ ಮಗನಿಗೆ ಹಸ್ತಾಂತರವಾಗುತ್ತಿರುವ ಆಸ್ತಿ ಹಂಚಿಕೆ,

ಪಿತ್ರಾರ್ಜಿತ ಆಸ್ತಿ ಹಂಚಿಕೆ ಎಂದು ವಾಚನಮಾಡುತ್ತಾರೆ ವಿನಹಃ ಮಾತ್ರಾರ್ಜಿತ ಆಸ್ತಿ ಹಂಚಿಕೆಯೆಂದು ಯಾವತ್ತು ಸಂಭೋದನೆ ಮಾಡಿರುವುದು ಕಂಡುಬರುವುದಿಲ್ಲ. ಇದರಿಂದ ಮಹಿಳೆಯರ ಪಾಲಿಗೆ ಆಸ್ತಿ ಹಕ್ಕು ಅನ್ನುವುದು ಇಲ್ಲದಂತಾಗಿದೆ.

ಅಧ್ಯಯನದ ಕ್ಷೇತ್ರಕಾರ್ಯ ಸಮಯದಲ್ಲಿ ವಕ್ತೃಗಳನ್ನು ಸಂದರ್ಶಿಸಲ್ಪಟ್ಟಾಗ, "ಇಡೀ ಕುಟುಂಬದ ಜವಾಬ್ದಾರಿಯು ಪುರುಷನ ಅಧೀನದಲ್ಲಿ ಇರುವುದು ತಿಳಿದುಬರುತ್ತದೆ. ಕೃಷಿ ಭೂಮಿ ಕೃಷಿ ಕೂಲಿಯಿಂದ ಬಂದಂತಹ ಹಣದ ವ್ಯವಹಾರಗಳೆಲ್ಲವನ್ನೂ ಪುರುಷನೇ ನಿರ್ವಹಿಸುತ್ತಾನೆ. ಜೊತೆಗೆ ಒಂದೊಂದು ಕುಟುಂಬದಲ್ಲಿ ಸ್ತ್ರೀಯರು ದುಡಿಮೆಮಾಡಿ ಕುಟುಂಬ ನಿರ್ವಹಣೆ ಮಾಡಿದರು ಸಹ ಸಂಪತ್ತಿನ ಒಡೆತನವೆಲ್ಲವೂ ಪುರುಷನ ಪಾಲಾಗಿರುವುದು. ಪುರುಷನು ಶ್ರಮವಹಿಸದಿದ್ದರೂ ಮಹಿಳೆಯು ಶ್ರಮವಹಿಸಿ ಬಂದಂತಹ ಹಣದಲ್ಲಿ ಆತನ ಖರ್ಚಿಗೆ, ಚಟಾದಿಗಳಿಗೆ ಹಣ ನೀಡಲೇಬೇಕಾದಂತಹ ಸಂದರ್ಭವುಂಟು."[೩೦]

ಇದರಿಂದ ಸಮುದಾಯದಲ್ಲಿ ಮಹಿಳೆಯರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಸ್ತ್ರೀಯರು ದಿನವಿಡಿ ಶ್ರಮವಹಿಸಿ ಪುರುಷರ ಖರ್ಚುವೆಚ್ಚಗಳನ್ನು ಭರಿಸಬೇಕು. ಒಂದು ವೇಳೆ ಪುರುಷನಿಗೆ ಅಥವಾ ಗಂಡನಿಗೆ ಹಣ ನೀಡದಿದ್ದರೆ ಆತನಿಂದ ದೈಹಿಕವಾಗಿ-ಮಾನಸಿಕವಾಗಿ ಹಿಂಸೆ ಪಟ್ಟಿರುವಂತಹ ಉದಾಹರಣೆಗಳು ಸಾಕಷ್ಟು ಈ ಪ್ರದೇಶಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಪುರುಷರು ಕೆಲಸವಿಲ್ಲದೆ ಸೋಮಾರಿಗಳಾಗಿ ತಮ್ಮ ವಯಸ್ಸನ್ನು ಕಳೆದುಕೊಳ್ಳುತ್ತಿದ್ದಾರೆ. ಇವತ್ತಿನವರೆಗೂ ಆಸ್ತಿ ಸಂಪತ್ತು ಅಧಿಕಾರವೆಲ್ಲವೂ ಪುರುಷನ ಕೈಯಲ್ಲಿದೆ.

೨. ಸಾರ್ವತ್ರಿಕವಾಗಿ ಭಾಗವಹಿಸುವಿಕೆ

ಭಾರತದಂತಹ ಹಿಂದೂ ಧಾರ್ಮಿಕ ಅನುಕರಣೆಯ ಸಮಾಜದಲ್ಲಿ ಮಹಿಳೆಯು ಸ್ವತಂತ್ರ್ಯವಾಗಿ ಸಾರ್ವಜನಿಕ ವಲಯದಲ್ಲಿ ಭಾಗವಹಿಸುವಷ್ಟರ ಮಟ್ಟಿಗೆ ಅವಕಾಶ ವಂಚಿತಳಾಗಿದ್ದಾಳೆ. ಅದೇ ರೀತಿಯಾಗಿ ಆದಿವಾಸಿ ಸಮುದಾಯಗಳು ಇದರ ಪರಂಪರೆಯನ್ನು ಮೈಗೂಡಿಸಿಕೊಂಡು ತಮ್ಮ ಪೂರ್ವಿಕರ ಸಮಾನತೆ, ಸರಳತೆ, ಸಹಭಾಗಿತ್ವದಂತಹ ವಿಚಾರಗಳಿಂದ ಮರೆಮಾಚಿಕೊಂಡು ಇವತ್ತಿನ ದಿನಮಾನಗಳಲ್ಲಿ ಸಂಕೀರ್ಣ ನಿಯಂತ್ರಣಕ್ಕೆ ಒಳಪಟ್ಟಿದ್ದಾರೆ. ಇಂತಹ ಸನ್ನಿವೇಶವು ಅಶಿಕ್ಷಿತ ಸಮುದಾಯದಲ್ಲಿ ಕಂಡುಬಂದರೆ, ಇನ್ನು ಶಿಕ್ಷಣ ಪಡೆದುಕೊಂಡಂತಹ ಮೇಲ್ವರ್ಗದ ಮಹಿಳೆಯರು ಸಾರ್ವತ್ರಿಕವಾಗಿ ಭಾಗವಹಿಸುವ ಮನಸ್ಸಿನ ಅಭಿಲಾಷೆಯಿದ್ದರೂ ಸಹ ಪುರುಷರು ಅವಕಾಶಕೊಡದೆ ಇರುವುದು ಪ್ರಮುಖ ಕಾರಣವಾಗಿದೆ.

ಭಾರತದ ಸಂವಿಧಾನದ ಸವಲತ್ತಿನ ಅನ್ವಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ರಾಜಕೀಯ ಆಸ್ತಿ, ಇತರೆ ಮೀಸಲಾತಿಗೆ ಅವಕಾಶ ನೀಡಿದೆ ಅದು ಮಹಿಳೆಯರ ಪಾಲಿಗೆ ದುಸ್ತರವಾಗಿದೆ. ತಳಸಮುದಾಯದಲ್ಲಿ ಮೀಸಲಾತಿ ಅನ್ವಯ ಮಹಿಳೆಗೆ ಸೌಲಭ್ಯ ಇದ್ದರೂ ಸಹ

ಅವರ ಸ್ಥಾನದಲ್ಲಿ ಆತನ ಗಂಡ, ತಂದೆ, ಸಹೋದರ, ಇತರೆ ಪುರುಷರು ಸಾರ್ವತ್ರಿಕವಾಗಿ ಭಾಗವಹಿಸುತ್ತಾರೆ. ಮಹಿಳೆಯನ್ನು ಕೇವಲ ರಬ್ಬರ ಸ್ಟ್ಯಾಂಪ್ ತರಹ ಮಾಡಿರುವುದು ನಿಜ ಸಂಗತಿ ಯಾಗಿದೆ. ಇಂತಹ ಹತ್ತು ಹಲವಾರು ವಿಚಾರದಲ್ಲಿ ಬೇಡರು ತಮ್ಮ ಸಂಸ್ಕೃತಿ ಅಲ್ಪ-ಸ್ವಲ್ಪ ಬದಲಾವಣೆಗೆ ಒಳಪಡಿಸಿಕೊಳ್ಳುವುದರೊಂದಿಗೆ ಮೇಲ್‌ಸ್ತರದ ವೈದಿಕ ಶಾಹಿ ಆಚರಣೆಗಳನ್ನು ಮೈಗೂಡಿಸಿಕೊಂಡು ತಮ್ಮ ಸಮುದಾಯದ ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯ ನಿಲ್ಲಿಸಿರುವುದು ದುರಂತದ ವಿಚಾರವಾಗಿದೆ.

೩. ದೈವಗಳ ಆಚರಣೆ ಮತ್ತು ಮಹಿಳೆ

ಭಾರತದವು ಬಹು ವಿಶಿಷ್ಟ ಸಾಂಸ್ಕೃತಿಕ ಸಮಾಜವಾಗಿದೆ. ಅದು ಹಲವು ಪ್ರಕಾರದ ಧರ್ಮ, ಜಾತಿ, ಪಂಗಡ, ಪಂಥ, ಎನ್ನುವ ಏಣಿ-ಶ್ರೇಣಿ ಇರುವಂತೆ ಒಂದೊಂದು ಧರ್ಮ, ಜಾತಿ, ಸಮುದಾಯಗಳಲ್ಲಿ ತನ್ನದೆಯಾದ ಸಾಂಪ್ರದಾಯಿಕ ಆಚರಣೆಗಳು ಬಹುದೀರ್ಘ ಅವಧಿಯಿಂದಲೂ ರೂಢಿಸಿಕೊಂಡು ಮುಂದುವರೆಯುತ್ತಿವೆ. ಸಮುದಾಯಗಳಲ್ಲಿ ನಡೆಯುವಂತಹ ರೂಢಿ ಸಂಪ್ರದಾಯಗಳು, ಜಾತ್ರೆ, ಉತ್ಸವಗಳು ಹಾಗೂ ಕುಟುಂಬದಲ್ಲಿ ಜರುಗುವಂತಹ ದೈವ-ದೇವರುಗಳ ಆಚರಣೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಂತಹ ವ್ಯಕ್ತಿ ಯಾರು ಎಂಬ ಪ್ರಶ್ನೆಗೆ ಪುರುಷವೆಂದು ಸಾಮಾನ್ಯವಾಗಿ ತಿಳಿದುಬರುತ್ತದೆ. ಆದರೆ ಮಹಿಳೆಗೆ ಇರುವಂತಹ ಪ್ರಾತಿನಿದ್ಯ ಮಸುಕಾಗಿ ಎದ್ದುಕಾಣುತ್ತದೆ. ಸಮಾಜ ಪರಿವರ್ತನೆಯಾದಂತೆ ಮಹಿಳೆಯನ್ನು ನೇಪಥ್ಯಕ್ಕೆ ಸರಿಸಿದ್ದಾರೆ. "ಮನುಕುಲದ ಸೃಷ್ಟಿ ಹಾಗೂ ಪಾಲನೆ-ಪೋಷಣೆಯನ್ನು ಹೊತ್ತ ಸ್ತ್ರೀಗೆ ಯಾವ ಧರ್ಮವೂ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿಲ್ಲ[೨]". ಒಂದು ಅವಧಿಯಲ್ಲಿ ಮಹಿಳೆಯನ್ನು ದೈವತ್ವದ ಪಟ್ಟಕೇರಿಸಿದ ಇದೇ ಸಮಾಜ ಇವತ್ತಿನ ಸಂದರ್ಭದಲ್ಲಿ ಅವಳಿಗೆ ಹೇರಿರುವ ನಿರ್ಬಂಧಗಳು ನೂರಾರು, ಬೇಡ ಬುಡಕಟ್ಟು ಸಮುದಾಯದ ಕುಟುಂಬದ ಆಚರಣೆ-ಉತ್ಸವಗಳಲ್ಲಿ ಕಂಡುಬರುವಂತೆ ಪೂಜಾ ವಿಧಿ-ವಿಧಾನಗಳಲ್ಲಿ ತಯಾರಿ ಮಾಡುವ ಕರ್ತವ್ಯ ಮಹಿಳೆಯದೆ, ಆದರೆ ಅಂತಿಮವಾಗಿ ದೇವತೆಗಳಿಗೆ ಪೂಜೆ ಸಲ್ಲಿಸುವವನು ಮಾತ್ರ ಪುರುಷನೇ ಆಗಿದ್ದಾನೆ. ಕೆಲವೊಂದು ಸಂದರ್ಭದಲ್ಲಿ ಪೂಜಾ ಸ್ಥಳಗಳಿಗೆ ಅವಕಾಶ ನಿಷಿದ್ಧವಾಗಿರುವುದು ತಿಳಿದುಬರುತ್ತದೆ. ಆದರೆ ಹಿಂದೆ ಕೃಷಿ, ಪಶುಪಾಲನೆ ಆಧಾರಿತ ಸಮಾಜಗಳಲ್ಲಿ ಮಾತ್ರ ದೇವತೆಯ ಆರಾಧನೆಯನ್ನು ಎತ್ತಿ ಹಿಡಿದಿದ್ದವು. ವಿಶೇಷವಾಗಿ ಮಹಿಳೆಯನ್ನು ಉತ್ಪಾದಕಿ ಎಂದು ಪರಿಗಣಿಸಿ ಪೂಜ್ಯನೀಯ ಭಾವನೆಯಿಂದ ಅಲಂಕೃತಗೊಂಡಿದ್ದಳು.

ಬೇಸಾಯದ ಹಲವು ಸ್ತರಗಳಲ್ಲಿ ಸ್ತ್ರೀ ವಿಶೇಷವಾದ ಪಾತ್ರವನ್ನು ವಹಿಸುತ್ತಿದ್ದರಿಂದ ಆಕೆಯನ್ನು "ಉತ್ಪಾದಕಿ" ಎಂದು ಪರಿಗಣಿಸಿ ಸಮುದಾಯದ ಆರ್ಥಿಕ ಜೀವನದಲ್ಲಿ ಆಕೆಗೆ ವಿಶಿಷ್ಟವಾದ ಸ್ಥಾನವನ್ನು ನೀಡಲಾಗಿತ್ತು. ಇಂತಹ ಹಲವು ಸ್ಥಾನಮಾನಗಳಿಂದ ಇಂದು ಪರಿವರ್ತನೆಗೊಂಡು ಪುರುಷರಿಗೆ ಅಗ್ರಸ್ಥಾನವನ್ನು ನೀಡುವಂಥ ಪರಿಸ್ಥಿತಿ ಉದ್ಭವಗೊಂಡಿದ್ದು ವಿಪರ್ಯಾಸವೆ ಸರಿ. ಬೇಡ

ಸಮುದಾಯದಲ್ಲಿ ವಿವಾಹಕ್ಕೆ ಮುಂಚಿತವಾಗಿ ಮಾಡುವ ಆಚರಣೆಗಳಲ್ಲಿ ಒಂದಾದ ಲಕ್ಷ್ಮೀ ದೇವತೆಯ ಆಚರಣೆ ಮನೆ ಮಗಳಿಗೆ ಅಂದರೆ ವಿವಾಹವಾಗಿರುವಂತಹ ಮಹಿಳೆಗೆ ದೇವರ ಪೂಜಾ ಸ್ಥಳಕ್ಕೆ ಅವಕಾಶವಿರದೆ ಇರುವುದು ಒಂದು ಸಂಗತಿ.

ಇದನ್ನು ಕುರಿತು ಈ ಸಮುದಾಯದವರು ಪ್ರತಿಕ್ರಿಯಿಸುವಂತೆ "ವಿವಾಹಿತ ಮಗಳು ಲಕ್ಷ್ಮೀದೇವತೆಯ ಪೂಜೆ ಸಮಯದಲ್ಲಿ ಅಲಂಕರಿಸಿರುವ ಜ್ಯೋತಿಯನ್ನು ನೋಡಿದರೆ ಆ ಮನೆಯೂ ಸಂಪತ್ತು ಹೊರಟು ಹೋಗುತ್ತದೆಂಬ ಭಾವನೆ ಇವರಲ್ಲಿದೆ."[೩೨] ಇದರಿಂದ ಈ ನಿಷಿದ್ಧ ಇವತ್ತಿನವರೆಗೂ ಆಚರಣೆಯಲ್ಲಿದೆ. ಆದಿವಾಸಿ ಜೀವನದ ಸಮಾನತೆಯ ಅಂಶಗಳು ಕಣ್ಮರೆಯಾಗಿ ವೈದಿಕ ಶಾಹಿ ಧರ್ಮದ ಪ್ರಭಾವವು ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಈ ಸಮುದಾಯದಲ್ಲಿ ಯಾವ ವ್ಯವಸ್ಥೆಯೂ ಪುರುಷ ಸಂಸ್ಕೃತಿಯ ಹಿಡಿತದಿಂದ ಮುಕ್ತವಾಗಿಲ್ಲ ಎನ್ನುವುದಕ್ಕೆ ಇದೊಂದು ನಿದರ್ಶನ.

ಸಮುದಾಯದ ವಾರ್ಷಿಕ ಆಚರಣೆಯಲ್ಲಿ ಒಂದಾದ ಶಕ್ತಿದೇವತೆಯಾದ ಎಲ್ಲಮ್ಮನ ಜಾತ್ರೆ ಸಂದರ್ಭದಲ್ಲಿ ಪುರುಷನು ದೀಪಾದಾರತಿಯನ್ನು ತಲೆ ಮೇಲೆಹೊತ್ತು ಮುನ್ನೆಡೆದರೆ ಸ್ತ್ರೀಯೂ ಆತನ ಹಿಂದೆ ಅದೇ ಕರ್ತವ್ಯವನ್ನು ನಿಭಾಯಿಸುತ್ತಾಳೆ. ಆದರೆ ಪುರುಷನ ಮುಂದೆ ಚಲಿಸುವಂತಹ ಅವಕಾಶವು ಇಂದಿನವರೆಗೂ ಪಡೆದುಕೊಂಡಿಲ್ಲ. ಕೇವಲ ಸಾಂಕೇತಿಕವಾಗಿ ದೈವಗಳ ಆಚರಣೆಯಲ್ಲಿ ಪ್ರತಿನಿಧಿಸುತ್ತಾಳೆ ಹೊರತು ಕರಾರುಹೊಕ್ಕಾಗಿಲ್ಲವೆಂಬುದು ತಿಳಿದುಬರುತ್ತದೆ. ಇದರಿಂದ ನಮ್ಮ ಸಮಾಜದಲ್ಲಿ "ದ್ವಿಮುಖ ಮಾಪನದಂಡನಗಳ ಬಳಕೆ ಪ್ರಗತಿ ವಿರೋಧಿ ಆಚರಣೆಗಳು ಎಲ್ಲೆಡೆ ಪ್ರಚಲಿತವಾದವು[೩೩]".

೪. ನೀತಿ ನಿರ್ಧಾರಗಳು ಮತ್ತು ಮಹಿಳೆ

ವಿವಾಹವು ಇಡೀ ವಿಶ್ವದಾದ್ಯಂತ ಅಸ್ತಿತ್ವದಲ್ಲಿರುವಂಥ ಒಂದು ಸಾಮಾಜಿಕ ಸಂಸ್ಥೆ. ಈ ಪ್ರಕ್ರಿಯೆಯು ಒಂದು ಮೂಲಭೂತವಾದ ಒಪ್ಪಂದವಾಗಿದೆ. "ಮೆಲಿನೋಸ್ಕಿಯ ದೃಷ್ಟಿಯಲ್ಲಿ ಸಂತತಿಯ ಸೃಷ್ಟಿಗಾಗಿ ಹಾಗೂ ಆ ಸಂತತಿಯ ಪಾಲನೆ ಪೋಷಣೆಗಾಗಿ ವ್ಯಕ್ತಿಗಳು ಮಾಡಿಕೊಂಡಿರುವ ಒಪ್ಪಂದವೇ ವಿವಾಹ"[೩೪]. ಏಕೆ ವಿವಾಹದ ಅರ್ಥವನ್ನು ವಿವರಿಸಲಿಕ್ಕೆ ಹೊರಟ್ಟಿದ್ದೇನೆ ಎಂದರೆ, ಸಮಾಜದಲ್ಲಿ ಇರುವಂತಹ ಹಿರಿಯರ ಸಮ್ಮುಖದಲ್ಲಿ ಮದುವೆ ದಿನದಂದು ಎಲ್ಲಾ ಕೆಲಸಕಾರ್ಯಗಳಲ್ಲಿ ನನ್ನ ಸಮಾನಳಾಗಿ ಕಾಣುತ್ತೇನೆಂದು ಪ್ರತಿಜ್ಞೆ ಮಾಡಿರುತ್ತಾನೆ. ಇಂತಹ ಪ್ರತಿಜ್ಞೆಗಳು ಅಂದಿನ ಸಂದರ್ಭಕ್ಕೆ ಮಾತ್ರ ಸೀಮಿತವಾಗಿವೆ. ಹೊರತು ಮಹಿಳೆಯ ಮುಂದಿನ ಜೀವನದಲ್ಲಿ ಪುರುಷನ ಸಮಬಲವಾಗಿ ನಿಂತು ಮಾತನಾಡುವ-ನೀತಿ-ನಿರ್ಧಾರಗಳನ್ನು ತೆಗೆದುಕೊಳ್ಳುವ ತೀರ್ಮಾನವು ಕನಸಿನಲ್ಲೂ ಕಾಣಲು ಸಾಧ್ಯವಿಲ್ಲ.

ವಿವಾಹದ ಸಂದರ್ಭದಲ್ಲಿ ನೀತಿ-ನಿರ್ಣಯ ತೆಗೆದುಕೊಳ್ಳುವಂತಹ ಅಲ್ಪಸ್ವಲ್ಪ ಪರಿಪಾಠವು ಬೇಡ ಸಮುದಾಯದಲ್ಲಿ ಇಂದಿಗೂ ಆಚರಣೆಯಲ್ಲಿದೆ. ಅದು ಸರ್ವೇಸಾಮಾನ್ಯವಾಗಿ ತಮ್ಮ ಕಳ್ಳುಬಳ್ಳಿಯವರ ಸಂಬಂಧಿಕರ ಜೊತೆಗೆಯಾಗಲೀ ಅಥವಾ ಮಹಿಳೆಯ ಸಹೋದರನ ಜೊತೆಯಾಗಲೀ ತಮ್ಮ ಮಗಳನ್ನು ಕೊಡು-ತೆಗೆದುಕೊಳ್ಳುವ ಕಾಲಾವಧಿಯಲ್ಲಿ ಐದು ಜನ ಮಹಿಳೆಯೂ ಸೇರಿ ಒಪ್ಪಿಗೆ ಕೇಳುವಂತಹ ಮತ್ತು ನೀಡುವಂತಹ ಕ್ರಮ ಬೇಡ ಸಮುದಾಯದ ಮಹಿಳೆಯರಲ್ಲಿ ಇಂದಿನವರೆಗೂ ಮುಂದುವರೆದಿದೆ ಏಕೆಂದರೆ ಪ್ರಸ್ತುತದ ಸಮಯದವರೆಗೂ "ಈ ಪಂಗಡದ ಮಹಿಳೆ ಕೆಲವೊಂದು ಹಕ್ಕುಗಳನ್ನು ಪಡೆದಿರುವುದರ ಜೊತೆಗೆ ಹಲವು ಕರ್ತವ್ಯಗಳನ್ನು ನಿಭಾಯಿಸಬೇಕಾಗಿದೆ. ಆದರೆ 'ಸಂಪತ್ತಿನ, ಅಧಿಕಾರ, ಆಸ್ತಿ ಒಡೆತನದಂತಹ ಕರ್ತವ್ಯಗಳಳನ್ನು ನೀಡುವುದು ಇವರಲ್ಲಿ ತುಂಬಾ ವಿರಳವೆಂದು ತಿಳಿದುಬರುತ್ತದೆ. ತಮ್ಮ ಬದುಕನ್ನು ಸಂಪೂರ್ಣವಾಗಿ ಪರಾಧೀನತೆಯೆಡಗೊಯ್ಯುತ್ತಾರೆ".[೩೫]

ಈ ಸಮುದಾಯದಲ್ಲಿ ಅನಕ್ಷರಸ್ತರ ಸಂಖ್ಯೆ ಬಹುಸಂಖ್ಯಾತವಾಗಿದೆ. ಅದರಲ್ಲೂ ಸ್ತ್ರೀಯರು ಅಧಿಕವಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಜೀವನ ಮಾಡುತ್ತಿರುವ ಮಹಿಳೆಯರ ಪಾಡು ಅತಿ ಕಷ್ಟಕರವಾಗಿದೆ. ಮದುವೆಯಂತಹ ಸಂದರ್ಭದಲ್ಲಿ ಮಗಳು ವಯಸ್ಸು ಚಿಕ್ಕದಿರುವಾಗಲೇ ಮನೆಯಿಂದಾಚೆ ಕಳಿಸುವಂತಹ ಏರ್ಪಾಟನ್ನು ಆಗಲೇ ತಂದೆ-ತಾಯಿ ಸೇರಿಕೊಂಡು ನಿರ್ಣಯ ಮಾಡಿರುತ್ತಾರೆ. ಆದರೆ ಆ ಹೆಣ್ಣಿನ ಮನಸ್ಸು ಏನು ಬಯಸುತ್ತದೆಂಬ ಕೇಳುವಂತಹ ಪ್ರಮೇಯ ಇವರಲ್ಲಿ ಕಂಡುಬರುವುದಿಲ್ಲ. ಹೋಗಲಿ ಇಲ್ಲಿ ತಂದೆಯಾದವ ಪುರುಷ ಪ್ರತಿನಿಧಿ ಎನ್ನುವುದಾದರೆ ಸ್ವತಃ ತಾಯಿಯೇ ತನ್ನ ಮಗಳನ್ನು "ಅತಿ ಸಣ್ಣ ವಯಸ್ಸಿನಲ್ಲಿಯೇ ಹೆಣ್ಣುಮಗುವನ್ನು ಮನೆಯ ಹೊಸ್ತಿಲು ದಾಟಿಸುವುದಕ್ಕೆ ಯಾವುದೇ ತರಹದ ಮುಜುಗರವೂ ಕಂಡುಬರುವುದಿಲ್ಲ."[೩೬]. ಅಂದರೆ ಮಹಿಳೆಯ ಮೇಲೆ ಪುರುಷ ಪ್ರಧಾನ್ಯ ಯಾವ ರೀತಿ ಕರಿನೆರಳಿನ ಛಾಪು ಮೂಡಿಸಿದೆನ್ನುವುದು ಕಂಡುಬರುತ್ತದೆ. ತಮ್ಮ ಸಮುದಾಯದ ಒಳಪಂಗಡದಲ್ಲಿ ಮದುವೆಗಳು ನಡೆಯುವುದರಿಂದ ಸಾಮಾನ್ಯವಾಗಿ ಸ್ತ್ರೀಗೆ ಒಪ್ಪಿಗೆಯಿರುವುದು ತಿಳಿದುಬರುತ್ತದೆ.

ವಾಲ್ಮೀಕಿ ಬುಡಕಟ್ಟು ಸಮುದಾಯದವರು ಅತ್ಯಂತ ಬಡತನದಿಂದ ಜೀವಿಸುತ್ತಿರುವುದರಿಂದ ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮುಖ್ಯವಾಗಿರುವುದೇ ಹೊರತು, ಅವರ ಬೌದ್ಧಿಕ ಬೆಳವಣಿಗೆಯಲ್ಲ. ಈ ಪ್ರವೃತ್ತಿಯೂ ಇಂದಿಗೂ ಬಹುತೇಕ ಕುಟುಂಬಗಳಲ್ಲಿ ಜಾರಿಯಲ್ಲಿರುವುದು ಜೊತೆಗೆ ಇವರಲ್ಲಿ ತೊಟ್ಟಿಲ ವಿವಾಹಗಳು ಏರ್ಪಡುವಂತಹ ಸಂಭವವು ಅಧಿಕವಾಗಿವೆ. ಈ ಎಲ್ಲಾ ನೋಟಗಳಿಂದ ತಿಳಿದು ಬರುವದೇನೆಂದರೆ ಸಮುದಾಯದಲ್ಲಿ ಮಹಿಳೆಯು ನೇಪಥ್ಯಕ್ಕೆ ಸರಿಯುತ್ತಿದ್ದಾಳೆ, ಹೊರತು ಪುರುಷನ ಸರಿಸಮಾನವಾದ ಸ್ಥಾನಮಾನ ಪಡೆಯುವಲ್ಲಿ ಹಿಂದೆ ಉಳಿದಿದ್ದಾಳೆ. ಇಂದು ಮಹಿಳೆಯಲ್ಲಿ ಬೌದ್ಧಿಕ ನೈಪುಣ್ಯತೆ ತರುವಂಥ ಜರೂರತೆಯಿದೆ. ಹೀಗಾದಾಗ ಮಾತ್ರ ಸಮಾಜದಲ್ಲಿ ಒರ್ವವ್ಯಕ್ತಿಯಾಗಿ ಪ್ರತಿನಿಧಿಕರಣವಾಗಲು ಸಾಧ್ಯ.

ಆಕಾರ ಗ್ರಂಥಗಳು

೧. ಚ.ನ. ಶಂಕರರಾವ, ಭಾರತೀಯ ಸಮಾಜ, ೨೦೦೫, ಪುಟ.೧೪೬.

೨. ಎಂ.ಉಷಾ, ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು, ೨೦೦೪, ಪುಟ.೬೭.

೩. ಕೆ.ಎಂ.ಮೇತ್ರಿ, ಡಾ.ಚೆಲುವರಾಜು, ಬುಡಕಟ್ಟು ಅಧ್ಯಯನ ಸಂಪುಟ ೩, ಸಂಚಿಕೆ ೨. ಜುಲೈ-ಡಿಸೆಂಬರ್, ೨೦೦೬, ಪುಟ.೧೫೩.

೪. ಆರ್.ಇಂದಿರಾ, ೨೦೦೨, ಮಹಿಳಾ ಸಮಾಜ ಮತ್ತು ಸಂಸ್ಕೃತಿ, ಪುಟ.೧೦೦.

೫. ಗಾಂಯತ್ರಿ ನಾವಡ, ವಿರಚನೆ, ೧೯೯೭, ಪುಟ.೨೩.

೬. ತಿಳುವಳಿಕೆದಾರರು-ಗೋವಿಂದನಾಯಕ ಮಾನವಿ.

೭. ತಿಳುವಳಿಕೆದಾರರು-ನಿರೂಪಾಕ್ಷನಾಯಕ, ಯಲಬುರ್ಗಾ.

೮. ರಮೇಶನಾಯಕ, ವಾಲ್ಮೀಕಿ ಸಂಪದ, ೨೦೦೬, ಪುಟ.೨೫೭.

೯. ಮಾನವ ಅಭಿವೃದ್ಧಿ ವರದಿ, ೨೦೦೫, ಪುಟ.೧೧೦ ರಿಂದ ೧೧೧

೧೦. ರಾಯಚೂರು ಜಿಲ್ಲಾ ಅಂಕಿ-ಅಂಶಗಳ ನೋಟ

೧೧. ತಿಳುವಳಿಕೆದಾರರು-ಸಾಯಿಬಣ್ಣ ವನದುರ್ಗಾ, ಶಾಹಪೂರ.

೧೨. ಆರ್.ಇಂದಿರಾ, ಮಹಿಳಾ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪುಟ.೮೭

೧೩. ಮಾನವ ಅಭಿವೃದ್ಧಿ ವರದಿ, ೨೦೦೧. ಪುಟ.೧೧೩

೧೪. ಅದೇ ಪುಟ.೧೧೪

೧೫. ತಿಳುವಳಿಕೆದಾರರು ರೇಣುಕಾ ಹನುಮನಾಳ, ಕುಷ್ಟಗಿ.

೧೬. ತಿಳುವಳಿಕೆದಾರರು ಸಣ್ಣ ಮಾನಪ್ಪ, ಲಿಂಗಸೂಗೂರು.

೧೭. ಮಲ್ಲಿಕಾಘಂಟಿ, ಸಬಿಹಾಭೂಮಿಗೌಡ (ಸಂ), ೨೦೦೬, ಕನ್ನಡ ಸಾಹಿತ್ಯ ಮತ್ತು ಮಹಿಳೆ, ಪುಟ.೧೯.

೧೮. ಅದೇ ಪುಟ. ೨೦

೧೯. ಅದೇ ಪುಟ. ೨೧.

೨೦. ಅದೇ ಪುಟ. ೨೨.

೨೧. ಅದೇ ಪುಟ. ೨೫.

೨೨. ರಾಮಮನೋಹರ ಲೋಹಿಯಾ, ೧೯೯೮, ಪುಟ.೧೭೫.

೨೩. ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೫-೦೬, ಪುಟ.೨೭೨ ರಿಂದ ೨೭೮.

೨೪. ಜಿ.ಸುಬ್ರಹ್ಮಣ್ಯ, ಸಮಾಜಶಾಸ್ತ್ರದ ಮೂಲತತ್ವಗಳು, ೨೦೦೩. ಪುಟ.೮೩.

೨೫. ಅದೇ ಪುಟ.೮೪

೨೬. ಮಂಜುನಾಥ ಬೇವಿನಕಟ್ಟಿ, ತಾರಿಹಳ್ಳಿ ಹನುಮಂತಪ್ಪ ಸಂ, ವಾಲ್ಮೀಕಿ ಸಂಪದ, ೨೦೦೬, ಪುಟ.೫.

೨೭. ಹರ್ತಿಕೋಟೆ ವಿರೇಂದ್ರಸಿಂಹ, ಅಮರೇಶ ಯತಗಲ್ ಸಂ. ವಾಲ್ಮೀಕಿ ಮಂದಾರ, ೨೦೦೮, ಪುಟ.೧೮೧.

೨೮. ಮಂಜುನಾಥ ಬೇವಿನಕಟ್ಟಿ, ಆದಿವಾಸಿ, ೨೦೦೭, ಪುಟ.೧೬೩.

೨೯. ಆರ್.ಎಸ್.ಶರ್ಮಾ, ಪ್ರಾಚೀನ ಭಾರತದಲ್ಲಿ ಶೂದ್ರರು, ೨೦೦೬, ಪುಟ.೨೯.

೩೦. ತಿಳುವಳಿಕೆದಾರರು, ಶಾಂತಮ್ಮ, ಕನಕಗಿರಿ.

೩೧. ಆರ್.ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ೨೦೦೨. ಪುಟ.೨೬.

೩೨. ತಿಳುವಳಿಕೆದಾರರು, ಸರಸ್ವತಿ, ದೇವದುರ್ಗ.

೩೩. ಆರ್.ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪುಟ.೨೭.

೩೪. ಅದೇ ಪುಟ.೨೭.

೩೫. ಅದೇ ಪುಟ.೩೨.

೩೬. ಅದೇ ಪುಟ.೩೬.

ಅಧ್ಯಾಯ ಐದು

ಬೇಡ ಸಮುದಾಯದ ಮಹಿಳೆಯ ಆರ್ಥಿಕ ವ್ಯವಸ್ಥೆ

ಬುಡಕಟ್ಟೊಂದರ ಸಾಂಸ್ಕೃತಿಕ ಅಧ್ಯಯನದ ಬಹುಮುಖ್ಯ ಚರ್ಚೆಯಲ್ಲಿ ಆ ಸಮುದಾಯದ ಆರ್ಥಿಕ ಸ್ಥಿತಿಗತಿಗಳ ವಿವರಣೆಯನ್ನು ಒಳಗೊಳ್ಳುತ್ತದೆ. ಇದರ ಸ್ಥಾನಮಾನಗಳ ವಿವರಗಳ ಮೂಲಕವೇ ಸಮಾಜ, ಸಮುದಾಯ, ಧರ್ಮ, ಸಂಸ್ಕೃತಿ ಇತರೆಲ್ಲವೂ ಸಹ ನಿರ್ವಚಿಸಲ್ಪಡುತ್ತವೆ. ಹಾಗೇ ನೋಡಿದರೆ ಆರ್ಥಿಕ ಹಿತಾಸಕ್ತಿಯಿಲ್ಲದ ಧರ್ಮಕ್ಕಾಗಲೀ, ಸಮಾಜಕ್ಕಾಗಲೀ ಪ್ರತ್ಯೇಕ ಅಸ್ತಿತ್ವಗಳೇ ಇಲ್ಲ ಎನ್ನಬಹುದು. ಮಾನವನ ಆರ್ಥಿಕ ಜೀವನ ಕ್ರಮದ ಹಿನ್ನೆಲೆಯನ್ನು ವಿವೇಚಿಸಿದಂತೆ ಇಂದಿನ ನಾಗರೀಕ ಸಮಾಜ ಅತಿಹೆಚ್ಚು ಕ್ರೂರವೂ, ಸ್ವಾರ್ಥ ಕೇಂದ್ರಿತವೂ ಆಗಿ ಕಾಣುತ್ತದೆ. ಈ ಆರ್ಥಿಕತೆ ಮನುಷ್ಯ ಜೀವನದ ಮೂಲಭೂತ ಪ್ರವೃತ್ತಿಗಳಿಗೆ ಅಂಟಿಕೊಂಡಿರುವುದು 'ಹಸಿವು' ಆಹಾರಾನ್ವೇಷಣೆಗೆ ಕಾರಣವಾಗಿದೆ. ಮೂಲ ಮಾನವನಿಂದ ಆಹಾರದ ಹುಡುಕಾಟ ಆರಂಭವಾಗಿ ಮನುಷ್ಯನ ಬದುಕಿಗೆ ಒಂದು ಬಗೆಯ ಸ್ಥಿರತೆ ಬರುವವರೆಗೆ ಈ ಹುಡುಕಾಟ ನಿರಂತರವಾಗಿದೆ. ಅರಣ್ಯವಾಸಿಯಾಗಿದ್ದ ಮನುಷ್ಯ ಹಳ್ಳಿ, ನಗರಗಳನ್ನು ಸೃಷ್ಟಿಸಿಕೊಂಡು ಜೀವಿಸುವ ರೀತಿ ಇದೆಲ್ಲಾ ಅದು ಮೂಲತಃ ಕಾಡು ಮತ್ತು ಊರುಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳ ಇತಿಹಾಸವೇ ಆಗಿದೆ.

"ಕಾಡು ಸಂಸ್ಕೃತಿಗಳ ನಿಜ ನೆಲೆಯನ್ನು ಪ್ರತಿನಿಧಿಸುತ್ತಾ ಚಲನಾ ಸ್ವರೂಪಿಯಾಗಿದ್ದರೆ ಊರುಗಳಲ್ಲಿನ ಸಂಸ್ಕೃತಿ ನಿರ್ಮಾಣ ತಟಸ್ಥವೂ, ಅಹಂಕಾರ ಪ್ರತಿಷ್ಠೆಗಳ ಪ್ರದರ್ಶನವೂ ಹಾಗೂ ಅದರ ಸಾಧನವೂ ಆಗಿ ಕಂಡುಬಂದಿದೆ. ಮಾನವನ ಆಹಾರೋತ್ಪಾದನೆಯೇ ಅವನ ಒಟ್ಟು ಚಟುವಟಿಕೆಗಳ ಮೂಲ ಪ್ರೇರಣೆಯಾಗಿರುವುದರಿಂದ ಅದು ಸಸ್ಯಹಾರ ಮಾಂಸಾಹಾರಗಳೆಂಬ ದ್ವಿರೀತಿಯಲ್ಲಿ ಗೋಚರಿಸುತ್ತಾ ಬಂದಿದೆ. ಆಹಾರಕ್ಕಾಗಿ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಿದ್ದ ಮನುಷ್ಯ ಕಾಲಾಂತರದಲ್ಲಿ ಆಹಾರೋತ್ಪಾದನೆಯ ವಿವಿಧ ಮಾರ್ಗಗಳ ಹಿನ್ನೆಲೆಯಲ್ಲಿ 'ಬೇಟೆ'ಯನ್ನು ಒಂದು ಆಚರಣೆಯನ್ನಾಗಿ ಮಾಡಿಕೊಂಡ. ಮನುಷ್ಯ ಮೂಲತಃ ಅರಣ್ಯದಲ್ಲಿದ್ದನೆಂಬ ಬಗ್ಗೆ ಯಾವ ಸಂದೇಹವೂ ಇಲ್ಲ. ಗೆಡ್ಡೆ-ಗೆಣಸುಗಳನ್ನು ತಿಂದು ಜೀವಿಸುತ್ತಿದ್ದ ಮನುಷ್ಯ 'ಬೇಟೆ'ಯ ಮೂಲಕವೂ ಆಹಾರ ಸಂಗ್ರಹಿಸುತ್ತಿದ್ದ. ಬೇಟೆಯು ಅಂದಿನ ಪ್ರಮುಖ ಆಹಾರೋತ್ಪಾದನಾ ಮೂಲವಾಗಿತ್ತು. ಆದರೆ ಇದೇ ಬೇಟೆ ಈಗ ಏನಾಗಿದೆಯೆಂಬುದನ್ನು ಅವಲೋಕಿಸಿದರೆ ಸಂಸ್ಕೃತಿಯ ಸ್ಥಿತ್ಯಂತರ

ಹಾಗೂ ಚಲನಶೀಲತೆಯ ಸ್ವರೂಪದ ಬಗ್ಗೆ ಸ್ಪಷ್ಟವಾಗುತ್ತದೆ. ಅಂದಿನ ಪ್ರಮುಖ ಉತ್ಪಾದನಾ ವಿಧಾನವಾಗಿದ್ದ 'ಬೇಟೆ' ಬರಬರುತ್ತ ಒಂದು ಪ್ರಾಸಂಗಿಕ ಕ್ರಿಯೆಯಾಯಿತು. ಅರಸರ ದಿನನಿತ್ಯದ ಹವ್ಯಾಸವಾಯಿತು. ಉತ್ಪಾದನಾ ವಿಧಾನವೊಂದು ಹವ್ಯಾಸವಾಗಿ ಪರಿವರ್ತನೆಗೊಂಡ ಪ್ರಕ್ರಿಯೆಯಲ್ಲೇ ಊರುಗಳ ಹುಟ್ಟು ಸಂಭವಿಸಿವೆ. ಊರುಗಳು ಜನ್ಮತಳೆದು ಪಾಳೆಪಟ್ಟುಗಳು ರಚನೆಯಾಗುವ ವೇಳೆಗೆ ಕಾಡಿನ ಕೋಟ್ಯಾಂತರ ಮನುಷ್ಯರು ಊರಿನ ಮನುಷ್ಯರಾಗಿದ್ದರು. ಅವರ ಉಡುಪು ಬದಲಾಗಿತ್ತು. ವಸತಿ ಬದಲಾಗಿತ್ತು. ಆಹಾರ ವಿಧಾನ ಪರಿವರ್ತನೆಯಾಗಿತ್ತು.''[೨೦]

"ಈ ಸಮಯದಲ್ಲಿ ಅರಣ್ಯದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದ್ದ ಬೇಟೆ ಹವ್ಯಾಸವಾಗಿತ್ತು. ಕಾಡಿನಲ್ಲಿ ಪ್ರತಿನಿತ್ಯ ಆಹಾರವಾಗಿದ್ದ ಮಾಂಸವು ಊರಿನಲ್ಲಿ 'ಹಬ್ಬದ ಆಹಾರ'ವಾಗಿತ್ತು. ಊರಿನ ಸಂಸ್ಕೃತಿ ಮತ್ತಷ್ಟು ವಿಸ್ತರಿಸುತ್ತಾ, ವಿಕಾಶವಾಗುತ್ತ ಹೋದಂತೆ ಬೇಟೆಯು ಜನರ ಆಚರಣೆಯಾಗ ಹತ್ತಿತ್ತು. ಕೆಲವು ಹಬ್ಬಗಳೆಂದು ಊರಿನ ಜನ ಬೇಟೆಗೆಂದು ಹೋಗಿ ಹುಲಿಯನ್ನಲ್ಲ, ಹೊಲದಲ್ಲಿರುವ ಬೆಳ್ಳಿ ಇಲಿಯನ್ನಾದರೂ ಹಿಡಿದು ತರುತ್ತಾರೆ. ಅದರ ಮಾಂಸದ ಚೂರುಗಳನ್ನು ಹಂಚಿಕೊಳ್ಳುತ್ತಾರೆ. ಅರಣ್ಯ ಸಂಸ್ಕೃತಿಯಲ್ಲಿದ್ದ ಸಾಮೂಹಿಕ ಉತ್ಪಾದನೆ ಮತ್ತು ಸಮಾನ ಹಂಚಿಕೆಯು ಹಬ್ಬದಲ್ಲಿ ಆಚರಣೆಯಾಗಿ ಪರಿವರ್ತನೆ ಹೊಂದಿರುವುದು ಊರಿನ ಒಂದು ವ್ಯಾಖ್ಯಾನವೂ ಆಗಿದೆ. ಊರು ಮತ್ತು ರಾಜ್ಯಗಳ ಉದಯದೊಂದಿಗೆ ಸಾಮೂಹಿಕ ಉತ್ಪಾದನೆ, ಸಮಾನ ಹಂಚಿಕೆಗಳ ಕಲ್ಪನೆ ಕಣ್ಮರೆಯಾಗುತ್ತಾ ಬಂದದ್ದು ಈಗ ಇತಿಹಾಸದ ಸಂಗತಿಯಾದ್ದರಿಂದ, ಊರಿನ ಸಂಸ್ಕೃತಿಯಲ್ಲಿ ಕೇವಲ ಒಂದು ನೆನಪಾಗಿ 'ಆಚರಣೆ'ಯಾಗಿ ಪರಿವರ್ತನೆ ಹೊಂದಿದೆ 'ಬೇಟೆ' ಊರನ್ನು ವ್ಯಾಖ್ಯಾನ ಮಾಡುವ ಒಂದು ಮಾನದಂಡವಾಗುವುದು ಸಹಜ. ಇನ್ನೊಂದು ಮುಖ್ಯ ಬದಲಾವಣೆಯನ್ನು ಇಲ್ಲಿ ಗಮನಿಸಬಹುದು. ಊರಿನ ಸಂಸ್ಕೃತಿಯಲ್ಲಿ ಮೂರ್ತ ಹಿಂಸೆ ಕಡಿಮೆಯಾದಂತೆ ಕಂಡರೂ ಅಮೂರ್ತ ಹಿಂಸೆ ಜಾಸ್ತಿಯಾಗಿದೆ."[೨೧]

"ಊರುಗಳ ಒಕ್ಕೂಟದಲ್ಲಿ ಹುಟ್ಟಿದ ರಾಜ್ಯ ವ್ಯವಸ್ಥೆ ಮತ್ತು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗಳು ತಮ್ಮದೇ ರೀತಿಯಲ್ಲಿ ಹಿಂಸೆಯನ್ನು ಅಂತರ್ಗತ ಮಾಡಿಕೊಂಡು ಜನರಿಗೆ ಹಿಂಸೆ ಕೊಡುತ್ತಿರುವ ಸಂದರ್ಭಗಳು ಸಾಕಷ್ಟಿವೆ. ಒಂದು ಸಹಜ ಉತ್ಪಾದನಾ ವಿಧಾನವಾಗಿದ್ದ 'ಬೇಟೆ'ಯೂ ಆಚರಣೆಯ ಹಂತಕ್ಕೆ ಬಂದಾಗ, ಅದರೊಳಗಿನ ಹಿಂಸೆಯ ಕಲ್ಪನೆಯು ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಒಳಸೇರಿದ್ದು ಒಂದು ವಿಪರ್ಯಾಸವೇ ಸರಿ! ಇಂದು ಮನುಷ್ಯ ಮನುಷ್ಯನನ್ನೇ ಹಿಂಸಿಸುವುದು ಬೇಟೆಯಾಗುವ ಸಂದರ್ಭವಿದೆ."[೨೨] ಇದು ಹಸಿವು ಈಡೇರಿಸಿಕೊಳ್ಳುವುದಕ್ಕಾಗಿ ಆಹಾರೋತ್ಪಾದನೆ ಮಾಡುತ್ತ ಹೊರಟ ಮನುಷ್ಯ ಅದನ್ನು ಎಲ್ಲ ಸಂದರ್ಭದಲ್ಲಿ ಆರ್ಥಿಕ ಕಾರ್ಯಕ್ಷೇತ್ರ ಮಾಡಿಕೊಂಡು ಮಹಿಳೆಯ ವಿಚಾರದಲ್ಲಿ ಶೋಷಣೆ ಮತ್ತು ಕ್ರೌರ್ಯದ ಅಸ್ತ್ರದಂತೆ ಉಪಯೋಗಿಸಿದ ಕತೆ. ಸಂಪನ್ಮೂಲಗಳ ಲಭ್ಯತೆ ಮತ್ತು ಅವುಗಳ ನಿರ್ದಿಷ್ಟ ಉಪಯೋಗ ವಿಧಾನದ ಅರಿವಿನಿಂದಾಗಿ ಮನುಷ್ಯ ಸ್ವತಃ ತಾನೇ ಉತ್ಪಾದನಾ ಕೇಂದ್ರಗಳನ್ನು ಮಾಡಿಕೊಂಡ.

ಕಾಲಕ್ರಮೇಣ ಆರ್ಥಿಕ ಸಂಪತ್ತಿನ ಸಂಗ್ರಹಣೆ ಮತ್ತು ವಿನಿಮಯಗಳಿಂದಾಗಿ ಬಂಡವಾಳ ವೃದ್ಧಿಯಾದಂತೆ ತಾನು ಊಳಿಗಮಾನ್ಯದ ಧಣಿಯಾಗಿ, ಪ್ರಭುವಾಗಿ, ಉದ್ಯಮ ಪತಿಯಾಗಿ ಸಾಮಾಜಿಕ, ರಾಜಕೀಯ, ನೀತಿ ನಿರೂಪಣೆಗಳ ನಿರ್ವಾಹಕನಾಗಿ ಮನುಷ್ಯ ಸುಲಿಗೆಯ ವ್ಯಾಪಕ ವ್ಯವಸ್ಥೆಯೇ ತಾನಾದ. ಇದರೊಂದಿಗೆ ಬೌದ್ಧಿಕತೆಯನ್ನು ಹತ್ತಿಕ್ಕುತ್ತ ಅತಿಭಾವುಕ ನೆಲೆಯಲ್ಲಿ ಮಹಿಳೆಯನ್ನು ದುರ್ಬಲಳನ್ನಾಗಿ ಮಾಡಿದ ಧಾರ್ಮಿಕ ವ್ಯವಸ್ಥೆಯೂ ಸೇರಿಕೊಂಡು ಒಟ್ಟಾರೆ ಅಸಹಾಯಕರನ್ನು, ಮುಗ್ಧರನ್ನೂ, ನಿರಂತರವಾಗಿ ಅನ್ಯಾಯದ ಕತ್ತಲಲ್ಲಿರುವಂತೆ ನೋಡಿಕೊಂಡದ್ದು ಈ ಬಗೆಯ ಆರ್ಥಿಕ, ಧಾರ್ಮಿಕ ಹಿತಾಸಕ್ತಿ ಕೇಂದ್ರಗಳು ಯಾವತ್ತು ಜೀವನದರ್ಶನ ಪ್ರತಿಪಾದನೆಯಲ್ಲಿ ನಿರರ್ಥಕ ಅಧ್ಯಾತ್ಮ ಪರಮಾತ್ಮಗಳನ್ನು ವೈಭವೀಕರಿಸಿ, ಮಹಿಳೆಯ ಸಾಮಾಜಿಕ, ರಾಜಕೀಯ ಸಮಾನತೆ ಸವಲತ್ತುಗಳ ಕಡೆಗೆ ನಿರ್ಲಕ್ಷ್ಯ ತಳೆಯುವಂತೆ ಮಾಡುತ್ತಾ ಬಂದಿದೆ. ಮತ್ತು ಕೆಲವರ ಪಾಲಿಗೆ ಈ ಧರ್ಮವೇ ಆ ಎಲ್ಲ ಸುಖ ಸಂಪತ್ತುಗಳ ನಿರಾಯಾಸ ಅನುಭೋಗಕ್ಕೆ ಕಾರಣವಾಗಿದೆ.

ಇಂದಿನ ಆರ್ಥಿಕ ವ್ಯವಸ್ಥೆಯು ಜಟಿಲವಾದುದು. ಅದರ ಸ್ವರೂಪ ಅರಿಯಬೇಕಾದರೆ ಅದರ ಪೂರ್ವೇತಿಹಾಸದ ಲಘು ಪರಿಚಯ ಅತ್ಯಾವಶ್ಯಕ. "ಮಾನವನು ಭೂಮಿಯಲ್ಲಿ ಜನ್ಮ ತಾಳಿದಾಗ ಹೆಚ್ಚು ಕಡಿಮೆ ಕಾಡು ಮೃಗಗಳಂತೆ ಜೀವಿಸುತ್ತಿದ್ದ. ನಂತರ ಆತನ ಆರ್ಥಿಕ ಜೀವನ ಕ್ರಮೇಣ ವಿಕಾಸವಾಗತೊಡಗಿತ್ತು. ಒಕ್ಕಲುತನ ಒಮ್ಮೆಲೇ ಎಲ್ಲೆಡೆ ಉಗಮವನ್ನು ಹೊಂದಿಲ್ಲ. ಅಂದರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ವರ್ಷಗಳಲ್ಲಿ ಒಕ್ಕಲುತನ ಪ್ರಾರಂಭವಾಯಿತು. ೧೯ನೇ ಶತಮಾನದ ವಿದ್ವಾಂಸರು ಮಾನವನ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ವಿವರಿಸುತ್ತಾರೆ. ಮೊದಲನೆಯದು ಪ್ರಾಣಿಗಳನ್ನು ಬೇಟೆಯಾಡಿ ಮತ್ತು ಹಣ್ಣು ಹಂಪಲುಗಳನ್ನು ತಿಂದು ಜೀವಿಸುವ ಹಂತ. ಕಾಡುಪ್ರಾಣಿಗಳನ್ನೇ ಪಳಗಿಸಿ, ಅವುಗಳಿಂದ ಉಪ ಜೀವನವನ್ನು ಸಾಗಿಸುವುದು ಎರಡನೆಯ ಅಲೆಮಾರಿ ಹಂತ. ಒಂದೇ ಸ್ಥಳದಲ್ಲಿ ನೆಲೆಸಿ ಕೃಷಿಯಿಂದ ಉಪ ಜೀವನ ಸಾಗಿಸುವ ಕೃಷಿಯೂ ಮೂರನೆಯ ಹಂತ ಹಾಗೂ ಕೊನೆಯದು ನಾಗರೀಕತೆಯ ಹಂತ. ಕ್ರಿ.ಪೂ. ನಾಲ್ಕು ಸಾವಿರ ವರ್ಷಗಳ ಹಿಂದೆಯೇ 'ಅಲಿಕೋಸ್' ಎಂಬಲ್ಲಿ ಎ ಪ್ಲೇಸ್ ಇನ್ ದ ನಿಯರ್ ಈಸ್ಟ್‌ನಲ್ಲಿ ಒಕ್ಕಲುತನ ಪ್ರಾರಂಭವಾಯಿತೆಂದು ಒಂದು ಮೂಲದಿಂದ ಗೊತ್ತಾಗುತ್ತದೆ. ಆದರೆ ಆಧುನಿಕ ಸಂಶೋಧನಕಾರರು ಈ ಸಂಗತಿಯನ್ನು ಒಪ್ಪದೆ ಕ್ರಿ.ಪೂ. ೭೦೦ ವರ್ಷಗಳ ಹಿಂದೆ ಇತ್ತೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರೆದು, 'ಭತ್ತ' ಜಾಗತಿಕ ಕೃಷಿಗೆ ಭಾರತ ನೀಡಿದ ಕೊಡುಗೆ, ಕ್ರಿ.ಪೂ. ೩೦೦೦ ಇಸವಿಯಲ್ಲಿ ಮೆಹೆಂಜೋದಾರೋ ಮತ್ತು ಹರಪ್ಪಾ ನಗರಗಳಲ್ಲಿ ಕೃಷಿ ಬೆಳವಣಿಗೆಯನ್ನು ಸಾಧಿಸಲಾಯಿತು."[illegible]

ಭಾರತವು ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿದ್ದು, ದೇಶದ ಶೇಕಡ ೭೦ರಷ್ಟು ಮಂದಿ ಕೃಷಿಯಲ್ಲಿ ತಮ್ಮ ಬಾಳನ್ನು ಕಂಡುಕೊಂಡಿದ್ದಾರೆ. ಗ್ರಾಮೀಣ ಭಾರತವೇ ನೈಜ ಭಾರತ ಎಂದು ಮಹಾತ್ಮ ಗಾಂಧೀಜಿ ಹೇಳಿರುವರು. ಕೃಷಿಕರು ಭಾರತದ ಬೆನ್ನೆಲುಬು ಎಂದು ಅರ್ಥಶಾಸ್ತ್ರಜ್ಞರು

ವರ್ಣಿಸಿರುವುದು 'ಕೃಷಿತೋನಾಸ್ತಿ ದುರ್ಭಿಕ್ಷಂ' ಎಂದು ಲೋಕೋಕ್ತಿ 'ಬೇಸಾಯವನು ಬೇಗ ಸಾಯು' ಎಂಬ ಗಾದೆ ಮಾತು ಭಾರತದಲ್ಲಿ ಕೃಷಿಯು ಎಷ್ಟು ಮಹತ್ವಪೂರ್ಣವಾದದ್ದು ಎನ್ನುವುದನ್ನು ಸೂಚಿಸುತ್ತದೆ.

೫.೧. ಬೇಡ ಸಮುದಾಯದ ಆರ್ಥಿಕ ವ್ಯವಸ್ಥೆ

ಮೂಲ ಆದಿವಾಸಿ ಜನವರ್ಗದ ಬೇಟೆ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಂದಿರುವಂತಹ ಸಮುದಾಯವೆಂದರೆ ಅದು ಬೇಡ ಬುಡಕಟ್ಟು ಸಮುದಾಯ. ಇವರ ಮೂಲ ವೃತ್ತಿ ಬೇಟೆ (ಪ್ರಾಣಿ, ಪಕ್ಷಿ, ಜಲಚರಗಳು) ಈ ವೃತ್ತಿಯನ್ನು ಇಂದಿನವರೆಗೂ ಚಲನೆಯಲ್ಲಿ ಇಲ್ಲ ಆದರೆ ಅದರ ನೆನಪಿ ಗೋಸ್ಕರ ವರ್ಷದಲ್ಲಿ ಒಂದು ಭಾರಿ ಅದು ಉಗಾದಿ ಹಬ್ಬದಂದು ಸಾಂಕೇತಿಕವಾಗಿ ಆಚರಣೆ ಯಲ್ಲಿ ತೊಡಗಿಸಿಕೊಂಡಿರುವುದನ್ನು ನೋಡಬಹುದು. ಈ ಆದಿಮ ಬೇಟೆಯ ಸಂಸ್ಕೃತಿಯಿಂದ ತಮ್ಮ ಬದುಕನ್ನು ವರ್ತಮಾನದಲ್ಲಿ ನಿರ್ವಹಿಸಲು ಸಾಧ್ಯವಿಲ್ಲವೆಂದು ಅರಿತುಕೊಂಡು ಅದರ ಜೊತೆಗೆ ಪರ್ಯಾಯ ವೃತ್ತಿಯನ್ನು ಸಂದರ್ಭಕ್ಕನುಗುಣವಾಗಿ ಮೈಗೂಡಿಸಿಕೊಂಡಿರುವುದು ಇಂದಿನ ಕರ್ನಾಟಕದಲ್ಲಿ ವಾಸವಾಗಿರುವ ಬೇಡರ ಪ್ರದೇಶಗಳಲ್ಲಿ ಕಾಣಬಹುದು. ಸಧ್ಯದ ಪರಿಸ್ಥಿತಿಯಲ್ಲಿ ಬೇಡ ಬುಡಕಟ್ಟು ಜನರು ನಿರ್ವಹಿಸುವ ಯಾವುದೇ ಕಸುಬುಗಳನ್ನು ತೆಗೆದುಕೊಂಡರೂ ಅವುಗಳು ತಮ್ಮದೇ ಆದ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿವೆ. ಪ್ರಮುಖವಾಗಿ ಇವರ ಮೂಲ ಕಸುಬುಗಳಿಗೆ ನಾಗರೀಕ ಜಗತ್ತು ಅದರಲ್ಲೂ ವಸಾಹತು ಆಡಳಿತದ ನಂತರ ತೀವ್ರವಾದ ಬಿಕ್ಕಟ್ಟಿಗೆ ಸಿಲುಕಿ ಪರಿಹಾರ ಕಂಡುಕೊಳ್ಳದೆ ಹೆಣಗಾಡುತ್ತಿವೆ. ವಸಾಹತು ಸರಕಾರ ತಮ್ಮ ಅನುಕೂಲಕ್ಕಾಗಿ ಅರಣ್ಯ ಕಾನೂನುಗಳ ಮೂಲಕ ನಿಯಂತ್ರಣಕ್ಕೆ ಒಳಪಡಿಸಲು ತೊಡಗಿದವು. ಈ ಕಾರಣದಿಂದಾಗಿ ಹಲವಾರು ಬುಡಕಟ್ಟು ಸಮುದಾಯಗಳು ತಮ್ಮ ಮೂಲ, ಪಾರಂಪಾರಿಕ ಕಸುಬುಗಳನ್ನು ಕಳೆದುಕೊಂಡವು. ಅರಣ್ಯದಿಂದ ಅರಣ್ಯ ಉತ್ಪಾದನೆಗಳನ್ನು ಸಂಗ್ರಹಿಸುವಂತಹ ಕ್ರಿಯೆಗೆ ಸಹ ತಡೆಯನ್ನುಂಟು ಮಾಡುವ ಮೂಲಕ ಅವರಿಗೆ ತೊಂದರೆಯನ್ನುಂಟು ಮಾಡಿದರು. ಹಾಗೆಯೇ ಬೇಟೆಗಾರಿಕೆ ಮಾಡದಿರಲು ವಸಾಹತುಶಾಹಿ ಆಡಳಿತವು ಅರಣ್ಯದಲ್ಲಿರುವ ಪ್ರಾಣಿ, ಪಕ್ಷಿಗಳು, ಕುರಿತು ತೀವ್ರವಾದ ಕಾನೂನುಗಳನ್ನು ಜಾರಿಗೆ ಮಾಡಿತು. ಪಶುಸಂಗೋಪನೆಗೆ ಅವಕಾಶವಿದ್ದರೂ ಸಪ ಪಶುಗಳಿಗೆ ಬೇಕಾಗುವ ಹುಲ್ಲು ಮೇಯಲು ಕಾಯ್ದಿಟ್ಟ ಕಾಡಿನಲ್ಲಿ ಅವಕಾಶ ನೀಡಲಿಲ್ಲ. ಜೊತೆಗೆ ಪಶುಪಾಲನೆಯಿಂದ ಅಂತಹ ಲಾಭವಿಲ್ಲದಾಯಿತು. ನಾಗರೀಕರು ವಿದೇಶಿ ಹಸುಗಳನ್ನು ಸಾಕಿ ಅದರಿಂದ ಪಡೆಯುವ ಲಾಭಕ್ಕೆ ಹೋಲಿಸಿದರೆ ಲಾಭವಿಲ್ಲವಾಯಿತು.

ಇವರು ಮಾಡುವಂತಹ ಪಶುಸಾಕಾಣಿಕೆ ಬೇಡವೆನ್ನಿಸುತ್ತದೆ. ಕಾರಣ ಸಧ್ಯದ ಪರಿಸ್ಥಿತಿಯಲ್ಲಿ "ಪಾರಂಪರಿಕ ವೃತ್ತಿಗಳನ್ನು ಗಮನಿಸಿದಾಗ ಕೆಲವು ಅಂಶಗಳು ಗಮನಕ್ಕೆ ಬರುತ್ತವೆ."[3] ನಮ್ಮ ಭಾರತದ ಸಮಾಜದಲ್ಲಿ ಬುದ್ಧಿಶಕ್ತಿಗೆ ನೀಡಿರುವ ಪ್ರಾಮುಖ್ಯತೆಯನ್ನು ದೈಹಿಕ ಶಕ್ತಿಗೆ ಕೊಡದಿರುವುದು

ಅದರ ಜೊತೆಗೆ ದೈಹಿಕ ಶಕ್ತಿಯ ಕೆಲವು ಕೆಲಸಗಳನ್ನು ಸಹ ಕೀಳು ಮನೋಭಾವದಲ್ಲಿ ಕಾಣು ವಂತಹ ಪರಂಪರೆಯು ಹಿಂದಿನಿಂದಲೂ ಬೆಳೆದುಬಂದಿದೆ. ಈ ಕಾರಣದಿಂದಾಗಿಯೂ ಸಹ ಕೆಲವೊಂದು ಬುಡಕಟ್ಟು ಸಮುದಾಯಗಳು ತಮ್ಮ ಮೂಲ ಕಸುಬುಗಳನ್ನು ಕೈಬಿಡುತ್ತಿವೆ. ಹಾಗಾಗಿ ಅವರಿಗೆ ಇಷ್ಟವಿಲ್ಲದವುಗಳು ಆ ಕಸುಬುಗಳಾಗಿವೆ. ಪ್ರಾಚೀನ ಸಂದರ್ಭದಿಂದಲೂ ಇಲ್ಲಿಯ ಸಾಮಾಜಿಕ ಚರಿತ್ರೆಯನ್ನು ನೋಡಿದರೆ ನಮಗೆ ತಿಳಿದು ಬರುವುದೇನೆಂದರೆ ಯಾವ ವ್ಯಕ್ತಿ ಯಾವ ವೃತ್ತಿಮಾಡುತ್ತಾನೆ. ಮತ್ತು ಆ ವೃತ್ತಿಗೆ ಸಮಾಜದಲ್ಲಿ ಯಾವ ಮನ್ನಣೆ ಇದೆ ಎಂಬುದರ ಆಧಾರದ ಮೇಲೆ ಸಾಮಾಜಿಕ ಮನ್ನಣೆಗಳು ಮಾನ್ಯತೆ ದೊರಕುತ್ತವೆ. ಇಂತಹ ಸಂದರ್ಭದಲ್ಲಿ ಬುಡಕಟ್ಟು ಸಮುದಾಯವೊಂದು ಒಂದು ಕಸುಬನ್ನು ಬಿಟ್ಟು ಬೇರೆ ವೃತ್ತಿಯನ್ನು ಮಾಡಲು ನಿರ್ಧರಿಸಿದರೆ ಅವರನ್ನು ಗೌರವಿಸಬೇಕು, ಯಾಕೆಂದರೆ ಆ ಕಸುಬು ಅವರಿಗೆ ಸಂಭವಿಸಲಿರುವ ನೋವು, ಹಿಂಸೆ, ಹಸಿವು, ದಾರಿದ್ರ್ಯ ಮುಂತಾದವುಗಳಿಂದ ಅವರನ್ನು ರಕ್ಷಿಸುತ್ತದೆ. ನಾಗರೀಕ ಜಗತ್ತಿನ ಜನರು ಹೊಸದಾಗಿ ಆವಿಸ್ಕಾರಗೊಂಡ ತಂತ್ರಜ್ಞಾನಕ್ಕೆ ಹೋದರೆ ನಾವು ಅವರಿಗೆ ಮನ್ನಣೆ ನೀಡುತ್ತೇವೆ. ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನಮಾನವನ್ನು ನೀಡುತ್ತೇವೆ. ಹಾಗೆಯೇ ಬುಡಕಟ್ಟು ಸಮುದಾಯದವರು ಸಹ ಹೊಸ ವೃತ್ತಿಯನ್ನು ಮಾಡಲು ನಿರ್ಧರಿಸಿದರೆ ಅವರಿಗೆ ಅವಕಾಶ ಕಲ್ಪಿಸಿಕೊಡುವ ಮುಖಾಂತರ ಮಾನವೀಯತೆಯನ್ನು ಮೆರೆಯಬೇಕು. ನಮ್ಮ ಸಂಸ್ಕೃತಿ ಗುರುತಿಸುವ ಹೆಸರಿನಲ್ಲಿ ಹಾಗೇ ಇರುವಂತೆ ಹೇಳುವುದು ಅವರಿಗೆ ಅನ್ಯಾಯಮಾಡಿದಂತಾಗುತ್ತದೆ.

ಬುಡಕಟ್ಟು ಸಮುದಾಯಗಳು ಕೃಷಿ ಹಾಗೂ ಇತರ ನಾಗರೀಕ ಜಗತ್ತಿನ ವೃತ್ತಿಗಳನ್ನು ಮಾಡಲು ಪ್ರಯತ್ನಿಸಿದರು, ಅದಕ್ಕಾಗಿ ಅಲ್ಪ-ಸ್ವಲ್ಪ ಶಿಕ್ಷಣಪಡೆದ ಬುಡಕಟ್ಟು ಸಮುದಾಯಗಳು ನಾಗರೀಕ ಜಗತ್ತಿನ ತಳುಕಿನ ಜೀವನದಲ್ಲಿಯೂ ಸಹ ತಮ್ಮನ್ನು ಮುಖ್ಯವಾಹಿನಿಗೆ ಬರಲು ಸಾಧ್ಯವಾಗಲೇ ಇಲ್ಲ. ಕೃಷಿ ಪ್ರಾರಂಭ ಮಾಡಿದ ಆದಿವಾಸಿ ಸಮುದಾಯಗಳು ತಮ್ಮ ಕುಮ್ರಿ ವ್ಯವಸಾಯವನ್ನು ಬಿಟ್ಟು ಆಧುನಿಕ ಬೇಸಾಯ ಮಾಡಲು. ಪ್ರಾರಂಭಿಸಿದವು. ಇಲ್ಲಿಯ ಕೃಷಿ ಪದ್ಧತಿ ಅವರಿಗೆ ಅರಗಲೇ ಇಲ್ಲ. ವರ್ತಮಾನದ ಜಗತ್ತು ಹಾಗೂ ಜಾಗತೀಕರಣಗಳು ಕೃಷಿಯ ಮೇಲೆ ಮೊದಲಿನಿಂದಲೂ ಮಲತಾಯಿ ಧೋರಣೆಯನ್ನು ಅನುಸರಿಸುತ್ತಾ ಬಂದಿವೆ. ಈ ತೆರನಾದ ಧೋರಣೆಯಿಂದಾಗಿ ಸಾಂಪ್ರದಾಯಿಕವಾದ ಕೃಷಿಯನ್ನು ವೃತ್ತಿಯನ್ನಾಗಿ ಮಾಡಿಕೊಂಡ ಕೆಲವು ಜಾತಿಗಳೇ ಇಂದು ಬೀದಿಪಾಲಾಗಿವೆ.

ಇಂತಹ ಸಂದರ್ಭದಲ್ಲಿ ಹೊಸದಾಗಿ ಕೃಷಿಗೆ ಪಾದಾರ್ಪಣೆ ಮಾಡಿದ ಬುಡಕಟ್ಟು ಸಮುದಾಯಗಳು ಹೇಳ ಹೆಸರಿಲ್ಲದಂತೆ ಮೂಲೆಗುಂಪಾಗಿ ತಮ್ಮನ್ನು ಇನ್ನೊಬ್ಬರಲ್ಲಿ ಜೀತದಾಳನ್ನಾಗಿಸಿಕೊಂಡಿರುವ ಸ್ಥಿತಿಗಳಿವೆ. ಅಲ್ಪ-ಸ್ವಲ್ಪ ನಾಗರೀಕ ಜಗತ್ತಿನ ಓದನ್ನು ಕಲಿತಿರುವ ಬುಡಕಟ್ಟು ಸಮುದಾಯದ ಬೆರಳೆಣಿಕೆಯಷ್ಟು ಜನರು ಈ ಮುಖ್ಯವಾಹಿನಿಯ ಎಲ್ಲಾ

ಪಾಪಕೃತ್ಯಗಳಿಂದಾಗಿ ಸರಕಾರಿ ಕೆಲಸಗಳಿಂದ ವಂಚಿತರಾಗಿದ್ದಾರೆ. ಸರಕಾರಿ, ಅರೆಸರಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಸಿಕ್ಕವರು ಈ ಜಗತ್ತಿನೊಂದಿಗೆ ಹೊಂದಾಣಿಕೆ ಮಾಡಿಕೊಂಡು, ತಮ್ಮ ಮೂಲ ಬುಡಕಟ್ಟು ಸಮುದಾಯದಿಂದ ದೂರ ಸರಿದು ತಮ್ಮನ್ನು ತಾವು ಕಳೆದುಕೊಂಡಿದ್ದಾರೆ. ಮತ್ತೆ ಕೆಲವರು ಇಲ್ಲಿಯ ದುರಾಭ್ಯಾಸಗಳಿಗೆ ಶರಣಾಗಿ ತಾವು ಯಾರು ಎಂಬುದನ್ನೇ ಮರೆತು ಹಾಳಾಗಿ ಹೋಗಿದ್ದಾರೆ. ಇಂತಹ ಪರಿಸ್ಥಿತಿಗೆ ಒಳಪಟ್ಟಿರುವವರಲ್ಲಿ ಬೇಡ ಬುಡಕಟ್ಟು ಸಮುದಾಯವೂ ಒಂದು.

ಮೂಲತಃ ಗುಡ್ಡಗಾಡು ಜನರಾದ ಇವರು ಬೇಟೆಗಾರಿಕೆಯನ್ನೇ ವೃತ್ತಿಯನ್ನಾಗಿಸಿ ಆ ಮೂಲಕ ಹೊಟ್ಟೆ ಹೊರೆಯುತ್ತಿದ್ದವರು. ನಾಡಿನ ಸಂಪರ್ಕಕ್ಕೆ ಸ್ಪಂದಿಸದೇ ಅರಣ್ಯದಲ್ಲಿ ದೀರ್ಘಕಾಲ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವರು. ಊರಿನ ಸಂಪರ್ಕವು ತಮಗೆ ಏಕೆ ದೊರೆಯಲಿಲ್ಲವೆಂಬುದನ್ನು ಸಮರ್ಥಿಸುವ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಮುದಾಯದ ಹಿರಿಯರಲ್ಲಿ ಕೇಳಿದಾಗ ಈ ರೀತಿಯಾಗಿ ಮಾಹಿತಿ ನೀಡಿದ್ದರು. "ಬ್ರಹ್ಮನು ಜೇಡಿಮಣ್ಣಿನಿಂದ ಹಲವಾರು ಸಮುದಾಯಗಳನ್ನು ಸೃಷ್ಟಿಮಾಡಿ ಒಂದೊಂದನ್ನು ಹೆಸರಿಸುತ್ತಾ (ಲಿಂಗಾಯತ, ಬಣಜಿಗ, ಕುರುಬ) ಊರಿನ ಒಳಕ್ಕೆ ಎಸೆದ, ಅಷ್ಟರಲ್ಲಿ ಬ್ರಹ್ಮನಿಗೆ ಆಯಾಸವಾಗಿ ಇನ್ನು ಸಮುದಾಯಗಳು ಸೃಷ್ಟಿ ಮಾಡುವುದು ಸಾಕೆನಿಸಿ ಉಳಿದ ಜೇಡಿ ಮಣ್ಣನ್ನು ಊರಿನ ಆಚೆಗೆ ಎಸೆದ. ಆ ಎಸೆದ ಮಣ್ಣಿನಿಂದ ಒಂದು ಗುಂಪು ಜನ ಸೃಷ್ಟಿಯಾಗಿ ಬಂದರು. ಅಷ್ಟರಲ್ಲಿ ಬ್ರಹ್ಮನು ಅವರನ್ನು ಊರಿನೊಳಗೆ ಬರುವುದು ಬೇಡವೆಂದು ತಡೆದ. ಸೃಷ್ಟಿಯಾದ ಗುಂಪಿನ ಜನರು ಬ್ರಹ್ಮನಿಗೆ ಎದುರು ಮಾತನಾಡದೆ ಕಾಡಿಗೆ ನಡೆದು ಬೇಟೆಗಾರಿಕೆಯಲ್ಲಿ ತೊಡಗಿಸಿಕೊಂಡರು. ಹೀಗೆ ನಾಡಿಗೆ ಬೇಡವಾದವರು ಬೇಡರಾದರು."[5]

ಇದರಿಂದ ನಾಡಿನ ಸಮಾಜ ಸಂಪರ್ಕದಿಂದ ವಂಚಿತರಾಗಿ ದೂರವಾದರೂ ನಾಡಿನ ಪ್ರಭಾವ ಕಾಡಿನಲ್ಲಿ ವಾಸಿಸುವ ಜನಜೀವನದ ಮೇಲೆ ಆಗುತ್ತದೆಂಬುದು ನಿರಂತರ ಅನುಭವಕ್ಕೆ ಬಂದ ಅಂಶವಾಗಿದೆ. ಏಕೆಂದರೆ ನಾಡಿನ ಮನುಷ್ಯನು ಕಾಡನ್ನು ಎಂದಿಗೂ ಅಲಕ್ಷಿಸದೇ ಜೀವಿಸಲು ಸಾಧ್ಯವಿಲ್ಲ. ಕಾಡಿನ ಉತ್ಪನ್ನಗಳು ನಾಡಿಗೆ ಪೂರಕವಾದಂತೆ ನಾಡು ಕಾಡಿಗೆ ಪೂರಕವಾಗುತ್ತದೆಂಬುದು ಸತ್ಯಸಂಗತಿ. ಏಕೆಂದರೆ ನಾಗರೀಕ ಜನರ ಸ್ವಾರ್ಥ-ಲೋಭಗಳ, ಲಾಭದಾಸೆಗಳ ಎಣಿಕೆಯಿಂದಾಗಿ ಗುಡ್ಡ-ಗಾಡುಗಳಲ್ಲಿ ವಾಸಿಸುವ ಬುಡಕಟ್ಟು ಜನರು ತಾವು ಕಷ್ಟಪಟ್ಟು ಸಂಗ್ರಹಿಸಿದ ಕಾಡಿನ ಉಪ ಉತ್ಪನ್ನಗಳನ್ನು ಇಂಥವರಿಗೆ ಕೊಟ್ಟು ತಾವು ಕೈಕಟ್ಟಿ ಕೂಡಬೇಕಾಗಿತ್ತು. ಇಂಥ ಅಪಾಯದಿಂದ ತಪ್ಪಿಸಿಕೊಳ್ಳಬೇಕಾದರೆ ತಮ್ಮ ಮೇಲೆ ಆಕ್ರಮಣವೆಸಗಿದವರೊಂದಿಗೆ ಹೋರಾಡುವುದು ಅನಿವಾರ್ಯ ವಾಯಿತು. ಇದು ಪ್ರಾಣಿ ಬೇಟೆಯ ಹೋರಾಟದಲ್ಲಿ ಪಳಗಿದ ಬೇಡ ಬುಡಕಟ್ಟಿನವರಿಗೆ ಕಷ್ಟ ಸಾಧ್ಯವಲ್ಲದ ಕೆಲಸವಾಯಿತು. ಬೇಟೆಯಾಡಿದ ಪ್ರಾಣಿಯನ್ನು ಹಿಡಿದು ಪಳಗಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅದನ್ನು ಮಣಿಯುವಂತೆ ಮಾಡುವ, ಹಿಡಿಯಲಾಗದ ಪ್ರಾಣಿಗಳನ್ನು ಭೀತಿಗೊಳಿಸಿ ದೂರ

ಅಟ್ಟುವ ಅಪಾಯಕರವೆನಿಸಿದವುಗಳನ್ನು ಹಿಡಿದು ಕೊಲ್ಲುವ ಚಾಕಚಕ್ಯತೆ ಬೇಡರಿಗೆ ಇದ್ದ ವರದಾನ. ಆದ್ದರಿಂದಲೇ ಕಾಡಿನ ಮಾರ್ಗವಾಗಿ ಓಡಾಡುವ ನಾಡಿನ ಜನರನ್ನು ಅವರು ಗುಮಾನಿಯಿಂದ ಕಾಣುತ್ತಿದ್ದರು. ಅಂಥವರಿಂದ ತಮಗೆ ತೊಂದರೆಯಾದೀತೆಂಬ ಎಚ್ಚರಿಕೆಯಿಂದ ಹಿಡಿದು ಕೊಲ್ಲುತ್ತಿದ್ದರು. ಇಲ್ಲವೇ ಅವರ ವಸ್ತುವಿಶೇಷಗಳನ್ನು ವಶಪಡಿಸಿಕೊಂಡು ಓಡಿಸುತ್ತಿದ್ದರು.

ಕ್ರಿ.ಶ. ೧೮೦೦ರಲ್ಲಿ ಭಾರತಕ್ಕೆ ಆಗಮಿಸಿದ ವಿದೇಶಿ ವಿದ್ವಾಂಸ ಬುಖಾನನು ಬೇಡರನ್ನು ಕುರಿತು ಈ ರೀತಿಯಾಗಿ ಹೇಳಿದ್ದಾನೆ. “ಚಿತ್ರದುರ್ಗ ಜಿಲ್ಲೆಯ ಉತ್ತರದಿಕ್ಕಿನ ಗುಡ್ಡಗಾಡು ತೀರದ ಪ್ರದೇಶದಲ್ಲಿ ವ್ಯವಸಾಯಕ್ಕಾಗಿಯೇ ಸೀಮಿತವಾದ ಪ್ರದೇಶದಗಳಲ್ಲಿ ಬೇಟೆಯಾಡುವ ಬೇಡರು ವಾಸಿಸುತ್ತಿದ್ದರು. ಟಿಪ್ಪುವಿನ ಕಾಲಕ್ಕೆ ಅವರು ಸೇನೆಯಲ್ಲಿದ್ದು ೪.೫. ೧೨ (ಪಗೋಡಗಳ) ಪಗಾರವನ್ನು ಹೊಂದಿದ್ದರು. ಅವರು ಬೇಟೆಯ ವೃತ್ತಿಯಲ್ಲಿ ಪರಿಣಿತರಾದುದರಿಂದ ಸೈನಿಕ ಕಾರ್ಯಚರಣೆಯಲ್ಲಿ ಮತ್ತು ನಿಶ್ಚಿತವಾದ ವಿಜಯವನ್ನು ಸಾಧಿಸುವಲ್ಲಿ ಸಹಕಾರಿಗಳಾಗಿದ್ದರು, ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಅನೇಕ ಹೋರಾಟಗಳಲ್ಲಿ ಅವರಿಂದ ಯಶಸ್ಸನ್ನು ಪಡೆದಿದ್ದರು. ಬೇಡರ ಸಮುದಾಯದವರು ಸಧ್ಯಕ್ಕೆ ವ್ಯವಸಾಯವನ್ನೇ ಅವಲಂಬಿಸಿ ಕಾಲಯಾಪನೆ ಮಾಡುತ್ತಿದ್ದಾರೆ. ಅವರು ಹಿಂದಿನ ಕಾಲಕ್ಕೆ ಬೇಟೆಗಾಗಿ ಬಳಸುತ್ತಿದ್ದ ಆಯುಧಗಳನ್ನು ಇಂದಿಗೂ ಇಟ್ಟುಕೊಂಡಿದ್ದಾರೆ.”[೨]

“ರೈಸ್ ಅವರು ಸಮುದಾಯವನ್ನು ಕುರಿತು ಬೇಡರ, ಭೋಯಾ ಅಥವಾ ಚೇಲಾ ಎಂದು ಸಂಭೋಧಿಸಲಾಗುತ್ತಿತ್ತು. ಅಲ್ಲದೆ ನಾಯಕ, ಬಾರಿಕ, ಕಣ್ಣಯ್ಯಗಳೆಂದೂ ಕರೆಯಲಾಗುತ್ತಿತ್ತು. ಈ ಬೆಡರು ಬೇರೆ-ಬೇರೆ ಸಮುದಾಯದ ಸಂಪ್ರದಾಯ ಹಾಗೂ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಅವರ ಸ್ಥೂಲ ಕಾಯ, ದಪ್ಪನೆಯ ಮೂಗು, ಗುಂಗುರು ಗೂದಲುಗಳನ್ನು ನೋಡಿದಾಗ, ಬಹುಶಃ ಅವರು ಮೂಲತಃ ಅನಾರ್ಯ (ಅರ್ಯರು ಅಲ್ಲ)ರು ಎಂದು ಸಾಬೀತಾಗುತ್ತದೆ”[೩] ಎಂದು ಹೇಳಿದ್ದಾರೆ. ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ಹೇಳುವಂತೆ “ನಮ್ಮಲ್ಲಿ ಬೇಡರಿಗೆ ಬೇರೆ ಜನರು ಬಹಳ ಹೆದರ್‌ತ್ತಾರ್ರಿ. ಆದರ ನಾವು ಹಿಂದಿನ ನಮ್ಮ ಕುಲ ಕುಸುಬು ಆದ ಕಾಡಿನ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡುವುದನ್ನು ಬಿಟ್ಟೆದ್ದೀವಿ. ಕೆಲವು ವರ್ಷಗಳಿಂದ ಸರಕಾರದವರು ಕಾಡಿನ ಪ್ರಾಣಿಗಳನ್ನು ಕೊಲ್ಲುವುದು ಮಹಾ ಅಪರಾಧ ಎಂದು ತಿಳಿದುಕೊಂಡು, ಬೇಟೆಯಾಡುವ ವೃತ್ತಿಯಿಂದ ದೂರವಾಗಿದ್ದೇವೆ.

ಇಂದು ನಮ್ಮೂರಿನ ಭೂ ಮಾಲಿಕರಲ್ಲಿ ಕೂಲಿ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದೀವಿ. ಆದರೂ ಮಾಂಸ ತಿನ್ನಬೇಕು ಎಂದಾಗ ಊರಲ್ಲಿ ಮಾರಾಟ ಮಾಡುವ ಕುರಿ, ಮೇಕೆ, ಫಾರಂ ಕೋಳಿಯ ಮಾಂಸವನ್ನು ತಂದು ಇಡೀ ಮನಿಮಂದಿಯಲ್ಲಾ ವಾರದಲ್ಲಿ ಒಂದೊಂದು ಸಲ ತಿನ್ನುತ್ತೇವೆ ಎಂದು ಹೇಳಿದರು.”[೪] ಇವತ್ತಿನ ಸಂದರ್ಭದಲ್ಲಿ ಬೇಡರು ತಮ್ಮ ಮೂಲ ಕಸುಬುಗಳಿಂದ ದೂರವಾಗುತ್ತಿದ್ದಾರೆಂದು ತಿಳಿದು ಬಂದಿತು.

ಒಂದು ಸಂದರ್ಭದಲ್ಲಿದ್ದ ಸಮುದಾಯದ ಜೀವನ ಪದ್ಧತಿಯು ಸದಾ ಹಾಗೇ ಇರಲು ಸಾಧ್ಯವಿಲ್ಲ. ಅದು ಸದಾ ಪರಿವರ್ತನೆಗೆ ಒಳಪಟ್ಟಿರುತ್ತದೆ. ಹಾಗಾಗಿ ಹಿಂದೆ ಒಂದು ಕಾಲದಲ್ಲಿ ಬೇಡ ಸಮುದಾಯದಲ್ಲಿ ಇದ್ದ ವೃತ್ತಿ ಜೀವನವು, ಇವತ್ತಿನ ಸಮುದಾಯದಲ್ಲಿ ಇದ್ದ ಜೀವನ ವಿಧಾನ ಬಹಳಷ್ಟು ಬದಲಾವಣೆ ಹೊಂದುತ್ತಾಯಿದೆ. ಸಂಸ್ಕೃತಿ ಎನ್ನುವುದು ಸದಾ ಬದಲಾವಣೆಗೆ ಒಳಗಾಗುವಂತಹದ್ದು. ಅದು ಅದರ ಮುಖ್ಯಗುಣ, ಹೀಗಿರುವಾಗ ಬುಡಕಟ್ಟು ಸಮುದಾಯದವರು ತಮ್ಮ ಪಾರಂಪರಿಕ ಅಸ್ಮಿತೆಗಳನ್ನು ಉಳಿಸಿಕೊಳ್ಳುತ್ತಲೇ ಪರಿವರ್ತನೆಯಾಗುವುದಕ್ಕೆ ಪೂರಕವಾಗಿ ನಮ್ಮ ಸರಕಾರದ ಅಭಿವೃದ್ಧಿ ಯೋಜನೆಗಳಿರಬೇಕಾಗುತ್ತದೆ. ಮೊದಲು ಕಾಡನ್ನು ಆಶ್ರಯಿಸಿಕೊಂಡು ಜೀವನ ನಡೆಸುತ್ತಿದ್ದರು. ಈ ದಿನ ಅರಣ್ಯದಲ್ಲಿ ಅವರು ಪ್ರವೇಶ ಮಾಡಲು ಸರಕಾರ ಬಿಡುತ್ತಿಲ್ಲ. ಜೊತೆಗೆ ಅರಣ್ಯದಲ್ಲಿ ಪ್ರಾಣಿ ಪಕ್ಷಿಗಳೇ ಇಲ್ಲವಾಗಿವೆ.

೫.೧.೨. ವೃತ್ತಿ ಸಂಬಂಧ ಉಪಕರಣಗಳು

ಬೇಡರ ಮೂಲ ವೃತ್ತಿ ಬೇಟೆ, ಹಾಗಾಗಿ ಇವರ ಉದ್ಯೋಗಕ್ಕೆ ಸಂಬಂಧಿಸಿರುವ ಉಪಕರಣಗಳನ್ನು ಇಲ್ಲಿ ಪರಿಚಯಿಸುತ್ತಾ, ಅವುಗಳ ಬಳಕೆ ಮತ್ತು ತಯಾರಿಕೆಯನ್ನು ಕುರಿತು ತಿಳಿಸುವ ಪ್ರಯತ್ನ ಮಾಡಲಾಗಿದೆ. ಒಂದು ಸಮುದಾಯಕ್ಕೆ ಆ ಸಮುದಾಯವು ತನ್ನ ಕುಟುಂಬ ನಿರ್ವಹಣೆಗಾಗಿ ಅವಲಂಬಿಸಿರುವ ವೃತ್ತಿ ಹಾಗೂ ಆ ವೃತ್ತಿಗೆ ಪೂರಕವಾಗಿರುವ ಉಪಕರಣಗಳು ಪೂಜ್ಯನೀಯವಾಗಿರುತ್ತವೆ. ಕಾರಣ ಅವುಗಳಿಲ್ಲದೆ ಅವರ ಹಿಂದಿನ ಜೀವನ ಸಾಗುವುದು ಕಷ್ಟಕರವಾಗಿರಬಹುದು. ಈ ಕಾರಣದಿಂದಾಗಿ ಅವರು ಆಯುಧಗಳನ್ನು ದೇವರೆಂದು ಪ್ರಮುಖವಾಗಿ ಬಾವಿಸಿಕೊಂಡಿರುವುದು ಕಂಡುಬರುತ್ತದೆ. ಬೇಡರು ಬಹುಮುಖ್ಯವಾಗಿ ತಮ್ಮ ವೃತ್ತಿಯ ಅನುಕೂಲತೆಗಾಗಿ ಬಳಸುವ ಸಲಕರಣೆಗಳು ಎಂದರೆ ಮೊಂಡಗೊಡಲಿ, ಭರ್ಚಿ, ಕವಣೆ, ಗಾಳ, ಬಲೆ, ಖಡ್ಗ, ಹಾಗೂ ಕೋವಿ ಇನ್ನಿತರ ಸಲಕರಣೆಗಳು ಇವರಲ್ಲಿವೆ ಮತ್ತು ಇವುಗಳನ್ನು ಸಾಣೆ ಹಿಡಿಯಲು ಬಳಸುವ ಮಸಗಲ್ಲು, ಪ್ರಮುಖವಾಗಿ ಬಳಸುವ ಸಾಧನಗಳು.

೧. ಮೊಂಡಗೊಡಲಿ

ಇದು ಹೆಸರೆ ಸೂಚಿಸುವಂತೆ ದಪ್ಪವಾದ ಕಬ್ಬಿಣದ ಕೊಡಲಿ. ಪ್ರಮುಖವಾಗಿ ಕಾಡು ಹಂದಿಯನ್ನು ಬೇಟೆಯಾಡುವ ಸಂದರ್ಭದಲ್ಲಿ ಬಳಸುತ್ತಾರೆ. ಇದನ್ನು ಕರಿಜಾಲಿ ಮರದ ದಪ್ಪವಾದ ಕೋಲಿನಿಂದ ಹಿಡಿಯನ್ನು ಸಿದ್ಧಪಡಿಸಿ, ಅದರ ಒಂದು ಹಂಚಿಗೆ ಕಬ್ಬಿಣದ ಕೊಡಲಿ ಸೇರಿಸಿ ಸಿದ್ಧಪಡಿಸಿಕೊಳ್ಳುತ್ತಾರೆ. ಪ್ರತಿ ಬೇಟೆಯಾದ ಮರುದಿನ ಮುಂಜಾನೆ ಮಸಗಲ್ಲಿನಿಂದ ಹರಿತವಾಗಿಸುತ್ತಿದ್ದರಂತೆ, ಆದರೆ ಈಗ ಸೌದೆ ಕಡಿಯಲು ಬಳಸುತ್ತಾರೆ.

೨. ಭರ್ಚಿ

ಈ ಆಯುಧವು ಬೇಟೆಯ ಪ್ರಾಚೀನ ಆಯುಧ ಪರಿಕರಗಳಲ್ಲಿ ಒಂದು. ಲೋಹ, ಮರ

ಇತ್ಯಾದಿಗಳಿಂದ ಮಾಡಿಕೊಂಡಿರುತ್ತಾರೆ. ಸುಮಾರು ಆರು ಅಡಿ ಉದ್ದವಿದ್ದು ತುದಿಯಲ್ಲಿ ಚೂಪಾಗಿಯೂ ಹರಿತವಾಗಿಯೂ ಇರುತ್ತದೆ. ಈಗಲೂ ಈ ಉಪಕರಣವು ಮನೆ ಗುಡಿಸಲುಗಳಲ್ಲಿ ಬರುವ ಹಾವುಗಳನ್ನು ಕೊಲ್ಲುವಾಗ ಬಳಸುತ್ತಾರೆ.

೩. ಕವಣೆ

ನಾರಿನ ದಾರದಿಂದ ಹೆಣೆದು ಮಾಡಿದ ಕಲ್ಲು ಬೀರುವ ಸಾಧನ. ಒಂದು ಮಾರು ಉದ್ದದ ದಾರಕ್ಕೆ ಮಧ್ಯಭಾಗದಲ್ಲಿ ಕಲ್ಲು ಇಡಲು ಹುರಿಯ ಚಪ್ಪಟ್ಟೆ ಸ್ಥಳ ಇರುವುದು. ಕವಣೆ ಹಗ್ಗದ ಒಂದು ತುದಿಯನ್ನು ಬೆರಳಿಗೆ ಗಟ್ಟಿಯಾಗಿ ಕಟ್ಟಿಕೊಂಡಿರುತ್ತಾರೆ. ಇನ್ನೊಂದು ತುದಿಯನ್ನು ಅದೇ ಕೈಯಲ್ಲಿ ಹಿಡಿದು ಸರ ಸರನೇ ತಿರುಗಿಸಿ ಗುರಿಯಿಟ್ಟು ಬಿಡಲಾಗುತ್ತದೆ. ಹಗ್ಗದ ಒಂದು ತುದಿಯನ್ನು ಬಿಟ್ಟ ತಕ್ಷಣ ಕಲ್ಲು ರಭಸದಿಂದ ಮುಂದುವರಿಯುತ್ತದೆ. ಈ ಸಾಧನದಿಂದ ಸಣ್ಣ ಪುಟ್ಟ ಪ್ರಾಣಿಗಳನ್ನು ಬೇಟೆಯಾಡಲು ಬಳಸುತ್ತಿದ್ದರು. ಆದರೆ ಇಂದು ವಯಸ್ಕ ಪುರುಷ ಮಹಿಳೆಯರು ಕೃಷಿಯಲ್ಲಿ ಬಳಸುತ್ತಾರೆ. ಅದು ಹೊಲದಲ್ಲಿರುವ ಜೋಳ, ಸಜ್ಜೆ, ಸೂರ್ಯಕಾಂತಿ, ಫಸಲನ್ನು ತಿನ್ನಲು ಬರುವಂತಹ ಹಕ್ಕಿಗಳನ್ನು ಓಡಿಸಲು ಉಪಯೋಗಿಸುತ್ತಾರೆ.

೪. ಬಲೆ

ಬಲೆಯನ್ನು ಉಪಯೋಗಿಸಿ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡುವ ವಿಧಾನ, ಬಹುತಾಂತ್ರಿಕತೆಯಿಂದ ಕೂಡಿದೆ. ಈ ಬೇಟೆಗೆ ನಾಲ್ಕಾರು ಬಲೆಗಳು ಎಂಟರಿಂದ ಹತ್ತುಜನ ಮೂರರಿಂದ ನಾಲ್ಕು ಬೇಟೆನಾಯಿಗಳು ಬೇಕಾಗುತ್ತವೆ. ಕುರುಚಲ ಗಿಡಗಳು ಹೆಚ್ಚಾಗಿರುವ ಕಾಡಿನ ಪ್ರದೇಶದಲ್ಲಿ ಬಲೆಗಳನ್ನು ಒಂದಕ್ಕೊಂದು ಸೇರಿಸಿ ಕಟ್ಟಿಗೆ ಸಹಾಯದಿಂದ ಕಟ್ಟಲಾಗುವುದು. ಕಾಡಿನ ಇನ್ನೊಂದು ಕಡೆಯಿಂದ ಬೇಟೆ ನಾಯಿಗಳನ್ನು ಬಿಟ್ಟುಕೊಂಡು ಬೇಟೆಗಾರರು ದೊಣ್ಣೆಯಿಂದ ಬಡಿಯುತ್ತಾ ಕೂಗುತ್ತಾ ಬರುತ್ತಾರೆ. ಗಿಡಮರಗಳ ಸಂದಿನಲ್ಲಿದ್ದ ಮೊಲ, ಬುರ್ಲಿ, ಕಾಡುಕುರಿ, ನರಿ ಮುಂತಾದ ಸಣ್ಣ ಪುಟ್ಟ ಪ್ರಾಣಿಗಳು ಬೆದರಿ ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ದಿಕ್ಕುದಿಕ್ಕಿಗೆ ಓಡುತ್ತವೆ. ಹೀಗೆ ಬಲೆಯ ಕಡೆಗೆ ಓಡಿದ ಪ್ರಾಣಿಗಳು ಬಲೆಯ ಒಳಗೆ ಬೀಳುತ್ತವೆ. ಪ್ರಾಣಿಗಳು ಬಿದ್ದ ತಕ್ಷಣ ನಿಲ್ಲಿಸಿದ ಬಲೆಯ ಕೋಲುಗಳು ಬೀಳುತ್ತವೆ. ಆಗ ಬಲೆ ಪ್ರಾಣಿಯನ್ನು ಸುತ್ತುತ್ತದೆ. ರಕ್ಷಣೆಯಲ್ಲಿದ್ದ ಬೇಟೆಗಾರರು ತಕ್ಷಣ ದೊಣ್ಣೆಯಿಂದ ಬೇಟೆ ಪ್ರಾಣಿಯನ್ನು ಬಡಿದು ಕೊಲ್ಲುತ್ತಾರೆ. ಕೆಲವು ಸಾರಿ ಪ್ರಾಣಿಗಳನ್ನು ಅಟ್ಟಿಸಿಕೊಂಡು ಬಂದ ನಾಯಿಗಳು ಬಲೆಯೊಳಗೆ ಬೀಳುವುದುಂಟು. ಈ ಬಲೆಗಳಿಂದ ಕಾಡು ಹಂದಿಗಳನ್ನು ಹಿಡಿಯಲು ಸಾಧ್ಯ. ಬಲೆಗೆ ಬಿದ್ದ ಹಂದಿಗಳನ್ನು ಭರ್ಚಿಗಳಿಂದ ಇರದು ಕೊಲ್ಲುತ್ತಾರೆ. ಭರ್ಚಿ ಇರಿಯುವ ಬೇಟೆಗಾರನಿಗೆ ಧೈರ್ಯಬೇಕು. ಈ ರೀತಿಯ ಬೇಟೆಯನ್ನು ಮೈದಾನ ಪ್ರದೇಶಗಳಲ್ಲಿ ಮಾಡುತ್ತಾರೆ. ಈ ಬಲೆಗಳನ್ನು ಮರದ ನಾರುಗಳಿಂದ ತಯಾರಿಸುತ್ತಾರೆ. ಇವತ್ತು ಇವೆಲ್ಲಾ ಮೂಲೆಗುಂಪು ಆಗಿವೆ.

೫. ಖಡ್ಗ

ಈ ಆಯುಧವನ್ನು ಬೇಟೆ ಪ್ರಾಣಿಗಳನ್ನು ಕೊಲ್ಲಲು ಬಳಸುತ್ತಾರೆ. ಇದನ್ನು ಕಬ್ಬಿಣದಿಂದ ತಯಾರಿಸುತ್ತಾರೆ. ಸರಿ ಸುಮಾರು ಒಂದು ಮೊಳ ಉದ್ದವಿರುತ್ತದೆ. ಇದರ ಹಿಡಿಯನ್ನು ಅಲ್ಯುಮಿನಿಯಂನಿಂದ ರಚಿಸಿರುತ್ತಾರೆ. ಖಡ್ಗವನ್ನು ಕೆಲವೊಂದು ಸಂದರ್ಭದಲ್ಲಿ ಮಾತ್ರ ಬಳಸುತ್ತಾರೆ. ಆದರೆ ಇಂದು ಬೇಡರ ಮನೆಯಲ್ಲಿ ಗೋಡೆಯ ಅಲಂಕಾರಿಕ ವಸ್ತುವಾಗಿದೆ.

೬. ಕುಡುಗೋಲು

ಬೇಟೆಗೆ ಬಳಸುವ ಒಂದು ಸಾಧನ. ಅರ್ಧ ವೃತ್ತಾಕಾರವಾಗಿದ್ದು, ಒಂದು ಕಡೆ ಮರದ ಹಿಡಿಕೆ ಇದ್ದು, ಒಳ ಅಂಚಿನಲ್ಲಿ ಹರಿತವಾಗಿರುವ ಒಂದು ಕತ್ತಿ, ಪ್ರಾಣಿಗಳ ಚರ್ಮ ತೆಗೆಯಲು ಬಳಸುತ್ತಿದ್ದರು. ಇವತ್ತು ಹೊಲ-ಮನೆಗಳಲ್ಲಿ ಕೃಷಿ ಸಲಕರಣೆಯಾಗಿ ಬಳಸುತ್ತಾರೆ. ಪ್ರಮುಖವಾಗಿ ಸಜ್ಜೆ, ಜೋಳ, ಸೂರ್ಯಕಾಂತಿ ಹಾಗೂ ಹಸು, ಎಮ್ಮೆಗಳಿಗೆ ಮೇವು ಕೊಯ್ಯಲು ಉಪಯೋಗಿಸುತ್ತಾರೆ.

೫.೧.೩. ವೃತ್ತಿ ಸಂಬಂಧಿ ಸಲಕರಣೆಗಳ ಕುರಿತು ನಂಬಿಕೆ, ಆಚರಣೆ ಮತ್ತು ವಿಧಿ-ನಿಷೇಧಗಳು

ನಮ್ಮ ಸಮಾಜದಲ್ಲಿರುವ ಪಾರಂಪರಿಕ ವೃತ್ತಿ ಮೂಲ ಸಮುದಾಯಗಳು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಹತ್ತು ಹಲವು ನಂಬಿಕೆ, ಆಚರಣೆ, ವಿಧಿ-ನಿಷೇಧಗಳನ್ನು ಹೊಂದಿರುತ್ತವೆ. ಅವರ ಸಲಕರಣೆಗಳು ಇತರ ಸಮುದಾಯಗಳಿಗೆ ಎಷ್ಟೇ ಭಯ ನಿಕೃಷ್ಟವಾಗಿ ಕಂಡರೂ ಸಹಿತ ಅವುಗಳ ಮೂಲಕವೇ ತಮ್ಮ ಪುರಾತನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾರೆ. ಇದರಿಂದ ಸಮುದಾಯಕ್ಕೆ ಸಲಕರಣೆಗಳು ಅತೀ ಪೂಜ್ಯನೀಯವೆನಿಸುತ್ತವೆ. ಅಂತಹ ಸಲಕರಣೆಗಳ ಬಗೆಗೆ ಸಮುದಾಯದೊಳಗೆ ಹತ್ತು ಹಲವಾರು ನಂಬಿಕೆ, ಆಚರಣೆ, ವಿಧಿ-ನಿಷೇಧಗಳು ಅಂತರ್ಗತವಾಗಿವೆ.

ಬೇಡರು ಸಹ ತಮ್ಮ ವೃತ್ತಿಗೆ ಸಂಬಂಧಿಸಿದ ಸಲಕರಣೆಗಳನ್ನು ತುಂಬಾ ಪೂಜ್ಯನೀಯ ದೃಷ್ಟಿಯಿಂದ ನೋಡುತ್ತಾರೆ. ಅವುಗಳ ಬಗ್ಗೆ ಇರುವ ಆಚರಣೆಗಳೆಂದರೆ ಪ್ರತಿವರ್ಷ ಎರಡು ಬಾರಿ ಆಯುಧ ಪೂಜೆಯನ್ನು ಮಾಡುತ್ತಾರೆ. ಒಂದು ಯುಗಾದಿ ಹಬ್ಬದ ದಿನದಂದು. ಇಡೀ ಈ ಸಮುದಾಯದವರು ತಮ್ಮಲ್ಲಿರುವ ಆಯುಧಗಳನ್ನು ಆರಾಧಿಸುವ ದೇವರುಗಳ ಜೊತೆಗೆ ಇರಿಸಿ ಅವುಗಳ ಜೊತೆಗೆ ತಮ್ಮ ಕುಟುಂಬದ ಹಿರಿಯರ ಸ್ಮರಣೆಗಾಗಿ ತುಂಬಿದ ಚರಿಗೆಯನ್ನು ಇಟ್ಟು ಕುಂಕಮ, ವಿಭೂತಿ, ಅರಿಷಣ ಹಚ್ಚಿ ಹೂ ಹಾಕಿ ಉದ್ದಿನಕಡ್ಡಿಹಚ್ಚಿ ಬೆಳಗಿ ಕೊನೆಯಲ್ಲಿ ಕರ್ಪೂರ ಹಚ್ಚಿ ಮನೆಯ ಎಲ್ಲರೂ ಭಾಗವಹಿಸಿ ನಮಸ್ಕರಿಸುತ್ತಾರೆ. ಕುಟುಂಬದ ಹಿರಿಯರು ತಮ್ಮೆಲ್ಲರನ್ನು ಚೆನ್ನಾಗಿ ಇಟ್ಟಿರು ದೇವರೆಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಎರಡನೆಯದಾಗಿ ನವರಾತ್ರಿಯಂದು ಶಕ್ತಿದೇವತೆಯಾದ ಶ್ರೀದುರ್ಗೆಯನ್ನು ಪೂಜಿಸುವ ಸಮಯದಲ್ಲಿ ಇವರಲ್ಲಿರುವಂತಹ ಆಯುಧಗಳನ್ನು ಇಟ್ಟು ಅರಿಷಿಣ, ಕುಂಕಮ, ವಿಭೂತಿ,

ಹೂಹಾಕಿ, ಉದ್ದಿನಕಡ್ಡಿಹಚ್ಚಿ ಪೂಜೆ ಮಾಡುತ್ತಾರೆ. ಪೂಜೆ ಮುಗಿದ ನಂತರದ ದಿನಗಳಲ್ಲಿ ಗೋಡೆಗೆ ನೇತುಹಾಕುತ್ತಾರೆ. ಕೆಳಗಡೆ ಇರಿಸುವುದಿಲ್ಲ. ಏಕೆಂದರೆ ಚಿಕ್ಕಮಕ್ಕಳ ಕೈಯಲ್ಲಿ ಸಿಗಬಾರದೆಂದು, ಸಿಕ್ಕರೆ ಅನಾಹುತ ಆಗಬಹುದೆಂದು ಜಾಗೃತವಹಿಸುತ್ತಾರೆ. ಇನ್ನು ಇವುಗಳ ಬಗೆಗೆ ಇರುವಂತಹ ನಂಬಿಕೆಗಳ ಕುರಿತು ಕ್ಷೇತ್ರಕಾರ್ಯದಲ್ಲಿ ವಿಚಾರಣೆ ಮಾಡಿದಾಗ "ನಮ್ಮ ಕುಲಸಲಕರಣೆಗಳು ಜೀವನದಲ್ಲಿ ಅತೀ ಪ್ರಾಮುಖ್ಯತೆ ವಹಿಸಿವೆ. ಮನೆಯಲ್ಲಿ ಅಥವಾ ಗುಡಿಸಲುಗಳಲ್ಲಿ ರಾತ್ರಿವೇಳೆ ಮಲಗುವಂತಹ ಸಮಯದಲ್ಲಿ ಕಾಲಡಿಯಲ್ಲಿ ಕೊಡಲಿ, ಕುಡುಗೋಲು ಜೊತೆಗೆ ಪೊರಕೆ (ಕಸಬರಿಗೆ) ತುಂಬಿದ ಚರಿಗೆಯನ್ನು ಇಟ್ಟುಕೊಂಡು ಮಲಗುವುದುಂಟು. ಇವುಗಳನ್ನು ಇಟ್ಟುಕೊಂಡು ಮಲಗುವುದ ರಿಂದ ಭೂತ, ಪ್ರೇತ ಬರಲಾರವು ಎಂಬ ನಂಬಿಕೆಯುಂಟು. ಅದೇ ರೀತಿಯಾಗಿ ನಮ್ಮವರು ಹೊರಗಡೆ ಹೋಗುವಾಗ ಅಂದರೆ ಹೊಲಕ್ಕೆ ಹೊರಟಾಗ ಕೈಯಲ್ಲಿ ಕೊಡಲಿ, ಕೋಲು ಇತ್ಯಾದಿ ಸಲಕರಣೆಗಳನ್ನು ತೆಗೆದುಕೊಂಡು ಹೋಗುವ ರೂಢಿಯಿದೆ."[೨೦]

ಮನೆಯಲ್ಲಿ ಮಹಿಳೆಯರು ಹೆರಿಗೆಯಾದ ಸಂದರ್ಭದಲ್ಲಿಯೂ ಆಕೆಯೂ ಮಲಗುವ ಕಾಲಡಿಯಲ್ಲಿ ಕುಡುಗೋಲು, ಕೊಡಲಿ, ಪೊರಕೆ (ಕಸಬರಿಗೆ) ಇಡುವ ರೂಢಿಯಿದೆ. ಇವುಗಳನ್ನು ಮಾಡದೆಯಿದ್ದರೆ ಮಹಿಳೆಗೆ ಮತ್ತು ಮಗುವಿನ ಮೈಯಲ್ಲಿ ಭೂತ ಪ್ರೇತಗಳು ಪ್ರವೇಶ ಮಾಡುತ್ತವೆ ಎಂಬ ಬಲವಾದ ನಂಬಿಕೆ ನಮ್ಮಲ್ಲಿದೆ. ಇದರ ಜೊತೆಗೆ ಕರಡಿ ಕೂದಲು, ಕಾಡು ಹಂದಿಯ ಹಲ್ಲು, ಹಾಗೂ ಹುಲಿ ಉಗುರು ಇತ್ಯಾದಿಗಳನ್ನು ಯುವಕರು ತಮ್ಮ ಕೊರಳಲ್ಲಿ ಹಾಕಿಕೊಳ್ಳುವುದರಿಂದ ಅವರಲ್ಲಿ ಧೈರ್ಯ, ಅಧಿಕವಾಗುತ್ತದೆ ಎನ್ನುವ ನಂಬಿಕೆಯಿದೆ. ಇನ್ನು ನರಿಯ ಬಾಲವನ್ನು ಮನೆಯ ಬಾಗಿಲಿಗೆ ನೇತಾಕುವುದರಿಂದ ಶುಭ ಲಕ್ಷಣವಂತೆ. ಇಂತಹ ಹತ್ತು ಹಲವಾರು ನಂಬಿಕೆಗಳು ಬೇಡರಲ್ಲಿ ಇವೆ.

೫.೨. ಮಹಿಳಾ ಆರ್ಥಿಕ ಚಟುವಟಿಕೆಗಳು

ಆಧುನಿಕತೆ ಇಂಡಿಯಾಕ್ಕೆ ಕಾಲಿಡುತ್ತಿರುವಾಗಲೇ ಬೇಡ ಬುಡಕಟ್ಟಿನವರು ತಮ್ಮ ಮೂಲ ವೃತ್ತಿಗಳಿಂದ ವಂಚಿತರಾಗುತ್ತಾ ಬಂದರು. ಅರಣ್ಯಕ್ಕೆ ಸಂಬಂಧಿಸಿದ ಕಾನೂನುಗಳು ಜಾರಿಗೆ ಬಂದಾಗಿನಿಂದಲೂ ಅವರ ಮೂಲ ವೃತ್ತಿಯಾದ ಬೇಟೆಗಾರಿಕೆಗೆ ತುಂಬಾ ನಷ್ಟವಾಗಿದೆ. ಅಂದಿನ ಸಂದರ್ಭದಲ್ಲಿ ಬೇಟೆಯ ಜೊತೆ ಜೊತೆಗೇನೆ ಅರಣ್ಯ ಉತ್ಪನ್ನಗಳಾದ ಜೇನುತುಪ್ಪ, ಆನೆಯ ಕೋರೆಗಳು, ಕಾಡುಕೋಣ ಮುಂತಾದ ಪ್ರಾಣಿಗಳ ಕೋಡುಗಳು, ಬೇರೆ ಬೇರೆ ಪ್ರಾಣಿಗಳ ಚರ್ಮ, ನವಿಲುಗರಿ, ಗಿಡದ ಅಂಟು, ಮುಂತಾದವುಗಳನ್ನು ಸಂಗ್ರಹಿಸಿ ಮಾರುವುದನ್ನು ಮಾಡುತ್ತಾ ಬಂದಿದ್ದಾರೆ. ಈಗ ಇದೆಲ್ಲ ಕಡಿಮೆಯಾಗಿದೆ. ಹೆಚ್ಚಿನ ಜನರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅಲ್ಲೊಬ್ಬರು ಇಲ್ಲೊಬ್ಬರು ಸ್ವತಂತ್ರವಾಗಿ ಒಕ್ಕಲುತನವನ್ನು ಮಾಡುತ್ತಿದ್ದಾರೆ. ಇಂದು ಬೇರೆಯವರ ಮನೆ, ಹೊಲಗಳಲ್ಲಿ ಕೂಲಿ ಕೆಲಸ ಮಾಡುವುದು ಕಸ, ಮುಸುರೆ ಮಾಡುವುದು, ಅವರು

ಕೊಟ್ಟಿದ್ದನ್ನು ಸ್ವೀಕರಿಸುವುದು ಇನ್ನಿತರ ಸೇವೆಗಳನ್ನು ಮೇಲುವರ್ಗದವರಿಗಾಗಿ ಮಾಡುವುದು ಒಂದು ರೂಢಿಯಾಗಿದೆ. ಆದರೆ ಇವರಲ್ಲಿ ಭಿಕ್ಷಾವೃತ್ತಿ ಮಾತ್ರ ಕಂಡುಬರುವುದಿಲ್ಲ. ಜೊತೆಗೆ ಇವರು ಬೇಡ ನಾಯಕ ಕುರುಬ ಮೊದಲಾದ ಜಾತಿಗಳಿಗೆ ಸೀಮಿತವಾದ ಎಲ್ಲಮ್ಮ, ದ್ಯಾಮವ್ವ, ಹುಲಿಗೆಮ್ಮ ಮುಂತಾದ ದೇವರುಗಳನ್ನು ಪೂಜಿಸುವ ಪೂಜಾರಿಗಳೂ ಆಗಿದ್ದಾರೆ. ಕೆಲವೆಡೆ ಕಾಮನನ್ನು ತಯಾರಿಸಿ ಪೂಜಿಸುವುದು ಇವರ ನೇಮವಾಗಿದೆ. ಅಂತಹ ಸಂದರ್ಭದಲ್ಲಿ ಊರಿನ ಎಲ್ಲ ಜನರಿಂದಲೂ ಕಾಣಿಕೆ ನೈವೇದ್ಯಗಳನ್ನು ಸ್ವೀಕರಿಸುವುದು ಇವರ ಹಕ್ಕಾಗಿರುತ್ತದೆ. ಅನೇಕ ಗುಡ್ಡಗಾಡು ಹಳ್ಳಿಗಳಲ್ಲಿ ಇವರು ಕುರಿ ಮೇಕೆಗಳನ್ನು ಸಾಕುವುದು ಕಂಡುಬರುತ್ತದೆ. ಹಿಂದೆ ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿಯೇ ಅರಣ್ಯ ನಾಶದ ಕಾರ್ಯ ಆರಂಭವಾಯಿತು. ಒಂದು ಕಡೆ ಗ್ರಾಮಸ್ಥರು ಸಾಗುವಳಿ ಭೂಮಿಗೆ ಅರಣ್ಯವನ್ನು ಕಡಿದು ಒತ್ತರಿಸುತ್ತ ಬಂದರೆ ಬ್ರಿಟೀಷರು ಭಾರತದಾದ್ಯಂತ ಪ್ರಮುಖ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ರೈಲುಮಾರ್ಗ, ಹಾಗೂ ರಸ್ತೆ ಹಾಕುವ ಸಲುವಾಗಿ ಅರಣ್ಯವನ್ನು ಕಡಿದರು. ಜತೆಗೆ ಭಾರತದಲ್ಲಿ ಕೈಗಾರಿಕೆಗಳೂ ಹೆಚ್ಚುತ್ತಾ ಕಟ್ಟಡಗಳ ನಿರ್ಮಾಣ, ಕಾಗದ ಕಾರ್ಖಾನೆ, ಕಛೇರಿಗಳಿಗೆ ಬೇಕಾದ ಪರಿಕರಗಳ ತಯಾರಿಕೆಗಾಗಿ ಹೇರಳ ಪ್ರಮಾಣದ ಮರಮುಟ್ಟು ಬೇಕಾಯಿತು. ಅರಣ್ಯ ನಾಶವಾಗುತ್ತ ಬಂದಂತೆಲ್ಲ ಬುಡಕಟ್ಟು ಸಮುದಾಯಗಳ ಜೀವನವನ್ನು ಬಿಸಿಲಿಗೆ ತೆರೆದಿಟ್ಟಂತಾಯಿತು.

ಇದರಿಂದ ನಾಡು ಪ್ರವೇಶ ಮಾಡಿದ ಬೇಡರು ಹೊರಗಿನ ನಾಗರೀಕತೆ, ವಿಜ್ಞಾನದ ಪ್ರಭಾವದಿಂದಾಗಿ ತಾಂತ್ರಿಕತೆಯ ಹೊಸ ಆವಿಷ್ಕಾರಗಳು ಸ್ವಲ್ಪ ಸ್ವಲ್ಪವಾಗಿ ಬೇಡ ಸಮುದಾಯದ ಜೀವನವನ್ನು ಪ್ರವೇಶಿಸಿತು. ಈ ಆಧುನಿಕ ನಾಗರೀಕತೆಯ ಆಗಮನದಿಂದಾಗಿ ಹಾಗೂ ಅರಣ್ಯನಾಶದಿಂದ ಬೇಡ ಸಮುದಾಯವು ಒಂದು ಬಗೆಯಲ್ಲಿ ಅನಾಥರಂತೆಯೇ ಆದರು. ಇಂದಿಗೂ ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಬೇಡ ಬುಡಕಟ್ಟಿನ ಅನೇಕ ಜನರಿಗೆ ತಾವು ಯಾವ ವೃತ್ತಿಯನ್ನು ಕೈಗೊಳ್ಳಬೇಕೆಂಬುದೇ ತಿಳಿಯದವರಾಗಿದ್ದಾರೆ. ಯಾಕೆಂದರೆ ಬೇಡರು ಕಾಲಾನುಕ್ರಮದಲ್ಲಿ ಅರಣ್ಯದಲ್ಲಿಯೇ ವಾಸಿಸಿ ಪಶುಪಾಲನೆ, ಕುರಿ ಸಾಕಾಣಿಕೆ ಮಾಡಿಕೊಂಡು ಬಂದವರು. ಬಹುಮಟ್ಟಿಗೆ ಅವರು ವ್ಯವಸಾಯ ನಂಬಿ ಬದುಕಿದವರಲ್ಲ, ಹಾಗೇ ಒಮ್ಮೊಮ್ಮೆ ಪಶುಪಾಲನೆಯನ್ನು ಬಿಟ್ಟು ಹೋರಾಟದ ವೃತ್ತಿಯಾದ ಸೈನಿಕ ವೃತ್ತಿಯಲ್ಲಿದ್ದವರು.

ಸೈನಿಕ ವೃತ್ತಿ ಎಂದರೆ ರಾಜ ಮಹಾರಾಜರುಗಳು ಯುದ್ಧಕ್ಕೆ ಬೇರೆ ರಾಜಮಹಾರಾಜರುಗಳ ಮೇಲೆ ಹೋದಾಗ ಇವರು ಅವರೊಟ್ಟಿಗೆ ಹೋಗಿ ಯುದ್ಧಗಳಲ್ಲಿ ಭಾಗವಹಿಸುವುದು, ಮಿಕ್ಕಂತೆ ತಂತಮ್ಮ ಹಟ್ಟಿಗಳಲ್ಲೇ ವಾಸಿಸುವುದು, ಕೆಲವು ರಾಜರುಗಳು ಈ ಅರಣ್ಯವಾಸಿ ಬೇಡರನ್ನು ಬಹುಮಾನಗಳ ಮೂಲಕ ಮೆಚ್ಚಿಸಿ ಅವರನ್ನು ಮೀಸಲು ಪಡೆಯವರನ್ನಾಗಿ ಇಟ್ಟುಕೊಂಡಿದ್ದರು. ಬೇಡರು ಅರಣ್ಯದಲ್ಲಿ ವಾಸಿಸುತ್ತಾ ಬೇಟೆಯಾಡಿ, ಪಶುಪಾಲನೆ ಮಾಡಿ ದೃಢಕಾಯರಾಗಿರುತ್ತಿದ್ದರು.

ಬಿಲ್ವಿದ್ಯೆಯಲ್ಲಿ, ಅಂಗ ಸಾಧನೆ ವಿದ್ಯೆಯಲ್ಲಿ ಪಳಗಿದವರಾಗಿ ಜೊತೆಗೆ ಮುಗ್ಧರಾಗಿ ರಾಜನ ಆಜ್ಞೆಯನ್ನು ಶಿರಸಾವಹಿಸುತ್ತಿದ್ದರು. ಆದರೆ ಅಂದಿನ ಸಮಾಜದಲ್ಲಿ ಹೋರಾಟದ ಜೀವನಕ್ಕೆ ಹೊಂದಿಕೊಂಡು ಬದುಕುತ್ತಿದ್ದ ಬೇಡರಿಗೆ ಇಂದು ಯಾವ ವೃತ್ತಿಯನ್ನು ಹಿಡಿಯಬೇಕೆಂಬುದೇ ತೋರುತ್ತಿಲ್ಲವಾಗಿದೆ. ಯಾಕೆಂದರೆ ಹಿಂದಿನಿಂದ ಬಂದ ಪಶುಪಾಲನೆ ಈಗ ಲಾಭದಾಯಕವಾಗಿ ತೋರುತ್ತಿಲ್ಲ. ಜೊತೆಗೆ ಅರಣ್ಯಗಳೂ ಉಳಿದಿಲ್ಲ. ಸೈನಿಕ ವೃತ್ತಿಯೂ ಸಾಧ್ಯವಿಲ್ಲ. ಬೇಟೆಯಂತೂ ಈಗ ವೃತ್ತಿಯಾಗಿ ಉಳಿದಿಲ್ಲ. ಹೀಗಾಗಿ ಹೈದರಾಬಾದ-ಕರ್ನಾಟಕದ ಬೇಡ ಬುಡಕಟ್ಟು ಸಮುದಾಯ ದವರು ಅತಂತ್ರರಾಗಿ ದ್ವಂದ್ವ ಸ್ಥಿತಿಯಲ್ಲಿದ್ದಾರೆ. ಇವರು ಒಂದು ಬಗೆಯ ಸಂಕೀರ್ಣ ಸ್ಥಿತಿಯಲ್ಲಿದ್ದಾರೆ. ಅತ್ತಹೊಸ ನಾಗರೀಕತೆಗೂ ಹೊಂದಿಕೊಳ್ಳದೆ ಇತ್ತ ಪ್ರಾಚೀನ ಸಂಪ್ರದಾಯಗಳನ್ನೂ ಬಿಡದೆ ಹತ್ತಾರು ಅನಾನುಕೂಲಗಳ ನಡುವೆ ಆಯಾ ಗುಡಿಸಲುಗಳಲ್ಲಿಯೇ ಪ್ರಯಾಸದಿಂದ ಕಾಲ ತಳ್ಳುತ್ತಿರುವ ಬೇಡರನ್ನು ನಾವು ಇಂದಿಗೂ ಕಾಣಬಹುದಾಗಿದೆ.

ಈ ಸಮುದಾಯದಲ್ಲಿ ಕೃಷಿ ಭೂಮಿಯನ್ನು ಹೊಂದಿರುವಂತಹ ಕುಟುಂಬಗಳನ್ನು ಕುರಿತು ನೋಡಿದಾಗ ಹೈದರಾಬಾದ ಕರ್ನಾಟಕದ ಈ ಮೂರು ಜಿಲ್ಲೆಗಳಲ್ಲಿ ಬಹಳಷ್ಟು ಕಡಿಮೆ ಪ್ರಮಾಣದಲ್ಲಿವೆ. ಒಂದು ವೇಳೆ ಭೂಮಿಯನ್ನು ಹೊಂದಿದ್ದರು ಸಹ ಐದು ಎಕರೆಗಿಂತ ಕಡಿಮೆಯಿರುವುದು ಕಂಡುಬರುತ್ತದೆ. ಅದು ಬಂಜರು ಭೂಮಿ ಅಥವಾ ಒಣ ನೀರಾವರಿಯಿಂದ ಕೂಡಿರುವುದೇ ಅಧಿಕವಾಗಿ ಇರುವವು. ಆದರೆ ಭೂಮಿ ಇದ್ದವರು ಬಿತ್ತನೆ ಮಾಡಲು ಎತ್ತುಗಳು ಹಾಗೂ ಕೃಷಿ ಸಲಕರಣೆಗಳು ಇರದೇ ಸಮಸ್ಯೆ ಎದುರಿಸುವಂತಹ ಕುಟುಂಬಗಳೇ ಅತಿಯಾಗಿ ಈ ಪ್ರದೇಶದಲ್ಲಿವೆ. ಇನ್ನು ಭೂ ರಹಿತ ಕುಟುಂಬದವರು ತಮ್ಮ ಆಹಾರಕ್ಕಾಗಿ ಅನ್ಯರ ಭೂಮಿಯಲ್ಲಿ ಕೆಲಸ ದೊರೆತರೆ ಮಾತ್ರ ಚಿಂತೆಯಿಲ್ಲ. ಅದು ದೊರೆಯದೆ ಇದ್ದರೆ ಇಡೀ ಕುಟುಂಬ ಸಮೇತ ನಗರ ಪ್ರದೇಶಗಳಿಗೆ ವಲಸೆ ಹೋಗುವಂತಹ ಅನಿವಾರ್ಯತೆ ಅಧಿಕವಾಗಿದೆ. ಇವೆರಡು ಸಮಸ್ಯೆಗಳನ್ನು ಎದುರುಗೊಳ್ಳದೆ ಇರುವಂತಹ ಕುಟುಂಬದವರು ತಮ್ಮ ಊರಿನಲ್ಲಿ ಅಥವಾ ತಾಲೂಕು ಪ್ರದೇಶದಲ್ಲಿ ಪುರುಷರು ಟ್ರ್ಯಾಕ್ಟರ್ ಲೇಬರರಾಗಿ, ಗುತ್ತೆದಾರರ ಕೈಯಲ್ಲಿ ಸಹಾಯಕರಾಗಿ, ಶ್ರಮವಹಿಸಿದರೆ ಮಹಿಳೆಯರು ಮಾತ್ರ ತಮ್ಮ ಊರಿನಲ್ಲಿ ಭೂಮಾಲಿಕರ ಭೂಮಿಯಲ್ಲಿ ಅಗ್ಗದ ಕೂಲಿಗೆ ಶ್ರಮವಹಿಸಿ ದುಡಿಯುತ್ತಿರುವುದು ಸಾಮಾನ್ಯ ಸಂಗತಿ. ಭೂ ಮಾಲೀಕರು ಕೊಡುವ ಪ್ರತಿ ದಿನದ ೨೦-೩೦ರೂಪಾಯಿಗಳು ಬರದಿದ್ದರೆ, ಕುಟುಂಬದ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳುವುದು ದುಸ್ತರವಾಗುತ್ತದೆ. ಇದರ ಜೊತೆಗೆ ಸರಕಾರದಿಂದ ದೊರೆಯುವಂತಹ ತಿಂಗಳ ರೇಷನ್ (ಅಕ್ಕಿ, ಗೋದಿ, ಸಕ್ಕರೆ) ತೆಗೆದುಕೊಳ್ಳಲು ಹಣವಿಲ್ಲದ ಪರಿಸ್ಥಿತಿ ಎದುರಾಗುತ್ತದೆ ಎನ್ನುವ ಅನಿವಾರ್ಯತೆಯಿಂದ ಈ ಮೂರು ಜಿಲ್ಲೆಗಳಲ್ಲಿ ಮಹಿಳೆಯರು ದಿನಂಪ್ರತಿ ಎಣ್ಣೆಗಾಣದ ಎತ್ತಿನಂತೆ ಶ್ರಮವಹಿಸುತ್ತಿರುತ್ತಾರೆ.

೫.೨.೧. ಮಹಿಳೆಯ ಗೃಹ ಕೆಲಸ

"ಮಹಿಳೆಯ ಜೀವನವನ್ನು ನೋಡಿದರೆ ಎಂದೂ ಮುಗಿಯದ ಮನೆಗೆಲಸದಲ್ಲಿ ತೊಡಗಿಕೊಂಡಿದ್ದಾರೆ. ಅಷ್ಟೇ ಅಲ್ಲ ಜೀವನ ನಿಭಾಯಿಸಲು ಅನೇಕ ಕೆಲಸಗಳನ್ನು ಹಮ್ಮಿಕೊಂಡಿದ್ದಾರೆ. ಆದರೆ ಅವಳ ಸಂಕಟಗಳಾಗಲಿ, ಶ್ರಮವಾಗಲಿ, ದಣಿವಾಗಲಿ ಯಾವತ್ತೂ ಯಾರ ಕಣ್ಣಿಗೂ ಬಿದ್ದಿಲ್ಲ. ಅವರ ಶ್ರಮಕ್ಕೆ ತಕ್ಕ ಪ್ರತಿಫಲವೂ ಅವರಿಗಿಲ್ಲ. ಕುಟುಂಬದ ದುಡಿಮೆಯ ಶಕ್ತಿಯಲ್ಲಿ ಮಹಿಳೆ ಒಂದು ಭಾಗವಾಗಿ ಸೇರಿಹೋಗಿದ್ದಾಳೆ ಅಷ್ಟೇ"[11] ಮಹಿಳೆಯರಿಗೆ ಅದರಲ್ಲೂ ಕೃಷಿ ಮಹಿಳೆಯರಿಗೆ ದಿನದ ಕೆಲವು ಗಂಟೆಗಳನ್ನು ಬಿಟ್ಟರೆ ಉಳಿದ ಅವಧಿ ಎಲ್ಲಾ ಕೆಲಸ ಮಾಡುವುದೇ ಆಗಿರುತ್ತದೆ. ಮನೆಯ ಒಳಗೆ ಕಸ, ಮುಸರಿ ಮಾಡುವುದು, ಪಾತ್ರೆ ತೊಳೆಯುವುದು, ಊಟ ಬಡಿಸುವುದು, ಗಂಡ ಮಕ್ಕಳು ಮನೆಯ ಹಿರಿಯರ ಯೋಗಕ್ಷೇಮ ನೋಡಿಕೊಳ್ಳುವುದು, ಈ ಎಲ್ಲಾ ಜವಾಬ್ದಾರಿಯ ನಿರ್ವಹಣೆಯಲ್ಲಿ ಮಹಿಳೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ.

ಅಲ್ಲದೆ ಕೃಷಿಯ ಪೂರಕ ಕೆಲಸಗಳನ್ನು ಮನೆಯಲ್ಲಿ ಪುರುಷನ ಅನುಪಸ್ಥಿತಿಯಲ್ಲಿ ಮಹಿಳೆ ಮಾಡುತ್ತಾಳೆ. ಅವುಗಳೆಂದರೆ ದನಕರುಗಳಿಗೆ ನೀರು ಕುಡಿಸುವುದು, ಮೇವು ಹಾಕುವುದು, ದನಕರುಗಳ ಸಗಣಿಯನ್ನು ಬಳಿದು ತಿಪ್ಪೆಗೆ ಹೊತ್ತು ಹಾಕುವ ಕೆಲಸಗಳನ್ನು ಮಹಿಳೆ ಮಾಡುತ್ತಾಳೆ. ಅಲ್ಲದೆ ಹೈನುಗಾರಿಕೆ ಇದ್ದ ಕೃಷಿ ಕುಟುಂಬಗಳಾಗಿದ್ದರೆ ಹಾಲನ್ನು ಕರೆಯುವ ಕೆಲಸ ಬಹುಪಾಲು ಮಹಿಳೆಯರಿಂದಲೇ ಮಾಡಲ್ಪಡುವಂತಹದ್ದಾಗಿದೆ.

ತಿನ್ನುವ ಕಾಳುಗಳನ್ನು ಹಸನುಗೊಳಿಸುವವರು ಮಹಿಳೆಯರೇ ಆಗಿದ್ದಾರೆ. ಹಿಂದೆ ಮನೆಯಲ್ಲಿ ಕುಟ್ಟುವ ಮತ್ತು ಬೀಸಿ ಹಿಟ್ಟು ಮಾಡುವ ಕೆಲಸವನ್ನು ಮಹಿಳೆಯರೇ ಮಾಡುತ್ತಿದ್ದರು. ಆದರೆ ಈಗ ಹಿಟ್ಟಿನ ಗಿರಣಿಗಳು ಬಂದಿದ್ದರಿಂದ ಅವರಿಗೆ ಹಿಟ್ಟು ಮಾಡುವ ಕೆಲಸದ ಹೊರೆ ಕೊಂಚ ಕಡಿಮೆಯಾಗಿದೆ. ಆದರೆ ಈಗಲೂ ಕಾಳುಗಳನ್ನು ಹಸನುಮಾಡಿ ಗಿರಣಿಗೆ ಕೊಟ್ಟು ಕಳುಹಿಸುವವರೆಗಿನ ಕೆಲಸ ಮಹಿಳೆಯರದಾಗಿದೆ. ಕೆಲವೊಮ್ಮೆ ಮನೆಯ ಗಂಡಸರ ಅನುಪಸ್ಥಿತಿಯಲ್ಲಿ ಅಥವಾ ಅನಿವಾರ್ಯವಾದರೆ ಮಹಿಳೆಯೇ ಗಿರಣಿಗೆ ಹೋಗಿ ಹಿಟ್ಟು ಮಾಡಿಸಿಕೊಂಡು ಬರಬೇಕಾಗುತ್ತದೆ. "ಪ್ರತಿ ಗಂಡಿನ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ" ಎನ್ನುವ ಆಡು ಮಾತೊಂದಿದೆ ಹಾಗೆಯೇ ಪ್ರತಿ ಕೃಷಿ ಕುಟುಂಬದ ಮತ್ತು ಕೃಷಿಕನ ಶ್ರೇಯಸ್ಸಿನ ಹಿಂದೆ ಆ ಕುಟುಂಬದ ಮಹಿಳೆಯರ ಶ್ರಮ ಇದ್ದೇ ಇರುತ್ತದೆ ಎಂದರೆ ತಪ್ಪಾಗಲಾರದು. ಏಕೆಂದರೆ ಹೊಲಕ್ಕೆ ಹೋಗುವ ಮೊದಲು ಮನೆಯ ಒಳಗಿನ ಬಹುಪಾಲು ಕೆಲಸಗಳನ್ನು ಮಹಿಳೆಯೇ ಮಾಡಿಕೊಂಡು ಹೋಗುತ್ತಾಳೆ. ಗಂಡ ಬೆಳಿಗ್ಗೆದ್ದು ಹೊಲಕ್ಕೆ ಹೋಗುತ್ತಾನೆಂದರೆ ತಾನು ಬೇಗ ಎದ್ದು ಅವನಿಗೆ ತಿನ್ನುವುದಕ್ಕೇನಾದರೂ ಮಾಡಿ ಆತನಿಗೆ ಉಣಿಸಿ ಹೊಲಕ್ಕೆ ಕಳುಹಿಸಿಕೊಟ್ಟು ಮನೆಯಲ್ಲಿ ಮಕ್ಕಳು ಮರಿಗಳನ್ನು ಸಂಬಾಳಿಸಿಕೊಂಡು ಮನೆಯ ಎಲ್ಲ ಕೆಲಸ ಕಾರ್ಯ ಮುಗಿಸಿ ಮತ್ತೆ ಗಂಡನಿಗೂ ತನಗೂ ಬುತ್ತಿಕಟ್ಟಿಕೊಂಡು ಹೊಲದ ಕೆಲಸಕ್ಕೆ ಹೋಗುತ್ತಾಳೆ.

ಹಿಂದಿನ ಕಾಲದಲ್ಲಿ ಬಿತ್ತನೆ ಮಾಡುವ ಬೀಜವನ್ನು ಸಂರಕ್ಷಿಸುವ ಕೆಲಸವೂ ಮಹಿಳೆಯರದೇ ಆಗಿತ್ತು. ಇಂದು ಮಾರುಕಟ್ಟೆಯಲ್ಲಿ ಸಿದ್ಧಬೀಜ ತರುವುದರಿಂದ ಬೀಜ ಸಂರಕ್ಷಣೆ ಮಾಡುವ ಪ್ರವೃತ್ತಿ ಕಡಿಮೆಯಾಗಿದೆ. ಆದರೂ ಈಗಲೂ ಮನೆಯಲ್ಲಿ ಬಿತ್ತನೆಗೆ ಹೊರಟ್ಟಿದ್ದಾರೆಂದರೆ ಬಿತ್ತನೆಗೆ ಸಜ್ಜುಮಾಡಿಕೊಡುವಲ್ಲಿ ಮಹಿಳೆಯರು ಪುರುಷನಿಗೆ ನೆರವಾಗುತ್ತಾಳೆ, ಮುಖ್ಯ ಬೆಳೆಯೊಂದಿಗೆ ಮನೆಗೆ ಬೇಕಾಗುವ ಸಾಸಿವೆ, ಗುರೆಳ್ಳು, ನವಣೆ, ಅವರೆ, ಕೊತಂಬರಿ ಕಾಳಿನಂತಹ ಬೀಜಗಳನ್ನು ನೆನಪು ಮಾಡಿ ಸಜ್ಜುಗೊಳಿಸಿ ಬಿತ್ತುವುದಕ್ಕೆ ಅಣಿಮಾಡಿಕೊಡುವವಳು ಮಹಿಳೆಯೇ ಆಗಿದ್ದಾಳೆ. ಹೀಗೆ ತನ್ನ ಕುಟುಂಬಕ್ಕಾಗಿ ಕುಟುಂಬದ ಏಳಿಗೆಗಾಗಿ ಅವಳು ಮಾಡುವ ಕೆಲಸ ಶ್ಲಾಘನೀಯವೇ ಸರಿ, ಮಹಿಳೆ ಮನೆಯ ಒಳಗೆ ಇಷ್ಟೆಲ್ಲಾ ಕೆಲಸಗಳನ್ನು ಮಾಡಿದರೂ ಈ ಯಾವ ಕೆಲಸಗಳು ಕೆಲಸ ಅಥವಾ ದುಡಿಮೆ ಎಂದು ಪರಿಗಣಿಸಲ್ಪಡದೇ ಅವು ಅವಳ ಕುಟುಂಬಕ್ಕೆ ಮಾಡುವ ಸೇವೆ ಅಥವಾ ಕರ್ತವ್ಯವಾಗಿ ಪರಿಗಣಿಸಲ್ಪಡುತ್ತಿವೆ.

೫.೨.೨. ಕುಟುಂಬದಲ್ಲಿ ಮಹಿಳೆಯ ನಿರ್ವಚನ

ಬಹುತೇಕ ಕುಟುಂಬದ ಸ್ವರೂಪದಲ್ಲಿ ಲಿಂಗಭೇದ ಕಂಡುಬರುವಂತೆ ಕೌಟುಂಬಿಕ ವಲಯದಲ್ಲೂ ಲಿಂಗ ತಾರತಮ್ಯದ ಕೆಲವು ಎಳೆಗಳು ಸೇರಿಕೊಂಡಿರುವುದು ಗೋಚರವಾಗುತ್ತದೆ. ಹೀಗೆ ಕಂಡುಬರುವ ಲಿಂಗಬೇಧದ ಸ್ವರೂಪ ಯಾವ ರೀತಿಯಾಗಿರುತ್ತದೆ ಎಂಬುದನ್ನು ಕೃಷಿ, ಕೂಲಿ ಕುಟುಂಬದೊಳಗಿನ ಕೆಲವು ದೈನಂದಿನ ಸಂಗತಿಗಳಿಂದ ವಿವರಿಸುವ ಮತ್ತು ಆ ಮೂಲಕ ಮಹಿಳೆಗೆ ಕುಟುಂಬದೊಳಗೆ ಸಿಗುವ ಸ್ಥಾನಮಾನ ಯಾವ ರೀತಿಯದು ಎಂಬುದನ್ನು ಇಲ್ಲಿ ಗಮನಿಸಲಾಗಿದೆ. ಬಹುಪಾಲು ಮಹಿಳೆಯರು ಪುರುಷನಿಗೆ ಅಧೀನವಾಗಿಯೇ ಜೀವನ ಸಾಗಿಸುತ್ತಿರುವುದು ತಿಳಿದುಬರುತ್ತದೆ. ಕುಟುಂಬದೊಳಗೆ ಮಹಿಳೆ ಗಂಡಿಗೆ ತಗ್ಗಿಬಗ್ಗಿ ನಡೆಯಬೇಕು ಗಂಡಿಗೆ ಎದುರಾಡಬಾರದು. ಒಟ್ಟಲ್ಲಿ ಗಂಡಿಗೆ ಹೆಣ್ಣು ಗೌರವ ಕೊಡಬೇಕು ಎನ್ನುವ ನಿರೀಕ್ಷೆಗಳು ಇರುತ್ತವೆ. ಅದಕ್ಕೆ ಇರಬೇಕು! ಹಿರಿಯರು "ತಳಿ ನೋಡಿ ದನ ತರಬೇಕು, ಗುಣ . ನೋಡಿ ಹೆಣ್ಣು ತರಬೇಕು" ಎಂದು ಹೇಳುತ್ತಿದ್ದದ್ದು. ಅಂದರೆ ಹೇಳಿದಂತೆ ಕೇಳಿಕೊಂಡು ನಡೆಯುವ ಸ್ವಭಾವ, ಮನೆಯ ಮರ್ಯಾದೆಯನ್ನು ಕಾಯ್ದುಕೊಂಡು ಹೋಗುವ ಗುಣ ಆ ಹೆಣ್ಣಿನಲ್ಲಿರಬೇಕು. ಅಂತವಳನ್ನು ಮಾತ್ರ ಮನೆಯ ಸೊಸೆಯಾಗಿ ತರಲು ಅಪೇಕ್ಷಿಸುತ್ತಿದ್ದರು. ಈ ಪ್ರವೃತ್ತಿ ಈಗಲೂ ಇದೆ. ಅಂದರೆ ಏನೇ ಆದರೂ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಸ್ವಭಾವ ಮಹಿಳೆಯಲ್ಲಿ ಇರಬೇಕೆಂಬ ಅಪೇಕ್ಷೆ ಹೊಂದಿದವರಾಗಿರುತ್ತಾರೆ.

ಇವತ್ತಿಗೂ ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ಗಂಡಸಿಗೆ ಸರಿಸಮವಾಗಿ ಕುಳಿತುಕೊಳ್ಳುವ ಅವಕಾಶ ಮಹಿಳೆಯರಿಗಿರುವುದಿಲ್ಲ. ಮನೆಯ ಕೆಲವು ಜಾಗದಲ್ಲಿ ಅವಳ ಪ್ರವೇಶ ತೀರಾ ವಿರಳವಾಗಿರುತ್ತದೆ. ಹೆಚ್ಚಾಗಿ ಮನೆಯಲ್ಲಿ ಇವಳ ಆಪ್ತವಲಯಗಳೆಂದರೆ ಅಡುಗೆ ಮನೆ ಮತ್ತು

ಹಿತ್ತಲು ಮಾತ್ರ. ಅಡುಗೆ ಮನೆ ಮತ್ತು ಹಿತ್ತಲಿನಲ್ಲಿ ಮುಕ್ತವಾಗಿ ಓಡಾಡಿದಂತೆ ಆ ಮಹಿಳೆಗೆ ಮನೆಯ ಪಡಸಾಲೆ ಅಥವಾ ನಡುಮನೆಯಲ್ಲಿ ಓಡಾಡುವ ಮನೆಯ ಹೊರಗಿನ ಜಗುಲಿಯ ಮೇಲೆ ಆರಾಮವಾಗಿ ಕುಳಿತುಕೊಳ್ಳುವ ಅವಕಾಶವಿಲ್ಲ. ಒಂದು ವೇಳೆ ಆ ಜಾಗದಲ್ಲಿ ಮಹಿಳೆಯ ಪ್ರವೇಶವಾಗುವುದಾದರೆ ಅದು ಮನೆಯಲ್ಲಿ ಪುರುಷರಾರು ಇಲ್ಲದ ಸಮಯದಲ್ಲಿ ಮಾತ್ರ. ಏಕೆಂದರೆ ಮನೆಯ ಯಜಮಾನ ಭಾವಂದಿರು, ಗಂಡ ಮೈದುನಗಳಿರುವ ಕುಟುಂಬಗಳ ಮನೆಯಲ್ಲಿ ಇವರೆಲ್ಲ ಇದ್ದಾಗ ಅವಳು ಹೊರಗೆ ಬರುವುದೇ ಅಪರೂಪ. ಆಗ ಅವಳ ವಾಸ್ತವ್ಯವೇನಿದ್ದರೂ ಅಡುಗೆ ಮನೆಯೊಂದಕ್ಕೆ ಸೀಮಿತವಾಗಿರುತ್ತದೆ. ಹಾಗೇನಾದರೂ ಒಳ ಹೊರಗೆ ಓಡಾಡುವ ಸಂದರ್ಭಗಳಿದ್ದಾಗ ಹೆಣ್ಣು ಮಕ್ಕಳು ತಲೆಯ ಮೇಲೆ ಸೆರಗು ಹಾಕಿಕೊಂಡು ತಲೆತಗ್ಗಿಸಿ ನಡೆಯುತ್ತಾರೆ. ಇಲ್ಲವೆ ಅಡ್ಡ ಸೆರಗು ಹಾಕಿರುತ್ತಾರೆ. ಇದು ಒಂದರ್ಥದಲ್ಲಿ ಮನೆಯ ಪುರುಷರಿಗೆ ಆ ಮಹಿಳೆ ಕೊಡುವ ಗೌರವದ ಪ್ರತೀಕವಾಗಿದೆ. ಅಲ್ಲದೆ ಇದು ಕೃಷಿಯ ಕೌಟುಂಬಿಕ ಆವರಣದಲ್ಲಿ ಹೆಣ್ಣು ಪುರುಷನಿಗೆ ಅಂಜಿ ನಡೆಯುವ ಪ್ರತೀಕವೂ ಆಗಿದೆ. ಮನೆಯ ಸೊಸೆಯಂದಿರ ವಿಷಯದಲ್ಲಿ ಈ ಕಟ್ಟುಪಾಡುಗಳು ಬಿಗಿಯಾಗಿರುತ್ತವೆ. ಮನೆಯ ಹೆಣ್ಣು ಮಕ್ಕಳ ವಿಷಯಕ್ಕೆ ಬಂದಾಗ ಈ ನಿಯಮಗಳಲ್ಲಿ ಸ್ವಲ್ಪ ಸಡಿಲತೆ ಇರುವುದು ಕಂಡುಬರುತ್ತದೆ. ಕುರ್ಚಿ ಸಂಸ್ಕೃತಿ ನಮ್ಮಲ್ಲಿ ಬೆಳೆದು ಬಂದಿದ್ದು ಬಹಳ ಇತ್ತೀಚಿಗಾದರೂ ಮನೆಯಲ್ಲಿ ಆ ಕುರ್ಚಿಯ ಮೇಲೆ ಯಾರು ಕುಳಿತುಕೊಳ್ಳಬೇಕು? ಯಾರು ಕುಳಿತುಕೊಳ್ಳಬಾರದು? ಎಂಬ ಅಲಿಖಿತ ನಿಯಮಗಳು ರೂಢಿಯಲ್ಲಿವೆ. ಮನೆಯಲ್ಲಿ ಆ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಹಕ್ಕು ಮನೆಯ ಪುರುಷರಿಗೂ, ಮನೆಯ ಮಕ್ಕಳಿಗೂ ಇದ್ದಷ್ಟು ಆ ಮನೆಯ ಸೊಸೆಯಂದಿರಿಗಿರದು. ತುಂಬಾ ಅಪರೂಪಕ್ಕೆ ಮನೆಯ ಗಂಡಸರ್ಯಾರು ಇಲ್ಲದಿದ್ದಾಗ ಆ ಕುರ್ಚಿಗಳು ಅವಳಾದಗುತ್ತವಷ್ಟೆ. ಹಾಗೇನಾದರೂ ಮನೆಯ ಗಂಡಸರೆದುರು ಅಥವಾ ಗಂಡಸರಿಗೆ ಸರಿಸಮನಾಗಿ ಹೆಣ್ಣು ಕುರ್ಚಿಮೇಲೆ ಕುಳಿತಿರುವುದು ತಿಳಿದುಬಂದರೆ ಅದು ಆ ಹೆಣ್ಣಿನ ಸೊಕ್ಕು, ದರ್ಪ, ದುರಹಂಕಾರ ಎಂದು ವ್ಯಾಖ್ಯಾನಕ್ಕೊಳಗಾಗುತ್ತದೆ. ಅಲ್ಲದೆ ಅದು ಗಂಡಿಗೆ ತೋರುವ ಅಗೌರವವೆಂದು ಭಾವಿಸಲಾಗುತ್ತದೆ.

"ಮಳೆ ಬಂದರೆ ಕೆಟ್ಟಿಲ್ಲ ಮಗ ಉಂಡರೆ ಕೆಟ್ಟಿಲ್ಲ" ಎನ್ನುವ ಗಾದೆ ಮಾತೊಂದಿದೆ. ಅಂದರೆ ಗಂಡಸು ದುಡಿತಾನೆ ಅವನು ಏನು ಮಾಡಿದರೂ ಸರಿಯೇ ಎನ್ನುವ ತಾತ್ವಿಕತೆ ಈ ಗಾದೆಯದು. ಈಗಲೂ ಕೂಡ ಗಂಡಸು ದುಡಿಯುತ್ತಾನೆ ಎನ್ನುವ ಕಾರಣಕ್ಕೆ ಕುಟುಂಬದಲ್ಲಿ ಅವನಿಗೆ ಸಿಗುವ ಗೌರವಾಧಾರಗಳೇ ಬೇರೆ. ಊಟದ ಸಂಗತಿಯ ಬಗೆಗೆ ಹೇಳುವುದಾದರೆ ಗಂಡಸಿನ ಊಟದ ನಂತರವೇ ಮನೆಯ ಹೆಂಗಸರು ಊಟ ಮಾಡುವ ರೂಢಿಯನ್ನು ಬೆಳೆಸಿಕೊಂಡು ಬಂದಿರುವುದನ್ನು ನಾವು ಗಮನಿಸಬಹುದು.

"ಅತ್ತೆಯ ಮನಿಯಾಗ ಮುತ್ತಾಗಿ ಇರಬೇಕು
ಹೊತ್ತಾಗಿ ನೀಡಿದರೆ ಉಣಬೇಕು! ಮಗಳ
ತವರೀಗಿ ಹೆಸರ ತರಬೇಕು"[29]

ಅಂದರೆ ಮನೆಯಲ್ಲಿ ಊಟದ ವಿಷಯದಲ್ಲಿ ಪುರುಷನಿಗಿದ್ದಷ್ಟು ಪ್ರಾಶಸ್ತ್ಯ ಮಹಿಳೆಗಿದ್ದಂತಿಲ್ಲ. ಎಷ್ಟೋತ್ತಿದ್ದರೂ ಸರಿಯೇ ಮನೆಯವರೆಲ್ಲಾ ಊಟ ಮಾಡಿದ ಮೇಲೆ ಮಹಿಳೆಯರು ಊಟ ಮಾಡುವ ಕ್ರಮ ನಮ್ಮಲ್ಲಿದೆ. ಅಲ್ಲದೆ ದುಡಿಯುವ ಗಂಡಸು ಎಂದು ಅವರಿಗೆ ಪೌಷ್ಠಿಕಾಂಶವಿರುವ ತಿಂಡಿ ತಿನಿಸು ಮತ್ತು ಅಡುಗೆ ಪದಾರ್ಥಗಳನ್ನು ರುಚಿರುಚಿಯಾಗಿ ಮಾಡಿಹಾಕಲಾಗುತ್ತದೆ. ಅಂತೆಯೇ ಏನಾದರೂ ತಿನ್ನುವ ಪದಾರ್ಥಗಳನ್ನು ಹಂಚುವ ವಿಷಯದಲ್ಲೂ ಅಷ್ಟೇ ಗಂಡಸರಿಗೆ ಹೆಚ್ಚಿನ ಭಾಗವನ್ನು ಕೊಟ್ಟು ಉಳಿದುದರಲ್ಲಿ ಮಹಿಳೆ ಹಂಚಿಕೊಳ್ಳುವುದನ್ನು ನೋಡುತ್ತೇವೆ. ಹೀಗೆ ಇನ್ನೊಂದು ನಿದರ್ಶನವನ್ನು ನೋಡೋಣ. ಕೃಷಿ ಕುಟುಂಬ ಎಂದರೆ ಸಾಮಾನ್ಯವಾಗಿ ಆ ಮನೆಯಲ್ಲಿ 'ಹೈನು' ಇದ್ದೇ ಇರುತ್ತದೆ. ನಾವು ಗಮನಿಸಬೇಕಾದ ಸಂಗತಿ ಎಂದರೆ ಆ ಹೈನಿನ ಬಹುಪಾಲು ಲಾಭ ಯಾರಿಗೆ ತಟ್ಟುವುದು ಎಂಬ ಅಂಶವನ್ನು, ಈ ಅಂಶವನ್ನು ಗಮನಿಸಿದಾಗ, ಗಂಡಸು ದುಡಿತಾನೆ ಎನ್ನುವ ಕಾರಣಕ್ಕೆ ಸಾಮಾನ್ಯವಾಗಿ ಅವರಿಗೆ ಕೆನೆ ಮೊಸರನ್ನು, ಗಟ್ಟಿ ಮೊಸರನ್ನು ಹಾಲಿನ ಕೆನೆಯ ಭಾಗವನ್ನು, ತುಪ್ಪ ಬೆಣ್ಣೆಯನ್ನು ಹೆಚ್ಚು ಬಡಿಸುವುದು ಕಂಡುಬರುತ್ತದೆ. ಬಹುಶಃ ಆಹಾರದ ಈ ಅಸಮಾನ ಹಂಚಿಕೆಯಿಂದ ಪೋಷಕಾಂಶದ ಕೊರತೆ ಉಂಟಾಗಿ ಮಹಿಳೆಯರ ದೈಹಿಕ ದುರ್ಬಲತೆಗೆ ಅನಾರೋಗ್ಯಕ್ಕೆ ಕಾರಣವಾಗಬಹುದು.

"ಗ್ರಾಮೀಣ ಪ್ರದೇಶದ ಬಹಳಷ್ಟು ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿರುವ ಕುರಿತು ಹಲವಾರು ಅಧ್ಯಯನಗಳು ಸೂಚಿಸಿರುವಂತೆ ಇವರು ಸೇವಿಸುವ ಆಹಾರದಲ್ಲಿ ಸತ್ವಯುತ ಪೌಷ್ಠಿಕಾಂಶದ ಕೊರತೆ ಇದ್ದು, ಇವರು ಸೇವಿಸುವ ಪೌಷಿಕಾಂಶ ತುಂಬಾ ಕಡಿಮೆ ಪ್ರಮಾಣದ್ದಾಗಿದೆ(ದಿನಕ್ಕೆ ಸರಾಸರಿ ೧೦೦ ಕ್ಯಾಲೋರಿ). ಇದು ಅವರು ದಿನನಿತ್ಯದ ಕೆಲಸ ಕಾರ್ಯಗಳಿಗೆ ವ್ಯಯಿಸುವ ಶಕ್ತಿಗಿಂತ ತುಂಬಾ ಕಡಿಮೆಯಾಗಿರುವುದರಿಂದ ಅನಾರೋಗ್ಯದಿಂದ ಬಳಲಬೇಕಾಗುತ್ತದೆ ಎಂದಿದ್ದಾರೆ. ಅಲ್ಲದೆ ೧೯೯೮-೯೯ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (NFHS) ಪ್ರಕಾರ ಗ್ರಾಮೀಣ ಸಮಾಜದಲ್ಲಿಯ ಮಹಿಳೆಯರು ಶೇ.೫೦% ರಕ್ತಹೀನತೆಯಿಂದ ಮತ್ತು ಶೇ.೪೬%ರಷ್ಟು ಹಿಮೊಗ್ಲೋಬಿನ್ ಕೊರತೆಯಿಂದ ಬಳಲುತ್ತಿರುವುದು ಕಂಡುಬರುತ್ತದೆ"[೧೩] ಎಂದು ತಿಳಿಸಿದ್ದಾರೆ.

ಅಂತೆಯೇ ಮನೆಯಲ್ಲಿ ಊಟದ ವಿಷಯದಲ್ಲಿ ಪುರುಷರಿಗೆ ಹೆಚ್ಚು ಪ್ರಾಶಸ್ತ್ಯ ನೀಡುವುದರ ಕುರಿತು ವಂದನಾಶಿವ ಈ ರೀತಿ ಹೇಳಿದ್ದಾರೆ. "ಜಮೀನಿನಿಂದ ತಟ್ಟೆಗೆ ಆಹಾರ ವರ್ಗಾವಣೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸಿದರೂ, ಅವರಿಗೆ ಸಲ್ಲಬೇಕಾದ ನ್ಯಾಯಯುತ ಪಾಲು ಸಿಗುತ್ತಿಲ್ಲ. ಬಹುಪಾಲು ಕೃಷಿ ಕೆಲಸ ಮಾಡುವ ಅವರು ಮನೆಯಲ್ಲಿ ಕೊನೆಗೆ ಉಣ್ಣುತ್ತಾರೆ. ಕನಿಷ್ಠ ಪ್ರಮಾಣದಲ್ಲಿ ಉಣ್ಣುತ್ತಾರೆ"[೧೪] ಎಂದು ಹೇಳಿ ವಿಷಯ ಕುರಿತಂತೆ ನಡೆದ ಅಧ್ಯಯನವನ್ನು ಹೀಗೆ ಸೂಚಿಸಿದ್ದಾರೆ.

"ಬೋರಿ ಹೋರೋವಿಟ್ಸ್ ಮತ್ತು ಮಧುಕೇಶ್ವರ ಪಂಜಾಬ್‌ನ ಹಳ್ಳಿಗಳ ಜಾಟ್ ಕುಟುಂಬಗಳಲ್ಲಿ ನಡೆಸಿದ ಅಧ್ಯಯನದ ಪ್ರಕಾರ ೧೪ ಕುಟುಂಬಗಳಲ್ಲಿ ೧೨ರಲ್ಲಿ ಎಲ್ಲರೂ ಊಟ ಮುಗಿಸಿದ ನಂತರ ಮಹಿಳೆಯರು ಊಟಕ್ಕೆ ಕೂರುತ್ತಿದ್ದರು. ಜಮೀನಿನಲ್ಲಿ ಹೆಚ್ಚು ಕೆಲಸ ಇದ್ದಾಗ ಅವರು ೧೫ ಘಂಟೆ ಕೆಲಸ ಮಾಡುವುದು ಇದೆ. ಆದರೆ ಪುರುಷನಿಗೆ ಹೋಲಿಸಿದರೆ (೩೧೧೨ ಕ್ಯಾಲೋರಿ) ಅವರಿಗೆ ಸಿಗುವುದು ೨.೧೬೯ ಕ್ಯಾಲೋರಿ ಮಾತ್ರ ಎಂದು ಆ ಅಧ್ಯಯನದ ವಿವರಗಳನ್ನು ಹೇಳಿರುವರು"[೧೫] ಹೀಗೆ ಮನೆಯ ಒಳಗೂ ಹೊರಗೂ ಮಹಿಳೆ ದುಡಿದರೂ ಕುಟುಂಬದಲ್ಲಿ ಅವಳು ಹೇಗೆ ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದಾಳೆ ಮತ್ತು ತನ್ನನ್ನು ತಾನೇ ಮಹಿಳೆ ಹಾಗೆ ನಿರ್ಲಕ್ಷ್ಯಕ್ಕೆ ಒಳಪಡಿಸಿಕೊಂಡು ಬಂದಿದ್ದಾಳೆ ಎಂಬುದು ಈ ರೀತಿಯ ಕೆಲವು ಸಂಗತಿಗಳಿಂದ ತಿಳಿದುಬರುತ್ತದೆ. ಒಟ್ಟಾರೆ ಈಗಿನ ನಾಗರೀಕ ಬುಡಕಟ್ಟು ಸಮುದಾಯದಲ್ಲಿ ಪುರುಷನಿಗೆ ಹೆಚ್ಚು ಪ್ರಾಶಸ್ತ್ಯ ಇರುವುದು ಕಂಡುಬರುತ್ತದೆ. ಮೇಲೆ ಚರ್ಚಿಸಿದ ವಿಷಯಗಳು ಮೇಲುನೋಟಕ್ಕೆ ಸಣ್ಣಪುಟ್ಟ ವಿಷಯಗಳೆನಿಸಬಹುದು. ಆದರೆ ಅವುಗಳನ್ನು ನೋಡಿದರೆ ಒಟ್ಟು ಕೃಷಿ ಕುಟುಂಬದಲ್ಲಿ ಕೃಷಿ ಮಹಿಳೆಯರ ಸ್ಥಾನಮಾನ ಯಾವ ರೀತಿಯದು ಎಂಬುದು ತಿಳಿದುಬರುತ್ತದೆ. ಪುರುಷ ಹಿತಾಶಕ್ತಿಯ ಆಶೆಯಗಳನ್ನು ಹೊಂದಿದ ಕೃಷಿಯ ಕೌಟುಂಬಿಕ ನೆಲೆಯಲ್ಲಿ ಮಹಿಳೆಯರಿಗೆ ಹೆಚ್ಚು ಸ್ವಾಯತ್ತತೆ ಇಲ್ಲವೆಂಬುದನ್ನು ಈ ಅಂಶಗಳು ಸ್ಪಷ್ಟಪಡಿಸುತ್ತವೆ.

ಇನ್ನೂ ಕೃಷಿ ಕೂಲಿ ಮಹಿಳೆಯಾಗಿದ್ದರೆ ಅವಳಿಗೆ ಕುಟುಂಬದಲ್ಲಿ ಅಂತಹ ಕಟ್ಟುಪಾಡುಗಳೇನು ಇರುವುದಿಲ್ಲ. ಕುಟುಂಬದ ವ್ಯವಹಾರಗಳಲ್ಲಿ ಅವಳಿಗೆ ಸಾಕಷ್ಟು ಸ್ವಾಯತತ್ತೆ ಇರುತ್ತದೆ. ಕುಟುಂಬದೊಳಗೆ ಗಂಡ ಹೆಂಡಿರಿಬ್ಬರೂ ಕೂಡಿ ದುಡಿಯುವುದರಿಂದ ಹೊಲಗದ್ದೆಗಳಲ್ಲಿ ದುಡಿದು ಹೈರಣಾದ ಇವರು ಮನೆಯೊಳಗೆ ಅನ್ಯೋನ್ಯವಾಗಿರುತ್ತಾರೆ. ಆದರೂ ಕೌಟುಂಬಿಕ ಜೀವನದಲ್ಲಿ ಬಡತನ ಕಾಡುವ ಸಮಸ್ಯೆಯಾಗಿರುತ್ತದೆ. "ಆತ ಬಡವ ನಾನು ಬಡವಿ ಒಲವೆ ನಮ್ಮ ಬದುಕು" ಎನ್ನುವ ಬೇಂದ್ರೆಗೀತೆಯ ಸಾರಂದತೆ ಕೆಲವು ಬಡ ಜೀವಿಗಳು ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಬದುಕು ಸಾಗಿಸುತ್ತಾರೆ. ಆದರೆ ಕೂಲಿ ಮಾಡಿ ಬದುಕುವ ಕೆಲವು ಕುಟುಂಬಗಳಲ್ಲಿ ಕುಡಿಯುವ ಚಟವಿದ್ದ ಗಂಡನಿದ್ದರೆ ಆ ಮಹಿಳೆಯ ಬಾಳುಗೋಳೇ ಸರಿ ಏಕೆಂದರೆ ಹೊಲದಲ್ಲಿ ಮನೆಯಲ್ಲಿ ದುಡಿಯುವುದಲ್ಲದೆ ಕುಡುಕ ಗಂಡನ ಹೊಡೆತ ಬಡೆತಗಳನ್ನು ಅವಳು ಸಹಿಸಿಕೊಳ್ಳಬೇಕಾಗುತ್ತದೆ. ಆದರೆ ಕೇವಲ ಕೂಲಿಕಾರ್ಮಿಕ ವರ್ಗದವರಲ್ಲಿ ಮಾತ್ರ ಕುಡಿತದ ಚಟವಿರುವ ಗಂಡಸರಿದ್ದಾರೆ ಎಂದಲ್ಲ, ಮದ್ಯಮ, ಮೇಲ್ಮಧ್ಯಮ ಮತ್ತು ಮೇಲ್ವರ್ಗದವರಲ್ಲೂ ಕುಡಿಯುವವರಿದ್ದಾರೆ. ಆದರೆ ಕೆಲವರು ಹವ್ಯಾಸಕ್ಕಾಗಿ ಕುಡಿದರೆ, ಕೆಲವರು ತಮ್ಮೊಳಗಿನ ಅಸಮಾಧಾನಗಳನ್ನು, ನೋವುಗಳನ್ನು ಮರೆಯುವುದಕ್ಕಾಗಿ ಕುಡಿಯುತ್ತಾರೆ. ಹೀಗೆ ಕುಡಿದ ವೇಳೆಯಲ್ಲಿ ಕೆಲವರು ತಮ್ಮ ಪಾಡಿಗೆ ತಾವು ನಿರ್ಲಿಪ್ತವಾಗಿದ್ದರೆ, ಇನ್ನು ಕೆಲವರು ಆ ಮತ್ತಿನ ಸ್ಥಿತಿಯಲ್ಲಿ ಹೆಂಡತಿ ಮಕ್ಕಳೊಂದಿಗೆ ಜಗಳಕ್ಕಿಳಿ ಯುವುದು ಕಂಡುಬರುತ್ತದೆ. ಮಧ್ಯಮ ಮತ್ತು ಮೇಲ್ವರ್ಗದವರಲ್ಲಿ ಗಂಡಸು ಕುಡಿದು ತನ್ನ

ಹೆಂಡತಿಯನ್ನು ಹೊಡೆದರೆ ಅದು ಕುಟುಂಬದ ಮರ್ಯಾದೆಗೆ ಧಕ್ಕೆ ತರುವ ವಿಷಯವೆಂದು ಭಾವಿಸಲಾಗಿದ್ದರಿಂದ ಹೊಡೆಸಿಕೊಂಡ ಹೆಂಗಸು ಅದನ್ನು ಬಹಿರಂಗಪಡಿಸದೆ ಸಹಿಸಿಕೊಳ್ಳುವುದನ್ನು ಕಾಣುತ್ತೇವೆ. ಆದರೆ ಕೂಲಿ ಮಾಡುವ ವರ್ಗದಲ್ಲಿ ಈ ರೀತಿಯ ಘಟನೆಗಳು ಕಣ್ಣಿಗೆ ಕಾಣುವಂತೆ ನಡೆಯುತ್ತಿರುತ್ತವೆ ಮತ್ತು ಈ ವರ್ಗದ ಹೆಂಗಸರು ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಮುಕ್ತವಾಗಿ ಇತರರೊಂದಿಗೆ ಹಂಚಿಕೊಳ್ಳುವುದನ್ನು ಅಥವಾ ಅಭಿವ್ಯಕ್ತಿಸಿಕೊಳ್ಳುವುದನ್ನು ಕಾಣುತ್ತವೆ.

ನಮ್ಮಲ್ಲಿ ಮಹಿಳೆ ದುಡಿದರೆ ಆರ್ಥಿಕವಾಗಿ ಸ್ವಾವಲಂಬಿಯಾಗುತ್ತಾಳೆ ಎನ್ನುವ ಸಾರ್ವತ್ರಿಕ ವಿಚಾರ ಒಂದಿದೆ. ಆದರೆ ದುಡಿಯುವ ಎಲ್ಲಾ ಮಹಿಳೆಯರಿಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ದುಡಿಯುವ ಎಷ್ಟೋ ಮಹಿಳೆಯರಿಗೆ ತಮ್ಮ ದುಡಿಮೆಯಿಂದ ಬಂದ ಹಣವನ್ನು ಖರ್ಚು ಮಾಡುವ ಸ್ವಾತಂತ್ರ್ಯ ಇರುವುದಿಲ್ಲ. ತನ್ನ ದುಡಿಮೆ ಹಣವನ್ನು ಮನೆಯಲ್ಲಿ ಗಂಡನ ಕೈಗೆ ತಂದುಕೊಡುವ ಉದಾಹರಣೆಗಳು ನಮ್ಮಲ್ಲಿ ಹಲವಾರು ಇವೆ. ಅಂದರೆ ತನ್ನ ದುಡಿಮೆಯ ಹಣವನ್ನು ಹಣವನ್ನು ಖರ್ಚು ಮಾಡುವ ಅಧಿಕಾರ ಮಹಿಳೆಗೆ ಇರುವುದಿಲ್ಲ. ಹಾಗೊಂದು ವೇಳೆ ಅವಳಿಗೆ ಖರ್ಚು ಮಾಡುವ ಅವಕಾಶವಿದ್ದಾಗಲೂ ಅವಳು ತನ್ನ ದುಡಿಮೆಯ ಹಣವನ್ನು ಕುಟುಂಬದ ಹಿತಾಸಕ್ತಿಗಾಗಿ, ಮನೆಯ ನಿರ್ವಹಣೆಗಾಗಿ ಬಳಸುತ್ತಾಳೆಯೇ ಹೊರತು ಸ್ವಹಿತಕ್ಕಾಗಿ ಬಳಸಿಕೊಳ್ಳುವುದಿಲ್ಲ. ಹಾಗೊಂದು ವೇಳೆ ತನ್ನ ಸ್ವಹಿತಕ್ಕಾಗಿ ಉಪಯೋಗ ಮಾಡಿಕೊಂಡಿದ್ದರೂ ಅದರ ಪ್ರಮಾಣ ಅತ್ಯಲ್ಪವಾಗಿರುತ್ತದೆ. ಹೀಗೆ ಬೇಡ ಸಮುದಾಯದಲ್ಲಿ ಬಹುಪಾಲು ಬಡ ಕೃಷಿ ಕೂಲಿ ಮಹಿಳೆಯರು ತಮ್ಮ ಕೂಲಿಯ ಹಣವನ್ನು ಗಂಡನ ಕುಡಿತದ ಚಟಕ್ಕೂ, ಮಕ್ಕಳ ಲಾಲನೆ ಪಾಲನೆಗೂ, ಮನೆಯ ನಿರ್ವಹಣೆಗೂ ವ್ಯಯಿಸುತ್ತಿರುವುದು ಕಂಡುಬರುತ್ತದೆ.

ಇಂತಹ ಪರಿಸ್ಥಿತಿಗೆ ವಿರೋಧವೆಂಬಂತೆ ಸಮುದಾಯದ ಕೆಲವು ಕೃಷಿ ಕುಟುಂಬದಲ್ಲಿ ಪುರುಷನಿದ್ದಾಗ್ಯೂ ಕುಟುಂಬದ ನಿರ್ವಹಣೆಯಲ್ಲಿ ಮಹಿಳೆ ಪ್ರಧಾನ ಪಾತ್ರವಹಿಸಿ, ಗಂಡ ಹಿನ್ನೆಲೆಯಲ್ಲಿದ್ದರೆ ಅಥವಾ ಹೆಣ್ಣನ್ನು ಸಮಾನತೆಯಿಂದ ಕಂಡು ಅವಳಿಗೆ ಕುಟುಂಬದಲ್ಲಿ ಮುಕ್ತ ಅವಕಾಶ ನೀಡಿದರೆ ಅದನ್ನು ಅಕ್ಕ-ಪಕ್ಕದವರು ಇಷ್ಟಪಡುವುದಿಲ್ಲ. ಅಂತಹ ಪುರುಷನನ್ನು "ಹೆಂಡತಿಯ ಗುಲಾಮ" ಎಂದೋ "ಹೆಂಡತಿಯ ಛೇಲಾ" ಎಂದೋ ಹೆಂಡ್ತಿ ಸೆರಗಿನ ಹಿಂದೆ ಅಡ್ಡಾಡುವವನೆಂದೂ ಕರೆದು ಆ ಪುರುಷನನ್ನು ಅವಮಾನಗೊಳಿಸಲಾಗುತ್ತದೆ. ಅಂದರೆ ಅವರ ಈ ಮನೋಭಾವದ ಹಿಂದೆ ಮಹಿಳೆಗೆ ಕಲ್ಪಿಸುವ ಸಮಾನತೆಯನ್ನು ಹತ್ತಿಕ್ಕುವ ಹುನ್ನಾರ ಅಡಗಿರುತ್ತದೆ. ಹೀಗೆ ಅವಮಾನಕ್ಕೆ ಒಳಪಡಿಸುವವರಲ್ಲಿ ಆ ಸಮುದಾಯದ ಮಹಿಳೆಯರು ಸೇರಿರುತ್ತಾರೆ. ಅಂದರೆ ಈ ಮಹಿಳೆಯರು ವ್ಯವಸ್ಥೆಗೆ ಭಾಗವಾಗಿರುವುದರಿಂದ ವ್ಯವಸ್ಥೆಯ ಮೌಲ್ಯಗಳನ್ನೆಲ್ಲ ಒಪ್ಪಿಕೊಂಡವರಾಗಿದ್ದು, ಅವರು ತಾಳುವ ನಿಲುವುಗಳು ಮತ್ತು ಆಲೋಚನಾ ಕ್ರಮ ಕೂಡ ಪುರುಷನಿಷ್ಠವಾಗಿಯೇ ಇರುತ್ತವೆ. ಹೀಗೆ ಕುಟುಂಬಗಳಲ್ಲಿ ಪ್ರತಿನಿತ್ಯವು ಮಹಿಳೆ ಪುರುಷನಿಗೆ ಅಧೀನವಾಗಿಯೇ ಇರಬೇಕೆಂಬ

ನಿರೀಕ್ಷೆಗಳಿರುತ್ತವೆ. ಆ ಕಾರಣಕ್ಕಾಗಿಯೇ ಮಹಿಳೆ ಪುರುಷನಂತೆ ಸಮಾನವಾಗಿ ಬದುಕುವುದನ್ನು ಅವರು ಸಹಿಸುವುದಿಲ್ಲ. ಹಾಗೆ ಮಹಿಳೆ ಮುನ್ನೆಡೆಗೆ ಬಂದ ಸಂದರ್ಭಗಳಲ್ಲಿ ಮಹಿಳೆ ಗಂಡುಬೀರಿ ಯಾಗಿಯೇ, ಗಯ್ಯಾಳಿಯಾಗಿಯೇ ಕರೆಯಲ್ಪಡುತ್ತಾಳೆ. ಒಟ್ಟಿನಲ್ಲಿ ಕುಟುಂಬದಲ್ಲಿ ಪುರುಷನಿಗೆ ಪ್ರಾಶಸ್ತ್ಯವಿದ್ದಷ್ಟು ಮಹಿಳೆಗೆ ಇದ್ದಂತಿಲ್ಲ. ಕುಟುಂಬದಲ್ಲಿ ಊಟ ಮಾಡುವ ವಿಷಯದಲ್ಲಾಗಿರಬಹುದು, ಮಹಿಳೆ ಮತ್ತು ಪುರುಷರ ನಡುವೆ ಭಿನ್ನತೆಗಳಿರುವುದು ಕಂಡುಬರುತ್ತದೆ. ಈ ಎಲ್ಲ ಅಂಶಗಳಿಂದ ಕೌಟುಂಬಿಕ ವಲಯದಲ್ಲಿ ಮಹಿಳೆಗೆ ಹೆಚ್ಚು ಸ್ವಾಯತ್ತತೆ ಮತ್ತು ಸಮಾನತೆಗಳಿಲ್ಲದಿರುವುದು ಸ್ಪಷ್ಟವಾಗುತ್ತದೆ.

೫.೨.೩. ಕೃಷಿ ಕಾರ್ಯಗಳಲ್ಲಿ ಮಹಿಳೆಯ ಪಾಲುದಾರಿಕೆ

ಸಮುದಾಯದ ಮಹಿಳೆಯ ಹೊರಗಿನ ಕೆಲಸ ಕಾರ್ಯಗಳಲ್ಲಿ ಸಾಮಾನ್ಯವಾಗಿ ಹೊಲಗದ್ದೆಯ ಕೆಲಸ ಅಥವಾ ಕೃಷಿ ಕೂಲಿ ಕೆಲಸಕಾರ್ಯಗಳೇ ಎಂದರ್ಥ. ಮಹಿಳೆಯ ಪಾಲುದಾರಿಕೆ ಯಾವ ಬಗೆಯದು ಎಂಬುದನ್ನು ನೋಡೋಣ.

೧. ಕೃಷಿ ದುಡಿಮೆಯಲ್ಲಿ ಮಹಿಳೆಯರ ಪಾತ್ರ

ನಮ್ಮದು ಪುರುಷ ಪ್ರಧಾನ ಸಮಾಜವಾದ್ದರಿಂದ ಪುರುಷನಿಗಿದ್ದಂತೆ ಮಹಿಳೆಗೆ ಕುಟುಂಬದ ಒಳಗಾಗಲಿ, ಹೊರಗಾಗಲಿ ನಿರ್ಣಯಾತ್ಮಕ ಹಕ್ಕುಗಳಿರುವುದು ಕಡಿಮೆ. ಹಾಗಾಗಿ ಹೊಲವನ್ನು ಖರೀದಿಸುವ ವಿಷಯದಲ್ಲಾಗಲಿ, ಮಾರುವ ವಿಷಯದಲ್ಲಾಗಲಿ ಅಥವಾ ಇದ್ದ ಹೊಲವನ್ನು ಕಟ್‌ಗುತ್ತಿಗೆ ಅಥವಾ ಪಾಲಿಗೆ ಕೊಡುವ ಬಗೆಗಾಗಲಿ ನಿರ್ಣಯಿಸುವುದು ಬಹುತೇಕ ಮನೆಯ ಪುರುಷನಾಗಿರುತ್ತಾನೆ. ಆದರೆ ಎಲ್ಲೋ ಕೆಲವು ಬೆರಳೆಣಿಕೆಯ ಮಹಿಳೆಯರಿಗೆ ವ್ಯವಸ್ಥೆಯಲ್ಲಿ ಈ ರೀತಿಯ ವ್ಯವಹಾರಗಳಲ್ಲಿ ಭಾಗಿಯಾಗಿ ನಿರ್ಣಯ ತೆಗೆದುಕೊಳ್ಳುವುದನ್ನು ಕಾಣುತ್ತೇವೆ.

ಇದರೊಂದಿಗೆ ಬೀಜ ಬಿತ್ತನೆಯ ಸಂದರ್ಭದಲ್ಲಿ ಹೊಲಕ್ಕೆ ಯಾವ ಬೀಜ ಬಿತ್ತಬೇಕು. ಯಾವ ಬೆಳೆ ಬೆಳೆಯಬೇಕು, ಬೆಳೆಗೆ ಯಾವ ಗೊಬ್ಬರ. ಹಾಕಬೇಕು. ಯಾವ ರೋಗಕ್ಕೆ ಏನು ಕೀಟನಾಶಕ ಸಿಂಪಡಿಸಬೇಕು ಎಂದು ತೀರ್ಮಾನಿಸುವವರು ಪುರುಷರೇ ಆಗಿದ್ದಾರೆ. ಏಕೆಂದರೆ ಮಹಿಳೆಗೆ ಕೃಷಿ ವಲಯದಲ್ಲಿ ಆ ಬಗೆಯ ನಿರ್ಣಯಾತ್ಮಕ ಹಕ್ಕುಗಳಿರುವುದು ಕಡಿಮೆ. ಆದರೆ ಹೊಲದಲ್ಲಿ ಬೆಳೆಯುವ ಮುಖ್ಯ ಬೆಳೆಯ ಜೊತೆಗೆ ಅಥವಾ ಹೊಲದ ಬದುವಿನಗುಂಟ ಬೆಳೆಯಲಿಕ್ಕೆ ಮನೆಗೆ ಬೇಕಾಗುವ ಸಾಸಿವೆ, ಗುರೆಳ್ಳು, ಅಗಸಿ, ನವಣೆ, ಹಲಸಂದಿ, ಹೆಸರು, ಮೆಟಗಿ ಬೀಜಗಳನ್ನು ಬಿತ್ತಲು ಹೇಳುತ್ತಾಳೆಯೇ ಹೊರತು ಹೊಲದಲ್ಲಿ ಬೆಳೆಯುವ ಮುಖ್ಯಬೆಳೆ ಯಾವುದಾಗಿರಬೇಕೆಂದು ಎಂಬುದನ್ನು ಸಾಮಾನ್ಯವಾಗಿ ಮನೆಯ ಹಿರಿಯನು ತೀರ್ಮಾನಿಸುತ್ತಾನೆ. ಕೆಲವು ಸಂದರ್ಭದಲ್ಲಿ ಕೃಷಿಯಲ್ಲಿ ನುರಿತ ಅನುಭವಸ್ಥೆಯಾಗಿದ್ದರೆ ಆಕೆ ಹೇಳಿದಂತೆ ಬೀಜ ಬಿತ್ತುವ ಕ್ರಿಯೆಯೂ ನಡೆಯುತ್ತದೆ. ಹಾಗಾಗಿ ಬಿತ್ತನೆಯ ಪ್ರಕ್ರಿಯೆಯಲ್ಲಿ ಮಹಿಳೆಯ ಪಾಲುದಾರಿಕೆ ಇಲ್ಲವೆ ಇಲ್ಲ ಎಂದು ಹೇಳಲಿಕ್ಕಾಗದು.

ಆದರೆ ಕೃಷಿಕರು ಮಾರುಕಟ್ಟೆಯಲ್ಲಿ ಬರುವ ಸಿದ್ಧಬೀಜಗಳ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾಗಿರುವುದರಿಂದ ಮುಂಚಿತವಾಗಿಯೇ ಯಾವ ಬೆಳೆ ಬೆಳೆಯಬೇಕೆಂದು ನಿರ್ಧರಿಸುವಲ್ಲಿ ಅಸಹಾಯಿಕರಾಗಿದ್ದಾರೆ. ರೈತ ಯಾವ ಬೆಳೆ ಬೆಳೆಯಬೇಕೆಂಬುದನ್ನು ಇಂದು ಪರೋಕ್ಷವಾಗಿ ಬಹುರಾಷ್ಟ್ರೀಯ ಕಂಪನಿಗಳು ನಿರ್ಧರಿಸುತ್ತಿವೆ. ಏಕೆಂದರೆ ಮಾರುಕಟ್ಟೆಯಲ್ಲಿ ಯಾವ ಬೀಜಗಳು ಲಭ್ಯ ಇವೆ ಎನ್ನುವುದರ ಮೇಲೆ ಮತ್ತು ಯಾವ ಬೆಳೆಗೆ ಮಾರುಕಟ್ಟೆಯಲ್ಲಿ ಬೆಲೆ ಇದೆ ಎನ್ನುವುದರ ಮೇಲೆ ಬಿತ್ತನೆಯ ಕಾರ್ಯ ನಡೆಯುತ್ತದೆ. ಹೊಲಕ್ಕೆ ಎಷ್ಟು ಆಳು ಹಚ್ಚಬೇಕು ಅವರಿಂದ ಯಾವ ಕೆಲಸ ಹೇಗೆ ಮಾಡಿಸಬೇಕು ಎನ್ನುವುದರಲ್ಲಿ ಮಹಿಳೆ ಭಾಗಿಯಾಗಿರುತ್ತಾಳೆ. ಏಕೆಂದರೆ ಆಳುಗಳ ಹಿಂದೆ ಹೋಗಿ ಅವರನ್ನು ದುಡಿಸುವವರು ಬಹುಪಾಲು ಮಹಿಳೆಯರೇ ಆಗಿರುತ್ತಾರೆ. ಅವರಲ್ಲಿ ಇದು ನನ್ನ ಮನೆಯ ಬದುಕು, ಹಾಳಾಗಬಾರದು ಎನ್ನುವ ತುಡಿತ ಆ ಮಹಿಳೆಯಲ್ಲಿರುವುದರಿಂದ ಏನೇ ಚಿಕ್ಕ-ಪುಟ್ಟ ತೊಂದರೆಗಳು ಬಂದಾಗಲೂ ಅದನ್ನೆಲ್ಲ ನಿಭಾಯಿಸಿಕೊಂಡು ಆಳಿನ ಜೊತೆ ತಾನು ಒಬ್ಬ ಆಳಾಗಿ ದುಡಿಯುತ್ತಾಳೆ. ಆದರೆ ದುಡಿದ ಆ ಆಳುಗಳಲ್ಲಿ ಕೂಲಿ ಕೊಡುವುದು ಪುರುಷನೇ ಆಗಿರುತ್ತಾನೆ. ಏಕೆಂದರೆ ಕುಟುಂಬದ ಹಣಕಾಸಿನ ವ್ಯವಹಾರಗಳೆಲ್ಲವೂ ಆತನ ಮೂಲಕವೇ ನಡೆಯಲ್ಪಡುತ್ತಿರುತ್ತವೆ.

ಆದರೆ ಹೊಲದಲ್ಲಿ ದುಡಿಯುವ ವಿಷಯ ಬಂದಾಗ ಅಲ್ಲಿ ಮಹಿಳೆಯ ಪಾಲುದಾರಿಕೆಯೂ ಅದು ಸ್ವಂತದ್ದಾಗಿರಬಹುದು. ಕೂಲಿರೂಪದ್ದಾಗಿರಬಹುದು. ಅದರಲ್ಲಿ ಅಧಿಕವಾಗಿ ಕಂಡುಬರುತ್ತದೆ. ಇದು ಪ್ರತಿ ಬೆಳೆಯ ಸಂದರ್ಭದಲ್ಲಿ ಯಾರು ಯಾವ ಕೆಲಸ ಮಾಡುತ್ತಾರೆ ಎನ್ನುವ ವಿವರವನ್ನು ಕುರಿತು ನೋಡಿದಾಗ ಅಧ್ಯಯನದ ಮೂರು ಜಿಲ್ಲೆಗಳಾದ ಗುಲಬರ್ಗಾ, ಕೊಪ್ಪಳ, ರಾಯಚೂರು ಪರಿಸರದಲ್ಲಿ ಬಹುಪಾಲು ಕೃಷಿಕರು ಮಳೆಯಾಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದು ಜೊತೆಗೆ ಅಲ್ಪ ಭಾಗಗಳಲ್ಲಿ ನದಿ ನೀರಿನ ಅನುಕೂಲವು ಇರುವುದು ಕಂಡುಬರುತ್ತದೆ. ಇದರಿಂದ ವರ್ಷದಲ್ಲಿ ಮುಂಗಾರು ಮತ್ತು ಹಿಂಗಾರು ಎಂದು ಎರಡು ಬೆಳೆ ಬೆಳೆಯುತ್ತಾರೆ. ಹೀಗೆ ಕೃಷಿಕರು ತಾವು ಬೆಳೆ ಬೆಳೆಯುವ ಸಂದರ್ಭದಲ್ಲಿ ಯಾರು ಯಾವ ಕೆಲಸ ಮಾಡುತ್ತಾರೆ. ಅಥವಾ ಕೃಷಿಯಲ್ಲಿ ಮಹಿಳೆಯರು ಯಾವ ಯಾವ ಕೆಲಸಗಳಲ್ಲಿ ಭಾಗಿಯಾಗುತ್ತಾಳೆ ಎನ್ನುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೀಡಿದ ಮಾಹಿತಿ ಪ್ರಕಾರ "ಮುಂಗಾರು ಸಂದರ್ಭದಲ್ಲಿ ಶೇಂಗಾ ಬಿತ್ತನೆ ಮಾಡಬೇಕಾದರೆ ಮೊದಲು ಹೊಲವನ್ನು ಹಸನಗೊಳಿಸಿ ನಂತರ ತಿಪ್ಪೆಗೊಬ್ಬರ ಸೂರು ಮಾಡುವುದು ಮಳೆ ಬಂದ ನಂತರ ರಂಟೆ ಹೊಡೆಯುವುದು ಕುಂಟೆ ಹರಗುವುದು, ಎಳೆಸುವುದು, ಬೀಜ ಬಿತ್ತುವಾಗ ಗೊಬ್ಬರ ಬಿತ್ತುವುದು ಅದರೊಂದಿಗೆ ಹವಿಜ, ಹಲಸಂದಿ, ಗುರೆಳ್ಳು, ಸಾಸಿವೆ ಇವುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಮಿಶ್ರಣ ಮಾಡಿ ಬಿತ್ತುವರು. ನಂತರ ಬಿತ್ತನೆಯಾದ ೧೫ ದಿನದ ನಂತರ ೮ ದಿನಗಳಿಗೊಮ್ಮೆ ಮೂರರಿಂದ ನಾಲ್ಕು ಸಲ ಎಡೆಕುಂಟೆ ಹೊಡೆಯುವರು. ಇದಾದ ಮೇಲೆ ಕಳೆ ತೆಗೆಯುವುದು ಮುಂದಿನ ದಿನಗಳಲ್ಲಿ ಪಸಲು ಬಂದಾಗ ಕಿತ್ತನೆ ಮಾಡಿ ಶೇಂಗಾ

ಹರೆಯುವರು ರಾಶಿ ಮಾಡಿ ಶೇಂಗಾ ಚೀಲ ತುಂಬಿಕೊಂಡು ಬಂದು ಮಾರುಕಟ್ಟೆಗೆ ಒಯ್ಯುವುದು ಈ ರೀತಿಯಾಗಿ ಇಡೀ ಕೃಷಿ ಪ್ರಕ್ರಿಯೆಗಳಲ್ಲಿ ಮಹಿಳೆಯು ಪುರುಷನಿಗಿಂತ ಅಧಿಕ ಸಮಯ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.'"[ಚ]

ಇದೇ ಪ್ರಕಾರವಾಗಿ ಮಹಿಳೆಯರು ಮುಂಗಾರು/ಹಿಂಗಾರು ಬೆಳೆಗಳು ಬೆಳೆಯುವ ಸಂದರ್ಭದಲ್ಲಿ ಅಂದರೆ ಜೋಳ, ಭತ್ತ, ಮೆಣಸಿನಗಿಡ, ಹೆಸರು ಕಾಳು, ಹುರಳಿ ಬೆಳೆ, ಬಿಳಿಜೋಳ, ಸಜ್ಜೆ, ಸೂರ್ಯಕಾಂತಿ ಇತರೆ ಬೆಳೆ ಬೆಳೆಯುವ ಸಂದರ್ಭದಲ್ಲಿ ಸಾಮಾನ್ಯವಾಗಿ ಮಹಿಳೆ ಬೆರಳೆಣಿಕೆಯಷ್ಟು ಕೆಲಸಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಕೆಲಸಗಳನ್ನು ನಿಭಾಯಿಸುವಳು ಎಂಬುದು ಸ್ಪಷ್ಟವಾಗುತ್ತದೆ. ಹೊಲದಲ್ಲಿ ಕೋಲಿ ಆರಿಸುವುದು, ಕಳೆ ತೆಗೆಯುವುದು, ಹತ್ತಿಕಾಳು ಹಾಕುವುದು, ಹತ್ತಿಕಾಳಿಗೆ ಗೊಬ್ಬರ ಹಾಕುವುದು, ಹತ್ತಿ ಬಿಡಿಸುವುದು, ಹೆಸರು, ಹಲಸಂದಿ ಬಿಡುಸುವುದು, ಜೋಳದ ತೆನೆ ಕೊಯ್ಯುವುದು, ಜೋಳದ ಸೊಪ್ಪಿ ಕೊಯ್ಯುವುದು, ಶೇಂಗಾ ಕೀಳೂವುದು, ಶೇಂಗಾ ಕೊಡುವುದು, ಶೆಂಗಾ ಆರಿಸುವುದು, ಹೆಚ್ಚಾಗಿ ಮಹಿಳೆಯರು ಹೀಗೆ ಹೊಲ ಹಸನುಗೊಳಿಸುವುದರಿಂದ ಹಿಡಿದು ಬೀಜ ಬಿತ್ತಿ ಬೆಳೆಯುವವರೆಗಿನ ಹಲವು ಪ್ರಕ್ರಿಯೆಗಳಲ್ಲಿ ಮಹಿಳೆ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ.

ಕೃಷಿಯಲ್ಲಿ ಇಷ್ಟೆಲ್ಲ ಕೆಲಸಕಾರ್ಯಗಳು ಮಹಿಳೆಯರಿಂದ ನಿರ್ವಹಿಸಲ್ಪಟ್ಟಾಗ್ಯೂ ನಮ್ಮ ಸಮಾಜದ ಒಳಗಡೆ ಕೃಷಿ ಎನ್ನುವುದು ಒಂದು ಪುರುಷ ಪ್ರಧಾನವಾದ ಕಸುಬು ಎಂಬ ಮನೋಭಾವ ರೂಢಿಗತವಾಗಿಬಿಟ್ಟಿದೆ. ಅಂದರೆ ಕೃಷಿಯಲ್ಲಿ ಪ್ರಧಾನಪಾತ್ರ ಪುರುಷನದೇ ಹೊರತು ಮಹಿಳೆಯರದಲ್ಲ ಎನ್ನುವ ಧೋರಣೆ ಬೆಳೆದು ಬಂದಿದೆ. ಏಕೆಂದರೆ "ಗಂಡಸು ಹೊರಗೆ ದುಡಿತಾನೆ, ಹೆಂಗಸು ಒಳಗೆ ದುಡಿತಾಳೆ" ಎನ್ನುವ ಸಾಮಾನ್ಯ ಗ್ರಹಿಕೆ ಜನರಲ್ಲಿದೆ. ದುಡಿಮೆಯೆನ್ನುವುದು ಪುರುಷನಿಗೆ ಸಂಬಂಧಿಸಿದಂತೆ ಸಾಮಾಜಿಕವಾಗಿದ್ದರೆ ಮಹಿಳೆಯರಿಗೆ ಸಂಬಂಧಿಸಿದಂತೆ ಖಾಸಗಿಯಾದುದಾಗಿದೆ. ಅದು ಪುರುಷರಿಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿದ್ದರೆ ಮಹಿಳೆಯರಿಗೆ ಸಂಬಂಧಿಸಿದಂತೆ ಖಾಸಗಿಯಾದುದಾಗಿದೆ. ಪುರುಷರಿಗೆ ಸಂಬಂಧಿಸಿದಂತೆ ದುಡಿಮೆಯು ಮನೆಯ ಹೊರಗಿನ ನೆಲೆ ಹೊಂದಿದ್ದಾರೆ. ಮಹಿಳೆಯರಿಗೆ ಸಂಬಂಧಿಸಿದಂತೆ ಅದು ಮನೆಯ ಒಳಗಿನ ಚೌಕಟ್ಟಿನ ಸೀಮಿತಗೊಂಡಿದೆ.'"[ಚ] ಹಾಗಾಗಿ ಹೆಚ್ಚಾಗಿ ಮನೆಯ ಒಳಗಿನ ಎಲ್ಲಾ ಕೆಲಸ ಕಾರ್ಯಗಳು ಹೆಂಗಸರಿಂದ ಮತ್ತು ಮನೆಯ ಹೊರಗಿನ ಕೆಲಸ ಕಾರ್ಯಗಳು ಗಂಡಂಸರಿಂದ ಹಿಂದೆ ನಿರ್ವಹಿಸಲ್ಪಡುತ್ತಿದ್ದವು. ಅಂತೆಯೇ ಕೃಷಿಯಲ್ಲಿನ ಮಹಿಳೆ ಪಾಲುದಾರಿಕೆಯನ್ನು ಕಡೆಗಣಿಸುವಂತಿಲ್ಲ ವಾದರೂ ಕೃಷಿಯು ಮನೆಯ ಹೊರಗಿನ ಕೆಲಸವಾಗಿದ್ದರಿಂದ ವ್ಯವಸ್ಥೆ ಇದು ಪುರುಷನಿಗೆ ಸಂಬಂಧಿಸಿದ ಕೆಲಸವೆಂದೇ ಪರಿಭಾವಿಸಿಕೊಂಡು ಬಂದಿದೆ. ಹಾಗಾಗಿ ಕೃಷಿಯಲ್ಲಿ ಮಹಿಳೆಯರು ಎಷ್ಟೇ ಕ್ರಿಯಾಶೀಲಳಾಗಿ ಪಾಲ್ಗೊಂಡರೂ ಅವಳ ಭಾಗವಹಿಸುವಿಕೆಯನ್ನು ಸಮಾಜ ಗೌಣವಾಗಿಯೇ ಕಾಣುತ್ತದೆ.

ಹೀಗೆ ಮನೆಯ ಒಳಗಿನ ಮತ್ತು ಕೃಷಿ ಕಾರ್ಯಗಳು ಎಂದು ವಿಂಗಡಿಸಿ ಅವುಗಳಲ್ಲಿ ಯಾವ ಕೆಲಸವನ್ನು ಯಾರು ಮಾಡಬೇಕು ಎಂದು ನಿರ್ಧರಿಸಿರುವುದರ ಹಿನ್ನೆಲೆಯಲ್ಲಿ ಒಂದು ಬಗೆಯ ಕುತಂತ್ರವಿದೆ. ಮತ್ತು ಈ ವಿಭಜನೆಯು ಪುರುಷನಿಷ್ಠ ಹಿತಾಸಕ್ತಿಯನ್ನು ಒಳಗೊಂಡಿರುವಂತಹದ್ದಾಗಿದೆ. ಯಾವ ಕೆಲಸಗಳಲ್ಲಿ ನಿರಂತರತೆ, ಏಕತಾನತೆ ಇರುತ್ತದೆಯೋ ಅಂತಹ ಕೆಲಸಗಳನ್ನು ಮಹಿಳೆಯರಿಗೆ ವಹಿಸಲಾಗಿದೆ. ಅಧಿಕ ಶ್ರಮ ಹಾಕಿದರೂ ಕಡಿಮೆ ಅವಧಿಯಲ್ಲಿ ಮಾಡಿ ಮುಗಿಸಲ್ಪಡುವ ಹೆಚ್ಚು ಅವಧಿಯ ಬಿಡುವು ಸಿಗುವ ಕೆಲಸಗಳನ್ನು ಪುರುಷ ವಹಿಸಿಕೊಂಡಿರುವುದು ಕಂಡುಬರುತ್ತದೆ. ಮನೆಯ ಒಳಗಿನ ಕೌಟುಂಬಿಕ ಕೆಲಸ ಕಾರ್ಯಗಳಲ್ಲಿ ನಿರಂತರವಾಗಿ ಮಾಡಲೇಬೇಕಾದ ಕೆಲಸಗಳಾಗಿರುತ್ತವೆ. ಇವುಗಳನ್ನು ಮಾಡದಿದ್ದರೆ ನಡೆಯುತ್ತದೆ ಎನ್ನುವಂತಿಲ್ಲ. ಅಲ್ಲದೆ ಇಲ್ಲಿ ಹೆಚ್ಚು ಸಮಯಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದಲೇ ಮನೆಯ ಒಳಗಿನ ಕೆಲಸಗಳನ್ನೆಲ್ಲ ಮಹಿಳೆಗೆ ವಹಿಸಿ ಪುರುಷ ಜಾರಿಕೊಂಡಿರುವ ಜಾಣ್ಮೆಯೂ ಇದರಿಂದ ತಿಳಿದುಬರುತ್ತದೆ. ಮನೆಯ ಹೊರಗಿನ ಕೆಲಸ ಕಾರ್ಯಗಳಲ್ಲಿಯಾದರೂ ಕೂಡ ಪುರುಷರು ಮುಖ್ಯ ಕೆಲಸದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಕೊಂಡಿದ್ದಾರೆಯೇ ಹೊರತು ದೈಹಿಕವಾಗಿ ಶ್ರಮ ವ್ಯಯಮಾಡಿ ಹೆಚ್ಚು ಕಷ್ಟಪಡಬೇಕಾದ ಕೆಲಸಗಳಲ್ಲಿಲ್ಲ. ಮನೆಯ ಹೊರಗೂ ಕೂಡ ಈ ತರದ ದೈಹಿಕ ಶ್ರಮದಾಯಕ ಕೆಲಸಗಳಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕವಾಗಿದ್ದು ಮುಖ್ಯ ಕೆಲಸಗಳಲ್ಲಿ ಮಹಿಳೆಯರ ಪಾಲುದಾರಿಕೆ ಕಡಿಮೆ ಇರುವುದು ಕಂಡುಬರುತ್ತದೆ ಎಂಬುದನ್ನು ಈ ಕೋಷ್ಟಕ ಸ್ಪಷ್ಟಪಡಿಸುತ್ತದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಪ್ರದೇಶವಾರು ಮುಖ್ಯ ಮತ್ತು ಅತಿ ಸಣ್ಣ ಕೆಲಸಗಾರರ ಹಂಚಿಕೆ.

ಕೋಷ್ಟಕ ೧

ವರ್ಷ	ಪ್ರದೇಶ	ಮುಖ್ಯ ಕೆಲಸಗಾರರು		ಅತಿಸಣ್ಣ ಕೆಲಸಗಾರರು	
		ಪುರುಷ	ಮಹಿಳೆ	ಪುರುಷ	ಮಹಿಳೆ
೨೦೦೧	ಬಾಂಬೆ ಕರ್ನಾಟಕ	೯೧.೩೯	೬೧.೬೭	೮.೬೧	೩೬.೩೩
	ಹೈದರಾಬಾದ ಕರ್ನಾಟಕ	೮೮.೭೬	೬೦.೭೩	೧೧.೨೪	೩೯.೨೭
	ದಕ್ಷಿಣ ಕರ್ನಾಟಕ	೯೧.೮೨	೬೯.೪೮	೮.೧೮	೩೦.೫೨
	ಒಟ್ಟು ಕರ್ನಾಟಕ	೯೧.೨೧	೬೫.೮೮	೮.೭೯	೩೪.೧೨
೧೯೯೯	ಬಾಂಬೆ ಕರ್ನಾಟಕ	೯೮.೯೩	೭೪.೧೦	೧.೦೭	೨೫.೯೦
	ಹೈದರಾಬಾದ್ ಕರ್ನಾಟಕ	೯೯.೩೯	೮೫.೯೩	೦.೬೧	೧೪.೦೭
	ದಕ್ಷಿಣ ಕರ್ನಾಟಕ	೯೮.೮೬	೭೫.೫೨	೧.೧೪	೨೪.೪೮
	ಒಟ್ಟು ಕರ್ನಾಟಕ	೯೮.೯೬	೭೭.೩೫	೧.೦೪	೨೨.೬೫

(ಕೃಪೆ: ಕರ್ನಾಟಕ ಮಾನವ ಅಭಿವೃದ್ಧಿ ವರದಿ)

ಈ ಕೋಷ್ಟಕವನ್ನು ಗಮನಿಸಿದಾಗ, ಕರ್ನಾಟಕದ ವಿವಿಧ ಪ್ರಾದೇಶಿಕ ವಲಯಗಳಾದ ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಲ್ಲಿನ ಮುಖ್ಯ ಕೆಲಸಗಾರರಲ್ಲಿ ಪುರುಷರ ಸಂಖ್ಯೆ ಅಧಿಕವಾಗಿದ್ದು ಮಹಿಳೆಯರ ಪ್ರಮಾಣ ಕಡಿಮೆ ಇದೆ. ಆದರೆ ಈ ಪ್ರದೇಶಗಳಲ್ಲಿನ ಅತಿಸಣ್ಣ ಕೆಲಸಗಾರರ ಸಂಖ್ಯೆಯನ್ನು ಗಮನಿಸಿದಾಗ ಅಲ್ಲಿ ಮಹಿಳೆಯರ ಸಂಖ್ಯೆ ಅಧಿಕವಾಗಿದ್ದು ಪುರುಷರ ಸಂಖ್ಯೆ ಅತ್ಯಲ್ಪವಾಗಿರುವುದು ಕಂಡುಬರುತ್ತದೆ. ಇದರಿಂದ ಮುಖ್ಯ ಕೆಲಸವೆಂದು ತಿಳಿಯಲಾದ ಸಮಾಜದ ಉನ್ನತಿ ಮತ್ತು ಪ್ರತಿಷ್ಠಿತ ಹುದ್ದೆಗಳಿಗೆ ತೊಡಗುವಂತಹ ಕೌಶಲ್ಯ ಮತ್ತು ಅವಕಾಶ ಪುರುಷರಿಗೆ ಲಭ್ಯವಾದಂತೆ ಮಹಿಳೆಯರಿಗೆ ಲಭ್ಯವಾಗಿಲ್ಲ ಎನ್ನುವ ಅಂಶ ಸ್ಪಷ್ಟವಾಗುತ್ತದೆ. ಅಂದರೆ ಸಮಾಜದಲ್ಲಿ ಮಹಿಳೆಯರು ಮುಖ್ಯ ಕೆಲಸಗಳಿಂದ ವಂಚಿತರಾಗಿದ್ದರೆಂದು ಹೇಳಬಹುದು. ಒಟ್ಟಿನಲ್ಲಿ ಮನೆಯ ಹೊರಗಿನ ಕೆಲಸಗಳಲ್ಲಿನ ಹಂಚಿಕೆಯಲ್ಲೂ ಪುರುಷ ಸಮಾಜದಲ್ಲಿ ಶ್ರೇಷ್ಠವೆನಿಸುವ ಮತ್ತು ಲಾಭದಾಯಿಕವಾದ ಹುದ್ದೆಗಳಲ್ಲಿ ಅಧಿಕವಾಗಿ ತೊಡಗಿಕೊಂಡಿರುವುದು ಕಂಡುಬರುತ್ತದೆ. ಈ ರೀತಿಯ ಕೆಲಸಗಳ ಹಂಚಿಕೆಗೆ ಅಂತಿಮವಾಗಿ ಈ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣವಾಗಿದೆ.

ಅಂತೆಯೇ ಕೃಷಿಯಲ್ಲಿನ ಕೆಲಸಗಳ ನಿರ್ವಹಣೆಯ ಸಂದರ್ಭದಲ್ಲಿ ಈ ಬಗೆಯ ಪುರುಷ ಹಿತಾಸಕ್ತಿ ಕೆಲಸ ಮಾಡಿರುವ ಸಾಧ್ಯತೆ ಇದೆ. ನೇಗಿಲು ಕಟ್ಟುವ, ಉಳುಮೆ ಮಾಡುವಂತಹ ಪ್ರಮುಖ ಕೆಲಸಗಳು ಪುರುಷನಿಂದ ಮಾಡಲ್ಪಡುವುದರಿಂದ ಕೃಷಿಯಲ್ಲಿ ಪುರುಷ ಪ್ರಧಾನ ಪಾತ್ರವಹಿಸುತ್ತಾನೆ ಎಂಬುದು ಮೇಲುನೋಟಕ್ಕೆ ನಿಜವೆನಿಸಿದ್ದರೂ ಮಹಿಳೆ ಈ ಕೆಲಸಗಳಲ್ಲಿ ಏಕೆ ಭಾಗಿಯಾಗುವುದಿಲ್ಲ ಎಂಬುದನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಮನೆಯ ಒಳಗಿನ ಕೆಲಸ ಕಾರ್ಯಗಳಿಗೆ ಮಹಿಳೆಯನ್ನು ಅಣಿಮಾಡಿದ ಕಾರಣಕ್ಕಾಗಿಯೇ ಕೃಷಿಯಲ್ಲಿ ಮಹಿಳೆಗೆ ಆ ಬಗೆಯ ಕೆಲಸಗಳಲ್ಲಿ ತೊಡಗಿಕೊಳ್ಳಲಿಕ್ಕೆ ಆಗದೇ ಹೋಗಿರಬಹುದು. ಮಹಿಳೆ ಮನೆಯ ಒಳಗಿನ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಇನ್ನುಳಿದ ಸಮಯವನ್ನು ಅವಳು ಹೊಲದಲ್ಲಿ ಕಳೆಯುವುದರಿಂದ ಅಥವಾ ಮನೆಯ ಒಳಗೂ ಹೊರಗೂ ಮಹಿಳೆ ಕೆಲಸ ಮಾಡಬೇಕಾಗಿದ್ದರಿಂದ ಮಹಿಳೆಯರಿಗೆ ಕೃಷಿಯ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸಲಿಕ್ಕೆ ಸಾಧ್ಯವಾಗದೇ ಹೋಗಿರಬಹುದಾದ ಸಾಧ್ಯತೆ ಇದೆ. ಇದಲ್ಲದೆ ನಿಸರ್ಗದತ್ತವಾಗಿಯೇ ಮಹಿಳೆಯ ದೈಹಿಕ ರಚನೆ ಪುರುಷನ ದೈಹಿಕ ರಚನೆಗಿಂತ ದುರ್ಬಲವಾಗಿರುವುದು ಕೂಡಾ ಕೃಷಿಯಲ್ಲಿನ ಕೆಲಸಗಳಿಂದ ಮಹಿಳೆ ದೂರ ಉಳಿಯುವುದಕ್ಕೆ ಕಾರಣವಾಗಿದೆ. ಆದರೆ ಕೃಷಿಯಲ್ಲಿ ಪುರುಷನಿಂದ ನಿರ್ವಹಿಸಲ್ಪಡುತ್ತಿರುವ ಅಥವಾ ಪುರುಷ ಮಾಡಬಹುದಾದ ಕೆಲಸಗಳನ್ನು ಮಹಿಳೆಯರಿಗೆ ನಿರ್ವಹಿಸುವುದಕ್ಕೆ ಆಗದು ಎಂದು ಹೇಳಲಿಕ್ಕಾಗದು. ಏಕೆಂದರೆ ನಮ್ಮ ನಡುವೆ ಕೃಷಿಯ ಎಲ್ಲ ಕೆಲಸಗಳನ್ನು ಪುರುಷ ಸಹಾಯವಿಲ್ಲದೆ ನಿರ್ವಹಿಸಿಕೊಂಡು ಹೋಗುವ ಮಹಿಳೆಯರೂ ಸಿಗುತ್ತಾರೆ. ಕೃಷಿಯ ಎಲ್ಲಾ ಕೆಲಸಕಾರ್ಯಗಳನ್ನು ನಿಭಾಯಿಸಬಲ್ಲಳು.

ಕೃಷಿ ಕೂಲಿ ಮಹಿಳೆಯರಾಗಿದ್ದರೆ ಅವರಿಗೆ ದಿನಕಿಷ್ಟು ಎಂದು ನಿರ್ದಿಷ್ಟಪಡಿಸಿದ ಕೂಲಿ ದೊರೆಯುತ್ತದೆ. ಆದರೆ ಸಣ್ಣ ಮತ್ತು ಮಧ್ಯಮ ಹಿಡುವಳಿ ಹೊಂದಿದ ಕೃಷಿ ಕುಟುಂಬಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಪಾಡು ತುಂಬಾ ಶೋಚನೀಯವಾದದ್ದು. ಅವರು ಮನೆಯ ಒಳಗೂ ಮತ್ತು ಹೊರಗೂ ಅಂದರೆ ಹೊಲಗದ್ದೆಗಳಲ್ಲೂ ಕೆಲಸ ಮಾಡುತ್ತಾರೆ. ಈ ರೀತಿ ದ್ವಿಮುಖ ಕೆಲಸಕಾರ್ಯ ಮಾಡಿದಾಗಲೂ ಅವರಿಗೆ ಸಿಗುವ ಪ್ರತಿಫಲಗಳೇನು, ಪ್ರತಿ ಬೆಳೆಯ ಸಂದರ್ಭದಲ್ಲಿ ಬೀಜ ಬಿತ್ತುವುದರಿಂದ ಬೆಳೆ ಬರುವವರೆಗಿನ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲುದಾರಿಕೆ ಒಂದಲ್ಲಾ ಒಂದು ರೀತಿಯಲ್ಲಿ ಇರುವುದು ಕಂಡುಬರುತ್ತದೆ. ಆದರೆ ಕೃಷಿಯ ದುಡಿಮೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಹಿಳೆ ಕೃಷಿ ಉತ್ಪನ್ನ ಕೈಗೆ ಬಂದ ನಂತರದ ಹಂತದಲ್ಲಿ ಎಲ್ಲೂ ಮಹಿಳೆಯ ಪಾಲುದಾರಿಕೆ ಕಂಡುಬರುವುದಿಲ್ಲ. ಬಂದ ಫಸಲನ್ನು ಮಾರಲು ನಿರ್ಧರಿಸುವಲ್ಲಾಗಲಿ, ಮಾರಿದ ಉತ್ಪನ್ನದಿಂದ ಬಂದ ಹಣವನ್ನು ಖರ್ಚು ಮಾಡುವುದರಲ್ಲಾಗಲಿ ಮಹಿಳೆಯ ಪಾತ್ರವೇನು ಕಂಡುಬರುವುದಿಲ್ಲ. ಬಂದ ಉತ್ಪನ್ನ ಮಾರುವ, ಮಾರಿದ ಉತ್ಪನ್ನದಿಂದ ಬಂದ ಗಳಿಕೆಯನ್ನು ಖರ್ಚು ಮಾಡುವುದು ಕುಟುಂಬದಲ್ಲಿ ಪುರುಷನ ಅಭಿಲಾಷೆಯ ಮೇರೆಗೆ ನಡೆಯುತ್ತಿರುತ್ತದೆಯೇ ಹೊರತು ಈ ವಿಷಯದಲ್ಲಿ ಮಹಿಳೆಗೆ ಯಾವ ರೀತಿಯ ಸ್ವಾಯತ್ತತೆಗಳಿರುವುದಿಲ್ಲ.

ಎಷ್ಟೆಲ್ಲಾ ಶ್ರಮ ಹಾಕಿ ದುಡಿದರೂ ಅವಳ ದುಡಿಮೆ ಕುಟುಂಬಕ್ಕೆ ಮಾಡುವ ಸೇವೆಯಾಗಿಯೇ ಅದು ಅವಳ ಕರ್ತವ್ಯವಾಗಿಯೇ ಆಗಿ ಪರಿಗಣಿಸಲ್ಪಡುತ್ತದೆ. ಇದು ಎಲ್ಲ ಸಣ್ಣ ಮತ್ತು ಮಧ್ಯಮ ಭೂ ಹಿಡುವಳಿ ಹೊಂದಿದ ಕೃಷಿ ಕೂಲಿ ಮಹಿಳೆಯರ ಪಾಡು. ಈ ನಿರಂತರ ದುಡಿಮೆಯಿಂದ ಅವಳಿಗಾಗುವ ಲಾಭವಿಷ್ಟೇ, ಮೂರುಹೊತ್ತು ತಿನ್ನುವುದಕ್ಕೊಂದಿಷ್ಟು ಊಟ, ವರ್ಷಕ್ಕೊಂದು ಜೊತೆ ಬಟ್ಟೆ, ಅದು ಕೂಡ ನಿಶ್ಚಿತವಲ್ಲ. ಇನ್ನು ಕೃಷಿಯಲ್ಲಿ ದುಡಿಯುವ ಕೂಲಿ ಮಹಿಳೆಯದಾದರೆ ಅವರು ತಾವು ದುಡಿದ ದುಡಿಮೆಗೆ ಇಂತಿಷ್ಟು ಎಂದು ಕೂಲಿ ತೆಗೆದುಕೊಳ್ಳುತ್ತಾರೆ. ಆದರೂ ಅದು ಅತ್ಯಂತ ಕಡಿಮೆ ಪ್ರಮಾಣದ ಕೂಲಿಯಾಗಿರುತ್ತದೆ. ಈ ಕೂಲಿಯಲ್ಲಿ ಕೂಡ ಲಿಂಗಾಧಾರಿತ ತಾರತಮ್ಯಗಳಿರುವುದು ಕಂಡುಬರುತ್ತದೆ. ಇದು ಒಂದು ಹಳ್ಳಿ, ಊರು, ಜಿಲ್ಲೆಯಲ್ಲಿ ಕಂಡುಬರುವ ಸಮಸ್ಯೆ ಮಾತ್ರವಲ್ಲ, ಇಡೀ ರಾಜ್ಯ ಹಾಗೂ ದೇಶದಲ್ಲಿಯೇ ಪುರುಷ ಮತ್ತು ಮಹಿಳಾ ಕೃಷಿ ಕೂಲಿಯ ನಡುವೆ ತಾರತಮ್ಯಗಳಿರುವುದು ಕಂಡುಬರುತ್ತದೆ.

ಕೋಷ್ಟಕ ೨

ಕರ್ನಾಟಕದಲ್ಲಿ ಜಿಲ್ಲಾವಾರು ಗ್ರಾಮೀಣ ಕೃಷಿ ಕಾರ್ಮಿಕರ ಕೂಲಿಗಳು

ರೂ.ಗಳಲ್ಲಿ

ಪ್ರದೇಶ	ಜಿಲ್ಲೆ	ಗ್ರಾಮೀಣ ಕಾರ್ಮಿಕರ ಕೃಷಿ ಕೂಲಿಗಳು							
		೧೯೯೧				೨೦೦೧			
		ಪುರುಷ	ಮಹಿಳೆ	ಪು.ಮ. ವ್ಯತ್ಯಾಸ	ಶೇಕಡಾವಾರು ವ್ಯತ್ಯಾಸ	ಪುರುಷ	ಮಹಿಳೆ	ಪು.ಮ. ವ್ಯತ್ಯಾಸ	ಶೇಕಡಾವಾರು ವ್ಯತ್ಯಾಸ
	ಬೆಂಗಳೂರು ಗ್ರಾ	೧೯.೩೨	೧೬.೨೬	೩.೦೬	೧೮.೮೨	೬೨.೮೫	೩೭.೨೫	೨೫.೬	೬೮.೭೨
	ಬೆಂಗಳೂರು ನ.	೨೧.೮೦	೧೮.೦೦	೩.೮೦	೨೧.೧೧	೫೭.೪೫	೪೪.೩೧	೧೩.೧೪	೨೯.೬೫
	ಚಿತ್ರದುರ್ಗ	೧೭.೨೨	೧೨.೫೬	೪.೬೬	೩೭.೧೦	೩೯.೨೬	೨೭.೪೭	೧೧.೭೯	೪೨.೯೨
	ದಾವಣಗೆರೆ	೧೭.೨೨	೧೨.೫೬	೪.೬೬	೩೭.೧೦	೪೨.೮೪	೨೯.೮೮	೧೨.೯೬	೪೩.೩೭
	ಕೋಲಾರ	೨೪.೩೨	೧೮.೨೫	೬.೦೭	೩೩.೨೬	೫೩.೭೫	೩೫.೮೩	೧೭.೯೨	೫೦.೦೧
	ಶಿವಮೊಗ್ಗ	೧೫.೦೧	೧೪.೦೫	೦.೯೬	೬.೮೩	೫೪.೦೬	೪೨.೯೦	೧೧.೧೬	೨೬.೦೧
	ತುಮಕೂರು	೧೫.೨೭	೧೩.೧೨	೨.೧೫	೧೬.೩೯	೫೧.೪೮	೩೦.೭೪	೨೦.೭೪	೬೭.೪೭
	ತುಮಕೂರು	೧೫.೨೭	೧೩.೧೨	೨.೧೫	೧೬.೩೯	೫೧.೪೮	೩೦.೭೪	೨೦.೭೪	೬೭.೪೭
ದ.ಕರ್ನಾಟಕ	ಚಾಮರಾಜನಗರ	೧೯.೪೦	೧೩.೩೫	೫.೯೫	೪೪.೨೪	೫೪.೨೮	೨೯.೮೩	೨೪.೪೫	೮೧.೯೬
	ಚಿಕ್ಕಮಗಳೂರು	೨೧.೮೮	೧೬.೯೭	೪.೯೧	೨೮.೯೩	೫೫.೬೯	೪೨.೩೧	೧೩.೩೮	೩೧.೬೨
	ದಕ್ಷಿಣ ಕನ್ನಡ	೨೬.೭೭	೧೬.೭೨	೧೦.೦೫	೬೦.೧೧	೮೦.೦೦	೫೫.೦೦	೨೫.೦೦	೨೫.೪೫
	ಹಾಸನ	೧೪.೮೨	೧೩.೦೪	೧.೭೮	೧೩.೬೫	೩೭.೩೫	೨೬.೬೪	೧೦.೭೧	೪೦.೨೦
	ಕೊಡಗು	೨೭.೨೭	೨೫.೨೫	೨.೦೨	೮.೦೦	೬೦.೦೦	೪೬.೬೭	೧೩.೩೩	೨೮.೫೬
	ಮಂಡ್ಯ	೨೫.೯೨	೧೬.೯೭	೮.೯೫	೫೨.೭೪	೬೧.೦೭	೩೫.೪೮	೨೫.೫೯	೭೨.೧೩
	ಮೈಸೂರು	೧೯.೪೦	೧೩.೪೫	೫.೯೫	೪೪.೨೪	೫೬.೭೫	೩೦.೮೭	೨೫.೮೮	೮೩.೮೪
	ಉಡುಪಿ	೨೬.೭೭	೧೬.೭೨	೧೦.೦೫	೬೦.೧೧	೭೦.೦೦	೪೪.೩೩	೨೫.೬೭	೫೭.೯೧
	ಬಾಗಲಕೋಟೆ	೧೬.೯೯	೧೧.೦೧	೫.೫೯	೫೪.೩೧	೪೮.೨೭	೨೬.೫೭	೨೧.೭೦	೮೧.೬೭
	ಬೆಳಗಾವಿ	೧೬.೯೩	೧೧.೯೨	೫.೦೧	೪೨.೦೩	೪೬.೭೪	೩೧.೫೯	೧೫.೧೫	೪೭.೯೭
	ಬಿಜಾಪುರ	೧೬.೯೯	೧೧.೦೧	೫.೯೮	೫೪.೩೧	೬೮.೦೫	೪೪.೨೦	೨೩.೮೫	೫೩.೯೬
ಬಾಂಬೆ	ಧಾರವಾಡ	೧೦.೨೫	೭.೬೮	೨.೫೭	೩೩.೪೬	೫೨.೯೬	೩೫.೪೯	೧೭.೪೭	೪೯.೨೩
ಕರ್ನಾಟಕ	ಗದಗ	೧೦.೨೫	೭.೬೮	೨.೫೭	೩೩.೪೬	೩೯.೯೫	೩೧.೯೩	೮.೦೨	೨೫.೧೨
	ಹಾವೇರಿ	೧೦.೨೫	೭.೬೮	೨.೫೭	೩೩.೪೬	೪೨.೯೮	೩೭.೩೫	೫.೬೩	೧೫.೦೭
	ಉತ್ತರ ಕನ್ನಡ	೨೧.೩೭	೧೬.೧೫	೫.೨೨	೩೨.೩೨	೬೩.೬೧	೪೭.೯೨	೧೫.೬೯	೩೨.೭೪
	ಬಳ್ಳಾರಿ	೧೨.೯೧	೧೦.೬೫	೨.೨೬	೨೧.೨೨	೪೧.೮೨	೨೮.೫೬	೧೩.೨೬	೪೬.೪೩
ಹೈ.	ಬೀದರ್	೧೭.೩೦	೧೪.೮೩	೨.೪೭	೧೬.೬೬	೬೧.೬೮	೨೭.೦೫	೩೪.೬೩	೧೨೮.೦೨
ಕರ್ನಾಟಕ	ಗುಲ್ಬರ್ಗಾ	೧೯.೫೧	೧೨.೯೬	೬.೫೫	೫೦.೫೪	೫೭.೬೨	೨೬.೧೫	೩೧.೪೭	೧೨೦.೩೪
	ಕೊಪ್ಪಳ	೧೧.೯೫	೮.೩೨	೩.೬೩	೪೩.೬೩	೫೨.೫೭	೨೩.೮೧	೨೮.೭೬	೧೨೦.೭೯
	ರಾಯಚೂರು	೧೧.೯೫	೮.೩೨	೩.೬೩	೪೩.೬೩	೪೬.೭೯	೨೮.೯೩	೧೭.೮೬	೬೧.೭೪
ಕರ್ನಾಟಕ		೧೮.೧೧	೧೩.೫೪	೪.೫೭	೩೩.೭೫	೫೪.೦೭	೩೫.೧೫	೧೮.೯೨	೫೩.೮೩

ಟಿಪ್ಪಣಿ: ಶೇಕಡವಾರು ವ್ಯತ್ಯಾಸದ ಅಂಕಣವು ಆ ಜಿಲ್ಲೆಯಲ್ಲಿ ಮಹಿಳೆಯರ ಕೂಲಿಗಳ ಶೇ.ಪ್ರಮಾಣವಾಗಿ ಪುರುಷರು ಮತ್ತು ಮಹಿಳೆಯರ ಕೂಲಿಗಳ ನಡುವಣ ವ್ಯತ್ಯಾಸವನ್ನು ಸೂಚಿಸುತ್ತದೆ.

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ

ಕೃಪೆ: ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಕೃಷಿ ಕೂಲಿಕಾರರಲ್ಲಿ ಲಿಂಗಾಧಾರಿತ ತಾರತಮ್ಯ ಇರುವ ಅಂಶ ಸ್ಪಷ್ಟವಾಗುತ್ತದೆ. ಪ್ರತಿ ಜಿಲ್ಲೆಯಲ್ಲೂ ಮಹಿಳಾ ಕೂಲಿಕಾರ್ಮಿಕರು ಕಡಿಮೆ ಕೂಲಿಗೆ ದುಡಿಯುತ್ತಿದ್ದು ಪುರುಷ ಕೂಲಿಗೆ ಹೋಲಿಸಿದರೆ ಮಹಿಳೆಯ ಕೂಲಿಯ ದರ ಪುರುಷರ ಕೂಲಿಯ ದರಕ್ಕಿಂತ ಕಡಿಮೆ ಇರುವುದು ನಿಜವಿರುತ್ತದೆ.

ಅಂತೆಯೇ ಗುಲಬರ್ಗಾ ಜಿಲ್ಲೆಯಲ್ಲಿ ೧೯೯೧ರ ಅವಧಿಯಲ್ಲಿ ಪುರುಷ ಕೃಷಿ ಕೂಲಿಯ ದರ ಸರಾಸರಿ ೧೯.೫೧ರೂಗಳಿದ್ದು, ಮಹಿಳೆಯರ ಕೃಷಿ ಕೂಲಿಯ ದರ ೧೨.೯೬ರೂ ಗಳಷ್ಟಿದೆ. ಇಲ್ಲಿ ಪುರುಷ ಮತ್ತು ಮಹಿಳೆಯ ಕೂಲ ದರದಲ್ಲಿ ೬.೫೫ರೂಗಳಷ್ಟು ಅಂದರೆ ಪ್ರತಿಶತ ೫೦.೫೪ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದೇ ರೀತಿ ರಾಯಚೂರು ಜಿಲ್ಲೆಯಲ್ಲಿ ಪುರುಷ ಕೃಷಿ ಕೂಲಿಯದರ ಸರಾಸರಿ ೧೧.೯೫ರೂಗಳಿದ್ದು, ಮಹಿಳೆಯರ ಕೃಷಿ ಕೂಲಿಯ ದರ ೮.೩೨ರೂ ಗಳಷ್ಟಿದೆ. ಇಲ್ಲಿ ಪುರುಷ ಮತ್ತು ಮಹಿಳೆಯ ಕೂಲಿ ದರದಲ್ಲಿ ೩.೬೩ರೂಗಳಷ್ಟು ಅಂದರೆ ಪ್ರತಿಶತ ೪೩.೬೩ರಷ್ಟು ವ್ಯತ್ಯಸವಿರುವುದು ಕಂಡುಬರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ಪುರುಷ ಕೃಷಿ ಕೂಲಿಯ ದರ ಸರಾಸರಿ ೧೧.೯೫ರೂಗಳಿದ್ದು ಮಹಿಳೆಯರ ಕೃಷಿ ಕೂಲಿಯ ದರ ೮.೩೨ರೂಗಳಷ್ಟಿದೆ. ಇಲ್ಲಿ ಪುರುಷ ಮತ್ತು ಮಹಿಳೆಯ ಕೂಲಿ ದರದಲ್ಲಿ ೩.೬೩ರೂಗಳಷ್ಟು ಅಂದರೆ ಪ್ರತಿಶತ ೪೩.೬೩ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ.

೨೦೦೧ರ ಅವಧಿಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಪುರುಷ ಕೃಷಿ ಕೂಲಿಯದರ ೫೭.೬೨ ರೂಗಳಿದ್ದು, ಮಹಿಳೆಯರ ಕೃಷಿ ಕೂಲಿಯದರ ೨೬.೧೫ರೂಗಳಷ್ಟಿದೆ. ಇಲ್ಲಿ ಸ್ತ್ರೀ-ಪುರುಷರ ಕೂಲಿ ದರದಲ್ಲಿ ೩೧.೪೭ರಷ್ಟು ಅಂದರೆ ಪ್ರತಿಶತ ೧೨೦.೩೪ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯಲ್ಲಿ ಪುರುಷ ಕೃಷಿ ಕೂಲಿಯ ದರ ಸರಾಸರಿ ೪೬.೭೯ರೂಗಳಿದ್ದು, ಮಹಿಳೆಯರ ಕೃಷಿ ಕೂಲಿ ದರ ೨೮.೯೩ರೂಗಳಷ್ಟಿದೆ. ಇಲ್ಲಿ ಪುರುಷ ಮತ್ತು ಮಹಿಳೆಯ ಕೂಲಿ ದರದಲ್ಲಿ ೧೭.೮೬ರಷ್ಟು ಅಂದರೆ ಪ್ರತಿಶತ ೬೧.೭೪ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿ ಪುರುಷ ಕೃಷಿ ಕೂಲಿಯ ದರ ೫೨.೫೭ರೂಗಳಿದ್ದು, ಮಹಿಳೆಯರ ಕೂಲಿದರ ೨೩.೮೧ರೂ ಗಳಿಷ್ಟಿದೆ. ಸ್ತ್ರೀ ಪುರುಷರ ಕೂಲಿ ದರದಲ್ಲಿ ೨೮.೭೬ರಷ್ಟು ಅಂದರೆ ಪ್ರತಿಶತ ೧೨೦.೭೯ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಆದರೆ ೧೯೯೧ರ ಅವಧಿಯಲ್ಲಿದ್ದ ಸ್ತ್ರೀ ಮತ್ತು ಪುರುಷರ ಕೃಷಿ ಕೂಲಿ ದರವು ೨೦೦೧ರಷ್ಟೊತ್ತಿಗೆ ಅಧಿಕವಾಗಿರುವುದು ಕಂಡುಕೊಂಡು ಬರುತ್ತದೆ. ಆದರೂ ಸ್ತ್ರೀ ಪುರುಷರ ಕೂಲಿಯ ನಡುವಿನ ಅಂತರ ಮಾತ್ರ ಹಾಗೇ ಉಳಿದುಕೊಂಡು ಬಂದಿದೆ.

ಸಮಾನ ಕೆಲಸವನ್ನು ಸಮಾನ ಅವಧಿಯಲ್ಲಿ ಮಾಡಿದರೂ ಪುರುಷ ಮಾಡಿದ ಕೆಲಸವನ್ನು ಶ್ರೇಷ್ಠ ಎಂತಲೂ ಮಹಿಳೆ ಮಾಡಿದ ಕೆಲಸವನ್ನು ಕನಿಷ್ಠ ಎಂತಲೂ ಭಾವಿಸಿರುವುದರಿಂದ

ಮಹಿಳೆಯರನ್ನು ಕಡಿಮೆ ಕೂಲಿಗೆ ದುಡಿಸಿಕೊಳ್ಳುವುದನ್ನು ಕೃಷಿಯಲ್ಲಿ ಕಾಣುತ್ತೇವೆ. ಕೃಷಿ ಕಾರ್ಯಗಳಲ್ಲಿ ಮಹಿಳೆಯರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎಲ್ಲ ಕೆಲಸಗಳಲ್ಲಿ ಭಾಗಿಗಳಾಗಿರುತ್ತಾರೆ. ಆದರೆ ಕೂಲಿಗಾಗಿ ದುಡಿಯುವ ಮಹಿಳೆಯರು ದುಡಿಮೆಗಾರರೆನಿಸಿದರೂ ಪುರುಷ ದುಡಿಮೆಗಾರರಿಗೆ ಸಮವಲ್ಲ ಎನ್ನುವಂತೆ ಅಸಮಾನ ಕೂಲಿಯನ್ನು ಪಡೆಯುತ್ತಿದ್ದಾರೆ. ಅಲ್ಲದೆ ಕೃಷಿ ಭೂಮಿಯನ್ನು ಹೊಂದಿರುವ ಕುಟುಂಬಗಳಲ್ಲಿ ಮಹಿಳೆಯು ತಮ್ಮ ಹೊಲಗದ್ದೆಗಳಲ್ಲಿ ಕೆಲಸ ಕಾರ್ಯವನ್ನು ನಿರ್ವಹಿಸುತ್ತಾರೆಯಾದರೂ ಅವರ ಕೆಲಸ ದುಡಿಮೆ ಎಂದೂ ಪರಿಗಣಿಸಲ್ಪಡದೆ ಇರುವುದರಿಂದ ಅವರು ಆರ್ಥಿಕವಾಗಿ ಇತರರ ಮೇಲೆ ಅವಲಂಬನೆ ಹೊಂದಿರಬೇಕಾಗುತ್ತದೆ. ಹೀಗೆ ಪುರುಷನಿಗೆ ನೆರವಾಗುವ ಯಾವ ಕಾರ್ಯವು ಮಹಿಳೆಯ ದುಡಿಮೆಯೆಂದು ಪರಿಗಣಿತವಾಗುತ್ತಿಲ್ಲ. ಕೌಟುಂಬಿಕ ಕೆಲಸ ಕಾರ್ಯಗಳಂತೆ, ಕೃಷಿಯಲ್ಲಿನ ದುಡಿಮೆಯೂ ಅಪಮೌಲ್ಯ ಆಗಿದೆ. "ಮಹಿಳೆಯ ದುಡಿಮೆಯು ಅಪಮೌಲ್ಯಕರಣ, ಅಮೌಲ್ಯ ಕರಣಗಳು ಸಮಾಜದಲ್ಲಿಯ ಆಕೆಯ ಸ್ಥಾನಮಾನಗಳು ಆಕೆಗಿರುವ ಅವಕಾಶಗಳು ಮತ್ತು ಲಿಂಗ ನಿರಪೇಕ್ಷ ನೀತಿಗಳ ಮೇಲೆ ಪರಿಣಾಮ ಬೀರುತ್ತದೆ."[೧೮] ಬಹುಪಾಲು ಸಮಾಜದಲ್ಲಿ ಮಹಿಳೆ ಪುರುಷನಿಗಿಂತ ದೀರ್ಘಕಾಲದ ಕೆಲಸ ಕಾರ್ಯಗಳನ್ನು ಮಾಡುತ್ತಾಳೆ. ಆದರೆ ಆಕೆಯು ಪಡೆಯುವ ದುಡಿಮೆಯ ಪ್ರತಿಫಲ ಮಾತ್ರ ಯಾವಾಗಲೂ ಪುರುಷನಿಗಿಂತಲೂ ಕಡಿಮೆಯಾಗಿರುತ್ತದೆ. ಒಟ್ಟು ದುಡಿಮೆಯಲ್ಲಿ ಮಹಿಳೆಯು ಅರ್ಧಕ್ಕಿಂತಲೂ ಅಧಿಕವಾಗಿ ಕೆಲಸದಲ್ಲಿ ಭಾಗವಹಿಸುತ್ತಾಳೆ. ಆದರೂ ವರಮಾನದಲ್ಲಿ ಪುರುಷನೇ ಸಿಂಹಪಾಲನ್ನು ಪಡೆದಿರುತ್ತಾನೆ. ಪುರುಷರ ದುಡಿಮೆಯು ಆರ್ಥಿಕತೆಗೆ ಕೊಡುಗೆಯಾಗಿ ಪರಿಣಮಿಸಿದರೆ ಮಹಿಳೆಯರ ದುಡಿಮೆಯು ಅಪಮೌಲ್ಯವಾಗಿಯೇ ಮುಂದುವರೆಯುತ್ತಿದೆ.

ಸಮುದಾಯದ ಕೃಷಿ ಕೂಲಿ ಮಹಿಳೆಯರನ್ನು ಪ್ರತ್ಯೇಕವಾಗಿ ಕ್ಷೇತ್ರಕಾರ್ಯದಲ್ಲಿ ಶ್ರೀಮತಿ ಮಲ್ಲಮ್ಮ ಅವರನ್ನು ಮಾತನಾಡಿಸಿದಾಗ "ಏನ್‌ಮಾಡೋದ್ರಿ ನಮ್ಮ ಬಾಳೇವೂ ಚೋಲೋ ಇಲ್ಲಾರ್ರಿ, ದಿನಾಲೂ ದುಡಿಲಿಲ್ಲಾಂದ್ರ ನಮ್ಮ ಜೀವನ ಅವತ್ತೆ ಮುಗಿತ್ರಿ, ನಮ್ಮ ಮನೆಯಲ್ಲಿ ಇಬ್ಬರು ಹಿರಿಯರು ಕುಂತ ಉಣ್ಣತ್ತಾರ್ರಿ ಮತ್ತ ನಮ್ಮ ಯಜಮಾನ್ರು ನಾವು ಎರಡು ಮಕ್ಕಳು ಸೇರಿಕೊಂಡು ಕೂಲಿನಾಲಿ ಮಾಡಿ ಜೀವನ ಸಾಗಿಸ್ತೀವ್ರಿ, ದೇವರ ನಮ್ಮ ಪಾಲಿಗೆ ಬಹಳ ಕಷ್ಟ ಕೊಟ್ಟು ಬಿಟ್ಟಾನ್ರಿ ಏನ್ ಮಾಡುವುದು ತೋಚ್ತಾಯಿಲ್ಲಾರ್ರಿ. ಯಾರ್‍ಯಾರಿಗೋ ಸಕಲ ಸಂಪತ್ತು ಕೊಟ್ಟಾನ್ರಿ ಆದ್ರ ನಮ್ಗೇ ಏನ್ ಕೊಟ್ಟಿಲ್ಲಾ ನಾವು ಏನ್ ಪಾಪ್ ಮಾಡಿದ್ದೆವೊ ಏನು ಹಿಂದಿನ ಜಲಮದಾಗ ನಮ್ಗ ಇರಾಕ್ ಅಂಗೈ ಅಗಲ ಊರಾಗಾ ಜಾಗ್ ಇಲ್ಲಾರ್ರಿ. ಇನ್ನೂ ಉಣ್ಣಾಕ್ ಮಾರುದ್ದಾ ಭೂಮಿಯಿಲ್ಲ, ಇಂಗ್ ನಮ್ಮ ಹಿರಿಯರು ಬಂದಾರ್ರಿ ನಾವು ಅವರಂಗೆ ದುಡಿದ ಜೀವನ ಮಾಡುತ್ತಿವ್ರಿ. ನನಗೆ ದಿನಕ್ಕ ೩೦ರೂಪಾಯಿ ಗೌಡರ್ ಕೂಲಿ ಕೊಡತ್ತಾರ್ರಿ, ಅವರ ಹೊಲದಲ್ಲಿ ಬ್ಯಾಡಗಿ ಮೆಣಸಿನಕಾಯಿ ಬಿಡಸ್ತನ್ರಿ. ನಮ್ಮ ಯಜಮಾನರ್ರಿ ಟ್ರ್ಯಾಕ್ಟರ್‌ರಿಗೆ ಹೋಗಿ ಉಸುಗು (ಮರಳು) ತುಂಬಾಲಾಕ್ ಹೋಗತ್ತಾನ್ರಿ ಅವ್ರರಿಗೂ ೫೦ ರೂಪಾಯಿ ಕೂಲಿ ಬರುತ್ತಾದರ್ರಿ ಇದರಲ್ಲಿ

ನನ್ನ ಕೂಲಿಯಿಂದ ಮನಿಗೆ ಬೇಕಾಗುವ ಅಡುಗೆ ಸಾಮಾನು, ವಾರದ ಸಂತೆ ಮಾಡಲಿಕ್ಕ ಅನುಕೂಲ ಆಗ್ತೈತ್ರಿ, ನಮ್ಮ ಯಜಮಾನ್ರ ಕೂಲಿಯಿಂದ ಹಿರಿಯರ ಜಡ್(ಕಾಯಿಲೆ) ತೋರಿಸಲ್ಲಿಕ್ಕ್ ಸಾಕಾಗತ್ರಿ ಮುಂದ ಬರೋ ಭಾರತ ಹುಣ್ಣಿಮೆಗೆ ಯಲ್ಲಮ್ಮ ಹರಿಕೆ ಒತ್ತ್ರೋಕೊಂಡಿನ್ರಿ ಅದನ್ನ ತಿರಿಸಲಿಕ್ಕೆ ಗೌಡರ ಹತ್ತಿರ ೧೦ ಸಾವಿರ ರೂಪಾಯಿ ಸಾಲ ಕೇಳಿವಿರ್ರಿ ಆದ್ರ ಅವುರು ನೋಡೋಣ ಅಂತ ಹೇಳ್ಯಾರ್ರಿ. ಏನ್ ಮಾಡೋದು ನಮ್ಮ ಕಷ್ಟ ಕೇಳೋರು ಇಲ್ಲಾರ್ರಿ. ಇನ್ನೂ ಏನ್ ಹೇಳಲ್ಲರ್ರಿ ಮ್ನ್ಯಾಗ್ ಹಿರಿಮಗಳು ದೊಡ್ಡಕ್ಕಾಗಿ (ಋತುಮತಿ) ಕುಂತಾಳರ್ರಿ ಅಕೀನ್ ಖರ್ಚು ಬೇರೆ ಮೈಮೇಲೆ ಬಿದ್ದೈತ್ತಿ ಹಿಂಗಾ ನಮ್ಮ ಬಾಳೇವೂ ಮುಂದುವರೆದೈತ್ರಿ ದೇವರು ನಮ್ಮ ಪಾಲಿಗೆ ತಿರುಗಿ ನೋಡುತ್ತಿಲ್ರಿ ಎಂದು ತುಂಬಾ ಭಾವುಕಳಾಗಿ ಕಣ್ಣಲ್ಲಿ ನೀರು ತುಂಬಿ ಬಂದು ಮುಂದೆ ಮಾತನಾಡಲು ಬರಲಿಲ್ಲ."[೧೯] ನಾನೇ ತಟಸ್ಥನಾಗಿಬಿಟ್ಟೆ. ಇಂತಹ ಪ್ರಸಂಗವು ಅಧ್ಯಯನದ ಸಂದರ್ಭದಿಂದ ಇವತ್ತಿನವರೆಗೂ ಸ್ಮೃತಿ ಪಟಲದಲ್ಲಿ ಮರುಕಳಿಸುತ್ತಿದೆ. ಇದೇ ರೀತಿಯಾಗಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಶ್ರೀಮತಿ ಹುಲಿಗಮ್ಮ ಅವರ ಜೊತೆಗೆ ಚರ್ಚೆ ಮಾಡಿದಾಗ ಏನ್ ಪಾಪಮಾಡಿ ಹುಟ್ಟಿದೆವೋ ಏನೋ ಹೆಣ್ಣು ಮಕ್ಕಳಾಗಿ ಹುಟ್ಟಿದ್ದಿವಿ, ದಿನಾಲೂ ಕಷ್ಟಬಿಟ್ಟಿದ್ದಲ್ಲ, ನಾವು ದುಡಿಲಿಲ್ಲ ಅಂದ್ರ ಒಂದೊತ್ತಿನ ಊಟಕ್ಕೆ ಗತಿ ಇಲ್ಲದಾಂಗ್ ಆಗ್‌ತೈತ್ತಿ ನಮ್ಮ ಮನೆಯಲ್ಲಿ ಒಟ್ಟು ಏಳು ಜನ ಇದ್ದಿವಿ. ಅದರಲ್ಲಿ ನಮ್ಮ ಅತ್ತಿಗಿನ್ನ ಬಿಟ್ಟು ಮಕ್ಕಳು ನಾವು ಸೇರಿ ಆರುಜನ ದಾಳಂಬಿ ತೋಟದಲ್ಲಿ ಕೆಲ್ಸಕ್ಕಾ ಹೋಗುತ್ತೀವ್ರಿ ಅದರಲ್ಲಿ ಹೆಣ್ಣುಮಕ್ಕಳು ಸದಿ(ಕಳೆ) ತೆಗೆದರೆ ನಮ್ಮ ಗಂಡಸರು ಗಿಡಗಳಿಗೆ ನೀರುಬಿಡಲಿಕ್ಕೆ ಬರತ್ತಾರ್ರಿ. ಆದ್ರ ಆ ತೋಟದ ಸಾಬ ನಮ್ಮೆಲ್ಲರಿಗೂ ಸೇರಿ ದಿನಕ್ಕೆ ೨೫೦ರೂಪಾಯಿ ಕೊಡುತ್ತಾನ್ರಿ. ಅದು ಅವರ ತೋಟದಲ್ಲಿ ಒಂದುಮೂರು ತಿಂಗಳ ಕೆಲಸ ಸಿಗತೈತ್ರಿ. ಆಮೇಲೆ ಕೆಲಸ ಇಲ್ಲದೆ ಒಂದುಮೂರು ತಿಂಗಳ ಹೊಸಪೇಟೆ ಕಡೆ ಮೈನ್ಸಗೆ ಮಣ್ಣು ತುಂಬಾಕ ಹೋಗುತ್ತಿವ್ರಿ. ಆವಾಗ್ ಬಹಳ ತ್ರಾಸ್ ಆಗತೈತ್ರಿ ಮನೆಯಲ್ಲಿ ನಮ್ಮತ್ತಿಗೆಗೆ ಕಣ್ಣುಕಾಣಲ್ಲರ್ರಿ, ಕಾಲು ಇಲ್ಲಾರಿ ಇದರಿಂದ ಆಕೆಯನ್ನು ನೋಡಿಕೊಳ್ಳಲು ಒಬ್ಬರು ಮನೆಮುಂದೆ ಇರಬೇಕ್ರಿ, ಇರಲಿಲ್ಲಾಂದ್ರ ಅತ್ತಿಗೆಗೆ ಊಟನು ಇಲ್ಲಾ ಹೀಗಾಗಿ ಮಣ್ಣು ಹೊರಲು ಹೊಸಪೇಟೆಗೆ ಬಂದ್ವಿ ಅಂದ್ರೆ ಮನೆ ಕಡೆನೇ ಚಿಂತೆ. ಇನ್ನೊಂದು ದೊಡ್ಡ ಚಿಂತೆಯಂದ್ರೆ ನಾವೆಲ್ಲರೂ ಮಣ್ಣು ಹೊರವಲ್ಲಿ ಕೂಲಿಗಾಗಿ ಪರದಾಟ ಬೇರೆ ಒಂದು ದಿನಕ್ಕೆ ಮೇಸ್ತ್ರೀಗೆ ತೆಲಿಗೆ ೧೦ ರೂಪಾಯಿ ಕಮಿಷನ್ ಕೊಟ್ಟರೆ ಮಾತ್ರ ಕೆಲ್ಸ ಸಿಗೋದು ಇಲ್ಲಾಂದ್ರೆ ಇಲ್ಲಾ. ನಾವು ಮಣ್ಣನ್ನು ಹೊತ್ತು ರೈಲ್ವೆ ಡಬ್ಬಿಗೆ ತುಂಬುವುದು ತುಂಬಾ ಕಷ್ಟದ ಕೆಲಸ್ಸರ್ರಿ ಆ ಇಡೀ ದೂಳದಲ್ಲಿ ನಮ್ಮವರ ಮುಖಗಳೆಲ್ಲವು ಕೆಂಪಾಗಿ ಹೋಗಿರುತ್ತವೆ. ಕೆಲ್ಸದ ಮುಗಿದಮೇಲೆ ಅಲ್ಲೇ ಕಾಲುವೆಯಲ್ಲಿ ಹರಿಯುವ ನೀರನ್ನು ಮುಖಕ್ಕೆ ಹಾಕಿ ತೊಳೆದುಕೊಂಡು ಊಟಮಾಡಿ ನಾವೆಲ್ಲರೂ ಮಲಗುವಾಗ ರಾತ್ರಿ ಸುಮಾರು ೧೧ ಗಂಟೆಯಾಗಿರುತ್ತದೆ. ಇದೇ ರೀತಿಯಾಗಿ ಕೆಲವು ತಿಂಗಳವರೆಗೆ ಕೆಲ್ಸಮಾಡಿ ಮತ್ತೆ ಮರಳಿ ಊರಿಗೆ ಹೋಗುತ್ತೀವ್ರಿ ಹೀಗೆ ನನ್ನ ಮದುವೆಯಾಗಿ ೩೪ ವರ್ಷವಾಯಿತು. ದುಡಿಯುವುದು ಮಾತ್ರ ತಪ್ಪಿಲ್ಲ. ನಾನು ಸಾಲಿ(ಶಾಲೆ)

ಓದಿದ್ದರೇ ಹೊಸಪೇಟೆಯಲ್ಲಿ ಹೆಣ್ಣುಮಕ್ಕಳು ತಿರಗತ್ತಾರಲ್ಲ ಹಂಗೆ ನಾನು ತಿರುಗುತ್ತಿದ್ದೆ ಅಂತ ನನ್ನ ಮನಸ್ಸಿನ ಒಳಗೆ ಅಂದಕೊಳ್ಳುತ್ತಿನ್ರಿ ಏನು ಮಾಡೋದು ಈಗ ಎಲ್ಲಾ ಮುಗಿದೈತ್ರಿ ಹೀಗೆ ತನ್ನ ಕುಟುಂಬ ಜೀವನ ಇಡೀ ವಿಷಯವನ್ನು ಎಳೆ ಎಳೆಯಾಗಿ ನೊಂದಮನಸ್ಸಿನಿಂದ ಹೇಳುವುದನ್ನು ಕೇಳಿ ನಾನೇ ಭಾವುಕನಾದೆ.'[೨೦]

ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಒಂದು ವಿಭಿನ್ನವಾದ ಸಂಗತಿ ಕಂಡು ಬಂತು. ಅಧು ಏನೆಂದರೆ "ಪದ್ಮಾವತಿ ಅವರು ಕುಟುಂಬದ ಬಡತನದ ಜೊತೆಯಲ್ಲಿಯೇ ಶಿಕ್ಷಣವನ್ನು ಡಿಇಪಿಡ್‌ರವರೆಗೂ ಕಷ್ಟಪಟ್ಟು ಓದು ಮುಗಿಸಿದರು. ಇವತ್ತಿನವರೆಗೂ ಯಾವುದೇ ಸರಕಾರಿ ಕೆಲಸ ಸಿಗುವಲ್ಲಿ ಸಫಲವಾಗಿಲ್ಲ. ಈ ವಿಷಯವನ್ನು ಕುರಿತು ಅವರ ಜೊತೆ ಚರ್ಚೆಗೆ ಕುಳಿತಾಗ ಪದ್ಮಾ ಅತೀ ಬುದ್ಧಿವಂತೆ. ಹೈಸ್ಕೂಲಲ್ಲೇ ಇದ್ದಾಗ ಇಡೀ ಸ್ಕೂಲ ಗುರುಗಳ ಮೆಚ್ಚುಗೆಗೆ ಪಾತ್ರವಾಗಿದ್ದಳು. ಮುಂದೆ ಕಾಲೇಜಿಗೆ ಬಂದಾಗ ಕಷ್ಟಪಟ್ಟು ಅಧ್ಯಯನ ಮಾಡಿ ಅದೇ ಕಾಲೇಜಿಗೆ ಅಧಿಕ ಅಂಕಗಳಿಕೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾಗಿದ್ದಳು. ಇದೇ ರೀತಿಯಾಗಿ ಡಿಇಎಡ್‌ನಲ್ಲಿ ಅತ್ಯಂತ ನಿಷ್ಠೆಯಿಂದ ಗುರುಗಳು ಹೇಳಿದ ಕೆಲಸ ಕಾರ್ಯಗಳನ್ನು ಪೂರೈಸಿದರು. ಕೊನೆಗೆ ಫಲಿತಾಂಶ ಮಾತ್ರ ತುಂಬಾ ಕೆಳಶ್ರೇಣಿಯಲ್ಲಿ ಉತ್ತೀರ್ಣವಾಗಿರುವುದನ್ನು ಕೇಳಿ ಶಾಕ್ ಆಗಿ, ಇನ್ನೂ ಮುಂದೆ ವಿದ್ಯಾಭ್ಯಾಸ ಮಾಡುವುದೇ ಬೇಡ ಎನಿಸಿ ಇವತ್ತಿನ ಕುತಂತ್ರ ನೀತಿಗೆ ರೋಷಿಹೋಗಿ ತಮ್ಮ ಊರಲ್ಲಿರುವ ಮಕ್ಕಳಿಗೆ ಅಕ್ಷರ ಕಲಿಸಿ ಕಾಲ ಕಳೆಯುವುದರಲ್ಲೇ ಸಂತೋಷಪಡುತ್ತಿದ್ದಾಳೆ. ಆದರೆ ಸಮಸ್ಯೆಯೆಂದರೆ ಕುಟುಂಬದಲ್ಲಿ ಇವಳ ಮದುವೆ ಮಾಡಬೇಕು ಎಂಬ ಆಸೆ ದುರಂತವೆಂದರೆ ಇಷ್ಟೊಂದು ಓದಿದ ಹುಡುಗಿಗೆ ವರದಕ್ಷಿಣೆ ಕೊಟ್ಟು ಸರ್ಕಾರಿ ನೌಕರಿ ಮಾಡುವ ಹುಡುಗನನ್ನು ಹುಡುಕುವುದು ಬಹಳ ತೊಂದರೆ ಎಂದು ಕಾಲ ಕಳೆಯುತ್ತಾ ಮುಂದುವರೆಯುತ್ತಿದ್ದಾರೆ. ಇತ್ತ ಕಡೆ ಪದ್ಮಾವತಿಯ ಸಹ ಜೋಡಿ ಗೆಳತಿಯರಿಗೆ ಮದುವೆಯಾಗಿ ಒಂದೋ ಎರಡು ಮಕ್ಕಳು ಮನೆಯಲ್ಲಿರುವುದು ಕಂಡು ಪದ್ಮಾವತಿ ದಿನಾಲೂ ಮನೆಯಲ್ಲಿ ಇದ್ದುಕೊಂಡು ಮನಸ್ಸಲ್ಲಿ ನೋವನ್ನು ನುಂಗುತ್ತಾ ಜೀವಿಸುತ್ತಿದ್ದಾಳೆ."[೨೧] ಇವರ ಸಂದರ್ಭಗಳು ನೋಡಿದ ನೆರೆ ಹೊರೆಯವರು ತಮ್ಮಲ್ಲಿರುವ ಮಕ್ಕಳಿಗೆ ಶಿಕ್ಷಣವನ್ನು ಕಲಿಸುವುದರಲ್ಲಿ ಹಿಂದೇಟು ಹಾಕುತ್ತಿದ್ದಾರೆ. ಇಂತಹ ಹಲವು ಕಾರಣಗಳೇ ಮಹಿಳೆಯರ ಸಬಲೀಕರಣಕ್ಕೆ ವಿರೋಧ ವ್ಯಕ್ತವಾಗುತ್ತಿದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಈ ರೀತಿಯಾಗಿ ಬುಡಕಟ್ಟು ಸಮುದಾಯಗಳಲ್ಲಿ ಸಹ ದುಡಿಯುತ್ತಿರುವಂತಹ ಮಹಿಳೆಯರ ಶ್ರಮವು ಅಭಿವೃದ್ಧಿ ಮತ್ತು ಸಮಾನತೆಯ ಚಿನ್ಹೆಯಾಗುವುದಿಲ್ಲ ಎಂಬುವುದನ್ನು ನಾವು ಮೊದಲು ಅರಿತುಕೊಳ್ಳಬೇಕು. ಈ ಮಾತು ಇಂಡಿಯಾದಂತಹ ದೇಶದಲ್ಲಿ ಶೇಕಡ ನೂರರಷ್ಟು ನಿಜವಾಗಿದೆಯೆನ್ನಬಹುದು. ಒಟ್ಟು ನಮ್ಮ ದೇಶದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಶ್ರಮವಹಿಸುತ್ತಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ. "೧೯೯೮-೯೯ರಲ್ಲಿ ಕೇಂದ್ರ

ಅಂಕಿಅಂಶ ಸಂಸ್ಥೆ ಕೈಗೊಂಡ ಸಮೀಕ್ಷೆ ಕೆಲವು ಸಂಗತಿಗಳನ್ನು ಬಹಿರಂಗಗೊಳಿಸುತ್ತದೆ. ಮಹಿಳೆ ಶ್ರಮಪಡುವ ರೀತಿಯನ್ನು ತಿಳಿಸಿಕೊಡಲು ಇದು ಸ್ಪಷ್ಟಪಡಿಸುತ್ತದೆ. ಇದರ ಅನ್ವಯ ಮಹಿಳೆ ಪುರುಷನಿಗಿಂತ ಸರಾಸರಿ ಎರಡು ಘಂಟೆಯಷ್ಟು ಕಡಿಮೆ ಅವಧಿ ನಿದ್ರಿಸುತ್ತಾಳೆ. ಹಾಗೂ ಮನೆಗೆಲಸಗಳಿಗಾಗಿ ಪ್ರತಿಯೊಬ್ಬ ಇಂಡಿಯಾದ ಮಹಿಳೆ ಪುರುಷನಿಗಿಂತ ಹತ್ತು ಪಟ್ಟು ತನ್ನ ಸಮಯವನ್ನು ಮೀಸಲಿಡುತ್ತಾಳೆ. ಇದು ಪೂರ್ಣ ಅವಧಿಯ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮಹಿಳೆಯರ ವಿಷಯದಲ್ಲಿ ಕೂಡ ಸತ್ಯ ಮತ್ತು ಪುರುಷ ದಿನದಲ್ಲಿ ಎರಡು ಗಂಟೆಯ ಅವಧಿಯನ್ನು ವಿರಾಮದಲ್ಲಿ ಕಳೆಯುತ್ತಾನೆ. ಆದರೆ ಮಹಿಳೆಗೆ ಸಿಗುವ ಸರಾಸರಿ ಬಿಡುವು ಮಾತ್ರ ಕೇವಲ ಐದು ನಿಮಿಷಗಳು ಮಾತ್ರ. ಪುರುಷ ಅಡುಗೆಗೆ ಸಂಬಂಧಿಸಿದ ಕೆಲಸದಲ್ಲಿ ತೊಡಗಿಕೊಳ್ಳುವುದು ಸರಾಸರಿ ವಾರಕ್ಕೆ ಒಂದು ಘಂಟೆ ಮಾತ್ರ. ಆದರೆ ಮಹಿಳೆಗೆ ಸರಾಸರಿ ವಾರಕ್ಕೆ ೧೫ ಘಂಟೆ ಕಾಲ ಅಡುಗೆಯ ಕೆಲಸ. ಇದನ್ನು ಮುಂದುವರೆದು ಹೇಳಬೇಕಾದರೆ ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಅಂದರೆ ಗಂಡಸ್ಸಿನ ದೃಷ್ಟಿಯಲ್ಲಿ ಮಹಿಳೆ ಮಾಡುವಂತಹ ಕೆಲಸ ಅದು ಕೆಲಸವೇ ಅಲ್ಲ"[೨೨] ಅದು ಸಹ ಕೆಲಸವೆಂದು ಗುರುತಿಸುವವರು ಇಲ್ಲದಂತಾಗಿದೆ. ಇದು ಮಹಿಳೆಯರ ದುರಂತವೇ ಸರಿ.

ಮಹಿಳೆಯರಿಗೆ ಎಲ್ಲ ಸೌಲಭ್ಯ ನೀಡಿದರೆ ಎಲ್ಲಿ ತನ್ನ ಸುಖಭೋಗಕ್ಕೆ ಧಕ್ಕೆ ಒದಗಿತೋ ಎಂಬ ಸ್ವಾರ್ಥಿ ಪುರುಷ ಒಂದೆಡೆ ಆಕೆಯನ್ನು ಅನುಮಾನದಿಂದ ನೋಡಿದರೆ ಇನ್ನೊಂದಡೆ ಮಹಿಳೆಗೆ ಮಹಿಳೆಯೇ ಶತ್ರುವಾದ ನಿದರ್ಶನಗಳೂ ಬಹಳ ಇವೆ. ಹೀಗೆ ಪುರುಷರಿಂದ ಶೋಷಣೆ, ಸ್ತ್ರೀಯರಿಂದಲೇ ಸ್ತ್ರೀಯ ಶೋಷಣೆಯಂತಹ ವಿಷವರ್ತುಲದಿಂದ ಬಿಡಿಸಿಕೊಂಡು ಮಹಿಳಾ ಕಲ್ಯಾಣ ಆಗಬೇಕಾಗಿದೆ. ಅಧ್ಯಯನದ ಕ್ಷೇತ್ರವಾದ ಕೊಪ್ಪಳ ಜಿಲ್ಲೆಯ ಕನಕಗಿರಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಬರುವಂತಹ ಬೇಡ ಬುಡಕಟ್ಟು ಸಮುದಾಯದವರನ್ನು ಅದು ಮಹಿಳೆಯರನ್ನು ಪ್ರತ್ಯೇಕವಾಗಿ ವಿಚಾರಿಸಿದಾಗ ವಿಜಯಲಕ್ಷ್ಮಿಯೆನ್ನುವ ಮಹಿಳೆಯು ತನ್ನ ಕೌಟುಂಬಿಕ ಜೀವನದ ಬಗೆಗೆ ತೋಡಿಕೊಂಡ ಅಳಲು ಈ ರೀತಿಯಾಗಿತ್ತು. "ಕತ್ತೆ ದುಡಿದಂಗ ದುಡಿದ್ರೂ ಬಾಳಿಗೆ ಒಂದಿಷ್ಟು ನೆಮ್ಮದಿ ಇಲ್ಲ ಏನ್ ಮಾಡ್ತೀಯ. ಕೂಡಿಯೋ ಗಂಡನ ಕಟ್ಕೊಂಡು ಸಾಕು ಸಾಕಾಗಿದೆ. ಬದುಕು ಹೊಲಮನ್ಯಾಗ ದುಡಿಯೋದಲ್ಲದೆ ಕುಡಿದು ಬಂದು ಗಂಡ ಒದ್ದರೆ ಒದಿಸಿಕೊಳ್ಳಬೇಕು. ಹೊಡೆದ್ರೆ ಹೊಡೆಸ್ಕೋಬೇಕು ಎದುರು ಮಾತಾಡೋಂಗಿಲ್ಲ. ಒಂದೊಂದ್ಸಲ್ಲಾ ಮಾರಾಯ ತಾನು ದುಡಿದಿದ್ದು ಕುಡಿಯೋಕ್ಕೆ ಸುರಿಯೋದಲ್ಲ ನಾ ದುಡಿದಿದ್ದ ಕೂಲಿನೂ ಕಸಗೊಂಡ ಹೋಗುತ್ತಾನೆ ಎಂದು ನೋವಿನಿಂದ ಹೇಳಿಕೊಂಡು ನಿಟ್ಟುಸಿರು ಬಿಟ್ಟಳು"[೨೩] ರಾಯಚೂರು ಜಿಲ್ಲೆಯ ಮಾನವಿ, ಸಿಂಧನೂರು ತಾಲ್ಲೂಕು ಪರಿಸರದಲ್ಲಿ ಬರುವ ಬೇಡ ಬುಡಕಟ್ಟು ಸಮುದಾಯದ ಮಹಿಳೆಯರನ್ನು ಸಂದರ್ಶನ ಮಾಡಿದಾಗ ಸುಮಾ ಎಂಬ ಮಹಿಳೆಯೂ "ಕುಟುಂಬದಲ್ಲಿ ಪುರುಷನಿದ್ದಾಗ್ಯೂ ಕುಟುಂಬದ ನಿರ್ವಹಣೆಯಲ್ಲಿ ಮಹಿಳೆ ಪ್ರಧಾನ ಪಾತ್ರವಹಿಸಿ ಗಂಡನ ಹಿನ್ನೆಲೆಯಿದ್ದರೆ ಅಥವಾ

ಹೆಣ್ಣನ್ನು ಸಮಾನತೆಯಿಂದ ಕಂಡು ಅವಳಿಗೆ ಕುಟುಂಬದಲ್ಲಿ ಮುಕ್ತ ಅವಕಾಶ ನೀಡಿದರೆ ಅದನ್ನು ನಮ್ಮ ನೆರೆಹೊರೆಯವರು ಸಹಿಸುವುದಿಲ್ಲ. ಅಂತಹ ಪುರುಷನನ್ನು ಹೆಂಡತಿಯು ಗುಲಾಮ ಎಂದೋ, ಹೆಂಡತಿಯ ಛೇಲಾ ಎಂದೋ ಹೆಂಡ್ತಿ ಸೆರಗಿನ ಹಿಂದೆ ಅಡ್ಡಾಡುವನೆಂದೂ ಕರೆದು ಆ ಪುರುಷನನ್ನು ಅವಮಾನಗೊಳಿಸಲಾಗುತ್ತದೆ. ಅಂದರೆ ಅವರ ಈ ಮನೋಭಾವದ ಹಿಂದೆ ಮಹಿಳೆಗೆ ಕಲ್ಪಿಸುವ ಸಮಾನತೆಯನ್ನು ಹತ್ತಿಕ್ಕುವ ಹುನ್ನಾರ ಅಡಗಿರುತ್ತದೆ. ಹೀಗೆ ಅವಮಾನಕ್ಕೆ ಒಳಪಡಿಸುವವರಲ್ಲಿ ಆ ಸಮುದಾಯದ ಮಹಿಳೆಯರು ಸೇರಿರುತ್ತಾರೆ."[೨೪]

ಈ ಸಮುದಾಯದ ಮಹಿಳೆಯರು ಶ್ರಮಜೀವಿಗಳು. ಜೀವನಪೂರ್ತಿ ದುಡಿಯುವುದರಲ್ಲೇ ಕಳೆಯುತ್ತಾರೆ. ಎಂದಿಗೂ ಕೂತು ಉಂಡುದ್ದು ಅವರಿಂದ ಸಾಧ್ಯವಿಲ್ಲ. ಮುಂಜಾನೆ ಎದ್ದು ಅವರು ಕೃಷಿ ಕೆಲಸಕ್ಕೆ ಹೋಗುತ್ತಾರೆ. ಒಂದು ದಿನಕ್ಕೆ ೨೫ ರಿಂದ ೩೦ ರೂಪಾಯಿ ಸಿಗುತ್ತದೆ. ಇದರಿಂದ ಜೀವನ ನಡೆಸುತ್ತಾರೆ. ಕೃಷಿ ಕೆಲಸ ಎಂದರೆ ಹೆಚ್ಚಾಗಿ ಮಹಿಳೆಯರು ಬಿತ್ತನೆ ಸಂದರ್ಭದಲ್ಲಿ ನಾಟಿ ಮಾಡುವುದು, ಕಳೆ ಕೀಳುವುದು ಇತ್ಯಾದಿ ಕೆಲಸಗಳಲ್ಲಿ ತೊಡಗುತ್ತಾರೆ. ವಿಶೇಷವೆಂದರೆ ರಾಯಚೂರು ಜಿಲ್ಲೆಯ ಮಾನ್ವಿ, ಸಿಂಧನೂರಲ್ಲಿ ಸಮುದಾಯ ಮಹಿಳೆಯರು ಹಾಲು, ಬೆಣ್ಣೆ, ಮೊಸರು, ಮಾರಾಟ ಮಾಡುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂತು. "ತಿಮ್ಮವ್ವ ಎಂಬುವವರನ್ನು ಮಾತನಾಡಿಸಿದಾಗ ಇದೆಲ್ಲ ಮಾರಾಟ ಮಾಡಿ ನಂತರ ಬಂದ ಹಣವನ್ನು ಹೇಗೆ ಖರ್ಚು ಮಾಡುತ್ತೀರಾ ಎಂದು ಕೇಳಿದಾಗ, ನನ್ನ ಗಂಡ ಕುಡುಕ ಇದ್ದಾನೆ. ಇದರಲ್ಲಿ ಅವನಿಗೆ ಅರ್ಧ ಹಣ ಕೂಡ ಬೇಕು, ಇನ್ನುಳಿದ ಹಣದಲ್ಲಿ ಮನೆಗೆ ಬೇಕಾದ ಅಡಿಗೆ ಸಾಮಾನುಗಳು ತರಬೇಕು ಮತ್ತು ಮಕ್ಕಳನ್ನು ಓದಿಸಬೇಕು ಎಂದು ಹೇಳುತ್ತಾರೆ."[೨೫] ರಾಯಚೂರು, ಗುಲ್ಬರ್ಗಾ ಮತ್ತು ಕೊಪ್ಪಳ ಮೂರು ಜಿಲ್ಲೆಗಳಲ್ಲಿ ಕಂಡುಬಂದಂತೆ ವಯೋವೃದ್ಧ ಸಮುದಾಯದ ಮಹಿಳೆಯರು ಹೆಚ್ಚಾಗಿ ವ್ಯಾಪಾರದಲ್ಲಿ ತೊಡಗಿರುವುದು ಕಂಡು ಬಂತು, ಅದು ಬೀಡಾ ಅಂಗಡಿ, ಹಣ್ಣು ವ್ಯಾಪಾರ, ಹೂವು, ತರಕಾರಿ ಇತ್ಯಾದಿಗಳಲ್ಲಿ ತೊಡಗಿರುವುದು ತಿಳಿದು ಬಂತು. ಇವುಗಳನ್ನು ಮಾರಾಟ ಮಾಡುವುದರ ಮೂಲಕ ಜೀವಿಸುತ್ತಿದ್ದಾರೆ. ಒಂದು ದಿನ ವ್ಯಾಪಾರ ಆಗದಿದ್ದರೆ ಆ ದಿನ ಅವರಿಗೆ ಉಪವಾಸವೇ ಗತಿ. ಒಂದೇ ಸಮುದಾಯದಲ್ಲಿ ಎಷ್ಟೊಂದು ಅಸಮಾನತೆಗಳು ಶ್ರೀಮಂತ, ಬಡವ ಎನ್ನುವ ಶ್ರೇಣಿಗಳು ಇವರಲ್ಲಿದೆ. ಜೊತೆಗೆ ರಾಯಚೂರು, ಗುಲ್ಬರ್ಗಾ ಜಿಲ್ಲೆ ಗಳಿಗಿಂತ ಕೊಪ್ಪಳ ಜಿಲ್ಲೆಯಲ್ಲಿ ಬೇಡ ಸಮುದಾಯ ಮಹಿಳೆಯರು ಕೃಷಿಯಲ್ಲಿ ತೊಡಗಿರುವುದು ಕಡಿಮೆ ಎಂದು ಹೇಳಬಹುದು. ಏಕೆಂದರೆ ಇಲ್ಲಿ ಮಹಿಳೆಯರು ಕೃಷಿಯೇತರ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ಮೈನ್ಸ್ ಕೆಲಸಕ್ಕೆ ಹೋಗುತ್ತಾರೆ, ಫ್ಯಾಕ್ಟರಿಗೆ ಹೋಗುತ್ತಾರೆ, ಹೋಟೆಲ್ ನಡೆಸುತ್ತಾರೆ ಇತ್ಯಾದಿಗಳಲ್ಲಿ ದುಡಿಯುತ್ತಿದ್ದಾರೆ. ಒಟ್ಟಾರೆಯಾಗಿ ಮೂರು ಜಿಲ್ಲೆಯನ್ನು ಅವಲೋಕಿಸಿ ದಾಗ ಬೆರಳೆಣಿಕೆಯಲ್ಲಿ ಮಹಿಳೆಯರು ಸರ್ಕಾರದ ಮೀಸಲಾತಿಯನ್ನು ಪಡೆದುಕೊಂಡು ಇಂದು ಮನೆಯೊಳಗೆ ಇರದೇ ಆಚೆ ಬಂದು ಅನೇಕ ಸರ್ಕಾರಿ ಉದ್ಯೋಗಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಅವುಗಳಲ್ಲಿ ಅಂಗನವಾಡಿ ಟೀಚರ್, ಶಾಲಾ ಶಿಕ್ಷಕಿ, ಪೋಲಿಸ್ ಇಲಾಖೆ, ಅಬಕಾರಿ ಇತ್ಯಾದಿ ಕಡೆ ಕೆಲಸ ನಿರ್ವಹಿಸುತ್ತಿದ್ದಾರೆ.

ಹಿಂದೆ ಈ ಬೇಡ ಸಮುದಾಯದಲ್ಲಿ ಮಹಿಳೆಯರು ಆಚೆ ಹೋಗಿ ಕೆಲಸ ಮಾಡುವಂತಿರಲಿಲ್ಲ. ಅನೇಕ ಕಟ್ಟುಪಾಡುಗಳಿಗೆ ಒಳಗಾಗಿದ್ದರು. ಆದರೆ ಇವತ್ತಿನ ಆಧುನಿಕ ಸಂದರ್ಭದಲ್ಲಿ ಇವೆಲ್ಲವನ್ನು ದಾಟಿ ಮಹಿಳೆ ಹೊಸ ಜಗತ್ತಿಗೆ ಕಾಲಿಟ್ಟಿದ್ದಾಳೆ. ಆಧುನಿಕತೆಗೆ ಒಳಗಾಗಿ ಬೇಡ ಸಮುದಾಯದ ಕುಟುಂಬವು ಮೂಲ ರೂಪದಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡಿದೆ ಎಂದು ಹೇಳಬಹುದು. ಬದಲಾದ ಪರಿಸ್ಥಿತಿಯಲ್ಲಿ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸಲು ಸರ್ಕಾರದ ಕೆಲಸವು ಮಹತ್ವವಾದ ಪಾತ್ರವಹಿಸಿರುವುದನ್ನು ಕಾಣಲಾಗಿದೆ. ಸರ್ಕಾರದ ವ್ಯವಸ್ಥೆಯಲ್ಲಿನ ವೃತ್ತಿಯು ಇವರುಗಳ ಕುಟುಂಬದ ವ್ಯವಸ್ಥೆಯನ್ನು ಬದಲಾಯಿಸಿದೆ. ಹಾಗೆಯೇ ಇವರುಗಳ ಮಕ್ಕಳು ಉತ್ತಮ ಶಿಕ್ಷಣವಂತರಾಗುತ್ತಿದ್ದಾರೆ ಎಂದು ಹೇಳಬಹುದು.

ಕೋಷ್ಟಕ-೩

ಕುಟುಂಬದ ವಿವಿಧ ವರ್ಗಗಳ ವಿವರ

ಕ್ರ.ಸಂ.	ಜಿಲ್ಲೆಗಳ ಹೆಸರು	ಕುಟುಂಬಗಳ ಸಂಖ್ಯೆ	ಕುಟುಂಬದ ವರ್ಗ ಪರಿಶಿಷ್ಟ ವರ್ಗ
೧.	ಗುಲಬರ್ಗಾ	೨೦೦	೨೦೦
೨.	ರಾಯಚೂರು	೨೦೦	೨೦೦
೩.	ಕೊಪ್ಪಳ	೨೦೦	೨೦೦
	ಒಟ್ಟು	೬೦೦	೬೦೦

ಮೂಲ : ಕ್ಷೇತ್ರಕಾರ್ಯ

ಕೌಟುಂಬಿಕ ಹಿನ್ನೆಲೆ

ಆಯ್ದುಕೊಂಡ ಮೂರು ಜಿಲ್ಲೆಗಳಲ್ಲಿ ಒಟ್ಟು ೬೦೦ ಕುಟುಂಬಗಳನ್ನು ಸಮೀಕ್ಷೆ ಮಾಡಲಾಯಿತು. ಗುಲ್ಬರ್ಗಾ ಜಿಲ್ಲೆಯಲ್ಲಿ ಬೇಡ ಸಮುದಾಯದ ಕುಟುಂಬಗಳು ರಾಯಚೂರು ಜಿಲ್ಲೆಗಿಂತ ಕಡಿಮೆ ಇವೆ ಎಂದು ಹೇಳಬಹುದು. ಕೊಪ್ಪಳ ಮತ್ತು ಗುಲ್ಬರ್ಗಾಕ್ಕಿಂತ ರಾಯಚೂರು ಜಿಲ್ಲೆಯು ಹೆಚ್ಚಿನ ಬೇಡ ಸಮುದಾಯದ ಜನಸಂಖ್ಯೆಯನ್ನು ಹೊಂದಿದೆ.

ಕೋಷ್ಟಕ-೪

ವಿವಿಧ ಕುಟುಂಬದ ವಿವರ

ಕ್ರ.ಸಂ.	ಜಿಲ್ಲೆಗಳ ಹೆಸರು	ಕುಟುಂಬಗಳ ಸಂಖ್ಯೆ	ಕುಟುಂಬದ ವರ್ಗ		
			ವಿಭಕ್ತ	ಅವಿಭಕ್ತ	ವಿಸ್ತೃತ
೧.	ಗುಲ್ಬರ್ಗಾ	೨೦೦	೧೭೫	೨೦	೦೫
೨.	ರಾಯಚೂರು	೨೦೦	೧೮೫	೧೫	-
೩.	ಕೊಪ್ಪಳ	೨೦೦	೧೮೩	೧೫	೨
	ಒಟ್ಟು	೬೦೦	೫೪೩	೫೦	೦೭

ಮೂಲ: ಕ್ಷೇತ್ರಕಾರ್ಯ

ಒಟ್ಟು ಮೂರು ಜಿಲ್ಲೆಗಳಲ್ಲಿ ೬೦೦ ಕುಟುಂಬಗಳಲ್ಲಿ ವಿಭಕ್ತ ಕುಟುಂಬಗಳು ೫೪೩ರಷ್ಟಿವೆ. ಅವಿಭಕ್ತ ಕುಟುಂಬಗಳು ೫೦ ರಷ್ಟಿದೆ. ಕೊಪ್ಪಳ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಒಟ್ಟು ೭ ಕುಟುಂಬಗಳು ವಿಸ್ತೃತ ಕುಟುಂಬವನ್ನು ಹೊಂದಿವೆ. ಇಂದು ವಿಭಕ್ತ ಕುಟುಂಬಗಳು ಹೆಚ್ಚಾಗಿದ್ದು, ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತವೆ ಎಂದು ಹೇಳಬಹುದು.

ಕೋಷ್ಟಕ-೫

ವೃತ್ತಿಯ ವಿವರ

ಜಿಲ್ಲೆಗಳ ಹೆಸರು	ಗುಲಬರ್ಗಾ ಕುಟುಂಬಗಳು	ರಾಯಚೂರು ಕುಟುಂಬಗಳು	ಕೊಪ್ಪಳ ಕುಟುಂಬಗಳು	ಒಟ್ಟು
ಕೂಲಿ	೧೬೦	೧೭೫	೧೫೦	೪೮೫
ವ್ಯವಸಾಯ	೨೦	೧೫	೨೦	೫೫
ವ್ಯಾಪಾರ	೧೩	೮	೨೫	೪೬
ಇತರೆ	೭	೨	೫	೧೪
ಒಟ್ಟು	೨೦೦	೨೦೦	೨೦೦	೬೦೦

ಮೂಲ: ಕ್ಷೇತ್ರಕಾರ್ಯ

ಅಧ್ಯಯನದ ದೃಷ್ಟಿಯಿಂದ ಯಾವ ಯಾವ ಜಿಲ್ಲೆಗಳಲ್ಲಿ ಬೇಡ ಸಮುದಾಯದ ಮಹಿಳೆಯರು ಯಾವ ವೃತ್ತಿಯನ್ನು ಅವಲಂಬಿಸಿದ್ದಾರೆ ಎನ್ನುವ ಕುರಿತು ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಸಮೀಕ್ಷೆಯ ಸಂದರ್ಭದಲ್ಲಿಯೇ ಪ್ರತಿ ಕುಟುಂಬದ ಮುಖ್ಯಸ್ಥರಿಂದ ಇಲ್ಲವೇ ಮನೆಯಲ್ಲಿ ಲಭ್ಯವಿದ್ದ ಇತರೆ ಹಿರಿಯ ಸದಸ್ಯರಿಂದ ಮಾಹಿತಿಯನ್ನು ಪಡೆಯಲಾಗಿದೆ. ಕುಟುಂಬದ ವಿವಿಧ ವೃತ್ತಿಯ ಹಿನ್ನೆಲೆಯಲ್ಲಿ ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಿಸಲು ಈ ವಿವರ ಪೂರಕವಾಗಿದೆ.

ಮೂರು ಜಿಲ್ಲೆಗಳಿಂದ ೬೦೦ ಕುಟುಂಬಗಳಲ್ಲಿ ೪೮೫ ಕುಟುಂಬಗಳು ಪ್ರಮುಖವಾಗಿ ಕೂಲಿಯನ್ನೇ ಅವಲಂಬಿಸಿದ್ದಾರೆ. ಒಟ್ಟು ೫೫ ಕುಟುಂಬಗಳು ವ್ಯವಸಾಯವನ್ನು ಮಾಡುತ್ತಿದ್ದು, ವ್ಯಾಪಾರವನ್ನು ಒಟ್ಟು ೪೬ ಕುಟುಂಬಗಳು ಮತ್ತು ೧೪ ಕುಟುಂಬಗಳು ಇತರೆ ವೃತ್ತಿಯನ್ನು ಅವಲಂಬಿಸಿದ್ದಾರೆ.

ಮೇಲಿನ ದತ್ತಾಂಶವನ್ನು ಗಮನಿಸಿದರೆ, ಕೂಲಿ ಮಾಡಿ ಬದುಕುವ ಕುಟುಂಬಗಳ ಸಂಖ್ಯೆಯೇ ಅಧಿಕವಿರುವುದು ಕಂಡುಬಂದಿದೆ. ಈ ಅಂಶವು ಆರ್ಥಿಕತೆಯ ಮೇಲೆ ಹೆಚ್ಚು ಪರಿಣಾಮ ಬೀರಿದೆ ಎನ್ನಬಹುದು. ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಿಗಿಂತ ರಾಯಚೂರು ಜಿಲ್ಲೆಯಲ್ಲಿ ಅತಿಹೆಚ್ಚಿನ ಕುಟುಂಬಗಳು ಕೂಲಿಯನ್ನು ಅವಲಂಬಿಸಿದ್ದಾರೆ ಎಂದು ಹೇಳಬಹುದು. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗಿಂತ ಕೊಪ್ಪಳ ಜಿಲ್ಲೆಯಲ್ಲಿ ಮಹಿಳೆಯರು ಹೆಚ್ಚು ವ್ಯಾಪಾರದಲ್ಲಿ ತೊಡಗಿದ್ದಾರೆ. ಸರ್ಕಾರದ ಮೀಸಲಾತಿಯನ್ನು ಪಡೆದಂತಹ ಬೆರಳಣಿಕೆಯಷ್ಟು ಮಹಿಳೆಯರು ಸರ್ಕಾರಿ ಉದ್ಯೋಗವನ್ನು ಪಡೆದುಕೊಂಡಿದ್ದಾರೆ.

೫.೩. ಆರ್ಥಿಕ ಕ್ಷೇತ್ರದಲ್ಲಿನ ಒಡೆತನ ಮತ್ತು ಮಹಿಳೆ

ಕೃಷಿಯಲ್ಲಿ ಮಹಿಳೆ ಬಹುಕಾಲದಿಂದಲೂ ಏನೆಲ್ಲಾ ಕಾರ್ಯ ಮಾಡಿದರೂ ಕೃಷಿ ಎನ್ನುವುದು ಪುರುಷ ಪ್ರಧಾನ ಕಸುಬು ಎಂಬ ಮನೋಭಾವ ದಟ್ಟವಾಗಿದೆ. ಇದಲ್ಲದೆ ಕೃಷಿಯಲ್ಲಿ ಮಹಿಳೆಗೆ ಯಾವುದೇ ರೀತಿಯ ಅಧಿಕಾರಯುತ ಸ್ಥಾನಮಾನಗಳಿರುವುದು ಕಂಡುಬರುತ್ತಿಲ್ಲ.

ಸ್ವಾತಂತ್ರ್ಯನಂತರ "ಭಾರತದಲ್ಲಿ ಸಂವಿಧಾನದತ್ತವಾಗಿ ೧೯೫೬ರಲ್ಲಿ ಹಿಂದೂ ಉತ್ತರಾಧಿಕಾರತ್ವದ ಕಾಯಿದೆ(The Hindu Succession Act of 1956)ಯನ್ನು ಜಾರಿಗೆ ತರಲಾಗಿದೆ. ಈ ಕಾಯಿದೆಯು ಆಸ್ತಿಯ ಉತ್ತರಾಧಿಕಾರತ್ವದ ವಿಷಯದಲ್ಲಿ ಸ್ತ್ರೀಯರಿಗೆ ಮತ್ತು ಪುರುಷರಿಗೆ ಸರಿಸಮಾನವಾದ ಹಕ್ಕುಗಳನ್ನು ನೀಡಿದೆ. ಇದು ಆಸ್ತಿಯ ಹಕ್ಕನ್ನು ರಕ್ತ ಸಂಬಂಧದ ಆಧಾರದ ಮೇಲೆ ನಿರ್ಧರಿಸುತ್ತದೆ. ಸಾಂಪ್ರದಾಯಿಕ ಹಿಂದೂ ಸಂಹಿತೆಯ ಪ್ರಕಾರ ಸ್ತ್ರೀಯರಿಗೆ ಆಸ್ತಿಯ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ. ಕೇವಲ ಗಂಡು ಮಕ್ಕಳಿಗೆ ಮಾತ್ರ ತಮ್ಮ ತಂದೆಯ ಆಸ್ತಿಗೆ ಉತ್ತರಾಧಿಕಾರಿಗಳಾಗುವ ಅವಕಾಶವಿತ್ತು. ಆದರೆ ಈ ಕಾಯ್ದೆಯ ಪ್ರಕಾರ ಕುಟುಂಬದ ವ್ಯಕ್ತಿಯ ಮರಣದ ನಂತರ ಆತನ ಆಸ್ತಿಯು ಪತ್ನಿ, ವಿವಾಹಿತ ಹಾಗೂ ಅವಿವಾಹಿತ ಗಂಡು ಮಕ್ಕಳು

ಹಾಗೂ ಹೆಣ್ಣು ಮಕ್ಕಳಿಗೆ ಸಮಾನವಾಗಿ ಹಂಚಲ್ಪಡುತ್ತದೆ. ಈ ಕಾಯಿದೆಯು ಹೆಣ್ಣು ಮಕ್ಕಳಿಗೂ ತಮ್ಮ ತಂದೆಯ ಆಸ್ತಿಗೆ ಉತ್ತರಾಧಿಕಾರಿಯಾಗುವ ಅವಕಾಶ ಕಲ್ಪಿಸಿದೆ. ಇಂದು ಹೆಣ್ಣು ಮಕ್ಕಳೂ ಸಹ ತಮ್ಮ ತಂದೆಯ ಆಸ್ತಿಯಲ್ಲಿ ತನ್ನ ಸಹೋದರರಿಗೆ ಸರಿ ಸಮಾನವಾಗಿ ಆಸ್ತಿಯಲ್ಲಿ ಭಾಗ ಪಡೆಯಬಹುದಾಗಿದೆ. ಅಲ್ಲದೆ ಅದನ್ನು ಸ್ವತಃ ಅನುಭೋಗಿಸುವ ಮತ್ತು ಮಾರುವ ಸಂಪೂರ್ಣ ಹಕ್ಕನ್ನು ಅವಳು ಪಡೆದಿರುತ್ತಾಳೆ.

ಇದಲ್ಲದೆ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಉಲ್ಲೇಖಿತವಾದ ಇನ್ನೊಂದು ಕಾಯಿದೆ ಎಂದರೆ ೧೯೫೬ರಲ್ಲಿ ಅಪ್ರಾಪ್ತ ವಯಸ್ಸು ಮತ್ತು ಪೋಷಕರ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅಪ್ರಾಪ್ತ ಮಕ್ಕಳಿಗೋಸ್ಕರ ಪೋಷಕರನ್ನು ನೇಮಿಸುವ ವಿಷಯದಲ್ಲಿ ಪುರುಷರಿಗಿದ್ದ ಹಕ್ಕನ್ನು ಸ್ತ್ರೀಯರಿಗೂ ಕಲ್ಪಿಸಿಕೊಡುವ ಸದುದ್ದೇಶದಿಂದ ಈ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಈ ಕಾಯಿದೆಯ ಪ್ರಕಾರ ಗಂಡನು ಮರಣ ಹೊಂದಿದ್ದರೆ. ಆತನು ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರ ಹೊಂದಿದರೆ ಇಲ್ಲವೆ ಸನ್ಯಾಸತ್ವ ಸ್ವೀಕರಿಸಿದರೆ ಹೆಂಡತಿಯಾದವಳು ಅಪ್ರಾಪ್ತ ಮಕ್ಕಳ ಸಂರಕ್ಷಕರನ್ನು ನೇಮಿಸುವ ಹಕ್ಕನ್ನು ಪಡೆದಿದ್ದಾಳೆ[೨೬]”. ಆದರೆ ಆಸ್ತಿಯ ಹಕ್ಕನ್ನು ಮಹಿಳೆಯರಿಗೆ ಕೊಡಮಾಡಿದರೂ ನಮ್ಮ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತಹ ಗಣನೀಯ ಬದಲಾವಣೆಗಳೇನು ಕಾಣಿಸದು, ಈಗಾಗಲೇ ಸಂವಿಧಾನದಲ್ಲಿ ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ಕೊಡಮಾಡಿದ ಈ ಸಂದರ್ಭದಲ್ಲೂ ಸಹ ಭೂಮಿಯ ಒಡೆತನ ಪುರುಷನ ಹೆಸರಿನಲ್ಲಿಯೇ ಇರುವುದನ್ನು ನಾವು ನೋಡುತ್ತೇವೆ.

ಕೃಷಿ ಕ್ಷೇತ್ರದಲ್ಲಿ ಭೂ ಒಡೆತನ ಹೊಂದಿದವರ ಸಂಖ್ಯೆಯನ್ನು ಗಮನಿಸಿದರೆ, ಭೂ ಒಡೆತನ ಹೊಂದಿದ ಪುರುಷರು ಅಧಿಕವಾಗಿಯೂ, ಮಹಿಳಾ ಭೂ ಒಡೆತನ ಹೊಂದಿದವರು ವಿರಳವಾಗಿರುವುದನ್ನು ಈ ಅಧ್ಯಯನದ ಮೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಸಂವಿಧಾನದಲ್ಲಿ ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ನೀಡಿ ೫೩ ವರ್ಷಗಳು ಕಳೆದರೂ ಸಹ ಅದು ವಾಸ್ತವದಲ್ಲಿ ಇನ್ನೂ ಕನಸಿನ ಮಾತಾಗಿಯೇ ಉಳಿದಿರುವುದು ಮಹಿಳೆಯರ ಪಾಲಿಗೆ ದುರಂತದ ಸಂಗತಿಯಾಗಿದೆ. ಒಂದು ವೇಳೆ ಆಸ್ತಿಯ ಅಥವಾ ಒಡೆತನದ ಹಕ್ಕು ಕೆಲವು ಮಹಿಳೆಯರಿಗೆ ದಕ್ಕಿದೆಯಾದರೂ ಅದು ಕೇವಲ ನಾಮಕಾವಸ್ಥೆಯದ್ದಾಗಿರುತ್ತದೆ. ಏಕೆಂದರೆ ಭೂ ಒಡೆತನವೇನೋ ಮಹಿಳೆಯರ ಹೆಸರಿನಲ್ಲಿರುತ್ತದೆ. ಆದರೆ ಅದರ ಮೇಲೆ ಯಾವುದೇ ಬಗೆಯ ನಿರ್ಣಯಾತ್ಮಕವಾದ ಹಕ್ಕು ಅವಳಿಗಿರದು, ಆಕೆಯ ಗಂಡ ಇಲ್ಲವೆ ಆಕೆಯ ಮಾವ, ಇಲ್ಲವೆ ಆಕೆಯ ಸಹೋದರರ ಅನುಕೂಲಕ್ಕೆ ತಕ್ಕಂತೆ ಆ ಭೂಮಿ ಅಥವಾ ಆಸ್ತಿ ಬಳಕೆಯಾಗುತ್ತದೆ.

ಇದೇ ಸಮುದಾಯದಲ್ಲಿ ಕೆಲವು ಕುಟುಂಬಗಳಲ್ಲಿ ಮಹಿಳೆಯ ಹೆಸರಿನಲ್ಲಿ ಆಸ್ತಿ ಇರುವುದೇನೋ ನಿಜ ಆದರೆ ಇದು ಮಹಿಳೆ ಆರ್ಥಿಕವಾಗಿ ಸಬಲಳಾಗಲಿ ಎಂದಾಗಲಿ ಅಥವಾ ಮಹಿಳೆಯ ಮೇಲಿನ ಇನ್ನಾವುದೇ ಕಾಳಜಿಯಿಂದಾಗಲಿ ಆಸ್ತಿಯನ್ನು ಅವಳ ಹೆಸರಿಗೆ ಮಾಡಿರುವಂತಹ ಕಾರಣಗಳಿಲ್ಲ.

ಅದರ ಹಿಂದಿರುವ ಹುನ್ನಾರವೇ ಬೇರೆಯಾಗಿರುತ್ತದೆ. ತುಂಬಾ ಶ್ರೀಮಂತ ಕುಟುಂಬಗಳಲ್ಲಿ ಆಸ್ತಿ ಅಧಿಕವಾಗಿರುವಾಗ ಸಹಜವಾಗಿ ಆಗ ಒಬ್ಬ ವ್ಯಕ್ತಿಯ ಹೆಸರಿನಲ್ಲಿಯೇ ಎಲ್ಲ ಆಸ್ತಿಯೂ ಇದ್ದರೆ ಸರಕಾರ ವಿಧಿಸಿದ ಆದಾಯ ಮಿತಿಗಿಂತ ಅಧಿಕವಾಗುತ್ತದೆ. ಅಂತಹ ಸಂಕಷ್ಟಗಳಿಂದ ಪಾರಾಗಲೂ ಪುರುಷರು ಮಾಡಿರುವಂತಹ ಪರ್ಯಾಯ ಮಾರ್ಗವೆಂದರೆ ಹೆಂಡತಿಯ ಹೆಸರಿನಲ್ಲೋ, ತಾಯಿಯ ಹೆಸರಿನಲ್ಲೋ ಆಸ್ತಿಯನ್ನು ವರ್ಗಾಯಿಸಲಾಗುತ್ತದೆ ಹೊರತು ತಮ್ಮ ಅಕ್ಕ-ತಂಗಿಯರ ಹೆಸರಿನಲ್ಲಿ ವರ್ಗಾಯಿಸಿರುವುದು ಕಂಡುಬರುವುದೇ ಇಲ್ಲ. ಏಕೆಂದರೆ ಅಕ್ಕ-ತಂಗಿಯರು ಪರರ ಮನೆಗೆ ಮದುವೆಯಾಗಿ ಹೋಗುವುದರಿಂದ ತನ್ನ ಹೆಂಡತಿ-ತಾಯಿಯರ ಹೆಸರಿನಲ್ಲಿ ವರ್ಗಾಯಿಸಲಾಗುತ್ತದೆ. ಹೀಗೆ ಆಸ್ತಿ ವರ್ಗಾಯಿಸುವುದರಿಂದ ಸರಕಾರ ವಿಧಿಸುವ ಆಸ್ತಿಯ ಮೇಲಿನ ಹೆಚ್ಚುವರಿ ತೆರಿಗೆಯಿಂದ ಮುಕ್ತವಾಗಬಹುದೆಂಬ ಉದ್ದೇಶದಿಂದ ಮಹಿಳೆಗೆ ಇಲ್ಲಿ ಒಡೆತನ ಸಿಕ್ಕಿರುತ್ತದೆಯೇ ಹೊರತು ಅದು ಮಹಿಳೆಗೆ ದೊರೆತ ನೈಜ ಒಡೆತನವಾಗಿರದೆ ಕೇವಲ ನಾಮಮಾತ್ರ ಒಡೆತನವಾಗಿರುತ್ತದೆ.

ಇನ್ನು ಕೆಲವು ಬೆರಳೆಣಿಕೆಯ ಕುಟುಂಬಗಳಲ್ಲಿ ಆಸ್ತಿಯು ಮಹಿಳೆಯರ ಹೆಸರಿನಲ್ಲಿರುವುದು ಈ ಭಾಗದಲ್ಲಿ ಕಂಡುಬರುತ್ತದೆ. ಇಲ್ಲೂ ಕೂಡ ಅಷ್ಟೇ ಮಹಿಳೆ ನಾಮಮಾತ್ರ ಒಡೆತನ ಹೊಂದಿದವಳಾಗಿದ್ದು ಅಧಿಕಾರ ಎಲ್ಲವೂ ಪುರುಷನಿಂದಲೇ ನಡೆಯುತ್ತಿರುತ್ತದೆ. ಸರಕಾರ ಕಾಲಕಾಲಕ್ಕೆ ಬಡ ಕೃಷಿಕರಿಗಾಗಿ ಕೊಡಮಾಡುವ ಬ್ಯಾಂಕ್ ಸಾಲ, ಅದರಲ್ಲಿ ಕೊಡುವ ಸಬ್ಸಿಡಿ..... ಇತ್ಯಾದಿ, ಈ ರೀತಿಯ ಸರಕಾರದ ಸೌಲಭ್ಯವನ್ನು ಪಡೆಯುವ ಉದ್ದೇಶದಿಂದ ಮಹಿಳೆಯರ ಹೆಸರಿಗೆ ಆಸ್ತಿಯನ್ನು ಮಾಡಿರುತ್ತಾರೆಯೇ ಹೊರತು ಬೇರಾವ ಕಾರಣಗಳಿಂದಲ್ಲ.

ಸಂವಿಧಾನ ಬದ್ಧವಾದ ಮಹಿಳೆಯರಿಗೆ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕಿದ್ದಾಗಲೂ ಮಹಿಳೆಯರ ಬದುಕಿನಲ್ಲಾಗಲಿ ಅವರ ಸ್ಥಿತಿಗತಿಗಳಲ್ಲಾಗಲಿ ಅಂತಹದ್ದೇನು ವಿಶೇಷವಾದ ಇಲ್ಲವೆ ಗುರುತರವಾದ ಪರಿವರ್ತನೆಯಾಗದೆ ಇದು ಮಹಿಳೆಯನ್ನು ಮತ್ತಷ್ಟು ಸಂಕಷ್ಟಕ್ಕೆ ಎಡೆಮಾಡಿದೆ. ಏಕೆಂದರೆ ಮಹಿಳೆಗೆ ಆಸ್ತಿಯಲ್ಲಿ ಪಾಲು ನೀಡಿ ಅವಳನ್ನು ಆರ್ಥಿಕವಾಗಿ ಸಬಲಳನ್ನಾಗಿ ಮಾಡಬೇಕೆಂಬ ಸಂವಿಧಾನದ ಆಲೋಚನೆಯೇನೋ ಒಳ್ಳೆಯದೆ. ಆದರೆ ಅದು ವಾಸ್ತವದಲ್ಲಿ ನಡೆಯುತ್ತಿರುವುದೇ ಬೇರೆಯಾಗಿದೆ.

ಕುಟುಂಬದಲ್ಲಿ ತಂದೆಯ ಸಾವಿನ ನಂತರ ಮದುವೆಯಾಗಿ ಹೋದ ಹೆಣ್ಣು ಮಕ್ಕಳು ತಮ್ಮ ಸಹೋದರರಲ್ಲಿ ಆಸ್ತಿಯನ್ನು ಕೇಳುವುದರಿಂದ ಅನೇಕ ಸಂಬಂಧಗಳು ಒಡೆದು ಹೋಗುತ್ತಿವೆ. ಅಂದರೆ ಇಲ್ಲಿ ಆ ಮಹಿಳೆ ಆಸ್ತಿಯನ್ನು ಪಡೆದುಕೊಳ್ಳಬೇಕೋ ಇಲ್ಲವೆ ತನ್ನ ತವರಿನ ಸಂಬಂಧವನ್ನು ಉಳಿಸಿಕೊಳ್ಳಬೇಕೋ ಎನ್ನುವ ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಅವಳೇನಾದರೂ ಆಸ್ತಿಯಲ್ಲಿ ಪಾಲು ತೆಗೆದುಕೊಂಡರೆ ತನ್ನ ತವರಿನ ಸಂಬಂಧಿಕರನ್ನು ದೂರಮಾಡಿಕೊಳ್ಳಬೇಕಾದ ಪರಿಸ್ಥಿತಿಗಳೇ ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಆಸ್ತಿಯ ಹಕ್ಕಿನಲ್ಲಿ ಮಹಿಳೆಗೆ

ಕೊಡಮಾಡಿದ ಅವಕಾಶ, ಮದುವೆಯಾದ ಮಹಿಳೆಯ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತದೆ. ಇತ್ತ ಗಂಡನ ಮನೆಯ ಕಡೆಯವರು ತವರು ಮನೆಯಿಂದ ಆಸ್ತಿಯನ್ನು ಮಾರಾಟ ಮಾಡಿ ಬಾ ಎಂದು ಹಿಂಸಿಸುವಂತಹದ್ದು, ಅತ್ತ ಆಸ್ತಿಯನ್ನು ಮಾರಾಟ ಮಾಡಿದರೆ ತನ್ನ ತವರಿನ ಸಂಬಂಧಗಳನ್ನು ಕಡಿದುಕೊಳ್ಳಬೇಕಾದಂತಹ ಅಥವಾ ಸಹೋದರರ ವರ್ಗದವರಿಂದ ಆರೋಪಕ್ಕೆ ಒಳಗಾಗುವಂತಹ ಪರಿಸ್ಥಿತಿ ಮಹಿಳೆಯರು ಎದುರುಗೊಳ್ಳುತ್ತಾರೆ. ತಂದೆಯ ಆಸ್ತಿಯಲ್ಲಿ ಭಾಗ ಮಾಡಿದ ಭೂಮಿ ಮಾರಾಟ ಮಾಡಿದರೆ ತವರಿನಿಂದ ದೂರಾಗುತ್ತಾರೆ. ಆಸ್ತಿಯ ಹಣ ತರದಿದ್ದರೆ. ಗಂಡನ ಕಡೆಯವರು ದೂರ ಮಾಡಿಕೊಂಡು ಅನಾಥವಾಗಬೇಕು ಎನ್ನುವಂತಹ ಭಯ ಬಂದೊದಗುತ್ತದೆ. ಅಂದರೆ ಮಹಿಳೆಗೆ ಹಕ್ಕುಗಳನ್ನು ಕೊಡಮಾಡಿದಾಗರೂ ಅವುಗಳನ್ನು ಪಡೆದುಕೊಳ್ಳಲಾಗದ ಮತ್ತು ಅನುಭವಿಸಲಾಗದ ಸಂಧಿಗ್ಧತೆಯಲ್ಲಿ ಮಹಿಳೆ ಇರುವಳು.

೫.೩.೧. ಆರ್ಥಿಕ ಕ್ಷೇತ್ರದಲ್ಲಿನ ಮಹಿಳಾ ಒಡೆತನ ಮತ್ತು ಸಾಮಾಜಿಕ ಅಭಿಪ್ರಾಯ

ಕೃಷಿಯಲ್ಲಿ ಮಹಿಳೆ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಂಡಿದ್ದೆಯಾದ ಸಂದರ್ಭದಲ್ಲಿ ಸಮಾಜ ಅಂತಹದ್ದನ್ನು ಸಹಜವಾಗಿ ಪರಿಗಣಿಸುವುದಿಲ್ಲ. ಸಮಾಜ ಅವರನ್ನು ವಿಶೇಷವಾದ ದೃಷ್ಟಿಯಿಂದಲೇ ಗಮನಿಸುತ್ತಿರುತ್ತದೆ. ಮಹಿಳೆಯ ಒಡೆತನದಲ್ಲಿ ಮಾಡುವ ಕೃಷಿಯ ಬಗೆಗೆ ಸಮಾಜಕ್ಕೆ ಒಳ್ಳೆಯ ಅಭಿಪ್ರಾಯವಿದ್ದಂತೆ ಕಾಣಿಸದು. ಅಂತಹ ಒಡೆತನ ಬಗೆಗೆ ಜನರಿಗೆ ಅಸಹನೆ ಇದೆ. ಆ ಕಾರಣಕ್ಕಾಗಿಯೇ ಒಡೆಯನಿಲ್ಲದ ಭೂಮಿ ಕೆಡುಕಿಗೆ ಕಾರಣ ಎನ್ನುವಂತಹ ನಂಬಿಕೆಯೊಂದು ಜನಸಾಮಾನ್ಯರಲ್ಲಿರುವುದು ನಾವು ಕಾಣುತ್ತೇವೆ. ಪರೋಕ್ಷವಾಗಿ ಇದು ಭೂ ಒಡೆತನ ವಿಷಯದಲ್ಲಿ ಪುರುಷನಿಗೆ ಪ್ರಾಶಸ್ತ್ಯಕೊಟ್ಟಿರುವುದು ತಿಳಿದುಬರುತ್ತದೆ. ಅಲ್ಲದೆ ಒಡೆಯನಿಲ್ಲದಿದ್ದರೆ ಭೂಮಿ ಕೆಡುಕಿಗೆ ಕಾರಣವಾಗುತ್ತದೆ ಎನ್ನುವ ಮಾತಲ್ಲಿ ಭೂಮಿ ಒಡೆಯನ ಅನುಪಸ್ಥಿತಿಯಲ್ಲಿ ಆತನ ಹೆಂಡತಿ ಇಲ್ಲವೆ ಆಳುಕಾಳುಗಳ ಕೈ ಸೇರುತ್ತದೆ. ಹಾಗೆ ಒಡೆಯನ ಮುತುವರ್ಜಿಯಿಂದ ದೂರವಾದ ಭೂಮಿ ನಾಶವಾಗುತ್ತದೆ ಎಂಬುದನ್ನು ಇದು ತಿಳಿಸುತ್ತದೆ. ಒಂದರ್ಥದಲ್ಲಿ ಇದು ಮಹಿಳಾ ಒಡೆತನಕ್ಕೂ ಅನ್ವಯಿಸುವ ಮಾತಾಗಿದೆ. ಇದರಿಂದ ಮಹಿಳಾ ಒಡೆತನ ಇರುವ ಭೂಮಿಯ ಬಗೆಗೆ ಸಮಾಜದ ಧೋರಣೆ ಎಂತಹದ್ದು ಎಂಬುದು ತಿಳಿದುಬರುತ್ತದೆ. ಮಹಿಳೆಯ ನೇತೃತ್ವದಲ್ಲಿ ವ್ಯವಸಾಯ ಮಾಡಲ್ಪಡುತ್ತಿದ್ದರೆ ಅಂತಹ ಮನೆಯ ಕೃಷಿ ಇನ್ನೇನು ಏಳಿಗೆ ಆಗೊಲ್ಲ ನೆಲಕಚ್ಚಿ ಹೋಗುತ್ತದೆ ಎನ್ನುವ ರೀತಿಯಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸುವವರನ್ನು ನಾವು ಈಗಲೂ ಕಾಣುತ್ತೇವೆ.

ಒಟ್ಟಿನಲ್ಲಿ ಮಹಿಳೆ ಪುರುಷ ಹಿಡಿತದಿಂದ ಮುಕ್ತವಾಗುವ ಬಗೆಗೆ ಆರ್ಥಿಕವಾಗಿ ಸಬಲಳಾಗುವ ಬಗೆಗೆ ಸಮುದಾಯದ ವಿರೋಧವಿದ್ದಂತೆ ಕಾಣುತ್ತದೆ. ಆ ಕಾರಣಕ್ಕೆ ಆಸ್ತಿಯನ್ನು ಮಹಿಳೆಗೆ ಬಿಟ್ಟುಕೊಡಬೇಕಾಗಿ ಬಂದ ಕೆಲವು ಅನಿವಾರ್ಯ ಸಂದರ್ಭಗಳಲ್ಲೂ ಅನೇಕ ವಾದ-ವಿವಾದಗಳು ಉದ್ಭವಿಸುತ್ತವೆ. ಆಸ್ತಿಯ ಒಡೆತನದ ಹಕ್ಕನ್ನು ಮಹಿಳೆಗೆ ಕೊಡಮಾಡಿದಾಗಲೂ ಅದನ್ನು

ತನ್ನಿಚ್ಛೆಯಂತೆ ತನ್ನ ಸಬಲೀಕರಣಕ್ಕಾಗಿ ಬಳಸುವ ನಿಜವಾದ ಅಧಿಕಾರವನ್ನು ಮಹಿಳೆಗೆ ಪುರುಷ ಪ್ರಧಾನ ವ್ಯವಸ್ಥೆ ಇನ್ನೂ ಕಲ್ಪಿಸಿರುವುದಿಲ್ಲ. ಹಾಗಾಗಿ ಮಹಿಳೆಯರ ಬಗೆಗಿನ ನಮ್ಮ ಸಾಮಾಜಿಕ ನಿಲುವುಗಳು, ಮೌಲ್ಯಗಳು ಬದಲಾಗದ ಹೊರತು ಇಂತಹ ನೂರೆಂಟು ಕಾಯ್ದೆಗಳು ಬಂದರೂ ಮಹಿಳೆಯ ಸ್ಥಿತಿಗತಿಗಳು ಬದಲಾಗುವುದು ಸಂದೇಹವೇ ಆದರೂ ಮಹಿಳೆಯರಿಗೆ ಸಂವಿಧಾನ ಬದ್ಧವಾಗಿಯಾದರೂ ಆಸ್ತಿಯ ಹಕ್ಕನ್ನು ಕೊಡಮಾಡಿದ್ದು ಪ್ರಶಂಸನಾರ್ಹವೇ ಸರಿ. ಕೊನೆ ಪಕ್ಷ ಮಹಿಳೆ ಕುಟುಂಬದಲ್ಲಿ ತನ್ನ ಅಸ್ತಿತ್ವ ಕಳೆದುಕೊಳ್ಳಬೇಕಾದ ಸಂದರ್ಭದಲ್ಲಿ ಆಸ್ತಿಯಲ್ಲಿ ತನ್ನದು ಹಕ್ಕಿದೆ ಎಂದು ಧ್ವನಿಯೆತ್ತುವುದಕ್ಕಾದರೂ ಕಾನೂನು ಸಹಾಯಕವಾಗಿದೆ. ಅಲ್ಲದೆ ಭೂ ಒಡೆತನ ಹೊಂದಿದ ಮಹಿಳೆಯರೆಲ್ಲರೂ ಸಂಪೂರ್ಣವಾಗಿ ಅದರ ಲಾಭ ಪಡೆಯುತ್ತಿಲ್ಲ ಎಂದು ಹೇಳಲಿಕ್ಕಾಗದು. ಏಕೆಂದರೆ ಕೆಲವು ವಿಧವೆಯರ ಬಾಳಿಗೆ ಈ ಆಸ್ತಿಯ ಹಕ್ಕು ಇರುವುದು ಆಶಾಕಿರಣವಾಗಿದೆ. ಗಂಡನನ್ನು ಕಳೆದುಕೊಂಡು ನಿರ್ಗತಿಕರಾಗಿರುವ ಇಲ್ಲವೆ ಪರಾವಲಂಬಿಗಳಾಗಿ ಬದುಕು ಸಾಗಿಸಬೇಕಾದ ಅನಿವಾರ್ಯತೆಯನ್ನು ತಪ್ಪಿಸಿ ಅವರು ಸಹ ಸಮಾಜದಲ್ಲಿ ಇತರರಂತೆ ಸ್ವಾವಲಂಬಿಗಳಾಗಿ ಬದುಕುವುದಕ್ಕೆ ದಾರಿ ಮಾಡಿಕೊಟ್ಟಿರುವ ನಿದರ್ಶನಗಳು ಸಹ ನಮ್ಮ ನಡುವಿರುವುದನ್ನು ಕಾಣುತ್ತೇವೆ.

ಭೂಮಿ ಮೇಲಿನ ಒಡೆತನದ ಸಂದರ್ಭದಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವ ಪುರುಷ ವರ್ಗ ದುಡಿಮೆಯ ವರ್ಗಕ್ಕೆ ಬಂದಾಗ ಏಕೆ ಅವರ ಸಂಖ್ಯೆ ಗೌಣವಾಗುತ್ತದೆ ನಮ್ಮದು ಪುರುಷ ಪ್ರಧಾನ ವ್ಯವಸ್ಥೆಯಾಗಿದ್ದರಿಂದ ಮಹಿಳೆಗೆ ಸಿಗುವ ಆದ್ಯತೆ ಕೌಟುಂಬಿಕ ವಲಯದಲ್ಲಿರಬಹುದು, ಇಲ್ಲವೆ ಸಾಮಾಜಿಕ ವಲಯದಲ್ಲಾಗಿರಬಹುದು ಅದು ಪುರುಷನ ಆದ್ಯತೆಯ ನಂತರದ್ದು, ಹಾಗಾಗಿಯೇ ವ್ಯವಸ್ಥೆಗೆ ಪುರುಷರ ಹಿತಾಸಕ್ತಿ, ಪುರುಷರ ಸೌಖ್ಯ, ಪುರುಷರ ಯೋಗಕ್ಷೇಮ ಮುಖ್ಯವಾಗುತ್ತದೆಯೇ ಹೊರತು ಮಹಿಳೆಯರ ಬಗೆಗಲ್ಲ. ಹಾಗಾಗಿ ಎಲ್ಲಿ ದುಡಿಮೆಯ ನಿರಂತರತೆ, ದುಡಿಮೆಯ ಏಕತಾನತೆ ಇದ್ದು ಅಧಿಕವಾಗಿ ಭೌತಿಕ ಶ್ರಮವನ್ನು, ವಿನಿಯೋಗ ಮಾಡಬೇಕಾಗುತ್ತೋ ಅಲ್ಲಿ ಪುರುಷರ ಪಾಲುದಾರಿಕೆ ಕಡಿಮೆ ಇರುತ್ತದೆ. ಎಲ್ಲಿ ಸುಲಭವಾಗಿ ಲಾಭ, ಹೆಗ್ಗಳಿಕೆ ದೊರೆಯುತ್ತದೆ, ಎಲ್ಲಿ ಸುಲಭವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆಯೋ ಅಲ್ಲಿ ಪುರುಷನ ಪಾಲುದಾರಿಕೆಯ ಅಧಿಕವಾಗಿರುತ್ತದೆ. ಹಾಗಾಗಿಯೇ ದುಡಿಯುವ ವರ್ಗದಲ್ಲಿ ವಿರಳವಾಗಿದ್ದ ಪುರುಷರ ಪಾಲುದಾರಿಕೆಯ ಸಂಖ್ಯೆ ಅಧಿಕಾರ ಆಸ್ತಿಯ ಮೇಲಿನ ಒಡೆತನ ಸಂದರ್ಭಕ್ಕೆ ಬಂದಾಗ ಅಧಿಕವಾಗಿರುವುದು ಕಂಡುಬರುತ್ತದೆ.

ಸ್ವಂತ ಭೂ ಹಿಡುವಳಿ ಹೊಂದಿದ ಕುಟುಂಬಗಳಲ್ಲಿ ಪುರುಷನಂತೆ ಮಹಿಳೆಯೂ ಕೂಡ ಕೃಷಿ ಕಾರ್ಯಗಳಲ್ಲಿ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ತೊಡಗಿಕೊಂಡಿದ್ದರೂ ಒಡೆತನದ ವಿಷಯದಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ತಾರತಮ್ಯ ಇರುವುದು ತಿಳಿದುಬರುತ್ತದೆ ಮತ್ತು ಕೃಷಿಯಲ್ಲಿ ದುಡಿಯುವ ವರ್ಗಕ್ಕೆ ಬಂದಾಗ ಮಹಿಳೆಯ ಪಾಲುದಾರಿಕೆ ಅಧಿಕವಾಗಿದ್ದನ್ನು ಕಾಣುತ್ತೇವೆ. ಇದರಿಂದ

ಸಮುದಾಯದಲ್ಲಿ ಮಹಿಳೆಯ ಸ್ಥಿತಿ ಯಾವ ರೀತಿಯದು ಎಂಬುದು ತಿಳಿದುಬರುತ್ತದೆ. ಅಲ್ಲದೆ ಕೃಷಿ ವಲಯದಲ್ಲಿ ದುಡಿಯುವ ವರ್ಗದ ಮಹಿಳೆಯರ ಪ್ರಮಾಣ ಹೆಚ್ಚಾಗಿರುವುದರಿಂದ ಮಹಿಳೆಯರನ್ನು ಅತ್ಯಂತ ಕಡಿಮೆ ಕೂಲಿಗೆ ದುಡಿಸಿಕೊಳ್ಳಲಾಗುವುದು. ಅದು ಕೂಡಾ ಮಹಿಳಾ ದುಡಿಮೆಗಾರರ ಶೋಷಣೆಯೇ ಆಗಿದೆ.

ಒಟ್ಟಾರೆ ಕೃಷಿಯಲ್ಲಿ ಮಹಿಳೆ ಬೀಜ ಬಿತ್ತನೆಯಿಂದ ಹಿಡಿದು ಕೊಯ್ಲಿನವರೆಗಿನ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡಿದ್ದಾಗಲೂ ಕೊನೆಗೆ ಹೊಲ ಮಾಡಿದ ಹೆಗ್ಗಳಿಕೆ ಪುರುಷನಿಗೆ ಸಲ್ಲುತ್ತದೆ. ಮಹಿಳೆ ಹಿನ್ನೆಲೆಗೆ ಸರಿಯಲ್ಪಟ್ಟಿದ್ದಾಳೆ. ಕೇವಲ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಅಂದರೆ ಪುರುಷನ ಅನುಪಸ್ಥಿತಿಯಲ್ಲಿ ಮಾತ್ರ ಕೃಷಿಯಲ್ಲಿ ಮಹಿಳೆ ಮುಖ್ಯವಾಹಿನಿಗೆ ಬರುವಳು. ಭೂಮಿಯ ಮೇಲಾಗಲಿ, ಬೆಳೆದ ಬೆಳೆಯ ಮೇಲಾಗಲಿ ಅವಳಿಗೆ ಯಾವುದೇ ರೀತಿಯ ಅಧಿಕಾರವಿರುವುದಿಲ್ಲ. ತಾನು ದಿನವೂ 'ನಮ್ಮ ಹೊಲ' ಅಥವಾ 'ಮನಿ ಹೊಲ' ಎಂದು ಮೈಮುರಿದು ದುಡಿಯುವ ಹೊಲ ಅಥವಾ ಹೊಲದ ರೂಪದ ಆಸ್ತಿ ವಾಸ್ತವವಾಗಿ ಅವಳದಾಗಿರುವುದಿಲ್ಲ. ಹೊಲದ ಮತ್ತು ಹೊಲದ ಉತ್ಪನ್ನಗಳ ಮೇಲೆ ಅವಳಿಗೆ ಅಧಿಕಾರಯುತವಾದ ಹಕ್ಕಿರುವುದಿಲ್ಲ. ಅಂದರೆ ಮಹಿಳೆ ಹೊಲದಲ್ಲಿ ಕೆಲಸ ಮಾಡುವ ಕೆಲಸಗಾರಳು ಮಾತ್ರವೇ ಆಗಿದ್ದಾಳೆ. ಆ ಭೂಮಿಯ ಒಡೆತನ ಅಥವಾ ಆ ಹೊಲ (ಆಸ್ತಿ) ಇರುವುದು ಅವಳ ಗಂಡನ ಹೆಸರಿನಲ್ಲೋ ಇಲ್ಲವೆ ಗಂಡನ ತಂದೆಯ ಹೆಸರಿನಲ್ಲಿಯೋ ಇರುತ್ತದೆ. ಅವರ ನಂತರ ಆ ಭೂಮಿ ಅವಳ ಮಗನ ಹೆಸರಿಗೆ ವರ್ಗಾಯಿಸಲ್ಪಡುತ್ತದೆ. ಹೀಗೆ ಹೊಲದ ಮೇಲಿನ ಒಡೆತನವೆಲ್ಲವೂ ಬಹುಪಾಲು ಪುರುಷನಿಗೇ ಸಂಬಂಧಿಸಿರುತ್ತದೆ. ಹಾಗಾಗಿ ಭೂ ಒಡೆತನಕ್ಕೆ ಸಂಬಂಧಿಸಿದ ವಿಚಾರಗಳ ಹಿಂದೆ ಪುರುಷ ರಾಜಕಾರಣವಿದೆ. ಮಹಿಳೆಗೆ ಆಸ್ತಿಯಲ್ಲಿ ಪಾಲನ್ನು ಕೊಡುವುದರಿಂದ ಅವಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ತನಗಿಂತ ಉತ್ತಮವಾಗಿ ತನ್ನ ಸ್ಥಾನಮಾನಗಳೆಲ್ಲಿ ಕಡಿಮೆಯಾಗುತ್ತದೊ ಎನ್ನುವ ಆತಂಕ ಈ ಪುರುಷ ವ್ಯವಸ್ಥೆಯದು. ಮಹಿಳೆ ಆರ್ಥಿಕವಾಗಿ ಪ್ರಬಲವಾದರೆ ಎಲ್ಲಿ ಅವಳ ಮೇಲಿನ ತನ್ನ ನಿಯಂತ್ರಣ, ಹಿಡಿತ ಕೈತಪ್ಪಿ ಹೋಗುತ್ತದೋ ಎನ್ನುವ ಹಿನ್ನೆಲೆಯಿಂದಲೇ ಹಿಂದೆ ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ನಿರಾಕರಿಸಲಾಗಿತ್ತು. ಇಂದು ಮಹಿಳೆಯರಿಗೆ ಆಸ್ತಿ ಹಕ್ಕು ನೀಡಿದ್ದರೂ ಅದು ಕೂಡ ಸಂಪೂರ್ಣವಾಗಿ ಪುರುಷ ನಿಯಂತ್ರಣದಿಂದ ಮುಕ್ತಗೊಂಡಿರುವುವಂತಹದ್ದೇನಲ್ಲ. ಇದನ್ನೆಲ್ಲ ಗಮನಿಸಿದರೆ ಕೃಷಿಭೂಮಿ ಒಡೆತನದಲ್ಲಿ ಮಹಿಳೆಯ ಪಾತ್ರ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವ ರೀತಿಯದು.

ಅಡಿಟಿಪ್ಪಣಿಗಳು

೧. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ೨೦೦೫, ಪುಟ.೧೮೮.

೨. ಅದೇ ಪುಟ.೧೮೯.

೩. ಅದೇ ಪುಟ.೧೯೮.

೪. ಅಂಜಿನಪ್ಪ ಬಿ.ಹೆಚ್., ಮಹಿಳೆ ಮತ್ತು ದುಡಿಮೆ, ೨೦೦೬, ಪುಟ.೪೩

೫. ಮಂಜುನಾಥ ಬೇವಿನಕಟ್ಟಿ, ಆದಿವಾಸಿ, ೨೦೦೮, ಪುಟ.೪೫

೬. ತಿಳುವಳಿಕೆದಾರರ. ಮಾಹಿತಿ. ರಂಗಪ್ಪ ಸಿಂಧನೂರು.

೭. ಮಂಜುನಾಥ ಬೇವಿನಕಟ್ಟಿ, ೨೦೦೮, ಆದಿವಾಸಿ, ಪುಟ.೪೮.

೮. ಅದೇ ಪುಟ.೪೮.

೯. ತಿಳುವಳಿಕೆದಾರರ ಮಾಹಿತಿ. ಭೀಮಪ್ಪ ದೊರೆ, ಸುರಪುರ

೧೦. ತಿಳುವಳಿಕೆದಾರರ ಮಾಹಿತಿ. ವೆಂಕಟೇಶ ನಾಯಕ, ಜೇವರ್ಗಿ.

೧೧. ಮೈತ್ರೇಯಿ ಮುಖ್ಯೋಪಾಧ್ಯಾಯ, ಬೆಳ್ಳಿಯ ಸಂಕೋಲೆಗಳು (ಅನು) ವೈದೇಹಿ, ೧೯೮೫, ಪುಟ.೫೬.

೧೨. ಸುಮಂಗಲ ಅತ್ತಿಗೇರಿ, ಕೃಷಿ ಜಾನಪದ ಮತ್ತು ಮಹಿಳೆ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೭, ಪುಟ.೧೧೮.

೧೩. ಯೋಜನಾ ಪತ್ರಿಕೆ, ಮಾಸಿಕ, ಜುಲೈ, ೨೦೦೬, ಪುಟ.೧೬-೧೭.

೧೪. ಅದೇ ಪುಟ. ೧೬-೧೭

೧೫. ವಂದನಾಶಿವ, ಬತ್ತದ ಚಿಲುಮೆ (ಅನು) ಮಾಧವಐತಾಳ, ೨೦೦೫, ಪುಟ.೨೩.

೧೬. ತಿಳುವಳಿಕೆದಾರರ ಮಾಹಿತಿ. ನಾಗಮ್ಮ ಯಾದಗಿರಿ

೧೭. ಟಿ.ಆರ್.ಚಂದ್ರಶೇಖರ, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ೨೦೦೧, ಪುಟ.೨೯.

೧೮. ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೧೯೯೫, ಪುಟ.೮೭.

೧೯. ತಿಳುವಳಿಕೆದಾರರ ಮಾಹಿತಿ. ಶಾಂತಮ್ಮ, ಯಲಬುರ್ಗಾ

೨೦. ತಿಳುವಳಿಕೆದಾರರ ಮಾಹಿತಿ. ಸಾವಿತ್ರಿ, ಕುಷ್ಟಗಿ

೨೧. ತಿಳುವಳಿಕೆದಾರರ ಮಾಹಿತಿ. ಸುವರ್ಣ, ಗುಲಬರ್ಗಾ

೨೨. ಅಂಜಿನಪ್ಪ ಬಿ.ಹೆಚ್., ಮಹಿಳೆ ಮತ್ತು ದುಡಿಮೆ, ೨೦೦೬, ಪುಟ.೧೯.

೨೩. ತಿಳುವಳಿಕೆದಾರರ ಮಾಹಿತಿ. ವಿಜಯಲಕ್ಷ್ಮಿ, ಗಂಗಾವತಿ

೨೪. ತಿಳುವಳಿಕೆದಾರರ ಮಾಹಿತಿ. ಕನಕಾಚಲ, ಕನಕಗಿರಿ

೨೫. ತಿಳುವಳಿಕೆದಾರರ ಮಾಹಿತಿ. ತಿಮ್ಮವ್ವ. ಮಾನವಿ

೨೬. ಹಾಲತಿ ಸೋಮಶೇಖರ, ಸ್ತ್ರೀಪರ, ೨೦೦೮, ಪುಟ. ೨೬ ರಿಂದ ೨೭.

ಅಧ್ಯಾಯ ಆರು

ವರ್ತಮಾನದಲ್ಲಿ ಬೇಡ ಸಮುದಾಯ ಮಹಿಳೆ

೬.೧. ವರ್ತಮಾನದ ಮಹಿಳಾ ಸವಾಲುಗಳು

೬.೨. ವರ್ತಮಾನದಲ್ಲಿ ಮಹಿಳೆಯ ಸ್ಥಿತ್ಯಂತರ

೬.೩. ಮಹಿಳೆಯರ ಅಭಿವೃದ್ಧಿ ಮತ್ತು ಸರಕಾರದ ಕಾರ್ಯಕ್ರಮಗಳು

ಮಾನವನ ಪ್ರಾರಂಭದ ಅವಧಿಯಿಂದಲೂ ಸ್ತ್ರೀ ಪುರುಷರಿಬ್ಬರೂ, ಒಂದಿಲ್ಲೊಂದು ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದಿರುವರು. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆಯೊಳಗಡೆ ಕೆಲಸದ ಪರಿಕಲ್ಪನೆ ಒಂದು ನಿರ್ದಿಷ್ಟ ಯೋಚನಾ ಕ್ರಮಕ್ಕೆ ಅನುಗುಣವಾಗಿದ್ದು, ಅದರಲ್ಲಿ ಹೆಣ್ಣು ಮಾಡುವ ಕೆಲಸಗಳು, ಗಂಡು ಮಾಡುವ ಕೆಲಸಗಳು ಎಂದು ವರ್ಗೀಕರಿಸಲ್ಪಟ್ಟಿದೆ, ಅಂತೆಯೇ ಪ್ರಾಚೀನ ಕಾಲದಿಂದಲೂ ರೂಢಿಸಿಕೊಂಡು ಬಂದ ವೃತ್ತಿಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗಿಯಾಗಿದ್ದಾರೆ ಎಂಬುದು ಸಾಮಾನ್ಯವಾದ ಸಂಗತಿಯಾಗಿದೆ. ಮತ್ತು ಮಹಿಳೆಯರಿಂದಲೇ ಆರಂಭವಾಯಿತೆನ್ನಲಾದ ಕೃಷಿ ಇಂದು ತನ್ನ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆ ಹೊಂದಿದೆ.

ಆರಂಭದಿಂದ-ಇಂದಿನವರೆಗೆ ಕೃಷಿ ನಿರಂತರವಾಗಿ ಕಾಲದ ಜೊತೆ ಎದುರುಗೊಳ್ಳುತ್ತಲೆ ತನ್ನ ಮೂಲ ಸ್ವರೂಪದಲ್ಲಿ ಆಯಾ ಕಾಲಕ್ಕೆ ಅನುಗುಣವಾಗಿ ಅಗತ್ಯವೆನಿಸಿದಂತೆ ಪರಿವರ್ತನೆಗಳನ್ನು ಮೈಗೂಡಿಸಿಕೊಂಡು, ಹಲವು ರೀತಿಯ ಸ್ಥಿತ್ಯಂತರಗಳಿಗೆ ಒಳಗಾಗಿದೆ. ಈ ರೀತಿಯ ಕಾಲದೊಂದಿಗೆ ಅನುಸಂದಾನ ಮತ್ತು ಮುಖಾ ಮುಖಿಯಿಂದ ಮೂಲ ವೃತ್ತಿ ಮತ್ತು ಪರಿಸರದಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಆರನೇ ಅಧ್ಯಾಯದಲ್ಲಿ ಇವತ್ತಿನ ಸಂದರ್ಭದಲ್ಲಿ ಸಾಮಾಜಿಕ ವಲಯದಲ್ಲಿ ಮಹಿಳೆಯ ಪಾಲುದಾರಿಕೆಯ ಸ್ವರೂಪ ಯಾವ ರೀತಿಯದ್ದಾಗಿದೆ. ಯಾವ ತರಹದ ಸಮಸ್ಯೆಗಳು ಎದುರಾಗಿವೆ. ಅದರ ಹಿಂದಿರುವ ತಾತ್ವಿಕ ಹಿನ್ನಲೆ ಏನು-? ಎಂಬುದನ್ನು ಅರಿತುಕೊಳ್ಳುವ ಮತ್ತು ಬುಡಕಟ್ಟು ಮಹಿಳೆಯ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಆಧುನಿಕತೆಯು ಒಟ್ಟು ಆದಿವಾಸಿ ಮಹಿಳೆಯ ಮೇಲೆ ಯಾವ ರೀತಿಯ ಪರಿಣಾಣ ಬೀರಿದೆ? ಸ್ತ್ರೀ ಜೀವನದ ಮೇಲಾಗಿರುವ ಪರಿಣಾಮ ಯಾವ ಬಗೆಯದು ಮತ್ತು ಆಧುನಿಕತೆಯಿಂದ ಮಹಿಳಾ ಸ್ಥಾನಮಾನದ ಮೇಲಾದ ಪರಿಣಾಮವೇನು ಹಾಗೂ ಮಹಿಳಾ ಸಾಂಸ್ಕೃತಿಕ ಪರಿಸರದಲ್ಲಾದ ಪಲ್ಲಟಗಳೇನು ಎಂಬ ವಿಷಯದ ಹರಹುವನ್ನು ಇದು ಒಳಗೊಂಡಿದೆ, "ಕೃಷಿಯಲ್ಲಿ ಆಧುನಿಕ ತಂತ್ರ ಜ್ಞಾನದ ಬಳಕೆಯಿಂದ ಮಹಿಳೆ ಕೃಷಿ ವಲಯದಿಂದ ದೂರ ಸರಿಯುತ್ತಿದ್ದಾಳೆ ಎನ್ನುವ ಕೂಗು

ಕೇಳಿಬರುತ್ತಿದೆ. ಇದು ನಿಜವೇ-? ನಿಜವಾಗಿದ್ದರೆ ಏಕೆ ಕೃಷಿ ವಲಯದಿಂದ ಮಹಿಳೆಯನ್ನು ದೂರ ವಿರಿಸಲಾಗುತ್ತಿದೆ ಎನ್ನುವುದನ್ನು ಪ್ರಮುಖವಾಗಿ ಚರ್ಚಿಸಲಾಗಿದೆ. ಮಹಿಳೆಯ ಬೆನ್ನೆರಳಂತೆ ಬಹುದೀರ್ಘ ಕಾಲದಿಂದಲೂ ಮುಂದುವರಿದುಕೊಂಡು ಬಂದಿರುವ ಲಿಂಗತಾರತಮ್ಯವೊಂದು, ಮನುಷ್ಯ ಉಳಿದೆಲ್ಲ ಪ್ರಾಣಿಗಳಿಗಿಂತ ಭಿನ್ನ ಹಾಗೂ ಶ್ರೇಷ್ಠ ಪ್ರಾಣಿ ಎಂದು ತನ್ನಷ್ಟಕ್ಕೆ ತಾನೇ ಅಂದುಕೊಂಡಿರುವನು. ಉಳಿದೆಲ್ಲ ಪ್ರಾಣಿ ಪಕ್ಷಿಗಳಿಗಿಂತ ಅವನು ಭಿನ್ನವಾಗಲು ಕಾರಣಗಳು ಹಲವಾರು. ಭಾಷೆ ಸಂಸ್ಕೃತಿ ಇತ್ಯಾದಿಗಳಿಂದಾಗಿ ತಾನು ಶ್ರೇಷ್ಠ ಎಂದುಕೊಂಡಿರುವ ಮಾನವ (ಪುರುಷ) ಈ ವಿಶ್ವದಲ್ಲಿರುವ ಎಲ್ಲವೂ ತನಗಾಗಿಯೇ ಸೃಷ್ಟಿಯಾಗಿದೆ. ಇದೆಲ್ಲಕ್ಕೂ ತಾನೇ ಒಡೆಯ ಎನ್ನುವಂತಹ ಭಾವನೆಯನ್ನು ಬೆಳೆಸಿಕೊಂಡಿರುವುದು ಕಂಡುಬರುತ್ತದೆ".[9] ಇದರಿಂದ ಪುರುಷ ವಿಶ್ವದ್ಯಾಂತ ಸ್ತ್ರೀಯನ್ನು ಎರಡನೇ ದರ್ಜೆಯ ಪ್ರಜೆಯಾಗಿಯೇ ಕಂಡಿರುವುದು ಕಾಣುತ್ತಿರುವುದು ಸತ್ಯ ಸಂಗತಿ.

ಇಂದಿನ ವೈಜ್ಞಾನಿಕ ಹಾಗೂ ವೈದ್ಯಕೀಯ ಸೌಕರ್ಯಗಳೂ ಸಹ ಹೆಣ್ಣುಮಗು ಗರ್ಭದಲ್ಲಿರುವಾಗಲೇ ಲಿಂಗಬೇದ ನೀತಿಗೆ ಬಲಿಪಶುವಾಗಿಸುತ್ತಿವೆ. ಈ ನಿಟ್ಟಿನಲ್ಲಿ ಲಿಂಗಬೇಧ ನೀತಿಗೆ ಪೋಷಣೆಯನ್ನು ನೀಡುತ್ತಿವೆ. ಇಂತಹ ದುಷ್ಟಕಾರ್ಯಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾವಿರಾರು ಹೆಣ್ಣು ಶಿಸುಗಳನ್ನು ಕಣ್ಣು ಬಿಡುವ ಮುನ್ನವೇ, ಭೂಮಿಗೆ ಬರುವ ಮುನ್ನವೇ ಬರ್ಬರ ಹತ್ಯೆಗೆ ಒಳಗಾಗುತ್ತಿವೆ. ಅದೇ ಬಡ ಬುಡಕಟ್ಟು ಕುಟುಂಬಗಳಲ್ಲಿ ಭ್ರೂಣಲಿಂಗ ಪತ್ತೆಮಾಡಲು ಕೊಡಬೇಕಾಗುವ ಹಣವಿಲ್ಲದ ಪಕ್ಷದಲ್ಲಿ ಮಗು ಹುಟ್ಟಿದ ನಂತರ ಅದನ್ನು ನಿರ್ಲಕ್ಷಿಸಲಾಗುತ್ತದೆ. ಸರಿಯಾದ ಆರೈಕೆಯಿಲ್ಲದೆ ಹೆಣ್ಣು ಶಿಶುಗಳು ಅಸುನೀಗುತ್ತಿವೆ. ಬರಗಾಲ ಪೀಡಿತ ಗುಲಬರ್ಗಾದಂತಹ ಪ್ರದೇಶದಲ್ಲಿ ಹಲವು ಬಡ ಕುಟಂಬಗಳಲ್ಲಿ ಹೆಣ್ಣು ಶಿಶುಗಳನ್ನು ಆರ್ಥಿಕ ಸಂಕಷ್ಟದಿಂದ ಮಾರಾಟ ಮಾಡಿರುವಂತಹ ಪ್ರಕರಣಗಳು ನಮ್ಮ ಕಣ್ಮುಂದೇ ಗೋಚರಿಸುತ್ತವೆ. ಇಂದಿಗೂ ಮರೆಯಲ್ಲಿ ಜಾರಿಯಲ್ಲಿರುವುದು ಸ್ತ್ರೀ ಬಗೆಗೆ ಸಮಾಜದಲ್ಲಿರುವ ತಾತ್ಸಾರ ಭಾವನೆಯ ತೀವ್ರತೆಯನ್ನು ಮನಗಾಣಿಸುತ್ತವೆ. .ಇಂತಹ ಎಲ್ಲಾ ಪ್ರಕರಣಗಳಿಗೆ ಮಹಿಳೆ (ತಾಯಿ)ಯು ತಾನುಂಡ ನೋವು ತನ್ನ ಮಗುವಿಗೆ ಬೇಡ, ದಿನಂಪ್ರತಿ ಇಂಚಿಂಚಾಗಿ ಸಾಯುವ ಬದಲಿಗೆ ಒಂದೇ ಸಲಕ್ಕೆ ಸಾಯುವುದೇ ಒಳ್ಳೆಯದೆಂಬ ಭಾವನೆಯು ಇಂತಹ ಕೃತ್ಯಗಳಿಗೆ ಕಾರಣವಾಗಿವೆ.

ಭಾರತೀಯ ಸಮಾಜದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಧರ್ಮವು ಸಹ ಮಹಿಳೆಯನ್ನು ದ್ವಿತೀಯ ದರ್ಜೆಯ ಅಂತಸ್ತನ್ನು ದಯಪಾಲಿಸಿದೆ. ಧರ್ಮವು ಮಾನವೀಯತೆಯನ್ನು ಬೋಧಿಸುವಂತಹುದೆಂದೇ ನಂಬಿಸಲಾಗುತ್ತಿದೆ, ಅದಕ್ಕೆ ಪೂರಕ ಎನ್ನುವಂತೆ ಸಮಾಜದಲ್ಲಿ ಇಂದಿಗೂ ದೇವಾಲಯಗಳ ಸ್ಥಾಪನೆ, ಆರಾಧನೆಯಯೂ ಪ್ರತಿಯೊಂದು ಸಮುದಾಯ, ಪಂಗಡ ಮತ್ತು ಪಂಥಗಳಲ್ಲಿ ನೆಲೆಯೂರಿದೆ. ಆದರೆ ಇಲ್ಲಿನ ಮಾನವೀಯತೆಯನ್ನುವುದು ಕೇವಲ ಪುರುಷರಿಗೆ ಮಾತ್ರ

ಸೀಮಿತವಾಗಿರುವುದು ಕಂಡುಬರುತ್ತದೆ. ಈ ಧರ್ಮವೆಂಬ ಸಂಸ್ಥೆಯು ಕೂಡ ಪುರುಷ ಪ್ರಧಾನ ವ್ಯವಸ್ಥೆಯ ಕುತಂತ್ರ ಹುನ್ನಾರದಿಂದಲೇ ಉಗಮವಾಗಿದ್ದು ಅದರಲ್ಲಿ ಪುರುಷರು ತಮ್ಮ ಹಿತವನ್ನು ಪ್ರಮುಖ ದೃಷ್ಟಿಯಲ್ಲಿಟ್ಟುಕೊಂಡೇ, ಧಾರ್ಮಿಕ ಆಚರಣೆ, ಆರಾಧನೆ, ಸೇವೆ ಹಾಗೂ ಕಟ್ಟುಕಟ್ಟಳೆಗಳನ್ನು, ನೀತಿ-ನಿರ್ಬಂಧಗಳನ್ನು ರೂಪಿಸಿದ್ದಾರೆ, ಹೀಗಾಗಿ ಧರ್ಮವು ಕೂಡ ಇಬ್ಬಗೆಯ ನೀತಿಯ ನಿಲುವುಗಳನ್ನು ಮೈಗೂಡಿಸಿಕೊಂಡಿರುವುದು, ನೋಡಬಹುದಾಗಿದೆ.

೬.೧. ವರ್ತಮಾನದ ಮಹಿಳಾ ಸವಾಲುಗಳು

ಒಂದು ಕಾಲದ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದ ಜನರಲ್ಲಿ ಪುರುಷ-ಸ್ತ್ರೀಯರು ಎಂಬ ಭೇದವೆಣಿಸದೆ ಸ್ವಚ್ಛಂಧವಾಗಿ ಸರಳ-ಸಹಕಾರ, ಸಹಬಾಳ್ವೆಯಿಂದ ಬದುಕು ಮುಂದುವರೆಸುತ್ತಿದ್ದವರು, ಅನ್ಯರ ಹಿತಾಸಕ್ತಿ ಪೂರೈಕೆಗಾಗಿ ತಮ್ಮದೆಲ್ಲ ಸಾಮಾಜಿಕ ಪರಂಪರಾಗತ ಮೌಲ್ಯಗಳು ಕಳಚಿಕೊಂಡು, ಪರರ ಹಿತಾಸಕ್ತಿಗಳನ್ನು ಮೈದಳೆದುಕೊಂಡು ಅವುಗಳ ಮುಂದುವರೆಕೆಗಾಗಿ ತಮ್ಮತನವನ್ನೆ ಬಲಿಕೊಟ್ಟು ಬದುಕನ್ನು ದುರಂತ ಮಯವಾಗಿಸಿಕೊಂಡಿದ್ದಾರೆ. ಕೆಲವು ಆದಿವಾಸಿ ಸಮುದಾಯಗಳಲ್ಲಿ ಧರ್ಮಪಾಲನೆಯ ನಿಷ್ಠೆಯನ್ನು ನೋಡಿದರೆ ಇದು ಇವರಿಗೆ ಅವಶ್ಯಕವೇ ಎಂದು ಗೋಚರವಾಗುತ್ತದೆ. ಮಹಿಳೆಯರನ್ನು ಕುರಿತು ನೋಡಿದರೆ "ಹೆಣ್ಣಿನ ದೇಹ ಅಪವಿತ್ರ ಆತ್ಮವಿಶ್ವಾಸಕ್ಕೆ ಅಡಚಣೆ ಎನ್ನುವ ನಂಬಿಕೆಯಿಂದಾಗಿ ಇಂದಿಗೂ ಅನೇಕ ದೇವಾಲಯಗಳ ಗರ್ಭಗುಡಿಗಳಲ್ಲಿ ಮಹಿಳೆಯರಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ."[೨] ಇವತ್ತಿನವರಿಗೂ ಗ್ರಾಮೀಣ ಸಮಾಜದಲ್ಲಿ ಮುಟ್ಟಾದ ಸ್ತ್ರೀಯರು ದೇವರ ಗುಡಿಗಳಿಗೆ ಹೋಗುವುದಿಲ್ಲ. ಹೋದರೂ ದೇವರನ್ನು ನೋಡುವುದಿಲ್ಲ, ಮುಟ್ಟಾದ ಸ್ತ್ರೀಯರ ದೃಷ್ಟಿ ಬಿದ್ದರೂ ದೇವರು ಅಪವಿತ್ರವಾಗುತ್ತದೆ ಎಂಬ ಅಸ್ಪೃಶ್ಯಭಾವನೆ ಮನೆಮಾಡಿದೆ. ದೇವರ ಕುರಿತು ಪೂಜೆ-ಆರಾಧನೆ ಮಾಡುವಂತ ಸ್ವಾತಂತ್ರ್ಯವಿಲ್ಲ. ಮೋಕ್ಷ ಸಾಧಿಸುವುದೂ ಕೂಡ ಹೆಣ್ಣಿನ ಜನ್ಮದಲ್ಲಿ ಸಾಧ್ಯವಿಲ್ಲ ಎಂಬಂತಹ ನಿಯಮಗಳಿರುವ ಧರ್ಮವು, ಹೆಣ್ಣಿನ ವಿಷಯದಲ್ಲಿ ನಕಾರಾತ್ಮಕವಾಗಿಯೇ ಮುಂದುವರೆಯುತ್ತಿದೆ. ಉದಾಹರಣೆಗಾಗಿ ನೋಡಿ "ಕ್ರಿಶ್ಚಿಯನ್ ಧರ್ಮದಲ್ಲಿ ಫಾದರ್‌ಗಳಿರುವಂತೆ ಮದರ್‌ಗಳು ಇರುವುದನ್ನು ಕಾಣಲಾರೆವು, ಮುಸ್ಲಿಂ ಧರ್ಮದಲ್ಲಿ ಧರ್ಮಗುರುಗಳಾಗಿ ಮಹಿಳೆಯರು ಕಾರ್ಯನಿರ್ವಹಿಸಿದ್ದನ್ನು ಕಾಣಲಾರೆವು. ಜಗದ್ಗುರು ಎಂಬ ಪಟ್ಟಕ್ಕೆ ಯಾವ ಮಹಿಳೆಯನ್ನು ಕೂರಿಸಿಲ್ಲ. ಬುದ್ಧ ಕೂಡ ಪ್ರಾರಂಭದಲ್ಲಿ ಹೆಂಗಸರನ್ನು ತನ್ನ ಧರ್ಮದ ಒಳಗೆ ಸೇರಿಸಿಕೊಳ್ಳಲಿಲ್ಲ. ಜೈನಧರ್ಮವಂತೂ ಹೆಣ್ಣು ಜನ್ಮದಾಟಿ ಗಂಡು ಜನ್ಮ ಪಡೆದಾಗ ಮಾತ್ರ ಜೀವಕ್ಕೆ ಮುಕ್ತಿ ಸಾಧ್ಯ, ಪಾಪ ಮಾಡಿದ ಜೀವ ಹೆಣ್ಣಾಗಿ, ಹೆಣ್ಣು ನಾಯಿ, ಹೆಣ್ಣುಹಂದಿ ಮುಂತಾಗಿ ಜನ್ಮತಳೆಯುತ್ತದೆ ಎಂದು ಕಥೆಗಳನ್ನು ಹೇಳುವಲ್ಲಿ ಹೆಣ್ಣು ಜನ್ಮದ ಅವಹೇಳನಕಾರಿ ಚಿತ್ರಣವನ್ನೆ ಕಾಣುತ್ತೇವೆ."[೩] ಇಂತಹ ವಿಚಾರವನ್ನು ಒಂದಡೆ ಇಟ್ಟು ನೋಡುವುದಾದರೆ, ಮಹಿಳೆಗೆ ಕೇವಲ ಅಶ್ವಾಸನೆ ನೀಡಿದಂತೆ ಕಂಡುಬರುತ್ತದೆ. ಮೇಲ್ನೋಟಕ್ಕೆ ಮಾತ್ರ ವರ್ಣಿಸಿಲ್ಪಟ್ಟಿದ್ದಾಳೆ. ಆದರೆ ಇವತ್ತಿನ ಸಂದರ್ಭದವರೆಗೂ ಮಹಿಳೆ ಮಾತ್ರ ತನ್ನ

ಮೂಲಭೂತ ಕರ್ತವ್ಯಗಳನ್ನು ನಿಷ್ಠೆಯಿಂದ ಪೂರೈಸಿ, ಕುಟುಂಬದ ಪ್ರಗತಿಗೆ ಆಧಾರವಾಗಿದ್ದಾಳೆ. ಇಂತಹ ಕರ್ತವ್ಯವನ್ನು ಪುರುಷ ನಿಷ್ಠೆ ಸಮಾಜವು ಪ್ರಮುಖವಾಗಿ ಪರಿಗಣಿಸದೆ ಇರುವುದು ದುರಂತದ ಸಂಗತಿ ಎಂದು ಹೇಳಬಹುದು. ಪ್ರತಿ ಕಟುಂಬದಲ್ಲಿ ನಡೆಯುವಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಕೇವಲ ನೆಪ ಮಾತ್ರ ಪಾಲ್ಗೊಳ್ಳಲು ಅವಕಾಶವಿರುವುದು ಕಂಡುಬರುತ್ತದೆ. ಇಡೀ ಧಾರ್ಮಿಕ ಆಚರಣೆಯ ಕಾರ್ಯತಂತ್ರ-ರೂಪರೇಷಗಳನ್ನು ಸಿದ್ಧಪಡಿಸುವಂತಹ ಮತ್ತು ನೀತಿ-ನಿರ್ಧಾರಗಳನ್ನು ತೀರ್ಮಾನಿಸುವಲ್ಲಿ ಬಹುಮುಖ್ಯವಾಗಿ ಪುರುಷರು ಅಂತಿಮ ಎನ್ನುವುದು ಸಾಮಾನ್ಯ ಸಂಗತಿ. ಅಧ್ಯಯನದ ಕ್ಷೇತ್ರವಾದ ಹೈದರಾಬಾದ್-ಕರ್ನಾಟಕದ ಮೂರು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಹಾಗೂ ಕೊಪ್ಪಳ, ಈ ಪ್ರದೇಶಗಳಲ್ಲಿ ಜನಪದೀಯವಾಗಿ ಪುರಾತನ ಕಾಲದಿಂದಲೂ ಶರಣರು, ಸಂತರು, ಸೂಫಿಗಳು, ಪ್ರಚುರ ಪಡಿಸಿರುವಂತಹ ಸಂದೇಶಗಳು ಮಹಿಳೆಯ ಪರ ಗಮನ ಹರಿಸದೆಯಿರುವುದು ಸಹ ಕಂಡುಬರುತ್ತದೆ. ಹಲವು ಕಾರಣಾಂಶಗಳಿಂದ ಇವತ್ತಿನವರೆಗೂ ಬೇಡ ಬುಡಕಟ್ಟು ಮಹಿಳೆಯೂ ಪುರುಷನಷ್ಟೇ ಸರಿ ಸಮಾನವಾದ ಧಾರ್ಮಿಕ ಅರ್ಹತೆ ಪಡೆದಿಲ್ಲವೆಂದು ಹೇಳಬಹುದು.

೧. ಶೈಕ್ಷಣಿಕ ಸವಾಲು

ಶಿಕ್ಷಣವನ್ನು ಕುರಿತು ನೋಡಿದಾಗ, ಇನ್ನೂ ವಿಚಿತ್ರವಾದಂತಹ ಸಂಗತಿಗಳು ನಮ್ಮುಂದೆ ಗೋಚರವಾಗುತ್ತವೆ. "ತೃತೀಯ ಜಗತ್ತಿನ ದೇಶಗಳಲ್ಲಿ ಮಹಿಳಾ ಸಬಲೀಕರಣ ವಿಷಯದ ಬಗೆಗೆ ಚರ್ಚೆ ಪ್ರಾರಂಭವಾಗಿರುವುದು ಆಶಾದಾಯಿಕ ಬೆಳವಣಿಗೆಯಾಗಿದೆ ಇದರ ಅನ್ವಯ ನೋಡಿದರೆ ಮಹಿಳೆ ಎಂದೂ ದುರ್ಬಲಳಲ್ಲ. ಆಕೆ ಯಾವಾಗಲೂ ಸಬಲಳು. ಸಾಮರ್ಥ್ಯವುಳ್ಳವಳೂ ಆಗಿದ್ದಾಳೆ. ಮಹಿಳೆಯೆಂದರೆ ಹೊಸ ಸಾಧ್ಯತೆಗಳ ಖಣಿ. ಆದರೆ ಚಾತುರ್ವರ್ಣ ವ್ಯವಸ್ಥೆ ಹಾಗೂ ಯಜಮಾನ ಸಂಸ್ಕೃತಿ, ಶತಮಾನಗಳಿಂದ ಮಹಿಳೆಯನ್ನು ದುರ್ಬಲಗೊಳಿಸುತ್ತಲೇ ಬಂದಿವೆ. ಮಹಿಳೆ ಅಬಲೇ ದುರ್ಬಲಳು ಸದಾ-ಸರ್ವಕಾಲಕ್ಕೂ ಇನ್ನೊಬ್ಬರ ಅಧಿನದಲ್ಲಿರಬೇಕಾದವಳು ಎಂದು ತಪ್ಪು ಪ್ರಚಾರ ಮಾಡುತ್ತಲೇ ಬಂದಿವೆ. ಮಹಿಳೆ ಕೇಡಿನ ಮೂಲ, ಆಕೆ ಭೋಗದವಸ್ತು ಎಂದು ಹಸಿಸುಳ್ಳುಗಳನ್ನು ಹೇಳಿ ನಂಬಿಸಿ ವಂಚನೆಗೆ ದೂಡುತ್ತಿದ್ದಾರೆ."[೪] ಆಧುನಿಕ ಕಾಲಘಟ್ಟವು ಮಹಿಳೆಯ ಸರ್ವತೋಮುಖ ಅಭಿವೃದ್ಧಿಯ ಕಾರಣಕ್ಕಾಗಿ ಬಹು ಮಹತ್ವದ ಕಾಲಘಟ್ಟವಾಗಿದೆ. ಮಹಿಳಾ ಶಿಕ್ಷಣ ಹಾಗೂ ಜಾಗೃತಿಯ ಮೂಲಕ ಈ ದಿನ ಮಾನದಲ್ಲಿ ವಿಶ್ವದಾದ್ಯಂತ ಮಹಿಳಾ ಪರವಾದ ಹೋರಾಟಗಳು, ಚಳುವಳಿಗಳು ಆರಂಭವಾದವು. ಅವರಿಗೋಸ್ಕರ ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದ ಹಂತದವರೆಗೂ ವಿದ್ಯಾರ್ಜನೆ ಒದಗಿಸುವುದರ ಮೂಲಕ ಅವರಲ್ಲಿನ ಆಲೋಚನಾ ಕ್ರಮದಲ್ಲಿ ಪರಿವರ್ತನೆಯನ್ನುಂಟುಮಾಡಿದವು. ಅದು ಸಂಪೂರ್ಣವಾಗಿ ಅಲ್ಲದೆ ಕೇವಲ-ಕೆಲ ವರ್ಗದವರ ಪಾಲಿಗೆ ಮಾತ್ರ ಲಭಿಸುವಂತಹ ಸಂದರ್ಭವನ್ನು ಅದರ ಜೊತೆಗೆ ಮೈಗೂಡಿಸಿಕೊಂಡಿತು. ಇಂತಹ ವಿಭಿನ್ನವಾದ ಶೈಕ್ಷಣಿಕ ನೆಲೆಯಲ್ಲಿ ಶಿಕ್ಷಿತ ಮಹಿಳೆ ಮತ್ತು ಅಶಿಕ್ಷಿತ ಮಹಿಳೆಯೆಂಬ ಎರಡು

ಕವಲುದಾರಿಯುಂಟಾಗಿ ಇನ್ನೊಂದು ಸಮಸ್ಯೆಯುಂಟಾಗಲಿಕ್ಕೆ ಕಾರಣವು ಆಯಿತ್ತೆಂದು ತಿಳಿದುಬರುತ್ತದೆ. ಒಂದು ಕಡೆ ಭಾರತೀಯ ಸಾಂಪ್ರದಾಯಿಕ ನೆಲೆಯಲ್ಲಿ ಬದಕನ್ನು ರೂಪಿಸಿಕೊಂಡಿರುವಂತಹ ಬಹು ಸಂಖ್ಯಾತ ಕುಟಂಬಗಳು ಮಹಿಳೆಯರ ಶಿಕ್ಷಣದ ಬಗ್ಗೆ ಅಸಡ್ಡೆ ಹೊಂದಿರವಂತಹದು, ಇನ್ನೊಂದು ಶಿಕ್ಷತ ಮಹಿಳೆಯರು ಸೇವಾ ವರ್ಗದ ಪ್ರವೇಶ ಪಡೆದವರು. ಈ ತರಹದ ದ್ವಿಮುಖದ ಹಾದಿಯಲ್ಲಿ ಮಹಿಳಾ ಶೈಕ್ಷಣಿಕ ಸಮಸ್ಯೆಗಳು, ಇಂದು ನಾವುಗಳು ಅರ್ಥೈಯಿಸಿಕೊಳ್ಳಬೇಕಾಗಿದೆ. ಮೊದಲನೇಯುದಾಗಿ ಅಶಿಕ್ಷತ ಮಹಿಳೆಯರು ಬಹುಸಂಖ್ಯಾತವಾಗಿದ್ದಾರೆ. ಜೊತೆಗೆ ಅವರ ಸಮಸ್ಯೆಗಳೇ ವಿಭಿನ್ನವಾಗಿವೆ. ಅದಕ್ಕೆ ತನ್ನದೆಯಾದ ಆಂತರಿಕ ನಿಲುವುಗಳು ಸಹ ಬೇರೆಯಾಗಿವೆ. ಇನ್ನೂ ಅಲ್ಪ-ಸ್ವಲ್ಪ ಶಿಕ್ಷಣವನ್ನು ಪಡೆದುಕೊಂಡು ಸಮಾಜದಲ್ಲಿ ಒಂದು ಸ್ತರವನ್ನು ಅಲಂಕರಿಸಿದವರ ಹಸಿವು ಸಹ ಬೇರೆಯಾಗಿದೆ. ಆದರೆ ಇಲ್ಲಿ ಪ್ರಮುಖವಾಗಿ ಅಶಿಕ್ಷತ ಮಹಿಳೆಯಾದ ಅದರಲ್ಲಿ ಬುಡಕಟ್ಟು ಮಹಿಳೆಯರ ಶಿಕ್ಷಣವನ್ನು ಕುರಿತು ಆಲೋಚನೆ ಮಾಡಿದಾಗ ಅವರಿಗೆ ಎದುರಾಗಿರುವ ಸಮಸ್ಯೆಗಳೇ ಬೇರೆಯಾಗಿವೆ. ಇಂತಹ ವಿಷಯವನ್ನು ಕುರಿತಂತೆ ಚರಿತ್ರೆಯನ್ನು ಗಮನಿಸಿದಾಗ, ಐತಿಹ್ಯಗಳನ್ನು ಅವಲೋಕಿಸಿದಾಗ, ಸಾಂಸ್ಕೃತಿಕ ಸಂಕಥನಗಳನ್ನು ಬಿಚ್ಚಿದಾಗ ಮಹಿಳಾ ಶೈಕ್ಷಣಿಕ ಸಾಧ್ಯತೆಗಳು ಸ್ಪಷ್ಟವಾಗುತ್ತವೆ. ಚರಿತ್ರೆಯಲ್ಲಿ ಅನೇಕ ಮಹಿಳೆಯರು ರಾಜ್ಯಾಡಳಿತ ನಡೆಸಿರುವುದು ಕಂಡುಬರುತ್ತದೆ. ಉನ್ನತದಲ್ಲಿ ಅತ್ಯುನ್ನತ ಸ್ಥಾನ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ ಪಾಂಡಿತ್ಯವನ್ನೂ ಪಡೆದವರಾಗಿದ್ದಾರೆ. ಭಾರತದ ಚರಿತ್ರೆಯಲ್ಲಿ ಇಷ್ಟೆಲ್ಲಾ ದೀರ್ಘ ಪರಂಪರೆಯಿರುವ ಮಹಿಳೆ ಇಂದೇಕೆ ದುರ್ಬಲಳಾದಳು. ಆಕೆಯ ಸಬಲೀಕರಣದ ಮಾತು ಈಗೇಕೆ ಬಂತು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ ಇದರ ಅರ್ಥವ್ಯಾಪ್ತಿ ಸ್ಪಷ್ಟವಾಗುತ್ತದೆ. ರಾಜನ ಹಾಗೆ ರಾಣಿ ರಾಜ್ಯವಾಳುವದು, ಪುರುಷನಂತೆ ಮಹಿಳೆ ಕಾರ್ಯ ನಿರ್ವಹಿಸುವುದು ಮುಖ್ಯವಲ್ಲ. ಪುರುಷ ನಡೆದ ದಾರಿಯಲ್ಲಿಯೇ ಮಹಿಳೆ ನಡೆಯಬೇಕೆಂದಲ್ಲ, ಪುರುಷನ ಮಟ್ಟಕ್ಕೆ ಬಂದು ನಿಂತಾಕ್ಷಣ ಸಮಾನತೆ ದೊರೆಯುತ್ತದೆಂಬುದೂ ಅಲ್ಲ. ಆದರೆ ಲಿಂಗಬೇದ, ವರ್ಗಬೇದ-ವರ್ಣಬೇದವನ್ನು ಅಳಿಸಿ ಹಾಕುವುದು ನಿಜವಾದ ಸಮಾನತೆ ಇಂತಹ ಸಮಾನತೆಯ ತಾತ್ವಿಕ ನೆಲೆಯನ್ನು ಅಳವಡಿಸಿಕೊಂಡಾಗ ಮಾತ್ರ ಮಹಿಳಾ ಶಿಕ್ಷಣ ನಿಜವಾದ ಅರ್ಥದಲ್ಲಿ ಪ್ರಾರಂಭವಾಗುತ್ತದೆ.'"

"ಇಂದು ನಮ್ಮೆದುರಿಗೆ ಎರಡು ರೀತಿಯ ಶಿಕ್ಷಣ ಪದ್ಧತಿಗಳಿವೆ. ಶತ-ಶತಮಾನಗಳಿಂದ ಮುಂದುವರೆದುಕೊಂಡು ಬಂದ ನಮ್ಮದೇ ಆದ ಚಾತುವರ್ಣ ವ್ಯವಸ್ಥೆಯ ಗುರುಕುಲ ಪದ್ಧತಿ ಒಂದು ಕಡೆಯಿದ್ದರೆ, ಈಗ ಮೂರು ಶಮಾನಗಳಿಂದ ತೀವ್ರಗೊಂಡಿರುವ ಇಂಗ್ಲೀಷ ಶಿಕ್ಷಣ ಪದ್ಧತಿ ಮತ್ತೊಂದಡೆ ಇದೆ. ನಮ್ಮದೇಶದ ಹಿಂದಿನ ಶಿಕ್ಷಣ ಪದ್ಧತಿ ವರ್ಣಾಶ್ರಮ ಶಿಕ್ಷಣ ಪದ್ಧತಿಯಾಗಿದ್ದು, ಅಲ್ಲಿ ಕೇವಲ ಉನ್ನತ ವರ್ಗದವರಾದ ಬ್ರಾಹ್ಮಣ-ಕ್ಷತ್ರಿಯರಿಗೆ ಮಾತ್ರ ಶಿಕ್ಷಣ ಪಡೆಯುವ ಅವಕಾಶವಿತ್ತು. ಶೂದ್ರರು-ದಲಿತರು, ಹಿಂದುಳಿದವರು ಹಾಗೂ ಆದಿವಾಸಿಗಳು ಇಂತಹ ಶಿಕ್ಷಣ ಪದ್ಧತಿಯಿಂದ ತುಂಬಾ ದೂರವಿದ್ದರು. ಈ ವಿಷಯದಲ್ಲಿ ಮಹಿಳೆಯರ ಸ್ಥಿತಿಯಂತೂ ತುಂಬಾ

ಚಿಂತಾಜನಕವಾಗಿತ್ತು. ಆಗಿನ ಕಾಲದ ಶಿಕ್ಷಣವೆಂದರೆ ವೇದಾಧ್ಯಯನವೇ ಆಗಿತ್ತು. ಲೋಪ ಮುದ್ರ, ಘೋಷಾ, ವಿಶ್ವಾವರಾ ಸುಲಭ, ಗಾರ್ಗಿ, ಮೈತ್ರೇಯ ಮುಂತಾದ ಮಹಿಳೆಯರು ವೇದಾಧ್ಯಯನ ಮಾಡಿದ್ದರೆಂದು ತಿಳಿದು ಬರುತ್ತದೆ. ಮುಂದೆ ಸ್ಮೃತಿಗಳ ಕಾಲಕ್ಕೆ ಲಿಂಗಬೇಧ ನೀತಿ ವೃದ್ಧಿಯಾಗುತ್ತಾ ಹೋಯಿತು. ಕೆಲವು ಮಹಿಳೆಯರು ವೇದಾಧ್ಯಯನ ಮಾಡಿದಾಕ್ಷಣ ಎಲ್ಲರಿಗೂ ಶಿಕ್ಷಣದ ಅವಕಾಶವಿತ್ತೆಂದಲ್ಲ, ಕೆಲವು ಮಹಿಳೆಯರಾದರೂ ಆ ಕಾಲದಲ್ಲಿ ವೇದಾಧ್ಯಯನ ಮಾಡಿರಬಹುದೆಂದು ತಿಳಿದುಕೊಂಡರು ಕೂಡ ಅದರಿಂದಾದ ಪ್ರಯೋಜನೆಗಳೇನು ಎಂಬುದು ಮುಖ್ಯ ಪ್ರಶ್ನೆ."[1] ಆದಿವಾಸಿ ಸಮುದಾಯದ ಮಹಿಳೆಯರನ್ನು ಹೊರತು ಪಡಿಸಿದರೆ, ಉಳಿದ ಮೇಲ್ವರ್ಗದ ಮಹಿಳೆಯರು ಅಕ್ಷರ ಜ್ಞಾನ ಪಡೆದುಕೊಂಡು ಸುಶಿಕ್ಷಿತರಾಗಿದ್ದಾರೆ. ಅಂತಹವರು ಸಹ ಋಗ್ವೇದದ ಪ್ರಕಾರ ಎಲ್ಲಾ ಪ್ರಾರ್ಥನೆಗಳೂ ಗಂಡು ಮಗುವಿಗಾಗಿ" ಎನ್ನುವಂತೆ ಪೂಜಾ-ಪುನಃಸ್ಕಾರಗಳು ಜರುಗುತ್ತವೆ. ಅಂದಾಗ ಅಶಿಕ್ಷಿತವಾದ ಬುಡಕಟ್ಟು ಮಹಿಳೆ ಇದರಿಂದ ಹೊರತಾಗಿಲ್ಲ. ಇಂಡಿಯಾದ ಸಂದರ್ಭದಲ್ಲಿ ಇವತ್ತಿನವರೆಗೂ ಸಮಾಜದಲ್ಲಿ ಸದ್ಭಕ್ತಿಯಿಂದ ಪೂಜೆ ಆರಾಧಾನೆಯಾಗಿರುವ, ಭಗವದ್ಗೀತೆಯೂ ಸಹ ಮಹಿಳೆಯರನ್ನು ಕುರಿತು ಲಿಂಗಬೇಧ ನೀತಿಯನ್ನು ಹುಟ್ಟು ಹಾಕಿರುವುದು ತಿಳಿದುಬರುತ್ತದೆ. ಈ ತೆರನಾದ ಕೃತಿಗಳು ಮಹಿಳೆಯೂ ಓದಿದ್ದಾಳೆ, ವೇದಾಧ್ಯಯನ ಮಾಡಿದ್ದಾಳೆ ಎಂಬುದು ಹೆಮ್ಮೆಯ ವಿಷಯವೆಂದು ಬಿತ್ತರಿಸಿಕೊಳ್ಳುತ್ತವೆ. ಆದರೆ ಮಹಿಳೆ ಸಮಾನತೆ ತತ್ವಕ್ಕೆ ವಿರೋಧಿವಿದೆಯೆಂದು ಹೇಳಬಹುದು. ಏಕೆಂದರೆ ಲಿಂಗತಾರತಮ್ಯ ತತ್ವವನ್ನು ಕಲಿಸುವ ಶಿಕ್ಷಣವನ್ನು ಮಹಿಳೆ ಓದಿದರೇನು ಅದರಿಂದ ಅಸಮಾನತೆ ಅಧಿಕವಾಗುತ್ತದೆಯೇ ಹೊರತು ಸಮಾಜದಲ್ಲಿ ಸಮಾನತೆ ಉದ್ಭವವಾಗುವುದಿಲ್ಲ. "ನಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎನ್ನುವ ಮನು, ಯಾರು ಓದಿದರೂ ಅಷ್ಟೇ ಮಹಿಳೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಸ್ಪಷ್ಟಪಡಿಸಿದ. ಮನು ಶಿಕ್ಷಣವನ್ನು ಹೆಣ್ಣು ಮಕ್ಕಳು ಪಡೆಯುವುದು ಇನ್ನೂ ಅಪಾಯಕಾರಿ ಎಂದನು."[2]

ಇಂತಹ ಅಪಾಯಕಾರಿ ಅಸಮಾನತೆಯು ಶಿಕ್ಷಣ ನೀತಿಯನ್ನು ವಿರೋಧಿಸಬೇಕಾಗಿದ್ದ ಮಹಿಳೆಯರೇ ಅದನ್ನು ಓದಿದಾಗ-ಅದರಂತೆ ನಡೆದುಕೊಂಡಾಗ ಪುರುಷ ಪ್ರಧಾನ ವ್ಯವಸ್ಥೆಗೆ ಇನ್ನೂ ಅನುಕೂಲವಾಗುತ್ತದೆ. ಕುರಿ ಕೊಬ್ಬಿದಷ್ಟೂ ಕಟುಕನಿಗೆ ಅನುಕೂಲವಾದಂತೆ, ಮಹಿಳೆ ಇಂತಹ ಲಿಂಗಭೇಧ ಶಿಕ್ಷಣವನ್ನು ಪಡೆದಷ್ಟೂ ಆಕೆ ಅಧಃಪತನಕ್ಕೊಳಗಾಗುತ್ತಾಳೆ. ಆದುದರಿಂದ ಶಿಕ್ಷಣ ಯಾವ ಕಾಲದ್ದು, ಯಾರು ಹೇಳಿದ್ದು, ಯಾರು ಓದಿದ್ದು? ಎಂಬಂತಹ ಪ್ರಶ್ನೆಗಳಿಗಿಂತ ಆ ಶಿಕ್ಷಣ ಜನಪರವಾಗಿದೆಯೇ-ಜನವಿರೋಧಿಯಾಗಿದೆಯೇ ಎಂಬುದು ಮುಖ್ಯವಾಗಬೇಕು. ಆ ಶಿಕ್ಷಣ ಸಮಾನತೆ ಯನ್ನು ಕಲಿಸುತ್ತದೆಯೇ ಅಥವಾ ಲಿಂಗಭೇದ ನೀತಿಯನ್ನು ಹೇಳುತ್ತದೆಯೇ ಎಂಬುದು ಬಹುಮುಖ್ಯ ವಾಗಬೇಕು ಇಲ್ಲದಿದ್ದರೆ ಮಹಿಳೆಗೂ, ಶಿಕ್ಷಣಕ್ಕೂ, ಸಮಾನತೆಗೂ ಸಂಬಂಧವೇ ಇರುವುದಿಲ್ಲ. ಅಂತಹ ಅಸಮಾನತೆಯ ಶಿಕ್ಷಣವನ್ನು ಯಾರೇ ಪಡೆಯಲಿ, ಹೇಗೆಯೇ ಪಡೆಯಲಿ ಅದರಿಂದ ಹಾನಿಯೇ ಹೊರತು ಲಾಭವಿಲ್ಲ.

ನಮ್ಮ ಸಮಾಜದಲ್ಲಿ ಶಿಕ್ಷಣ ಪದ್ಧತಿ ವರ್ಣವ್ಯವಸ್ಥೆಯ ಮೇಲೆ ನಿಂತಿದೆ. ಹೀಗಾಗಿ ವರ್ಣಭೇದ ನೀತಿಯನ್ನುಳಿಸುವುದು, ಬೆಳೆಸುವುದು ಅದರ ಮುಖ್ಯ ಉದ್ದೇಶವಾಗಿದೆ. ಆ ಕಾರಣಕ್ಕಾಗಿಯೇ ಅಲ್ಲಿ ಎಲ್ಲ ವರ್ಗದ ಜನರಿಗೆ, ಎಲ್ಲ ಮಹಿಳೆಯರಿಗೆ ಶಿಕ್ಷಣದ ಅವಕಾಶವಿಲ್ಲ, ಕೆಲವರು ಮಾತ್ರ ಅವಕಾಶ ಪಡೆದುಕೊಂಡರೂ, ಅವರು ಕೂಡ ಮೇಲಸ್ತರದ ಮಹಿಳೆಯರು ಎಂದು ತಿಳಿದುಬರುತ್ತದೆ. ಅದು ಆರ್ಥಿಕವಾಗಿ ಸದೃಢರಾದ ಕುಟುಂಬದಿಂದ ಬಂದವರು ಮಾತ್ರ ಅವಕಾಶ ಉಪಯೋಗಿಸಿಕೊಂಡರು. ಆದರೆ ಅವರಿಗೆ ಭೇದ ನೀತಿ ಶಿಕ್ಷಣದಿಂದಲೂ ಮಹಿಳೆಯರಿಗೆ ಶಿಕ್ಷಣವೆನ್ನುವುದು ಲಭಿಸದ ವಸ್ತುವಾಗಿದೆ. ಲಭ್ಯವಾದರೂ ಸಂಪೂರ್ಣವಾಗಿ ಮಹಿಳೆಯರ ಪರವಾಗಿಲ್ಲವೆಂದು ತಿಳಿದುಬರುತ್ತದೆ.

"ಇವತ್ತಿನ ಆಧುನೀಕರಣ ಪ್ರಕ್ರಿಯೆಯು ಪುರುಷನ ಜೀವನ ಕ್ರಮದಲ್ಲಿಯೂ ಬದಲಾವಣೆಯನ್ನು ತಂದಿತು. ಶಿಕ್ಷಣಕ್ಕೆ ಮೈಗೂಡಿಸಿಕೊಂಡ ಯುವಕರು ತನ್ನ ಮನೆಯ ಮೂಲ ವೃತ್ತಿ ಕಸುಬು ಕೃಷಿಗಳಿಗೆ ಹಿಂತಿರುಗಿ ಹೋಗಲು ಅಸಾಧ್ಯವಾಗಿ ಬಿಡುತ್ತದೆ. ಅವನ ಶಿಕ್ಷಣಕ್ಕೆ ಅನುಗುಣವಾದ ಉದ್ಯೋಗವಕಾಶ ಹಳ್ಳಿಯಲ್ಲಿ ಸಾಧ್ಯವಿಲ್ಲ. ಹಳ್ಳಿಯಲ್ಲಿನ ವೃತ್ತಿಗೆ ತಕ್ಕ ತರಬೇತಿಯಿಂದ ಅವನು ದೂರಬಂದು ಬಿಟ್ಟಿದ್ದಾನೆ, ಇದು ಅವನ ಸಂದಿಗ್ಧ, ಆದರೂ ಈಗಿನ ಸರ್ಕಾರಿ ಕಾರ್ಯಯೋಜನೆಗಳು, ಉಳುವವನೇ ಭೂಮಿಯ ಒಡೆಯನಾಗುತ್ತಾನೆ ಎಂಬಂತಹ ಕಾನೂನುಗಳು ಶಿಕ್ಷಿತ ಯುವಜನರನ್ನೂ ಹಳ್ಳಿಗಳಿಗೆ ಆಕರ್ಷಿಸುವುದರಲ್ಲಿ ಸ್ವಲ್ಪ ಮಟ್ಟಿಗೆ ನೆರವಾಗುತ್ತಿವೆ. ಆ ಮಾತಿರಲಿ, ಇಷ್ಟಾದರೂ ಹೆಣ್ಣು ಮತ್ತು ಗಂಡು ಮಕ್ಕಳ ಬಗೆಗಿನ ನಮ್ಮ ಸಾಮಾಜಿಕ ಅಭಿಪ್ರಾಯಗಳಿಂದಾಗಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸುವುದೇನೂ ಸಹಜದ ಮಾತಲ್ಲ. ವಾಸ್ತವದಲ್ಲಿ ಶಿಕ್ಷಣದ ಉನ್ನತ ಹಂತಗಳನ್ನು ತಲುಪಿದ ಹೆಣ್ಣು ಮಕ್ಕಳ ಸಾಧನೆ ಸಾಮರ್ಥ್ಯಗಳು ಗಂಡು ಹುಡುಗರನ್ನು ಮೀರಿಸುತ್ತಿದೆ ಎಂಬ ಅಂಕಿ ಅಂಶಗಳೇನೋ ಇವೆ. ಅದರಲ್ಲಿ ಆದಿವಾಸಿ ಸಮುದಾಯದ ಮಹಿಳೆಯರ ಶಿಕ್ಷಣ ಮಟ್ಟವು ಹೇಳಿಕೊಳ್ಳುವಂತಿಲ್ಲ. ಇಷ್ಟಾದರೂ ಅವಳ ಶಿಕ್ಷಣಕ್ಕೆ ಕುಟಂಬದಲ್ಲೇ ಹಲವು ರೀತಿಯ ಕಂಟಕಗಳಿವೆ. ಅಷ್ಟೇನೂ ಬುದ್ಧಿವಂತನಲ್ಲದ ಮಗ, ರ್‍ಯಾಂಕ್ ಪಡೆದ ಮಗಳು, ಇವರಿಬ್ಬರಲ್ಲಿ ಉನ್ನತ ಶಿಕ್ಷಣದ ಅವಕಾಶ ಲಭಿಸುವುದು ಮೊದಲು ಮಗನಿಗೆ. ಉಳಿದರೆ ಮಗಳಿಗೆ, ಕೆಲವೊಮ್ಮೆ ಆರ್ಥಿಕ ಅನುಕೂಲವಿದ್ದರೂ ಜಾಸ್ತಿ ಓದಿದರೆ ಗಂಡು ಸಿಗಲಾರನೆಂಬ ಕಾರಣ ಅವಳ ಅವಕಾಶವನ್ನು ಮೊಟಕು ಗೊಳಿಸಲಾಗುತ್ತದೆ. ಗಂಡ-ಹೆಂಡತಿಯರಲ್ಲಿ ಯಾವ ಬಗೆಯಲ್ಲೂ ಹೆಂಡತಿ ಗಂಡನನ್ನೂ ಮೀರಿಸುವಂತಿರಬಾರದು. ಅವಳ ಜಾತಿಯಲ್ಲಿ ಹೆಚ್ಚು ಓದಿದ ಕಾರಣಕ್ಕೆ ಮದುವೆಯಾಗುವವರೆಗೆ ಶಾಲೆ-ಕಾಲೇಜಿಗೆ ಹೋಗಲಿ ಎಂಬಷ್ಟಕ್ಕೆ ಬಂತು. ಈ ಕಲಿತ ಹೆಣ್ಣುಗಳನ್ನು ಬಯಸುವ ವಿದ್ಯಾವಂತ ಗಂಡಗಳೂ ಇದ್ದೇ ಇದ್ದರು. ವರದಕ್ಷಣೆಯು ಬೆಳೆ-ಬೆಳೆಯುತ್ತಾ ಹುಡುಗಿಯರ ಮದುವೆಯ ವಯಸ್ಸು ಕೂಡ ಹೆಚ್ಚುತ್ತಲೇ ಹೋಗಬೇಕಾಯಿತು. ಇದೂ ಕೂಡ ಹುಡುಗಿಯರ ಶಿಕ್ಷಣಾವಕಾಶಕ್ಕೆ ಕಾರಣವಾಗಿ ಒದಗಿ ಬಂದಿತೆಂಬುದು ಗಮನಾರ್ಹ."[೮]

ಇನ್ನು "ಮಹಾತ್ಮಾಗಾಂಧಿಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ನಾಡಿನ ಮಹಿಳೆಯರನ್ನು ಸೇರ್ಪಡೆ ಮಾಡಿದ್ದರಿಂದ ಅದರ ಪರಿಣಾಮದಿಂದಾಗಿ ಭಾರತದ ಮಹಿಳೆಯರ ಸ್ಥಿತಿಗತಿಗಳಲ್ಲಿ ಆದ ಬದಲಾವಣೆಗಳೂ ಕೂಡ ಗಮನಾರ್ಹ."[೯] ಚಳುವಳಿಯ ಪರಿಣಾಮ ಎಂಬುದಕ್ಕಿಂತ ಅದರ ನೇತಾರರಾಗಿದ್ದ ಗಾಂಧಿಜಿಯವರ ವ್ಯಕ್ತಿತ್ವವೇ ಹೆಣ್ಣುಮಕ್ಕಳ ಹಾಗೂ ಅವರ ಕುಟುಂಬದವರ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದು, ಭಾರತೀಯರಿಗೆ ಗಾಂಧಿಯಲ್ಲಿ ಕಂಡದ್ದು ಸನ್ಯಾಸಿಯ, ಮಹಾತ್ಮನ ವ್ಯಕ್ತಿತ್ವ. ಆತನು ಹೆಣ್ಣು ಮಕ್ಕಳನ್ನು ಚಳವಳಿಯಲ್ಲಿ ಭಾಗವಹಿಸಬೇಕೆಂದು ಕರೆ ಇತ್ತಿದ್ದಾನೆಂದರೆ ತಮ್ಮ ಹೆಣ್ಣುಮಕ್ಕಳು ಖಂಡಿತವಾಗಿಯೂ ಭಾಗವಹಿಸಬಹುದು ಎಂಬ ಒಪ್ಪಿಗೆಗೆ ಇದು ಕಾರಣವಾಯಿತು. ಚಳವಳಿಯು ಸ್ವಾತಂತ್ರ್ಯವನ್ನು ತಂದಿತು, ಬ್ರಿಟಿಷರು ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಿದರು. ಇವೆಲ್ಲ ಹಂತಗಳಲ್ಲಿ ಭಾಗಿಗಳಾಗಿದ್ದ ಮಹಿಳೆಯರಿಗೆ ಪ್ರಜಾಪ್ರಭುತ್ವದ ಕಲ್ಪನೆ ಅಂತರ್ಗತವಾಗುವುದು ಸಾಧ್ಯವಾಯಿತು. ಒಟ್ಟು ಪ್ರಕ್ರಿಯೆಯಲ್ಲಿ ಮಹಿಳೆಯರು ಪ್ರಜಾ ಪ್ರತಿನಿಧಿಗಳಾಗಿ, ಅಧಿಕಾರಗಳನ್ನು ವಹಿಸಿಕೊಂಡರು. ಆದರೆ ತಳಸಮುದಾಯಗಳ ಮಹಿಳೆಯರು ಇದರಲ್ಲಿ ನಗಣ್ಯವಾಗಿದ್ದರು. ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿಲ್ಲದಿದ್ದರೂ, ಭಾರತದ ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ಪ್ರಧಾನವಾದ ಅವಕಾಶಗಳು ನಮ್ಮ ಮಹಿಳೆಯರಿಗೆ ತೆರೆದುಕೊಂಡವು. ಅದು ಮೇಲ್ವರ್ಗದ ಮಹಿಳೆಯರಿಗೆ ಮಾತ್ರವೆಂದು ಹೇಳಬಹುದು. ಅದೇ ಪ್ರಕಾರವಾಗಿ ಇಡೀ ಮೇಲಸ್ತರಕ್ಕೆ ಸೇರಿದ ಸ್ತ್ರೀಯರು ರಾಜಕೀಯ ಕ್ಷೇತ್ರದ ಎಲ್ಲ ನೆಲೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಲಾರಂಭಿಸಿದರು.

ಭಾರತದ ಮಹಿಳೆಯರು ಇಲ್ಲಿನ ಸಾಮಾಜಿಕ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಅದೆಷ್ಟು ಸಹಜವಾಗಿ ಬೇರೂರಿ ಬೆಳೆದು ಬರುತ್ತಿದ್ದಾರೆಂಬುದು ತುಂಬಾ ಸಂತೋಷದ ಹಾಗೂ ಕುತೂಹಲದ ಸಂಗತಿ. ಇಂಥ ಮಹಿಳೆಯರು ಬಹುಮಟ್ಟಿಗೆ ನಗರದ ಮಧ್ಯಮ ವರ್ಗದ ಮೇಲು ಜಾತಿಗಳಿಗೇ ಸೇರಿದ್ದಾರೆಂಬುದೇನೋ ನಿಜ. ಮಹಿಳೆಯ ಈ ಮುನ್ನಡೆಯನ್ನು ತಡೆಯುವಂತಹ ಪ್ರಯತ್ನಗಳು ಇಂದಿಗೂ ಪರೋಕ್ಷವಾಗಿ ನಡೆಯುತ್ತಲೇ ಇವೆ. "ಪುರುಷ ಪ್ರಧಾನ ವ್ಯವಸ್ಥೆಗೆ ಮಹಿಳಾ ಪ್ರಗತಿಯನ್ನು ಅಷ್ಟು ಸಹಜವಾಗಿ ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲದಿರಬಹುದು. ಆದರೆ ಮಹಿಳೆಯ ಮುನ್ನಡೆಯ ವಿವಿಧ ಜಾತಿ, ವರ್ಗ, ಗ್ರಾಮಗಳ ಹಂತಕ್ಕೂ ವಿಸ್ತರಿಸುತ್ತಾ ಸಾಗಿರುವುದನ್ನು ಈ ಸಮಾಜವು ಅನಿವಾರ್ಯವಾಗಿಯಾದರೂ ಒಪ್ಪಿಕೊಳ್ಳಲೇಬೇಕಾಗಿದೆ."[೧೦] ಆದರೆ ಸೂಕ್ಷ್ಮವಾಗಿ ನೋಡಿದರೆ ಭಾರತೀಯ ಮಹಿಳೆ ಅಂದಿಗೂ-ಇಂದಿಗೂ ಕುಟುಂಬದ ಸಂರಕ್ಷಣೆಯ ಭಾರವನ್ನು, ಬರಲಿರುವ ಪೀಳಿಗೆಯನ್ನು ಸಮರ್ಥವಾಗಿ ಸಂಗೋಪನೆ ಮಾಡುವ ಹೊಣೆಯನ್ನು ಪ್ರಧಾನವಾಗಿಯೇ ಪರಿಗಣಿಸಿ ನಡೆದಿದ್ದಾಳೆಂಬುದು ತಿಳಿದುಬರುತ್ತದೆ. ಗಂಡಸರು ಇಲ್ಲವೆಂದರೆ ಇವಳ ಓದು ಮುಂದುವರೆಯುವುದಿಲ್ಲ. ಮಧ್ಯಮ ವರ್ಗದ ಎಲ್ಲ ವರಗಳೂ ತಮ್ಮ ಆದಾಯಕ್ಕೆ ಪೂರಕವಾಗಿ ಹೆಂಡಂದಿರ ವರಮಾನವಿರಲಿ ಎಂದು ಅಪೇಕ್ಷಿಸುತ್ತಾರೆ. ಇಲ್ಲಿ ಹೆಣ್ಣು ಓದಿರಲೂ ಬೇಕು. ಹಾಗೆಂದು ವರನ ಓದನ್ನು ಮೀರಿ ಅವನ ನೌಕರಿಯ ಸ್ತರವನ್ನು ಮೀರಿ ಮುಂದೆ ಹೋಗಿ ಬಿಡಬಾರದು. ಇವೆಲ್ಲ ನಗರ ಪ್ರದೇಶದ

ಮಧ್ಯಮ ವರ್ಗದ ಮೇಲಜಾತಿಯ ಸಮುದಾಯಗಳಿಗೆ ಹೆಚ್ಚಾಗಿ ಅನ್ವಯವಾಗುತ್ತಿದೆ ಎಂಬುದು ನಿಜವಾದರೂ, ಉಳಿದ ಜಾತಿ ವರ್ಗಗಳಿಗೂ ಈ ಲಕ್ಷಣ ಹಬ್ಬುತ್ತಿದೆ ಎಂಬುದು ತೀರಾ ಗುಟ್ಟಾಗಿಯೇನು ಉಳಿದಿಲ್ಲ. ಆದರೂ ಇನ್ನೂ ಬುಡಕಟ್ಟು ಮಹಿಳೆ ತನ್ನ ಅಂತಸ್ತ ಜಗತ್ತಿನಿಂದ ವಿಮೋಚನೆಯಾಗಿಲ್ಲ.

ಹೀಗೆಂದಾಗ ಮಹಿಳೆಯರಿಗೆ ದೊರೆಯುವ ಶಿಕ್ಷಣಾವಕಾಶಗಳು ಬಹುಮಟ್ಟಿಗೆ ಒಳ್ಳೆಯ ಗಂಡನನ್ನು ಹುಡುಕುವ ಉದ್ದೇಶದ್ದಾಗಿರುತ್ತದೆ ಎಂಬ ಮಾತೇ ಪ್ರಧಾನವಾದುದು. ಸರ್ಕಾರದ ಕಾಯಿದೆ ಕಾನೂನುಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯ-ಸವಲತ್ತುಗಳನ್ನು ಮೀಸಲಿರಿಸಬಹುದು. ತಂದೆ-ತಾಯಿಯರು ತಮ್ಮ ಹೆಣ್ಣು ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳಿಸಲೂಬಹುದು. ಆದರೆ ಸೂಕ್ತ ವರನನ್ನು ಪಡೆಯುವಷ್ಟಕ್ಕೆ ಅವಳ ಶಿಕ್ಷಣ ಸೀಮಿತವಾಗಿ ಬಿಡುತ್ತದೆ ಹೊರತು ಉನ್ನತ ಶಿಕ್ಷಣ ತಮ್ಮದಾಗಿಸಿಕೊಳ್ಳುವಲ್ಲಿ ಎಷ್ಟೋ ಮಹಿಳೆಯರು ವಿಫಲವಾಗುತ್ತಾರೆ. ಭಾರತದಂತಹ ಸಾಂಪ್ರದಾಯಿಕ ನಾಡಿನಲ್ಲಿ ಮಹಿಳೆಗೆ ಒದಗಿ ಬಂದ ಶಿಕ್ಷಣಾವಕಾಶಕ್ಕೆ ವಿಚಿತ್ರವಾದದೊಂದು ಚರಿತ್ರೆ ಇದೆ. ಆಧುನಿಕತೆಯ ಪ್ರಾರಂಭದ ಅವಧಿಯಲ್ಲಿ ಸುಧಾರಣಾವಾದಿಗಳಿಂದಾಗಿ ಮಹಿಳೆಗೆ ಶಿಕ್ಷಣಾವ ಕಾಶಗಳು ದೊರೆಯಲಾರಂಭಿಸಿದ್ದು, “೧೮೯೬ರಲ್ಲಿ ವಿಧವೆಯರಿಗಾಗಿ ಪೂನಾದಲ್ಲಿ ಶಾಲೆಯೊಂದು ತೆರೆದಿದೆ”[೧೯] ಅದು ಉನ್ನತ ಜಾತಿಗಳಲ್ಲಿ ಕಿರಿಯ ವಯಸ್ಸಿನ ವಿಧವೆಯರಿಗೆ ಜೀವನದ ಗುರಿಯೊಂದನ್ನು ಕಾಣಿಸುವ ಪ್ರಯತ್ನವಾಗಿ ಈ ದೇಶದ ಅಂದಿನ ಸುಧಾರಣಾವಾದಿಗಳು ಸ್ತ್ರೀಯರಿಗೆ ಶಿಕ್ಷಣವನ್ನು ಒದಗಿಸಿಕೊಡುವಲ್ಲಿ ಲಭಿಸುವಲ್ಲಿ ಬಹು ದೊಡ್ಡ ಪ್ರಯತ್ನಗಳನ್ನು ಮಾಡಿದರು. ಹಾಗೆ ನಮ್ಮ ಮಹಿಳೆಯರಲ್ಲಿ ಮೊದ-ಮೊದಲು ಶಿಕ್ಷಣಾವಕಾಶಗಳು ದೊರೆತದ್ದು ಈ ಬಾಲ ವಿಧವೆಯರಿಗೆ, ಎರಡನೆಯದಾಗಿ ಉನ್ನತ ಪದವಿಗಳನ್ನು ಪಡೆದು ದೊಡ್ಡ ಹುದ್ದೆಗಳಲ್ಲಿದ್ದ ಪುರುಷರು ವಿದ್ಯೆಯ ಗಂಧವಿಲ್ಲದ ಹೆಣ್ಣಗಳನ್ನು ಕಟ್ಟಿಕೊಂಡು ಬಾಳುವುದರಲ್ಲಿ ಬೇಸತ್ತರು. ಅಗಾಧವಾದ ಮಾನಸಿಕ ಬೌದ್ಧಿಕ ಅಂತರಗಳ ಕಷ್ಟವನ್ನು ಸರಿಪಡಿಸಬೇಕೆಂದರೆ ವಿದ್ಯಾವತಿಯಾದ ಹೆಣ್ಣುಬೇಕೆಂದು ಆಶಿಸತೊಡಗಿದರು. ಉನ್ನತ ವರಗಳೆನಿಸಿದ ಇವರ ಆಸೆಗಳಿಗೆ ಅನುಗುಣವಾಗಿ ಹೆಣ್ಣಿನ ಮನೆಯವರು ತಮ್ಮ ಹೆಣ್ಣುಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಕಳಿಸುವುದೂ ಅನಿವಾರ್ಯವಾಯಿತು. ಆದರೆ ಇವರೆಲ್ಲರೂ ಮನೆಯ ಗೌವರಕ್ಕೆ ಭೂಷಣವಾದರೆ ಹೊರತು ನೌಕರಿಗಳನ್ನು ಪಡೆಯುವಲ್ಲಿ ವಿಫಲವಾದರು. ಇಂತಹ ಸಂದರ್ಭದಲ್ಲಿ ಆದಿವಾಸಿ ಮಹಿಳೆಯರು ಗಮನದಲ್ಲಿಯೇ ಇರಲಿಲ್ಲ ಎಂಬುದ ದುರಂತದ ಸಂಗತಿ.

ಶಿಕ್ಷಣವನ್ನು ಕುರಿತಂತೆ ಮಹಿಳೆಯ ಮೇಲೆ ಬೀರಿದ ಪರಿಣಾಮವನ್ನು ಸ್ವಲ್ಪ ಗಮನಿಸಬಹುದು. ನಮ್ಮಲ್ಲಿ ಬಹುಮಟ್ಟಿಗೆ ಹಿಂದೇ ರೂಢಿಯಲ್ಲಿದ್ದ ವಧೂದಕ್ಷಿಣೆಯ ಪದ್ಧತಿ. ಆದರೆ ಕ್ರಮೇಣವಾಗಿ ವರದಕ್ಷಿಣೆಯ ರೂಢಿ ಬಂದದ್ದಕ್ಕೆ ಹಲವು ಕಾರಣಗಳು ಕೂಡಿ ಬಂದವು. ಹುಡಿಗಿಯ ಮದುವೆ

ಆಕೆ ಋತುಮತಿಯಾಗುವ ಮೊದಲೇ ಆಗಬೇಕು ಎಂಬ ನಿಯಮವಿದ್ದುದ್ದು ಹುಡುಗಿಯ ತಂದೆ-ತಾಯಿಯರನ್ನು ಬಹು ದೊಡ್ಡ ಆತಂಕಕ್ಕೆ ಸಿಲುಕಿಸುವ ಸಂಗತಿಯಾಗಿಬಿಟ್ಟಿತು. ತಮ್ಮ ಜಾತಿ ಸಮುದಾಯದೊಳಗೆ ಸೂಕ್ತವಾದ ವರನನ್ನು ನಿಶ್ಚಯಿಸಿ ಹುಡುಗಿ ಋತುಮತಿ ಆಗುವ ಮುಂಚೆ ಹುಡುಕಿಡುವ ಪ್ರಯಾಸವನ್ನು ಭರಿಸುವುದು ಹುಡುಗಿಯನ್ನು ಕುರುಡ, ಕುಂಟ, ಮುದುಕ, ನಿರ್ಗತಿಕ ಯಾರೆಂದರವರಿಗೆ ಒಪ್ಪಿಸುವುದು ಸಾಮಾನ್ಯವಾಗಿತ್ತು.

ಆದರೆ ಈ ಪ್ರಶ್ನೆ ಅತಾರ್ಕಿಕ, ಅಸಹಜವೆಂಬುದಷ್ಟು ಕ್ರೂರವಾಗಿ ಬೆಳೆದು ಬಿಟ್ಟಾಗ, ತಂದೆ-ತಾಯಿಯರಲ್ಲಿ ಈ ನಿಯಮವನ್ನು ಪಾಲಿಸಲಾರೆವು ಎಂಬಂತಹ ಅಸಹಾಯಕತೆಯ ಮೂಲದ ಪ್ರತಿರೋಧ ಹುಟ್ಟಿತು. ಋತುಮತಿಯಾದ ಮೇಲೂ ಹೆಣ್ಣು ಮಗಳು ಮನೆಯಲ್ಲಿ ಉಳಿಯ ತೊಡಗಿದಳು. ಸಮಾಜವು ಕಣ್ಣು ಮುಚ್ಚಿದಂತೆ ನಟಿಸಬೇಕಾಯಿತು. ಸೂಕ್ತ ವರನ ಶೋಧನೆಯಲ್ಲಿ ದಕ್ಷಿಣೆಯನ್ನು ಕೊಡುವ ರೂಢಿ ಬಂತು. ವರದಕ್ಷಿಣೆ ಹಾಗೂ ಮದುವೆಯ ಇತರ ಖರ್ಚುಗಳನ್ನು ಹೊಂದಿಸಿಕೊಳ್ಳಲು ವಧುವಿನ ತಂದೆಗೆ ಸಾಕಷ್ಟು ಸಮಯಾವಕಾಶ ಬೇಕಿತ್ತು. ಈ ಮಧ್ಯೆ ಬೆಳೆದ ಹುಡುಗಿಯನ್ನು ಸುಮ್ಮನೆ ಇಟ್ಟುಕೊಳ್ಳುವುದು ಕಷ್ಟವೆಂದು ತಿಳಿಯುತ್ತದೆ. "ತನ್ನ ವ್ಯಕ್ತಿತ್ವ ವಿಕಸನಕ್ಕೆ ಹೊರಗಿನ ಉದ್ಯೋಗ ನೆರವಿಗೆ ಬರುವ ಬಹುತೇಕ ಸಂದರ್ಭಗಳನ್ನು ಕೂಡ ಬಿಟ್ಟುಕೊಡಲು ಅವಳು ತಯಾರಾಗಿಯೇ ಇರುತ್ತಾಳೆ. ಮಹಿಳೆಯರು ಸ್ವಂತದ ಸಾಧನೆಗಳ ಮೇಲೆ ತಾವಾಗಿಯೇ ನಿರ್ಬಂಧಗಳನ್ನು ಹೇರಿಕೊಂಡಿದ್ದಾರೆ ಎಂದು ಈ ಸಂದರ್ಭವನ್ನು ಖ್ಯಾತ ಸಮಾಜ ಶಾಸ್ತ್ರಜ್ಞೆ ನೀರಾದೇಸಾಯಿ ವಿವರಿಸಿದ್ದಾರೆ. ನಮ್ಮ ಮಹಿಳೆಯರ ಪಾಲಿಗೆ ಉದ್ಯೋಗ ಎಂದರೆ ಒಂದು ನೌಕರಿ ಎಂದಷ್ಟೇ ಹೊರತು. ಅದು ತಮ್ಮ ಸಾಧನೆಯ ಕ್ಷೇತ್ರ. ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡು ಬೆಳೆಯಬೇಕಾದ ಅವಕಾಶ ಎನ್ನುವಂಥದ್ದಾಗಲಾರದು, ತನ್ನ ಕುಟುಂಬ ಸಂಸಾರದಲ್ಲಿ ಹೆಂಡತಿಯಾಗಿ, ತಾಯಿಯಾಗಿ, ಗೃಹಿಣಿಯಾಗಿ ತಾನು ನಿರ್ವಹಿಸಬೇಕಾದ ಹೊಣೆಯನ್ನೇ ಅವಳು ಪ್ರಧಾನವಾಗಿ ಭಾವಿಸಬೇಕಾಗುತ್ತದೆ. ಹೊರಗೆ ಸ್ವಾತಂತ್ರ್ಯ ಜವಾಬ್ದಾರಿಯ ಉನ್ನತ ಹುದ್ದೆಗಳನ್ನು ಒಪ್ಪಿಕೊಳ್ಳಲು ಹೋಗುವುದಿಲ್ಲ."[2]

ಇಂದಿನ ದ್ವಿಪಾತ್ರ ನಿರ್ವಹಣೆಯ ಒತ್ತಡದಲ್ಲಿ ಮಹಿಳೆ ಸಿಲುಕಿ ಹೋಗಿರುವಾಗಲೂ, ತನ್ನ ಕ್ಷೇಮ ಚಿಂತನೆಯನ್ನೇ ಪ್ರಧಾನವಾಗಿ ಪರಿಗಣಿಸಿ ಮನೆಯ ಹೊರಗಿನ ಅವಕಾಶಗಳನ್ನು ಬಾಚಿಕೊಳ್ಳಲು ಹೋಗುತ್ತಿಲ್ಲ. ಮನೆಯ ಒಳಗಿನ ಪಾತ್ರಕ್ಕೆ ಕುಂದು ಭಾರದಂತೆ ಏನನ್ನಾದರೂ ಸಾಧಿಸುವ ಸಾಧ್ಯತೆಗಳ ಬಗ್ಗೆ ಚಿಂತಿತಳಾಗಿದ್ದಾಳೆ. ಇದೇ ರೀತಿಯಾಗಿ ಬೇಡ ಸಮುದಾಯದ ಮಹಿಳೆಯೂ ಮನೆ ಮತ್ತು ಕೃಷಿ, ಕೃಷಿಯೇತರ ಕಾರ್ಯಗಳಲ್ಲಿ ನಿಷ್ಠೆಯಿಂದ ದುಡಿಯುತ್ತಿದ್ದಾಳೆ.

ಇದು "ನಮ್ಮ ಸಮಾಜವು ಸಹಾನುಭೂತಿಯಿಂದ ಗ್ರಹಿಸಿ ನೆರವಾಗುವ ಬದಲು ಅವಳು ದಡ್ಡಿ, ಅಸಮರ್ಥಳು ಎಂಬಂತೆ ವ್ಯಾಖ್ಯಾನಿಸುತ್ತದೆ. ಕೆಲವೊಮ್ಮೆ ಮನೆಯ ಒಳಗೂ ಹೊರಗೂ

ಒಟ್ಟೊಟ್ಟಿಗೆ ಈ ಆಕ್ಷೇಪಗಳಿಗೆ ಅವಳು ಗುರಿಯಾಗುತ್ತಾಳೆ. ಇನ್ನು ಇವೆಲ್ಲ ಸಂಘರ್ಷಗಳೇ ಬೇಡವೆಂದು ತನ್ನ ಕ್ಷೇತ್ರದಲ್ಲಿನ ಸಾಧನೆ, ತನ್ನ ವೃತ್ತಿಯ ಸಫಲತೆಗಳನ್ನೇ ಮಹಿಳೆಯು ಮುಂದುಮಾಡಿಕೊಂಡರೆ ಮನೆ ಸಂಸಾರ ಮಕ್ಕಳು ಎಂಬ ಸುಖಗಳನ್ನು ತ್ಯಾಗ ಮಾಡಬೇಕಷ್ಟೆ. ಈ ಸಮಾಜದ ವ್ಯವಸ್ಥೆಯೂ ಎಂದೆಂದೂ ಮಹಿಳೆಯಿಂದ ನಿರೀಕ್ಷಿಸುವುದು ತ್ಯಾಗವನ್ನೇ. ಅತ್ಯಾಧುನಿಕ ಗೃಹೋಪಕರಣಗಳು, ಕಂಪ್ಯೂಟರಗಳು, ಹೊಸ ತಂತ್ರಜ್ಞಾನಗಳು ಮಹಿಳೆಯ ದೈನಂದಿನ ಗೋಳಾಟದಲ್ಲಿ ನೆರವು ನೀಡುತ್ತಿವೆ ಎಂಬುದೇನೋ ನಿಜ. ಆದರೂ ಅವಳು ನಿರ್ವಹಿಸಬೇಕಾಗಿರುವ ದ್ವಿಪಾತ್ರಗಳ ಮೂಲ ಸಾಮಾಜಿಕ ಆಶಯವೇ ಅವಳ ಮುಂದೆ ನಿಂತಿರುವ ದೊಡ್ಡ ಸವಾಲಾಗಿರುವುದು.

ಸಮಾಜವು ಆರೋಗ್ಯಕರವಾಗಿ ಸಂತೃಪ್ತವಾಗಿ ಮುನ್ನಡೆಯುವಲ್ಲಿ ಕುಟುಂಬ ಎಂಬ ಸಂಸ್ಥೆಯ ಪಾತ್ರವೇ ಅತ್ಯಂತ ಮಹತ್ತರವಾದದ್ದು, ಈ ಸಂಸ್ಥೆಯು ಸದೃಡವಾಗಿ ನಿಲ್ಲಬೇಕೆಂದರೆ ಮಹಿಳೆ ಮುಖ್ಯ ಕಾರಣ. ಹಿಂದಿನಿಂದ ಹೆಣ್ಣೇ ಮನೆಯ ಕೇಂದ್ರ ಶಕ್ತಿಯಾಗಿ ದುಡಿಯುತ್ತಾ ಬಂದಿದ್ದಾಳೆ. ಅವಳು ಆತ್ಮ ವಿಕಾಸದ ಹಾದಿಯನ್ನು ಶೋಧಿಸುತ್ತಿರುವಾಗಲೂ ಮೂಲ ಕೇಂದ್ರವನ್ನು ಮರೆಯದೆ ಸಾಗಬೇಕೆಂಬ ಬಗ್ಗೆ ಪ್ರೀತಿಯನ್ನು ಹೊಂದಿದ್ದಾಳೆ. ಇಂದಿನ ಸಮಾಜವು ಅವಳನ್ನು ಕೃತಜ್ಞತೆಯಿಂದ ಕಾಣಬೇಕು ಎಂಬುದಕ್ಕೆ ಇದಕ್ಕಿಂತ ದೊಡ್ಡ ಕಾರಣ ಬೇಕಾಗಿಲ್ಲ. ಅಂಥಾದ್ದರಲ್ಲಿ ಅವಳನ್ನು ಛಿದ್ರಗೊಳಿಸಲು ಹೊಸ-ಹೊಸ ಉಪಾಯಗಳನ್ನು ಶೋಧಿಸುತ್ತಾ ಸಾಗಿರುವ ಈ ಸಮಾಜದ ಎದುರು ಮಹಿಳೆ ಸವಾಲೆಸದು ನಿಲ್ಲುವ ಪ್ರತಿಭಟನೆಯ ಮಾದರಿಯಾಗಿ ಬೆಳೆಯುವುದು ಅನಿವಾರ್ಯವಾಗಿ ಬಿಡಬಹುದು. ಇದನ್ನು ಇನ್ನಾದರೂ ಈ ಸಮಾಜವು ಅರಿತು ಮಹಿಳೆಯನ್ನು ಮನ್ನಿಸಿ ಗೌರವಿಸಬೇಕು. ಪ್ರೀತಿ ಸಹಾನುಭೂತಿಗಳಿಂದ ಅವಳನ್ನು ಕಾಣುವುದು ಅವಳ ವಿಕಸನದ ಹಾದಿಗಳಿಗೆ ತೊಡಕಾಗದೆ ನೆರವಾಗುವುದು ಸಮಾಜದ ಏಳಿಗೆಯ ಅಗತ್ಯಗಳಾಗಿವೆ"[೧] ಶಿಕ್ಷಣ ಕಲಿತು ಉದ್ಯೋಗದಲ್ಲಿರುವಂತಹ ಮಹಿಳೆಯರೇ ಈ ರೀತಿಯಾದ ಸಮಸ್ಯೆಗಳನ್ನು ಎದುರುಗೊಳ್ಳುತ್ತಿರುವಾಗ. ಇನ್ನೂ ಅಕ್ಷರ ಜ್ಞಾನವಿಲ್ಲದ ಬೇಡ ಸಮುದಾಯದ ಮಹಿಳೆಯರ ಜೀವನಕ್ಕೆ ಭರವಸೆ ಉಂಟೆ. ಇಂತಹ ಹಲವು ಸಮಸ್ಯೆಗಳನ್ನು ಮೀರಿ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವೆ ಎನ್ನುವಂತಹ ಸಂಗತಿ ನಮಗೆ ಬಹುಮುಖ್ಯವಾಗುತ್ತದೆ.

೨೧ನೇ ಶತಮಾನದಲ್ಲಿ ಕಾಲಿರಿಸಿದ ಮಹಿಳೆಯೂ ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರವೇಶಕ್ಕೆ ಅರ್ಹತೆ ಪಡೆದುಕೊಂಡಿದ್ದಾಳೆ. ಅದು ಅಲ್ಲದೆ ಈ ಶತಮಾನದ ಪ್ರಧಾನ ಚರ್ಚೆಗಳಲ್ಲಿ 'ಮಹಿಳೆಯೂ' ಒಬ್ಬಳು. ಮಹಿಳೆಯ ಪರವಾಗಿ ಅನೇಕ ಸಂಘ-ಸಂಸ್ಥೆಗಳು ಸಂಘಟನೆಗಳು ಅಸ್ತಿತ್ವದಲ್ಲಿವೆ. ಸರಕಾರ, ಸಂವಿಧಾನಗಳು ಸಹ ಮಹಿಳೆಯರ ಪರ ಚಿಂತನೆ ಮಾಡಿ, ಸ್ತ್ರೀಯರಿಗೆಂದೇ ಅನೇಕ ಕಾನೂನು ಮತ್ತು ಯೋಜನೆಗಳನ್ನು ತಂದಿವೆ. ಇದುವರೆಗೆ ಆಕೆ ಅನುಭವಿಸಿದ ಅನಿಷ್ಟ ಪದ್ಧತಿ ಆಚರಣೆಗಳಿಂದ ಲಿಂಗ ತಾರತಮ್ಯಗಳಿಂದ ಪಾರುಮಾಡಲು ಪ್ರಯತ್ನಿಸುತ್ತಿದೆ. ಮಹಿಳೆಯರ

ಅಭಿವೃದ್ಧಿ ಆರೋಗ್ಯ, ಶಿಕ್ಷಣ, ಮೊದಲಾದ ವಿಷಯಗಳಿಗೆ ಅನ್ವಯಿಸಿದಂತೆ ವಿಚಾರ ಸಂಕಿರಣಗಳು, ಚರ್ಚೆಗಳು ಏರ್ಪಡುತ್ತಲಿವೆ. ಅಲ್ಲದೆ ಮಹಿಳೆಯರನ್ನು ಒಳಗೊಂಡು ಮಹಿಳಾ ಅಧ್ಯಯನ ಕೇಂದ್ರಗಳು ಹುಟ್ಟಿಕೊಂಡಿವೆ.

ಸ್ತ್ರೀ ಪರವಾದ ನೆಲೆಯಲ್ಲಿ ಮಹಿಳೆಯನ್ನು ಕುರಿತಂತೆ ಸಾಹಿತ್ಯ, ಚರಿತ್ರೆ, ರಾಜಕಾರಣ ಮೊದಲಾದವುಗಳಲ್ಲಿ ಪ್ರಧಾನವಾಗಿ ಚರ್ಚಿಸಲಾಗುತ್ತಿದ್ದು. ಸಮಕಾಲೀನ ಸಾಹಿತ್ಯದ ಕಾಲಘಟ್ಟವನ್ನು ಸ್ತ್ರೀವಾದ-ಸ್ತ್ರೀಪರ ನಿಲವು ಎಂದು ಕರೆಯುತ್ತಾರೆ. ಸ್ತ್ರೀಯು ನಾಲ್ಕು ಗೋಡೆಗಳ ಆಚೆ ಬಂದು ಹಲವು ಬಗೆಯ ಕಾರ್ಯ-ಚಟುವಟಿಕೆಗಳಲ್ಲಿ ತೊಡಗಿದ್ದಾಳೆ ಆದರೆ ಎಂದಾದರೂ ಆಕೆ ನವೀನ ಬಗೆಯ ಸವಾಲುಗಳನ್ನು ಎದುರಿಸಬೇಕಾಗಿದೆ ಒಂದು ಸಮಸ್ಯೆಯನ್ನು ತಡೆಯಲು ಪ್ರಯತ್ನಿಸಿ ಆದರಿಂದ ಮುಕ್ತಳಾದೆ ಎಂದು ಸ್ತ್ರೀಯ ಭಾವಿಸುವಂತಿಲ್ಲ. ಒಂದು ಸಮಸ್ಯೆ ಹೋಗಿ ಸ್ವಲ್ಪ ಅನುಕೂಲಗಳಾದರೂ, ಅದಕ್ಕೆ ಹೊಂದಿಕೊಂಡಂತೆ ವಿವಿಧ ಬಗೆಯ ಹೊಸ ಸವಾಲುಗಳು ಎದುರಾಗುತ್ತವೆ. ಇಂತಹ ಸಂಧಿಗ್ಧ ಸಮಕಾಲೀನ ಸಂದರ್ಭದಲ್ಲಿ ಈ ಸಮುದಾಯದ ಮಹಿಳೆಯರು ಪುರುಷನ ಸರಿಸಮಾನವಾದ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಅಥವಾ ಧಾರಣ ಮಾಡಿಕೊಳ್ಳುವಲ್ಲಿ ಶತಶತಮಾನದಿಂದಲೂ ವಿಫಲರಾಗುತ್ತಾ ಬಂದಿದ್ದಾರೆ ಇದಕ್ಕೆ ಬಹುಮುಖ್ಯವಾದ ಕಾರಣವೆಂದರೆ ಪುರುಷ ಪ್ರಾಧಾನ್ಯ ಸಮಾಜದ ಒತ್ತಡಗಳು. ಕಾರಣವಾಗಿವೆ.

೨. ಹೆಣ್ಣು ಭ್ರೂಣ ಹತ್ಯೆ

"ಇವತ್ತಿನ ಸಂದರ್ಭದಲ್ಲಿ ಸ್ತ್ರೀವಾದಿ ಅಧ್ಯಯನಗಳು ಸ್ತ್ರೀಯರನ್ನು ಕುರಿತಂತೆ ಚರ್ಚೆ ನಡೆಸುತ್ತಿವೆ. ಹೀಗಿದ್ದರೂ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದೆ ಎಂದು ಕೇವಲ ಸ್ತ್ರೀವಾದಿಗಳು ಮಾತ್ರ ಅಭಿಪ್ರಾಯಪಟ್ಟಿದ್ದಾರೆ ಎಂಬ ಆರೋಪಗಳು ಸಾಕಷ್ಟು ಕೇಳಿಬರುತ್ತಿವೆ. ಸಂವಿಧಾನದ ಪ್ರಕಾರ ಯಾವುದೇ ಬಗೆಯ ಲಿಂಗ ತಾರತಮ್ಯ ಮಾಡಲಾಗದು. ಆದರೆ ಅನೇಕ ತಾಯಂದಿರು ಹೆಣ್ಣುಮಕ್ಕಳಿಗೆ ಜನ್ಮನೀಡುವ ಸ್ವಾತಂತ್ರ್ಯವನ್ನು ಪಡೆದಿಲ್ಲದಿರುವುದರಿಂದ ಹೆಣ್ಣು ಎಂದು ಗೊತ್ತಾದರೆ ಸಾಕು ಭ್ರೂಣವನ್ನು ತೆಗೆದುಹಾಕಲು ಮುಂದಾಗುತ್ತಿರುವುದನ್ನು ಗಮನಿಸಬಹುದು. ಸ್ತ್ರೀಯರು ಇಂಥ ಪಾಶವೀಕೃತ್ಯದಲ್ಲಿ ತೊಡಗಲು ಪ್ರಧಾನ ಕಾರಣಗಳೆಂದರೆ ಮೊದಲನೆಯದು ಹೆಣ್ಣಿನ ಬಗ್ಗೆ ಪುರುಷ ಪ್ರಧಾನ ಸಮಾಜ ತಾಳಿರುವ ಪಕ್ಷಪಾತ-ಧೋರಣೆ. ಎರಡನೆಯದು ಗಂಡುಮಗುವಿನ ಹಂಬಲ ಎನ್ನಬಹುದು. ಪ್ರಾಚೀನ ಕಾಲದಿಂದ ಸಮಕಾಲೀನ ಸಂದರ್ಭದವರೆಗೂ ಗಂಡುಮಗುವಿನ ಹುಟ್ಟಿಗೆ ಅಪೇಕ್ಷ ಸ್ವಲ್ಪವೂ ಕಡಿಮೆಯಾಗಿಲ್ಲ. ಎಷ್ಟೋ ವಿದ್ಯಾವಂತರು ಸಹ ಗಂಡು-ಹೆಣ್ಣು ಎಂಬ ಪದಗಳನ್ನು ಲಾಭ-ನಷ್ಟ, ನಮ್ಮದು-ಪರರ ಒಡವೆ ಎಂಬ ಸಂಕೇತ ಪದಗಳನ್ನಾಗಿ ಬಳಸುತ್ತಿರುವುದುಂಟು. ಗಂಡು ಹುಟ್ಟಿದರೆ ಸಂತೋಷ ವ್ಯಕ್ತಪಡಿಸಿ ಸಿಹಿ ಹಂಚುವ ಎಷ್ಟೋಜನ ಇಂದಿಗೂ ಇದ್ದಾರೆ. ಪ್ರಾಚೀನ ಕಾಲದಲ್ಲಿ ಗಂಡು ಮಗುವಿಗಾಗಿ ಪ್ರಾರ್ಥಿಸುವ ಶ್ಲೋಕಗಳು ಆಚರಿಸುವ ಪದ್ಧತಿಗಳಿದ್ದರೆ,

ಇಂದು ಗಂಡು ಮಗುವನ್ನು ಪಡೆಯಲು ಹೋಮ, ಪೂಜೆ ಮೊದಲಾದವುಗಳ ಜೊತೆಗೆ ವಿಜ್ಞಾನದ ಸಹಾಯವನ್ನು ಪಡೆಯಲಾಗುತ್ತಿದೆ. ಭ್ರೂಣಾವಸ್ಥೆಯಲ್ಲಿಯೇ ಮಗುವಿನಲ್ಲಿ ಇರಬಹುದಾದ ದೈಹಿಕ ತೊಂದರೆಗಳನ್ನು ಗುರುತಿಸಿ, ನಂತರದಲ್ಲಿ ಸಂಭವಿಸಬಹುದಾದ ಸಮಸ್ಯೆಗಳನ್ನು ಸರಿಪಡಿಸಲು ಅನುವು ಮಾಡಿಕೊಡಲು ಅಸ್ತಿತ್ವಕ್ಕೆ ಬಂದಂಥ ವೈದ್ಯಕೀಯ ಪರೀಕ್ಷೆಗಳನ್ನು (ಅಮ್ನಿಯೋಸಿಂಥಿಸಿಸ್) ದುರುಪಯೋಗ ಮಾಡಿಕೊಂಡು ಕೇವಲ ಹೆಣ್ಣು ಭ್ರೂಣಗಳ ಹತ್ಯಗೆ ಬಳಸಿಕೊಳ್ಳಲಾಗುತ್ತದೆ. ಹೆಣ್ಣು ಭ್ರೂಣಗಳ ಹತ್ಯೆಯಲ್ಲಿ ವೈದ್ಯರು ವೈದ್ಯಕೀಯ ಸಿಬ್ಬಂದಿಯೂ ಭಾಗಿಗಳಾಗಿದ್ದು, ಹೆರಿಗೆ ಆಸ್ಪತ್ರೆಗಳು ಭ್ರೂಣಹತ್ಯೆಗೆಂದು ನಡೆಸಲಾಗುವ ಆಸ್ಪತ್ರೆಗಳಾಗಿವೆ. ಗಂಡು ಮಗುವಾದರೆ ಹೆರಿಗೆ ಮಾಡಿಸುವ ಹೆಣ್ಣು ಮಗುವಾದರೆ ಭ್ರೂಣ ತೆಗೆಯುವ ಎರಡು ಕಾರ್ಯಗಳಿಂದ ಆಸ್ಪತ್ರೆಗಳಿಗೆ ಆರ್ಥಿಕ ಲಾಭವುಂಟು. ಆದರೆ ಇಂಥ ಆಸ್ಪತ್ರೆಗಳಲ್ಲಿ ನುರಿತ ವೈದ್ಯರಾಗಲಿ, ದಾದಿಯರಾಗಲಿ ಇರುವುದಿಲ್ಲ. ಭ್ರೂಣ ಪರೀಕ್ಷೆಗೆ ಎಂದು ತನ್ನದೇಹವನ್ನು ಒಪ್ಪಿಸುವ ತಾಯಂದಿರು ಭವಿಷ್ಯದಲ್ಲಿ ಹಲವಾರು ಬಗೆಯ ತೊಂದರೆಗಳನ್ನು ಎದುರಿಸಬೇಕಾಗಿದೆ.

ಇಂಥ ಪರೀಕ್ಷೆಯ ಸಂದರ್ಭದಲ್ಲಿ ಒಮ್ಮೆಲೆ ಇಬ್ಬರು ಹೆಣ್ಣುಮಕ್ಕಳ ಶೋಷಣೆ ನಡೆಯುತ್ತದೆ. ಆದರೆ ಅದನ್ನು ಶೋಷಣೆ ಎಂದು ಯಾರು ಪರಿಗಣಿಸದಿರುವುದು ಹೊಸ ಬಗೆಯ ಸವಾಲಾಗಿದೆ. "ಹೆಣ್ಣು ಭ್ರೂಣವನ್ನು ಇಂದು ಬಹಳ ಕಡಿಮೆ ಮೊತ್ತದಲ್ಲಿ ತೆಗೆಯಿಸಿದರೆ, ಭವಿಷ್ಯದಲ್ಲಿ ವೆಚ್ಚವಾಗುವ ಬಾರಿ ಮೊತ್ತವನ್ನು ಉಳಿಸಬಹುದು" ಎಂಬ ಜಾಹಿರಾತುಗಳು, ಪತ್ರಿಕೆ, ಕರಪತ್ರಗಳು ಮೂಡಿ ಬರುತ್ತಿವೆ. ಹೀಗೆ ಪ್ರಚಾರ ಮಾಡುವ ಮುಖೇನ ಹೆಣ್ಣು ಭ್ರೂಣಹತ್ಯೆಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಆದರೆ ಇತ್ತಿಚೆಗೆ ಮಹಿಳಾ ಸಂಘಟನೆಗಳು ಅಮ್ನಿಯೋ ಸಿಂಥಿಸಿಸ್ ವಿರುದ್ಧ ಹೋರಾಟ ಮಾಡಿ ನಿಲ್ಲಿಸಿವೆ ಎನ್ನುವುದು ಸ್ವಲ್ಪ ಸಮಾಧಾನಕರ ಸಂಗತಿಯಾಗಿದೆ. ಆದರೆ ಇಂದಿಗೂ ಗುಪ್ತವಾಗಿ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿದೆ. ಇದರ ಪ್ರಮಾಣದ ಬಗ್ಗೆ ಪತ್ರಿಕೆಯೊಂದು ವರದಿ ಮಾಡುತ್ತ ೧೯೮೧-೮೨ರಲ್ಲಿ ಹೆಣ್ಣು ಭ್ರೂಣ ಪರೀಕ್ಷೆಯಿಂದ ೭೮,೦೦೦ ಹೆಣ್ಣು ಭ್ರೂಣಗಳ ಹತ್ಯೆಯಾಗಿದೆ" (Tims of india editorial, June 1982) ಎಂದು ತಿಳಿದು ಬಂದಿದೆ. ಇಂಥ ಹತ್ಯೆಗಳಿಂದ ಸ್ತ್ರೀ-ಪುರುಷ ಅನುಪಾತದ ಭಿನ್ನತೆ ಈ ರೀತಿ ಇದೆ.

೧೯೮೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೯೭೨ರಷ್ಟು ಮಹಿಳೆಯರು.

೧೯೯೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೯೨೯ರಷ್ಟು ಮಹಿಳೆಯರು

೨೦೦೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೯೩೧ರಷ್ಟು ಮಹಿಳೆಯರು.

ಅನೇಕರು ಹೆಣ್ಣು ಭ್ರೂಣಗಳ ಹತ್ಯೆಯಿಂದ ಭವಿಷ್ಯದಲ್ಲಿ ಸ್ತ್ರೀಯರಿಗೆ ಅಪಾರ ಬೇಡಿಕೆ ಬರುತ್ತದೆ ಎಂದಿದ್ದಾರೆ. ಆದರೆ ಇವರಿಗೆ ಹೆಣ್ಣಿನ ಮೇಲೆ ಆಗುತ್ತಿರುವ ಅನ್ಯಾಯ-ದೌರ್ಜನ್ಯಗಳು ಕಾಣುವುದಿಲ್ಲ. ಆದರೆ ವಾಸ್ತವವಾಗಿ ಚಿಂತಿಸಿದಾಗ ಹೆಣ್ಣುಗಳ ಜನನ ಪ್ರಮಾಣ ಕಡಿಮೆಯಾದರೆ

ಹೆಣ್ಣಿಗೆ ಬೇಡಿಕೆ ಬರುವುದರ ಬದಲು ಅನೇಕ ಪುರುಷರು ಒಂದು ಹೆಣ್ಣಿನ ಬದುಕಿನ ಮೇಲೆ ನಿಯಂತ್ರಣ ಪಡೆಯುತ್ತಾರೆ. ಇದರಿಂದ ಮತ್ತೆ ಹೆಣ್ಣು ಶೋಷಣೆಗೆ ಒಳಗಾಗುತ್ತಾಳೆ. ಅಲ್ಲದೆ ಸವಾಲುಗಳಲ್ಲದೆ ಬದುಕು ನಡೆಸಲು ಸಾಧ್ಯತೆಗಳಿಲ್ಲ.”[೧೪]

“ಮಾನವಾಧಿಕಾರ ಆಯೋಗ ನಡೆಸಿದ ಅಧ್ಯಯನದಲ್ಲಿ ಶೇ. ೨೪ರಷ್ಟು ಹೆಣ್ಣುಗಳು ೧೫ ವರ್ಷ ಪ್ರಾಯಕ್ಕಿಂತ ವೇಶ್ಯಾವಾಟಿಕೆ ಸೇರಿದ್ದರು. ಭಾರತ ಮತ್ತು ಪೌರ್ವಾತ್ಯ ದೇಶಗಳಲ್ಲಿ ಎಳೆಯ ಪ್ರಾಯದ ಹೆಣ್ಣುಗಳಿಗೆ ಬೇಡಿಕೆ ಹೆಚ್ಚು. ಇವರಲ್ಲಿ ಕಾಯಿಲೆ ಇರುವುದಿಲ್ಲ ಎಂದು ನಂಬಿಕೆ. ಅಪ್ರಾಪ್ತ ವಯಸ್ಸಿನ ಹುಡುಗಿಯರನ್ನು ಕೂಡಿದರೆ ಸ್ತ್ರೀ ರೋಗಗಳು ಗುಣವಾಗುತ್ತವೆ ಎಂಬ ಮೂಢ ನಂಬಿಕೆಗಳು ಭಾರತದಲ್ಲಿವೆ. ಇಂಥವರ ಹಸಿವು ತುಂಬಿಸಲು ಸಾವಿರಾರು ಹೆಣ್ಣು ಮಕ್ಕಳ ಅಪಹರಣ, ಕಳ್ಳಸಾಗಣೆ ನಡೆಯುತ್ತಿದೆ. ಇನ್ನೂ ಪ್ರಾಯತುಂಬದ ಮುಗ್ಧ ಮಕ್ಕಳು ಸೆಕ್ಸ್ ಮಾರುಕಟ್ಟೆಯ ಬಲಿಪಶುಗಳಾಗುತ್ತಿದ್ದಾರೆ. ಇವರಲ್ಲಿ ಬಡತನ ಕುಟುಂಬದವರೇ ಹೆಚ್ಚಾಗಿದ್ದಾರೆ.”[೧೫]

ಹೆಣ್ಣು ಭ್ರೂಣ ಹತ್ಯೆಯ ಪ್ರಮಾಣ ಏರಿಕೆಯಾಗುತ್ತಿದೆ. ಲಿಂಗ ಪತ್ತೆ ಕಾನೂನು ಬಾಹಿರವಾಗಿದೆ. ೧೯೯೪ರಲ್ಲಿ ಕೇಂದ್ರ ಸರಕಾರ ಕಾನೂನನ್ನು ಜಾರಿಗೆ ತಂದಿದೆ. ಹಲವು ಸಲ ತಿದ್ದುಪಡಿ ಮಾಡಲಾಗಿದೆ. ಆದರೂ ಹೆಚ್ಚಿನ ಪ್ರಯೋಜನ ಕಂಡುಬಂದಿಲ್ಲ. ಕಾರಣ ಜಾರಿಯಾದ ಯೋಜನೆ ಗ್ರಾಮೀಣ ಪ್ರದೇಶದಲ್ಲಿರುವ ಜನಸಾಮಾನ್ಯರಿಗೆ ತಲುಪದೆ ಗೋಡೆ ಬರಹ, ಬಿತ್ತಿಪತ್ರ, ದಿನಪತ್ರಿಕೆಗಳ ಮೂಲಕ ಪ್ರಚಾರ ಮಾಡಲಾಗುತ್ತದೆ ವಿನಹಃ ಜನ ಸಂಪರ್ಕ ಕಾರ್ಯಕ್ರಮಗಳು ಏರ್ಪಡುತ್ತಿಲ್ಲ. ಇನ್ನೊಂದು ಸಮಸ್ಯೆಯೆಂದರೆ ಗ್ರಾಮೀಣದಲ್ಲಿರುವ ಎಲ್ಲರೂ ಅನಕ್ಷರಸ್ಥರು. ಇದರಿಂದಾಗಿ ಅವರಿಗೆ ಗೋಡೆಬರಹ, ದಿನಪತ್ರಿಕೆಗಳು, ಇತರೆ ಮಾಧ್ಯಮಗಳ ಪ್ರಚಾರ ತಲುಪುತ್ತಿಲ್ಲ. ಇನ್ನೊಂದು ೨೦೧೧ರ ಜನಗಣತಿಯ ವರದಿಯಂತೆ ಪ್ರತಿಸಾವಿರ ಪುರುಷರಿಗೆ ೯೩೩ರಷ್ಟು ಮಹಿಳೆಯರಿದ್ದಾರೆ. ೦.೬. ವಯಸ್ಸಿನ ಮಕ್ಕಳಲ್ಲಿ ಗಂಡಿಗೆ ೮೭೨ ಹೆಣ್ಣು ಮಕ್ಕಳಿವೆ. ಕಳೆದ ಆರು ವರ್ಷಗಳಲ್ಲಿ ಹಣ್ಣು ಭ್ರೂಣಹತ್ಯೆ ಇನ್ನೂ ಹೆಚ್ಚಾಗಿರುವುದು ಕಂಡು ಬಂದಿದೆ.

“ರಾಜ್ಯದಲ್ಲಿ ಸಾವಿರ ಗಂಡಿಗೆ ೯೪೯ ಹೆಣ್ಣು ಮಕ್ಕಳಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ಹರಿಯಾಣದ ಪರಿಸ್ಥಿತಿ ೮೭೦ರಷ್ಟು ಮಹಿಳೆಯರಿದ್ದು, ಈಗಾಗಲೇ ಮಹಿಳೆಯರನ್ನು ಕೊಂಡು ತಂದು ಮದುವೆಯಾಗುತ್ತಿರುವ ಸ್ಥಿತಿ ಇಲ್ಲೂ ಬಂದರೆ ಆಶ್ಚರ್ಯ ಪಡಬೇಕಿಲ್ಲ.”[೧೬] ಹೆಣ್ಣು ಭ್ರೂಣಹತ್ಯೆಯಂತಹ ಜೀವವಿರೋಧಿ ಪದ್ಧತಿಗಳಿಗೆ ಒಟ್ಟಾರೆಯಾಗಿ ಹೇಳಬೇಕೆಂದರೆ ಪ್ರಬಲವಾದ ಪಿತೃಪ್ರಧಾನತೆಯೇ ಕಾರಣವೆನ್ನಬಹುದು. ಪಿತೃಪ್ರಧಾನತೆಯ ಬಿತ್ತುವ ಅನೇಕ ಮೌಲ್ಯಗಳು ಹೆಣ್ಣಿನ ಬಗೆಗಿನ ಸಾಮಾಜಿಕ ಸ್ಪಂದನವನ್ನೇ ಇಲ್ಲವಾಗಿಸಿ ಬಿಡುತ್ತವೆ.

೩. ಹೆಣ್ಣು ಕೂಸುಗಳ ಮಾರಾಟ

ಬಡತನ, ಅನಕ್ಷರತೆಯಂಥ ಸಾಮಾಜಿಕ ಸಮಸ್ಯೆಗಳ ಅಂತಿಮ ಬಲಿಪಶು ಮಹಿಳೆಯಾಗಿದ್ದಾಳೆ.

ಅಭಿವೃದ್ಧಿಯಪಥದಲ್ಲಿ ನಡೆಯುತ್ತಿದ್ದೇವೆ ಎನ್ನುವಾಗ ಹೆಣ್ಣು ಭ್ರೂಣಗಳ ಹತ್ಯೆ ಒಂದಡೆಯಾದರೆ, ಇನ್ನೊಂದು ಕಡೆ ಹೆಣ್ಣು ಕೂಸುಗಳ ಮಾರಾಟ ನಡೆಯುತ್ತಿರುವುದು. ಪ್ರಧಾನ ಸವಾಲಾಗಿದೆ. "ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಲಂಬಾಣಿ ತಾಂಡಗಳಲ್ಲಿ ಹೆಣ್ಣು ಹಸುಳೆಗಳು ಮಾರಾಟ ನಡೆದ ದಾಖಲೆಗಳು ಕಂಡುಬರುತ್ತಿವೆ. ಚಿಂಚೋಳಿಯ ೫೨ಕ್ಕೂ ಅಧಿಕ ಲಂಬಾಣಿ ತಾಂಡಗಳಲ್ಲಿ ದಶಕದಿಂದಲೇ ಈ ಅಕ್ರಮ ದಂಧೆ ನಡೆದಿತ್ತು."[೧೭] ಆದರೆ ಇತ್ತೀಚೆಗೆ ೪೫ ತಾಂಡಗಳಿಂದ ೧೯ ಪ್ರಕರಣಗಳನ್ನು ಮಾತ್ರ ಪೋಲಿಸರು ದಾಖಲಿಸಿದ್ದಾರೆ. ಮಾರಾಟವಾಗುವ ಹೆಣ್ಣು ಕೂಸುಗಳು ೧೫ ದಿನಗಳಿಂದ ೪ ವರುಷದವರು ಮಾತ್ರ ಆಗಿರುತ್ತಾರೆ. ಈ ಕೂಸುಗಳಿಗೆ ೫೦೦ ರೂಪಾಯಿಗಳಿಂದ ೨೦೦೦ ರೂಪಾಯಿಗಳವರೆಗೆ ಬೆಲೆ ಕಟ್ಟುತ್ತಿದ್ದರು. ಹಣಕ್ಕಾಗಿ ತಾವು ಹೆತ್ತಮಕ್ಕಳನ್ನು ತಾಯಂದಿರು ಮಾರಬೇಕಾದರೆ ಅವರ ಸ್ಥಿತಿಗತಿಗಳು ಯಾವ ರೀತಿಯಲ್ಲಿ ಇರುತ್ತವೆ ಎಂದು ಊಹಿಸಬಹುದು. ಕುತೂಹಲದ ಸಂಗತಿ ಎಂದರೆ ಹೆರಿಗೆ ಮಾಡಿಸುವ ಸೂಲಗಿತ್ತಿಯರು ಸಹ ಹಣದ ಆಸೆಗಾಗಿ ಮಾರಾಟದಲ್ಲಿ ಶಾಮಿಲಾಗಿರುವುದು. ಇಂಥವುಗಳು ಪ್ರಚಲಿತ ಸವಾಲುಗಳಾಗಿ ಪರಿಗಣಿತವಾಗಿರುತ್ತಿವೆ. ಜೊತೆಗೆ ತನ್ನ ಅಕ್ಕಪಕ್ಕದ ನಿರ್ಗತಿಕ ಸಮುದಾಯದ ಮೇಲೆ ಪರಿಣಾಮ ಬೀರುವ ಸಂಭವವಿರುತ್ತದೆ. ಏಕೆಂದರೆ ಈ ಅಧ್ಯಯನದ ಕ್ಷೇತ್ರದಲ್ಲಿಯೇ ಮಕ್ಕಳ ಮಾರಾಟ ಪ್ರಸಂಗವು ನಡೆದಿರುವುದರಿಂದ ಇತರೆ ಬಡ ಕುಟುಂಬಗಳ ಮೇಲೆ ಪ್ರಭಾವ ಬೀರಬಹುದು. ಇದರಿಂದ ಮುನ್ನಚ್ಚರಿಕೆಯ ಕ್ರಮವಹಿಸುವುದು ಅಗತ್ಯವಾಗಿದೆ.

೪. ಜಾತಿ ವ್ಯವಸ್ಥೆ

ಮಹಿಳೆಯರು ಲಿಂಗ, ವರ್ಗಗಳಿಂದ ಶೋಷಣೆಗೆ ಒಳಗಾದಂತೆ, ಜಾತಿ, ವ್ಯವಸ್ಥೆಯಿಂದಲೂ ಶೋಷಣೆಗೆ ಒಳಗಾಗಿ ಸಮಾಜದ ಎಲ್ಲ ಮಹಿಳೆಯರಲ್ಲಿ ಐಕ್ಯತೆ ಉಂಟಾಗದೆ ಬಿರುಕುಗಳು ಸೃಷ್ಟಿ ಆಗಿವೆ. ಜಾತಿ ವ್ಯವಸ್ಥೆಯು ಮಹಿಳೆಯರು ಎಲ್ಲ ಒಂದಾಗಿ ತಮ್ಮ ಸ್ವಾತಂತ್ರ್ಯ, ಸಮಾನತೆಗೆ ಹೋರಾಡಲು ತಡೆ ನೀಡಿದೆ, ಇದಕ್ಕೆ ಒಂದು ಚಿಕ್ಕ ಉದಾಹರಣೆಯೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರ ಸಬಲೀಕರಣಕ್ಕಾಗಿ ಹುಟ್ಟಿಕೊಂಡಿರುವಂತಹ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಈ ಗುಂಪುಗಳು ಬಹುಸಂಖ್ಯಾಗತವಾಗಿ ಜಾತಿ ಆಧಾರಿತವಾಗಿ ತಮ್ಮ ಸಾಂಸ್ಕೃತಿಕ ನಾಯಕ-ನಾಯಕಿಯರ ಹೆಸರಿನಲ್ಲಿ ರಚನೆಗೊಂಡಿವೆ. ಅದು ಬೇಡ ಸಮುದಾಯದ ಮಹಿಳೆಯರ ಸ್ವಸಹಾಯ ಗುಂಪು ಆಗಿದ್ದರೆ ಅದರ ಹೆಸರು ಶ್ರೀ ಪದ್ಮಾವತಿ ಮಹಿಳಾ ಸ್ವಸಹಾಯ ಸಂಘ, ಕುರುಬರದು ಆಗಿದ್ದರೆ ಯಲ್ಲಮ್ಮ ಮಹಿಳಾ ಸ್ವಸಹಾಯ ಸಂಘ, ಲಿಂಗಾಯಿತ ಜಾತಿಗೆ ಸೇರಿದ್ದರೆ ಹೇಮರೆಡ್ಡಿ ಮಲ್ಲಮ್ಮ ಮಹಿಳಾ ಸ್ವಸಹಾಯ್ಯ ಸಂಘ ಇತರೆಲ್ಲವೂ ಜಾತಿಗಳಿಗೆ ಸೀಮಿತವಾಗಿರುವುದು ಕಂಡುಬರುತ್ತದೆ. ಆದರೆ ಇದರಲ್ಲಿ ಇಡೀ ಎಲ್ಲಾ ಮಹಿಳೆಯರು ಒಂದಾಗುವುದು ಅಪರೂಪವಾಗಿದೆ. ಇಷ್ಟೇ ಅಲ್ಲದೆ "ಮೇಲ್ಜಾತಿಗೆ ಸೇರಿದ ಅನೇಕ ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತಮಗಿಂತ ಕೆಳಸ್ತರಗಳಲ್ಲಿ ಇರುವ ಜಾತಿಗಳ ಮಹಿಳೆಯರನ್ನು ತಮ್ಮ ಸಮಾನರಂತೆ ಪರಿಗಣಿಸುವುದಿಲ್ಲ."[೧೮]

ಅವರ ಮನೆಗೆ ಕೆಲಸಕ್ಕಾಗಿ ಬರುವ ಮಹಿಳೆಯರನ್ನು ನಡೆಸಿಕೊಳ್ಳುವ ರೀತಿ ಸ್ತ್ರೀ ಸಂಘಟನೆಯ ಬಗ್ಗೆ ತೀವ್ರ ಸ್ವರೂಪದ ಅನುಮಾನಗಳನ್ನು ಸೃಷ್ಟಿಸುತ್ತಿವೆ. ಅವರಲ್ಲಿ ಸ್ವಜಾತಿ ಪ್ರೇಮವನ್ನು ಪ್ರೋತ್ಸಾಹಿಸುತ್ತದೆ. ಅಲ್ಲದೆ ಲಿಂಗ ತಾರತಾಮ್ಯವನ್ನು ಮತ್ತಷ್ಟು ಬಲಗೊಳಿಸುತ್ತದೆ. ಮೇಲ್ ಜಾತಿಯಿಂದ ಕೆಳಜಾತಿಗಳ ಮಹಿಳೆಯರು ದ್ವಂದ್ವ, ಅಸಮಾನತೆಗಳನ್ನು ಎದುರಿಸುತ್ತಾರೆ. ಜಾತಿ ಲಿಂಗ ಆಧಾರಿತ ಅಸಮಾನತೆಯನ್ನು ಪುಷ್ಟೀಕರಿಸುತ್ತದೆ. ಜಾತಿವ್ಯವಸ್ಥೆಯು ಮಹಿಳಾ ಚಳುವಳಿಯ ಒಳಗೆ ಆಗಾಗ್ಗೆ ಬಿರುಕುಗಳನ್ನು ಉಂಟು ಮಾಡಿರುವುದುಂಟು. ಮೇಲ್ಜಾತಿಗಳ ಮಹಿಳೆಯರು, ದಲಿತ, ಹಿಂದುಳಿದ, ಬುಡಕಟ್ಟು ಮಹಿಳೆಯರ ಸಮಸ್ಯೆಗಳು ಹಾಗೂ ನೋವುಗಳನ್ನು ಸ್ವತಃ ಅನುಭವಿಸಿಲ್ಲವಾದ್ದರಿಂದ ಅವರಿಗೆ ಈ ನೋವುಗಳಿಗೆ ಸ್ಪಂದಿಸಲು ಸಾಧ್ಯವಾಗುವುದಿಲ್ಲ. ಜಾತಿಯ ಹೆಸರಿನಲ್ಲಿ ಮಹಿಳಾ ಚಳವಳಿಯಲ್ಲಿ ಬಿರುಕುಗಳನ್ನು ಸೃಷ್ಟಿಸಲು ಕೂಡ ಪುರುಷ ಪ್ರಧಾನ ಶಕ್ತಿಗಳು ಯತ್ನಿಸುತ್ತವೆ. ಉದಾಹರಣೆಗೆ ಮಹಿಳಾ ಮೀಸಲಾತಿ ಮಸೂದೆಗೆ ತಡೆಯನ್ನು ಮಾಡಲಾಗಿದೆ. ಇದರಿಂದ ಜಾತಿಯ ಪ್ರಾಬಲ್ಯ ಎಷ್ಟಿದೆ ಎಂಬುದರ ಅರಿವು ನೀಡುತ್ತದೆ. ಜಾತಿಯು ಒಂದು ಸಂಕೋಲೆ ಸ್ತ್ರೀ ಶೋಷಣೆಯ ವಿರುದ್ಧ ಹೋರಾಟ ಯಶಸ್ವಿಯಾಗಬೇಕಾದರೆ, ಮಹಿಳೆಯು ಮೊದಲು ಜಾತಿ ವ್ಯವಸ್ಥೆಗಳು ಸೃಷಿಸಿರುವ ಅಸಮಾನತೆಯನ್ನು ಎದುರಿಸುವ ಹೋರಾಟ ಮಾಡಬೇಕಾಗಿದೆ.

೫. ಮಹಿಳೆ ಮತ್ತು ಕೋಮು ಸಂಘರ್ಷ

ನಮ್ಮ ಸಮಕಾಲಿನ ಸಮಾಜದಲ್ಲಿ ಪುರುಷ ಪ್ರಧಾನ್ಯತೆಯ ಪ್ರಭಾವವು ಹಲವಾರು ಮುಖಗಳಲ್ಲಿ ತನ್ನ ಕೆಲಸವನ್ನು ಮಾಡುತ್ತದೆ. ಇಂತಹ ಸಂದರ್ಭದಲ್ಲಿ ಜಾತಿ ಮತ್ತು ವರ್ಗವನ್ನು ಅತೀ ಮುಖ್ಯವಾಗಿ ನೋಡಬೇಕು. ಇದರ ಅನ್ವಯ ಮಹಿಳೆಯರ ಕುರಿತ ತಾರತಮ್ಯ, ಶೋಷಣೆಗಳು ಅನೇಕ ಸ್ವರೂಪದಲ್ಲಿ ಇರುವುದು ಕಂಡುಬರುತ್ತವೆ. ಜಾತಿ ಅಥವಾ ಕೋಮು ಎಂಬ ಕಲ್ಪನೆ ಕೇವಲ ಸಾಮಾಜಿಕ ವ್ಯವಸ್ಥೆಯೆಂದು ವರ್ಗವನ್ನು ಕೇವಲ ಸಂಪತ್ತಿನಿಂದ ಮೇಲುಕೀಳು ಎಂದು ನೋಡಬಾರದು. "ಭಾರತದ ಸಂವಿಧಾನದ ಭಾಗ-೩ ಮೂಲಭೂತ ಹಕ್ಕುಗಳ ವಿಭಾಗದ ಅನುಚ್ಛೇದ ೧೫ರಲ್ಲಿ ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ"[೧೯] ದೇಶದ ಯಾರೇ ನಾಗರೀಕನೆ (ಮಹಿಳೆ-ಪುರುಷ) ಆಗಲಿ ತಾರತಮ್ಯ ಮಾಡತಕ್ಕದ್ದಲ್ಲ.

ಇಂದು ನಮ್ಮಲ್ಲಿ ಧರ್ಮ ಎನ್ನುವುದು ಶಾಂತಿ ಮತ್ತು ಅಹಿಂಸಾ ಮಾರ್ಗಗಳನ್ನು ಬೋಧಿಸುವ ಒಂದು ಸಾಧನ ಎಂಬ ಒಂದು ನಂಬಿಕೆ. ಆದರೆ ವಾಸ್ತವದಲ್ಲಿ ಅದು ಬೇರೆಯೇ ಆಗಿದೆ. ವಿಶ್ವದೆಲ್ಲೆಡೆ ಮಾನವ ಸಮಾಜ ತಲೆ ತಗ್ಗಿಸುವಂಥ ಹಿಂಸಾಚಾರ, ದೌರ್ಜನ್ಯಗಳು ಧರ್ಮದ ಹೆಸರಿನಲ್ಲಿ ಜರುಗುತ್ತಿವೆ. ಕೋಮುಗಲಭೆಗಳ ಸಮಯದಲ್ಲಿ ಸಾಮೂಹಿಕ ಅತ್ಯಾಚಾರ ನಡೆಯುವುದಂತೂ ಸಮಕಾಲೀನ ಬದುಕಿನ ಒಂದು ಭಾಗವೇನೊ ಎನ್ನುವಂತಾಗಿದೆ. ಯಾವ ಧರ್ಮ ಮಹಿಳೆಯರನ್ನು ಗೌರವಿಸಿ ದೇವತೆ ಎಂದಿರುವುದೋ ಅದೇ ಧರ್ಮ ಕೋಮುಗಲಭೆಗಳ ಸಮಯದಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ಬೆಂಬಲಿಸಿ, ಧರ್ಮದ ಸಾಮಾಜಿಕ ಕಳಕಳಿಯ ಬಗ್ಗೆಯೇ ತೀವ್ರ

ಸ್ವರೂಪದ ಅನುಮಾನಗಳನ್ನು ಉಂಟುಮಾಡಿದೆ. "ಭಾರತ ವಿಭಜನೆಯಾದ ಕಾಲದಿಂದ ಹಿಡಿದು ಇಂದಿನವರೆಗೂ ಕೋಮುಗಲಭೆಗಳು ನಡೆದಾಗಲೆಲ್ಲ ಮಹಿಳೆಯರನ್ನು ದೈಹಿಕ, ಮಾನಸಿಕ ಶೋಷಣೆಗಳಿಗೆ ಗುರಿಪಡಿಸುವಂತಹ ಒಂದು ಪರಂಪರೆಯು ನಮ್ಮಲ್ಲಿ ಸೃಷ್ಟಿಯಾಗಿದೆ."[೨೦] ಜಗತ್ತಿನ ಎಲ್ಲ ಧರ್ಮಗಳಲ್ಲಿ ಮಹಿಳೆಯನ್ನು ಕುರಿತಂತೆ ದ್ವಂದ್ವ ನಿಲವುಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಮಹಿಳಾ ಸಮಾನತೆ, ಮಹಿಳಾ ಸ್ವಾತಂತ್ರ್ಯ ಮೊದಲಾದ ಉದಾತ್ತ ಭಾವನೆಗಳನ್ನು ಎತ್ತಿ ಹಿಡಿದರೆ ಮತ್ತೆ ಹಲವು ಮಹಿಳೆಯರ ವಿಚಾರದಲ್ಲಿ ತೀರಾ ಪ್ರತಿಗಾಮಿ ಎನ್ನಬಹುದಾದ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಧರ್ಮದ ಹೆಸರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳನ್ನೇ ಎಸುಗುತ್ತಿದ್ದಾರೆ. ಮಹಿಳೆಯನ್ನು ಕುಟುಂಬದ ನಾಲ್ಕು ಗೋಡೆಗೆ ಬಂಧಿಸಲಾಗಿದೆ.

೬. ಮಹಿಳಾ ಅತ್ಯಾಚಾರ

ಇವತ್ತಿನ ಸಂದರ್ಭದಲ್ಲಿ ಮಹಿಳೆಗೆ ಸಂಬಂಧಿಸಿದ ಅತ್ಯಾಚಾರ ಸಂಗತಿಗಳನ್ನು ಪ್ರತಿದಿನವೂ ನಮ್ಮ ಸಮಾಜದಲ್ಲಿ ಜರುಗುತ್ತಿರುವುದು ಒಂದು ರೀತಿಯ ಸಾಮಾನ್ಯ ಸಂಗತಿಯಾಗಿದೆ. ಅದರ ಸ್ವರೂಪವು ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ ಅನ್ಯ ಮಾರ್ಗವೆ ಇಲ್ಲದಂತಾಗಿದೆ. ಪತ್ರಿಕೆಗಳಲ್ಲಿ ಮಾಧ್ಯಮಗಳಲ್ಲಿ ನಿತ್ಯವೂ ಅತ್ಯಾಚಾರದ ಸುದ್ದಿಗಳನ್ನು ಓದುತ್ತೇವೆ. ಇಂತಹ ಸುದ್ದಿಗಳನ್ನು ಹೊರತುಪಡಿಸಿದ ಪತ್ರಿಕೆ, ಮಾಧ್ಯಮಗಳು ಇಲ್ಲವೆನ್ನಬಹುದಾಗಿದೆ. ನಮ್ಮ ಮಹಿಳೆಯರ ಮನಸ್ಸು ಮತ್ತು ಕುಟುಂಬದ ಗೌರವ ಪ್ರತಿಷ್ಠೆಗಳನ್ನು ಅತ್ಯಂತ ತೀವ್ರ ತೆರನಾಗಿ ಕಾಡುವ ಸಮಸ್ಯೆಯೆಂದರೆ ಅದು ಅಚ್ಯಾಚಾರ. ಇಂತಹ ಕೃತ್ಯಕ್ಕೆ ಹಲವಾರು ರೀತಿಯ ಕಾರಣಗಳು ಕಂಡುಬರುತ್ತವೆ. ಮತ್ತು ಒಂದೊಂದು ಪ್ರಸಂಗಗಳಿಗೆ ಭಿನ್ನ-ಭಿನ್ನವಾದ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ನಮ್ಮ ಮಾನವ ಸಮಾಜದಲ್ಲಿ ಅತ್ಯಾಚಾರಕ್ಕೆ ಬಹುದೊಡ್ಡ ಇತಿಹಾಸ ಇದೆ. ಇದು ಶತಮಾನಗಳಿಂದಲೂ ಮಹಿಳೆಯ ದೇಹವನ್ನು ಪುರುಷ ಲೈಂಗಿಕ ಶೋಷಣೆಗೆ ಒಳಪಡಿಸುವ ಕೃತ್ಯ ಮೈಗೂಡಿಸಿಕೊಂಡು ಬಂದಿದ್ದಾನೆ.

ಪುರುಷನ ಗ್ರಹಿಕೆಯಲ್ಲಿ ಮಹಿಳೆ ಎಂದಿಗೂ ಪ್ರಬಲಳು ಎಂಬ ಮನಸ್ಸು ಬಾರದೆ ಇರುವುದರಿಂದ ಅವಳು "ದುರ್ಬಲಳು ಎಂಬ ನೆಪ ಮುಂದಿಟ್ಟುಕೊಂಡು ಅವಳ ದೇಹ ಸೌಂದರ್ಯವನ್ನು ಹಿಂಸೆ, ಕ್ರೌರ್ಯಗಳಿಗೆ ಒಳಪಡಿಸಿ, ಅವಳ ಮೇಲೆ ಪ್ರಭುತ್ವವನ್ನು ಸಾಧಿಸಲು ಪುರುಷ ಪ್ರಧಾನ ಸಮಾಜ ಬಯಸಿ ಅಂಥ ಕಾರ್ಯಗಳಲ್ಲಿ ತೊಡಗಿದೆ."[೨೧] ಇದರೊಂದಿಗೆ ಸಮಾಜದಲ್ಲಿ ಮಹಿಳೆಯ ಕುರಿತು ಪುರುಷ ಗ್ರಹಿಕೆಗಳು ಹೇಗಿವೆಂದರೆ ಸದಾ ಕಾಲಕ್ಕೂ ಮಹಿಳೆ ಮೇಲೆ ಅಧಿಕಾರವಿಡೆ ಎಂಬ ನಂಬಿಕೆ ಇವತ್ತಿನವರೆಗೂ ಕೆಲಸ ಮಾಡುತ್ತಿದೆ. ಇಂತಹ ಸಂದರ್ಭವನ್ನು ನನ್ನ ಬಾಳಿನಲ್ಲಿ ಎದುರುಗೊಳ್ಳಬಾರದೆಂದು ಭಾವಿಸಿಕೊಂಡ ಮಹಿಳೆ ದೇಹ, ಪಾವಿತ್ರ್ಯತೆ ಕಾಪಾಡಿಕೊಳ್ಳಲು ನಯ, ವಿನಯ, ವಿಧಯತೆ ಪ್ರಮುಖವಾಗಿ ಪಾಲಿಸಿಕೊಂಡು ಬರುವಂತಹವರನ್ನು

ಪುರುಷ ಸಮಾಜವು ಅದನ್ನೇ ಒಂದು ಅಸ್ತ್ರವಾಗಿ ಉಪಯೋಗಿಸಿಕೊಂಡು ಮಹಿಳೆಯನ್ನು ದಮನ ಮಾಡುತ್ತಿವೆ.

ಇಂತಹ ಅತ್ಯಾಚಾರದಂತಹ ಕೃತ್ಯಗಳು ಬಹುಮುಖ್ಯವಾಗಿ ತಳಸ್ತರದ, ಶ್ರಮಿಕವರ್ಗದ ಮಹಿಳೆಯರ ಮೇಲೆ ನಡೆದಿರುವುದು, ನಡೆಯುತ್ತಿರುವುದು ಕಂಡುಬರುತ್ತದೆ. ಅದು ಕೃಷಿ ಕೂಲಿ, ಕೃಷಿ, ಮನೆಗೆಲಸ, ಕಟ್ಟಡ ನಿರ್ಮಾಣ, ಇನ್ನಿತರ ಸಂದರ್ಭಗಳಲ್ಲಿ ಮೇಲ್ವರ್ಗದವರು, ಭೂ ಮಾಲಿಕರು, ಶ್ರೀಮಂತರು, ಬುದ್ಧಿವಂತರು ತಮ್ಮ ಸೇಡಿನ ಆಸೆಯನ್ನು ಅಥವಾ ಸಮಯವನ್ನು ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ಗ್ರಾಮೀಣ-ನಗರ ಪ್ರದೇಶಗಳಲ್ಲಿ ಪ್ರಬಲ ಕೋಮಿನ ಜನರು ಮಹಿಳೆ ದೇಹವನ್ನು ಅಥವಾ ಕುಟುಂಬದ ಮೇಲಿರುವ ದ್ವೇಷದಿಂದಲೂ ಅತ್ಯಾಚಾರಗಳು ಜರುಗುತ್ತಲಿವೆ. ಇಂತಹ ಕೃತ್ಯಗಳಿಗೆ ಮಹಿಳೆಯ ವಯಸ್ಸಿನ ನಿರ್ಬಂಧವಿಲ್ಲ. ಅದು ನಾಲ್ಕು ವರ್ಷದಿಂದ ಅರವತ್ತೈದು ವರ್ಷ ಇರುವ ಮಹಿಳೆಯು ಒಳಪಡುತ್ತಾಳೆ. ಪುರುಷನ ಕಾಮುಕ ಪ್ರವೃತ್ತಿಗೆ ಸಂಬಂಧಗಳೆ ನಿರ್ನಾಮವಾಗಿರುವಂತಹ ಸಂಗತಿಗಳು ನಮ್ಮ ಕಣ್ಮುಂದೆಯಿದೆ. ಉದಾ: ಮಹಾರಾಷ್ಟ್ರದಲ್ಲಿ ಒಬ್ಬ ಪುರುಷ ಸ್ವತಃ ತನ್ನ ಮಗಳನ್ನೆ ಸಂಪತ್ತು ವೃದ್ಧಿಯಾಗುತ್ತದೆ ಎಂಬ ಕಲ್ಪನೆಯಿಂದ ಹಲವು ವರ್ಷಗಳವರೆಗೆ ಹೆಂಡತಿ ಸಹಾಯದೊಂದಿಗೆ ಜೋತಿಷ್ಯನ ಜೊತೆ ಸೇರಿಕೊಂಡು ಸಾಮೂಹಿಕ ಕಾಮ ಪ್ರವೃತ್ತಿಯಲ್ಲಿ ತೊಡಗಿಕೊಂಡಿರುವುದು ಇನ್ನೂ ನಮ್ಮಲ್ಲಿ ಹಚ್ಚ ಹಸಿರಾಗಿದೆ. ಇದರ ಜೊತೆಗೇನೆ ಆಸ್ಟ್ರೇಲಿಯಾದ ಒಬ್ಬ ಮಹಾನ್‌ಭಾವ ತನ್ನ ಮಗಳನ್ನು ಮನೆಯಲ್ಲಿ ಕೂಡಿ ಹಾಕಿ ಸುಮಾರು ಇಪ್ಪತ್ತೈದು ವರ್ಷಗಳವರೆಗೆ ಸ್ವಚಂಧವಾಗಿ ಲೈಂಗಿಕ ಬಯಕೆಯನ್ನು ತೀರಿಸಿಕೊಂಡ ಸಂಗತಿಯೂ ಇನ್ನೂ ನಮ್ಮುಂದೆ ಮರೆಮಾಚಿಲ್ಲ. ಅಂದಾಗ ನಮ್ಮ ನಾಗರೀಕ ಸಮಾಜದ ಪ್ರಜ್ಞೆ ಎತ್ತ ಸಾಗುತ್ತಿದೆ. ಇಂತಹ ಸಂಗತಿಗಳಿಂದ ಮಹಿಳೆಯರ ರಕ್ಷಣೆ ಸಾಧ್ಯವಾಗದಬಹುದೆ. "ಬೇಲಿ ಎದ್ದು ಹೊಲ ಮೆಯಿದಂತೆ" ಎನ್ನುವ ಗಾದೆ ಮಾತಿನಂತೆ ಕುಟುಂಬದಲ್ಲಿ ಇರುವ ಪುರುಷರು, ಪ್ರಜ್ಞಾವಂತರು, ಕೂಡ ಸಮಾಜದ ಎಲ್ಲಾ ಸ್ತರಗಳಲ್ಲೂ .ಕಂಡುಬರುತ್ತಿದ್ದಾರೆ. ಮಹಿಳೆಯರು ಪ್ರತಿ ನಿತ್ಯ ತಮ್ಮ ಜೀವನಕ್ಕಾಗಿ ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ದುಡಿಯುವ, ಕಛೇರಿ ಕಾರ್ಯಾಲಯಗಳಲ್ಲಿ ದುಡಿಯುವ ಮಹಿಳೆಯರು, ವಿದ್ಯಾರ್ಥಿನಿಯರು ಮೊದಲಾದವರು ಅತ್ಯಾಚಾರದ ದೌರ್ಜನ್ಯಕ್ಕೆ ಗುರಿ ಆಗುತ್ತಿದ್ದಾರೆ.

ಇಂತಹ ಹಲವಾರು ಸಂಗತಿಗಳು ಕಂಡು ಕೇಳಿದ ಗ್ರಾಮೀಣ ಪ್ರದೇಶದ ಜನರಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಶಾಲೆಯಿಂದ ಹಿಡಿದು ದುಡಿಯಲು ಹೊರ ಹೋಗುವಂತಹ ಮಹಿಳೆಯರನ್ನು ಮನೆಯಿಂದ ಒದರೆ ಮರಳಿ ಬರುವಪ್ಪರಲ್ಲಿ ಏನೂ ಸಮಸ್ಯೆ ತರುತ್ತಾರೋ ಎಂಬ ಭಯವೂ ಸದಾ ಪಾಲಕರಲ್ಲಿ ಕಾಡುತ್ತಾ ಇರುತ್ತದೆ. ಇದರಿಂದ ಎಷ್ಟೋ ಮಹಿಳೆಯರು ಶಿಕ್ಷಣ ಕಲಿಯದೆ ಇರುವುದು, ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡಿಕೊಂಡು ಕೊಟ್ಟ ಗಂಡನ ಮನೆಗೆ ಹೋಗುವಂತಹ

ಸನ್ನಿವೇಶಗಳು ಇಂದು ಸಹ ಅಧಿಕವಾಗಿ ಕಂಡುಬರುತ್ತವೆ. ಅತ್ಯಾಚಾರ ವ್ಯಾಪಕಗೊಳ್ಳಲು ಕಾರಣ ಅದನ್ನು ತಡೆಯಲು ಗಂಭೀರ ಪ್ರಯತ್ನಗಳು ಅಷ್ಟಾಗಿ ಆಗುತ್ತಿಲ್ಲದಿರುವುದು ಇದರಿಂದ ಮಹಿಳೆಯರ ಮುನ್ನಡೆಗೆ ತಡೆಯನ್ನು ಉಂಟು ಮಾಡಿದೆ. "ಭಾರತದಲ್ಲಿ ೫೪ ನಿಮಿಷಗಳಿಗೊಮ್ಮೆ ಒಂದು ಹೆಣ್ಣಿನ ಮೇಲೆ ಅತ್ಯಾಚಾರ ನಡೆಯುತ್ತದೆ ಎಂದೂ ೨೦೦೦ರಲ್ಲಿ ೧೬,೪೯೬ ಅತ್ಯಾಚಾರ ಪ್ರಕರಣಗಳು ನ್ಯಾಯಾಲಯದ ಕಟ್ಟೆ ಹತ್ತಿದರೆ ಕೇವಲ ೫೧೭ ಪ್ರಕರಣಗಳಿಗೆ ಮಾತ್ರ ಶಿಕ್ಷೆ ಆಗಿದೆ"[೨೨] ಈ ಎಲ್ಲಾ ಕಾರಣಗಳಿಂದ ಬೇಡ ಸಮುದಾಯದ ಮಹಿಳೆಯರು ಸಬಲೀಕರಣ ಆಗುವಲ್ಲಿ ಸೋಲುತ್ತಿದ್ದಾರೆ.

೬. ವರದಕ್ಷಿಣೆ

ಆಧುನಿಕದ ಸಂದರ್ಭದಲ್ಲಿ ಹೆಣ್ಣು ಮಕ್ಕಳ ವಿವಾಹ ಮಾಡಬೇಕಾದರೆ ಒಂದು ಅಶ್ವ ಮೇದಯಾಗ ಮಾಡಿದಂತೆ ಆಗುತ್ತದೆ. ಇದರಲ್ಲಿ ಮೊದಲಿದ್ದ ಅರ್ಥವನ್ನು ಕಳೆದುಕೊಂಡು ವಿವಾಹ ಮಾರುಕಟ್ಟೆಯಾಗಿದ್ದು, ಮಹಿಳೆ-ಪುರುಷ ಇಬ್ಬರು ಖರೀದಿಮಾಡುವ ವಸ್ತುಗಳಂತೆ ತಮ್ಮ ಪಾತ್ರ ನಿರ್ವಹಿಸುತ್ತಿದ್ದಾರೆ. ಇದರಿಂದ ಬೇಡ ಸಮುದಾಯದಲ್ಲಿ ಹೆಣ್ಣು ಮಗು ಹುಟ್ಟಿತೆಂದರೆ ಒಂದು ಉಣ್ಣು ಹುಟ್ಟಿದಂತೆ ಎಂದು ಭಾವಿಸಿ ಅವಳನ್ನು ಚಿಕ್ಕಂದಿನಿಂದಲೇ ಮುಂದಿನ ಬದುಕಿಗೆ ತಯಾರಿಸುವುದನ್ನು ನೋಡಬಹುದು. "ವಿವಾಹ ಹೆಣ್ಣಿನ ಬದುಕಿನ ಅನಿವಾರ್ಯ ಅಂಗವೆಂದೂ ವಿವಾಹವೇ ವೃತ್ತಿ, ಗಂಡನ ಆಸರೆ ಇರದೆ ಮಹಿಳೆಯರು ಬದುಕುವುದು ಅಸಾಧ್ಯವಾದದದ್ದು ಎಂಬ ರೂಢಿ ಇಂದಿಗೂ ಬದಲಾವಣೆಗೆ ಒಳಪಡದೆ ಮುಂದುವರೆಯುತ್ತಿದೆ."[೨೩] ಈ ಸಮುದಾಯದಲ್ಲಿ ಮೊದಲು ವದುದಕ್ಷಿಣೆ ಪದ್ದತಿ ರೂಢಿಯಲ್ಲಿ ಇತ್ತಂತೆ ಎಂದು ಹಿರಿಯರು ಅಭಿಪ್ರಾಯ ಪಡುತ್ತಾರೆ. ಮುಂದೆ ಕಾಲ ಬದಲಾದಂತೆ ವದುದಕ್ಷಿಣೆ ಮಾಯವಾಗಿ ವರದಕ್ಷಿಣೆ ಜಾರಿಗೆ ಬಂತ್ತಂತೆ. ಇದು ಬಂದ ನಂತರ ಹಲವಾರು ಕುಟುಂಬಗಳಲ್ಲಿ ಹಣದ ದುಸ್ಥಿತಿಯಿಂದ ಎಷ್ಟೋ ಮಹಿಳೆಯರು ಮನೆಯಲ್ಲಿ ಮದುವೆಯಾಗದೆ ಆಗೇ ಉಳಿದಿದ್ದಾರೆ. ಇನ್ನೂ ವರದಕ್ಷಿಣೆಕೊಟ್ಟು ಮದುವೆಯಾದಂತಹ ಮಹಿಳೆಯರು ಸಹ ತೃಪ್ತಿಯಿಂದ ಜೀವನ ನಡೆಸುತ್ತಿಲ್ಲ. ಮಗಳ ಮದುವೆಗಾಗಿ ವರನಿಗೆ ಕೇಳಿದಷ್ಟು ವರದಕ್ಷಿಣೆ ಕೊಡಲು ತಮ್ಮಲ್ಲಿರುವ ಹಣವನ್ನು ಸಾಲದೆ ಇದ್ದ ಬಿದ್ದ ಹೊಲ-ಮನೆ ಮಾರಾಟ ಮಾಡಿ ಬೀದಿಭಿಕಾರಿ ಆಗಿರುವ ಕುಟುಂಬಗಳು ಇಂದು ತಮ್ಮ ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಲ್ಲಿ ಕೂಲಿಕೆಲಸ ಮಾಡಿ ಜೀವನ ನಡೆಸುವ ಕುಟುಂಬಗಳು ಒಂದೆಡೆಯಾದರೆ, ಮತ್ತೊಂದು ಕಡೆ ತಮ್ಮ ಮಗಳು ಕೊಟ್ಟ ಗಂಡನ ಮನೆಯಲ್ಲಿ ಸುಖವಾಗಿ ಇರಲಿ ಎಂದು ಶ್ರೀಮಂತರ ಹತ್ತಿರ ಮೂರು ರೂಪಾಯಿ ಬಡ್ಡಿಯಂತೆ ಸಾಲ ತಂದು ಮದುವೆ ಮಾಡಿದ ನಿದರ್ಶನಗಳು ಸಾಕಷ್ಟು ನಮ್ಮಲ್ಲಿ ಸಿಗುತ್ತವೆ.

ವರದಕ್ಷಿಣೆ ಎಂಬ ಭೂತ ಆರಂಭದಲ್ಲಿ ಕೆಲವೊಂದು ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಎಂದು ಬುಡಕಟ್ಟು ಸಮುದಾಯಗಳಲ್ಲಿ ಪ್ರವೇಶ ಪಡೆಯಿತೋ ಗೊತ್ತಿಲ್ಲ. ವರದಕ್ಷಿಣೆ

ಕೊಡುವುದು ಒಂದು ಪ್ರತಿಷ್ಠೆಯಾಗಿ ಇಂದು ಮುನ್ನಡೆಯುತ್ತಿದೆ. ಜೊತೆಗೆ ಇಂದು ಮಹಿಳೆಯ ರೂಪ, ಲಾವಣ್ಯ, ರೂಪಾಯಿ, ಅಂತಸ್ತು, ಮನೆತನಗಳ ಜೊತೆಗೆ ಉದ್ಯೋಗವು ಸಹ ಪ್ರಮುಖ ಪಾತ್ರ ವಹಿಸಿದೆ. ಆದರೆ ಬಹಳಷ್ಟು ತಂದೆತಾಯಂದಿರು ಕೂಡ ಪರೋಕ್ಷವಾಗಿ ಅಂಥವನನ್ನೇ ಅಳಿಯನನ್ನಾಗಿ ಮಾಡಿಕೊಳ್ಳಬೇಕು ಎಂಬ ಸ್ಪರ್ಧೆಯ ಮನೋಭಾವ ಕೂಡ ಸಮಸ್ಯೆಯನ್ನು ಮತ್ತಷ್ಟು ವೃದ್ಧಿಯಾಗಲು ಕಾರಣವಾಗಿದೆ. ಇಂದಿಗೂ ಸಹ ಮಹಿಳೆ ಮದುವೆ ಕುರಿತು ಅವರ ಮನೆಯಲ್ಲಿ ಪ್ರತಿವಾರ, ತಿಂಗಳಿಗೊಮ್ಮೆ ಇಂಟರ್‌ವ್ಯೂವ್‌ತರಹ ವದುಪರೀಕ್ಷೆ ನಡೆಯುತ್ತಲ್ಲಿವೆ. ಇದರಿಂದ ಮಹಿಳೆಯರಿಗೆ ಇನ್ನಷ್ಟು ಮುಜುಗರವನ್ನು ಉಂಟುಮಾಡುತ್ತಿವೆ. ಇಂತಹ ಪ್ರಕ್ರಿಯೆಯಲ್ಲಿ ಮಹಿಳೆ ಮೂಕಪ್ರಾಣಿಯಂತೆ ತನ್ನ ಮುಖವನ್ನು ತೋರ್ಪಡಿಸಿ,ವರನಿಗೆ ಜ್ಯೂಸ್, ಚಹಕೊಟ್ಟು ಷೋಕೇಸಿನ ಗೊಂಬೆಯಂತೆ ಆತನ ಎದುರುನಲ್ಲೇ ಕುಳಿತು, ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರಿಸಿ ಉತ್ತರಿಸಿ ಮುಂದೆ ಪ್ರಶ್ನೆಮಾಡಿದರೆ ಉತ್ತರವೇಯಿಲ್ಲಾ ಎನ್ನುವಂತೆ ಮೌನಿಯಾಗಿದ್ದಾಳೆ. ದುರಂತವೆಂದರೆ ಮಹಿಳೆ ಮರಳಿ ವರನಿಗೆ ಪ್ರಶ್ನೆ ಮಾಡುವಂತಿಲ್ಲ. ಒಂದು ವೇಳೆ ಪ್ರಶ್ನೆಮಾಡಿದರೆ ಕುಟುಂಬ ವರ್ಗಕ್ಕೆ ತಪ್ಪಿತಸ್ಥಳಾಗುತ್ತಾಳೆ. ಇದರಿಂದ ಮಹಿಳೆಗೆ ಮಾನಸಿಕ ಕ್ರೂರ ಹಿಂಸೆ ನೀಡುವ ವದುಪರೀಕ್ಷೆಗಳು ಎಷ್ಟು ಅಗತ್ಯ ಎಂದು ನಾವುಗಳು ಚಿಂತನೆ ಮಾಡಬೇಕಾಗಿದೆ. ಇಂತಹ ಕಾರಣಗಳಿಗೆ ಮಹಿಳೆ ಬಲಿಪಶು ಆಗುತ್ತಿದ್ದಾಳೆ. ವಿವಾಹ ಜೀವನದಲ್ಲಿ ಅನಿವಾರ್ಯ ಎಂಬ ಕಾರಣದಿಂದಾಗಿ ವರದಕ್ಷಿಣೆ ಸಮಸ್ಯೆಗಳು ಉಂಟಾಗುತ್ತಿವೆ. ೧೯೬೮ರಲ್ಲಿ ಸಂವಿಧಾನ ದತ್ತವಾಗಿ ವರದಕ್ಷಿಣೆ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಸಹ ಮಹಿಳೆಯರಿಗೆ ಎಷ್ಟು ಉಪಯುಕ್ತ ಎಂದು ಗಮನಿಸಬೇಕಾದ ಅನಿವಾರ್ಯತೆಯುಂಟಾಗಿದೆ.

೮. ಅಂತರ್ಜಾತಿಯ ವಿವಾಹಗಳು

ಸಮಾಜದಲ್ಲಿರುವ ಜಾತಿ ವ್ಯವಸ್ಥೆಯ ಬಿಗಿಭದ್ರತೆಯಿಂದ ಯುವಕ-ಯುವತಿಯರು ಉನ್ನತಮಟ್ಟದ ಶಿಕ್ಷಣ ಪಡೆದುಕೊಂಡರು ಸಹ .ಜಾತಿಯನ್ನು ಮೀರಿ ಅಂತರ್ಜಾತಿಯ ವಿವಾಹವಾಗುವಲ್ಲಿ ವಿಫಲವಾಗುತ್ತಿದ್ದಾರೆ. ಇದರಲ್ಲಿ ಬೇಡ ಬುಡಕಟ್ಟು ಸಮುದಾಯದ ಮಹಿಳೆಯನ್ನು ಅನ್ವಯಿಸಿಕೊಂಡು ನೋಡುವುದಾದರೆ ಮಹಿಳೆಯರಿಗೆ ಮೊದಲಿನಿಂದಲೂ ಪೂರ್ಣಪ್ರಮಾಣದ ಸ್ವಾತಂತ್ರ್ಯವಿಲ್ಲ ಎಂದು ಹೇಳಬಹುದು. ಇದಕ್ಕೆ ಹಲವಾರು ಕಾರಣಗಳು ಕಂಡುಬರುತ್ತವೆ. ಅನಕ್ಷರತೆ, ಆರ್ಥಿಕ ಅಭದ್ರತೆ, ಪರಕೀಯ ಪ್ರಜ್ಞೆ ಇತ್ಯಾದಿ ಅಂಶಗಳು ಅಧಿಕವಾಗಿರುವುದರಿಂದ ಇಂತಹ ವಿವಾಹಗಳು ವಿರಳವೆಂದು ಹೇಳಬಹುದು. ಅದರಲ್ಲಿ ಎಲ್ಲೋ ಒಂದು ಕಡೆ ಅಂತರ್ಜಾತಿಯ ವಿವಾಹ ಆದರೆ ಕುಟುಂಬ, ಸಮುದಾಯ ಇತರರು ಸಹ ತುಚ್ಛವಾಗಿ ಪರಿಗಣಿಸುತ್ತಾರೆ. ಒಂದೊಂದು ಸಂದರ್ಭದಲ್ಲಿ ಬಹಿಷ್ಕಾರ ಏರ್ಪಡುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆ ಅಂತರ್ಜಾತಿಯ ವಿವಾಹವಾದರೆ ಬಹಳಷ್ಟು ಸಂಕಷ್ಟ, ಅಪಮಾನ, ಹಿಂಸೆಗೆ ಬಲಿಯಾಗುತ್ತಾಳೆ ಹೊರತು ಪುರುಷನಲ್ಲ.

೯. ಬಾಲ್ಯ ವಿವಾಹಗಳು

ಬೇಡ ಸಮುದಾಯದಲ್ಲಿ ಇವತ್ತಿನವರೆಗೂ ಅಕ್ಷರ ಜ್ಞಾನ ಇಲ್ಲದ, ಬಡತನ ಹಾಗೂ ಹಿರಿಯರ ಮೂಢನಂಬಿಕೆ ಇತರೆ ಅಂಶಗಳಿಂದ ನಿರ್ದಿಷ್ಟ ವಯಸ್ಸಿಗೆ ಮುಂಚಿತವಾಗಿ ಬಾಲ್ಯವಿವಾಹಗಳು ನಡೆಯುತ್ತಿವೆ. ಕರ್ನಾಟಕದಲ್ಲಿ ಬೇಡರು ಬಹುಸಂಖ್ಯಾತವಾಗಿ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವುದ ರಿಂದ ಅವರ ಜೀವನವು ಸುಧಾರಣೆಯಾಗಿಲ್ಲ. ಅವರಲ್ಲಿರುವ ಬಡತನ ಕಿತ್ತು ತಿನ್ನುತ್ತಿದೆ. ಇದರಿಂದ ಸಮುದಾಯದಲ್ಲಿ ಜರುಗುವ ಮದುವೆಗಳಲ್ಲಿ ಬಹುಸಂಖ್ಯಾತವಾಗಿ ಚಿಕ್ಕಮಕ್ಕಳ ಮಾಂಗಲ್ಯಧಾರಣೆ ಮಾಡುವುದು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಕಾರಣ ಕೇಳಿದರೆ ಸಮುದಾಯದವರು ಈ ರೀತಿಯಾಗಿ ಪ್ರತಿಕ್ರಿಯೆ ನೀಡುತ್ತಾರೆ. "ಏನು ಮಾಡೋದು ನಾವುಗಳು ಮೊದಲೇ ಬಡತನದಲ್ಲಿ ಜೀವನ ಮಾಡುತ್ತಿದ್ದೇವೆ. ನಮ್ಮ ಮನೆಯಲ್ಲಿ ಹಿರಿಯ ಮಗನೋ ಹಿರಿಯ ಮಗಳೋ ನಮ್ಮ ಕಳ್ಳುಬಳ್ಳಿಯಲ್ಲಿ ಸಂಬಂಧ ಬೆಳೆಸಿ ಮದುವೆ ಮಾಡುತ್ತೇವೆ. ಇದರಿಂದ ನಮಗೆ ಮದುವೆಗೆ ಆಗುವಂತಹ ಖರ್ಚು ಸ್ವಲ್ಪ ಉಳಿತಾಯ ಆಗುತ್ತದೆ. ಇಲ್ಲಾಂದ್ರೆ ಇನ್ನೊಮ್ಮೆ ಮದುವೆ ಮಾಡಲು ಆಗುವುದಿಲ್ಲ. ಕಾರಣ ಮೊದಲಿನ ಮದುವೆ ಮಾಡಬೇಕಾದರೆ ಬೇರೆಯವರ ಹತ್ತಿರ ಸಾಲ ಪಡೆದುಕೊಂಡಿರುತ್ತೇವೆ. ಮತ್ತೆ ಮರಳಿ ಸಾಲ ಮೈಮೇಲೆ ಯಾಕೆ ಎನ್ನುವಂತಹ ವಿಚಾರದಿಂದ ಬಾಲ್ಯ ವಿವಾಹಗಳು ಮಾಡುತ್ತೇವೆ ಎನ್ನುತ್ತಾರೆ".

ಈ ತೆರನಾದ ಸಮುದಾಯದ ಹಿರಿಯರ ನಿರ್ಧಾರದಿಂದ ಸಮಾಜದಲ್ಲಿ ಮಹಿಳೆಯನ್ನು ಮದುವೆ ಎಂಬ ಬಂಧನಕ್ಕೆ ಸಿಲುಕಿಸುತ್ತಾರೆ. ಅಧ್ಯಯನದ ಕ್ಷೇತ್ರಕಾರ್ಯ ಸಮಯದಲ್ಲಿ ಹಲವಾರು ಕಡೆಗಳಲ್ಲಿ ಬಾಲ್ಯವಿವಾಹಗಳು ನಡೆದಿರುವುದುಂಟು. ಇವತ್ತಿನ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳು ಪ್ರತಿಯೊಂದು ತಾಲೂಕು, ಜಿಲ್ಲೆಗಳಲ್ಲಿ ಜರುಗುತ್ತಿವೆ. ಇಂತಹ ವೇಳೆಯಲ್ಲಿ ಕೂಡ ಬಡತನದ ಕುಟುಂಬದವರು ತಮ್ಮ ಚಿಕ್ಕ ಮಕ್ಕಳ ಮದುವೆ ಮಾಡುವುದು ನಿಜದ ಸಂಗತಿಯಾಗಿದೆ. ಇವತ್ತು ಸಾಮೂಹಿಕ ವಿವಾಹಗಳು ರಾಜಕಾರಣಿ, ಧರ್ಮಾಧಿಕಾರ, ಪೊಲೀಸ್ ಸಮಾಜದ ಮುಖಂಡರು ಇತರರ ಸಮ್ಮುಖದಲ್ಲಿ ನಡೆದರು ಸಹ ಬಾಲ್ಯ ವಿವಾಹ ಕುರಿತು ವಿರೋಧಭಾವನೆ ಮಾಡದೆ ತಟಸ್ಥವಾಗಿರುವ ಸಂದರ್ಭಗಳು ಅಧಿಕವಾಗಿ ಕಾರಣ ನಮ್ಮಲ್ಲಿ ಒಂದು ಕಲ್ಪನೆಯಿದೆ. "ನೂರು ಸುಳ್ಳು ಹೇಳಿ ಒಂದು ಮದುವೆ ಮಾಡು" ಅಂತ ಇಂತಹ ಹಲವಾರು ಕಾರಣಗಳಿಂದ ಮಹಿಳೆಯರು ಮದುವೆಯಾಗಿ ಮಾನಸಿಕ, ದೈಹಿಕ ಹಾಗೂ ಕೌಟುಂಬಿಕ ಹಿಂಸೆಗಳಿಗೆ ಬಲಿಯಾಗುತ್ತಿದ್ದಾರೆ. ಇಂತಹ ಸಂಗತಿಗಳು ಅಧ್ಯಯನ ಕ್ಷೇತ್ರದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

೧೦. ವಿಧವೆಯರ ಮರು ಮದುವೆ

ನಮ್ಮ ಸಮಾಜದಲ್ಲಿ ಹೆಂಡತಿ ಸತ್ತರೆ ಗಂಡು ಸಾಮಾನ್ಯವಾಗಿ ಮರು ಮದುವೆ ಆಗುತ್ತಾನೆ. ಇದಕ್ಕೆ ಮನೆಯವರ ನೆರೆಹೊರೆಯವರ ಪ್ರೋತ್ಸಾಹ ಕೂಡ ಇರುತ್ತದೆ. ಅದರಲ್ಲಿ ಮಹಿಳೆಯರು

ಸಹ ಭಾಗಿಗಳಾಗಿರುತ್ತಾರೆ ಎನ್ನುವುದು ಬಹಳ ಮುಖ್ಯವಾದ ವಿಷಯ. ಅದು ಮಕ್ಕಳನ್ನು ಸಾಕುವುದು, ಬೆಳೆಸುವುದು ಜೊತೆಗೆ ಗಂಡು ಮಗು ಇಲ್ಲದಿದ್ದರೆ ಅದಕ್ಕಾಗಿಯಾದರೂ ಮರುಮದುವೆ ಮಾಡುವಲ್ಲಿ ಪ್ರೇರಣೆ ನೀಡಿ ಮದುವೆ ಮಾಡಿಸುತ್ತಾರೆ. ದುರಂತ ಎಂದರೆ ಇದೇ ನಿಯಮವನ್ನು ಮಹಿಳೆಗೆ ಅನ್ವಯಿಸುವುದಿಲ್ಲ. ಮಹಿಳೆಗೆ ಜೀವನದಲ್ಲಿ ಒಮ್ಮೆ ಮದುವೆಯಾದರೆ ಮರಳಿ ಅವಕಾಶವಿಲ್ಲ ಇದರಿಂದ ಸಮುದಾಯದಲ್ಲಿ ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಮಹಿಳೆಯರು ಮರು ವಿವಾಹದ ಬಗ್ಗೆ ಚಿಂತಿಸಿದೆ ಇದ್ದಾರೆ. ತಮ್ಮ ಕುಟುಂಬದ ಇತರೆ ಗಂಡ ಹೆಂಡತಿಯ ಪ್ರೀತಿ, ವಾತ್ಸಲ್ಯ ಕಂಡು ತಮ್ಮ ಅಂತರಾಳದಲ್ಲಿ ನೊಂದುಕೊಂಡು, ಬೇರೆಯವರ ಚಿಕ್ಕಮಕ್ಕಳನ್ನು ನೋಡಿ ಮರುಕ ಪಡುತ್ತಿರುವುದು ನಮಗೆ ಕಂಡುಬರುತ್ತದೆ.

ಇಂತಹ ವಿಧವೆಯರ ಜೀವನವು ಎಷ್ಟು ಕ್ರೂರವಾಗಿಯೆಂದರೆ ಪರ ಪುರುಷರ ಜೊತೆಗೆ ಮಾತನಾಡುವುದಾಗಲಿ, ಸಲಿಗೆಯಿಂದ ನಕ್ಕು ನಲಿಯುವುದಾಗಲಿ, ಮಾಡುವಂತಿಲ್ಲ, ಮತ್ತೆ ಕುಟುಂಬದಲ್ಲಿ ಜರುಗುವಂತ ಶುಭ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ನಿಷಿದ್ಧವಿದೆ. ಇಂತಹ ನಿರ್ಬಂಧಗಳಿಂದ ನಮ್ಮ ಸಮಾಜದಲ್ಲಿ ಬೇರೆ ತೆರನಾದ ಸಮಸ್ಯೆಗಳು ಉದ್ಭವ ಆಗಲಿಕ್ಕೆ ಕಾರಣವಾಗಿವೆ. ಉದಾಹರಣೆ ಹೇಳುವುದಾದರೆ ಕುಟುಂಬದಲ್ಲಿರುವ ವಿಧವೆಯೊಬ್ಬಳು ತನ್ನ ಪಾಡಿಗೆ ತಾನು ಜೀವನ ಮಾಡುತ್ತಿದ್ದರೆ. ಪುರುಷರು ಅವಳು ತಿರುಗಾಡುವ ಸಮಯವನ್ನು ನಿರ್ಧರಿಸಿಕೊಂಡು ನಡುಮಧ್ಯ ರಸ್ತೆಯಲ್ಲಿ "ಉಪ್ಪು ಉಳಿ ಖಾರ ತಿಂದಂತಹ ಜೀವಕ್ಕೆ ಈ ರೀತಿ ಆಗಬಾರದಿತ್ತು. ಆದರೂ ಇನ್ನೂ ಏನೂ ಕಾಲ ಮಿಂಚಿಲ್ಲ. ಮನಸ್ಸು ಮಾಡಬೇಕು ಅಷ್ಟೇ" ಎಂಬ ಕುಹಕ ಮಾತು ಆಡುವವರು ಸಹ ಮಹಿಳೆಯರ ಶಾಂತ ಮನಸ್ಸಿಗೆ ಘಾಸಿಗೊಳಿಸುವಂತಹ ಕೃತ್ಯಗಳು ಜರುಗುತ್ತಿರುವುದಕ್ಕೆ ಕೊರತೆಯೇನಿಲ್ಲ. ಇಂತಹ ಮಾತುಗಳಿಂದ ಕೆಲವು ಮಹಿಳೆಯರು ಬೇರೆ ಹಾದಿಯನ್ನು ಸಹ ತುಳಿದಿರುವುದು ಅಲ್ಪಮಟ್ಟದಲ್ಲಿ ಕಂಡುಬರುತ್ತವೆ. ಆದರೆ ಮಹಿಳೆ ಮಾತ್ರ ಅಲ್ಲಿಯೂ ಸಹ ಹಿಂಸೆ, ಕ್ರೂರತನಕ್ಕೆ ಉಪಯೋಗಿಸಿಕೊಂಡಿರುವುದು ಮಹಿಳೆಯರ ಜೀವನಕ್ಕೆ ಒಂದು ರೀತಿಯ ಕಪ್ಪು ಚುಕ್ಕೆಯಾಗಿದೆ. ಇನ್ನೊಂದು ಕಡೆ ಧೈರ್ಯವಂತ ಮಹಿಳೆಯರು ಪುರುಷರ, ಕುಟುಂಬದ ಸಮಸ್ಯೆಗಳನ್ನು ಮುರಿದು ಜೀವಿಸುತ್ತಿರುವವರು ನಮ್ಮಲ್ಲಿ ಇದ್ದಾರೆ.

೧೧. ದೇವದಾಸಿ ಮಹಿಳೆಯರು

ಸಮಕಾಲಿನ ಸಂದರ್ಭದಲ್ಲಿ ದೇವದಾಸಿ ಪದ್ಧತಿಯೂ ಇನ್ನೂ ತನ್ನ ಕಾರ್ಯಚಟುವಟಿಕೆಗಳು ತೆರೆಮರೆಯಲ್ಲಿ ಮುಂದುವರೆಸಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಬೇಡ ಸಮುದಾಯದಲ್ಲಿ ಸಂಪ್ರದಾಯಗಳು, ರೂಢಿ ನಿಯಮಗಳು ಹಾಗೂ ಮನೆಯ ಹಿರಿಯರ ನಂಬಿಕೆಗಳು ಈ ತೆರನಾದ ಆಚರಣೆಗಳಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿವೆ. ಈ ದೇವದಾಸಿ ಸಂಪ್ರದಾಯದ ಆಚರಣೆಯೂ ನಮ್ಮ ಸಮಾಜದ ಎಲ್ಲಾ ತಳಸಮುದಾಯಗಳಲ್ಲಿ ಹಾಸುಹೊಕ್ಕಾಗಿದೆ. ಅದಕ್ಕೆ

ಕಾರಣವೂ ಸಹ ಇದೆ. ತಳಸಮುದಾಯಗಳು ಪ್ರಮುಖವಾಗಿ ಸ್ತ್ರೀದೇವತೆಗಳನ್ನು ಆರಾಧನೆ ಮಾಡುವವರು ಆಗಿರುವುದರಿಂದ ಅವರ ಪ್ರತಿಯೊಂದು ಬೇಕು-ಬೇಡ ಆಸೆಗಳಿಗೆ ಸ್ತ್ರೀದೇವತೆಗಳೆ ಪ್ರಮುಖ ನಿರ್ಧಾರಕರು, ಅದು ತಮ್ಮ ಕುಟುಂಬದ ಬಡತನ ದೂರ ಮಾಡುವುದಾಗಲಿ, ಮಕ್ಕಳಿಕೆ ಕಂಕಣಭಾಗ್ಯ ಕೂಡಿ ಬರುವುದಾಗಲಿ, ಅಥವಾ ಮನೆಗೆ ಗಂಡು ಸಂತಾನ ಪಡೆಯುವಲ್ಲಿ ಕುಟುಂಬದ ಹಿರಿಯರು ದೇವರಲ್ಲಿ ಹರಿಕೆ ಹೊತ್ತುಕೊಳ್ಳುತ್ತಾರೆ. ಏನೆಂದರೆ ಈ ವರ್ಷ ನನ್ನ ಮನೆಯಲ್ಲಿ ಬೆಳೆದುನಿಂತ ಹಿರಿಮಗಳಿಗೆ ಕಂಕಣ ಭಾಗ್ಯ ಕೂಡಿ ಬಂದರೆ ಸಣ್ಣ ಮಗಳನ್ನು ನಿನ್ನ ಸೇವೆಗೆ ಮೀಸಲಿರಿಸುತ್ತೇವೆ ಎಂದು.

ಇಂತಹ ಅನೇಕ ಕಾರಣಗಳಿಂದ ದೇವದಾಸಿ ಪದ್ಧತಿ ಇವತ್ತಿನವರೆಗೂ ಮುಂದುವರೆದುಕೊಂಡು ಬಂದಿದೆ. ಇಂದು ತನ್ನ ಚಹರೆ ಬದಲಾಯಿಸಿಕೊಂಡಿದೆ. ಅದು ಬೇರೆ ಮಾತು. ಆದರೆ ಹೆಣ್ಣು ಮಕ್ಕಳನ್ನು ಇಂತಹ ಸಂಪ್ರದಾಯಕ್ಕೆ ಒಳಪಡಿಸುವುದರಿಂದ ಅವಳನ್ನು ನೋಡುವ ಸಮಾಜದ ಮನೋಭಾವನೆ ತುಂಬಾ ನಿಕೃಷ್ಟವಾಗಿದೆ. ಇದರಿಂದ ಅದೆಷ್ಟೋ ಮಹಿಳೆಯರು ತಮ್ಮ ಹಿರಿಯರ ನಂಬಿಕೆಗಳಿಗೆ ಬಲಿಯಾಗಿ ಸಮಾಜದಲ್ಲಿ ಹೀನ ದೃಷ್ಟಿಗೆ ಒಳಪಟ್ಟಿದ್ದಾರೆ. ಈ ತೆರನಾದ ಸಂಪ್ರದಾಯವು ಕರ್ನಾಟಕದ ಬೇಡ ಬುಡಕಟ್ಟುಗಳಲ್ಲಿ ಕೆಲವೇ ಕಲವು ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತಿದೆ. ಅದು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ ತಾಲೂಕುಗಳಲ್ಲಿ ಅಧಿಕವಾಗಿ ಆಚರಣೆಯಲ್ಲಿತ್ತು. ಆದರೆ ಇಂದು ಸಮುದಾಯದ ಸಂಘ, ಸಂಸ್ಥೆಗಳು, ಸರಕಾರಗಳ ನಿಯಮಗಳಿಂದ ಕಡಿಮೆಯಾಗುತ್ತಿದೆ ಎಂಬುವುದೇ ಸಂತೋಷದ ವಿಚಾರ.

೧೨. ಬಡತನ ಮತ್ತು ಮಹಿಳೆ

ವಿಶ್ವದಲ್ಲಿ ನಮ್ಮ ಭಾರತ ದೇಶವು ಒಂದು ಬಡ ರಾಷ್ಟ್ರ ಆಗಿದ್ದರಿಂದ, ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯಾತವಾಗಿ ವಾಸಿಸುತ್ತಿರುವ ಬೇಡ ಬುಡಕಟ್ಟಿನ ಜೀವನವು ಇದರಿಂದ ಹೊರತಾಗಿಲ್ಲ. ಎಷ್ಟರ ಮಟ್ಟಿಗೆ ಸಮುದಾಯದಲ್ಲಿ ಬಡತನ ಹೊಕ್ಕರಿಸಿಕೊಂಡಿದೆ ಎಂದರೆ ತಮ್ಮ ಒಂದೊತ್ತಿನ ಅನ್ನಕ್ಕಾಗಿ ದೈಹಿಕ ಶ್ರಮವನ್ನೇ ಮೂಲ ಆಧಾರ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಬಹುತೇಕ ಅಧ್ಯಯನ ಕ್ಷೇತ್ರಗಳಲ್ಲಿ ಕಂಡುಕೊಂಡತೆ ಕುಟುಂಬದಲ್ಲಿರುವ ಬಡತನದ ಕಾರಣದಿಂದ ಮಹಿಳೆಯರಿಗೆ ಸರಿಯಾದ ಅವಕಾಶಗಳು ದೊರೆತಿಲ್ಲ. ಅದರಲ್ಲಿಯೇ ಅಲ್ಪಸ್ವಲ್ಪ ಅನುಕೂಲವು ಪುರುಷರಿಗೆ ಲಭಿಸಿದೆ ಎಂದು ತಿಳಿದುಬರುತ್ತದೆ. "ನಿಮ್ಮ ಮಕ್ಕಳಿಗೆ ಸರಿಯಾದ ಮೂಲಭೂತ ಶಿಕ್ಷಣವನ್ನು ಕೊಡಿಸಲು ಏಕೆ ಸಾಧ್ಯವಾಗಿಲ್ಲ ಎಂದು ಕೇಳಿದರೆ ನಮ್ಮ ಹೊಟ್ಟೆಗೆ ಹಿಟ್ಟಿಲ್ಲ ಇನ್ನು ಎಲ್ಲಿ ಜುಟ್ಟಿಗೆ ಮಲ್ಲಿಗೆ"[೨೫] ಎಂದು ಹೇಳುತ್ತಾರೆ. ಅಂದರೆ ಅವರಿಗೆ ಬದುಕು ಸಾಗಿಸುವುದೇ ದುಸ್ತರವಾಗಿದೆ. ಇನ್ನೂ ಎಲ್ಲಿ ಸುಪ್ಪತ್ತಿಗೆಯ ಮಾತು.

ಇಂತಹ ಬಡತನದಲ್ಲಿ ಜೀವಿಸುತ್ತಿರುವ ಬೇಡ ಸಮುದಾಯದ ಜನರು ತಮ್ಮ ಹೊಟ್ಟೆಪಾಡಿಗಾಗಿ ಸರಕಾರದ ಅಭಿವೃದ್ಧಿ ಯೋಜನೆಗಳನ್ನು ನಂಬಿಕೊಂಡಿಲ್ಲ, ಅದರ ಬದಲಾಗಿ ಕೃಷಿಕೂಲಿ, ಶ್ರೀಮಂತರ ಮನೆಯಲ್ಲಿ ಮಹಿಳೆ ಕಸ, ಮುಸುರಿ ಮಾಡಿದರೆ ಪುರುಷರು ಭೂಮಿಯಲ್ಲಿ ಶ್ರಮಿಸುತ್ತಿರುವುದು ಅನಿವಾರ್ಯದ ಸಂಗತಿಯಾಗಿದೆ. ಮತ್ತು ಕಲವೊಂದು ಕುಟುಂಬದವರು ಊರಲ್ಲಿ ಕೂಲಿ ಮಾಡಲು ಕೆಲಸ ಸಿಗದಿದ್ದರೆ ನಗರಕ್ಕೆ ಇಡೀ ಕುಟುಂಬ ಸಮೇತ ವಲಸೆ ಹೋಗಿರುವಂತಹ ನಿದರ್ಶನಗಳು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡೆನು. ತಮ್ಮೆಲ್ಲ ಕೊರಗು, ಸಂಕಷ್ಟಗಳು ಸರಿಯಾಗುತ್ತವೆ ಎಂದು ನಗರಗಳಿಗೆ ಹೋದರು ಸಹ ಅಲ್ಲಿ ಇವರಂತೆ ಅದೇಷ್ಟೋ ಜನರು ಕೆಲಸದಲ್ಲಿ ಪೈಪೋಟಿಗೆ ಎದುರಾಗುತ್ತಾರೆ. ಇದರಿಂದ ಕೆಲವರಿಗೆ ಕೆಲಸ ದೊರೆತರೆ ಇನ್ನೂ ಕೆಲವರು ಕೆಲಸವೇ ಇಲ್ಲದೆ ಸದಸ್ಯರು ದುಡಿದ ಹಣದಲ್ಲೇ ಜೀವನ ನಡೆಸುವಂತಹ ಸಮಸ್ಯೆಯೂ ಇಂದು ಬಡತನದಿಂದ ಬಳಲುತ್ತಿರುವ ಕುಟುಂಬಗಳಿಗೆ ನುಂಗಲಾರದ ತುತ್ತಾಗಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯೂ ಪುರುಷನ ಬೆನ್ನಿಂದ ಇರುತ್ತಾಳೆ ಎನ್ನುವುದು ಮರೆಯಬಾರದು, ಒಂದು ಕಡೆ ಸರಕಾರವು ಮಹಿಳಾ ಸಬಲೀಕರಣ ಮಾತು ಆಡುತ್ತದೆ. ಆದರೆ ಅದು ಅನುಷ್ಠಾನ ಮಾಡುವಲ್ಲಿ ಯಶಸ್ವಿಯಾಗಿಲ್ಲ ಎಂದು ಹೇಳಬಹುದು.

ಇಂತಹ ಅನೇಕ ಸಮಸ್ಯೆ-ಸವಾಲುಗಳು ತನ್ನ ಜೊತೆಗೆ ಇಟ್ಟುಕೊಂಡು ವರ್ತಮಾನದಲ್ಲಿ ಬೇಡ ಸಮುದಾಯದ ಮಹಿಳೆಯೂ ಜೀವಿಸುತ್ತಿರುವುದು ಕಂಡುಬರುತ್ತದೆ. ನಮ್ಮ ಸಮಾಜದಲ್ಲಿ ಇರುವ ಮೇಲ್ವರ್ಗದ ಮಹಿಳೆಯರು ಅಲ್ಪಸ್ವಲ್ಪ ಅವಕಾಶಗಳನ್ನು ಪಡೆದುಕೊಂಡು ಸಮಾಜದ ಮುಖ್ಯವಾಹಿನಿಗೆ ಸ್ವಲ್ಪ ಹತ್ತಿರವಾಗಿದ್ದಾರೆ. ಆದರೆ ಬೇಡ ಸಮುದಾಯದ ಮಹಿಳೆ ತನ್ನ ಕುಟುಂಬದ ಬದುಕನ್ನು ರೂಪಿಸಿಕೊಳ್ಳುವಲ್ಲಿ ಮಗ್ನವಾಗಿದ್ದಾಳೆ. ಸಮುದಾಯದಲ್ಲಿ ಇರುವಂತಹ ಬಡತನ, ಅನಕ್ಷರತೆ, ಮೂಢನಂಬಿಕೆ, ಸಂಪ್ರದಾಯ ಹಾಗೂ ದೇವದಾಸಿ ಪದ್ಧತಿ, ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶು ಹತ್ಯೆ ಇನ್ನಿತರ ಸವಾಲುಗಳಲ್ಲಿ ತಡಕಾಡುತ್ತಾ ಅವುಗಳಿಂದ ಹೊರಬರದೆ ಪುರುಷ ಪ್ರಾಧಾನ್ಯ ಮೌಲ್ಯಗಳಿಗೆ ತಲೆಬಾಗಿ ತನ್ನ ಆಸೆ, ಆಕಾಂಕ್ಷೆ, ಆತ್ಮವಿಶ್ವಾಸ ಕಳೆದುಕೊಂಡು ಕಣ್ಣಿಗೆ ಚಿಪ್ಪುಕಟ್ಟಿದ ಗಾಣದ ಎತ್ತಿನಂತೆ ಶ್ರಮಿಸುತ್ತಾ ಜೀವನ ನಡೆಸುತ್ತಿದ್ದಾಳೆ.

೬.೨. ವರ್ತಮಾನದಲ್ಲಿ ಮಹಿಳೆಯ ಸ್ಥಿತ್ಯಂತರ

ಆದಿಮ ಮಾನವ ಅರಣ್ಯದಲ್ಲಿ ಗೆಡ್ಡೆ-ಗೆಣಸುಗಳ ಆಹಾರದಿಂದ ತನ್ನ ಹಸಿವನ್ನು ತೃಪ್ತಿಪಡಿಸಿಕೊಳ್ಳುತ್ತಿದ್ದ. ನಂತರ ಕಾಲದಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ತಿನ್ನತೊಡಗಿದನು. 'ನಿಸರ್ಗದ ಸಸ್ಯ ಸಮೂಹ ಹಾಗೂ ಪ್ರಾಣಿ ವಲಯದಲ್ಲಿ ತಮಗೆ ಆಹಾರವಾಗಿ ಒಗ್ಗುವಂಥವನ್ನು ಕಂಡುಕೊಂಡು ಬಳಕೆಯ ವಿಧಾನಗಳನ್ನು ರೂಪಿಸಿ ಅನಾನುಕೂಲವೆನಿಸುವ ಸಸ್ಯವರ್ಗ ಹಾಗೂ ಅಪಾಯವೆನಿಸುವ ಪ್ರಾಣಿವರ್ಗವನ್ನು ನಿಯಂತ್ರಣದಲ್ಲಿರಿಸಿಕೊಂಡನು. ಅವಶ್ಯವೆನಿಸುವ

ಜೀವ ಜಗತ್ತನ್ನು ಬಳಕೆಗೆ ತಕ್ಕಂತೆ ಬೆಳೆಸತೊಡಗಿದನು. ಇದರಿಂದ ಕೃಷಿ ಪಶುಪಾಲನೆ, ಹೈನುಗಾರಿಕೆ ಮತ್ತಿತರ ವೃತ್ತಿಗಳನ್ನು ರೂಪಗೊಂಡವು. ಇವುಗಳ ಕಾರಣಕ್ಕಾಗಿ ಅಲೆಮಾರಿತನವನ್ನು ಅಂತ್ಯಗೊಳಿಸಿ ಒಂದುಕಡೆ ನೆಲೆಯೂರುವುದನ್ನು ಕಲಿತುಕೊಂಡನು. ಮುಂದೆ "ಕಾಡಿನಲ್ಲಿ ಅಲೆಯುತ್ತಿದ್ದ ಮನುಷ್ಯ ನಾಡನ್ನು ರೂಪಿಸಿಕೊಂಡು ನೆಲೆಸತೊಡಗಿದ್ದ"[೨೬] ಬೆಳವಣಿಗೆಯೇ ಪ್ರಕೃತಿಯಿಂದ ಸಂಸ್ಕೃತಿಗಳು ವಿಕಾಸಗೊಂಡಂತೆ ಸಮುದಾಯಗಳು ಸೃಷ್ಟಿಯಾಗಿ ಕಾಡು ಇಲ್ಲವೇ ನಾಡುಗಳಲ್ಲಿ ಅಸ್ತಿತ್ವವನ್ನು ಗುರುತಿಸಿಕೊಂಡರು.

೧. ಸ್ವಾತಂತ್ರ್ಯ ಪೂರ್ವ ಮಹಿಳಾ ಸ್ಥಿತಿಗತಿ

ನಿಸರ್ಗದ ಬೆಟ್ಟ-ಗುಡ್ಡ, ಕಣಿವೆಗಳಲ್ಲಿ ವಾಸಿಸುವಂತಹ ಬುಡಕಟ್ಟುಗಳಲ್ಲಿ ಬೇಡರ ಸಮುದಾಯವು ಒಂದು. ಮೂಲತಃ ಗುಡ್ಡಗಾಡು ಜನರಾದ ಇವರು ಬೇಟೆಗಾರಿಕೆಯನ್ನೇ ವೃತ್ತಿಯನ್ನಾಗಿಸಿ ಆ ಮೂಲಕ ಹೊಟ್ಟೆ ಹೊರೆಯುತ್ತಿದರು. ನಾಗರೀಕರ ಸಂಪರ್ಕಕ್ಕೆ ಸ್ಪಂದಿಸದೆ ಕಾಡಿನಲ್ಲಿ ಬಹುಕಾಲ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡರು.

ನಾಗರೀಕ ಸಮಾಜ ಸಂಪರ್ಕದಿಂದ ವಂಚಿತರಾಗಿ ದೂರವಾದರೂ ನಾಡಿನ ಪ್ರಭಾವ ಅರಣ್ಯದಲ್ಲಿ ವಾಸಿಸುವ ಜನಜೀವನದ ಮೇಲೆ ಆಗುತ್ತದೆಂಬುದು ನಿರಂತರ ಅಂಶವಾಗುತ್ತದೆ. ಯಾಕೆಂದರೆ ನಾಡಿನ ಮನುಷ್ಯನು ಎಂದಿಗೂ ಕಾಡನ್ನು ಅಲಕ್ಷಿಸಿ ಬದುಕಲು ಸಾಧ್ಯವಿಲ್ಲ. ಅರಣ್ಯದ ಉತ್ಪನ್ನಗಳು ನಾಡಿಗೆ ಪೂರಕವಾದಂತೆ ನಾಡು ಸಹ ಅರಣ್ಯಕ್ಕೆ ಪೂರಕವಾಗುತ್ತದೆಂಬುದು ಸತ್ಯದ ಸಂಗತಿ. ಏಕೆಂದರೆ ನಾಡಿನ ಜನರ ಸ್ವಾರ್ಥ-ಲೋಭಗಳ, ಲಾಭದಾಸೆಗಳ ಏಣಿಕೆಯಿಂದಾಗಿ ಪರ್ವತ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನರು ತಾವು ಕಷ್ಟಪಟ್ಟು, ಸಂಗ್ರಹಿಸಿದ ಅರಣ್ಯದ ಕಚ್ಚಾವಸ್ತುಗಳನ್ನು ಇಂಥವರಿಗೆ ಕೊಟ್ಟು ತಾವು ಕೈ ಕಟ್ಟಿ ಕೂಡಬೇಕಾಗಿತ್ತು. ಈ ರೀತಿಯ ಅಪಾಯದಿಂದ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾದರೆ ತಮ್ಮ ಮೇಲೆ ಆಕ್ರಮಣವೆಸಗಿದವರೊಂದಿಗೆ ಹೋರಾಡುವುದು ಅನಿವಾರ್ಯವಾಯಿತು. "ಇವರು ಪ್ರಾಣಿ ಬೇಟೆಯ ಹೋರಾಟದಲ್ಲಿ ಪಳಗಿದಂತಹ ಬೇಡರಿಗೆ ಕಷ್ಟಸಾಧ್ಯವಲ್ಲದ ಕೆಲಸವಾಯಿತು. ಬೇಟೆಯಾಡಿದ ಪ್ರಾಣಿಯನ್ನು ಹಿಡಿದು ಪಳಗಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅದನ್ನು ಮಣಿಯುವಂತೆ ಮಾಡುವ, ಹಿಡಿಯಲಾಗದ ಪ್ರಾಣಿಗಳನ್ನು ಭಯ-ಭೀತಿಗೊಳಿಸಿ ಬಹುದೂರ ಅಟ್ಟುವ ಅಪಾಯಕರವೆನಿಸಿದವುಗಳನ್ನು ಹಿಡಿದು ಕೊಲ್ಲುವ ಚಾಕಚಕ್ಯತೆ ಬೇಡರಿಗೆ ಇದ್ದ ಬಹು ದೊಡ್ಡ ವರದಾನ."[೨೭] ಆದ್ದರಿಂದಲೇ ಕಾಡಿನ ಮಾರ್ಗವಾಗಿ ದಿನ ನಿತ್ಯ ಅಲೆದಾಡುವ ನಾಡಿನ ಜನರನ್ನು ಅವರು ಗುಮಾನಿಯಿಂದ (ಸಂಶಯ) ಕಾಣುತ್ತಿದ್ದರು. ಅಂಥವರಿಂದ ತಮಗೆ ತೊಂದರೆಯಾದೀತೆಂಬ ಎಚ್ಚರಿಕೆಯಿಂದ ಹಿಡಿದು ಕೊಲುತ್ತಿದ್ದರು. ಇಲ್ಲವೇ ಅವರ ವಸ್ತು ವಿಶೇಷಗಳನ್ನು ವಶಪಡಿಸಿಕೊಂಡು ಓಡಿಸುತ್ತಿದ್ದರು. ಇಂತಹ ಕಾರ್ಯಕ್ಷಮತೆಯಿಂದ ನಾಡಿನ ಜನರ ನಗನಾಣ್ಯಗಳು ವಸ್ತು ವಿನಿಮಯದ ಸಾಧನಗಳೆಂದು ತಿಳಿದು ದಾರಿಹೋಕರಿಂದ ಅವುಗಳನ್ನು

ದೋಚುತ್ತಿದ್ದರು. ಅವುಗಳ ಮೂಲಕ ನಾಡಿನ ಸಿದ್ಧ ವಸ್ತುಗಳನ್ನು ತಾವು ಪಡೆಯಬಹುದೆಂದು ಅರಿತುಕೊಂಡರು.

"ಕಾಲಕಳೆದಂತೆ ಇದು ಬೃಹಧಾಕಾರವಾಗಿ ಲೂಟಿ ದರೋಡೆಗಳಾಗಿ ಮಾರ್ಪಟ್ಟಿತು. ಇಂತಹ ಕೃತ್ಯಗಳಲ್ಲಿ ಬೇಡ ಬುಡಕಟ್ಟಿನ ಹೆಸರು ಪ್ರಮುಖವಾಗಿ ಸೇರ್ಪಡೆಗೊಂಡಿತು. ಆದಿಮಕಾಲದ ಸಂದರ್ಭದಲ್ಲಿ ಬೇಡರು ಕಾಡಿನ ಮಾರ್ಗವಾಗಿ ಓಡಾಡುತ್ತಿದ್ದ ದಾರಿಹೋಕರನ್ನು ತಡೆದು ಅವರಲ್ಲಿರುವಂತಹ ವಸ್ತುಗಳನ್ನು ಪಡೆಯುತ್ತಿದ್ದರು. "ಕೊಲೆ-ಸುಲಿಗೆ ದರೋಡೆಗಳನ್ನು ಮಾಡುತ್ತಿದ್ದರೆಂಬ ಮಾತು ನಮ್ಮ ಚರಿತ್ರೆ-ಪರಂಪರೆಯಲ್ಲಿ ಜನಜನಿತವಾಗಿದೆ[31]" ಇವರ ಮುಗ್ಧತೆಯ ಕುರಿತು ಮರಳಿ ನಾಡವಾಸಿಗಳು ಅರಣ್ಯಕ್ಕೇ ಏಕೆ ಹಣವನ್ನು ಒಯ್ಯುತ್ತಿದ್ದರು ಎಂಬುದರ ಬಗ್ಗೆ ಅರಿವು ದೊರೆಯದೆಯಿರುವುದು ಇಂತಹ ಹೇಳಿಕೆಗಳಿಗೆ ಕಾರಣವಾಗುತ್ತದೆ. ರಾಮಾಯಣದಲ್ಲಿ ಬೇಡರ ಶಬರಿ ಗುಹ ಮುಂತಾದವರು ಅರಣ್ಯದಲ್ಲಿದ್ದು ನಾಡಿನ ಜನರಿಗೆ ಮತ್ತು ಇಡೀ ನಾಡಿಗೆ ಸಹಾಯ ಮಾಡಿದ ಅನೇಕ ಉಲ್ಲೇಖಗಳಿವೆ.

ನಾಗರೀಕರೆನಿಸಿದ ಸಮಾಜದಲ್ಲಿ ಪ್ರಾದೇಶಿಕವಾಗಿ ಸಾಮುದಾಯಿಕ ನಾಯಕತ್ವಗಳು ರಚನೆಗೊಂಡ ಹಿನ್ನೆಲೆಯಲ್ಲಿ ರಾಜಕೀಯ ವಲಯ ಅಥವಾ ರಾಜಕೀಯ ರಂಗ ವ್ಯವಸ್ಥಿತವಾಗಿ ರೂಪಗೊಂಡಿತು. ವಲಯ ವ್ಯಾಪ್ತಿಯಲ್ಲಿ ಸಮುದಾಯಗಳನ್ನು ಹೊರಗಿನವರ ದಾಳಿಗಳಿಂದ ರಕ್ಷಿಸುವ ಉದ್ದೇಶದಿಂದ ಈ ನಾಯಕತ್ವ ಮುಖಂಡತ್ವವು ಅನಿವಾರ್ಯವೆಂಬಂತಾಯಿತು. ನಾಯಕನೆನಿಸಿಕೊಂಡ ರಾಜನು ತನ್ನ ಪ್ರಜೆಗಳನ್ನು ಕಾಪಾಡಲು ಧೈರ್ಯ ಸಾಹಸಗಳಿಂದ ಕೂಡಿದ ಶಕ್ತಿಯುತ ಶರೀರದ ಯುವಕರ ಪಡೆಯನ್ನು ಕಟ್ಟುವ ಅನಿವಾರ್ಯತೆ ಒದಗಿತು. ಇಂತಹ ಅನಿವಾರ್ಯತೆಗೆ ಉಪಯೋಗವಾದವರೇ ಬೇಡ ಬುಡಕಟ್ಟಿನ ಯುವಕರು. ಹೀಗೆ ಹಂತ ಹಂತವಾಗಿ ಸಮುದಾಯವು ಸ್ಥಿತ್ಯಂತರಕ್ಕೆ ಬಂದದ್ದು ಕಾಣುತ್ತದೆ. ಅರಣ್ಯದ ಕ್ರೂರ ಜಂತುಗಳ ನಡುವೆ ಬದುಕನ್ನು ರೂಪಿಸಿಕೊಂಡಿದ್ದ ಬೇಡರ ಸಹಾಯವು ಅರಸರಿಗೆ ಎರಡು ಪ್ರಕಾರಗಳಲ್ಲಿ ಅವಶ್ಯವೆನಿಸಿತು. ಮೊದಲನೆಯದಾಗಿ ಕಾಡಿನ ಪ್ರಾಣಿಗಳ ಆಕ್ರಮಣದಿಂದ ಪ್ರಜೆಗಳನ್ನು ರಕ್ಷಣೆ ಮಾಡುವಾಗ ಯುವಕರ ಪಡೆಯು ಮುನ್ನುಗ್ಗಿ ಅರಣ್ಯದಲ್ಲಿ ಬೇಟೆಯಾಡಬೇಕಾಗಿತ್ತು. ಈ ಪಡೆಯಲ್ಲಿ "ಬೇಡ-ಬೇಡತಿಯರು ಲಿಂಗ-ಭೇದವಿಲ್ಲದೇ ಸೇರಿ ಬೇಟೆ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿದ್ದರು. ಇದಕ್ಕೆ ಪುಷ್ಟಿಯೆಂಬಂತೆ ಮಹಾಭಾರತದ ಕಿರಾತಾರ್ಜುನ ಪ್ರಸಂಗ ಹಾಗೂ ಹರಿಶ್ಚಂದ್ರನ ಪುರಾಣದಲ್ಲಿ ರಾಜನು ಕೈಗೊಳ್ಳುವ ಬೇಟೆಯನ್ನು ಬೇಡರು ಯಶಸ್ವಿಗೊಳಿಸುತ್ತಿದ್ದರೆಂಬ ಪುರಾವೆಗಳು ಕಂಡುಬರುತ್ತವೆ."[32] ಎರಡನೆಯದಾಗಿ ಶತ್ರುಗಳಿಂದ ರಾಜ್ಯದ ಸಂಪತ್ತನ್ನು ಹಾಗೂ ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ಸೈನ್ಯಕ್ಕೆ ಬೇಡ ಬುಡಕಟ್ಟು ಯುವಕರ ಅನಿವಾರ್ಯತೆ ಇತ್ತು. ರಾಜ್ಯದ ಆರ್ಥಿಕ ಸಂಪತ್ತು ಹಾಗೂ ಮಾನವ ಸಂಪತ್ತಿನ ಮೇಲೆ ಆಕ್ರಮಣ ನಡೆಸುತ್ತಿದ್ದ ಕಳ್ಳರನ್ನು ಸದೆಬಡಿಯುವ ಎದೆಗಾರಿಕೆಯುಳ್ಳ ಸೈನಿಕ ಪಡೆಗಳಿಗೆ ಅರಣ್ಯಗಳಲ್ಲಿದ್ದ

ಬೇಡರ ಪಡೆಗಳನ್ನು ಬಹುಮುಖ್ಯವಾಗಿ ಉಪಯೋಗಿಸಿಕೊಂಡರು. "ರಾಮಾಯಣ-ಮಹಾಭಾರತದ ಯುದ್ಧಗಳಲ್ಲಿ ಅನೇಕ ಸಾಂದರ್ಭಿಕ ಘಟ್ಟಗಳಲ್ಲಿ ಬೇಡರು ಪಾಲ್ಗೊಂಡ ನಿದರ್ಶಗಳಿವೆ. ಮಹಾಕಾವ್ಯವಾದ ಮಹಾಭಾರತದಲ್ಲಿ ಏಕಲವ್ಯನ ಸಾಹಸ ಸಾಧನೆ ಹಾಗೂ ಹೋರಾಟಗಳು ಈ ಕಾವ್ಯದ ಯುದ್ಧರಂಗಕ್ಕೆ ವೀರತಿಲಕವಿಟ್ಟ ಕೀರ್ತಿಗೆ ಮತ್ತೆ ಯಾರೂ ಸರಿ ಸಾಟಿಯಿಲ್ಲವೆಂಬುದನ್ನು ಎತ್ತಿ ತೋರಿಸುತ್ತದೆ."[೩೦]

ಈ ರೀತಿಯಾದ ಸಾಮಾಜಿಕ ಸನ್ನಿವೇಶದ ಸಂದರ್ಭದಲ್ಲಿ 'ಅಂದರೆ ಆಯಾ ಪ್ರದೇಶದ ಅರಸರ ಸೈನ್ಯಕ್ಕೆ ಬೇಡರ ಪಡೆಗಳು ಅನಿವಾರ್ಯವಾದಂತೆಲ್ಲ ಸ್ತ್ರೀಯರ ಸಾಮಾಜಿಕ-ಕೌಟುಂಬಿಕ ಬದುಕಿನಲ್ಲಿ ವ್ಯತ್ಯಾಸಗಳಾದವು. ಅದರ ಜೊತೆಗೆ ಅಧಿಕಾರ, ಅಂತಸ್ತು, ಅವಕಾಶಗಳಲ್ಲಿ ಬದಲಾವಣೆ ಆಗಿರುವುದು ಕಂಡುಬರುತ್ತದೆ. ಹಲವು ಸ್ತ್ರೀಯರು ಅರಮನೆಯ ದಾಸಿಯರು, ಪರಿಚಾರಿಕೆಯರು, ಸೈನಿಕರ ಆಸೆ -ಆಕಾಂಕ್ಷೆಗಳು ಅವಶ್ಯಕತೆಗಳನ್ನು ಸಂತೃಪ್ತಿಗೊಳಿಸಬಲ್ಲ ಗಣಿಕೆಯರೂ ಆಗಬೇಕಾದ ಪರಿಸ್ಥಿತಿ ಒದಗಿತು. ಮಾನವನ ಸಾಮಾಜಿಕ ವ್ಯವಸ್ಥೆಯ ಪ್ರಾರಂಭಿಕ ಸಮಾಜದ ಸ್ವರೂಪವಾದ ಮಾತೃ ಪ್ರಧಾನ ಕುಟಂಬ ವ್ಯವಸ್ಥೆಯು ಆಸ್ತಿಯ ಪರಿಕಲ್ಪನೆಯಿಂದಾಗಿ ಪರಿವರ್ತನೆಯಾಗತೊಡಗಿತು. ಮಹಿಳೆಯನ್ನು ಪುರುಷನ ಆಸ್ತಿಯೆಂದು ಪರಿಗಣಿಸಿ ನಿರ್ದಿಷ್ಟ ವ್ಯಕ್ತಿಯ ಸಂತಾನವನ್ನು ಹೊಂದುವ ಮೂಲಕ ವಂಶಾಭಿವೃದ್ಧಿಯಲ್ಲಿ ಭಾಗವಹಿಸಬೇಕಂಬ ಸಾರ್ವತ್ರಿಕ ನಿಲವು ಸಾಮಾಜಿಕ ಸಂಸ್ಕೃತಿಯಾಗಿ ಬದಲಾವಣೆ ಹೊಂದಿತು. ಆದರೆ ಇನ್ನೂ ಕೆಲವಡೆಗಳಲ್ಲಿ "ಸಮುದಾಯದ ಸರಿಸುಮಾರು ಬಹುಸಂಖ್ಯಾತ ಪುರುಷ ವರ್ಗವೆಲ್ಲ ಸೈನ್ಯದ ಪಡೆಗೆ ಸೇರಿಕೊಳ್ಳುವ ಒತ್ತಡವೇರ್ಪಟ್ಟಾಗ ಮತ್ತೆ ಮಾತೃ ಮೂಲ ಕುಟುಂಬ ಹಿನ್ನೆಲೆಯಲ್ಲಿ ರಿಯಾಯಿತಿಯೆಂಬಂತೆ ಲೇಸಿ (ದೇವದಾಸಿ) ಪದ್ಧತಿ, ಮನೆಗೆ ಬಿಡುವ ಸಂಪ್ರದಾಯ, ಬಸವಿ ಪರಂಪರೆ, ದೇವದಾಸಿ, ಗೊರವಿ, ಜೋಗಮ್ಮಗಳಂಥ ಸಂಪ್ರದಾಯಗಳು ಕೆಲವು ಪ್ರದೇಶಗಳ ಉನ್ನತ ವರ್ಗದಿಂದ ಸಾಮಾನ್ಯ ವಲಯದ ಪುರುಷರವರೆಗೂ ಈ ಪದ್ಧತಿಗಳಿಗೆ ಅನುಮೋದನೆ ಇದ್ದರೂ ಸಾಮಾಜಿಕವಾಗಿ ಈ ಸಂಪ್ರಧಾಯಗಳಲ್ಲಿ ಕ್ರಿಯಾಶೀಲರಾದ ಮಹಿಳಾ ವರ್ಗಕ್ಕೆ ಸಾಮಾಜಿಕ ಸ್ಥಾನಮಾನಗಳಿಂದ ಅಪಮಾನಕರ ಪರಿಸ್ಥಿತಿ ಒದಗಿತು."[೩೧]

ಇವತ್ತಿನ ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಬರುವಂತಹ ವಿಜಯನಗರ ಸಾಮ್ರಾಜ್ಯವು ವಿಜೃಂಭವಿಸುವಲ್ಲಿ ಬೇಡ ಬುಡಕಟ್ಟಿನ ಪಡೆಗಳ ರಕ್ಷಣೆಯ ಹೊಣೆ ಅತ್ಯಧಿಕವಾಗಿ ಇದ್ದಿತೆಂದು ನಾವು ಒಪ್ಪಿಕೊಳ್ಳುವಾಗಲೇ, ಇಲ್ಲಿರುವ ಬೇಡರ ಸೈನಿಕ ಮಹಿಳೆಯರ ಪರಿಸ್ಥಿತಿ ಸಮಾಜದಲ್ಲಿ ಅಧೋಗತಿಗೆ ಇಳಿಯಿತೆಂದರೆ ತಪ್ಪಾಗಲಾರದು. "ದೈವ-ದೇವರು ಮತ್ತು ಧರ್ಮದ ಹೆಸರಿನಲ್ಲಿ ಸೈನಿಕ ಹೆಂಗಸರು ಸಾರ್ವಜನಿಕ ವಲಯದ ಇಲ್ಲವೇ ರಾಜಕೀಯ ಒತ್ತಡಗಳ ಹಿನ್ನೆಲೆಯಲ್ಲಿ ಪುರುಷರ ಬಳಕೆಗೆ ಕೈಗೊಂಬೆಯಾಗುವಂತಾಯಿತು."[೩೨] ಈ ಭಾಗ ಮತ್ತು ಉತ್ತರ ಕರ್ನಾಟಕದ ವ್ಯಾಪ್ತಿಯ ಕೆಳವರ್ಗದ ಸಮುದಾಯಗಳಲ್ಲಿ ಮಾತೃ ಪ್ರಧಾನ ವ್ಯವಸ್ಥೆ ನಿರಂತರಗೊಳ್ಳಲು ಸೈನಿಕನ ಪದ್ಧತಿಯ

ಪರಿಣಾಮದಂತಹ ರಾಜಕೀಯ ಕಾರಣಗಳೇ ಮುಖ್ಯ ಪ್ರರೇಪಣೆಗಳಾಗಿವೆ. ಸೈನಿಕನನ್ನು ವೀರನೆಂದು ವಿಜೃಂಭಿಸಿ ಯುದ್ಧ ಭೂಮಿಯ ಹೋರಾಟದ ಸಾವನ್ನು ವೀರಮರಣವೆಂದು ಕೀರ್ತಿಸಿ, ಸೈನಿಕ ಸಾವಿನ ನಂತರದ ನೆಲೆಯನ್ನು 'ವೀರಸ್ವರ್ಗ'ವೆಂದು ಹೆಣ್ಣಿನ ಅಂಗ-ಸಂಗ ಸಂಪರ್ಕವಿಟ್ಟುಕೊಳ್ಳಲು ಮಾತ್ರ ಅವಕಾಶವಿದ್ದುದರಿಂದ ಸೈನಿಕನ ವಂಶ ಮಾತ್ರ ಮೂಲ ವ್ಯವಸ್ಥೆಯ ಸ್ವರೂಪದಲ್ಲೆ ಬೆಳೆಯತೊಡಗಿತು ಮತ್ತು ಅದು ಅನಿವಾರ್ಯತೆ ಕೂಡ ಆಗಿತ್ತು. ಮುಂದೆ ಸೈನಿಕ ವಲಯದಲ್ಲಿ ಧೀರ-ದಿಟ್ಟರೆನಿಸಿ ಕೊಂಡ ಬೇಡರು ಸೈನ್ಯದ ಮುಖಂಡರೂ, ದಳವಾಯಿಗಳು, ವಿವಿಧ ಸೇನೆಗಳ ಅಧಿಕಾರಿಗಳೂ ಆಗಿ ಸೈನ್ಯದ ನಾಯಕತ್ವವನ್ನು ಅಲಂಕರಿಸಿಕೊಂಡು ಮುಖಂಡರಾಗಿ ತಮ್ಮ ರಾಜಾಧಿರಾಜ ಸಾರ್ವಭೌಮ ಚಕ್ರವರ್ತಿ ಸಾಮಂತ ಮಾಂಡಲಿಕರ ಮೆಚ್ಚುಗೆ ವಿಶ್ವಾಸಗಳನ್ನು ಗಳಿಸಿಕೊಂಡರು. ಈ ಕಾರಣದಿಂದಾಗಿಯೆ ದೊರೆಗಳು ಅಲ್ಲಲ್ಲಿನ ಪಾಳೆಯಗಳ ಅಧಿಕಾರವನ್ನು ನಿರ್ವಹಿಸುತ್ತಿದ್ದರು. ಅರಸನ ವಿಶ್ವಾಸದ ಅಡಿಯಲ್ಲಿ ಬೇಡನಾಯಕ ಪಾಳೆಯಗಾರರು ಆಡಳಿತಾತ್ಮಕವಾದ ಸ್ವಂತಿಕೆಯನ್ನು ನಿಷ್ಠೆಯನ್ನು ಮೆರೆದಿದ್ದಾರೆ. ಹೀಗೆ ಅವಕಾಶ ದೊರೆತ ಪಾಳೆಯಗಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಆಶ್ರಯ ದಾತರಾದ ದೊರೆಗಳ ದರ್ಪ ವೈಭವಗಳನ್ನು ಅನುಕರಣೆ ಮಾಡಿದರು. ಇಂಥ ಪಾಳೆಯಗಾರರ ಆಚಾರ-ವಿಚಾರ ಸಂಪ್ರದಾಯಗಳು ಕ್ಷತ್ರಿಯ ಸಹಜವಾದ ದರ್ಪ ಗಾಂಭೀರ್ಯಗಳಿಂದ ಕೂಡಿದ್ದವು. ಇಂತಹ ಸಂದರ್ಭದಲ್ಲಿ ಇವರಲ್ಲಿ ಮೂಲ ಬುಡಕಟ್ಟು ಸಂಪ್ರದಾಯಗಳು, ಮಾತೃ ಪ್ರಧಾನತೆಯ ಆಚರಣೆಗಳು, ಮರೆಯಾಗಿ ಶಿಷ್ಟ ಸಂಪ್ರದಾಯದ ಪುರುಷ ಮೌಲ್ಯಗಳು ವಿಜೃಂಭಿಸಿದವು. ಆದರೆ "ಮಾತೃ ಪ್ರಧಾನತೆಯ ಮೂಲ ಸ್ವರೂಪದ ನೆನಪನ್ನು ಸ್ತ್ರೀದೈವವನ್ನು (ಶಕ್ತಿ ದೇವತೆ) ತಮ್ಮ ಕುಲದೇವತೆಯನ್ನಾಗಿ ಆರಾಧಿಸುವಲ್ಲಿ ಉಳಿಸಿಕೊಂಡರು"[೩೩].

ರಾಜ ವೈಭವದಲ್ಲಿ ಬೇಡರು, ಪಾಳೆಯಗಾರರು, ದೊರೆಗಳು, ಪ್ರಭುಗಳು, ರಾಜ ಪರಿವಾರದವರು ಎಂಬುದಾಗಿ ಕರೆಸಿಕೊಂಡಿದ್ದಾರೆ. ಬುಡಕಟ್ಟು ಸಮುದಾಯಗಳು ರಾಜತ್ವಕ್ಕೆ ನೀಡಿರುವ ಸ್ಪಂದನೆಯಲ್ಲಿ ಪಾಳೆಯಗಾರರ ಅಧಿಕೃತತೆ ಅತಿ ಮೌಲ್ಯವಾದರು, ಇಂದಿಗೂ ಮೌಖಿಕ ಪರಂಪರೆಯ ನೆನಪುಗಳಲ್ಲಿ ನೆಲೆಸಿರುವುದು ಪಾಳೆಯಗಾರರ ಪ್ರತಿಭೆಯೇ ಹೊರತು ರಾಜಾಧಿರಾಜರ ಸಾಧನೆಗಳಲ್ಲ. ಅಷ್ಟರಮಟ್ಟಿಗೆ ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳಿಗೆ ಕೈನೀಡಿ ಸಹಾಯ ಮಾಡಿದ್ದಾರೆ. ಯುದ್ಧ ಮಾಡುವ ಸೈನಿಕರನಿಂದ ಹಿಡಿದು ಆಡಳಿತಾತ್ಮಕವಾದ ವಿವಿಧ ಅಧಿಕಾರ ಹುದ್ದೆಗಳಲ್ಲಿ ತಮ್ಮ ಕರ್ತವ್ಯ ಜವಾಬ್ದಾರಿಗಳನ್ನು ನಿರ್ವಹಿಸಿದ ಬೇಡ ಬುಡಕಟ್ಟು ಸಮುದಾಯಕ್ಕೆ ಈ ಮೂಲಕ ನಾಯಕ ಎಂಬುದು ಸಮುದಾಯ ಸೂಚಕವಾಯಿತು. ಬೇಡ, ನಾಯಕ, ಪಾಳೆಯಗಾರ ಎಂಬಿತ್ಯಾದಿ ಬಿರುದುಗಳಂತೆ ಅನ್ವರ್ಥಗಳಾದವು. "ಕತ್ತಿಯನ್ನು (ತಳವಾರ್ ಅನ್ನು) ಹಿಡಿದ ಸೈನಿಕನೆಂದರೆ ಕತ್ತಿ ವರಸೆಯಲ್ಲಿ ನಿಪುಣನಾದ ಹೋರಾಟಗಾರನೆಂಬ ಹಿರಿಮೆಯಿಂದ ಈ ಸಮುದಾಯದ ಸೈನಿಕರನ್ನು "ತಳವಾರ್" ರೆಂದು ರಾಜರು ಗುರುತಿಸಿದ್ದಾರೆ"[೩೪]

ಅರಸನ ಗದ್ದುಗೆಯ ಅಧಿಕಾರವನ್ನು ರಕ್ಷಿಸುವಲ್ಲಿ ರಾಜನಿಗೆ ಅತಿ ಆಪ್ತರಾದ ಲೆಂಕ-ಗರುಡ, ವೇಳೆಪಾಳಿ, ಜೋಳವಾಳಿಗಳಾಗಿ, ರಾಜನ ಅರಮನೆಗೆ ಹತ್ತಿರವಾದರು. ಇವೆಲ್ಲ ಸ್ಥಾನಮಾನಗಳಿಂದ ಇವರ ಕೆಲವು ಕುಟುಂಬಗಳು ನಾಡಿನ ಸಂಪರ್ಕ ಪಡೆಯುವಲ್ಲಿ ಯಶಸ್ವಿಯಾದರು. ರಾಜನ ಮೇಲೆ ಆಗುವ ಶತ್ರು ಆಕ್ರಮಣಗಳಾದ ಯುದ್ಧ ಲೂಟಿಗಳ ಸಂದರ್ಭದಲ್ಲಿ ತಮ್ಮ ರಾಜ ಸೋಲನ್ನನುಭವಿಸಿದರೆ ಅಥವಾ ಶರಣಾಗತನಾದರೆ ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಆಗ ಅರಸನ ಪರಿವಾರಕ್ಕೆ ಹಾನಿಯುಂಟಾಗದಂತೆ ಪಾಳೆಯಗಾರ, ಸೇನಾಧಿಕಾರಿ ಹಾಗೂ ಲೆಂಕ-ಗರುಡರ ಕುಟುಂಬಗಳಿಗೂ ಕಂಟಕ ತಟ್ಟುತ್ತಿತ್ತು. "ಸೋತ ರಾಜನ ಸ್ತ್ರೀ ಸಂಪತ್ತಿನ ಮೇಲೆ ಅಂದರೆ ಮಹಿಳೆಯರ ಮೇಲೆ ಒತ್ತಾಯ ಬಲತ್ಕಾರ ಅತ್ಯಾಚಾರದ ಸುದ್ದಿಯಾಗಿ ಅಪಮಾನಗೊಳಿಸುತ್ತಿದ್ದರು. ಈ ಭಯದಿಂದ ಹಾಗೂ ಶೀಲ ಸಂರಕ್ಷಣೆಯ ಮೌಲ್ಯವನ್ನು ಉಳಿಸಿಕೊಳ್ಳಲು ರಾಜಪರಿವಾರದ ಕುಟುಂಬಗಳಂತೆ ಬುಡಕಟ್ಟು ಪಾಳೆಯಗಾರರ ಮಡದಿಯರೂ ಸಹಗಮನವೇರುತ್ತಿದ್ದರು."[೩೫] ಪಾಳೆಯಗಾರರ ವಂಶಸ್ಥರಲ್ಲಿ ಇಂಥ ಐತಿಹ್ಯಗಳು-ಪುರಾವೆಗಳಾಗುತ್ತವೆ. ಬೇಡ ಪಾಳೆಯಗಾರ ಕಂಪಿಲನ ಮಗ ಕುಮಾರರಾಮನ ರಾಣಿಯರು ಹಾಗೂ ಪರಿವಾರದ ಅರಸಿಯರು ಸೈನಿಕರ ಮಡದಿಯರು ಯುದ್ಧದ ಫಲಿತಾಂಶಕ್ಕೆ ಪ್ರತಿಫಲವಾಗಿ ಚಿತೆಯೇರಿ ಪ್ರಾಣಾರ್ಪಣೆ ಮಾಡಿಕೊಂಡಿರುವಂತಹ ಘಟನೆ ಇತಿಹಾಸದಲ್ಲೊಂದು ನೆನಪಾಗಿ ಉಳಿದಿದೆ.

ಇಂಡಿಯಾಕ್ಕೂ ಆಂಗ್ಲರ ಆಗಮನವಾಗಿ, ಅವರು "ಅಂದಿನ ರಾಜ ಪ್ರಭುತ್ವದ ನೆಲೆಗಳನ್ನು ವಶಪಡಿಸಿಕೊಳ್ಳುತ್ತಾ ಬಂದ ಸಂದರ್ಭಗಳಲ್ಲಿ ಬೇಡ ಬುಡಕಟ್ಟಿನ ಪಾಳೆಯಗಾರರು ಬ್ರಿಟೀಷರನ್ನು ದಿಟ್ಟತನದಿಂದ ಎದುರಿಸಿದ್ದಾರೆ. ಆದರೆ ಸ್ಥಳೀಯವಾಗಿ ಮುಸ್ಲಿಂ ದೊರೆಗಳೊಂದಿಗೆ ಹೊಂದಿದ್ದ ಧಾರ್ಮಿಕ ವೈಷಮ್ಯದಿಂದಾಗಿ ಅಲ್ಲಲ್ಲಿ ಆಂಗ್ಲರೊಂದಿಗೆ ಕೈ ಜೋಡಿಸಿ ಮುಖ ಕೆಡಿಸಿಕೊಂಡ ನಿದರ್ಶನಗಳೂ ಚರಿತ್ರೆ ಪುಟಗಳಲ್ಲಿ ಕಾಣಸಿಗುತ್ತವೆ. ಬ್ರಿಟೀಷರ ಪಾಲಿಗೆ ಸಿಂಹಸ್ವಪ್ನವಾಗಿ ಕಾಡಿದ ಸುರುಪೂರ ಸಂಸ್ಥಾನದ ಸಮರ ಸಿಂಹ ರಾಜಾವೆಂಕಟಪ್ಪನಾಯಕ ಎಚ್ಚೆಮನಾಯಕ, ಸರ್ಜಪ್ಪನಾಯಕ, ಸಿಂಧೂರ ಲಕ್ಷ್ಮಣ,, ಕನಕಗಿರಿ ನಾಯಕರು, ಗುಮ್ಮನಾಯ್ಕ ಹಳ್ಳಿಯ ಪಾಳೆಯಗಾರರು, ಕಂಪ್ಲಿಯ ಅರಸರು, ಶಿರಾದ ಪಾಳೆಯಗಾರರು ಚಿತ್ರದುರ್ಗದ ಅರಸರು, ಗುಡೆಕೋಟೆಯ ಪಾಳೆಯಗಾರರು ಮೊದಲಾದವರು ಇಂದಿಗೂ ಚರಿತ್ರೆ ಮತ್ತು ಜನಪದರಲ್ಲಿ ಅವಿಸ್ಮರಣೀಯವಾಗಿ ದಾಖಲಾಗಿದ್ದಾರೆ."[೩೬]

ಬ್ರಿಟಿಷರ ಆಡಳಿತ ಘಟಕಗಳಾದ ಗ್ರಾಮ ಪಂಚಾಯತಿಯ ರಚನೆಯಲ್ಲಿ ಆಯಾ ಊರಿನ ಗೌಡ-ಪಟೇಲ, ಶಾನುಬೋಗರ ಸಹಾಯಕರನ್ನಾಗಿ ತೋಟಿ, ತಳವಾರ, ನೀರಗಂಟಿ ಎನ್ನುವಂತಹ ಹುದ್ದೆಗಳಲ್ಲಿ ತಳವಾರ ಮತ್ತು ನೀರಗಂಟಿಗಳಾಗಿ ಬೇಡರನ್ನು ನೇಮಿಸಿಕೊಂಡು, "ಊರಿನ ರಕ್ಷಣೆ ಅಥವಾ ಕಾವಲಿನ ಜವಾಬ್ದಾರಿಯೊಂದಿಗೆ ಪಟೇಲ ಶಾನುಭೋಗರ ಆಡಳಿತದಲ್ಲಿ ಅವರು ಹೇಳಿದ ಊರಿನ ಕೆಲಸಗಳನ್ನು ಮಾಡುವುದು ತಳವಾರನ ಜವಾಬ್ದಾರಿಯಾಗಿತ್ತು ಜೊತೆಗೆ ತೆರಿಗೆ ಕಂದಾಯಗಳನ್ನು ಜನರಿಂದ ಪಟೇಲರಿಗೆ ಕಟ್ಟಿಸುವುದು, ಶಾನುಭೋಗರಿಗೆ ಆ ಲೆಕ್ಕ ಒಪ್ಪಿಸುವುದು, ಸಲ್ಲದಿರುವ

ಕಂದಾಯಗಳಿಗಾಗಿ ಸಂಬಂಧಿಸಿದವರನ್ನು ಒತ್ತಾಯಿಸುವುದು. ಹಿಡಿದು ತರುವುದು, ಸರಕಾರಕ್ಕೆ ಲೆಕ್ಕ ಪತ್ರ ಕಡತಗಳನ್ನು ಹೊತ್ತೊಯ್ದು ಸಲ್ಲಿಸುವುದು ಇತ್ಯಾದಿ ಕೆಲಸಗಳೊಂದಿಗೆ ಆಯಾ, ಗ್ರಾಮದ ಸಾಂಘಿಕ, ಸಾಂಸ್ಥಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳು ಸರಳವಾಗಿ ಮುಂದುವರೆಯುವಂತೆ ಮಾಡುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ."[೬೭] ಇಡೀ ಊರಿನ ಉಸ್ತುವಾರಿ ಮಾಡುವುದು, ಹಬ್ಬ ಹರಿದಿನ, ಜಾತ್ರೆ ಉತ್ಸವಗಳಲ್ಲಿ ಆಚರಣೆಗಳು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಇತ್ಯಾದಿ ಕೆಲಸಗಳು ತಳವಾರರಿಗೆ ಇದ್ದವು.

ಅದೇ ರೀತಿಯಾಗಿ ನೀರಗಂಟಿಯು ಆಯಾ ಪ್ರದೇಶದ ಗ್ರಾಮವ್ಯಾಪ್ತಿಯ ಕೃಷಿ ಭೂಮಿಗೆ ಕೆರೆ ಕಾಲುವೆಗಳಿಂದ ನೀರುಣಿಸುವ ಉಸ್ತುವಾರಿಯನ್ನು ಗ್ರಾಮದ ನೀರಗಂಟಿಯು ಪಾಲಿಸುತ್ತಿದ್ದರು. ಪ್ರಸ್ತುತದವರಿಗೂ ಅದು ಚಾಲನೆಯಲ್ಲಿದೆ. ತಳವಾರ ನೀರಗಂಟಿಗಳು ಗ್ರಾಮದ ಆಯಗಾರರಲ್ಲಿ ಒಬ್ಬರು. ಒಂದು ವರ್ಷ ನೀರಗಂಟಿಯಾದವನು ಮುಂದಿನ ವರ್ಷ ತಳವಾರನಾಗುವ ಸರದಿ ಇವರ ಮನೆತನಕ್ಕೆ ವಂಶಪಾರಂಪರ್ಯವಾಗಿ ಇರುತ್ತಿತ್ತು. ಇವರ ಸೇವೆಗೆ ಪ್ರತೀಕವಾಗಿ 'ಇನಾಮ್ತಿಮಾನ್ಯ' ಎಂಬ ಹೊಲ ಗದ್ದೆಗಳು ಲಭಿಸಿವೆ. ಇವತ್ತಿನ ಪ್ರಜಾತಂತ್ರ ಆಡಳಿತದ ಸಂದರ್ಭದಲ್ಲಿ ಹಿಂದೆ ಇರುವಂತೆ ಪಟೇಲ ಶ್ಯಾನುಭೋಗರು ತಳವಾರರು ಆಡಳಿತಾತ್ಮಕವಾಗಿ ಅಧಿಕಾರದಲ್ಲಿಲ್ಲ. ಅದರ ಬದಲಾಗಿ ಗ್ರಾಮ ಲೆಕ್ಕಿಗನ ಸಹಾಯಕನು ತಳವಾರನ ಕರ್ತವ್ಯಗಳನ್ನು ಪೂರೈಸುತ್ತಿದ್ದಾನೆ. ಆದರೆ ನೀರಗಂಟಿಯು ಮಾತ್ರ ನಿಗಧಿಯಾದ ಕೃಷಿ ಭೂಮಿಗೆ ಕೆರೆಯ ಕಾಲುವೆಗಳ ನೀರನ್ನು ಸರದಿಗನು ಗುಣವಾಗಿ ಪೂರೈಸುವ ಜವಾಬ್ದಾರಿಯನ್ನು ಕೆಲವೊಂದು ಪ್ರದೇಶಗಳಲ್ಲಿ ಇನ್ನೂ ಉಳಿಸಿಕೊಂಡಿದ್ದಾನೆ. ಇಂತಹ ಕರ್ತವ್ಯಗಳು ವಂಶಪಾರಂಪರ್ಯವಾದ ಅಧಿಕಾರವಾಗಿತ್ತು. ಮೊದಲಿಗೆ ಇವರಿಬ್ಬರೂ ಗ್ರಾಮಸ್ಥರಿಂದ ಆಯವನ್ನು (ಕರ್ಚನ್ನು) ಪಡೆಯುತ್ತಿದ್ದು ಅದು ಕೃಷಿ ಉತ್ಪನ್ನ ಇಲ್ಲವೇ ವಸ್ತು ರೂಪದಲ್ಲಿರುತ್ತಿತ್ತು. ಈಗ ಬದಲಾದ ಸಂದರ್ಭದಲ್ಲಿ ಸರಕಾರದ ವೇತನ ನಿಗಧಿಗೊಂಡಿದೆ.

೨. ಸ್ವಾತಂತ್ರ್ಯ ನಂತರ ಮಹಿಳಾ ಸ್ಥಿತಿ-ಗತಿ

ಬಹುಧೀರ್ಘಕಾಲದ ಆಡಳಿತದ ಅವಧಿಯನ್ನು ಪೂರ್ಣಗೊಳಿಸಿದ ಬ್ರಿಟಿಷರ ನಂತರ ನಮ್ಮ ಭಾರತವು ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಚಿಸಿಕೊಳ್ಳುವಷ್ಟರಲ್ಲಿ ಆಧುನಿಕ ಶಿಕ್ಷಣ, ಉದ್ಯೋಗ ಮತ್ತು ಆಡಳಿತವನ್ನು ರೂಪಿಸಿಕೊಂಡಿತು. ಸಾಮಾಜಿಕ-ಆರ್ಥಿಕ, ಸ್ಥಾನ-ಮಾನಗಳಿಗೆ ಅನುಸಾರವಾಗಿ ಸಮುದಾಯಗಳಿಗೆ ಸಮಾನತೆಯನ್ನು ಕಲ್ಪಿಸಿಕೊಡುವಲ್ಲಿ ಪರಿಶಿಷ್ಟ-ಜಾತಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿಸಿತು. ಇದರಲ್ಲಿ ಕರ್ನಾಟಕದ ಮಟ್ಟಿಗೆ ಹಾವನೂರು ಆಯೋಗದ ವರದಿ ಅನ್ವಯ ಇಲ್ಲಿನ ಬೇಡರನ್ನು ಮತ್ತು ಆ ಸಮುದಾಯದ ಉಪ ಪಂಗಡಗಳನ್ನು ಪರಿಶಿಷ್ಟ ವರ್ಗದ ಮೀಸಲಾತಿಯ ಪಟ್ಟಿಗೆ ಸೇರಿಸಲಾಗಿದೆ. "ಅದು ರಾಜ್ಯದಲ್ಲಿ ೧೯೯೧ರಲ್ಲಿ ನಾಯಕ ಬುಡಕಟ್ಟಿನ ಸಮನಾಂತರ ಬುಡಕಟ್ಟೆಂದು ಪರಿಗಣಿಸಿದ್ದರೂ ದಿನಾಂಕ

೧೯.೦೪.೧೯೯೩ರಿಂದ ಬುಡಕಟ್ಟಿನ ಮೀಸಲಾತಿ ಅನುಭವಿಸಲು ಅರ್ಹಗೊಂಡವು"[೬] ಇದರಿಂದ ಸ್ವತಂತ್ರ ಭಾರತದಲ್ಲಿ ಹಲವು ದಶಕಗಳಾದ ನಂತರದಲ್ಲಿ ಸರಕಾರ ಸೌಲಭ್ಯಗಳಾದ ಆಧುನಿಕ ಶಿಕ್ಷಣ, ಹಾಗೂ ಕೆಲವು ಮೂಲಭೂತ ಅವಕಾಶಗಳು ಜೊತೆಗೆ ಉದ್ಯೋಗವಕಾಶಗಳು ಅಲ್ಲೊಬ್ಬರಿಗೆ-ಇಲ್ಲೊಬ್ಬರಿಗೆ ಎಂಬಂತೆ ಲಭಿಸಿವೆ.

ಬೇಟೆಗಾರಿಕೆಯ ಹಂತದಲ್ಲಿ ಸಂಪೂರ್ಣವಾಗಿ ಅರಣ್ಯವನ್ನೇ ನಂಬಿ, ಅಲೆಮಾರಿಗಳಾಗಿದ್ದ ಬೇಡರು ಮುಂದುವರೆದ ಕಾಲಘಟ್ಟದಲ್ಲಿ ಪಶುಪಾಲನೆಯನ್ನು ರೂಡಿಸಿಕೊಂಡರು. ಬೇಟೆ ಮತ್ತು ಪಶುಪಾಲನೆ ಎರಡನ್ನೂ ಜೊತೆ-ಜೊತೆಯಲ್ಲಿಯೇ ಉಳಿಸಿ ಬೆಳಸಿಕೊಂಡ ಪರಿಣಾಮವಾಗಿ ಇವರು ಅರೆ ಅಲೆಮಾರಿಗಳಾಗಿ ಜೀವಿಸುತ್ತಿದ್ದರು. ನಾಡಿನ ಸಂಪರ್ಕವೇರ್ಪಡುತ್ತಾ ನಾಡಿನೊಂದಿಗೆ ಸರಿದೂಗಿಸಿಕೊಂಡು ಊರುಗಳಲ್ಲಿ ಸೇರಿಕೊಂಡ ಕೆಲವು ಬೇಡರ ಗುಂಪುಗಳು ವ್ಯವಸಾಯವನ್ನು ರೂಡಿಸಿಕೊಂಡರು. ಇಂದಿಗೂ ಪಿತ್ರಾರ್ಜಿತವೆಂದು ಹೇಳುವ ಬೇಡರ ಕೃಷಿ ಜಮೀನುಗಳು 'ಇನಾಂತಿ' ಇಲ್ಲವೇ 'ಮಾನ್ಯ'ಗಳಾಗಿ ಬಂದಂಥವು ಮತ್ತೆ ಕೆಲವರು ಪಶುಪಾಲನೆ ಕೈಗೊಂಡರು. ಇನ್ನುಳಿದವರು ಕೂಲಿನಾಲಿ ಮಾಡಿ ಬದುಕನ್ನು ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ ಬೇಡರ ಕುಟುಂಬಗಳು ತೀರ ಹಿಂದುಳಿದಿವೆ. ಬಡತನ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ ಮುಂತಾದ ಪಿಡುಗಿಗೆ ಬಲಿಯಾದವರ ಸಾಲಿನಲ್ಲಿ ಬೇಡ ಬುಡಕಟ್ಟು ಸಮುದಾಯವು ಸೇರುತ್ತದೆ.

ಸ್ವಾತಂತ್ರ್ಯ ನಂತರ ಸ್ತ್ರೀಯರ ಸ್ಥಾನಮಾನ ಹೆಚ್ಚಿಸುವ ಮತ್ತು ಕಲ್ಯಾಣ ಸಾಧಿಸುವ ದೃಷ್ಟಿಯಿಂದ ಹಲವಾರು ಶಾಸನಾತ್ಮಕ, ಶೈಕ್ಷಣಿಕ, ಆರ್ಥಿಕ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ದೇಶದ ಬಹುಸಂಖ್ಯಾತರನ್ನು ಅನಕ್ಷರತೆ, ಬಡತನ, ಅಜ್ಞಾನ, ಮೂಢನಂಬಿಕೆ ಕಂದಾಚಾರಗಳಿಂದ ಮುಕ್ತರನ್ನಾಗಿಸಿ ಸ್ವಾತಂತ್ರ್ಯದ ಅನಂತರವೂ ಮನುಷ್ಯರನ್ನಾಗಿಸುವ ಕ್ರಿಯಾತ್ಮಕತೆಯ ಕೊರತೆ ಒಂದು ಕಡೆಯಾದರೆ, ವ್ಯಕ್ತಿಯ ಸ್ವಾರ್ಥ ಹಿತಗಳು ಧರ್ಮ ದೇವರ ಹೆಸರಿನಲ್ಲಿಯ ಮತೀಯ ವಿಷಯ ಸಾಮಾನ್ಯ ಜನರ ಬದುಕಿನಲ್ಲಿ ಬೆರತು ಹೋಗುತ್ತಿರುವುದನ್ನು ನೋಡಿ ಮೂಕರಾಗುವ ನಿಷ್ಕ್ರಿಯತೆ ಇನ್ನೊಂದು ಕಡೆ ಇದ್ದರೂ ತಾಂತ್ರಿಕ ಪರಿವರ್ತನೆ, ನಗರೀಕರಣ ವಿಭಕ್ತ ಕುಟುಂಬಗಳ ಹೆಚ್ಚಳ, ಉದ್ಯೋಗ ನಿಮಿತ್ತ ಸ್ತ್ರೀಯರು, ಪುರುಷರು, ಬೇರೆ ಬೇರೆಯಾಗುತ್ತಿರುವುದು ಇವು ಐತಿಹಾಸಿಕವಾಗಿ ಆಗಿರಬಹುದಾದ ದಾಳಿಗಿಂತಲೂ ಹೆಚ್ಚಿನ ಪ್ರಭಾವ ಬೀರಬಲ್ಲವುಗಳಾಗಿವೆ. ಇವುಗಳ ಆಘಾತ ಎದುರಿಸುವ ಕ್ಷಮತೆಯನ್ನು ಬಳಸಿಕೊಳ್ಳುವುದು ಭಾರತೀಯ ಮಹಿಳೆಯರಿಗೆ ಇಂದಿನ ಪ್ರಸ್ತುತ ಸಮಯದ ಸವಾಲಾಗಿದೆ.

ಇಂದು ಬೇಡ ಬುಡಕಟ್ಟು ಮಹಿಳೆಯರು ಮನೆಯಿಂದ ಹೊರಬಂದು ಕಾರ್ಖಾನೆ, ಕೃಷಿ, ಕೈಗಾರಿಕೆ ಹಲವು ಕ್ಷೇತ್ರಗಳಲ್ಲಿ ಮಹಿಳೆಯರು ಗಂಡಂದಿರೊಂದಿಗೆ ಹೊರಗೆ ದುಡಿಯುತ್ತಿದ್ದು ಶಿಕ್ಷಣ ಪಡೆದು, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಷ್ಟು ಸಮರ್ಥರಾಗಿ ಆಧುನಿಕ

ಆರ್ಥಿಕತೆಯೊಂದಿಗೆ ಹಿಂದುಳಿದ ಮಹಿಳೆಯರಿಗೆ ಸಮಾನ ಅವಕಾಶಗಳು ಅಲ್ಪಸ್ವಲ್ಪ ದೊರೆಯತೊಡಗಿವೆ. ಬೇಡ ಬುಡಕಟ್ಟು ಮಹಿಳೆಯರು ಗೃಹ, ಕೈಗಾರಿಕೆಗಳಲ್ಲಿ, ವ್ಯಾಪಾರ, ಕೂಲಿ, ಹೈನುಗಾರಿಕೆಗಳಲ್ಲಿ ತೊಡಗಿ ಮನೆಯ ಜವಾಬ್ದಾರಿಯನ್ನು ಬುಡಕಟ್ಟು ಮಹಿಳೆಯರು ನಿಭಾಯಿಸಿಕೊಂಡು ಹೋಗುವುದನ್ನು ಕಾಣಬಹುದು. ಈ ಮಹಿಳೆಯರು ಮನೆಯ ಹೊರಗೆ ದುಡಿಯುವುದರಿಂದ ಸ್ಥಾನ ಹಿಗ್ಗುವುದು. ಸ್ವಾತಂತ್ರ್ಯ ಸ್ವಾಲಂಬನೆ ಜೊತೆಗೆ ಬೇಡ ಬುಡಕಟ್ಟಿನ ಮಹಿಳೆಯ ಅಸಂಘಟಿತ ವಲಯಗಳಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳುವುದು ಸಾಧ್ಯವಾಗಿದೆ.

ಕೆಲ ರಾಜಕೀಯ ಪುಡಾರಿಗಳು ಬುಡಕಟ್ಟು ಮಹಿಳೆಯರ ಮತ್ತು ಇತರ ಸಮುದಾಯದ ಮಹಿಳೆಯ ಬಗೆಗೆ ಕೀಳರಿಮೆ ಹೊಂದಿ, ಬುಡಕಟ್ಟು ಮಹಿಳೆಯರ ಸ್ಥಿತಿ ಉತ್ತಮಗೊಳ್ಳುವುದಿರಲಿ, ಅವು ಇನ್ನಷ್ಟು ಶೋಚನಿಯ ಸ್ಥಿತಿಗೆ ಇಳಿದಿದೆ ಎಂಬುದು ಕಂಡುಬರುತ್ತದೆ. ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಸಂಸ್ಥೆಗಳ ಮೂಲದಿಂದ ಉದ್ಭವಿಸಿದ ಸಮಸ್ಯೆಗಳ ಕಾರಣದಿಂದಾಗಿ ವಿವಿಧ ಒತ್ತಡಗಳಲ್ಲಿ ಅವರು ಬಳಲುವಂತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತ ಸಂವಿಧಾನವು ಬುಡಕಟ್ಟು ಮಹಿಳೆಯರ ಮತ್ತು ಇತರ ಮಹಿಳೆಯರೊಂದಿಗೆ ನೀಡಿದ ಹಕ್ಕುಗಳು ಮತ್ತು ಅವಕಾಶಗಳು ಅವರನ್ನು ತಲುಪದೆ ದೂರ ಉಳಿದಿವೆ ಎಂದು ಹೇಳಿದರೆ ತಪ್ಪಾಗಲಾರದು. ಅವರುಗಳ ಉದ್ಧಾರಕ್ಕಾಗಿ ಆಚರಣೆಗೆ ಬಂದ ಕಾನೂನು ಮತ್ತು ಹಕ್ಕುಗಳು ಏನೆಂಬುದೇ ಅವರಿಗೆ ತಿಳಿಯದು.

ಈ ಹಿನ್ನೆಲೆಯಲ್ಲಿ ಬುಡಕಟ್ಟು ಮಹಿಳೆ ಇತರ ಸಮುದಾಯದ ಮಹಿಳೆಯರಿಗಿಂತ ಕಡಿಮೆ ಇಲ್ಲ. ಶಿಕ್ಷಣ ಪಡೆದು ಅಲ್ಪಸಂಖ್ಯೆಯಲ್ಲಿಯೇ ಪ್ರಜ್ಞಾವಂತರಾಗಿ ರಾಜಕೀಯ ಚಟುವಟಿಕೆಯಲ್ಲಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಹಿಂದೆ ಬುಡಕಟ್ಟಿನವರು ಕ್ರೂರಿಗಳು, ಮಾಂಸಹಾರಿಗಳೆಂದು ಮೇಲ್ವರ್ಗದವರು ಕೀಳಾಗಿ ಕಾಣುತ್ತಿದ್ದರು. ಇಂದು ಬೇಡ ಬುಡಕಟ್ಟಿನ ಕೆಲ ಮಹಿಳೆಯರು ಅಧ್ಯಾಪಕರು, ಇಂಜಿನಿಯರ್‌ಗಳು, ಸಂಶೋಧಕಿಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಬಹುಸಂಖ್ಯಾತರು ಮೇಲ್ಜಾತಿಗಳ ದಬ್ಬಾಳಿಕೆಯಿಂದ ಇವರು ಮೇಲಕ್ಕೆರಲು ಆಗುತ್ತಿಲ್ಲ. ಇದರಿಂದ ಬುಡಕಟ್ಟು ಮಹಿಳೆಯರು ಉನ್ನತ ವ್ಯಾಸಂಗ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ಇಂತಹ ಉನ್ನತ ಪದವಿಯನ್ನು ಪಡೆದವರ ಸಂಖ್ಯೆ ತುಂಬಾ ಕಡಿಮೆ.

ಸ್ವಾತಂತ್ರ್ಯ ಭಾರತದಲ್ಲಿ ಬೇಡ ಬುಡಕಟ್ಟಿನ ಮಹಿಳೆಯರ ಬದುಕು ಉತ್ತಮ ಸ್ಥಿತಿಗೆ ಬಂದಿದೆ ಎಂದು ಹೇಳುವುದು ಕಷ್ಟ. ಏಕೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ಬೀಳುವ ಕಾರ್ಯಭಾರ ಅವರ ಬದುಕಿನ ಪರಿಸ್ಥಿತಿಗಳು ದುಡಿಯುವ ಮಹಿಳೆಯರ ಅಭಿಪ್ರಾಯಗಳು ಇವುಗಳ ಬಗ್ಗೆ ಲಕ್ಷಿಸಿಯೇ ಇಲ್ಲ. ಆದರೂ ಹೋರಾಟ ಸಂಘಟನೆಗಳ ಮೂಲಕ ಸ್ತ್ರೀ ಆಧುನಿಕ ಜಗತ್ತಿನಲ್ಲಿ ಅಲ್ಪ ಸೌಲಭ್ಯಗಳನ್ನು ಪಡೆಯುವಲ್ಲಿ ಸಫಲತೆ ಹೊಂದಿ, ಜಗತ್ತಿನ ವಲಯಗಳಲ್ಲಿ ಮುಂದುವರೆಯುವಷ್ಟು ಈ ಮಹಿಳೆಯರು ಬೆಳೆದಿದ್ದಾರೆ. ಇಂದಿನ ನಗರೀಕರಣ

ಜಾಗತೀಕರಣದ ಪ್ರಕ್ರಿಯೆಗಳಿಂದ ಬುಡಕಟ್ಟು ಮಹಿಳೆಯರು ತಮ್ಮ ಆರ್ಥಿಕತೆಯಲ್ಲಿ ಹೊಸದೊಂದು ಚಾಲನೆಯನ್ನು ಒದಗಿಸಿಕೊಂಡು ಮನೆಯ ನಾಲ್ಕು ಗೋಡೆಗಳಿಂದ ಪಾರಾಗಿ ಹೊರಗಿನ ಜಗತ್ತಿಗೆ ಬಂದು ಭಾರತದಂತ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಬೇಡ ಬಡಕಟ್ಟಿನ ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಆಮೆ ವೇಗದಲ್ಲಿ ಪ್ರಗತಿ ಹೊಂದುತ್ತಿರುವುದು ಒಂದು ಗಮನಾರ್ಹ ಸಂಗತಿ.

ನಗರದ ಬೇಡ ಬುಡಕಟ್ಟು ಮಹಿಳೆಯರು ತಮ್ಮ ಸ್ಥಿತಿಗತಿಯಲ್ಲಿ ಸುಧಾರಣೆಯನ್ನು ಕಾಣುತ್ತಿರುವ ಪ್ರಭಾವವನ್ನು ಗ್ರಾಮೀಣ ಪ್ರದೇಶದ ಬುಡಕಟ್ಟು ಸ್ತ್ರೀಗೆ ಹೋಲಿಸಿದಾಗ ಹಿಂದುಳಿದ ಸುಧಾರಣೆಯ ಮಂದಗತಿಯ ಮೆಟ್ಟಿಲುಗಳನ್ನು ಏರುತ್ತಾ ಆಧುನಿಕತೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ.

೬.೩. ಮಹಿಳೆಯರ ಅಭಿವೃದ್ಧಿ ಮತ್ತು ಸರಕಾರದ ಕಾರ್ಯಕ್ರಮಗಳು

ಸಮಕಾಲೀನ ಮಹಿಳೆಯ ಜೀವನದಲ್ಲಿ ಸುಧಾರಿಸುವಂತಹ ಕಾರ್ಯಕ್ರಮಗಳು, ಚಳುವಳಿಗಳು ಮತ್ತು ಪ್ರಯತ್ನಗಳು "ಹತ್ತೊಂಬತ್ತನೇ ಶತಮಾನದ ಸಮಾಜ ಸುಧಾರಣಾ ಚಳುವಳಿಗಳು, ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ನಡೆದ ರಾಷ್ಟ್ರೀಯ ಹೋರಾಟಗಳು ಮಹಿಳಾ ಪ್ರಶ್ನೆಯನ್ನು ಮುಖ್ಯವಾಗಿಸಿಕೊಂಡವು"[೬೬] ಇಂತಹ ಧ್ಯೇಯದ ಹಿಂದೆ ಈ ನಾಡಿನ ಆದಿವಾಸಿ, ಅಂತ್ಯಜರ ಮಹಿಳೆಯರ ಅಭಿವೃದ್ಧಿ ಆಗಬೇಕು ಅವರು ನಮ್ಮ ಸಮಾಜದ ಮುಖ್ಯವಾಹಿನಿಗೆ ಪುರುಷರ ಸರಿಸಮಾನವಾಗಿ ಬರಬೇಕು ಎಂಬ ನಿಲುವು ಖಂಡಿತಾ ಇರಲಿಲ್ಲ ಎನ್ನುವುದು ಕಂಡುಬರುತ್ತದೆ. ಇಂತಹ ಹಲವಾರು ಪ್ರಯತ್ನಗಳಿಂದ ಮೇಲ್ವರ್ಗದ ಮಹಿಳೆಯರು ಮಾತ್ರ ಸುಧಾರಿಸಿದರು. ನಮ್ಮ ಸಾಮಾಜಿಕ ಸ್ತರದಲ್ಲಿ ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಉನ್ನತವಾಂದತಹ ಶ್ರೇಣಿಯನ್ನು ಪಡೆದುಕೊಂಡರು. ನಮ್ಮ ಅರಣ್ಯವಾಸಿ ಸಮುದಾಯದ ಮಹಿಳೆಯರ ದುರಂತವೆಂದರೆ ಇಡೀ ಭಾರತದ ಮಹಿಳೆಯನ್ನು ಒಟ್ಟಾಗಿ ಸಮಸ್ಯೀಕರಣಗೊಳಸದೆ ಬಿಡಿಬಿಡಿಯಾಗಿ ಕಲ್ಪಿಸಿಕೊಂಡಿರುವುದು ಎಂದು ಹೇಳಬಹುದು. ಆದ್ದರಿಂದ ಇವತ್ತಿನ ವರ್ತಮಾನದವರೆಗೂ ಬುಡಕಟ್ಟು ಸಮುದಾಯದ ಮಹಿಳೆಯರು ಅಕ್ಷರಸ್ಥರಾಗುವಲ್ಲಿ, ರಾಜಕೀಯ ಪ್ರಾತಿನಿಧ್ಯ ಪಡೆಯುವಲ್ಲಿ ಆರ್ಥಿಕವಾಗಿ ಸಬಲೀಕರಣಗೊಳ್ಳುವಲ್ಲಿ ಹಾಗೂ ಸಾರ್ವತ್ರಿಕವಾಗಿ ಸಮಾನತೆ ಸಾಧಿಸದೆ ಇರುವಂತಹ ಪರಿಪಾಠವು ಹಾಗೇ ಮುಂದುವರೆದುಕೊಂಡು ಬಂದಿದೆ.

ನಾವು ಇಂದು ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುವಂತಹ ಸಭೆ-ಸಮಾರಂಭ ವಿಚಾರ ಸಂಕಿರಣದಲ್ಲಿ ಮಹಿಳೆಯರ ಕುರಿತು ಭಾರತ ಸಂವಿಧಾನವು ಹಲವಾರು ಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ತಂದಿದೆಯೆಂದು. ಜಾರಿಗೆ ಬಂದಿರುವಂತಹ ಕಾರ್ಯಕ್ರಮಗಳು ಮಹಿಳೆಯರ ಅಭಿವೃದ್ಧಿ ಪರವಾಗಿವೆಯಾ ಇವೆ ಎಂದಾದರೆ ಯಾವ ಮಹಿಳೆಯರ

ಪರ ಕಾರ್ಯಕ್ರಮಗಳು ಇವೆ. ಮತ್ತು ಇವತ್ತಿನವರೆಗೂ ಯಾವ ವರ್ಗದ ಮಹಿಳೆಯರು ಉಪಯೋಗಿಸಿಕೊಂಡಿದ್ದಾರೆ. ಆದರೆ ಇದರಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರು ಏಕೆ ಸಫಲರಾಗಲಿಲ್ಲ ಎನ್ನುವಂತಹ ಪ್ರಶ್ನೆ ಹಾಕಿಕೊಂಡು ಜಾರಿಯಲ್ಲಿರುವಂತಹ ಕೆಲವೊಂದು ಸರಕಾರಿ ಕಾರ್ಯಕ್ರಮಗಳನ್ನು ಕುರಿತು ಇಂದು ಚರ್ಚಿಸುವುದು ಅಗತ್ಯವೆಂದು ಹೇಳಬಹುದು. ಅದರಲ್ಲಿ ನಮಗೆ ಸ್ವಾತಂತ್ರ್ಯ ಬಂದು ಅರ್ಧಶತಮಾನ ಕಳೆದರೂ ಸಹ ಬುಡಕಟ್ಟು ಮಹಿಳೆಯರು ಸಮಾಜದ ಮೇಲ್‌ಸ್ತರಕ್ಕೆ ಬರುವಲ್ಲಿ ವಿಫಲರಾಗುತ್ತಿದ್ದಾರೆ. ಇದರ ಒಳಗಡೆಗೆ ಇರುವಂತಹ ಸಮಸ್ಯೆಗಳು ಯಾವುದು ಮತ್ತು ಇದಕ್ಕೆ ಪುರುಷ ಪ್ರಧಾನ ಸಮಾಜವು ಯಾವ ನೆಲೆಯಲ್ಲಿ ಗ್ರಹಿಸಿಕೊಂಡಿದೆ. ಮಹಿಳೆ ಎಂದರೆ ಕೇವಲ ಗೃಹ, ಕೃಷಿ ಇನ್ನಿತರ ಚಟುವಟಿಕೆಗಳಿಗೆ ಮಾತ್ರ ಸೀಮಿತವೆ ಎನ್ನುವ ವಿಷಯವನ್ನು ಪುನರ್ ಪರಿಶೀಲಿಸಬೇಕಾಗಿದೆ.

೬.೩.೧. ಮಹಿಳೆಯರ ಅಭಿವೃದ್ಧಿ ಕುರಿತು ಕಲ್ಯಾಣ ಕಾರ್ಯಕ್ರಮಗಳು

ನಮ್ಮ ದೇಶದಲ್ಲಿ ಆದಿವಾಸಿ ಮಹಿಳೆಯರು ಹಲವು ರೀತಿಯ ಶೋಷಣೆಗೆ ಒಳಗಾಗಿರುವ ಮತ್ತು ಅತಂತ್ರ ಸ್ಥಿತಿಯಲ್ಲಿರುವ ಸಾಮಾಜಿಕ ವರ್ಗವಾಗಿದೆ. ಇವರು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ರಾಜಕೀಯ ಇನ್ನಿತರ ಕ್ಷೇತ್ರಗಳಲ್ಲಿ ಕಣ್ಣಿಗೆ ರಾಚುವಷ್ಟು ಅಸಮಾನತೆಗಳನ್ನು ಎದುರಿಸುತ್ತಿದ್ದಾರೆ. ಅದು ಯಾವ ಹಂತದಲ್ಲಿ ಇದ್ದಾರೆ ಎನ್ನುವುದಕ್ಕೆ ಕೆಲವು ಸಂಗತಿಗಳನ್ನು ಇಲ್ಲಿ ಗಮನಿಸಬಹುದು. ಉದಾಹರಣೆಗೆ "ಭಾರತದಲ್ಲಿ ೫ ವರ್ಷಕ್ಕೂ ಮೇಲ್ಪಟ್ಟ ೪೨ ಹೆಣ್ಣು ಮಕ್ಕಳು ಮತ್ತು ೨೯ ಗಂಡು ಮಕ್ಕಳು ಪ್ರತಿ ಸಾವಿರಕ್ಕೆ ಮರಣವನ್ನುಪ್ಪುತ್ತಿದ್ದಾರೆ. ಆದರೆ ಶೇಕಡಾ ೬೭ರಷ್ಟು ಪುರುಷರು ಮತ್ತು ಶೇಕಡಾ ೪೦ರಷ್ಟು ಮಹಿಳೆಯರು ಸಾಕ್ಷರರಾಗಿದ್ದಾರೆ. ಇದರಲ್ಲಿ ಶೇ ೬೨ರಷ್ಟು ಗಂಡು ಮಕ್ಕಳು ಮತ್ತು ಶೇಕಡಾ ೪೩ರಷ್ಟು ಹೆಣ್ಣು ಮಕ್ಕಳು ಮಾತ್ರವೇ ಪ್ರಾಥಮಿಕ ಶಾಲೆ ಹೋಗುತ್ತಿದ್ದಾರೆ."[೪೦] ಇಂತಹ ಮೂಲಭೂತ ಅವಕಾಶಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಾದ ನೆಲೆ ತರುವ ಪ್ರಯತ್ನವು ಭಾರತದ ಸಂವಿಧಾನವು ಶಾಸನಾತ್ಮಕವಾಗಿ ಮಹಿಳೆಯರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಮಹಿಳೆಯ ಸಾಕ್ಷರತೆ ಸುಧಾರಿಸಲು ಎಜುಕೇಷನಲ್ ಕಾಂಪ್ಲೆಕ್ಸ್ ಯೋಜನೆ

ನಮ್ಮ ಭಾರತದ ಸಮಾಜದಲ್ಲಿ ಇರುವ ಬುಡಕಟ್ಟು ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ಸುಧಾರಿಸಲು "ಕೇಂದ್ರ ಸರಕಾರವು ಎಜುಕೇಶನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ"[೪೧] ನಮ್ಮ ರಾಷ್ಟ್ರದಲ್ಲಿ ಈ ಯೋಜನೆಯಡಿಯಲ್ಲಿ ಸುಮಾರು ೧ಲಕ್ಷ ಎಜುಕೇಷನಲ್ ಕಾಂಪ್ಲೆಕ್ಸ್‌ಗಳು ಸ್ಥಾಪಿಸಲಾಗಿದೆ. ಇದರಡಿಯಲ್ಲಿ ಪ್ರತಿವರ್ಷ ೨೦,೦೦೦ ವಿದ್ಯಾರ್ಥಿನಿಯರು ಪ್ರವೇಶ ಪಡೆಯುತ್ತಿದ್ದಾರೆ. ಈ ಯೋಜನೆಯ ಜಾರಿಯಿಂದ ೯೧೫ ಜನರಿಗೆ ಶಿಕ್ಷಕ ವೃತ್ತಿ. ಇದರಷ್ಟೇ ಪ್ರಮಾಣದ ಭೋದಕೇತರ ವರ್ಗವರಿಗೂ ಉದ್ಯೋಗ ಒದಗಿಸಿಕೊಡಲಾಗಿದೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾದ ರಾಯಚೂರಲ್ಲಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ಮೈಸೂರು ಜಿಲ್ಲೆಯಲ್ಲಿ ಈ ಶೈಕ್ಷಣಿಕ ಸಂಕಿರಣಗಳು ಪ್ರಾರಂಭಿಸಲು ನಿರ್ಧರಿಸಲಾಗಿದೆ. ಇದರಡಿಯಲ್ಲಿ ಆದಿವಾಸಿ ಸಮುದಾಯದ ಮಕ್ಕಳಿಗೆ ವಸತಿ ಜೊತೆಗೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅನ್ವಯವಾಗುವಂತಹ ಪಠ್ಯೇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. “ಈ ಯೋಜನೆಯಿಂದ ಬುಡಕಟ್ಟು ಸಮೂಹವನ್ನು ಸಮಾಜದ ಮುಖ್ಯವಾಹಿನಿಯೊಂದಿಗೆ ಬೆರೆಯುವಂತೆ ಪ್ರೋತ್ಸಾಹ ನೀಡುವುದು ಆಗಿದೆ. ಇಂತಹ ಶಾಲೆಗಳಲ್ಲಿ ಆರಂಭದಲ್ಲಿ ೧ ರಿಂದ ೫ನೇ ತರಗತಿವರೆಗೆ ಶಿಕ್ಷಣ ಕಲಿಯಲು ಅನುಕೂಲ ಇದ್ದು, ಮುಂದಿನ ದಿನಗಳಲ್ಲಿ ಮೇಲ್ದರ್ಜೆಗೇರಿಸಿ ಪಿ.ಯು.ಸಿ.ವರೆಗೆ ಶಿಕ್ಷಣ ನೀಡಲು ಅವಕಾಶವಿರುತ್ತದೆ. ಪ್ರತಿಯೊಂದು ತರಗತಿಯಲ್ಲಿ ೩೦ಹೆಣ್ಣು ಮಕ್ಕಳಿಗೆ ಅವಕಾಶವಿರುತ್ತದೆ. ಇವರ ವಾರ್ಷಿಕವೆಚ್ಚ ಪ್ರತಿ ವಿದ್ಯಾರ್ಥಿಗೆ ಸುಮಾರು ೯,೦೦೦ ರೂಪಾಯಿಗಳವರೆಗೆ ಆವರ್ತ ವೆಚ್ಚವನ್ನು ಭರಿಸಲು ಅನುದಾನವನ್ನು ನೀಡಲಾಗುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಕಲಿಯುವಂತಹ ಮಕ್ಕಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುವುದು.

೧. ಪ್ರತಿ ವರ್ಷ ವಿದ್ಯಾರ್ಥಿಗೆ ೨ ಜೊತೆ ಸಮವಸ್ತ್ರ.

೨. ಪಠ್ಯ ಪುಸ್ತಕಗಳು.

೩. ಉಚಿತ ಊಟ ಮತ್ತು ವೈದ್ಯಕೀಯ ಸೌಲಭ್ಯ.

೪. ವಿದ್ಯಾರ್ಥಿಯ ಪಾಲಕ/ಪೋಷಕರಿಗೆ ರೂ.೫೦.೦೦ಗಳಂತೆ ಮಾಹೆಯಾನ ವಿಶೇಷ ಭತ್ಯ.

೫. ವಿದ್ಯಾರ್ಥಿಗಳ ಅನಾವರ್ತ ವೆಚ್ಚಗಳಾದ ಹಾಸಿಗೆ, ಮಂಚ, ಪಾತ್ರೆ ಇತ್ಯಾದಿಗಳಿಗೆ ೧,೦೦೦ರೂಗಳವರೆಗೆ ವೆಚ್ಚವನ್ನು ಭರಿಸಲಾಗುವುದು”[೨]

ಇಂತಹ ಕಾರ್ಯಕ್ರಮಗಳು ಗಿರಿಜನರ ಅಭಿವೃದ್ಧಿ ಕುರಿತು ಜಾರಿಗೆ ಬಂದರು ಸಹ ಅನುಷ್ಠಾನಗೊಳಿಸುವಲ್ಲಿ ವಿಫಲತೆಯನ್ನು ಹೊಂದುವುದು ಕಂಡುಬರುತ್ತದೆ. ಏಕೆಂದರೆ ಬುಡಕಟ್ಟು ಸಮುದಾಯದ ಜನರಿಗೆ ಶೈಕ್ಷಣಿಕ ಸೌಲಭ್ಯ ಕುರಿತು ಮೊದಲೇ ಪ್ರಜ್ಞೆ ಇರುವುದಿಲ್ಲ. ಅದರ ಜೊತೆಗೆ ಅವರು ಅತೀ ಪ್ರಾಮುಖ್ಯತೆ ಕೊಡುವುದು ಜೀವನ ನಿರ್ವಹಿಸಲು ಬೇಕಾದಂತಹ ದುಡಿಮೆಗೆ ಕೆಲಸ ಸಿಗದಿದ್ದರೆ ಜೀವನ ಮಾಡಲು ತುಂಬಾ ಕಷ್ಟಕರವಾದ ಪರಿಸ್ಥಿತಿ ಇರುವಾಗ ಸರಕಾರದ ಯೋಜನೆಗಳತ್ತ ತಮ್ಮ ಗಮನವನ್ನೆ ಹರಿಸುವುದಿಲ್ಲ. ಒಂದು ವೇಳೆ ಸೌಲಭ್ಯ ದೊರೆತರು ಸಹ ತಮ್ಮ ಮಕ್ಕಳನ್ನು ಶಿಕ್ಷಣ ಕಲಿಯಲು ಪ್ರೋತ್ಸಾಹ ಕೊಡುವುದಿಲ್ಲ. ಕಾರಣ ಶ್ರಮವಹಿಸುವಂತಹ ಸಂದರ್ಭದಲ್ಲಿ ತಮ್ಮ ಮಕ್ಕಳು ಚಿಕ್ಕ-ಪುಟ್ಟ ಕೆಲಸಗಳಿಗೆ ಸಹಾಯಕರಾಗಿ ಬೇಕಾಗುತ್ತಾರೆ. ಅದು ಚಿಕ್ಕ ಮಕ್ಕಳನ್ನು ಪಾಲನೆ-ಪೋಷಣೆ ಮಾಡುವುದು, ಅಥವಾ ಬುತ್ತಿ ತಂದು ಕೊಡುವುದು, ಮೇಕೆ-ಕುರಿ ಸಂಗೋಪನೆ ಮಾಡುವಲ್ಲಿ ಮಕ್ಕಳು ಸಹಾಯ ಮಾಡುತ್ತಾರೆ. ಈ ಕಾರಣದಿಂದಾಗಿ

ಇವತ್ತಿನವರೆಗೂ ಶಿಕ್ಷಣದಲ್ಲಿ ಆದಿವಾಸಿ ಸಮುದಾಯದ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳದೆ ಇರುವುದು ಕಂಡು ಬರುತ್ತದೆ. ಇಡೀ ಅಧ್ಯಯನ ಸಂದರ್ಭದಲ್ಲಿ ಮಹಿಳೆಯರ ಕುರಿತು ವಿಚಾರ ಮಾಡಿದಾಗ ನಮ್ಮ ಮನೆಯ ಪುರುಷರ ಮಾತು ಮೀರಿ ನಾವು ಎಲ್ಲಿ ಹೋಗುವಂತಿಲ್ಲ. ಅವರೇ ಎಲ್ಲೆಡೆ ಹೋಗಿ ಬರುತ್ತಾರೆ. ಇದರಿಂದ ನಮಗೆ ಸರಕಾರದಿಂದ ಏನೋ ಬರುತ್ತೋ ಏನೋ ಹೋಗುತ್ತೋ ಅಂತ ತಿಳಿದಿಲ್ಲವೆಂದು ಹೇಳುತ್ತಾರೆ.

೨. ಮಹಿಳಾ ಕಲ್ಯಾಣ ಕೇಂದ್ರಗಳು

ರಾಜ್ಯದ ಪ್ರತಿ ಜಿಲ್ಲಾ ಮಟ್ಟದಲ್ಲಿ ಮಹಿಳಾ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿರುವುದು. ಜೊತೆಗೆ ಈ ಕೇಂದ್ರದ ವತಿಯಿಂದ ಬುಡಕಟ್ಟು ಸಮುದಾಯದ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ಇದು ಪ್ರಮುಖವಾಗಿ ಜಾರಿಗೆ ತರಲಾಗಿದೆ. ಚಿಕ್ಕಮಕ್ಕಳನ್ನು ಶಾಲೆಯತ್ತ ಗಮನ ಹರಿಸಲು ಸುಮಾರು ೩೮ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳಿದ್ದು, ಅದರಲ್ಲಿ ೧೮೦೦ ಮಕ್ಕಳಿಗೆ ಇದರಿಂದ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಇದರ ಜೊತೆಗೆ ಊಟ, ಸಮವಸ್ತ್ರವನ್ನು ನೀಡಲಾಗುತ್ತಿದೆ. ಇದೇ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಆರೋಗ್ಯ ಕುರಿತ ತಿಳುವಳಿಕೆ ಮತ್ತು ಚಿಕಿತ್ಸೆ ನೀಡುವುದು ಹಾಗೂ ಗರ್ಭಿಣಿ ಮಹಿಳೆಗೆ ಪೌಷ್ಠಿಕ ಆಹಾರವನ್ನು ತೆಗೆದುಕೊಳ್ಳುವಂತೆ ಸಲಹೆಗಳನ್ನು ನೀಡುತ್ತಾರೆ. ಈ ತೆರನಾದ ಕಲ್ಯಾಣ ಕಾರ್ಯಕ್ರಮಗಳು ಮಹಿಳೆಯರ ಅಭಿವೃದ್ಧಿ ಕುರಿತು ಕಾರ್ಯನಿರ್ವಹಿಸಿದರೂ ಸಹ ಏಕೆ ಜಾಗೃತಿ ಮೂಡುತ್ತಿಲ್ಲ ಅನ್ನುವುದೇ ನಮಗೆ ಬಹುದೊಡ್ಡ ಸಮಸ್ಯೆಯಾಗಿದೆ.

ಇವತ್ತಿನವರೆಗೂ ನಮ್ಮ ಬುಡಕಟ್ಟು ಸಮುದಾಯದ ಮಹಿಳೆಯರು ಸಂಪೂರ್ಣವಾಗಿ ಸಂಪ್ರದಾಯ, ಕುಟುಂಬದ ರೂಢಿ ನಿಯಮಗಳು ಮೀರಿ ಹೊರ ಬರುತಿಲ್ಲ. ಅದಕ್ಕೆ ಪ್ರಬಲವಾದ ಪುರುಷ ಪ್ರಧಾನ್ಯದ ಪ್ರಭಾವವು ಅಡ್ಡಿಯುಂಟು ಮಾಡಿದೆ. ಇದರಿಂದ ಮಹಿಳೆಯ ಆರೋಗ್ಯ, ಮಾನಸಿಕ ಸ್ಥಿತಿಗತಿ, ಶಿಕ್ಷಣದ ಅವಕಾಶಗಳು ಪಡೆದುಕೊಳ್ಳಲಾರದೆ ತೊಳಲಾಡುತ್ತಿದ್ದಾಳೆ. ಒಂದು ಸಂದರ್ಭದಲ್ಲಿ ಮಹಿಳೆಗೆ ಆರೋಗ್ಯದಲ್ಲಿ ತೊಂದರೆ ಉಂಟಾದರೆ ಕುಟುಂಬದವರು ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಿಲ್ಲ ಅದರ ಬದಲು ಮನೆಯಲ್ಲಿಯೇ ಸಂಪ್ರದಾಯಿಕ ಔಷಧಿ ನೀಡುತ್ತಾರೆ. ಉದಾಹರಣೆಗೆ ಹೊಟ್ಟೆನೋವು ಕಾಣಿಸಿಕೊಂಡರೆ ಅಜಿವಾನ್ ತಿನ್ನಿಸುವುದು ಇತ್ಯಾದಿ. ಈ ರೀತಿಯಾದ ಕ್ರಮಗಳಿಂದ ಮಹಿಳೆಯರು ಅಭಿವೃದ್ಧಿಯಾಗುವುದು ಯಾವಾಗ, ನಮ್ಮ ಸರಕಾರ ಪ್ರತಿ ವರ್ಷವು ಮಹಿಳೆಯರ ಕಲ್ಯಾಣವನ್ನು ಕುರಿತು ಹಲವಾರು ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ಕ್ರಮಕೈಗೊಂಡರು ಸಹ ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಅದರ ಉಪಯೋಗವನ್ನು ಬೇರೆ ಇನ್ನ್ಯಾರೋ ಮೇಲ್ವರ್ಗದ ಶಿಕ್ಷಿತ ಮಹಿಳೆಯರು ಪಡೆದುಕೊಂಡು ಸಫಲರಾಗುತ್ತಿದ್ದಾರೆ. ಇದರಿಂದ ಇಂದಿಗೂ ಬುಡಕಟ್ಟು ಮಹಿಳೆಯೂ ತನ್ನ ಅಂತಸ್ತು ಜಗತ್ತನ್ನು ದಾಟಿ ಹೊರ ಬಂದಿಲ್ಲ.

ಈ ಕಾರಣದಿಂದಾಗಿ ಸರಕಾರವು ಮೊದಲು ಬುಡಕಟ್ಟು ಮಹಿಳೆಯರನ್ನು ಗುರುತಿಸಿ ವಲಯವಾರು ಅಭಿವೃದ್ಧಿ ಕ್ರಮಗಳು ಜಾರಿಗೆ ತರುವಲ್ಲಿ ಪ್ರಯತ್ನ ಸಾಗಬೇಕು.

ಅಂತಹ ಕರ್ತವ್ಯಗಳನ್ನು ಸರಕಾರವು ಪರಿಗಣಿಸದೆ, ಯಾವುದೋ ಸ್ವಯಂ ಸೇವಾ ಸಂಸ್ಥೆಗೆ ಹಣ ಮಂಜೂರು ಮಾಡಿ ಕೈತೊಳೆದುಕೊಳ್ಳುತ್ತದೆ. ಇದರಿಂದ ಸರ್ಕಾರದ ಒಬ್ಬ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಲು ಬರುವಂತಹ ಸ್ವಯಂ ಸೇವಾ ಸಂಸ್ಥೆಗಳು ಪ್ರಮುಖವಾಗಿ ಸಾರ್ವತ್ರಿಕ ಹಿತಾಸಕ್ತಿಗಾಗಿ ಶ್ರಮಿಸದೆ ತಮ್ಮ ಸ್ವ ಹಿತಾಸಕ್ತಿಗಾಗಿ ಮಾತ್ರ ಕಾರ್ಯನಿರ್ವಹಿಸುವುದು ಈ ಭಾಗದಲ್ಲಿ ಅಧಿಕವಾಗಿ ಕಂಡುಬರುತ್ತದೆ. ಇದಕ್ಕೂ ಒಂದು ಕಾರಣವಿದೆ ಅದು ಏನೆಂದರೆ ಅತೀ ಹೆಚ್ಚು ಮಹಿಳೆಯರು ಕೃಷಿಕೂಲಿ ಮಾಡುವುದು ಅನಿವಾರ್ಯವಾಗಿರುವುದರಿಂದ ಮಹಿಳೆಯರು ಸ್ವಯಂ ಸೇವಾ ಸಂಸ್ಥೆಯ ಕಾರ್ಯಕ್ರಮಗಳಿಗೆ ಹೋದರೆ ನಮಗೆ ಕೆಲಸ ಕೊಡುತ್ತಾರೆಯೇ ಎಂಬ ಪ್ರಶ್ನೆ ಮಾಡುತ್ತಾರೆ. ನಮಗೆ ಆರೋಗ್ಯ, ಶಿಕ್ಷಣ, ಆರ್ಥಿಕ ಇನ್ನಿತರ ವಿಷಯಗಳು ಕುರಿತು ಸಲಹೆಗಳು ನೀಡುತ್ತಾರೆ ಎಂದರೆ ಅವರು ಹೇಳುವ ಮಾತು ಕೇಳಲು ಹೋದರೆ ನಮ್ಮ ದಿನದ ಊಟ ತಪ್ಪಿ ಹೋಗುತ್ತದೆ. ಇದರಿಂದ ನಮಗೆ ಅನುಕೂಲ ಆಗುವುದಕ್ಕಿಂತ ತೊಂದರೆಯೇ ಹೆಚ್ಚು ಎಂದು ಪ್ರತಿಕ್ರಿಯಿಸುತ್ತಾರೆ. ಇಂತಹ ಅನೇಕ ಸಂಕಷ್ಟಗಳಿಂದ ಜೀವನ ಮಾಡುತ್ತಿರುವ ಬುಡಕಟ್ಟು ಮಹಿಳೆಯರಿಗೆ ಮೊದಲು ಪ್ರತ್ಯೇಕ ಸರಕಾರಿ ಸೌಲಭ್ಯವನ್ನು ರೂಪಿಸುವುದು ಅಗತ್ಯವಾಗಿದೆ ಎಂದು ಹೇಳಬಹುದು. ಇವತ್ತಿನ ಇನ ಎನ್.ಜಿ.ಓ.ಗಳು ಸಹ ತಮ್ಮ ಕರ್ತವ್ಯಗಳನ್ನು ಮರೆತಂತೆ ವರ್ತಿಸುತ್ತಿವೆ. ಯಾವುದೋ ಒಂದು ಹಳ್ಳಿಯಲ್ಲಿ ಮಹಿಳೆಯರ ಕುರಿತು ಆರೋಗ್ಯ ಶಿಬಿರ ಏರ್ಪಡಿಸಿದರೆ ಅಲ್ಲಿರುವ ಸಮಸ್ಯೆ-ಸವಾಲುಗಳು ಇಡೀ ತಾಲೂಕು ಮತ್ತು ಜಿಲ್ಲೆಗೆ ಹೋಲಿಕೆ ಮಾಡಿ ಹೇಳಿಕೆ ಕೊಡುವ ಪ್ರವೃತ್ತಿಗಳು ಇಂದು ಕಂಡುಬರುತ್ತಿವೆ. ಆದರೆ ಕರ್ನಾಟಕದಲ್ಲಿ ಇರುವ ಇಡೀ ಬುಡಕಟ್ಟುಗಳ ಸಮಸ್ಯೆಗಳು ಒಂದೇ ರೀತಿಯವು ಅಲ್ಲ. ಅದರಲ್ಲಿ ಮಹಿಳೆಯರ ಸಮಸ್ಯೆಯೂ ಕೂಡ ಭಿನ್ನತೆಯಿಂದ ಕೂಡಿವೆ. ಈ ಕಾರಣದಿಂದ ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳು ರಚನೆಯಾಗುವಂತಹ ಸಂದರ್ಭದಲ್ಲಿ ಆಯಾ ಪ್ರದೇಶಕ್ಕೆ ಅನುಸಾರವಾಗಿ ರೂಪಗೊಳ್ಳಬೇಕು ಅಂದಾಗ ಮಾತ್ರ ಮಹಿಳೆಯರು ಅಭಿವೃದ್ಧಿಯಾಗಲು ಸಾಧ್ಯ.

೩. ವಿಧವಾ ವೇತನ

ಸರಕಾರದ ಮಹಿಳಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅತೀ ಮುಖ್ಯವಾದ ಯೋಜನೆ ಇದಾಗಿದೆ. ಇದರ ಮುಖ್ಯ ಉದ್ದೇಶ ಎಂದರೆ ಯಾವ ಮಹಿಳೆಯ ಜೀವನಕ್ಕೆ ಆಸರೆಯಿಲ್ಲದೆ ಇರುವಂತಹ ನಿರ್ಗತಿಕ ವಿಧವೆಯರಿಗೆ ಹಣಕಾಸು ನೆರವು ನೀಡುವ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ. ಅದರ ಪ್ರಕಾರ ಪ್ರತಿ ತಿಂಗಳು ೨೦೦ರೂ ನೀಡಲಾಗುತ್ತಿದೆ. ಇದರಲ್ಲಿಯೇ ವಿಧವೆಯರು ಜೀವನ ರೂಪಿಸಿಕೊಳ್ಳಬೇಕು. ಇದು ಸಾಧ್ಯವೇ ಅನ್ನುವಂತಹ ವಿಚಾರ

ಮಾಡಿದಾಗ ಸಾಧ್ಯವೇಯಿಲ್ಲ. ಏಕೆಂದರೆ ಸರಕಾರ ಕೊಡುವ ೨೦೦ರೂ ಹಣದಲ್ಲಿ ಏನೂ ಮೊಡಲು ಸಾಧ್ಯ ಮತ್ತು ಈ ಕಾರ್ಯಕ್ರಮದಲ್ಲಿ ಬಹುಸಂಖ್ಯಾತವಾಗಿ ಮೇಲ್ವರ್ಗಕ್ಕೆ ಸೇರಿದ ವಿಧವೆಯರು ಸೇರ್ಪಡೆಗೊಂಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂತು ಬೇಡ ಸಮುದಾಯದ ಮಹಿಳೆಯರು ಕೆಲವೊಂದು ಪ್ರದೇಶಗಳಲ್ಲಿ ಈ ಯೋಜನೆಯಿಂದ ವಂಚಿತರಾಗಿದ್ದಾರೆ. ಅದಕ್ಕೆ ಕಾರಣ ಸರಿಯಾದ ಮಾಹಿತಿ ದೊರಕದೆ ಇರುವುದು ಮತ್ತು ಇವರಲ್ಲಿ ಬಹುಸಂಖ್ಯಾತವಾಗಿ ಅನಕ್ಷರಸ್ಥರಾಗಿದ್ದಾರೆ. ಇದರಿಂದ ಸರಕಾರವು ನೀಡುವಂತಹ ಯೋಜನೆಯಲ್ಲಿ ನಮಗೂ ಅವಕಾಶವಿದೆ ಎನ್ನುವಂತಹ ಜ್ಞಾನವು ಇವರಲ್ಲಿ ಇಲ್ಲವಾಗಿದೆ. ಮತ್ತೊಂದು ಕಡೆ ಕೆಲವೊಂದು ಗ್ರಾಮಗಳಲ್ಲಿ ವಿಧವೆಯರಿಗೆ ಮಾಸಿಕ ಧನಸಹಾಯ ಮಾಡಿಸಿಕೊಡುತ್ತೇವೆ ಎಂದು ಹಣವನ್ನು ತೆಗೆದುಕೊಂಡ ಪ್ರಸಂಗಗಳು ಸಾಕಷ್ಟು ಸಿಗುತ್ತವೆ. ಇದರಲ್ಲಿ ಕೆಲವೊಂದು ವಿಧವೆಯರಿಗೆ ಸಹಾಯಧನ ಸಿಕ್ಕರೆ ಇನ್ನೂ ಅನೇಕ ವಿಧವೆಯರ ಪಾಲಿಗೆ ಅವಕಾಶವು ದೊರಕಿಲ್ಲ. ಇಂತಹ ಅನೇಕ ಸಮಸ್ಯೆಗಳಿಂದ ವಿಧವೆಯರ ಧನ ಸಹಾಯದ ಯೋಜನೆ ಸಮರ್ಪಕವಾಗಿ ಜಾರಿಗೆ ಬರಬೇಕಾಗಿದೆ. ಅದರಲ್ಲಿ ಪ್ರಥಮ ಆದ್ಯತೆಯನ್ನು ಬುಡಕಟ್ಟು ಮಹಿಳೆಯರಿಗೆ ನೀಡಬೇಕು. ಜೊತೆಗೆ ಸಹಾಯ ಧನದ ಪ್ರಮಾಣ ೧೦೦೦ಕ್ಕೆ ಅಧಿಕಗೊಳಿಸುವುದು ಅನಿವಾರ್ಯತೆ ಇದೆ.

೪. ಮಹಿಳೆಯರಿಗೆ ತರಬೇತಿ ಕಾರ್ಯಕ್ರಮಗಳು

ಮಹಿಳೆಯರು ಸಹ ಪುರುಷನಂತೆ ಸರಿಸಮಾನ ನೆಲೆಯಲ್ಲಿ ಆರ್ಥಿಕ ಸದೃಢತೆಯನ್ನು ಸಾಧಿಸುವಲ್ಲಿ ಸರಕಾರವು ಅನೇಕ ರೀತಿಯ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು ಏರ್ಪಡಿಸುತ್ತದೆ. ಇದರ ಅನ್ವಯ ಮಹಿಳೆಯರಿಗೆ ವಿಶೇಷವಾಗಿ ಟೇಲರಿಂಗ್, ರೇಡಿಯೋ, ಗಡಿಯಾರ ರಿಪೇರಿ, ಬೆರಳಚ್ಚು, ಶೀಘ್ರಲಿಪಿ ತರಬೇತಿ, ಮೋಟಾರ್ ರಿವೈಂಡಿಂಗ್ ಇತ್ಯಾದಿಗಳಲ್ಲಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡುವುದರ ಜೊತೆಗೆ ತರಬೇತಿ ನೀಡಿ ಆ ಸಂದರ್ಭದಲ್ಲಿ ಸ್ಟೈಪಂಡ್ ಎಂದು ಮಾಸಿಕ ೫೦೦ರೂ ನೀಡುತ್ತದೆ. ಈ ಯೋಜನೆಯೂ ಬಹುಮುಖ್ಯವಾಗಿ ಒಂದು ವರ್ಗದ ಮಹಿಳೆಯರನ್ನು ಮಾತ್ರ ಅನ್ವಯಿಸಿಕೊಳ್ಳುತ್ತದೆ. ಅದು ತರಬೇತಿ ಪಡೆಯಲು ಇಚ್ಛಿಸುವವರು ಕನಿಷ್ಠವೆಂದರೂ ೭ನೇ ತರಗತಿವರೆಗೆ ಶಿಕ್ಷಣ ಕಲಿತಿರಬೇಕು ಎಂಬ ಒಂದು ಮಾನದಂಡ ಮಾಡಿದೆ. ಅಂದಾಗ ಇದರಡಿಯಲ್ಲಿ ಕೇವಲ ಶೈಕ್ಷಣಿಕ ವಿದ್ಯಾರ್ಹತೆ ಪಡೆದುಕೊಂಡವರು ಮಾತ್ರ ಅವಕಾಶ ಪಡೆಯುತ್ತಾರೆ.

ಇನ್ನು ಅಕ್ಷರ ಕಲಿಯದೆ ಇರುವಂತಹ ಮಹಿಳೆಯರು ಏನು ಮಾಡಬೇಕು, ಅವರಲ್ಲಿ ಇರುವಂತಹ ಆಸೆ, ಆಕಾಂಕ್ಷೆ ಪ್ರತಿಭೆ ಮೂಲೆ ಗುಂಪಾಗುವುದಿಲ್ಲವೆ, ಇದರಲ್ಲಿ ಸರಕಾರವು ಏನೂ ಮಾಡಬೇಕು, ಅಶಿಕ್ಷಿತ ಮಹಿಳೆಯರನ್ನು ಒಳಗೊಂಡು ಬೇರೆ ತರಬೇತಿ ಕಾರ್ಯಕ್ರಮಗಳು ಜಾರಿಗೆ ತರುವಲ್ಲಿ ಏಕೆ ಮನಸ್ಸು ಮಾಡಬಾರದು. ಅಂತಹವರನ್ನು ಒಳಗೊಂಡು ಪರ್ಯಾಯ ಮಾರ್ಗ

ರೂಪಿಸಲು ಸಾಧ್ಯವಿಲ್ಲವೆ ಎನ್ನುವಂತಹ ವಿಚಾರ ಮಾಡಿದಾಗ ಸರಕಾರದ ಕಲ್ಯಾಣ ಕಾರ್ಯಕ್ರಮಗಳು ಮಹಿಳೆಯರ ಪರವಾಗಿ ಇಲ್ಲವೆಂಬ ಸಂದೇಹ ಬರದೆ ಇರಲಾರದು.

೫. ಸ್ತ್ರೀಶಕ್ತಿ ಯೋಜನೆ

ರಾಜ್ಯ ವಲಯದ ಯೋಜನೆಗಳಲ್ಲಿ ಸ್ತ್ರೀಶಕ್ತಿ ಯೋಜನೆಯೂ ಅತ್ಯಂತ ಮಹತ್ವದ್ದಾಗಿದೆ. ಗ್ರಾಮೀಣ ಪ್ರದೇಶವನ್ನು ಮುಖ್ಯವಾಗಿರಿಸಿಕೊಂಡು "ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬಿಗಳಾಗಿರುವುದನ್ನು ಮುಖ್ಯ ಗುರಿಯನ್ನಾಗಿಸಿಕೊಂಡಿರುವ ಸ್ತ್ರೀಶಕ್ತಿ ಯೋಜನೆಯನ್ನು ದಿ.೧೮.೧೦.೨೦೦೦ರಂದು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿದೆ"[೪೩] ಇಂದು ರಾಜ್ಯದಲ್ಲಿ ಸ್ತ್ರೀ ಶಕ್ತಿಯೋಜನೆಯೂ ಎಷ್ಟು ಬೃಹದಾಕಾರವಾಗಿ ಬೆಳೆದಿದೆ ಎಂದರೆ ಸುಮಾರು ಒಂದು ಲಕ್ಷಕ್ಕೂ ಮೀರಿ ಸ್ವಸಹಾಯ ಗುಂಪುಗಳನ್ನು ೨೭ ಜಿಲ್ಲೆಯ ೪೦,೩೦೧ ಅಂಗನವಾಡಿ ಕೇಂದ್ರಗಳ ಮೂಲಕ ರಚಿಸಲಾಗಿದೆ. ಈ ಯೋಜನೆ ಅನ್ವಯ ಮಹಿಳೆಯ ದುಡಿಮೆಯ ಫಲವು ಒಂದೆಡೆ ಶೇಖರಣೆ ಮಾಡುವಲ್ಲಿ ಯೋಜನೆ ಯಶಸ್ವಿಯಾಗಿದೆ ಎಂದು ಹೇಳಬಹುದು. ಈ ಪ್ರತಿಫಲವು ನಮ್ಮ ರಾಜ್ಯದ ಒಟ್ಟು ಮಹಿಳೆಯರದು ಎಂದು ತಿಳಿದುಬರುತ್ತದೆ. ಅಧ್ಯಯನಕ್ಕೆ ಸೀಮಿತ ಮಾಡಿಕೊಂಡಿರುವ ಬೇಡ ಸಮುದಾಯದ ಮಹಿಳೆಯರ ಪಾಲು ಸ್ತ್ರೀಶಕ್ತಿ ಯೋಜನೆಯಲ್ಲಿ ಇರುವಂತಹ ಪಾಲು ಎಷ್ಟೊಂದು ವಿಚಾರ ಮಾಡಿದಾಗ ಇದರಲ್ಲಿ ಸಹ ಬುಡಕಟ್ಟು ಮಹಿಳೆಯರು ನಗಣ್ಯವಾಗಿ ಕಂಡು ಬರುತ್ತಾರೆ. ಇದಕ್ಕೆ. ಹಲವಾರು ನ್ಯೂನ್ಯತೆಗಳು ಈ ಯೋಜನೆಯಲ್ಲಿವೆಂದು ಅರ್ಥವಾಗುತ್ತದೆ. ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ "ಗುಂಪುಗಳು ಸಾಲ ಸೌಲಭ್ಯವನ್ನು ಪಡೆದುಕೊಂಡ ನಂತರ ಆಯಾ ಗುಂಪಿನ ಸದಸ್ಯರು ವೈಯಕ್ತಿಕವಾಗಿ ಆರ್ಥಿಕ ಕಾರ್ಯಗಳನ್ನು ಗುರುತಿಸಿಕೊಂಡು, ಅವುಗಳಲ್ಲಿ ತಮ್ಮನ್ನು ತೊಡಿಗಿಸಿಕೊಳ್ಳಬೇಕಾಗುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಂತಹ ಒಂದು ಸಂಗತಿಯೆಂದರೆ, ಗುಂಪಿನ ಸದಸ್ಯರು ಆರ್ಥಿಕ ಸಾಲ ಸೌಲಭ್ಯ ಪಡೆದುಕೊಳ್ಳುತ್ತಿದ್ದರು. ಆದರೆ ಅವರಲ್ಲಿ ನಿರ್ದಿಷ್ಟವಾಗಿ ಯಾವ ಚಟುವಟಿಕೆಗಳು ನಮಗೆ. ಲಾಭ ತಂದುಕೊಡಬಲ್ಲವು ಎಂಬುದನ್ನು ಕಂಡುಕೊಳ್ಳುವಲ್ಲಿ ಹೆಚ್ಚಿನ ಮಾಹಿತಿ ಇರಲಿಲ್ಲ"[೪೪] ಇಂತಹ ಪರಿಸ್ಥಿತಿಯೂ ನಿಜವು ಕೂಡ ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯಾತವಾಗಿ ಬುಡಕಟ್ಟು ಮಹಿಳೆಯರು ಅಕ್ಷರಜ್ಞಾನ ಇರದೆ ಇರುವುದರಿಂದ ಸ್ವಸಹಾಯ ಗುಂಪುಗಳಿಂದ ತೆಗೆದುಕೊಂಡ ಹಣವನ್ನು ಯಾವುದರಲ್ಲಿ ವಿನಿಯೋಗಿಸಿದರೆ ದ್ವಿಗುಣ ಆಗುತ್ತದೆ ಎಂಬ ಪರಿಜ್ಞಾನವಿರದೆ ಕಾರಣ ತಮ್ಮ ಕುಟುಂಬದ ಚಟುವಟಿಕೆಗಳಾದ ಮದುವೆ, ಮಗಳ ಋತುಮತಿ ಕಾರ್ಯಕ್ರಮಕ್ಕೆ ಉಪಯೋಗಿಸಿಕೊಂಡು ಅಸಲನ್ನು ಮರಳಿಸುವಂತಹ ಸಂದರ್ಭದಲ್ಲಿ ಪ್ರತಿ ನೂರು ರೂಪಾಯಿಗೆ ೨ರೂ ಅಥವಾ ೩ರೂಪಾಯಿ ಬಡ್ಡಿ ಸೇರಿಸಿಕೊಡುವಂತಹ ಪರಿಪಾಠವೇ ಆಧಿಕವಾಗಿ ಕಂಡುಬರುತ್ತದೆ. ಇದನ್ನು ಹೊರತುಪಡಿಸಿ ಮಾರುಕಟ್ಟೆ ವಹಿವಾಟಿನಲ್ಲಿ

ವ್ಯಾಪಾರದ ಇತರೆ ವೃತ್ತಿಗಳನ್ನು ಸೃಷ್ಟಿಸುವಂತಹ ವಲಯಗಳಿಗೆ ಇನ್ನೂ ಪ್ರವೇಶಪಡೆದಿಲ್ಲವೆಂದು ಹೇಳಬಹುದು. ಈ ಯೋಜನೆಯ ಆರಂಭದಲ್ಲಿ ಇಡೀ ಗ್ರಾಮದ ಮಹಿಳೆಯರು ತಮ್ಮಲ್ಲಿರುವಂತಹ ಕ್ರೂಢೀಕರಿಸಿದ ಹಣವನ್ನು ಸಂದಾಯ ಮಾಡಿ ನಂತರ ೫ ಸಾವಿರ, ೧೦ ಸಾವಿರವರೆಗೆ ಸಾಲವೆಂದು ಪಡೆದುಕೊಳ್ಳುವ ಸಂದರ್ಭದಲ್ಲಿ ಅತೀ ಉತ್ಸಾಹದಿಂದ ಪಾಲ್ಗೊಂಡ ಕೆಲವೊಂದು ಸ್ವಸಹಾಯ ಗುಂಪುಗಳು ಹಲವಾರು ವೈಯಕ್ತಿಕ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿದ್ದರು. ದುರಂತವೆಂದರೆ ಅವುಗಳ ನಿರ್ವಹಣೆ ಮತ್ತು ಮಾರಾಟ ವ್ಯವಸ್ಥೆ ಕುರಿತಂತೆ ಹೆಚ್ಚಿನ ಜ್ಞಾನ ಇಲ್ಲದಿದ್ದರಿಂದಾಗಿ ತೊಡಗಿಸಿದಂತಹ ಬಂಡವಾಳ ವೃದ್ಧಿಯಾಗದೆ ಮೊದಲ ಹಂತದಲ್ಲಿಯೇ ಇವರ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಂತಹ ಅನೇಕ ಉದಾಹರಣೆಗಳು ಗ್ರಾಮೀಣ ಪ್ರದೇಶದಲ್ಲಿ ಕಂಡುಬರುತ್ತವೆ. ಇದರಿಂದ ತಮ್ಮ ಶ್ರಮವು ಮತ್ತು ಹಣ ಎರಡು ವ್ಯರ್ಥವಾಯಿತೆಂಬ ಭಾವನೆ ಮಹಿಳೆಯರಲ್ಲಿ ಒಡಮೂಢಿರುವುದರಿಂದ ಮತ್ತೆ ಮರಳಿ ಕೃಷಿ ಕೂಲಿ, ಕೃಷಿ ಕೆಲಸಗಳಿಗೆ ಮರಳಿರುವಂತಹ ಪ್ರಸಂಗಗಳೇ ಅಲ್ಪಸ್ವಲ್ಪವಾಗಿ ಕಂಡುಬರುತ್ತವೆ.

ಕೆಲವು ಮಹಿಳೆಯರು ಸ್ವಸಹಾಯ ಗುಂಪಿನಿಂದ ಸಾಲ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಆರ್ಥಿಕ ಸಂಕಷ್ಟವನ್ನು ಸುಧಾರಿಸಿಕೊಂಡಿದ್ದರು. ಇದಕ್ಕೆ ಕಾರಣವೂ ಸಹ ಇದೆ. ಇದರಲ್ಲಿ ಒಂದು ಅಂಶವನ್ನು ಗಮನಿಸಬೇಕಾದ ಅಗತ್ಯವಿದೆ. ಇದೇ ಯೋಜನೆಯಿಂದ ಕೆಲವು ಮಹಿಳೆಯರು ಸುಧಾರಿಸಿಕೊಳ್ಳಲು ಸಾಧ್ಯವಾಗಿದ್ದರೆ, ಮತ್ತೆ ಹಲವು ಮಹಿಳೆಯರಿಗೆ ಏಕೆ ಇದು ಸಾಧ್ಯವಾಗಲಿಲ್ಲ ಎಂಬುದು. ಇದರಿಂದ ಯಶಸ್ಸನ್ನು ಪಡೆದಿರುವಂತಹ ಮಹಿಳೆಯರೆಲ್ಲರೂ ಬಹುಸಂಖ್ಯಾತವಾಗಿ ಮೇಲ್ವರ್ಗದವರು ಆಗಿದ್ದರು. ಅವರ ವೈಯಕ್ತಿಕ ಕೌಶಲ್ಯಗಳು ಯಶಸ್ಸನ್ನು ಸಾಧಿಸಲು ಅನುಕೂಲವಾಯಿತು. ಅದು ಅಲ್ಲದೇ ತಮ್ಮ ಚಟುವಟಿಕೆಕೆಗೆ ತೋರಿದ ಕಾಳಜಿ, ತಮ್ಮ ಕೆಲಸ ಕಾರ್ಯಗಳ ಕುರಿತಂತೆ ಅವರಿಗಿದ್ದ ಆಸಕ್ತಿ ಕಾರಣವಾಗಿದ್ದವು. ಅಲ್ಲದೆ ಕುಟುಂಬದಲ್ಲಿ ಅವರಿಗೆ ನೀಡಲಾಗಿದ್ದ ಸ್ವಾತಂತ್ರ್ಯ, ಸಹಾಯ, ಸಹಕಾರಗಳು ಸಹ ಅವರಿಗೆ ನೆರವಾಗಿದ್ದವು. ಆದರೆ ಇದೆ ಸಹಕಾರವು ಬುಡಕಟ್ಟು ಮಹಿಳೆಯರ ಕುಟುಂಬದಲ್ಲಿ ನೋಡಲು ನಿರೀಕ್ಷಿಸಿದರೂ ಸಿಗುವುದಿಲ್ಲ. ಇವರ ಕುಟುಂಬದ ಪರಿಸ್ಥಿತಿ ಬೇರೆನೆ ಆಗಿರುತ್ತದೆ. ದುಡಿಮೆಯೇ ಪ್ರಧಾನವಾಗಿರುವುದರಿಂದ ಒಮ್ಮಿಂದೊಮ್ಮೆಲೇ ಅವರಿಗೆ ಆರ್ಥಿಕ ಕೆಲಸಗಳನ್ನು ನಿರ್ವಹಿಸಲು ಹಣಕಾಸಿನ ನೆರವನ್ನು ನೀಡಲಾಗಿತ್ತು. ಹಣಕಾಸು ಲಭ್ಯವಿದ್ದರೂ ವ್ಯವಸ್ಥಿತವಾಗಿ ಸಿದ್ಧತೆ ಇಲ್ಲದಿದ್ದರಿಂದಾಗಿ ಹಲವಾರು ಮಹಿಳೆಯರು ಈ ಯೋಜನೆಯಿಂದ ಹಣಕಾಸಿನ ಸಹಾಯ ಪಡೆದರಾದರೂ, ಅದರ ಸಂಪೂರ್ಣ ಲಾಭವನ್ನು ಪಡೆಯದೆ ತೆಗೆದುಕೊಂಡಂತಹ ಹಣದ ಸಾಲದಲ್ಲೇ ಜೀವಿಸುತ್ತಿರುವದು ಕಂಡು ಬರುತ್ತದೆ. ಈ ಕಾರಣದಿಂದ ಸರಕಾರವು ಬುಡಕಟ್ಟು ಮಹಿಳೆಯರಿಗೆ ಮೊದಲು ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸಲು ಸುಮಾರು ದಿನ ತರಬೇತಿ ನೀಡಬೇಕು. ಅದರ ಜೊತೆಗೆ ಸಹಾಯ ಧನ ನೀಡಬೇಕು ಅಂದಾಗ ಸುಧಾರಿಸಲು ಸಾಧ್ಯ.

ಆದರೆ ಒಂದಡೆ ಸರಕಾರವೇ ಮಹಿಳೆಯರ ಅಭಿವೃದ್ಧಿ ಸ್ತ್ರೀಶಕ್ತಿ ಗುಂಪುಗಳ ಸಂಘಟನೆ ಅತ್ಯಗತ್ಯ ಎಂದು ಹೇಳುತ್ತಿದೆ. ಮತ್ತೊಂದೆಡೆ ಸಂಘಟಿಸಬಹುದಾದ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆಗೆ ನಿರ್ಬಂಧಗಳನ್ನು ಏರುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಇಂತಿಷ್ಟೇ ಗುಂಪುಗಳನ್ನು ಸಂಘಟಿಸಬೇಕು ಎಂದು ನಿರ್ದೇಶನ ನೀಡಲಾಗಿರುತ್ತದೆ. ಅವರು ಅದಕ್ಕಿಂತ ಹೆಚ್ಚಿನ ಗುಂಪುಗಳನ್ನು ಸಂಘಟಿಸಿದರೂ ಅಂತಹವುಗಳನ್ನು ಸ್ತ್ರೀಶಕ್ತಿ ಗುಂಪುಗಳನ್ನಾಗಿ ಪರಿಗಣಿಸುವುದಿಲ್ಲ. ಇದರಿಂದಾಗಿ ಹಲವಾರು ಗ್ರಾಮಗಳಲ್ಲಿ ಸ್ತ್ರೀಶಕ್ತಿ ಗುಂಪುಗಳ ಸದಸ್ಯರಾಗಲು ಮಹಿಳೆಯರು ಆಸಕ್ತರಾಗಿದ್ದರೂ, ಸರಕಾರದ ಈ ಧೋರಣೆಯಿಂದಾಗಿ ಅವರು ಗುಂಪುಗಳನ್ನು ಸಂಘಟಿಸಲು ಮತ್ತು ಸದಸ್ಯರಾಗಲು ಸಾಧ್ಯವಾಗುತ್ತಿಲ್ಲ. ಇದಲ್ಲದೇ ಕೆಲವೊಂದು ಹಳ್ಳಿಗಳಲ್ಲಿ ಜಾತಿ ಆಧಾರಿತವಾಗಿ ಮಹಿಳೆಯರನ್ನು ಪರಿಗಣಿಸುವುದರಿಂದ ಬೇಡ ಸಮುದಾಯದ ಮಹಿಳೆಯರನ್ನು ಮೇಲ್ವರ್ಗದ ಮುಖಂಡತ್ವದಲ್ಲಿ ಇರುವಂತಹ ಸ್ತ್ರೀಶಕ್ತಿ ಗುಂಪುಗಳಲ್ಲಿ ಸದಸ್ಯರಾಗದೆ ಇರುವುದು ಪ್ರತ್ಯೇಕವಾಗಿ ಸಂಘಟಿಸಲು ಸಹಕಾರವಿರದೆ ಗುಂಪಿನಿಂದ ಪ್ರತ್ಯೇಕವಾಗಿರುವುದು ಕಂಡುಬರುತ್ತದೆ. "ಇದು ಅಲ್ಲದೇ ಸರಕಾರದ ಇಲಾಖೆಯಾಗಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಅಂಗನವಾಡಿ ಕಾರ್ಯಕರ್ತೆಯರಿಂದ ಸಂಘಟಿಸಿದ ಸ್ತ್ರೀಶಕ್ತಿ ಗುಂಪುಗಳಿಗೆ ಮಾತ್ರ ಸುತ್ತುನಿಧಿ (Revolving Fund) ಇತರೆ ಸೌಲಭ್ಯಗಳನ್ನು ನೀಡುತ್ತದೆಯೇ ಹೊರತು, ಅಂಗನವಾಡಿ ಕಾರ್ಯಕರ್ತೆಯರನ್ನು ಹೊರತುಪಡಿಸಿ ಸಂಘ ಸಂಸ್ಥೆಗಳು ಸಂಘಟಿಸಿದ ಗುಂಪುಗಳಿಗೆ ಹೆಚ್ಚಿನ ಪ್ರೋತ್ಸಾಹ, ಸಹಕಾರ ನೀಡುತ್ತಿಲ್ಲ"[೪೫] ಇಲ್ಲಿ ಸರಕಾರವೇ ಮಹಿಳೆಯರ ಅಭಿವೃದ್ಧಿಯಲ್ಲಿ ಭಿನ್ನತೆಯನ್ನು ಅನುಸರಿಸುತ್ತಿದೆ ಎಂದು ಹೇಳಬಹುದು.

ಗ್ರಾಮೀಣ, ನಗರ ಪ್ರದೇಶಗಳಲ್ಲಿ ಮಹಿಳೆಯರು ಸಬಲೀಕರಣ ಸಾಧಿಸಬೇಕಾದರೆ ಸರಕಾರವು ತಾಳಿರುವಂತಹ ಮಾನದಂಡವು ಸರಳೀಕರಣಗೊಳಿಸಿಕೊಳ್ಳಬೇಕು. ಅದು ಗುಂಪು ಯಾವುದೇ ಇರಲಿ, ಸ್ತ್ರೀಶಕ್ತಿ ಗುಂಪು ಇರಬಹುದು, ಸ್ವಸಹಾಯ ಗುಂಪುಗಳು ಇರಬಹುದು ಅವುಗಳಿಗೆ ಸರಕಾರದಿಂದ ಲಭಿಸುವಂತಹ ಹೆಚ್ಚುವರಿ ಸಹಾಯವು ಸಮಾನ ರೀತಿಯಲ್ಲಿ ಇರಬೇಕು. ಅಂದಾಗ ಮಾತ್ರ ಅಭಿವೃದ್ಧಿಯಾಗಲು ಸಾಧ್ಯ. ಇದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರನ್ನು ರಾಜಕೀಯ ಧುರೀಣರು, ಸಂಘ ಸಂಸ್ಥೆಗಳು ತಮ್ಮ ವೈಯಕ್ತಿಕ ವರ್ಚಸ್ಸು ಬೆಳೆಸಿಕೊಳ್ಳಲು ಉಪಯೋಗಿಸುತ್ತಿದ್ದಾರೆ. ಇದರಿಂದ ಕೂಲಿ ಮಾಡುವಂತಹ ಮಹಿಳೆಯರು ಒಂದು ದಿನದ ಕೂಲಿ ಕೆಲಸ ತಪ್ಪಿದೆಯಾದರೆ ತಮ್ಮ ಕುಟುಂಬದ ಆರ್ಥಿಕ ಚಟುವಟಿಕೆಗೆ ತೊಂದರೆಯಾಗುತ್ತದೆ. ಇಂತಹ ಪ್ರವೃತ್ತಿಗಳೂ ಕಡಿಮೆಯಾಗಬೇಕಾಗಿದೆ. ಅಂದಾಗ ಮಾತ್ರ ಮಹಿಳೆಯರ ಸ್ತ್ರೀಶಕ್ತಿ ಸಂಘಗಳು ಯಶಸ್ವಿಯಾಗಲು ಸಾಧ್ಯ.

೬. ಸಹಕಾರ ಇಲಾಖೆ (ಲ್ಯಾಂಪ್ ಸಹಕಾರ ಸಂಘಗಳ ಸ್ಥಾಪನೆ)

"ವರ್ತಮಾನದಲ್ಲಿ ಬುಡಕಟ್ಟು ಜನರ ಮೇಲೆ ಲೇವಾದೇವಿದಾರರು, ಬಂಡವಾಳ ಶಾಹಿಗಳು

ಮಧ್ಯವರ್ತಿಗಳಿಂದ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸಲು ಈ ಸಹಾಕರ ಸಂಘಗಳ ಬೆಳವಣಿಗೆ ಸಹಕಾರಿಯಾಗಿದೆ. ಬುಡಕಟ್ಟು ಪ್ರದೇಶದಲ್ಲಿ ಸುಮಾರು ೨೫೦೦ ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರ ಸಂಘಗಳು (LAMPS) ಸ್ಥಾಪನೆಯಾಗಿದ್ದು ಇವು ಮೂರು ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತವೆ.

೧. ಉತ್ಪಾದನೆ ಮತ್ತು ಅನುಭೋಗಕ್ಕೆ ಸಾಲವನ್ನು ಒದಗಿಸುವುದು.

೨. ಬುಡಕಟ್ಟಿನವರು ಸಂಗ್ರಹಿಸಿದ ಅಥವಾ ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು.

೩. ಬುಡಕಟ್ಟು ಜನರ ನಿತ್ಯ ಜೀವನಕ್ಕೆ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಹಾಗೂ ಕೃಷಿಗೆ ಬೇಕಾದ ಬೀಜ, ಗೊಬ್ಬರ, ಇತರೆ ಪರಿಕರಗಳನ್ನು ಒದಗಿಸುವುದು ಮುಖ್ಯ ಕಾರ್ಯವಾಗಿತ್ತು.

ಪಕ್ಕದ ಕೇರಳ ರಾಜ್ಯದಲ್ಲಿ ಇದೇ ಮಾದರಿಯನ್ನು ಪರಿವರ್ತಿಸಿ ಗಿರಿಜನ ಸೇವಾ ಸಹಕಾರಿ ಸಂಘಗಳು ಸ್ಥಾಪನೆಯಾಗಿವೆ. ರಾಜ್ಯಗಳಲ್ಲಿರುವ ಲ್ಯಾಂಪ್ಸ್‌ಗಳು ನಿರ್ವಹಿಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿದಾಗ ಬುಡಕಟ್ಟು ಅಭಿವೃದ್ಧಿ ಸಹಕಾರ ನಿಗಮಗಳ ಸಮನ್ವಯದ ಕೊರತೆ ಎದ್ದು ಕಾಣುತ್ತಿರುವುದು ವರದಿಯಾಗಿದೆ. ಈ ಯೋಜನೆಯೂ ಸಂಪೂರ್ಣವಾಗಿ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ತಂದಿಲ್ಲ, ಅದು ಕೇವಲ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಇವುಗಳು ಗಿರಿಜನ ಸದಸ್ಯರನ್ನು ನೊಂದಾಯಿಸಿಕೊಂಡು ಸೌಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಅರಣ್ಯ ಉತ್ಪನ್ನಗಳನ್ನು ಅವರಿಂದ ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಅದರ ಲಾಭವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಇದರಿಂದ ಸ್ಥಳೀಯ ಲೇವಾದೇವಿದಾರರ ಶೋಷಣೆಯಿಂದ ತಪ್ಪಿಸಿದಂತಾಗುತ್ತದೆ.

ಲ್ಯಾಂಪ್ ಸಹಕಾರ ಸಂಘಗಳಿಗೆ ಆರ್ಥಿಕ ಚೈತನ್ಯವನ್ನು ತುಂಬಲು ಭಾರತ ಸರ್ಕಾರ ೧೯೮೭ರಲ್ಲಿ ಟ್ರೈಫೆಡ್(Tribal Co-Operative marketing deveolepment federation of India) ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಇದರ ಮುಖ್ಯ ಉದ್ದೇಶ ಬುಡಕಟ್ಟು ಜನರು ಉತ್ಪಾದಿಸುವ ವಸ್ತುಗಳಿಗೆ ಉನ್ನತ ಬೆಲೆಗಳನ್ನು ನೀಡುವುದರ ಜೊತೆಗೆ ಮಾರುಕಟ್ಟೆಯನ್ನು ಒದಗಿಸಿಕೊಡುವುದಾಗಿದೆ. ಸಮುದಾಯಗಳಿಗೆ ಬೇಕಾಗುವ ಅವಶ್ಯಕ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ಪೂರೈಸುವುದು ಬುಡಕಟ್ಟು ಜನರನ್ನು ಮಧ್ಯವರ್ತಿಗಳ ಹಾವಳಿಯಿಂದ ಬಿಡುಗಡೆ ಮಾಡುವುದು ಈ ಸಂಸ್ಥೆಯು ರಾಷ್ಟ್ರಮಟ್ಟದ ಸಹಕಾರ ಸಂಘದ ಆಪೆಕ್ಸ್ ಸಂಸ್ಥೆಯಾಗಿದೆ. ಈ ಸಂಸ್ಥೆಯು ಆದಿವಾಸಿ ಜನರು ಸ್ಥಾಪಿಸಿಕೊಳ್ಳುವ ಸಹಕಾರ ಸಂಘಗಳಿಗೆ ಸ್ವತ್ತಿನ ನಿಧಿಯನ್ನು ಒದಗಿಸುತ್ತಿದೆ.’’[೫೬] ಇಂತಹ ಯಾವುದೇ ಲ್ಯಾಂಪ್ಸ್ ಸಹಕಾರ ಸಂಘಗಳು ಅಧ್ಯಯನದ ಕ್ಷೇತ್ರವಾದ

ಗುಲಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅಸ್ಥಿತ್ವದಲ್ಲಿಲ್ಲ ಏಕೆ? ಎನ್ನುವುದು ಸೂಕ್ಷ್ಮವಾಗಿ ನೋಡಿದಾಗ ಲ್ಯಾಂಪ್ಸ್ ಯೋಜನೆಯ ಒಳಗಡೆ ಬಂಡವಾಳಶಾಹಿಗಳ ಸ್ವರೂಪ ಎದ್ದು ಕಾಣುತ್ತದೆ. ಯೋಜನೆಯ ಮುಖ್ಯ ಉದ್ದೇಶಗಳನ್ನು ನಾವು ಗಮನಹರಿಸಿದಾಗ ಅದರಲಿ ಬಂಡವಾಳ ಶಾಹಿಗಳು, ಲೇವಾದೇವಿದಾರರು, ನೇರವಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಆಗದ ಕಾರಣ ಲ್ಯಾಂಪ್ಸ್ ಎಂಬ ಮುಖವಾಡವನ್ನು ಧರಿಸಿ ಪ್ರವೇಶ ಪಡೆದಿರುವುದು ತಿಳಿಯುತ್ತದೆ. ಈ ಯೋಜನೆ ಅನುಷ್ಠಾನ ಇರುವಂತಹ ಪ್ರದೇಶಗಳಲ್ಲಿ ಬುಡಕಟ್ಟುಗಳು ಶೇ.೧೫ರಷ್ಟು ಕಂಡುಬರುವುದಿಲ್ಲ. ಇದರಲ್ಲಿಯೇ ತಿಳಿಯುತ್ತದೆ ಆದಿವಾಸಿಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆ ಎಂಬುದು. ಅದೇ ರಾಯಚೂರು ಜಿಲ್ಲೆಯಲ್ಲಿ ಶೇ.೧೮.೧೫%ರಷ್ಟು ಇದ್ದರೂ ಸಹ ಲ್ಯಾಂಪ್ಸ್ ಯೋಜನೆ ಜಾರಿಗೆ ಬಂದಿಲ್ಲ. ಕಾರಣ ಯೋಜನೆಯ ಹಿಂದಿರುವ ಸ್ಪಷ್ಟತೆ ಎದ್ದು ಕಾಣುತ್ತದೆ. ಈ ದೃಷ್ಟಿಯಲ್ಲಿ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಯೋಜನೆ ವಿಸ್ತರಿಸುವಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಗಮನಹರಿಸಿದರೆ, ಬುಡಕಟ್ಟು ಕುಟುಂಬಗಳು ಅಭಿವೃದ್ಧಿ ಆಗುತ್ತವೆ. ಅದರ ಜೊತೆಗೆ ಮಹಿಳೆಯರಿಗೆ ಸಬಲೀಕರಣದ ಪ್ರವೇಶಕ್ಕೆ ಅನುಕೂಲವಾಗುತ್ತದೆಂದು ಹೇಳಬಹುದು.

೭. ಬುಡಕಟ್ಟು ಪ್ರದೇಶಗಳಲ್ಲಿ ವೃತ್ತಿ ತರಬೇತಿಗಳು

ಇಂದು ಆಧುನಿಕತೆಯ ಪ್ರಭಾವದಿಂದ ಬುಡಕಟ್ಟು ಜನರಿಗೆ ವೃತ್ತಿ ಇಲ್ಲದಂತಾಗಿ ಜೀವನ ನಿರ್ವಹಿಸಲು ಸಂಕಷ್ಟದ ದಿನಗಳು ಎದುರಾಗಿರುವ ಸಂದರ್ಭದಲ್ಲಿ ಸರ್ಕಾರವು ಕೌಶಲ್ಯವೃದ್ಧಿ ಮತ್ತು ಸ್ವಯಂ ಉದ್ಯೋಗವೆನ್ನುವ ಯೋಜನೆಯನ್ನು ೧೯೭೨-೭೩ರಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆ ನಿರ್ದಿಷ್ಟ ಪ್ರದೇಶ ಯೋಜನೆ ಆಗಿರದೆ, ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯಿಸುತ್ತದೆ. ಇದರ ಸಪೂರ್ಣ ವೆಚ್ಚವನ್ನು ಕೇಂದ್ರ ಸರಕಾರವೇ ಮಾಡುತ್ತದೆ. ಬುಡಕಟ್ಟು ಜನರು ಎಲ್ಲಿ ವಾಸಿಸುತ್ತಾರೆ ಅವರ ಪ್ರದೇಶಗಳಲ್ಲಿ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು ಹೋಗಿ ಅವರಲ್ಲಿ ಇರುವಂತಹ ಕೌಶಲ್ಯವನ್ನು ತಿಳಿದುಕೊಂಡು ಅಗತ್ಯವಾದ ವೃತ್ತಿ ತರಬೇತಿಗಳನ್ನು ನೀಡುವಂತಹ ಯೋಜನೆ ಇದಾಗಿದೆ. ಇದರಲ್ಲಿ ಮಹಿಳೆಯರು-ಪುರುಷರು ಸೇರಿ ತರಬೇತಿ ಪಡೆಯಬಹುದು. ದುರಂತವೆಂದರೆ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬರುವಂತಹ ಆದಿವಾಸಿಗಳಿಗೆ ಈ ಯೋಜನೆ ತಲುಪಿಲ್ಲವೆಂದು ಹೇಳಬಹುದು. ಏಕೆಂದರೆ ನಾವು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತೆ, ಸರಕಾರದಿಂದ ಯೋಜನೆಗಳನ್ನು ಪಡೆದುಕೊಂಡು ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳು ವಿಶೇಷವಾಗಿ ಬುಡಕಟ್ಟು ಜನರಿಗೆ ವೃತ್ತಿ ತರಬೇತಿ ಕಾರ್ಯಕ್ರಮಗಳು ಏರ್ಪಡಿಸದೆ ಸರಳವಾದ ಮತ್ತು ಎನ್.ಜಿ.ಓ.ಗಳಿಗೆ ಲಾಭವಾಗುವಂತಹ ಕಾರ್ಯಕ್ರಮಗಳು ಜಾರಿಗೆ ತಂದು ಹಣವನ್ನು ವ್ಯರ್ಥ ಮಾಡುವುದು ಕಂಡುಬರುತ್ತದೆ. ಇನ್ನು ಮುಂದಾದರೂ ಆದಿವಾಸಿಗಳಿಗೆ ವಿಶೇಷವಾಗಿ ಜಾರಿಯಾಗಿರುವ ಯೋಜನೆಗಳನ್ನು ಸ್ವಯಂಸೇವಾ ಸಂಸ್ಥೆಗಳು ಕೈಗೆತ್ತಿಕೊಂಡು ಅವರಿರುವಂತಹ ಹಳ್ಳಿಗಳಿಗೆ ಹೋಗಿ ತರಬೇತಿ ನೀಡುವಂತಹ ಪ್ರಯತ್ನವಾಗಬೇಕಿದೆ.

೮. ಆದಿವಾಸಿಗಳಿಗೆ ಜನಶ್ರೀ ವಿಮಾ ಯೋಜನೆ

ನಮ್ಮ ನಾಡಿನ ಬಹುಸಂಖ್ಯಾತ ಬುಡಕಟ್ಟು ಜನರು ಅರಣ್ಯ ಮತ್ತು ಅದರ ಹಂಚಿನ ಗ್ರಾಮಗಳಲ್ಲಿ ವಾಸವಾಗಿದ್ದು, ಜೀವನ ನಡೆಸಲು ತುಂಬಾ ಭಯಾನಕ ಆಗಿರುವುದರಿಂದ ಜೊತೆಗೆ ಕ್ರೂರ ಮೃಗಗಳ ಹಾವಳಿಗೆ ತಮ್ಮ ಪ್ರಾಣ ತೆತ್ತಿರುವುದನ್ನು ಮನಗಂಡು ಭಾರತ ಸರ್ಕಾರವು ೨೦೦೪-೦೫ರಲ್ಲಿ ಕುಟುಂಬದ ದುಡಿಯುವ ಸದಸ್ಯನನ್ನು ಈ ವಿಮಾ ಯೋಜನೆಯಡಿ ಒಳಪಡಿಸಲು ನಿರ್ಧರಿಸಿತು. ಇದನ್ನು ಭಾರತೀಯ ಜೀವಾ ವಿಮಾ ನಿಗಮವು ಜಾರಿಗೆ ತರಲಾಗುತ್ತಿದ್ದು ಎಲ್ಲಾ ಆದಿವಾಸಿ ಕುಟುಂಬಗಳಿಗೂ ಈ ಯೋಜನೆಯಡಿ ರಕ್ಷಣೆಯನ್ನು ಹತ್ತನೆ ಪಂಚವಾರ್ಷಿಕ ಯೋಜನೆಯಡಿ ವಿಸ್ತರಿಸಲಾಗಿದೆ. ಇದರಡಿಯಲ್ಲಿ ಫಲಾನುಭವಿಗಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಆಕಸ್ಮಿಕ ಮರಣ/ಆಕಸ್ಮಿಕ ಶಾಶ್ವತ ಅಂಗವಿಕಲತೆಯಾದರೆ ರೂ.೫೦,೦೦೦ಗಳನ್ನು ಕುಟುಂಬದ ಸದಸ್ಯರಿಗೆ ಒದಗಿಸುವುದು.

೨. ಸ್ವಾಭಾವಿಕ ಮರಣ ಹೊಂದಿದಲ್ಲಿ ರೂ.೭೦,೦೦೦ಗಳನ್ನು ಕುಟುಂಬದ ಸದಸ್ಯರಿಗೆ ಒದಗಿಸುವುದು.

೩. ಅಂಗವೈಕಲ್ಯವಾದಲ್ಲಿ ರೂ.೨೦,೦೦೦ಗಳನ್ನು ಒದಗಿಸುವುದು.

೪. ಈ ಯೋಜನೆಯಡಿ ಸೌಲಭ್ಯ ಪಡೆದ ಸೌಲಭ್ಯಾರ್ಥಿಯ ಕುಟುಂಬದ ಇಬ್ಬರು ಮಕ್ಕಳಿಗೆ ಒಂಭತ್ತನೆ ತರಗತಿಗಿಂತ ಹೆಚ್ಚಿನ ತರಗತಿಯಲ್ಲಿ ವ್ಯಾಸಂಗ ಮಾಡುವವರಿಗೆ ೩೦೦ರೂಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಇದರಲ್ಲಿ ನಮಗೆ ಒಂದು ಸಂದೇಹವೆಂದರೆ ಪುರುಷನನ್ನು ಮಾತ್ರ ಕುಟುಂಬದ ಸದಸ್ಯನಾಗುತ್ತಾನೆ. ಅಂದರೆ ಈ ಯೋಜನೆ ಮಹಿಳೆಗೆ ಅವಕಾಶ ನೀಡಿಲ್ಲ, ಸ್ತ್ರೀಯರನ್ನು ಪಾಲಿಸಿದಾರರಾಗಿ ಯೋಜನೆಯಲ್ಲಿ ಪರಿವರ್ತನೆ ತರುವ ಅಗತ್ಯತೆಯಿದೆ.

೯. ಕೃಷಿ ಉತ್ತೇಜನ ಕಾರ್ಯಕ್ರಮಗಳು

ಬುಡಕಟ್ಟು ಸಮುದಾಯದ ಜನರಿಗೆ ಆರ್ಥಿಕವಾಗಿ ಸಬಲೀಕರಣ ಮಾಡಲು ಕೃಷಿ ಇಲಾಖೆ ವತಿಯಿಂದ ಕೃಷಿಗೆ ಅವಶ್ಯಕತೆಯಿರುವ ಪರಿಕರಗಳನ್ನು ವಿತರಿಸುವ ಯೋಜನೆ ಜಾರಿಯಲ್ಲಿದ್ದು, ಅದರ ಮೂಲಕ ಬಿತ್ತನೆ ಬೀಜಗಳು, ಸಸ್ಯ ಸಂರಕ್ಷಣಾ ಉಪಕರಣಗಳೂ, ರಸಗೊಬ್ಬರ, ಔಷದಿ ಸಿಂಪರಣೆ, ಕೈಪಂಪುಗಳು, ಇತ್ಯಾದಿಗಳನ್ನು ವಿತರಿಸಲಾಗುತ್ತಿದೆ, ಇದಲ್ಲದೆ, ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರಾಟಕ್ಕೆ ಉತ್ತೇಜನ ನೀಡಲಾಗುತ್ತಿದೆ. ನಿಜ ಇದುವರೆಗೂ ಈ ಯೋಜನೆಯಿಂದ ಸಂಪೂರ್ಣವಾಗಿ ಅವಕಾಶ ಪಡೆದಿರುವಂತಹ ಉದಾಹರಣೆಗಳು ನಮಗೆ ಸಿಗುತ್ತಿಲ್ಲ. ಕಾರಣ ಕೃಷಿ ಇಲಾಖೆಯವರು ಭೂಮಿ ಇರುವಂತಹ ಫಲಾನುಭವಿಗಳಿಗೆ ಬಿತ್ತನೆ ಬೀಜ ಕೊಟ್ಟರೆ, ಭೂರಹಿತ

ಕುಟುಂಬದವರಿಗೆ ಅದೇ ವರ್ಷ ಔಷಧಿ ಸಿಂಪರಣೆ ಮಾಡುವ ಕೃಪಂಪಗಳು ನೀಡುತ್ತಾರೆ. ಅಂದರೆ ಇವರ ಕೃಷಿ ಅಭಿವೃದ್ಧಿಯಾಗಲು ಸಾಧ್ಯವೆ. ಮತ್ತೆ ಕೃಷಿ ಮಾಡುವಂತಹ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ಸಲಕರಣೆಗಳು ದೊರೆಯದಿದ್ದ ಪಕ್ಷದಲ್ಲಿ ಅನಿವಾರ್ಯವಾಗಿ ಅದನ್ನು ಬಿಟ್ಟು ತಮ್ಮ ಜೀವನಕ್ಕಾಗಿ ವಲಸೆ ಹೋಗಿರುವುದು ಕಂಡುಬರುತ್ತದೆ.

ಸರಕಾರದ ವತಿಯಿಂದ ಬುಡಕಟ್ಟು ಜನರಿಗೆ ನೀಡಿರುವಂತಹ ಟೆನೆಂಟ್ ಭೂಮಿಯೂ ಸಹ ಫಲವತ್ತಾದದ್ದಲ್ಲ. ಬಿತ್ತನೆ ಮಾಡಲು ಯೋಗ್ಯವಲ್ಲದಂತಹ ಭೂಮಿಯನ್ನು ಖರೀದಿಸಿ ಇವರಿಗೆ ಕೊಟ್ಟಿರುವುದು ಕಾಣಬಹುದು. ಒಂದು ಕಡೆ ಜನಸಾಮಾನ್ಯರು ಬುಡಕಟ್ಟು ಜನರಿಗೆ ಸರಕಾರ ಭೂಮಿ ಕೊಟ್ಟಿದೆ. ಅದರಲ್ಲಿ ದುಡಿದು ತಿನ್ನಲು ಇವರಿಗೇನು ಕೆಲಸ ಎಂಬ ತಾತ್ಸರದ ಭಾವನೆ ವ್ಯಕ್ತಪಡಿಸುತ್ತಾರೆ. ನಮ್ಮ ಆದಿವಾಸಿ ಜನರನ್ನು ಅಭಿವೃದ್ಧಿಪಡಿಸುವ ಉನ್ನತ ಧ್ಯೇಯ ಹೊಂದಿರುವ ಸಹಕಾರ, ಅದರ ಒಳಗಡೆ ಆಡಳಿತವರ್ಗ ಹೊಂದದೆ ಇರುವುದು ಮುಖ್ಯ ಸಂಗತಿಯಾಗಿದೆ. ಕ್ಷೇತ್ರ ಕಾರ್ಯ ಸಮಯದಲ್ಲಿ ವಕ್ತೃಗಳನ್ನು ಕುರಿತು ಸರಕಾರ ನಿಮಗೆ ಭೂಮಿ ನೀಡಿದೆಯಾ ಎಂದು ಕೇಳಿದಾಗ ಅವರು ಭೂಮಿಯೇನೋ ಕೊಟ್ಟಿದೆ ಆದರೆ ಅದು ಕೃಷಿ ಮಾಡಲು ಅಲ್ಲ ಸರ್ಕಾರಿ ಜಾಲಿ ಬೆಳೆಯಲು ಯೋಗ್ಯವಾದಂತಹದ್ದು ಕೊಟ್ಟಿದೆ. ಅಂತಹ ಭೂಮಿಯಿಂದ ನಾವು ಜೀವನ ಸಾಗಿಸಲು ಆಗುವುದಿಲ್ಲ ಎಂದು ಉತ್ತರ ನೀಡುತ್ತಾರೆ. ಇನ್ನೂ ಫಲವತ್ತಾದ ಭೂಮಿ ಇದ್ದ ಬುಡಕಟ್ಟು ಜನರಿಗೆ ಕೃಷಿ ಇಲಾಖೆಯವರು ಕಳಪೆ ಬೀಜ, ಕೃಷಿ ಸಲಕರಣೆಗಳು ನೀಡುತ್ತಿರುವುದು ಕಂಡುಬರುತ್ತದೆ. ಅಂದಾಗ ಆದಿವಾಸಿ ಮಹಿಳೆಯರು ಮತ್ತು ಕುಟುಂಬಗಳು ಅಭಿವೃದ್ಧಿಯಾಗಲು ಸಾಧ್ಯವೇ ಎನ್ನುವಂತಹ ವಿಚಾರ ಮಾಡಬೇಕಾಗಿದೆ. ಇದರಲ್ಲಿ ವಿವರಿಸಲಾಗಿರುವ ಕಾರ್ಯಕ್ರಮಗಳೆಲ್ಲವೂ ಬುಡಕಟ್ಟು ಮಹಿಳೆಯ ಪರ ಕೆಲಸ ಮಾಡಿವೆ, ಮಾಡುತ್ತಿವೆ ಎಂದು ಹೇಳಲು ಬರುವುದಿಲ್ಲ. ಪ್ರಸ್ತುತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಡಿಯಲ್ಲಿ ಸುಮಾರು ಅಭಿವೃದ್ಧಿ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿದ್ದು, ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತಿವೆ. ಅಧಿಕಾರಿಗಳ ಸ್ವಾರ್ಥ, ಒಣ ಪ್ರತಿಷ್ಠೆ ಮತ್ತು ಪರಸ್ಪರರ ನಡುವಿನ ಭಿನ್ನಾಭಿಪ್ರಾಯಗಳಿಂದಾಗಿ ಮಹಿಳೆಯರಿಗೆ ಸಂಬಂಧಿಸಿದ ಅಥವಾ ಯಾವುದೇ ಒಂದು ಯೋಜನೆಯನ್ನು ಬುಡಕಟ್ಟು ಜನರಿಗೆ ನಿರೀಕ್ಷಿತ ಮಟ್ಟದಲ್ಲಿ ಸರಿಯಾದ ಸಮಯಕ್ಕೆ ತಲುಪಿಸಲಾಗುತ್ತಿಲ್ಲ. ಆದ್ದರಿಂದಾಗಿ ಈ ಅಧ್ಯಯನದ ಮೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಎಲ್ಲಾ ಇಲಾಖೆಗಳ ನಡುವೆ ಸೂಕ್ತ ಸಂಪರ್ಕ ಮತ್ತು ಸಮನ್ವಯತೆಯನ್ನು ಏರ್ಪಡಿಸಿ ಯೋಜನಾ ಸೌಲಭ್ಯವನ್ನು ಸರಿಯಾದ ಸಮಯಕ್ಕೆ ಬುಡಕಟ್ಟು ಜನರಿಗೆ ತಲುಪಿಸುವಂತೆ ನೋಡಿಕೊಳ್ಳಬೇಕಿದೆ. ಇದರ ಜೊತೆಗೆ ಕೆಲವು ಯೋಜನೆಗಳು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿವೆ. ವಸತಿ ಕುಡಿಯುವ ನೀರಿನ ಸೌಲಭ್ಯ ಮತ್ತು ಬುಡಕಟ್ಟು ಜನರ ಮನೆಗಳಿಗೆ ವಿದ್ಯುತ್ ಒದಗಿಸುವಿಕೆ ಇವು ಅಲ್ಪ ಪ್ರಮಾಣದಲ್ಲಿ ಫಲ ನೀಡಿವೆ

ಎಂದು ಹೇಳಬಹುದು. ಆದರೆ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯಲ್ಲಿ ಪುರುಷ ಪ್ರಧಾನವು ಬಲಾಢ್ಯವಾದ ಪ್ರಭಾವ ಬೀರಿದೆ. ಒಟ್ಟಾರೆ ಚಿತ್ರಣವು ಇತರೆ ಮುಖ್ಯವಾಹಿನಿಯ ಸಮುದಾಯಗಳಿಗೆ ಹೋಲಿಸಿದರೆ ಸಮಾಧಾನಕರವಾಗಿಲ್ಲ. ಅತ್ಯಂತ ಅನಾನುಕೂಲ ಪರಿಸ್ಥಿತಿಯನ್ನೆದುರಿಸುತ್ತಿರುವ ಸಂದರ್ಭವು ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಸುಮಂಗಲ ಅತ್ತಿಗೇರಿ, ಕೃಷಿ ಜಾನಪದ ಮತ್ತು ಮಹಿಳೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೭, ಪುಟ.೧೫೬

೨. ಚಂದ್ರಬಾಗ ಬಿದರಿ, ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೭, ಪುಟ.೩೧.

೩. ಇಂದಿರಾ ಆರ್. ಮಹಿಳೆ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪುಟ.೧೦೬.

೪. ವಿಜಯಶ್ರೀ ಸಬರದ (ಸಂ) ಮಹಿಳೆ ಶೋಷಣೆ ಸವಾಲುಗಳು, ೨೦೦೫, ಪುಟ.೮೮.

೫. ಅದೇ ಪುಟ. ೮೯.

೬. ಅದೇ ಪುಟ. ೮೯.

೭. ಅದೇ ಪುಟ. ೯೦.

೮. ಶ್ರೀಮತಿ ಎಚ್.ಎಸ್. ಚಹರೆ, ಪುಟ. ೧೦೫.

೯. ಅದೇ ಪುಟ. ೧೦೮.

೧೦. ಅದೇ ಪುಟ. ೧೦೮.

೧೧. ಶ್ರೀಮತಿ ಎಚ್.ಎಸ್. (ಅನು) ಆಧುನಿಕ ಭಾರತದಲ್ಲಿ ಮಹಿಳೆ, ೨೦೦೧, ಪುಟ.೬೫.

೧೨. ಶ್ರೀಮತಿ ಎಚ್.ಎಸ್., ಚಹರೆ, ಪುಟ. ೧೧೦.

೧೩. ಅದೇ ಪುಟ. ೧೧೧.

೧೪. ಗೋವಿಂದರಾಜು ಸಿ.ಆರ್. ಚರಿತ್ರೆ ಅಧ್ಯಯನ ನಂ.೨, ಸಂ.೨, ಜನವರೆ-ಜೂನ್, ೨೦೦೭, ಪುಟ. ೯೪.

೧೫. ಚಂದ್ರಬಾಗ ಬಿದರಿ, ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೭ ಪುಟ.೫೧.

೧೬. ಅದೇ ಪು. ೫೧.

೧೭. ಅದೇ ಪುಟ. ೪೮.

೧೮. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂ., ಸಂ.೨, ಜನವರೆ-ಜೂನ್, ೨೦೦೭, ಪುಟ.೯೫.

೧೯. ಜ್ಯೋತಿ-ಶಶಿಕುಮಾರ, ಮಹಿಳಾ ಸಾಮಾಜಿಕತೆ, ೨೦೦೭, ಪುಟ.೧೧೦.

೨೦. ಗೋವಿಂದರಾಜು ಸಿ.ಆರ್., ಚರಿತ್ರೆ ಅಧ್ಯಯನ, ಸಂ. ಸಂ.೨, ಜನವರಿ-ಜೂನ್, ೨೦೦೭, ಪುಟ.೯೫.

೨೧. ಅದೇ ಪುಟ. ೯೬.

೨೨. ಅದೇ ಪುಟ. ೯೮.

೨೩. ಅದೇ ಪುಟ. ೯೯.

೨೪. ತಿಳುವಳಿಕೆದಾರರ ಮಾಹಿತಿ. ಸೀತಮ್ಮ, ರಾಯಚೂರು

೨೫. ತಿಳುವಳಿಕೆದಾರರ ಮಾಹಿತಿ. ವರಲಕ್ಷ್ಮಿ, ಗಿಣಿಗೇರ

೨೬. ಮಂಜುನಾಥ ಬೇವಿನಕಟ್ಟಿ, ತಾರಿಹಳ್ಳಿ ಹನುಮಂತಪ್ಪ, ವಾಲ್ಮೀಕಿ ಸಂಪದ, ೨೦೦೬, ಪುಟ.೨೨೭.

೨೭. ಅದೇ ಪುಟ. ೨೨೮

೨೮. ಅದೇ ಪುಟ. ೨೨೮

೨೯. ಅದೇ ಪುಟ. ೨೨೯

೩೦. ಅದೇ ಪುಟ. ೨೨೯

೩೧. ಅದೇ ಪುಟ. ೨೩೦

೩೨. ಅದೇ ಪುಟ. ೨೩೦

೩೩. ಅದೇ ಪುಟ. ೨೩೧

೩೪. ಅದೇ ಪುಟ. ೨೩೧

೩೫. ಅದೇ ಪುಟ. ೨೩೨

೩೬. ಅದೇ ಪುಟ. ೨೩೩

೩೭. ಅದೇ ಪುಟ. ೨೩೩

೩೮. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ೨೦೦೧, ಪುಟ.೧೮೭.

೩೯. ಗೋವಿಂದರಾಜು ಸಿ.ಆರ್. ಚರಿತ್ರೆ ಅಧ್ಯಯನ, ಸಂ.ಸಂ.೨, ೨೦೦೭, ಪುಟ.೮೨.

೪೦. ಒಡೆಯರ ಡಿ.ಹೆಗ್ಗಡೆ ಎನ್.ಅನ್ನಪೂರ್ಣೇಶ್ವರಿ, ಮಹಿಳಾ ಹಕ್ಕುಗಳು, ೨೦೦೬, ಪುಟ. ೩೫ ರಿಂದ ೩೬.

೪೧. India (New Delhi publication division, Govt of India, 2004) 2004, Page. 701.

೪೨. ಅದೇ ಪುಟ. ೭೦೪.

೪೩. ಹಾಲತಿ ಸೋಮಶೇಖರ್, ಸ್ತ್ರೀಪರ, ೨೦೦೮, ಪುಟ.೮೨.

೪೪. ಎಚ್.ಎಸ್.ಶ್ರೀಮತಿ, ಶಿವಾನಂದ ಎಸ್.ವಿರಕ್ತಮಠ, ಜೆ.ಕೃಷ್ಣ (ಸಂ) ಮಹಿಳಾ ಆರ್ಥಿಕತೆ ೨೦೦೭, ಪುಟ. ೪೫.

೪೫. ಅದೇ ಪುಟ. ೪೯.

೪೬. ಶ್ರೀನಿವಾಸ ಎಂ.ಸಿ. ಗಿರಿಜನ ಉಪಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಬುಡಕಟ್ಟು ಅಭಿವೃದ್ಧಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಿಪಡಿಸಿದ ಅಪ್ರಕಟಿತ ಮಹಾಪ್ರಬಂಧ, ೨೦೦೪, ಪುಟ. ೧೩೦.

ಸಮಾರೋಪ

ಪ್ರಸ್ತುತ ಮಹಾಪ್ರಬಂಧವು ಬೇಡ ಸಮುದಾಯದ ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡು ಸಿದ್ಧಗೊಂಡಿದೆ. 'ಒಟ್ಟು ಚಾರಿತ್ರಿಕ ಕ್ರಮವನ್ನು ಅರ್ಥಮಾಡಿಕೊಳ್ಳಲಾಗದ ಹೊರತು ಭವಿಷ್ಯದಲ್ಲಾಗುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲಾಗದು' ಎನ್ನುವ ಡಿ.ಡಿ.ಕೋಸಂಬಿಯವರ ಮಾತು ಅರ್ಥಪೂರ್ಣವಾದುದು. ಬುಡಕಟ್ಟು ಮಹಿಳೆಯ ಬದುಕನ್ನು ಅರಿಯಬೇಕೆಂಬ ಹಂಬಲದ ಹಿನ್ನೆಲೆಯಲ್ಲಿ ಕೈಗೊಂಡ ಈ ಅಧ್ಯಯನದಲ್ಲಿ ಕೋಸಂಬಿಯವರ ವಿಚಾರದಂತೆಯೇ, ಮುಖ್ಯವಾಗಿ ಪ್ರಾಚೀನ ಮತ್ತು ವರ್ತಮಾನದ ಬದುಕನ್ನು ಕುರಿತು ಅರ್ಥೈಸಲು ಪ್ರಯತ್ನಿಸಲಾಗಿದೆ. ಹಲವು ಶತಮಾನಗಳಿಂದಲೂ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರು ಹಲವು ಬಗೆಯಲ್ಲಿ ಅಂಚಿಗೆ ಸರಿಯಲ್ಪಡುತ್ತಲೇ ಬಂದಿರುವುದು ನಮ್ಮೆಲ್ಲರಿಗೂ ತಿಳಿದ ವಿಷಯ. ಅದೇ ರೀತಿ ಹುಟ್ಟಿನಿಂದ ಇಂದಿನವರೆಗೆ ಒಂದಲ್ಲ ಒಂದು ರೀತಿಯಲ್ಲಿ ಹತ್ತಿರದ ಒಡನಾಟವನ್ನು ಹೊಂದಿದ ಬುಡಕಟ್ಟು ಮಹಿಳೆಯು ಯಾವ ಬಗೆಯ ಸ್ಥಾನಮಾನಗಳನ್ನು ಹೊಂದಿದ್ದಾಳೆ? ಮಹಿಳೆ ಕೌಟುಂಬಿಕ ಮತ್ತು ಸಾಮಾಜಿಕ ವಲಯದಲ್ಲಿ ಯಾವ ರೀತಿಯಲ್ಲಿ ಹಿನ್ನೆಲೆಗೆ ಸರಿಯಲ್ಪಡುತ್ತಾ ಬಂದಿದ್ದಾಳೆ ಎಂಬುದನ್ನು ಚರ್ಚಿಸಲಾಗಿದೆ.

ಭಾರತದ ಪ್ರತಿಯೊಂದು ಬುಡಕಟ್ಟು ಸಮುದಾಯಗಳು ಅತಂತ್ರ ಸ್ಥಿತಿಯಲ್ಲಿವೆ. ಹಿಂದೆ ಇದ್ದ ವಂಶ ಪರಂಪರಾ ಉತ್ಪಾದನಾ ಸಾಮರ್ಥ್ಯವು ಇವತ್ತಿನ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟು ಅನೇಕ ರೀತಿಯ ಪರಿವರ್ತನೆಗೆ ಕಾರಣೀಭೂತವಾಗಿವೆ. ಇಂತಹ ಸಮುದಾಯದಗಳಲ್ಲಿ ಅವುಗಳು ನಿರ್ವಹಿಸುವ ಕೆಲಸ ಕಾರ್ಯಗಳಿಂದಾಗಿ ಶ್ರೇಷ್ಠ, ಮಧ್ಯಮ ಹಾಗೂ ಕನಿಷ್ಟ ಎಂಬ ಸ್ವರೂಪದಲ್ಲಿ ಗುರುತಿಸಲ್ಪಟ್ಟಿವೆ. ಹೀಗೆ ಈ ಗುರುತಿಸುವಿಕೆಯ ಸಂಪ್ರದಾಯಗಳು ಬುಡಕಟ್ಟು ಸಮುದಾಯಗಳಲ್ಲಿ ಸಹ ಅದರ ಸಿಚ್ಚಳ ಪ್ರಭಾವ ಬೀರಿ ಇಡೀ ಗಿರಿಜನ ಸಮುದಾಯದ ಕೌಟುಂಬಿಕ ಸ್ವರೂಪವನ್ನೆ ರೂಪಾಂತರಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ ವಾಸಿಸುತ್ತಿರುವ ಬೇಡರು ಸಹ ಮುಖ್ಯವಾಹಿನಿ ಎಂದು ಕರೆಯಲ್ಪಡುವ ಸಮಾಜದಿಂದ ದೂರ ಉಳಿದಿಲ್ಲ. ತಮ್ಮ ಜೀವನಾವರ್ತನ ಹಾಗೂ ವಾಷಿಕಾವರ್ತನ ಆಚರಣೆಗಳಲ್ಲಿ ಮುಖ್ಯವಾಹಿನಿಯ ಸಾಮಾಜಿಕ ಮೌಲ್ಯಗಳು ಬೇಡರಲ್ಲಿ

ಅಂತರ್ಗತವಾಗಿವೆ. ಇದರಿಂದಾಗಿ ಬೇಡರ ಸಾಮಾಜಿಕ ಸಂರಚನೆ, ಆರ್ಥಿಕ ಮತ್ತು ರಾಜಕೀಯ ಕ್ರಿಯಾಶೀಲತೆಗಳನ್ನು ಬೇರೆಯಾಗಿ ಕಂಡುಕೊಳ್ಳಲು ಸಾಧ್ಯವಿಲ್ಲ. ಇದರ ಜೊತೆಗೆ ಬೇಡ ಬುಡಕಟ್ಟು ಸಮಾಜದ ಲಿಂಗಸಂಬಂಧಿ ವ್ಯವಸ್ಥೆಯನ್ನು ಪ್ರತ್ಯೇಕಿತ ಬುಡಕಟ್ಟಿನ ಸಾಮಾಜಿಕ ವ್ಯವಸ್ಥೆಯಾಗಿ ನೋಡಲು ಬರುವುದಿಲ್ಲ. ಏಕೆಂದರೆ ಸಾಮಾಜಿಕ ಬಾಹ್ಯ ಶ್ರೇಣೀಕರಣವಾಗಲಿ ಮತ್ತು ಆಂತರಿಕ ಶ್ರೇಣೀಕರಣವಾಗಲಿ ಮುಖ್ಯವಾಹಿನಿ ಸಮಾಜದಲ್ಲಿದ್ದಂತೆ ಇವರಲ್ಲಿ ಆಚರಣೆಯಲ್ಲಿದೆ. ಜೊತೆಗೆ ಹೊರಜಗತ್ತಿನ ಸಮಾಜದಲ್ಲಿದ್ದಂತೆ ಲಿಂಗತಾರತಮ್ಯತೆ ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಗಳು ಬೇಡರಲ್ಲಿಯೂ ಇವೆ. ಬೇಡರಲ್ಲಿ ಅಸಮಾನತೆಯ ಸ್ವರೂಪ ಮತ್ತು ತಾರತಮ್ಯ ವ್ಯವಸ್ಥೆಯು ಸೈದ್ಧಾಂತಿಕವಾಗಿ ಮುಖ್ಯವಾಹಿನಿಗಿಂತ ಭಿನ್ನವಾಗೇನು ಇಲ್ಲ. ಈ ಕಾರಣದಿಂದಾಗಿ ಬೇಡರ ಸಾಮಾಜಿಕ ಸಂರಚನೆಯನ್ನು ಪ್ರತ್ಯೇಕವಾಗಿ ನೋಡುವ ಅಗತ್ಯವಿಲ್ಲ.

ಸಮಾಜ ಮತ್ತು ಕುಟುಂಬದಲ್ಲಿರುವ ಲಿಂಗಸಂಬಂಧಿ ಅಸಮಾನತೆಯ ನಿವಾರಣೆಗೆ ಮತ್ತು ಸಮಾನತೆಯ ಸಮಾಜ ರೂಪುಗೊಳ್ಳಲು ಸಮಾಜದ ಎಲ್ಲ ದುರ್ಬಲ ಪಂಗಡಗಳು ಮತ್ತು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಮತ್ತು ಸಂಪತ್ತು ಸಮಾನ ಹಂಚಿಕೆಯಾಗಬೇಕು ಎಂಬ ವಾದವು ಜನಪ್ರಿಯವಾಗಿದೆ. ಮೇಲ್ನೋಟಕ್ಕೆ ಇದು ಸರಿಕೂಡ ಹೌದು. ಮಹಿಳೆಯು ಪುರುಷನಂತೆ ಸಮಾಜದ ಎಲ್ಲಾ ವಲಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢವಾದಾಗ ಮಾತ್ರ ನಮ್ಮ ಸಮಾಜದಲ್ಲಿ ಲಿಂಗ ತಾರತಮ್ಯವು ನಶಿಸಿಹೋಗುತ್ತದೆ ಎಂದು ನಂಬಲಾಗಿದೆ. ಇದು ಆಂಶಿಕ ಸತ್ಯಮಾತ್ರ.

ಬೇಡ ಬುಡಕಟ್ಟು ಸಮಾಜದಲ್ಲಿ ಮಹಿಳೆಯು ಪುರುಷನಷ್ಟೆ ಅಥವಾ ಅವನಿಗಿಂತ ಹೆಚ್ಚು ಶ್ರಮಿಸುತ್ತಾಳೆ. ಇಡೀ ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆ ಪ್ರಮುಖವಾದ ಪಾತ್ರವಹಿಸುತ್ತಾಳೆ. ಪುರುಷನಷ್ಟೇ ಜಾಣತನ ಮತ್ತು ದೈಹಿಕ ಬಲವನ್ನು ವಿನಿಯೋಗಿಸಿದರು ಸಹ ಶ್ರಮಿಸಿದಂತಹ ಫಲಿತದ ಮೇಲೆ ಮಹಿಳೆಗೆ ಯಾಥ ಹಕ್ಕು ಇಲ್ಲ. ಜೊತೆಗೆ ಕುಟುಂಬ ನಿರ್ವಹಣೆಯಲ್ಲೂ ತನ್ನ ವಿಧೇಯತೆ, ಸಹನೆಗಳಿಂದ ತೊಡಗಿಕೊಂಡರೂ ಸಹ ಬೇಡರ ಮಹಿಳೆ ಪರಾಧೀನಳಾಗಿಯೇ ಜೀವಿಸುತ್ತಿದ್ದಾಳೆ. ಇದರಿಂದಾಗಿ ಆರ್ಥಿಕ ಸ್ವಾವಲಂಬನೆಯೂ ಅಂತಿಮವಾಗಿ ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ದೊರಕಿಸಿಕೊಡುತ್ತದೆ ಎಂದು ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ಅಸಮಾನತೆಯ ಸ್ವರೂಪ ಕೇವಲ ಆರ್ಥಿಕ ಪರಾವಲಂಬಿತನಕ್ಕೆ ಮಾತ್ರ ಅನ್ವಯಿಸಿದ ಸಂಗತಿಯಲ್ಲ. ಅದನ್ನೂ ಒಳಗೊಂಡಂತೆ ಸಾಂಸ್ಕೃತಿಕ ಮತ್ತು ರಾಜಕೀಯ ವಿಷಯಗಳಿಗೂ ಸಂಬಂಧಿಸಿದೆ. ಏಕೆಂದರೆ ಭಾರತದಂತ ದೇಶದಲ್ಲಿ ಶೋಷಿಸುವಂತಹ ಹಲವಾರು ಮುಖಗಳು ಅತೀ ಹೆಚ್ಚು ಸಂಕೀರ್ಣವಾಗಿವೆ. ಅದರ ಜೊತೆಗೆ ಕಾಲದಿಂದ ಕಾಲಕ್ಕೆ ಈ ಮುಖಗಳ ಸ್ವರೂಪ ಮತ್ತು ತೀವ್ರತೆಯಲ್ಲಿ ಅನೇಕ ಲಿಂಗಸಂಬಂಧಿ ಅಸಮಾನತೆಗಳು ಭಾರತದ ಬಹುಮುಖೀ ಶ್ರೇಣೀಕರಣ ಮತ್ತು ಅಸಮಾನ ವ್ಯವಸ್ಥೆಗಳು ಇಲ್ಲಿ ಜೀವಿಸುತ್ತಿರುವ ವೈವಿಧ್ಯಮಯ ಸಮಾಜಗಳಲ್ಲಿ ಅತ್ಯಂತ

ಸಂಕೀರ್ಣಗೊಂಡು ಅಂತರ್ಗತವಾಗಿವೆ. ಹಾಗೂ ಇಲ್ಲಿರುವಂತಹ ಶ್ರೇಣೀಕರಣ ಮತ್ತು ಅಸಮಾನ ವ್ಯವಸ್ಥೆಗಳು, ದಿನವಿಡಿ ದುಡಿವ ವರ್ಗ ಮತ್ತು ಮಹಿಳೆಯರನ್ನು ಪ್ರಮುಖ ವಸ್ತುಗಳನ್ನಾಗಿ ಪರಿಭಾವಿಸಿವೆ. ವಸ್ತುಗಳೆಂದರೆ ಜೀವವಿಲ್ಲದ, ಸಂವೇದನೆ ಮತ್ತು ಭಾವನೆಗಳೇ ಇಲ್ಲದ ಕೇವಲ ಬಳಸಲ್ಪಡುವ ಉಪಕರಣಗಳಂತೆ ನಮ್ಮ ಬೇಡ ಸಮುದಾಯದ ಮಹಿಳೆಯರು ಪರಿಗಣಿಸಲ್ಪಟ್ಟಿದ್ದಾರೆ. ಇದಕ್ಕೆ ನಮ್ಮ ದೇಶದ ಪಾರಂಪರಿಕ, ಸನಾತನ ಸಮಾಜದ ಮೂಲಭೂತ ನಿಯಮಗಳೇ ಕಾರಣ. ಮಹಿಳೆಯ ಅತ್ಯಂತ ಮೂಲಭೂತ ಸಮಸ್ಯೆ ಸಾಮಾಜಿಕಾರ್ಥಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾಗಿದೆ. ಇದನ್ನೆ ಈ ದೇಶದ ಎಲ್ಲ ಬಗೆಯ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯಗಳನ್ನು ನಿರಾಕರಿಸುತ್ತಾ ಬಂದಿವೆ.

ಆಧುನಿಕತೆಯ ಮುಂದುವರೆದ ರೂಪವಾದ ಜಾಗತೀಕರಣದಿಂದಾಗಿ ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ವಸ್ತು ಸ್ವರೂಪವಾಗಿ ಬದಲಾಗಿವೆ. ಅದರಲ್ಲಿ ಮಹಿಳೆಯೂ ಕೂಡ, ಇದರಿಂದ ಸಮಯ ಸಂದರ್ಭಕ್ಕೆ ಅನುಸಾರವಾಗಿ ಲಿಂಗತ್ವರಾಜಕಾರಣಕ್ಕೆ ಒಳಪಡುತ್ತಿದ್ದಾಳೆ. ಇಂತಹ ಬಿಕ್ಕಟ್ಟಿನಿಂದ ಪಾರಾಗುವುದು ಮಹಿಳೆಗೆ ಅತ್ಯಂತ ಕಷ್ಟಕರವಾಗಿದೆ. ಅದರ ಜೊತೆಗೆ ಪುರುಷ ಪ್ರಾಧಾನ್ಯ ಸಮಾಜವು ಜೈವಿಕತೆ ಆಧಾರದ ಮೇಲೆ ಹೆಣ್ಣು ಗಂಡು ಎಂಬ ಮಾರುಕಟ್ಟೆಯ ಸ್ವರೂಪದಲ್ಲಿ ಪೈಪೋಟಿಗಳಿದು ಬಿಟ್ಟಿದೆ. ಇಂತಹ ಸನ್ನಿವೇಶಗಳಿಂದ ಮಹಿಳೆಯ ಸ್ಥಾನಮಾನಗಳಲ್ಲಿ ಹಲವು ರೀತಿಯ ಸ್ಥಿತ್ಯಂತರಗಳು ಉಂಟಾಗಿ ಸಮಾನತೆ, ಸಹಭಾಗಿತ್ವ ಇತರೆಲ್ಲ ಅವಕಾಶಗಳು ಮಹಿಳೆ ಪಾಲಿಗೆ ಬಹುದೂರವಾಗುತ್ತಿವೆ. ನಮ್ಮ ಸಮಾಜದ ವ್ಯವಸಾಯ ಕ್ಷೇತ್ರದ ರೈತ ಸಮುದಾಯದಲ್ಲಿ ಸ್ತ್ರೀ ಪುರುಷರಿಗೆ ವಿಶಿಷ್ಟವೆಂದು ಗುರುತಿಸಲಾದ ಸ್ಪಷ್ಟಶ್ರಮ ವಿಭಜನೆ ಇದೆ. ಈ ವಿಭಜನೆ ಮನೆಯ ಒಳಗೂ ಮತ್ತು ಹೊರಗೂ ಅನ್ವಯವಾಗುತ್ತದೆ. ಇದರಲ್ಲೂ ಸಹ ಲಿಂಗತ್ವದ ಅನ್ವಯ ಈ ಕೆಲಸವನ್ನು ಮಹಿಳೆಯೇ ಮಾಡಬೇಕು. ಅದು ಅವಳ ಕರ್ತವ್ಯವೆಂದು ಬಿಂಬಿಸುವ ಹುನ್ನಾರ ಎದ್ದುಕಾಣುತ್ತದೆ. ಎಲ್ಲಾ ಸಮುದಾಯಗಳಲ್ಲಿ ಮಹಿಳೆಯ ಪಾಲಿನ ಕೆಲಸ ಮುಖ್ಯವಾಗಿ ಅಡಿಗೆ ಮಾಡುವುದು, ಬಡಿಸುವುದೇ ಆಗಿದೆ. ಅಡಿಗೆ ಕೆಲಸವೆಂದರೆ ಅದು ಕಾಳುದಾನ್ಯಗಳನ್ನು ಚೊಕ್ಕ (ಹಸನು) ಮಾಡುವುದು, ಕುಟ್ಟುವುದು, ಕೇರುವುದು, ಬೀಸುವುದು, ನೀರು ಹೊರುವುದು, ಉರುವಲು (ಸೌದೆ)ಹೊಂದಿಸಿಕೊಳ್ಳುವುದು ಇತರೆ ಎಲ್ಲವನ್ನೂ ಒಳಗೊಳ್ಳುತ್ತದೆ. ಇನ್ನು ದನ ಕರು, ಮಕ್ಕಳು ಮರಿ, ಅತಿಥಿ, ಅಭ್ಯಾಗತರು, ಆಳುಕಾಳುಗಳು, ಹಬ್ಬ ಹರಿದಿನಗಳು ಇಂತಹ ಬೇಕಾದಷ್ಟು ನಿರ್ವಹಣೆಗಳಂತೂ ಇದ್ದೇ ಇರುತ್ತವೆ. ಇವೆಲ್ಲದರ ಜೊತೆಗೆ ಜಮೀನಿನ ಕೆಲಸಗಳಿಗೂ ಅವಳು ಹೋಗಬೇಕು. ಬಿತ್ತನೇ ಸಮಯದಲ್ಲಿ ಮದ್ಯರಾತ್ರಿಯಲ್ಲೇ ಎದ್ದು ಮನೆಯ ಕೆಲಸಗಳನ್ನು ಮುಗಿಸಿಬಿಟ್ಟು, ವಿಶ್ರಾಂತಿ ಇರದೇ ಬಿತ್ತನೆ ಕೆಲಸಕ್ಕೆ ತಯಾರಾಗಬೇಕು. ಸಂಜೆ ಮನೆಗೆ ಬಂದು ಮತ್ತೆ ಅಡಿಗೆ ಕೆಲಸಗಳಲ್ಲಿ ತೊಡಗಬೇಕು. ಒಟ್ಟಿನಲ್ಲಿ ಮಹಿಳೆ ಪಾಲಿಗೆ ಬಿಡುವಿನ ವೇಳೆಯೆಂದೇನಿಲ್ಲ.

ಬೇಡ ಬುಡಕಟ್ಟು ಸಮುದಾಯದಲ್ಲಿ ಕೂಡ ಮೇಲ್ ಜಾತಿಯರ ಕೆಲವೊಂದು ಅಂಶಗಳು ಗೋಚರವಾಗುತ್ತವೆ. ಅದರಲ್ಲಿ ಮಹಿಳೆ ಮತ್ತು ಪುರುಷ ಸಂಬಂಧವೆಂಬುದು ತೀವ್ರತರ ಅಸಮಾನತೆಯನ್ನು ಪ್ರತಿನಿಧಿಸುವುದು. ಹೆಣ್ಣು ಮದುವೆಗೆ ಮುಂಚೆ ಶುದ್ಧ ಕನ್ನಿಕೆಯಾಗಿರಬೇಕು. ಮದುವೆಯಾದ ನಂತರ ಅದೆಂಥದೇ ಸಂದರ್ಭದಲ್ಲೂ ಪತಿಯನ್ನು ದೂರಮಾಡುವಂತಿಲ್ಲ. ಇನ್ನು ಆಕಸ್ಮಿಕವಾಗಿ ವಿಧವೆಯಾಗಿ ಬಿಟ್ಟರಂತೂ ಅವಳಿಗೆ ಅವನಿಂದ ಬಿಡುಗಡೆ ಇಲ್ಲ. ಅವನ ನೆನಪಿನಲ್ಲೇ ತನ್ನ ಸುಖ ಸರ್ವಸ್ವವನ್ನು ತ್ಯಾಗಮಾಡಿ ಪ್ರತಿನಿತ್ಯದ ಸಂತೋಷದ ಅಲಂಕಾರಗಳನ್ನೂ ತೆಗೆದುಹಾಕಿ ಬಿಡಬೇಕು ಇನ್ನುಳಿದ ಬಾಳಿನುದ್ದಕ್ಕೂ ಅಪವಿತ್ರಳೆನಿಸಿ ದಿನಗಳೆಯುವುದು ಅವಳ ಹಣೆ ಬರಹ ಎಂಬ ನಂಬಿಕೆ ಇವರಲ್ಲಿದೆ.

ಇವತ್ತಿನ ಸ್ವಾತಂತ್ರ್ಯ ಸಂದರ್ಭದಲ್ಲಿಯೇ ಹೆಣ್ಣು ಮತ್ತು ಗಂಡು ಮಕ್ಕಳ ಬಗೆಗಿನ ನಮ್ಮ ಸಾಮಾಜಿಕ ಅಭಿಪ್ರಾಯಗಳಿಂದಾಗಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸುವುದೇನೂ ಸಹಜದ ಮಾತಲ್ಲ. ಇಂದಿಗೂ ಶಿಕ್ಷಣ, ಉದ್ಯೋಗಗಳಲ್ಲಿ ಮಹಿಳೆಯರ ಪ್ರವೇಶ, ಸಾಧನೆಗಳೂ ಅಷ್ಟೇನೂ ತೀವ್ರವಾಗಿಲ್ಲವೆಂಬುದು ಅಂಕಿ ಅಂಶಗಳು ತೋರಿಸಬಲ್ಲವು. ಆದರೂ ಮಹಿಳೆಯ ಸ್ಥಿತಿಗತಿಗಳಲ್ಲಿ ಕಾಣುತ್ತಿರುವ ಮೇಲು ಚಲನೆ ನಿರ್ಲಕ್ಷಿಸುವಂಥದ್ದೂ ಅಲ್ಲ.

ಫಲಿತಗಳು

೧. ಯಾವಾಗ ವರ್ಗಸಮಾಜ ನಿರ್ಮಾಣವಾಗಿ ಖಾಸಗಿ ಆಸ್ತಿಯ ಹಿನ್ನೆಲೆಯಲ್ಲಿ ಕುಟುಂಬಗಳು ಅಸ್ತಿತ್ವಕ್ಕೆ ಬಂದವೋ ಆಗ ಮಹಿಳೆಗಿದ್ದ ಅಧಿಕಾರಿಯುತ ಸ್ಥಾನಮಾನಗಳೆಲ್ಲ ಪುರುಷನ ವಶವಾದವು.

೨. ಆದಿಮ ಜನರು ಹೆಣ್ಣಿನಲ್ಲಿರುವ ಜೈವಿಕ ಶಕ್ತಿಯೇ ಪ್ರಕೃತಿಯ ಪ್ರಕ್ರಿಯೆಗಳಿಗೂ ಪ್ರಮುಖ ಕಾರಣ ಎಂದು ಭಾವಿಸಿರುವುದರಿಂದ ಹೆಣ್ಣಿನ ಸ್ವರೂಪದಲ್ಲಿ ದೈವವನ್ನು ಆರಾಧಿಸುವ ಸಂಪ್ರದಾಯ ಬೆಳೆದು ಬಂದಿತು. ಈ ಕಾರಣಕ್ಕಾಗಿಯೇ ಬುಡಕಟ್ಟು ಜನರು ಇಂದಿಗೂ ದೈವ ರೂಪದಲ್ಲಿ ಆರಾಧಿಸುವ ಬಹುಪಾಲು ದೈವಗಳು ಹೆಣ್ಣು ದೈವಗಳೇ ಆಗಿವೆ.

೩. ಕಲ್ಲುನಾಗರ ಕಂಡರೆ ಹಾಲು ಎರೆಯುವಂತೆ ನಿಜ ನಾಗರ ಕಂಡರೆ ಹೊಡೆದು ಹಾಕುವ ನಂಬಿಕೆಯಂತೆ ಹೆಣ್ಣು ದೈವಗಳಿಗೆ ಭಯ ಭೀತಿಯಿಂದ ಪ್ರಾಣಿ ಬಲಿ ನೀಡುವವರು, ತಮ್ಮ ಒಡನಾಡಿಯಾಗಿರುವ ಮಹಿಳೆಯನ್ನು ಕುರಿತು ಭಯ ಪಡದೇ ನಿಯಂತ್ರಣದಲ್ಲಿರಿಸಿದ್ದಾರೆ.

೪. ಭೂಮಿ ಹೊಂದಿದ ಕುಟುಂಬದಲ್ಲಿ ಎಲ್ಲರಿಗೂ ಭೂ ಒಡೆತನವಿರುವುದಿಲ್ಲ, ಬಹುಪಾಲು ಭೂಮಿಯ ಒಡೆತನ ಮನೆಯ ಮುಖ್ಯಸ್ಥನದು ಅಥವಾ ಪುರುಷನದೇ ಆಗಿದೆ. ಭೂ ಒಡೆತನ ಹೊಂದಿದವರಲ್ಲಿ ಮಹಿಳೆಯರಿಗಿಂತ ಪುರುಷರ ಸಂಖ್ಯೆಯೇ ಅಧಿಕವಾಗಿರುತ್ತದೆ.

೫. ಒಂದು ವೇಳೆ ಮಹಿಳೆಯರ ಹೆಸರಿನಲ್ಲಿ ಭೂ ಒಡೆತನ ಇದ್ದಾಗಲೂ ಅದು ಪುರುಷ ಹಿತಾಸಕ್ತಿಗನುಗುಣವಾಗಿಯೇ ಬಳಕೆಯಾಗುತ್ತದೆ. ಅಥವಾ ಅದರ ಮೇಲಿನ ನಿರ್ಣಾಯಕ ಹಕ್ಕು ಬಹುಪಾಲು ಪುರುಷನದೇ ಆಗಿರುತ್ತದೆ.

೬. ಸಂವಿಧಾನದಲ್ಲಿ ಮಹಿಳೆಗೆ ಆಸ್ತಿಯ ಹಕ್ಕನ್ನು ಕೊಡಮಾಡಿದಾಗಲೂ ಅದರ ವಾಸ್ತವ ಸ್ವರೂಪವೇ ಬೇರೆಯಾಗಿದೆ. ಈ ರೀತಿ ಕೊಡಮಾಡಲ್ಪಟ್ಟ ಆಸ್ತಿಯ ಹಕ್ಕಿನಿಂದ ಮಹಿಳೆಯರನ್ನು ಕೆಲವೊಮ್ಮೆ ಮತ್ತಷ್ಟು ಸಂಕಷ್ಟಕ್ಕೆ ಈಡು ಮಾಡಲಾಗುತ್ತಿದೆ.

೭. ಮಹಿಳೆ ಮನೆಯಲ್ಲಿ ಸರ್ವ ರೀತಿಯ ಕೆಲಸ ಮಾಡಿದರೂ ಅದು ಕೆಲಸ ಅಥವಾ ದುಡಿಮೆ ಎಂದು ಪರಿಗಣಿಸದೆ ಮಹಿಳೆ ಕುಟುಂಬಕ್ಕೆ ಮಾಡುವ ಸೇವೆ ಅಥವಾ ಕರ್ತವ್ಯಗಳಾಗಿ ನಿರ್ಧರಿಸಲ್ಪಡುತ್ತವೆ.

೮. ಕೃಷಿ ವಲಯದಲ್ಲಿ ಶ್ರಮವಹಿಸಿ ದುಡಿಯುತ್ತಿರುವ ಕೃಷಿ ಕಾರ್ಮಿಕರಲ್ಲಿ ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರ ಸಂಖ್ಯೆಯೇ ಅಧಿಕವಾಗಿರುವುದು.

೯. ಕೆಲವು ಮಹಿಳೆಯರಿಗೆ ತಾವು ಸಂಪಾದಿಸಿದ ಕೂಲಿಯನ್ನು ಖರ್ಚುಮಾಡುವ ಅಧಿಕಾರ ಇರುವುದಿಲ್ಲ. ಹಾಗೆ ಅಧಿಕಾರ ಇರುವ ಮಹಿಳೆಯರು ತಮ್ಮ ಸಂಪಾದನೆಯನ್ನು ಮನೆಯ ನಿರ್ವಹಣೆಗಾಗಿಯೇ ವ್ಯಯ ಮಾಡುವುದು ತಿಳಿದು ಬರುತ್ತದೆ.

೧೦. ಮನೆಯಲ್ಲಿ ಮತ್ತು ಹೊಲದಲ್ಲಿ ಎರಡೂ ಕಡೆ ದುಡಿದರೂ ಕೆಲವು ಮಹಿಳೆಯರು ಪುರುಷರಿಂದ ಮಾನಸಿಕ ಮತ್ತು ದೈಹಿಕ ಹಿಂಸೆಗೆ ಒಳಗಾಗುತ್ತಿರುವುದರಿಂದ ಅವರ ಬದುಕಿಗೆ ನೆಮ್ಮದಿಯೆಂಬುದು ಇರುವುದಿಲ್ಲ.

೧೧. ಇಂದು ಮಹಿಳೆಯು ಬಹುಪಾಲು ದುಡಿಮೆ ಅಪಮೌಲ್ಯಕ್ಕೆ ಒಳಗಾಗುತ್ತಿದೆ. ಮತ್ತು ಆಕೆಯ ಶ್ರಮವನ್ನು ಅದೃಶ್ಯಗೊಳಿಸಲಾಗುತ್ತಿದೆ. ಇದರಿಂದ ಮಹಿಳೆಗೆ ಸಿಗಬೇಕಾಗಿದ್ದ ಸ್ಥಾನಮಾನಗಳು ಸಿಗದೆ ಹೋಗಿವೆ.

೧೨. ಮೇಲ್‌ಜಾತಿಯ ಮಹಿಳೆಯರು ಇಂದು ಕೇಂದ್ರ ವ್ಯಕ್ತಿಯಾಗಿದ್ದು ವಿಭಿನ್ನ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದರಲ್ಲಿ ಬುಡಕಟ್ಟು ಮಹಿಳೆ ಮರೆಯಾಗಿದ್ದಾಳೆ.

೧೩. ಬೇಡ ಸಮುದಾಯದೊಳಗೆ ಮಹಿಳೆಯರಿಗೆ ಹೆಚ್ಚಿನ ಗೌರವ ಮನ್ನಣೆ ನೀಡಲಾಗುತ್ತದೆ.

೧೪. ಕುಟುಂಬದ ಹೊಣೆಗಾರಿಕೆಯಲ್ಲಿ ಮತ್ತು ಮಕ್ಕಳ ಲಾಲನೆ ಪಾಲನೆಯಲ್ಲಿ ಮಹಿಳೆಯರೇ ಹೆಚ್ಚು ಹೊಣೆಗಾರಿಕೆ ಹೊಂದಿದ್ದಾರೆ.

೧೫. ಬೇಡ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.

೧೬. ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಕೊನೆ ಸಾಲಿನಲ್ಲಿದ್ದಾರೆ.

೧೭. ಬೇಡ ಸಮುದಾಯದ ಮಹಿಳೆಯರು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

೧೮. ಪುರುಷನ ಸರಿಸಮಾನ ದುಡಿದರೂ ಸಹ ಕೂಲಿಯಲ್ಲಿನ ತಾರತಮ್ಯತೆ ಅನುಭವಿಸುತ್ತಿದ್ದಾಳೆ.

೧೯. ಬೇಡ ಸಮುದಾಯದಲ್ಲಿ ಕೆಲವು ಮಹಿಳೆಯರು ಶಿಕ್ಷಣವನ್ನು ಪಡೆದುಕೊಂಡು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಸ್ಥರಾಗಿ ಆರ್ಥಿಕಯಾಗಿ ಉತ್ತಮವಾಗಿರುವುದು ಕಂಡುಬರುತ್ತದೆ.

೨೦. ಮಹಿಳೆಯರು ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

೨೧. ಸರ್ಕಾರದ ಯೋಜನೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಮಹಿಳೆಯರು ವಿಫಲವಾಗಿದ್ದಾರೆ.

೨೨. ಇವತ್ತಿನವರೆಗೂ ರಾಜಕೀಯ ಮೀಸಲಾತಿ ಎನ್ನುವುದು ಪುರುಷರ ಪಾಲಿಗೆ ವರದಾನವಾಗಿದೆ, ಮಹಿಳೆಯರು ಮಾತ್ರ ಪಂಚಾಯತಿ ಹಂತಕ್ಕೆ ಕೊನೆಗೊಂಡು ಮುಂದಿನ ರಾಜ್ಯ ರಾಜಕಾರಣದಲ್ಲಿ ಎಂ.ಎಲ್.ಎ., ಎಂ.ಪಿ. ಆಗಿರುವಂತಹ ಉದಾಹರಣೆಗಳು ಕಡಿಮೆ ಎಂದು ಹೇಳಬಹುದು.

೨೩. ಕರ್ನಾಟಕದಲ್ಲಿರುವ ಪರಿಶಿಷ್ಟ ಪಂಗಡದ ಮೀಸಲಾತಿ ಅನ್ವಯ ಪುರುಷರು ಮಾತ್ರ ವಿಧಾನಸೌಧ ಪ್ರವೇಶ ಮಾಡಿದ್ದಾರೆ. ಅದರಲ್ಲೂ ಮಹಿಳೆಯರಿಗೆ ಪ್ರವೇಶವಿಲ್ಲದಂತಾಗಿದೆ.

ಸಲಹೆಗಳು

೧. ಮಹಿಳೆಯರಿಗಾಗಿ ಇರುವ ಯೋಜನೆಗಳು ಅವರಿಗೆ ತಲುಪುವಂತೆ ಸರ್ಕಾರ ನೋಡಿಕೊಳ್ಳಬೇಕು.

೨. ಮಹಿಳೆಯರಿಗೆ ವಿದ್ಯಾಭ್ಯಾಸದ ಕಡೆಗೆ ಒಲವು ಮೂಡುವಂತೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿಕ್ಷಿತರನ್ನಾಗಿ ಮಾಡುವುದು.

೩. ಬೇಡ ಸಮುದಾಯದ ಮಹಿಳೆಯರು ಸ್ವಾಲಂಬಿಯಾಗಿ ಮತ್ತು ಸ್ವತಂತ್ರವಾಗಿ ಬದುಕಲು ವಿಶೇಷ ಉದ್ಯೋಗಗಳ ತರಬೇತಿ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರ ಮತ್ತು ಸಮುದಾಯದ ನಡುವೆ ಕೊಂಡಿಯಾಗಿ ಸರ್ಕಾರದ. ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಂದಾಗುವುದು.

೪. ಆರೋಗ್ಯದ ಬಗ್ಗೆ ಕಾಳಜಿವಹಿಸಿಕೊಳ್ಳುವಂತೆ ತಿಳಿ ಹೇಳುವುದು ಮತ್ತು ಉಚಿತ ಶುಶ್ರೂಶೆ ನೀಡಬೇಕು. ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ವಿತರಿಸುವುದು.

೫. ಸಮುದಾಯದ ಕಲಾವಿದರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಗೌರವಾಧಾರಗಳನ್ನು ನೀಡಿ ಅವರಿಗೆ ಮಾಷಾಸನ ದೊರೆಯುವಂತೆ ಮಾಡಬೇಕು.

೬. ಮಾಹಿತಿ ಹಕ್ಕನ್ನು ಚಲಾಯಿಸುವಂತೆ ಮಾಹಿತಿ ನೀಡಬೇಕು.

೭. ಸಂವಿಧಾನಾತ್ಮಕವಾಗಿ ಹಾಗೂ ಸರ್ಕಾರದಲ್ಲಿರುವ ಮೀಸಲಾತಿ, ಸೌಲಭ್ಯ, ಯೋಜನೆ ಇತ್ಯಾದಿಗಳ ಬಗ್ಗೆ ಮಾಹಿತಿಗಾಗಿ ಆಗಾಗ್ಗೆ ಸಮ್ಮೇಳನ ಏರ್ಪಡಿಸುವುದು.

ತಿಳುವಳಿಕೆದಾರರ ಸೂಚಿ

ಹೆಸರು	ವಯಸ್ಸು	ಶಿಕ್ಷಣ	ವೃತ್ತಿ	ಊರು	ತಾಲೂಕು	ಜಿಲ್ಲೆ
ಹನಮಂತಿ ಗಂಡ ಜಟ್ಟೆಪ್ಪ	೨೯	.....	ಕೂಲಿ	ದೇವಪುರ	ಸುರಪುರ	ಗುಲಬರ್ಗಾ
ಸರಸ್ವತಿ ಗಂಡ ದೇವೀಂದ್ರಪ್ಪ ಚಿನ್ನೂರು	೩೦	೭ನೇ ತರಗತಿ	ಬಡಿಗೆತನ	ನಗನೂರು	ಸುರಪುರ	ಗುಲಬರ್ಗಾ
ಗಂಗಮ್ಮ ಗಂಡ ಭೀಮರಾಯ ದೊರೆ	೨೬	....	ಕೃಷಿಕೂಲಿ	ಹಂಬ್ಲಿಹಾಳ	ಸುರಪುರ	ಗುಲಬರ್ಗಾ
ಯಂಕಮ್ಮ ಗಂಡ ಹಣಮಗೌಡ	೪೦	.....	ಕೃಷಿಕೂಲಿ	ಪೇಠಅಮ್ಮಾಪುರ	ಸುರಪುರ	ಗುಲಬರ್ಗಾ
ಸೀತಮ್ಮ ಗಂಡ ಬಾಲದಂಡಪ್ಪಗೌಡ	೫೦	....	ಕೃಷಿಕೂಲಿ	ವಾಗನಗೇರಿ	ಸುರಪುರ	ಗುಲಬರ್ಗಾ
ಗಂಗಮ್ಮಾ ಗಂಡ ನೀಲಕಂಠರಾವದೇಸಾಯಿ	೪೭	....	ಕೃಷಿ	ದೋರನಹಳ್ಳಿ	ಶಾಹಪುರ	ಗುಲಬರ್ಗಾ
ಚಂದಮ್ಮ ಗಂಡ ಹಣಮಂತ	೪೫	....	ಕೃಷಿ	ನಾಗನಟಗಿ	ಶಾಹಪುರ	ಗುಲಬರ್ಗಾ
ಮಾನಮ್ಮ ಗಂಡ ದೇವಿಂದ್ರಪ್ಪ	೩೬	....	ಕೃಷಿಕೂಲಿ	ವನದುರ್ಗ	ಶಾಹಪುರ	ಗುಲಬರ್ಗಾ
ನೀಲಮ್ಮ ಗಂಡ ಶಿವಮಾನಪ್ಪ	೧೭	೪ನೇ ತರಗತಿ	ಕೃಷಿಕೂಲಿ	ಮುಡಬೂಳ	ಶಾಹಪುರ	ಗುಲಬರ್ಗಾ
ಲಕ್ಷ್ಮೀಬಾಯಿ ಗಂಡ ಜಗನ್ನಾಥ	೩೦	....	ಕೃಷಿಕೂಲಿ	ಮುಡುಬೂಳ	ಶಾಹಪುರ	ಗುಲಬರ್ಗಾ
ಶಿವಮ್ಮ ಗಂಡ ಹಣಮಂತ	೫೦	....	ಕೂಲಿ	ಯಾದಗಿರಿ	ಯಾದಗಿರಿ	ಗುಲಬರ್ಗಾ
ಸಾಬಮ್ಮ ಗಂಡ ದ್ಯಾವಣ್ಣ	೫೦	....	ಕೃಷಿ	ಯಾದಗಿರಿ	ಯಾದಗಿರಿ	ಗುಲಬರ್ಗಾ
ಉಮಾದೇವಿ ಗಂಡ ಮಲ್ಲಪ್ಪ	೩೫	....	ಕೃಷಿ	ಯಾದಗಿರಿ	ಯಾದಗಿರಿ	ಗುಲಬರ್ಗಾ
ಮರೆಮ್ಮ ಗಂಡ ಹಣವಂತ	೩೦	....	ಕೂಲಿ	ಮುಷ್ಟರು	ಯಾದಗಿರಿ	ಗುಲಬರ್ಗಾ
ನಾಗರತ್ನ ಗಂಡ ಶಿವಪ್ಪ	೧೭	೫ನೇ ತರಗತಿ	ಕೃಷಿ	ಮಸ್ಕನಳ್ಳಿ	ಯಾದಗಿರಿ	ಗುಲಬರ್ಗಾ

ವಿಜಯಲಕ್ಷ್ಮಿ ಗಂಡ ಶರಣಪ್ಪ	೩೨	೪ನೇ ತರಗತಿ	ಕೂಲಿ	ಭೈರಂಪಲಿ	ಚಿಂಚೋಳಿ	ಗುಲಬರ್ಗಾ
ತಿಪ್ಪಮ್ಮ ಗಂಡ ಸಾಬಣ್ಣ	೪೨	....	ಕೂಲಿ	ನಾವದಗಿ	ಚಿಂಚೋಳಿ	ಗುಲಬರ್ಗಾ
ಶರಣಮ್ಮ ಗಂಡ ತಿಪ್ಪಯ್ಯ	೪೬	....	ಕೂಲಿ	ನಿಡುಗುಂದ	ಚಿಂಚೋಳಿ	ಗುಲಬರ್ಗಾ
ಭೀಮವ್ವ ಗಂಡ ಯಂಕಪ್ಪ	೪೮	....	ಕೂಲಿ	ಪಾಸ್ತಪುರ	ಚಿಂಚೋಳಿ	ಗುಲಬರ್ಗಾ
ಗುಂಜಲಮ್ಮ ಗಂಡ ನಿಂಗಪ್ಪ	೪೫	....	ಕೂಲಿ	ಬೇಡಗಪಲ್ಲಿ	ಚಿಂಚೋಳಿ	ಗುಲಬರ್ಗಾ
ಪಾರ್ವತೆಮ್ಮ ಗಂಡ ಹಣಮಂತ	೪೩	....	ಕೂಲಿ	ಚಿಂತಕುಂಟ	ಚಿತ್ತಾಪೂರ	ಗುಲಬರ್ಗಾ
ಅನಂತಮ್ಮ ಗಂಡ ನರಸಪ್ಪ	೪೦	....	ಕೂಲಿ	ಗೌಡನಹಳ್ಳಿ	ಚಿತ್ತಾಪುರ	ಗುಲಬರ್ಗಾ
ಲಕ್ಷ್ಮಮ್ಮ ಗಂಡ ಮಹಾದೇವಪ್ಪ	೩೭	....	ಕೂಲಿ	ಕಲ್ಲೂರು	ಚಿತ್ತಾಪುರ	ಗುಲಬರ್ಗಾ
ಮಲ್ಲಮ್ಮ ಗಂಡ ಭೀಮಣ್ಣ	೩೯	....	ಕೂಲಿ	ಐನೊಳ್ಳಿ	ಚಿತ್ತಾಪುರ	ಗುಲಬರ್ಗಾ
ಲಚಮ್ಮವ್ವ ಗಂಡ ಹಣಮಂತರಾಯ	೩೫	....	ಕೂಲಿ	ರಜೋಲ	ಚಿತಾಪುರ	ಗುಲಬರ್ಗಾ
ರೇಣುಕಮ್ಮ ಗಂಡ ಹಣಮಯ್ಯ	೪೫	....	ಕೂಲಿ	ಹಯ್ಯಾಲ	ಸೇಡಂ	ಗುಲಬರ್ಗಾ
ದ್ಯಾವಮ್ಮ ಗಂಡ ಮಲ್ಲಯ್ಯ	೪೦	....	ಕೂಲಿ	ಸೋಮಪಲ್ಲಿ	ಸೇಡಂ	ಗುಲಬರ್ಗಾ
ಲಲಿತ ಗಂಡ ಬಸವರಾಜ	೨೭	....	ಕೂಲಿ	ರಂಗವಾರ	ಸೇಡಂ	ಗುಲಬರ್ಗಾ
ಈರಮ್ಮ ಗಂಡ ಸಾಬಯ್ಯ	೨೨	....	ಕೂಲಿ	ಯನಗುಂಡಿ	ಸೇಡಂ	ಗುಲಬರ್ಗಾ
ಸಾವಿತ್ರಮ್ಮ ಗಂಡ ಮಲ್ಲಯ್ಯ	೩೬	....	ಕೂಲಿ	ಸೇಡಂ	ಸೇಡಂ	ಗುಲಬರ್ಗಾ
ದೇವಮ್ಮ ಗಂಡ ಹಣಮಂತ್ರಾಯಗೌಡ	೨೦	೫ನೇ ತರಗತಿ	ಕೂಲಿ	ಹಂಗರಗಾ ಕೆ	ಜೇವರ್ಗಿ	ಗುಲಬರ್ಗಾ
ಸಿದ್ದಮ್ಮ ಗಂಡ ಸಿದ್ಧಣ್ಣಗೌಡ	೪೦	....	ಕೃಷಿ	ಹಂಗರಗಾ ಕೆ	ಜೇವರ್ಗಿ	ಗುಲಬರ್ಗಾ

ಚನ್ನಮ್ಮ ಗಂಡ ಹಣಮಂತ್ರಾಯ	೪೫	....	ಕೃಷಿ	ಹಂಗರಗಾ.ಕೆ	ಜೇವರ್ಗಿ	ಗುಲಬರ್ಗಾ
ಶಿವಲಿಂಗಮ್ಮ ಗಂಡ ಮದಳಪ್ಪಗೌಡ	೫೦	....	ಕೃಷಿ	ಹಂಗರಗಾ.ಕೆ	ಜೇವರ್ಗಿ	ಗುಲಬರ್ಗಾ
ಸೌಭಾಗ್ಯ ಗಂಡ ಬಸಣ್ಣಗೌಡ	೨೫	....	ಕೃಷಿ	ಹಂಗರಗಾ.ಕೆ	ಜೇವರ್ಗಿ	ಗುಲಬರ್ಗಾ
ನಂದಮ್ಮ ಗಂಡ ಮಡಿವಾಲಪ್ಪ	೪೦	....	ಕೃಷಿ	ಸರಸಂಬ	ಆಳಂದ	ಗುಲಬರ್ಗಾ
ದ್ಯಾಮವ್ವ ಗಂಡ ಬಸಪ್ಪ	೩೬	....	ಕೂಲಿ	ರುದ್ರವಾಡಿ	ಆಳಂದ	ಗುಲಬರ್ಗಾ
ಬಸ್ಸಮ್ಮ ಗಂಡ ಧರ್ಮರಾಜ	೩೮	....	ಕೂಲಿ	ಯಲಸಂಗಿ	ಆಳಂದ	ಗುಲಬರ್ಗಾ
ಕಲಾವತಿ ಗಂಡ ಚಂದ್ರಶೇಖರ	೩೮	....	ಕೂಲಿ	ಮುರಡಿ	ಆಳಂದ	ಗುಲಬರ್ಗಾ
ಭೀಮಾಭಾಯಿ ಗಂಡ ಚಂದ್ರಶೇಖರ	೩೦	....	ಕೂಲಿ	ಹಿರೋಳಿ	ಆಳಂದ	ಗುಲಬರ್ಗಾ
ಗಂಗಮ್ಮ ಗಂಡ ರಾಜು	೨೯	೫ನೇ ತರಗತಿ	ಕೂಲಿ	ಶಿವಪುರ	ಅಫಜಲಪುರ	ಗುಲಬರ್ಗಾ
ಮಾನಮ್ಮ ಗಂಡ ರಮೇಶ	೩೨	....	ಕೂಲಿ	ಹೂವಿನಳ್ಳಿ	ಅಫಜಲಪುರ	ಗುಲಬರ್ಗಾ
ಶಾಂತಮ್ಮ ಗಂಡ ವೆಂಕಟೇಶ	೩೫	....	ಕೂಲಿ	ಮಶಾಳ	ಅಫಜಲಪುರ	ಗುಲಬರ್ಗಾ
ಕೃಷ್ಣಮ್ಮ ಗಂಡ ಶರಣಪ್ಪ	೪೦	....	ಕೂಲಿ	ಭೋಸ್ಗಾ	ಅಫಜಲಪುರ	ಗುಲಬರ್ಗಾ
ಶ್ರೀದೇವಿ ಗಂಡ ಬಸವರಾಜ	೩೬	....	ಕೂಲಿ	ಮಲ್ಲಾಬಾದ	ಅಫಜಲಪುರ	ಗುಲಬರ್ಗಾ
ವಿಜಯಲಕ್ಷ್ಮೀ ಗಂಡ ನಾಗಪ್ಪ	೩೭	೭ನೇ ತರಗತಿ	ಕೂಲಿ	ಗುಲಬರ್ಗಾ	ಗುಲಬರ್ಗಾ	ಗುಲಬರ್ಗಾ
ಪದ್ಮಾವತಿ ಗಂಡ ದೇವಿಂದ್ರ	೨೮	೧೦ನೇ ತರಗತಿ	ಟೇಲರಿಂಗ್	ಗುಲಬರ್ಗಾ	ಗುಲಬರ್ಗಾ	ಗುಲಬರ್ಗಾ
ಕವಿತಾ ಗಂಡ ಗೋಪಣ್ಣ	೨೫	೧೦ನೇ ತರಗತಿ	ಬ್ಯೂಟಿಪಾರ್ಲರ್	ಗುಲಬರ್ಗಾ	ಗುಲಬರ್ಗಾ	ಗುಲಬರ್ಗಾ
ಕಾಶಿಬಾಯಿ ಗಂಡ ಶಿವರಾಜ	೩೦	೧೦ನೇ ತರಗತಿ	ಕಿರಾಣಿ ಅಂಗಡಿ	ಗುಲಬರ್ಗಾ	ಗುಲಬರ್ಗಾ	ಗುಲಬರ್ಗಾ

ಜಗದೇವಿ ಗಂಡ ಅಂಬರೇಶ್	೩೫	೭ನೇ ತರಗತಿ	ಆಯಾ	ಗುಲಬರ್ಗಾ	ಗುಲಬರ್ಗಾ	ಗುಲಬರ್ಗಾ
ಸಿದ್ಧಮ್ಮ ಗಂಡ ಶಿವಪ್ಪ	೩೨	....	ಕೂಲಿ	ಜಾಲಹಳ್ಳಿ	ದೇವದುರ್ಗ	ರಾಯಚೂರು
ಈರಮ್ಮ ಗಂಡ ನರಸಪ್ಪ	೨೮	....	ಕೂಲಿ	ಜಾಲಹಳ್ಳಿ	ದೇವದುರ್ಗ	ರಾಯಚೂರು
ಪದ್ಮಮ್ಮ ಗಂಡ ಚಂದ್ರಕಾಂತ	೩೫	....	ಕೃಷಿ	ಜಾಲಹಳ್ಳಿ	ದೇವದುರ್ಗ	ರಾಯಚೂರು
ಮುದ್ದಮ್ಮ ಗಂಡ ರಂಗಪ್ಪ	೫೦	....	ಕಂಬಾರಿಕೆ	ಜಾಲಹಳ್ಳಿ	ದೇವದುರ್ಗ	ರಾಯಚೂರು
ಗಂಗಮ್ಮ ಗಂಡ ಭದ್ರಪ್ಪ	೪೫	....	ಕೂಲಿ	ಜಾಲಹಳ್ಳಿ	ದೇವದುರ್ಗ	ರಾಯಚೂರು
ಶಾಂತಮ್ಮ ಗಂಡ ಭೀಮರಾಯ	೨೩	೫ನೇ ತರಗತಿ	ಕೂಲಿ	ಮಾನವಿ	ಮಾನವಿ	ರಾಯಚೂರು
ಲಕ್ಷ್ಮೀ ಗಂಡ ಬಸವಂತರಾಯ	೪೩	....	ಕೂಲಿ	ಮಾನವಿ	ಮಾನವಿ	ರಾಯಚೂರು
ರಂಗಮ್ಮ ಗಂಡ ಯಂಕಪ್ಪ	೩೦	....	ಕೂಲಿ	ಪೋತನಾಳ	ಮಾನವಿ	ರಾಯಚೂರು
ಸಿದ್ಧಮ್ಮ ಗಂಡ ದೇವಪ್ಪ	೨೯	....	ಕೂಲಿ	ಬಲ್ಲಟಗಿ	ಮಾನವಿ	ರಾಯಚೂರು
ಯಮುನಮ್ಮ ಗಂಡ ತಿಪ್ಪಣ್ಣ	೩೨	....	ಕೂಲಿ	ಮದ್ಲಾಪುರ	ಮಾನವಿ	ರಾಯಚೂರು
ಶಕುಂತಲಾ ಗಂಡ ದೇವಿಂದ್ರಪ್ಪ	೪೦	....	ಪಾನಅಂಗಡಿ	ಹಟ್ಟಿ	ಲಿಂಗಸೂಗೂರು	ರಾಯಚೂರು
ನಿರ್ಮಲಾ ಗಂಡ ವೆಂಕಟೇಶ	೩೬	....	ಬೇಕರಿ	ಹಟ್ಟಿ	ಲಿಂಗಸೂಗೂರು	ರಾಯಚೂರು
ಜಯಶ್ರೀ ಗಂಡ ಶ್ರೀನಿವಾಸ	೨೦	೮ನೇ ತರಗತಿ		ಗುರಗುಂಟ	ಲಿಂಗಸೂಗೂರು	ರಾಯಚೂರು
ಭಾಗ್ಯವಂತಿ ಗಂಡ ಅಮರಪ್ಪ	೩೬		ಕೂಲಿ	ಮುದುಗಲ	ಲಿಂಗಸೂಗೂರು	ರಾಯಚೂರು
ಮಡಾದೇವಿ ಗಂಡ ಶಿವಪುತ್ರ	೩೦	೭ನೇ ತರಗತಿ	ಕೂಲಿ	ಎರಡೋಣಿ	ಲಿಂಗಸೂಗೂರು	ರಾಯಚೂರು
ರಂಗಮ್ಮ ಗಂಡ ದುರಗಣ್ಣ	೪೦	....	ಕೂಲಿ	ತುರ್ವಿಹಾಳ	ಸಿಂಧನೂರು	ರಾಯಚೂರು

ಮಾನಮ್ಮ ಗಂಡ ರಂಗನಾಥ	೩೫	....	ಕೂಲಿ	ದಡೆಸೂಗೂರು	ಸಿಂಧನೂರು	ರಾಯಚೂರು
ಶಿವಮ್ಮ ಗಂಡ ಹಣಮಂತ	೨೭	೫ನೇ ತರಗತಿ	ಕೂಲಿ	ಚಿಂಚೆರಿ	ಸಿಂಧನೂರು	ರಾಯಚೂರು
ದೇವಮ್ಮ ಗಂಡ ಹನುಮಯ್ಯ	೪೨	....	ಕೂಲಿ	ಗೌಡನಬಾವಿ	ಸಿಂಧನೂರು	ರಾಯಚೂರು
ಮಾದೇವಿ ಗಂಡ ಯಂಕಣ್ಣ	೨೯	೫ನೇ ತರಗತಿ	ಕೂಲಿ	ಜವಳಗೇರಾ	ಸಿಂಧನೂರು	ರಾಯಚೂರು
ರೇಣುಕಾ ಗಂಡ ರಾಮಯ್ಯ	೩೦	೫ನೇ ತರಗತಿ	ಕೂಲಿ	ರಾಯಚೂರು	ರಾಯಚೂರು	ರಾಯಚೂರು
ಜಯಮ್ಮ ಗಂಡ ಹನುಮಂತ್ರಾಯ	೩೨	....	ವ್ಯಾಪಾರ	ರಾಯಚೂರು	ರಾಯಚೂರು	ರಾಯಚೂರು
ಯಲ್ಲಮ್ಮ ಗಂಡ ಸಿದ್ದಪ್ಪ	೪೫	....	ಟೀಚರ್	ರಾಯಚೂರು	ರಾಯಚೂರು	ರಾಯಚೂರು
ಅಮರಮ್ಮ ಗಂಡ ಬಸವರಾಜ	೪೦	....	ಜನರಲ್‌ಸ್ಟೋರ್ಸ್	ರಾಯಚೂರು	ರಾಯಚೂರು	ರಾಯಚೂರು
ಪುಷ್ಪಾ ಗಂಡ ವೆಂಕಟೇಶ	೩೦	೧೦ನೇ ತರಗತಿ	ಖಾಸಗಿ ಕೆಲಸ	ರಾಯಚೂರು	ರಾಯಚೂರು	ರಾಯಚೂರು
ದುರ್ಗಮ್ಮ ಗಂಡ ಕನಕಪ್ಪನಾಯಕ	೩೮	ಬಿ.ಎಡ್.	ಶಿಕ್ಷಕಿ	ಕನಕಗಿರಿ	ಗಂಗಾವತಿ	ಕೊಪ್ಪಳ
ಲಕ್ಷ್ಮೀ ಗಂಡ ನಾಗಪ್ಪ	೩೦	೭ನೇ ತರಗತಿ	ಮನೆಗೆಲಸ	ಕನಕಗಿರಿ	ಗಂಗಾವತಿ	ಕೊಪ್ಪಳ
ಸುನಿತಾ ಗಂಡ ಹಣಮಂತ್ರಾಯ	೨೭	೮ನೇ ತರಗತಿ	ಮನೆಗೆಲಸ	ಕನಕಗಿರಿ	ಗಂಗಾವತಿ	ಕೊಪ್ಪಳ
ಸುಮಿತ್ರಾ ಗಂಡ ತಿಮ್ಮಪ್ಪ	೩೨	೫ನೇ ತರಗತಿ	ಕೂಲಿ	ಹೆರೂರು	ಗಂಗಾವತಿ	ಕೊಪ್ಪಳ
ತಾಯಮ್ಮ ಗಂಡ ಎಲ್ಲಪ್ಪ	೩೦	....	ಕೂಲಿ	ಹೆರೂರು	ಗಂಗಾವತಿ	ಕೊಪ್ಪಳ
ಗೌರಮ್ಮ ಗಂಡ ರಾಮಚಂದ್ರಪ್ಪ	೫೦	....	ಕೂಲಿ	ತಾಳಕೇರಿ	ಯಲಬುರ್ಗಾ	ಕೊಪ್ಪಳ
ಜ್ಯೋತಿ ಗಂಡ ಶಿವರಾಜ	೨೨	೭ನೇ ತರಗತಿ	ಮನೆಗೆಲಸ	ಚೌಡಾಪುರ	ಯಲಬುರ್ಗಾ	ಕೊಪ್ಪಳ
ರೇಖಾ ಗಂಡ ಶ್ರೀನಿವಾಸ್	೨೩	೫ನೇ ತರಗತಿ	ಕೂಲಿ	ನಿಂಗಾಪುರ	ಯಲಬುಗಾ	ಕೊಪ್ಪಳ
ಉಮಾದೇವಿ ಗಂಡ ಪ್ರಭಾಕರ	೩೦	೫ನೇ ತರಗತಿ	ಕೃಷಿ	ಬೈರನಾಯಕನಹಳ್ಳಿ	ಯಲಬುರ್ಗಾ	ಕೊಪ್ಪಳ

ನಿರ್ಮಲ ಗಂಡ ಬಸವರಾಜ	೩೨	....	ಕೂಲಿ	ಲಕಮಾಪುರ	ಯಲಬುರ್ಗಾ	ಕೊಪ್ಪಳ
ಭಾಗ್ಯಶ್ರಿ ಗಂಡ ಚನ್ನಪ್ಪ	೩೦	೫ನೇ ತರಗತಿ	ಕೂಲಿ	ತಾವಗೇರಿ	ಕುಷ್ಟಗಿ	ಕೊಪ್ಪಳ
ಲಕ್ಷ್ಮೀ ಗಂಡ ಯಮುನಪ್ಪ	೩೨	೫ನೇ ತರಗತಿ	ಕೂಲಿ	ತೆಗ್ಗಿಹಾಳ	ಕುಷ್ಟಗಿ	ಕೊಪ್ಪಳ
ಶಿವಲಿಂಗಮ್ಮ ಗಂಡ ನಾಗಪ್ಪ	೩೦	....	ಮನೆಗೆಲಸ	ನವಲಹಳ್ಳಿ	ಕುಷ್ಟಗಿ	ಕೊಪ್ಪಳ
ಅಂಬಮ್ಮ ಗಂಡ ರಾಮಕೃಷ್ಣ	೨೮	೭ನೇ ತರಗತಿ	ಮನೆಗೆಲಸ	ಪರಸಾಪುರ	ಕುಷ್ಟಗಿ	ಕೊಪ್ಪಳ
ಭೀಮವ್ವ ಗಂಡ ಗಣಪತಿ	೨೬	೧೦ನೇ ತರಗತಿ	ಮನೆಗೆಲಸ	ಮೇಣಧಾಳ	ಕುಷ್ಟಗಿ	ಕೊಪ್ಪಳ
ಶ್ರೀದೇವಿ ಗಂಡ ರಾಮಚಂದ್ರ	೩೦	೭ನೇ ತರಗತಿ	ಕೂಲಿ	ಗಿಣಿಗೇರಾ	ಕೊಪ್ಪಳ	ಕೊಪ್ಪಳ
ಮಂಜುಳಾ ಗಂಡ ದೇವೇಂದ್ರಪ್ಪ	೨೮	೫ನೇ ತರಗತಿ	ಕೂಲಿ	ಚಿಕ್ಕಸುಳಿಕೇರಿ	ಕೊಪ್ಪಳ	ಕೊಪ್ಪಳ
ರತ್ನಮ್ಮ ಗಂಡ ತಿಪ್ಪಣ್ಣ	೩೨	....	ಕೂಲಿ	ಬಸಾಪುರ	ಕೊಪ್ಪಳ	ಕೊಪ್ಪಳ
ಮಹಾಲಕ್ಷ್ಮೀ ಗಂಡ ಶರಣಬಸವ	೩೫	....	ಕೂಲಿ	ಮಾದಿನೂರು	ಕೊಪ್ಪಳ	ಕೊಪ್ಪಳ
ಯಂಕಮ್ಮ ಗಂಡ ರಂಗಪ್ಪ	೩೦	....	ಮನೆಗೆಲಸ	ಹಾಲವರ್ತಿ	ಕೊಪ್ಪಳ	ಕೊಪ್ಪಳ
ವೆಂಕಟೇಶ ತಂದೆ ಭೀಮರಾಯ	೪೫	....	ಕೃಷಿಕೂಲಿ	ಶೆಳ್ಳಿಗಿ	ಸುರಪುರ	ಗುಲಬರ್ಗಾ
ಬಸಪ್ಪ ತಂದೆ ಮಲ್ಲಪ್ಪ	೪೩	....	ಕೃಷಿಕೂಲಿ	ಜಾಲಿಬೆಂಚಿ	ಸುರಪುರ	ಗುಲಬರ್ಗಾ
ಸಾಬಯ್ಯ ತಂದೆ ದೇವೇಂದ್ರಪ್ಪ	೪೦	....	ಕೃಷಿ	ಇಬ್ರಾಹಿಂಪುರ	ಶಾಹಪುರ	ಗುಲಬರ್ಗಾ
ಮಾನಪ್ಪ ತಂದೆ ಸಿದ್ದಣ್ಣ	೪೬	....	ಕೃಷಿ	ಯಾಳಗಿ	ಸುರಪುರ	ಗುಲಬರ್ಗಾ
ದೇವಪ್ಪ ತಂದೆ ಸಾಯಿಬಣ್ಣ	೩೮	....	ಕೃಷಿಕೂಲಿ	ದೇವದುರ್ಗ	ದೇವದುರ್ಗ	ರಾಯಚೂರು
ಅಮರೇಶ್ವರ ತಂದೆ ರಾಯಪ್ಪ	೪೨	....	ಕೃಷಿಕೂಲಿ	ಗೊಲಪಲ್ಲಿ	ಲಿಂಗಸೂಗೂರು	ರಾಯಚೂರು
ಹನುಮಂತಪ್ಪ ತಂದೆ ಚಂದಪ್ಪ	೪೧	೪ನೇ ತರಗತಿ	ಕೃಷಿಕೂಲಿ	ನಾಗಲಾಪುರ	ಲಿಂಗಸೂಗೂರು	ರಾಯಚೂರು

ರಾಜಶೇಖರ್ ತಂದೆ ಯಂಕಪ್ಪ	೪೪	....	ಭತ್ತದ ಕೆಲಸ	ಮಾನವಿ	ಮಾನವಿ	ರಾಯಚೂರು
ಗೋವಿಂದ ತಂದೆ ರಾಮಪ್ಪ	೩೮	೫ನೇ ತರಗತಿ	ಕೂಲಿ	ಗೊರೆಬಾಳ	ಕುಷ್ಟಗಿ	ಕೊಪ್ಪಳ
ಮರೆಪ್ಪ ತಂದೆ ಶಿವಣ್ಣ	೪೨	....	ಕೂಲಿ	ತಿಮ್ಮನಹಟ್ಟಿ	ಕುಷ್ಟಗಿ	ಕೊಪ್ಪಳ
ಕನಕಪ್ಪ ತಂದೆ ಸೋಮಪ್ಪ	೪೫	....	ಕೂಲಿ	ಮಾದಿನೂರು	ಕೊಪ್ಪಳ	ಕೊಪ್ಪಳ
ಮಾದೆಪ್ಪ ತಂದೆ ರಂಗಪ್ಪ	೪೬	....	ಕೃಷಿ	ಉಡಮಕಲ್	ಗಂಗಾವತಿ	ಕೊಪ್ಪಳ
ದುರಗಪ್ಪ ತಂದೆ ಬಸವರಾಜ	೩೮	....	ಕೂಲಿ	ರಾಮಪುರ	ಗಂಗಾವತಿ	ಕೊಪ್ಪಳ
ಸಂಗಪ್ಪ ತಂದೆ ಸಿದ್ದಣ್ಣ	೪೦	....	ಕೂಲಿ	ಬೂದೂರು	ಯಲಬುರ್ಗಾ	ಕೊಪ್ಪಳ
ಶಿವಪ್ಪ ತಂದೆ ನಿಂಗಣ್ಣ	೪೦	....	ಕೂಲಿ	ಹನುಮಾಪುರ	ಯಲಬುರ್ಗಾ	ಕೊಪ್ಪಳ

ಪರಾಮರ್ಶನ ಗ್ರಂಥಗಳು

೧. ಅರ್ಜುನ ಗೊಳಸಂಗಿ (ಸಂ), ೨೦೦೦, 'ದಲಿತರ ಬದುಕು ಮತ್ತು ಸಂಸ್ಕೃತಿ (ಜಾನಪದೀಯ ಅಧ್ಯಯನ) ವಿಮೋಚನಾ ಪ್ರಕಾಶನ, ಅಥಣಿ.

೨. ಅಲ್ಲಮಪ್ರಭು ಬೆಟ್ಟದೂರು, ಶ್ರೀ ಎಚ್.ಎಸ್.ಪಾಟೀಲ. ಸಂ, ೨೦೦೫, "ಕೊಪ್ಪಳ ಜಿಲ್ಲಾ ದರ್ಶನ", ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೩. ಅನುಸೂಯ ಕಾಂಬಳೆ, ೧೯೯೯, 'ವಿಚಾರ ಸಾಹಿತ್ಯ ಮತ್ತು ಹೆಣ್ಣು' ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಬಾಗ, ಬೆಳಗಾವಿ ಜಿಲ್ಲೆ.

೪. ಅಶೋಕ ಕುಮಾರ ಯು.ಬಿ., ೨೦೦೧, 'ಕೃಷಿ ಕೂಲಿಕಾರರ ಬುದುಕು, ಬವಣೆ', ಪ್ರಕಾಶನ ಚೇತನಬುಕ್‌ಹೌಸ್, ಮೈಸೂರು.

೫. ಅಂಜನಪ್ಪ ಬಿ.ಹೆಚ್, ೨೦೦೬, 'ಮಹಿಳೆ ಮತ್ತು ದುಡಿಮೆ', ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು.

೬. ಇಂದಿರಾ ಆರ್, ೨೦೦೨, "ಮಹಿಳೆ ಸಮಾಜ ಮತ್ತು ಸಂಸ್ಕೃತಿ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ .

೭. ಇಂದಿರಾ ಕೃಷ್ಣಪ್ಪ, ೨೦೦೬, ವಿಮೋಚನೆಯ ಹಾದಿಯಲ್ಲಿ, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ (ರಿ) ನಂ. ೧೮೭೯, ಯಲಹಂಕ, ಬೆಂಗಳೂರು ೫೬೦ ೦೬೪.

೮. ಇಂದಿರಾ ಕೃಷ್ಣಪ್ಪ, ೨೦೦೬, ವಿಮೋಚನೆಯ ಹಾದಿಯಲ್ಲಿ, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ (ರಿ) ನಂ. ೧೮೭೯, ಯಲಹಂಕ, ಬೆಂಗಳೂರು ೫೬೦ ೦೬೪.

೯. ಉಷಾ ಎಂ., ೨೦೦೪, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಎಂಗೆಲ್ಸ್ ಫೆಡರಿಕ್, ೧೯೮೦, 'ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯಗಳ ಉಗಮ' ಪ್ರಗತಿ ಪ್ರಕಾಶನ, ಮಾಸ್ಕೋ.

೧೧. ಕಮಲಾ ಹಂಪನಾ, ೨೦೦೩, ಬೊಗಸೇ (ಮಹಿಳೆ ಸುತ್ತ-ಮುತ್ತ) ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೧೨. ಕಲಬುರ್ಗಿ ಎಂ.ಎಂ., ೨೦೦೬, ಸಂಸ್ಕೃತಿ ವಿಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೩. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು, ೫೬೦ ೦೦೨.

೧೪. ಕಾಪಸೆ ರೇವಪ್ಪ, ಸಂ, ೨೦೦೦, ಹಲಸಂಗಿ ಹಾಡುಗಳು, ಪ್ರ.ಕ.ವಿ.ವಿ.ಹಂಪಿ.

೧೫. ಕೋಸಾಂಬಿ ಡಿ.ಡಿ. (ಮೂಲ) ಟಿ.ಎಸ್.ವೇಣುಗೋಪಾಲ, ಶೈಲಜಾ (ಅನು) ಪುರಾಣ ಮತ್ತು ವಾಸ್ತವ, ಚಿಂತನ, ಉತ್ತರ ಕನ್ನಡ.

೧೬. ಕೋದಂಡರಾಮ ಎನ್.ಕೆ., ೨೦೦೫, ಮಹಿಳೆ ಮತ್ತು ಸಾಮಾಜಿಕತೆ, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಮೈಸೂರು.

೧೭. ಗಾಯತ್ರಿ ನಾವಡ, ೨೦೦೦, ಭಾರತೀಯ ಸ್ತ್ರೀವಾದ ಒಂದು ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಗಾಯತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೯. ಗಾಯಿತ್ರಿ ಎನ್., ೧೯೯೧, 'ಮಹಿಳೆ ಬಿಡುಗಡೆಯ ಹಾದಿಯಲ್ಲಿ', ನವ ಕರ್ನಾಟಕ, ಬೆಂಗಳೂರು

೨೦. ಗಾಯಿತ್ರಿ ನಾವಡ, ೧೯೯೭. ವಿರಚನೆ ಎನ್.ಆರ್.ಎ.ಎಂ.ಎಚ್. ಪ್ರಕಾಶನ ಕೋಟೇಶ್ವರ, ೫೭೬ ೨೨೨ ದಕ್ಷಿಣ ಕನ್ನಡ.

೨೧. ಗೋಪಾಲರಾವ್ ಪಂ.ವೈ.ಎಲ್., ೨೦೦೦, ಭಾರತೀಯ ನಾರಿ ಅಂದು-ಇಂದು. ಭೈರವ ಪಬ್ಲಿಕೇಷನ್ಸ್, ಗಣೇಶ ಸಾಮಿಲ್ ಹಿಂಭಾಗದ ರಸ್ತೆ, ಬಸವನಹಳ್ಳಿ ಚಿಕ್ಕಮಗಳೂರು.

೨೨. ಚಂದ್ರಶೇಖರ್ ಟಿ.ಆರ್, ೨೦೦೩, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೩. ಚಂದ್ರಶೇಖರ ಟಿ.ಆರ್., ೨೦೦೩, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಚಂದ್ರಶೇಖರ ಟಿ.ಆರ್., ೨೦೦೦, ಮಹಿಳೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು, ಮಹಿಳಾ ಅಧ್ಯಯನ, ಸಂಪುಟ ೨, ಸಂಚಿಕೆ ೧. ಜನವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ಚಂದ್ರಶೇಖರ ಟಿ.ಆರ್. (ಸಂ) ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಚೆನ್ನಣ್ಣ ವಾಲಿಕಾರ, ೨೦೦೧, ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ, ವಾಲೀಕಾರವಿರಸು, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೫೮೫ ೧೦೫.

೨೭. ಜೋತ್ಸ್ನಾ ಕಾಮತ್, ೧೯೯೯, ಮಹಿಳೆ:ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೮. ಜೆರಾಲ್ಡಿನ ಫೋರ್ಬ್ಸ್ ಇಂಗ್ಲಿಷ ಮೂಲ ಎಚ್.ಎಸ್.ಶ್ರೀಮತಿ (ಅನು) ೨೦೦೧. ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ.

೨೯. ಜ್ಯೋತಿ ಶಶಿಕುಮಾರ, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಜಯಮ್ಮ ಎಚ್.ಕರಿಯಣ್ಣ, ೨೦೦೦, ಹೆಣ್ಣಿನ ಸ್ಥಾನಮಾನ ಒಂದು ಅವಲೋಕನ, ಜಯಾ ಪ್ರಕಾಶನ, ವಿಜಯನಗರ ೨ನೇ ಹಂತ, ಬೆಂಗಳೂರು.

೩೧. ಜಯಲಕ್ಷ್ಮಿ ಕೆ. ೨೦೦೬, ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ, ಅನಾವರಣ, ಬೆಂಗಳೂರು.

೩೨. ದೇವಿಪ್ರಸಾದ ಚಟ್ಟೋಪಾಧ್ಯಾಯ, ೧೯೯೭, 'ಮಾತೆಯರು ಮಾನ್ಯರಾಗಿದ್ದಾಗ', (ಅನು) ಕುಮಾರಪ್ಪ ಜಿ. ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೩. ಪ್ರಭಾಕರ ಎ.ಎಸ್. (ಸಂ) ೨೦೦೪, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಪ್ರಭಾಕರ್ ಎ.ಎಸ್. (ಸಂ), ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

೩೫. ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಪೆರ್ಲ ಮಾ.ಭ., ೨೦೦೧, ಮಹಿಳೆಯ ಮುಖಗಳು, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು ದಕ್ಷಿಣ ಕನ್ನಡ.

೩೭. ಬರಗೂರು ರಾಮಚಂದ್ರಪ್ಪ (ಪ್ರ.ಸಂ), ೧೯೯೩, 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೮. ಬೇಂದ್ರೆ ಮಂಜುನಾಥ, ೨೦೦೭, ಕರ್ನಾಟಕ ಜಿಲ್ಲಾ ದರ್ಶನ, ಕರಾವಳಿ ಪ್ರಕಾಶನ, ಮಂಗಳೂರು.

೩೯. ಬಾಬುರಾವ ಮುಡಬಿ, ೨೦೦೫, ಮಹಿಳಾ ಸಬಲೀಕರಣ, ಅಂಬೇಡ್ಕರ್ ದೃಷ್ಟಿಕೋನ ಲಕ್ಷ್ಮೀ ಪ್ರಕಾಶನ, ಬೆಂಗಳೂರು.

೪೦. ಭಾಸ್ಕರ ಟಿ.ಎಂ., ಶ್ರೀರಾಜಶೇಖರ ಹತಗುಂದಿ, ೨೦೦೫, ಕಲಬುರ್ಗಿ ಜಿಲ್ಲಾದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೪೧. ಭಾರ್ಗವಿ ನಾಗರಾಜ್, ನಾಗರಾಜ ಆತ್ಮ ವಿಲಾಸ (ಸಂ) (ಅನು) ೧೯೯೮, ಅಂತಸ್ಸಿನ ಅನ್ವೇಷಣೆ (ಕರ್ನಾಟಕ ಗ್ರಾಮೀಣ ಮಹಿಳೆಯರ ಅಧ್ಯಯನದ ಸಂಕ್ಷಿಪ್ತ ವರದಿ) ಉಚ್ಚ ಅಧ್ಯಯನಗಳ ರಾಷ್ಟ್ರೀಯ ಸಂಸ್ಥೆ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ ಬೆಂಗಳೂರು, ೫೬೦ ೦೧೨.

೪೨. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ಬೋರಲಿಂಗಯ್ಯ ಹಿ.ಚಿ., ಗಿರಿಜನ ನಾಡಿಗೆ ಪಯಣ, ೧೯೯೧, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು

೪೪. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ಬೋರಲಿಂಗಯ್ಯ ಹಿ.ಚಿ, (ಸಂ). ಕರ್ನಾಟಕ ಅಭಿವೃದ್ಧಿ ಪಥ, ೨೦೦೭, ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೪೬. ಬೋರಲಿಂಗಯ್ಯ ಹಿ.ಚಿ., ಕಾಂಡು ಕಾಂಕ್ರೀಟ್ ಮತ್ತು ಜಾನಪದ, ೧೯೯೫, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೪೭. ಶಂಕರರಾವ ಚ.ನ. ೨೦೦೫, ಭಾರತೀಯ ಸಮಾಜ (ಸಂರಚನೆ ಮತ್ತು ಪರಿವರ್ತನೆ) ಜೈಭಾರತ ಪ್ರಕಾಶನ, ಬೆಂಗಳೂರು.

೪೮. ಶಾಂತಾ ಇಮ್ರಾಪುರ, ೨೦೦೧, ಮಹಿಳೆ ಸಾಹಿತ್ಯ, ಸಂಸ್ಕೃತಿ, ಚೇತನಾ ಪ್ರಕಾಶನ, ಧಾರವಾಡ.

೪೯. ಶ್ರೀಪಾದ ಅಮೃತಡಾಂಗೇ, ೧೯೮೩ (ಮೂಲ) ಎಂ.ಅನಂತಕೃಷ್ಣ ಹೆಬ್ಬಾರ, ಎನ್.ರಾಮಚಂದ್ರ ಉಡುಪ (ಅನು) "ಭಾರತ ಸಂಘ ಜೀವನದಿಂದ ಗುಲಾಮಗಿರಿಗೆ" ಅಭಿವ್ಯಕ್ತಿ ಪ್ರಕಾಶನ, ಬೆಂಗಳೂರು.

೫೦. ಶ್ರೀಮತಿ ಎಚ್.ಎಸ್., ಶಿವಾನಂದ ವಿರಕ್ತಮಠ, ಜೆ.ಕೃಷ್ಣ (ಸಂ) "ಮಹಿಳಾ ಆರ್ಥಿಕತೆ" ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫೧. ಶ್ರೀಮತಿ ಎಚ್.ಎಸ್., ಡಾ.ಶಿವಾನಂದ ವಿರಕ್ತಮಠ, ಜೆ.ಕೃಷ್ಣ (ಸಂ) ಮಹಿಳೆ ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫೨. ನಿರೂಪಮಾ, ೧೯೯೬, ಧರ್ಮಶಾಸ್ತ್ರಗಳು, ಸ್ತ್ರೀ ಹಾಗೂ ಶೋಷಣೆ, ಆರತಿ ಪಬ್ಲಿಕೇಷನ್ಸ್, ಮಲ್ಲೇಪುರಂ, ಬೆಂಗಳೂರು, ೫೬೦ ೦೦೧.

೫೩. ಮಂಜುನಾಥ ಬೇವಿನಕಟ್ಟಿ, ತಾರೀಹಳ್ಳಿ ಹನಮಂತಪ್ಪ ಸಂ. ೨೦೦೬, ವಾಲ್ಮೀಕಿ ಸಂಪದ, ಶ್ರೀವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ.

೫೪. ಮಂಜುನಾಥ ಬೇವಿನಕಟ್ಟಿ, ೨೦೦೭, ಆದಿವಾಸಿ, ಸಾಹಿತ್ಯ ನಂದನ, ಬೆಂಗಳೂರು.

೫೫. ಮಂಜುನಾಥ ಬೇವಿನಕಟ್ಟಿ (ಸಂ) ೨೦೦೭, ವ್ಯಾಧ ಚರಿತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಮಂಗಳಾ ಚಿ.ನಾ., ೧೯೯೪, 'ಮಾತೃ ಪೂಜೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಮಂಗಳಾ ಪ್ರಿಯದರ್ಶಿನಿ ಡಿ.೨೦೦೭ ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೮. ಮುಳುಗುಂದ ಚ.ವಿ., ನಾಗೇಶ ಎಚ್.ವಿ. (ಸಂ), ೧೯೮೭ 'ಆಧುನಿಕ ಮಹಿಳೆ ಮತ್ತು ಸಮಾಜ', ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ್.

೫೯. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪ್ಪಿನಮಠ, ೨೦೦೫, ರಾಯಚೂರು ಜಿಲ್ಲಾದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೬೦. ಮೇತ್ರಿ ಕೆ.ಎಂ., ೨೦೦೨, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಮೂರ್ತೇಶ್ವರಯ್ಯ ಬೆ.ಕಾ., ೨೦೦೩, ಸಮಾಜ ಮತ್ತು ಕಾನೂನು, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೬೨. ಮೊಗಳ್ಳಿ ಗಣೇಶ, ೨೦೦೫, ಆದಿಮ, ಸಾರಂಗ ಪ್ರಕಾಶನ, ತಿಪಟೂರು.

೬೩. ಮೊಗಳ್ಳಿ ಗಣೇಶ್, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. ಯಳನಾಡು ಅಂಜನಪ್ಪ, ೨೦೦೮, ಧರ್ಮ ಮತ್ತು ಮುಕ್ತವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ರಹಮತ್ ತರೀಕೆರೆ, ೨೦೦೭, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೬. ರಮೇಶ ಸ.ಚಿ., ೨೦೦೧, ಬೇಟೆ:ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೭. ರಾಜರಾಮ ಹೆಗಡೆ (ಸಂ), ೨೦೦೪, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೮. ರಾಮಚಂದ್ರಜೋಶಿ, ೨೦೦೫, ಭಾರತೀಯ ಸಮಾಜ ರಚನೆ ಮತ್ತು ಪರಿವರ್ತನೆ, ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ.

೬೯. ರೋಹಿಣಿ ಬಿ.ಎಂ., ೧೯೯೫, ಸ್ತ್ರೀಸಂವೇದನೆ, ಹೇಮಾಂಶು ಪ್ರಕಾಶನ, ದೇರೆಬೈಲು, ಮಂಗಳೂರು ೫೭೫ ೦೦೬.

೭೦. ರೋಹಿಣಿ ಬಿ.ಎಂ., ೨೦೦೫, ಸ್ತ್ರೀ ಭಿನ್ನ ಮುಖಗಳು, ಕರಾವಳಿ ಲೇಖಕಿಯರ ವಾಚಕಿಯರ ಸಂಘ ದಕ್ಷಿಣ ಕನ್ನಡ, ಉಡುಪಿ.

೭೧. ಲಕ್ಕಪ್ಪಗೌಡ ಎಚ್.ಜೆ (ಪ್ರ.ಸಂ.), ೧೯೯೮. ಕರ್ನಾಟಕ ಬುಡಕಟ್ಟುಗಳು, ಸಂ.೧,೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೭೨. ವಂದನಾಶಿವ (ಅನು), ೨೦೦೫, ಮಾದವ ಐತಾಳ್, ಬತ್ತ ಚಿಲುಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೩. ವೀರಭದ್ರಪ್ಪ ಬಿ.ವಿ., ೨೦೦೫, ದೇವರನ್ನು ಕುರಿತು ಒಂದು ಬಹುಮುಖ ನೋಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೪. ವಿಜಯಾ ದಬ್ಬೆ, ೧೯೮೯, 'ಮಹಿಳೆ ಸಾಹಿತ್ಯ ಸಮಾಜ' ರಚನಾ ಪ್ರಕಾಶನ, ಮೈಸೂರು.

೭೫. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, ವಿಜಯನಗರ ಕಾಲದ ಸಂಸ್ಕೃತಿ, ಬೇಟೆ, ಪಶುಪಾಲನೆ ಮತ್ತು ಕೃಷಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

೭೭. ವಿರೂಪಾಕ್ಷಿ ಪೂಜಾರಹಳ್ಳಿ (ಸಂ) ೨೦೦೭, ಪೆರಿಯಾರರ ವಿಚಾರಧಾರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೮. ವೀರಭದ್ರಪ್ಪ ಬಿ.ವಿ., ೨೦೦೬, ಭಾರತೀಯ ಮಹಿಳೆ ಸಾಂಸ್ಕೃತಿಕ ವಿಕಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೯. ವಿಜಯಲಕ್ಷ್ಮಿ ಎಂ., ೨೦೦೫, ಸ್ತ್ರೀವಾದ ಸಾಹಿತ್ಯದ ಒಂದು ಚಳುವಳಿ ಮತ್ತು ಇತರ ಲೇಖನಗಳು, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

೮೦. ವಿಜಯಶ್ರೀ ಸಬರದ (ಸಂ) ೨೦೦೫, ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೮೧. ವಿಶ್ವನಾಥ ಡಿ.ಎಸ್., ೨೦೦೬, ಬದುಕಿನ ಧರ್ಮ ಮಹಿಳೆ, ಶ್ರೀ ಗಣೇಶ ಪಬ್ಲಿಕೇಷನ್ಸ್, ಬೆಂಗಳೂರು.

೮೨. ಶರ್ಮ ಆರ್.ಎಸ್.(ಅನು) ಶ್ರೀನಿವಾಸಮೂರ್ತಿ ಮತ್ತು ಇತರರು, ೨೦೦೪, 'ಪ್ರಾಚೀನ ಭಾರತದಲ್ಲಿ ಶೂದ್ರರು', ನವಕರ್ನಾಟಕ ಪ್ರಕಾಶನ, ಬೆಂಗಳೂರು.

೮೩. ಶ್ರೀಮತಿ ಎಚ್.ಎಸ್. (ಸಂ) ೨೦೦೬, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೪. ಶ್ರೀಮತಿ ಎಚ್.ಎಸ್., ೨೦೦೪, ಹೆಣ್ಣು ಹೆಂಗಸು, ಬ್ಯಾಲದತೆರೆ ಪ್ರಕಾಶನ, ಬ್ಯಾಲದತೆರೆ, ಮಂಡ್ಯ ಜಿಲ್ಲೆ.

೮೫. ಶ್ರೀಮತಿ ಎಚ್.ಎಸ್, ೨೦೦೩, ಸ್ತ್ರೀವಾದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೬. ಶೈಲಜಾ ಹಿರೇಮಠ, ೨೦೦೪, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೭. ಸಂದ್ಯಾರೆಡ್ಡಿ ಕೆ.ಆರ್., ಜನಪದ ಸಾಹಿತ್ಯದಲ್ಲಿ ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೮೮. ಸರಸ್ವತಿ ರಿಸಬೂಡ, ೧೯೯೨, ಸ್ತ್ರೀ ಪುರುಷ, ಇಳಾ ಪ್ರಕಾಶನ, ಬೆಂಗಳೂರು.

೮೯. ಸಮತಾ ಬಿ.ದೇಶಮಾನೆ, ೨೦೦೩, ಸಮಾಜಶಾಸ್ತ್ರ ಮತ್ತು ಮಹಿಳೆ, ಚೇತನ ಬುಕ್‌ಹೌಸ್, ಮೈಸೂರು, ೫೭೦ ೦೨೪.

೯೦. ಸಬಿಹಾಭೂಮಿಗೌಡ, ಮಲ್ಲಿಕಾಘಂಟಿ (ಸಂ). ೨೦೦೬, ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೧. ಸಾರಾ ಅಬೂಬಕ್ಕರ್, ೨೦೦೭, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೨. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

೯೩. ಸಿಮೋನ್ ದ ಬೋವಾ (ಅನು) ೨೦೦೭, ಶ್ರೀಮತಿ ಎಚ್.ಎಸ್., ದ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು

೯೪. ಸುಮಿತ್ರಬಾಯಿ ಬಿ.ಎನ್., ೨೦೦೬, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೫. ಸುಜಾತ ಎಸ್.ಜೆ., ೨೦೦೫, ಮನದಾಳದ ಮಾತುಗಳು, ಪಾಂಚಜನ್ಯ ಪಬ್ಲಿಕೇಷನ್ಸ್, ಬೆಂಗಳೂರು.

೯೬. ಹರ್ತಿಕೋಟೆ ವಿರೇಂದ್ರಸಿಂಹ, ಅಮರೇಶಯತಗಲ್, ೨೦೦೮. ವಾಲ್ಮೀಕಿ ಮಂದಾರ, ಮಹರ್ಷಿ ವಾಲ್ಮೀಕಿ ಗುರುಪೀಠ ಟ್ರಸ್ಟ್, ರಾಜನಹಳ್ಳಿ.

೯೭. ಹಿರೇಮಠ ಎಸ್.ಎಸ್., ೧೯೯೨, ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ ೧, ಹಬ್ಬಗಳು, ಸಮತಾ ಪ್ರಕಾಶನ, ಹರಪನಹಳ್ಳಿ.

೯೮. ಹೇಮಲತಾ ಮಹಿಷಿ, ೧೯೯೯, ಇಪ್ಪತ್ತೊಂದನೆಯ ಶತಮಾನದತ್ತ ಮಹಿಳೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯೯. ಹೇಮಲತಾ ಎಚ್.ಎಂ. ೨೦೦೩, ಮಹಿಳಾ ಸಶಕ್ತೀಕರಣ, ಒಂದು ಸೈದ್ಧಾಂತಿಕ ಚರ್ಚೆ, ಅಭಿರುಚಿ ಪ್ರಕಾಶನ, ನಂ.೪, ಎರಡನೆಯ ಮಹಡಿ, ನಗರಸಾರಿಗೆ ಸಂಸ್ಥೆ ಕಟ್ಟಡ ಕೆ.ಆರ್.ಸರ್ಕಲ್, ಮೈಸೂರು.

ಇಂಗ್ಲೀಶ್ ಗ್ರಂಥಗಳು

1) Anitaarya,1963, Indian women Education and Empowerment vol,2 gyan publishing house new delhi

2) Anand teltumbde (edited), 2005, Hindutva and dalits, (perspectives for understanding communal praxis) samya kolkata

3) Arvind kumar (edited) 1999, Rural Industrial Sociology , anmol publication pvt Ltd, newdelhi

4) Anitaarya, 1963, Indian women, work and development vol,3 gyan publishing house New delhi

5) Anil Bhuimali, sam papoddar, 2005, Development of rural women through education and empowerment, abhijeet publication delhi.

6) A.S.Altekar, 1991, The position of women In Hindu civilization (from prehistoric times to the present day) motilal banarsidass publications delhi .

7) A.V. yadappanavar, 2003, Tribal education In India, Discovery publishing house new delhi.

8) Anju agarwal, J.R.arora, 1989, "Women In Rural Society" vohra publishers and distibutors, Allahabad

9) Amina amin, Rajyashree khushu-hahiri gita chaudhuri, 2006, "Women On Women" Rawat publications, Newdelhi.

10) B.N.Singh, Manas Chatterjee (edited) 2005, "Tribes In India" vol.I. RBSA publishers, Jaipur

11) B.N.Singh,2006 "Rural development and Women " vista International publishing house delhi.

12) Christoph von forer-haimenderf,1992, "Tribles of India" The straggle for survival, Oxford university press Bombay.

13) C.Vasudevan, 1998, "Koragas, the forgotten lot the primitive tribe ofTulunadu, " The Ethostrichur Kerala.

14) Das Kormel, 2006, "Tribals and their Culture koya tribe In transition," A.P.H. publishing corporation new delhi.

15) Digumarti Bhaskara rao, Digumarti pushpalata rao, 1998, "Women ,Education and Empowerment " vol .2. discovery publishing house new delhi

16) Digumarti Bhaskara rao, Digumarti pushpalata rao,1999, "Status of worlds women," discovery publishing house new delhi

17) Digumarti Bhaskara rao, Digumarti pushpalata rao,1999, "Women Challenges and advancement" discovery publishing house new delhi.

18) Fatima Ehitesham Siddiqi,1999,"Political Women " (country experince in Identity and gender debate), kanishaka publishers, distibuters, new delhi.

19) G.P.Singh, 1990, "Kiratas In Ancient India" gian publishing house, new delhi

20) G.C.Nayak, 2004, "The Urban Political Elite In Tribal India" kalpaz publication new delhi

21) Hemalatha H.M , Rameswari varma, 2005, " Empowerment of Rural Women In India : A Critical analysis of a micro level government programme" hema prakashana , mysore.

22) H.C.Upadhyay, (edited) 1999, " Status of Scheduled Tribes in India" anmol publications pvt.Ltd. new delhi

23) Kiranprasad (edited) 2006, " Women In Rural development" The women press delhi .

24) K.S.Singh (edited) 2006, "Tribal movements In India" vol. no I . manohar, new delhi

25) K.S.Singh (edited) 2006, "Tribal movements In India" vol. no II . manohar, new delhi

26) KaKali paul mitra, 2004, "Development programmes and Tribals" kalpaz. publication ,delhi

27) K.S.Singh ,1993, "The Scheduled Tribes" vol, III, Anthropological Survey of India, Oxford University press, new delhi.

28) Lalneih zovi, 2007, "Womens development In India" mittal publications, new delhi.

29) Dr.mrs. Krishnanath Bhowik, 2005, " Status and Empowerment of Tribal women In Tripura " kalpaz publication new delhi

30) M.G.Chitkara, 2001, "women and social Transformation " A.P.H .publishing corporation , new delhi .

31) Manjushree pathak , 1991, " Tribal customs Law and Justice" mittal publication, new delhi

32) Magnus hirschfeld, 1992, "Women East and west" victory books International delhi

33) Mira Seth , 2001 " Women and development ,the Indian Experience, sage publication new delhi .

34) Manis kumar raha ,1989, "Tribal India " gian publishing house new delhi

35) M.L . Narasaiah, 2004, " Gender Inequlity and poverty" discovery publising house, new delhi .

36) Narayan singh rao , 2006, "Tribal culture faith , history and literature- Tangsas of Arunachal pradesh " mittal publication new delhi .

37) P. Rajyalakshmi , 2002, "Edible forest foods of Tribals In south India " , kalpaz publications newdelhi

38) Pramod kumar singh .2007, "Tribes of north India, (socio-economic study of tribes of kaimur hills) " book enclave ,Jaipur.

39) P.Rajyalakshmi,1991, "Tribal food habits" gian publishing house, new delhi

40) P.K. mohanty, 2002, " Development of primitive Tribal gropus In India" kalpaz publication , delhi

41) R.S.mann, 1981, " Nature-man-spirit complex In Tribal India" concept publishing company newdelhi

42) S.C.dube, 1990, " Indian Society" national book trsut, india

43) S.Murty, 2001, "Women and Employment" Rbsa publishers jaipur.

44) Sachindra narayan , 2002, "The dynamics ofTribal development, Issues and challenges" gyanpublishing house new delhi.

45) Sushama sahay prasad,1988, "Tribal women labourers" gian publishing house new delhi.

46) S.N.Tripathy,2006, " Dynamics ofTribal maigration " sonali publications new delhi.

47) Tulsi patel (edited) 2007, "Sex-Selective abortion In India (Gender,Society, and new reproductive technologies) sage publications, new delhi .

48) Urnahar, ambika chandani, 1995, "Sociology of rural development" rawat publications new delhi

49) Yvonne j arterbarn 1982," The loom of Interdependence silkweaving cooperative In kanchipuram "hindustan publishing corporation (India) delhi.

ವರದಿಗಳು

ಮಾನವ ಅಭಿವೃದ್ಧಿ ವರದಿ, ೨೦೦೫, ಕರ್ನಾಟಕ ಸರಕಾರ, ಬೆಂಗಳೂರು.

ಗುಲಬರ್ಗಾ ಜಿಲ್ಲಾ ಅಂಕಿ-ಅಂಶಗಳ ನೋಟ: ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಗುಲಬರ್ಗಾ.

ರಾಯಚೂರು ಜಿಲ್ಲಾ ಅಂಕಿ-ಅಂಶಗಳ ನೋಟ: ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾಧಿಗಳು, ರಾಯಚೂರು.

ಕೊಪ್ಪಳ ಜಿಲ್ಲಾ ಅಂಕಿ-ಅಂಶಗಳ ನೋಟ: ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಕೊಪ್ಪಳ.

ನಿಯತಕಾಲಿಕೆಗಳು

೧. ಉಷಾ ಎಂ.(ಸಂ), ಜನವರಿ-ಡಿಸೆಂಬರ್ ೨೦೦೩, 'ಮಹಿಳಾ ಅಧ್ಯಯನ', ಸಂಪುಟ ೫, ಸಂಚಿಕೆ ೧-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. 'ಮಹಿಳಾ ವಿಮೋಚನೆ' ೧೯೯೯, ಮಹಿಳಾ ಜಾಗೃತಿಯ ಪ್ರಕಟಣೆ, ಬೆಂಗಳೂರು.

೩. ಯೋಜನಾ ಪತ್ರಿಕೆ, ೧೯೯೯, (ಅಕ್ಟೋಬರ್ ಮತ್ತು ಡಿಸೆಂಬರ್).

೪. ಯೋಜನಾ ಪತ್ರಿಕೆ, ೨೦೦೧, (ಜನವರಿ ಮತ್ತು ಫೆಬ್ರವರಿ).

೫. ಯೋಜನಾ ಪತ್ರಿಕೆ, ೨೦೦೬, ಸೆಪ್ಟೆಂಬರ್

೬. ಶ್ರೀಮತಿ ಎಚ್.ಎಸ್. (ಸಂ) ೨೦೦೩, 'ಮಹಿಳಾ ಅಧ್ಯಯನ', ಸಂಪುಟ ೪, ಸಂಚಿಕೆ ೨. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಶ್ರೀಮತಿ ಎಚ್.ಎಸ್. (ಸಂ) ಜುಲೈ ೨೦೦೨, 'ಮಹಿಳಾ ಅಧ್ಯಯನ', (ದಕ್ಷಿಣಾಯನ ಸಂಚಿಕೆ) ಸಂಪುಟ ೪, ಸಂಚಿಕೆ ೧. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಶ್ರೀಧರ ಎ., ಸಿದ್ದಗಂಗಮ್ಮ (ಸಂ), ೨೦೦೫, ಅಭಿವೃದ್ಧಿ ಅಧ್ಯಯನ, ಸಂಪುಟ.೪, ಸಂಚಿಕೆ.೧ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಮೈತ್ರಿ ಕೆ.ಎಂ., ಚಲುವರಾಜು, (ಸಂ), ೨೦೦೬, ಬುಡಕಟ್ಟು ಅಧ್ಯಯನ, ಸಂಪುಟ.೩. ಸಂಚಿಕೆ.೨. ಜುಲೈ-ಡಿಸೆಂಬರ್, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಗೋವಿಂದರಾಜು ಸಿ.ಆರ್. (ಸಂ), ೨೦೦೭, ಚರಿತ್ರೆ ಅಧ್ಯಯನ, ಸಂಪುಟ.೨, ಸಂಚಿಕೆ ೨, ಜನವರಿ-ಜೂನ್, ೨೦೦೭.

ಎ. ಕೌಟುಂಬಿಕ ಮಾಹಿತಿ

ಪ್ರಶ್ನಾವಳಿ

೦೧. ಸಂದರ್ಶನದ ದಿನಾಂಕ :
೦೨. ಸಂದರ್ಶಿಸಲ್ಪಟ್ಟವರು :
೦೩. ಗ್ರಾಮ :
೦೪. ತಾಲ್ಲೂಕು :
೦೫. ಜಿಲ್ಲೆ :
೦೬. ದೂರವಾಣಿ ಸಂಖ್ಯೆ :

೦೭. ಮನೆತನದ ಹೆಸರು :
೦೮. ಮಾತೃಭಾಷೆ :
೦೯. ಆಡುವ ಇತರೆ ಭಾಷೆಗಳು :
೧೦. ಬೆದಗು / ಬಳಿ :
೧೧. ಮನೆ ದೇವರು :
೧೨. ಪೂಜಿಸುವ ದೇವರುಗಳು :
೦೧.
೦೨.
೦೩.

೧೩. ಹಬ್ಬ ಜಾತ್ರೆಗಳು :
೧೪. ಕುಲಕಸುಬು :
೧೫. ಕುಲಗುರು ಇರುವರೇ? :
೧೬. ಭೂ ಹಿಡುವಳಿ (ಎಕರೆಗಳಲ್ಲಿ) :
ಅ. ಒಣ ಭೂಮಿ
ಆ. ನೀರಾವರಿ

ಬಿ. ವೈಯಕ್ತಿಕ ಮಾಹಿತಿ

ಕ್ರ. ಸಂ.	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ ಮುಖ್ಯಸ್ಥರು	ಲಿಂಗ	ವಯಸ್ಸು	ವಿವಾಹ ವಾಗಿದೆಯೇ	ಶೈಕ್ಷಣಿಕ ಮಟ್ಟ	ವೃತ್ತಿ	ವರಮಾನ	ಸರಕಾರಿ ಸೌಲಭ್ಯಗಳು ( ) ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩
೦೧												
೦೨												
೦೩												
೦೪												
೦೫												
೦೬												
೦೭												
೦೮												
೦೯												
೧೦												
೧೧												
೧೨												
೧೩												
೧೪												

೧೪ ವಲಸಿಗರೇ? ( )

ಹೌದು	ಅಲ್ಲ

೧೫ ವಲಸೆ ಬಂದದ್ದು ಎಲ್ಲಿಂದ, ಕಾರಣಗಳು?

೧೬ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು
೧
೨
೩
೪
೫

೧೯. ಮನೆ ಮಾದರಿ [ ]
೦೧. ಗುಡಾರ [ ]
೦೨. ಗುಡಿಸಲು [ ]
೦೩. ಆರ್.ಸಿ.ಸಿ. ಮನೆ [ ]
೦೪. ಮನೆ (ಸ್ವ [ ] / ಬಾ° [ ])

೨೦. ಸೌಲಭ್ಯಗಳು
೦೧. ಶಿಕ್ಷಣ [ ]
೦೨. ಉದ್ಯೋಗ [ ]
೦೩. ಸಾಮಾಜಿಕ ಭಾಗವಹಿಸುವಿಕೆ [ ]
೦೪. ಆಸ್ತಿ [ ]
೦೫. ಜೀವವಿಮಾ [ ]
೦೬. ಸ್ವಂತ ನಿರ್ಣಯಕ್ಕೆ [ ]
೦೭. ಸಬಲೀಕರಣಕ್ಕೆ ಇತರೆ ಸೌಲಭ್ಯಗಳು [ ]
೦೮. ವೈವಾಹಿಕ ನಿರ್ಧಾರ [ ]
೦೯. ಪುರುಷರು ಮಹಿಳೆಯನ್ನು ತಾರತಮ್ಯ ತೋರಲು ಕಾರಣ *ಸಂಪ್ರದಾಯವೆ
* ಮುಗ್ಧತೆ
* ಹತ್ತಿರವೆ
* ಇತರೆ

* ಮಹಿಳೆಗೆ ಸಭೆ-ಸಮಾರಂಭಗಳಲ್ಲಿ ಭಾಗವಹಿಸುವಿಕೆ
* ಮನೆಯಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ
* ಮನೆಯಲ್ಲಿ ಘೋಷಪದ್ಧತಿ ಸಂಪ್ರದಾಯ ಇದೆಯೇ?
* ಮನೆಯಲ್ಲಿ ಮಹಿಳೆಯ ಅಧಿಕಾರವಿದೆಯೇ?
- ಇದ್ದರೆ ಯಾವ ರೀತಿ?
ಔಪಚಾರಿಕ / ಅನೌಪಚಾರಿಕ

೨೧. ಸಾಕು ಪ್ರಾಣಿಗಳು / ಸಂಖ್ಯೆ
೦೧. ಎತ್ತು
೦೨. ಎಮ್ಮೆ
೦೩. ಆಕಳು
೦೪. ಕುರಿ
೦೫. ಕೋಳಿ
೦೬. ಮೇಕೆ

[illegible]
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ [illegible]

ಮಾರ್ಗದರ್ಶಕರು
ಡಾ.ಸಿ.ಟಿ. ಗುರುಪ್ರಸಾದ್
ಪ್ರೊ. ಅಧ್ಯಕ್ಷರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮೀಕ್ಷೆದಾರರ ಹೆಸರು ಮತ್ತು ಸಹಿ

[illegible]

ಸ್ವ* ಸ್ವಂತದ: ಸ* ಸರಕಾರದ, ಬಾ* ಬಾಡಿಗೆ

ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು





ಕ್ಷೇತ್ರಕಾರ್ಯದಲ್ಲಿ ದೊರೆತ ಛಾಯಾಚಿತ್ರಗಳು











